ಪ್ರವಾಸೋದ್ಯಮ ಮತ್ತು ಅಭಿವೃದ್ಧಿ

(ಹಂಪೆ ಒಂದು ಅಧ್ಯಯನ)

ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ
ಮಹಾಪ್ರಬಂಧ

ಸಂಶೋಧಕ
ಕೆ. ಸಿದ್ದಪ್ಪ

ಮಾರ್ಗದರ್ಶಕರು
ಡಾ. ಎಂ. ಚಂದ್ರಪೂಜಾರಿ
ಪ್ರವಾಚಕರು
ಅಭಿವೃದ್ಧಿ ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ, ೫೮೩ ೨೭೬

೨೦೦೨

ಪ್ರವಾಸೋದ್ಯಮ ಮತ್ತು ಅಭಿವೃದ್ಧಿ

(ಹಂಪೆ ಒಂದು ಅಧ್ಯಯನ)

ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಮಹಾಪ್ರಬಂಧ

ಸಂಶೋಧಕ

ಕೆ. ಸಿದ್ದಪ್ಪ

ಮಾರ್ಗದರ್ಶಕರು

ಡಾ. ಎಂ. ಚಂದ್ರಪೂಜಾರಿ

ಪ್ರವಾಚಕರು

ಅಭಿವೃದ್ಧಿ ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ, ೫೮೩ ೨೭೬

೨೦೦೨

116

ಮಾರ್ಗದರ್ಶಕರ ಪತ್ರ

ಶ್ರೀ ಸಿದ್ದಪ್ಪ ಕೆ. ಇವರು **ಪ್ರವಾಸೋದ್ಯಮ ಮತ್ತು ಅಭಿವೃದ್ಧಿ(ಹಂಪೆ ಒಂದು ಅಧ್ಯಯನ)** ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಇವರು ಪಿಎಚ್.ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಪ್ರಸ್ತುತ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ : 30-12-02
ಸ್ಥಳ : ವಿದ್ಯಾರಣ್ಯ

(ಡಾ. ಎಂ. ಚಂದ್ರಪೂಜಾರಿ)
ಪ್ರವಾಚಕರು
ಅಭಿವೃದ್ಧಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಪ್ರಮಾಣ ಪತ್ರ

ಪ್ರವಾಸೋದ್ಯಮ ಮತ್ತು ಅಭಿವೃದ್ಧಿ(ಹಂಪೆ ಒಂದು ಅಧ್ಯಯನ) ಎಂಬ ಶೀರ್ಷಿಕೆಯ ಈ ಮಹಾಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲು ಡಾ. ಎಂ. ಚಂದ್ರಪೂಜಾರಿ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ಮಹಾ ಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ : 30.12.02
ಸ್ಥಳ : ವಿದ್ಯಾರಣ್ಯ

(ಸಿದ್ದಪ್ಪ ಕೆ.)
ಸಂಶೋಧಕ
ಅಭಿವೃದ್ಧಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಕೃತಜ್ಞತೆಗಳು

ನನಗೆ ಸಂಶೋಧನೆ ಮಾಡಲು ಅವಕಾಶ ಮಾಡಿಕೊಟ್ಟ ಕನ್ನಡ ವಿಶ್ವವಿದ್ಯಾಲಯದ ಸ್ಥಾಪಕ ಕುಲಪತಿ ಡಾ.ಚಂದ್ರಶೇಖರ ಕಂಬಾರರಿಗೆ, ನನ್ನ ಸಂಶೋಧನೆಯನ್ನು ಪೂರ್ಣಗೊಳಿಸಲು ತುಂಬು ಸಹಕಾರ ನೀಡಿ ಪ್ರೋತ್ಸಾಹಿಸಿದ ಈಗಿನ ಕುಲಪತಿಗಳೂ, ಆದ ಡಾ.ಹೆಚ್.ಜೆ ಲಕ್ಕಪ್ಪಗೌಡರಿಗೆ, ತುಂಬ ಹೃದಯದ ಕೃತಜ್ಞತೆಗಳು. ಹಾಗೆಯೇ ಕುಲಸಚಿವರಾದ ಡಾ.ಕೆ.ವಿ.ನಾರಾಯಣ, ಹಾಗೂ ಅಧ್ಯಯನಾಂಗದ ನಿರ್ದೇಶಕರಾದ ಡಾ.ಕರಿಗೌಡ ಬೀಚನಹಳ್ಳಿಯವರಿಗೂ ಕೃತಜ್ಞತೆಗಳು.

ನನ್ನ ಸಂಶೋಧನೆಯ ಮಾರ್ಗದರ್ಶಕರಾಗಿ, ಸಂಶೋಧನೆಯ ಪ್ರತಿ ಹಂತದಲ್ಲೂ ಸೂಕ್ತ ಸಲಹೆ, ಸಹಕಾರ ನೀಡಿ, ಸಂಶೋಧಕನಾಗಿ ರೂಪಿಸಿದ ಡಾ.ಚಂದ್ರಪೂಜಾರಿಯವರಿಗೆ ಚಿರಋಣಿಯಾಗಿದ್ದೇನೆ.

ಅಭಿವೃದ್ಧಿ ಅಧ್ಯಯನ ವಿಭಾಗದಲ್ಲಿ ಸಂಶೋಧಕನಾಗಿ ಸೇರಿಕೊಂಡಗಿನಿಂದ ನನ್ನನ್ನು ಪ್ರೋತ್ಸಾಹಿಸಿದ ವಿಶ್ರಾಂತ ಪ್ರಾಧ್ಯಾಪಕರಾದ ಪ್ರೊ.ಬಿ.ಶೇಷಾದ್ರಿ ಹಾಗೂ ವಿಭಾಗದ ಮುಖ್ಯಸ್ಥರಾದ ಶ್ರೀ.ಟಿ.ಆರ್.ಚಂದ್ರಶೇಖರ್ ಅವರನ್ನು ನೆನೆಯುತ್ತೇನೆ.

ಅಭಿವೃದ್ಧಿ ಅಧ್ಯಯನ ವಿಭಾಗದ ಉಪನ್ಯಾಸಕರಾದ ಎ.ಶ್ರೀಧರ, ಸಿದ್ಧಗಂಗಮ್ಮ, ಹೆಚ್.ಡಿ.ಪ್ರಶಾಂತ ಹಾಗೂ ಜನಾರ್ಧನ, ಅಧ್ಯಯನದ ಸಂದರ್ಭದಲ್ಲಿ ವಿಶ್ವಾಸ ತೋರಿದ ಪ್ರೊ.ಲಕ್ಷ್ಮಣ್ ತೆಲಗಾವಿ, ಡಾ.ಹಿ.ಚಿ.ಬೋರಲಿಂಗಯ್ಯ, ಪ್ರೊ.ಮಲ್ಲೇಪುರಂ ಜಿ. ವೆಂಕಟೇಶ, ಡಾ.ಟಿ.ಪಿ.ವಿಜಯ್, ಪ್ರೊ.ಹನುಮಣ್ಣನಾಯಕ ದೊರೆ, ಡಾ.ಭಟ್ಟಸೂರಿ, ಡಾ.ಹಳ್ಳಿಕೇರಿ, ಡಾ.ಕೆ. ಎಂ.ಮೈತ್ರಿ, ಡಾ.ಕೇಶವನ್ ಪ್ರಸಾದ್ ಡಾ.ಸ.ಚಿ.ರಮೇಶ್, ಡಾ.ಚಿನ್ನಸ್ವಾಮಿ ಸೋಸಲೆ ಅವರಿಗೆ,

ವಿಶ್ವವಿದ್ಯಾಲಯದಲ್ಲಿ ವಿವಿಧ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ನೇಹಿತರಾದ ಎ.ವೆಂಕಟೇಶ್, ಪ್ರೇಮ್‌ಕುಮಾರ್, ಈ.ಟಿ.ನಾಗರಾಜ, ಶ್ರೀನಿವಾಸ, ಶಂಕರ್, ಗುರುಬಸಪ್ಪ, ಕುಬೇರಪ್ಪ, ರೇವಣ್ಣ, ಶಿವಪುತ್ರ, ಡಿ.ವಿ.ಪ್ರಕಾಶ್. ಎಂ.ಎಂ.ಶಿವಪ್ರಕಾಶ್, ಕರೀಮ್ ಸಾಬ್, ಜಿ.ಶಿವಕುಮಾರ್, ಗಂಡಿಬೋರಯ್ಯ, ಗಾದಿಲಿಂಗ ಇವರೆಲ್ಲರನ್ನು ನೆನೆಯುವುದು ನನ್ನ ಕರ್ತವ್ಯ. ಹಾಗೆಯೇ ಅಧ್ಯಯನಕ್ಕೆ ಪೂರಕವಾದ ಗ್ರಂಥಗಳನ್ನು ಒದಗಿಸುವಲ್ಲಿ ಸಹಕಾರ ನೀಡಿದ ಗ್ರಂಥಾಲಯದ ಸಿಬ್ಬಂದಿಗಳಾದ, ಶ್ರೀಮತಿ ನಾಗವೇಣಿ, ಮಲ್ಲಿಕಾರ್ಜುನ, ಗುಡಿಮನಿ, ಸುಹಾಸ್, ನರೆಗಲ್ಲಪ್ಪ, ಇವರೆಲ್ಲರಿಗೂ,

ಕಂಪ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಚಾರ್ಯರಾದ ಶ್ರೀ ಎಸ್.ಕೆ.ಚಂದ್ರಕುಮಾರ್, ಉಪನ್ಯಾಸಕರಾದ, ಹೇಮರೆಡ್ಡಿ, ಗಣಪತಿ ಕೆ.ಲಮಾಣಿ, ಕೆ.ಮಲ್ಲಿಕಾರ್ಜುನ, ಐ.ಮಲ್ಲಿಕಾರ್ಜುನ, ಪ್ರಥಮ ದರ್ಜೆ ಸಹಾಯಕ ಕೆ.ಆದಿಬಾಬು, ರಾಜಶೇಖರ, ಕಾಲೇಜಿನ ಸಿಬ್ಬಂದಿ ಹಾಗೂ ನನ್ನೆಲ್ಲ ವಿದ್ಯಾರ್ಥಿಗಳಿಗೆ,

ಹಂಪೆಯಲ್ಲಿ ಉಳಿದುಕೊಳ್ಳಲು ವಸತಿವ್ಯವಸ್ಥೆ ಮಾಡಿ, ಕ್ಷೇತ್ರಕಾರ್ಯ ಮಾಡಲು ಅನುವು ಮಾಡಿಕೊಟ್ಟು, ಸೂಕ್ತ ಮಾರ್ಗದರ್ಶನ ನೀಡಿದ ಶಿವಾನಂದ ಯೋಗಾಶ್ರಮದ ಪೂಜ್ಯ ಶ್ರೀ ಶಿವಾನಂದ ಯೋಗಿಗಳಿಗೆ ತುಂಬಾ ಅಭಾರಿಯಾಗಿದ್ದೇನೆ. ಹಾಗೆಯೆ ನನ್ನ ಅಧ್ಯಯನ ಸಂದರ್ಭದಲ್ಲಿ ಸಹಕರಿಸಿದ

ಹಂಪೆಯ ಶಾಂತಿಗೆಸ್ಟ್ ಹೌಸಿನ ಮಾಲೀಕರಾದ ಶಿವರಾಮಸಿಂಗ್ ಮತ್ತು ಕುಟುಂಬದವರಿಗೆ ಮತ್ತು ಓಂ ಗೆಸ್ಟ್‌ಹೌಸಿನ ಮಾಲೀಕರಾದ ಮಲ್ಲಿಕಾರ್ಜುನ ಮತ್ತು ಮನೆಯವರಿಗೂ, ಹಂಪೆಯ ಗ್ರಾಮಸ್ಥರಿಗೂ ಹಾಗೂ ಸ್ನೇಹಿತರಾದ ವೆಂಕಟೇಶ ಬಿ. ಎ.ಚೆನ್ನಪ್ಪ, ತಿಪ್ಪಣ್ಣಗೌಡ, ಶಂಕರ, ಪ್ರಸಾದ್, ಹನುಮೇಶರಾವ್, ಜೆ.ವೀರೇಶ, ಜೆ.ನಾಗರಾಜ, ಆತ್ಮೀಯರಾದ ಹನುಮಂತ ಸಿಂಗ್, ಟಿ.ಟಿ.ಗುತ್ತಿ, ತ್ರಿಲೋಕನಾಥ ಡಾ.ಜಿ.ಸುಹಾಸ್(ಕಮಲಾಪುರ) ಇವರೆಲ್ಲರ ಸಹಕಾರವನ್ನು ಪ್ರೀತಿಯಿಂದ ಸ್ಮರಿಸುವೆ.

ನನ್ನ ಪ್ರಗತಿಗೆ ಪ್ರೋತ್ಸಾಹಿಸಿದ ಪಾಪಿನಾಯಕನ ಹಳ್ಳಿಯ ಜಿಲ್ಲಾ ಪಂಚಾಯತಿ ಸದಸ್ಯರು ಹಾಗೂ ಸಹೋದರರಾದ ಕೆ. ಎಂ. ಹಾಲಪ್ಪ,(ಗಾದಿಗನೂರು) ಸ್ನೇಹಿತರಾದ ಯು.ವಿಜಯ ಕುಮಾರ, ಬಸವರಾಜ, ಎಂ.ಪಂಪಾಪತಿ, ಶಂಭುಲಿಂಗಪ್ಪ ಡಿ.ಪಂಪಾಪತಿ, ಯು.ನಾಗೇಂದ್ರಪ್ಪ ಹಾಗೂ ಹಿರಿಯರಾದ ನೀಲಕಂಠಪ್ಪ, ರಾಯನಗೌಡ, ಮಲಿಯಪ್ಪ, ಮೇಟಿ ಕೊಮಾರಪ್ಪ, ಉಪನ್ಯಾಸ ಮಿತ್ರರಾದ ಮಹಮ್ಮದ್ ಜಹಿರುದ್ದೀನ್ ಹನುಮಂತಪ್ಪ ಪೂಜಾರ್, ಎಚ್.ಬಿ.ಚನ್ನಯ್ಯ(ಮಂಡ್ಯ), ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾದ ಸಣ್ಣ ಈರಣ್ಣ, ಬ್ಯಾಂಕ್ ಉದ್ಯೋಗಿ ಸಿ. ಈರಪ್ಪ, ಇವರೆಲ್ಲರ ಪ್ರೀತಿಗೆ ಅಭಾರಿಯಾಗಿದ್ದೇನೆ.

ನನ್ನ ಪಿಎಚ್.ಡಿ. ಅಧ್ಯಯನಕ್ಕೆ ಕಾರಣೀಭೂತರಾದ ಬಳ್ಳಾರಿ ಜಿಲ್ಲೆ ಜನತಾದಳ(ಯು)ದ ಅಧ್ಯಕ್ಷರಾದ ಮಾನ್ಯ ಶ್ರೀ ಎಲ್. ಸಿದ್ಧನಗೌಡರಿಗೆ,

ಸದಾ ನನ್ನ ಹಿತವನ್ನು ಬಯಸುವ ಆತ್ಮೀಯರಾದ ಡಾ.ಜೆ.ಕೃಷ್ಣ, ಯರಿಸ್ವಾಮಿ ಎಂ., ಡಾ.ವಿ.ಸೀ. ಮಾರುತಿ, ಪಿ.ಕೆ.ಶ್ರೀನಿವಾಸ, ರಾಮಸ್ವಾಮಿ, ಡಾ.ಜಿ.ಉಮೇಶ್ ಮತ್ತು ರಾಜಕುಮಾರ್.ಕೆ.ಆರ್.ಜೆ, ಡಾ.ಆರ್.ಬಿ.ಕುಮಾರ್, ಗುರುಬಸವರಾಜು ಎಚ್., ಡಾ.ಗೋವಿಂದ, ಡಾ.ಎ.ಚನ್ನಪ್ಪ, ಡಾ. ರೇವಯ್ಯ ಒಡೆಯರ್, ನನ್ನ ಪ್ರಬಂಧದ ಕರಡು ನೋಡುವಲ್ಲಿ ತುಂಬಾ ಸಹಕಾರಿಯಾಗಿದ್ದ ಸ್ನೇಹಿತರಾದ ಶ್ರೀಧರರಾವ್ ಪಿಸ್ಸೆ , ನಮ್ಮ ವಿಭಾಗದ ಸಿಬ್ಬಂದಿಯಾದ ನಾಗರಾಜ ಬಡಿಗೇರ್ ಮತ್ತು ಮಹಮ್ಮದ್ ಆಲಿ ಅವರುಗಳಿಗೆ,

ಅಧ್ಯಯನ ಕೈಗೊಂಡ ಸಂದರ್ಭದಲ್ಲಿ ಅಂಕಿ-ಅಂಶಗಳನ್ನು ತಾಲೂಕು ಕಚೇರಿ, ತಾಲೂಕು ಪಂಚಾಯತಿ, ಮಹಿಳೆ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಪ್ರಾಥಮಿಕ ಆರೋಗ್ಯ ಕೇಂದ್ರ ಕಮಲಾಪುರ, ಹಂಪಿ ಮುಜರಾಯಿ ಇಲಾಖೆ, ಆಯುರ್ವೇದಿಕ ಆಸ್ಪತ್ರೆ, ಪೋಲಿಸ್ ಇಲಾಖೆ ಹಂಪಿ, ಹಂಪಿ ಗ್ರಾಮಪಂಚಾಯತಿ, ಪ್ರವಾಸೋದ್ಯಮ ಇಲಾಖೆ, ಹೊಸಪೇಟೆ ಪುರಾತತ್ವ ಸರ್ವೇಕ್ಷಣ ಇಲಾಖೆ, ಕಮಲಾಪುರ ಮತ್ತು ಹೊಸಪೇಟೆ ಸಾರ್ವಜನಿಕ ಆಸ್ಪತ್ರೆ ವೈದ್ಯಾಧಿಕಾರಿಗಳು ಮುಂತಾದವರಿಗೆ,

ಅಧ್ಯಯನ ಅವಧಿಯಲ್ಲಿ ತಾಳ್ಮೆಯಿಂದ ಸಹಕರಿಸಿದ ಬಾಳಸಂಗಾತಿಯಾಗಿರುವ ಉಮಾ ಮತ್ತು ಮಕ್ಕಳು ಹಾಗೂ ತಮ್ಮನಾದ ಜಂಬನಾಥ, ತಾಯಿ ಅಂಕಲಮ್ಮ ಅವರನ್ನು ಪ್ರೀತಿಯಿಂದ ನೆನೆಯುತ್ತೇನೆ.

ಮೊದಲು ಅಕ್ಷರ ಸಂಯೋಜನೆ ಮಾಡಿದ ಬಸವರಾಜ್ ಪತ್ರಕರ್ತ, ಮಾರುತಿ ಅವರುಗಳಿಗೆ,

ಸುಂದರವಾಗಿ ಅಕ್ಷರ ಸಂಯೋಜನೆ ಮಾಡಿದ ಎ. ಎಂ. ಕೃಪಾಶಂಕರ್ ಮತ್ತು ರಶ್ಮಿ ಕೃಪಾಶಂಕರ್ ಹಾಗೂ ಅಕ್ಷರ ಸಂಯೋಜನೆಯ ಸಮಯದಲ್ಲಿ ಕಿರಿಕಿರಿ ಮಾಡುತ್ತಿದ್ದ ಪುಟ್ಟ ಹರ್ಷನನ್ನು ಪ್ರೀತಿಯಿಂದ ನೆನೆಯುತ್ತೇನೆ. ಅಚ್ಚುಕಟ್ಟಾಗಿ ಬೈಂಡಿಂಗ್ ಮಾಡಿಕೊಟ್ಟ ಮಹಾಂತೇಶ್ ಬುಕ್ ಬೈಂಡರ್ಸ್, ಧಾರವಾಡ ಅವರಿಗೆ

ತುಂಬು ಹೃದಯದ ಕೃತಜ್ಞತೆಗಳೊಂದಿಗೆ,

ಸಿದ್ಧಪ್ಪ ಕೆ.

ಪರಿವಿಡಿ

ಪ್ರಸ್ತಾವನೆ

ಸಾಮಾಜಿಕ ಹಾಗೂ ಆರ್ಥಿಕ ಪರಿವರ್ತನೆಯಲ್ಲಿ ಅಸಂಘಟಿತ ಪ್ರವಾಸೋದ್ಯಮದ ಪಾತ್ರವನ್ನು ವಿಶ್ಲೇಷಿಸುವುದು ಈ ಮಹಾಪ್ರಬಂಧದ ಮುಖ್ಯ ಉದ್ದೇಶ. ಹಂಪೆಯ ಪ್ರವಾಸೋದ್ಯಮವನ್ನು ಅಧ್ಯಯನ ಮಾಡುವ ಮೂಲಕ ಅಸಂಘಟಿತ ಪ್ರವಾಸೋದ್ಯಮ ವಲಯದ ಸಾಮಾಜಿಕ ಹಾಗೂ ಆರ್ಥಿಕ ಪರಿಣಾಮವನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಲಾಗಿದೆ. 1990ರ ನಂತರ ವಿದೇಶಿ ಪ್ರವಾಸಿಗರು ಹಂಪೆಗೆ ಬರುವುದು ಹೆಚ್ಚಿದೆ. ಭಾರತದ ಹೊಸ ಆರ್ಥಿಕ ನೀತಿ, ವಿಶ್ವಪರಂಪರೆ ಪಟ್ಟಿಯಲ್ಲಿ ಹಂಪೆಯ ಸ್ಮಾರಕಗಳ ಸೇರ್ಪಡೆ ಹಾಗೂ ಭಾರತ ಸರ್ಕಾರ 1991ರ ವರ್ಷವನ್ನು ಪ್ರವಾಸೋದ್ಯಮ ವರ್ಷವೆಂದು ಘೋಷಿಸಿದ್ದು, ಭಾರತಕ್ಕೆ ಭೇಟಿ ಕೊಡಿ ಎಂಬ ಅಬ್ಬರದ ಪ್ರಚಾರ, ಇತ್ಯಾದಿ ಅಂಶಗಳು ಪ್ರವಾಸಿಗರ ಹೆಚ್ಚಳಕ್ಕೆ ಕಾರಣಗಳಾಗಿವೆ. ಹಂಪೆಗೆ ಬರುವ ವಿದೇಶಿ ಪ್ರವಾಸಿಗರಲ್ಲಿ ಹೆಚ್ಚಿನವರು ಹಳ್ಳಿಯಲ್ಲಿಯೆ ತಂಗುತ್ತಾರೆ. ಪ್ರವಾಸಿಗರಿಗೆ ಅಗತ್ಯವಿರುವ ಸರಕು ಮತ್ತು ಸೇವೆಗಳನ್ನು ಸ್ಥಳೀಯರು ಒದಗಿಸುತ್ತಿದ್ದಾರೆ. ಪ್ರವಾಸೋದ್ಯಮ ಪೂರಕ ಚಟುವಟಿಕೆಗಳಾದ ಅತಿಥಿ ಗೃಹಗಳು, ರೆಸ್ಟೋರೆಂಟ್‌ಗಳು, ಹೋಟೆಲ್‌ಗಳು, ಅಂಗಡಿಗಳು, ಮಾಧ್ಯಮ ಸಂಪರ್ಕಗಳು ಇತ್ಯಾದಿಗಳು 1991ರ ನಂತರ ಹಂಪೆಯಲ್ಲಿ ಸಾಕಷ್ಟು ಅಭಿವೃದ್ಧಿ ಹೊಂದಿವೆ. ಇದು ಪ್ರವಾಸೋದ್ಯಮಕ್ಕೆ ಪೂರಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡವರ ಆದಾಯವನ್ನು ಮತ್ತು ಆ ಮೂಲಕ ಗ್ರಾಮದ ಆರ್ಥಿಕತೆಯನ್ನು ಪ್ರಭಾವಿಸಿರಬಹುದು. 1990 ಮತ್ತು 2000 ಇಸವಿಯವರಗೆ ಅಂದರೆ ಸುಮಾರು ಹತ್ತು ವರ್ಷಗಳಲ್ಲಿ ಹಂಪೆ ಗ್ರಾಮದಲ್ಲಾದ ಆರ್ಥಿಕ ಹಾಗೂ ಸಾಮಾಜಿಕ ಬದಲಾವಣೆಗಳನ್ನು ಗುರುತಿಸುವುದು ಕೂಡ ಈ ಅಧ್ಯಯನದ ಮುಖ್ಯ ಉದ್ದೇಶವಾಗಿದೆ.

ಪ್ರವಾಸೋದ್ಯಮ ಮತ್ತು ಅಭಿವೃದ್ಧಿ

ಕೃಷಿ ಮತ್ತು ಕೈಗಾರಿಕೆಯ ನಂತರ ಸೇವಾ ವಲಯ- ಈ ಕ್ರಮದಲ್ಲಿ ಅಭಿವೃದ್ಧಿ ಸಾಕಾರಗೊಳ್ಳುವುದನ್ನು ಸಾಂಪ್ರದಾಯಿಕ ಅಭಿವೃದ್ಧಿ ಸಿದ್ಧಾಂತಗಳು ತಿಳಿಸುತ್ತವೆ. ಆದರೆ ಅಭಿವೃದ್ಧಿಶೀಲ ರಾಷ್ಟ್ರಗಳ ಅಭಿವೃದ್ಧಿ ಪ್ರಕ್ರಿಯೆಯು ಸಾಂಪ್ರದಾಯಿಕ ಸಿದ್ಧಾಂತಗಳು ಗುರುತಿಸಿದ ದಾರಿಯನ್ನು ತುಳಿದಿಲ್ಲ. ಇಲ್ಲಿ ಅಭಿವೃದ್ಧಿ ಹಂತಗಳನ್ನು ಅನುಕ್ರಮವಾಗಿ ಕಾಣದೆ ಪ್ರಾಥಮಿಕ ವಲಯದಿಂದ ತೃತೀಯ ವಲಯಕ್ಕೆ ಜಿಗಿದ ಉದಾಹರಣೆಗಳು ಸಾಕಷ್ಟು ಇವೆ. ಆರಂಭದಲ್ಲಿ ಇದನ್ನೊಂದು ಅನಿರೀಕ್ಷಿತ ಬೆಳವಣಿಗೆಯೆಂದು ಪರಿಗಣಿಸಲಾಗಿತ್ತು. ಆದರೆ ಬರುಬರುತ್ತಾ ಎಲ್ಲ ಅಭಿವೃದ್ಧಿಶೀಲ ಅರ್ಥ ವ್ಯವಸ್ಥೆಗಳು ಇದೆ ಹಾದಿಯನ್ನು ತುಳಿದಿರುವುದು ಗಮನಾರ್ಹ. ಹೊಸ

ಬೆಳವಣಿಗೆಯನ್ನು ಒಳಗೊಳ್ಳುವಂತೆ ಅಭಿವೃದ್ಧಿ ಸಿದ್ಧಾಂತ ಕೂಡ ಸಾಕಷ್ಟು ಪರಿಷ್ಕಾರಗೊಂಡಿದೆ. ತೃತೀಯ ವಲಯದಲ್ಲಿ ತುಂಬಾ ಸುದ್ದಿಯಲ್ಲಿರುವ ಉದ್ಯಮವೆಂದರೆ ಪ್ರವಾಸೋದ್ಯಮ. ಪ್ರವಾಸೋದ್ಯಮಕ್ಕೆ ಪ್ರೋತ್ಸಾಹ ನೀಡುವ ಮೂಲಕ ಆದಾಯ ಮತ್ತು ಉದ್ಯೋಗ ಸೃಷ್ಟಿಯಾಗುತ್ತವೆ. ಅವುಗಳು (ಆದಾಯ ಮತ್ತು ಉದ್ಯೋಗ)ಆರ್ಥಿಕ ಮತ್ತು ಸಾಮಾಜಿಕ ಪರಿವರ್ತನೆ ತರುತ್ತವೆ ಎನ್ನುವ ನಂಬಿಕೆ ಇದೆ. ಆದರೆ ಈ ವಲಯ ಕೂಡ ಬಂಡವಾಳ ವಿನಿಯೋಜನೆಯ ಪ್ರಮಾಣದ ನೆಲೆಯಲ್ಲಿ ವಿಂಗಡಿಸಲ್ಪಟ್ಟಿದೆ. ಶ್ರೀಮಂತ ಪ್ರವಾಸಿಗರನ್ನು ಗಮನದಲ್ಲಿಟ್ಟುಕೊಂಡು ಬೃಹತ್ ಪ್ರಮಾಣದ ಬಂಡವಾಳ ತೊಡಗಿಸಿ ಐಷಾರಾಮಿ ಹೋಟೆಲ್ ಮತ್ತು ರೆಸ್ಟೋರೆಂಟ್‌ಗಳು ನಿರ್ಮಿತವಾಗುತ್ತಿವೆ. ಈ ಮೂಲಕ ಪ್ರವಾಸಿಗರನ್ನು ಆಕರ್ಷಿಸಿ ಆದಾಯ, ಉದ್ಯೋಗಗಳನ್ನು ಸೃಷ್ಟಿಸಬಹುದೆಂಬ ಗ್ರಹಿಕೆಯಿದೆ. ಈ ಸಾಂಸ್ಥಿಕ ವ್ಯವಸ್ಥೆಯು ಶ್ರೀಮಂತ ಪ್ರವಾಸಿಗರಿಗೆ ಹೆಚ್ಚಿನ ಉಪಯೋಗವಾಗಬಹುದೆಂದು ಹೇಳಬಹುದು. ಶ್ರೀಮಂತ ಪ್ರವಾಸಿಗರು ಸಂಘಟಿತ-ಸಾಂಸ್ಥಿಕ ಪ್ರವಾಸೋದ್ಯಮ ಘಟಕಗಳ ಮೂಲಕ ಬರುವುದು ಅಥವಾ ಪ್ಯಾಕೇಜ್ ಟೂರಿಸ್ಟ್‌ಗಳಾಗಿರುವುದು ಇದೆ. ಈ ಮಾದರಿಯ ಪ್ರವಾಸಿಗರು ಪ್ರವಾಸೋದ್ಯಮದ ನೀತಿಗೆ ಅನುಗುಣವಾಗಿ ನಿರ್ಮಿಸಿದ ಔಪಚಾರಿಕ(ಸಂಘಟಿತ) ವಲಯದ ಸ್ಟಾರ್‌ಹೋಟೆಲ್ ಮತ್ತು ಐಷಾರಾಮಿ ರೆಸ್ಟೋರೆಂಟ್, ಅತಿಥಿಗೃಹ ಮತ್ತು ರೆಸಾರ್ಟ್ ಇತ್ಯಾದಿ ಘಟಕಗಳಲ್ಲಿನ ಸೇವಾ ಸೌಲಭ್ಯಗಳನ್ನು ಇಚ್ಛಿಸುತ್ತಾರೆ. ಇವರ ಅಭಿರುಚಿಗಳು ಸಹ ಆಧುನಿಕ ಸೇವಾ ಸೌಲಭ್ಯಗಳನ್ನು ಬಯಸುವಂತಾಗಿರುವುದರಿಂದ ಇವರಿಗೆ ಕ್ಲಾಸ್ ಟೂರಿಸ್ಟ್ ಎನ್ನುವುದಿದೆ.) ಸರ್ಕಾರದ ಪ್ರವಾಸೋದ್ಯಮ ನೀತಿಗಳು ಕೂಡ ಹೆಚ್ಚು ಕಡಿಮೆ ಬಂಡವಾಳ ಹೂಡಿಕೆಗೆ ಪೂರಕವಾಗುವ ಉದ್ಯಮಗಳಿಗೆ ಮಹತ್ವ ಕೊಡುವಂತಿವೆ. ಇಲ್ಲಿ ಹೆಚ್ಚು ಹೆಚ್ಚು ಬಂಡವಾಳ ಹೂಡಲು ಶಕ್ತಿ ಇರುವವರು ಮಾತ್ರ ಪ್ರವಾಸೋದ್ಯಮದಲ್ಲಿ ತೊಡಗಿಸಿಕೊಳ್ಳಬಹುದು. ಇದು ಸಂಪತ್ತಿನ ಅಸಮಾನ ಹಂಚಿಕೆಗೆ ದಾರಿ ಮಾಡಿಕೊಡುತ್ತದೆ. ಈ ಕ್ರಮದ ಪ್ರವಾಸೋದ್ಯಮದ ಬೆಳವಣಿಗೆಯು ಉಳ್ಳವರ ಸಂಪತ್ತನ್ನು ಇನ್ನೂ ಹೆಚ್ಚಿಸಲು ನೆರವಾಗಬಹುದು.

ಪ್ರವಾಸೋದ್ಯಮವು ಈ ಸಾಂಸ್ಥಿಕ ರೂಪವನ್ನು ಪಡೆಯುವ ಮೊದಲಿನ ಹಂತವನ್ನು ಅನಧಿಕೃತ ಅಥವಾ ಅನೌಪಚಾರಿಕ ವಲಯವೆಂದು ಕರೆಯಲ್ಪಡುತ್ತದೆ.[1] ಅನಧಿಕೃತ ವಲಯ ಮುಖ್ಯವಾಗಿ ಮಧ್ಯಮ ಮತ್ತು ಶ್ರಮಿಕ ವರ್ಗದ ಪ್ರವಾಸಿಗರನ್ನು ಗಮನದಲ್ಲಿಟ್ಟುಕೊಂಡು ಬೆಳೆಯುತ್ತಿದೆ. ಇವರು ಪ್ಯಾಕೇಜ್ ಟೂರಿಸ್ಟ್ ಆಗಿರದೆ, ನಿರ್ದಿಷ್ಟತೆ, ಗೊತ್ತು ಗುರಿ ಇಲ್ಲದ ಪ್ರವಾಸಿಗರಾಗಿದ್ದು ಎಲ್ಲಿಗೆ ಮತ್ತು ಹೇಗೆ ಹೋಗುವುದು, ಎಲ್ಲಿ ತಂಗುವುದು, ಎಷ್ಟು ದಿನಗಳು ಉಳಿಯುವುದು ಇತ್ಯಾದಿಗಳು ಮುಂಚಿತವಾಗಿ ನಿರ್ಧಾರವಾಗಿರದೇ ಸಮಯಕ್ಕೆ ತಕ್ಕಂತೆ ಹೊಂದಿಕೊಂಡು ನಿರ್ಧಾರಗಳನ್ನು ತೆಗೆದುಕೊಳ್ಳುತ್ತಾರೆ. ಇಂಥಹ ಪ್ರವಾಸಿಗರನ್ನು ಡ್ರಿಫ್ಟರ್ಸ್ ಮತ್ತು ಎಕ್ಸ್‌ಪ್ಲೋರರ್ಸ್

ಎಂದು ಕರೆಯಲಾಗುತ್ತಿದೆ.[2] ಇವರುಗಳು ಕಡಿಮೆ ಆದಾಯ ಹೊಂದಿದ್ದು, ಆಧುನಿಕ ಸೇವಾ ಸೌಲಭ್ಯಗಳನ್ನು ಪಡೆದು ಐಷಾರಾಮಿ ಜೀವನ ನಡೆಸಲು ಅಶಕ್ತರಾಗಿರುವುದರಿಂದ ಸಾಮಾನ್ಯ ಸೇವಾ ಸೌಲಭ್ಯಗಳನ್ನು ಅನುಭೋಗಿಸುವ ಅಭಿರುಚಿಯನ್ನು ಹೊಂದಿರುತ್ತಾರೆ. ಕಡಿಮೆ ಆದಾಯವಿರುವ ಈ ಮಾದರಿಯ ಪ್ರವಾಸಿಗರು ಆಧುನಿಕ ಸೇವಾಸೌಲಭ್ಯಗಳನ್ನು ಕೊಡ ಮಾಡುವ ಹೋಟೆಲ್, ರೆಸ್ಟೋರೆಂಟ್, ಅತಿಥಿಗೃಹ ಇತ್ಯಾದಿಗಳಿಗೆ ಹೋಗದೆ, ಕಡಿಮೆ ದರದಲ್ಲಿ ದೊರಕುವ ಸೇವಾ ಸೌಲಭ್ಯಗಳನ್ನು ಬಯಸುತ್ತಾರೆ. ಈ ಪ್ರವಾಸಿಗರನ್ನು ಗಮನದಲ್ಲಿಟ್ಟುಕೊಂಡು ಪ್ರವಾಸೋದ್ಯಮದ ನೀತಿ ನಿಯಮಗಳು ರೂಪಿತವಾಗುತ್ತಿಲ್ಲ. ಹಾಗಾಗಿ ಇವರಿಗೆ ಬೇಕಾಗುವ ಸೇವಾ ಸೌಲಭ್ಯಗಳನ್ನು ಪ್ರವಾಸೋದ್ಯಮದ ಔಪಚಾರಿಕ (ಸಂಘಟಿತ) ವಲಯಗಳು ಕಡಿಮೆ ದರದಲ್ಲಿ ಈ ಪ್ರವಾಸಿಗರಿಗೆ ನೀಡಲು ಸಾಧ್ಯವಾಗುವುದಿಲ್ಲ. ಆದ ಕಾರಣ ಮಧ್ಯಮ ಮತ್ತು ಶ್ರಮಿಕ ವರ್ಗದ ಪ್ರವಾಸಿಗರ ಅಭಿರುಚಿ ಮತ್ತು ಆದಾಯಕ್ಕೆ ತಕ್ಕಂತೆ ಸೇವಾ ಸೌಕರ್ಯಗಳನ್ನು ಒದಗಿಸಲು ಅನೌಪಚಾರಿಕ (ಅಸಂಘಟಿತ) ವಲಯಗಳು ಪ್ರವಾಸೋದ್ಯಮದಲ್ಲಿ ಸ್ಥಾಪಿತಗೊಂಡಿವೆ.

ಅನೌಪಚಾರಿಕ (ಅಸಂಘಟಿತ) ವಲಯದಲ್ಲಿ ಘಟಕಗಳನ್ನು ಕಡಿಮೆ ಬಂಡವಾಳ ಹೊಂದಿರುವವರು ಸ್ಥಾಪಿಸಲು ಸಾಧ್ಯವಾಗುವುದರಿಂದ ಎಲ್ಲಾ ವರ್ಗಗಳು ಪ್ರವಾಸೋದ್ಯಮದ ಚಟುವಟಿಕೆಗಳಲ್ಲಿ ತೊಡಗಿಸಿ ಕೊಂಡು ತಮ್ಮ ಸಾಮಾಜಿಕ, ಆರ್ಥಿಕ ಸ್ಥಿತಿಗತಿಗಳನ್ನು ಸುಧಾರಿಸಿಕೊಳ್ಳಬಹುದಾಗಿದೆ. ಈ ಅನೌಪಚಾರಿಕ (ಅಸಂಘಟಿತ) ವಲಯವು ಉದ್ದಿಮೆದಾರರೊಂದಿಗೆ ಹೆಚ್ಚು ಉದ್ಯೋಗಗಳನ್ನು ಸೃಷ್ಟಿಸಿ, ಶ್ರಮ ಆಧಾರಿತ ವಲಯವಾಗುತ್ತಿದೆ. ಇದು ಪ್ರವಾಸೋದ್ಯಮದ ಮೂಲತಃ ಉದ್ದೇಶಕ್ಕೆ ಪೂರಕವಾಗಿದೆ. ಹೀಗೆ ಇಂದು ಪ್ರವಾಸೋದ್ಯಮ ಎರಡು ವಲಯವಾಗಿ ನಮ್ಮ ಮುಂದೆ ಇದೆ. ಒಂದು, ಹೆಚ್ಚು ಹೆಚ್ಚು ಬಂಡವಾಳ ಹೂಡುವುದು ಯಾವುದೇ ವಲಯದ ಬೆಳವಣಿಗೆಗೆ ಅಗತ್ಯ ಎನ್ನುವ ಸಾಂಪ್ರದಾಯಿಕ ಅಭಿವೃದ್ಧಿ ಸಿದ್ಧಾಂತಗಳ ಗ್ರಹಿಕೆಗೆ ಪೂರಕವಾಗಿ ಬೆಳೆಯುತ್ತಿದೆ. ಈ ನೀತಿಯ ಪ್ರಕಾರ ಪ್ರವಾಸೋದ್ಯಮದ ಬೆಳವಣಿಗೆಯೆಂದರೆ ಹೆಚ್ಚಿನ ಬಂಡವಾಳ ಹೂಡಿ ಸ್ಟಾರ್ ಹೋಟೆಲ್ ಮತ್ತು ರೆಸಾರ್ಟ್‌ಗಳನ್ನು ನಿರ್ಮಿಸುವುದು ಎಂದಾಗಿದೆ. ಇದು ಪ್ರವಾಸಿಗರೆಲ್ಲ ಶ್ರೀಮಂತರು ಮತ್ತು ಅವರ ಬೇಡಿಕೆಗಳು ಕೂಡ ಅಷ್ಟೆ ಶ್ರೀಮಂತವಾಗಿರುತ್ತವೆ ಎನ್ನುವ ಗ್ರಹಿಕೆಯಿಂದ ರೂಪುಗೊಂಡಿದೆ. ಎರಡು, ಕಡಿಮೆ ಬಂಡವಾಳ ಹೂಡಿ, ಆದರೆ ಹೆಚ್ಚು ಮಾನವ ಶ್ರಮ ಬಳಸಿ ವೃದ್ಧಿಗೊಳಿಸಬಹುದಾದ ಪ್ರವಾಸೋದ್ಯಮ. ಇದು ಎರಡೂ ಕಡೆ - ಪ್ರವಾಸಿಗರ ದೃಷ್ಟಿಯಿಂದ ಮತ್ತು ಅವರಿಗೆ ಸೇವಾ ಸೌಲಭ್ಯಗಳನ್ನು ಒದಗಿಸುವ ಉದ್ಯಮಿಗಳ ದೃಷ್ಟಿಯಿಂದ - ಸಮಾಜದ ಕೆಳವರ್ಗಗಳನ್ನು ಗಮನದಲ್ಲಿಟ್ಟುಕೊಂಡು ನಡೆಯುವ ಪ್ರಕ್ರಿಯೆ. ಇದನ್ನು ಅಸಂಘಟಿತ ಅಥವಾ ಅನಧಿಕೃತ ವಲಯ ಎಂದು ಕರೆಯುತ್ತಾರೆ. ಅಸಂಘಟಿತ ವಲಯ ಮತ್ತು ಅದರ ಸಾಮಾಜಿಕ ಹಾಗೂ ಆರ್ಥಿಕ ಪರಿವರ್ತನೆಯ ಸಂಬಂಧವನ್ನು ಪರೀಕ್ಷಿಸುವುದು ಈ ಅಧ್ಯಯನದ ಮುಖ್ಯ ಉದ್ದೇಶ.

ಪ್ರವಾಸೋದ್ಯಮದ ಅಭಿವೃದ್ಧಿ ನೀತಿಗಳು

ಪ್ರವಾಸೋದ್ಯಮವು ಮಾನವ ಸಂಪನ್ಮೂಲದ ಬೆಳವಣಿಗೆ ಮತ್ತು ಸಮರ್ಪಕ ಬಳಕೆಗೆ ವಿಪುಲ ಅವಕಾಶವನ್ನೊಡ್ಡಿ ವಿಶ್ವದ ಅನೇಕ ರಾಷ್ಟ್ರಗಳನ್ನು ತನ್ನೆಡೆಗೆ ಆಕರ್ಷಿಸುತ್ತಿದೆ. ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ಮತ್ತು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳು ಪ್ರವಾಸೋದ್ಯಮದಿಂದ ಬರುವ ವಿದೇಶಿ ವಿನಿಮಯದ ಗಳಿಕೆಯನ್ನು ಹೆಚ್ಚಿಸಿಕೊಳ್ಳಲು ಪ್ರವಾಸೋದ್ಯಮದ ಬೆಳವಣಿಗೆಗೆ ಪ್ರೋತ್ಸಾಹ ನೀಡುತ್ತಿವೆ. ಬಂಡವಾಳ ಕೊರತೆ ಇರುವ ಮತ್ತು ಮಾನವ ಸಂಪನ್ಮೂಲದ ಸಮೃದ್ಧತೆಯನ್ನು ಹೊಂದಿದ ರಾಷ್ಟ್ರಗಳು ಶ್ರಮ ಆಧಾರಿತವಾಗಿರುವ ಪ್ರವಾಸೋದ್ಯಮವನ್ನು ಬೆಳೆಸಲು ಶ್ರಮಿಸುತ್ತಿವೆ. ಈ ಉದ್ಯಮದಲ್ಲಿ ಬಂಡವಾಳ ಮತ್ತು ಉತ್ಪತ್ತಿ ನಡುವಿನ ಅನುಪಾತ ಕಡಿಮೆ ಇದೆ. ಬಂಡವಾಳ ಹೂಡಿಕೆ ಮತ್ತು ಉತ್ಪತ್ತಿ ನಡುವಣ ಕಾಲಾವಧಿ ಕೂಡ ಬಹಳ ಕಡಿಮೆ ಇದೆ. ಹೀಗೆ ಮಾನವ ಸಂಪನ್ಮೂಲ ಅಭಿವೃದ್ಧಿಗೆ, ಬಡತನ ನಿರ್ಮೂಲನೆಗೆ, ಉದ್ಯೋಗ ನಿರ್ಮಾಣಕ್ಕೆ, ಪರಿಸರದ ಪುನರ್‌ಸೃಷ್ಟಿಗೆ ಪ್ರವಾಸೋದ್ಯಮವನ್ನು ಪೂರಕವಾಗಿ ರೂಪುಗೊಳಿಸಲಾಗುತ್ತದೆ. ಕೃಷಿ, ಆಹಾರ ಸಂಸ್ಕರಣೆ, ಹೈನುಗಾರಿಕೆ, ಕರ-ಕುಶಲ ಕೈಗಾರಿಕೆ, ಕಟ್ಟಡ ನಿರ್ಮಾಣ, ಸಾರಿಗೆ, ವಿನ್ಯಾಸ ಹಾಗೂ ಪುಷ್ಪಗಾರಿಕೆಗಳು, ಸೇವಾ ಸೌಲಭ್ಯಗಳು ಇತ್ಯಾದಿಗಳನ್ನು ಒಳಗೊಳ್ಳುವುದರಿಂದ ಇತರ ಯಾವುದೇ ಉದ್ಯಮಕ್ಕಿಂತ ಪ್ರವಾಸೋದ್ಯಮ ವಿಸ್ತೃತವಾದ ಪರಿಣಾಮ ಬೀರುತ್ತದೆ.[3] ಪ್ರವಾಸೋದ್ಯಮ ಇಂತಹದೇ ನಿರ್ದಿಷ್ಟ ಪ್ರದೇಶದಲ್ಲಿ ಆರಂಭಿಸಬೇಕೆಂಬ ಇತಿಮಿತಿಗಳು ಇಲ್ಲ; ಪ್ರವಾಸೋದ್ಯಮವನ್ನು ಯಾವ ಸ್ಥಳದಲ್ಲಿ ಬೇಕಾದರೂ ಸ್ಥಾಪಿಸಬಹುದಾಗಿದೆ. ಹಿಂದುಳಿದ ಪ್ರದೇಶಗಳಲ್ಲೂ ಪ್ರವಾಸೋದ್ಯಮವನ್ನು ಆರಂಭಿಸಬಹುದು. ಇದರಿಂದ ದುರ್ಬಲ ವರ್ಗಗಳ, ಮಹಿಳೆಯರ ಮತ್ತು ಸಾಂಪ್ರದಾಯಿಕ ಕುಶಲಕರ್ಮಿಗಳ ಸಾಮಾಜಿಕ ಹಾಗು ಆರ್ಥಿಕ ಸ್ಥಿತಿಗತಿಗಳು ಸುಧಾರಿಸಬಹುದು. ಈ ಕ್ರಮದಲ್ಲಿ ಗ್ರಾಮೀಣ ಪ್ರದೇಶಗಳು ಅಭಿವೃದ್ಧಿ ಹೊಂದಿದಾಗ ಹಳ್ಳಿ ಜನರು ಉದ್ಯೋಗಗಳನ್ನರಸಿ ನಗರಗಳತ್ತ ಬರುವುದು ತಪ್ಪುತ್ತದೆ. ಈ ಎಲ್ಲ ಕಾರಣಗಳಿಂದ ಪ್ರವಾಸೋದ್ಯಮ ಇಂದು ಬಡ ರಾಷ್ಟ್ರಗಳಿಗೆ ಒಂದು ವರದಾನವಾಗಿದೆ.

ಪ್ರವಾಸೋದ್ಯಮದ ಪ್ರಾಮುಖ್ಯತೆಯನ್ನು ಮನಗಂಡು ಭಾರತ ಸರಕಾರ ಕೂಡ ಅದರ ವಿಕಾಸಕ್ಕೆ ಪೂರಕವಾಗುವ ನೀತಿಗಳನ್ನು ಜಾರಿಗೆ ತಂದಿದೆ. ಪ್ರವಾಸೋದ್ಯಮ ಕ್ಷೇತ್ರವು ಭಾರತದಲ್ಲಿ ರಾಜ್ಯ ಸರ್ಕಾರಗಳ ಹೊಣೆಯಾದರೂ ಕೇಂದ್ರ ಸರ್ಕಾರ ಪ್ರವಾಸೋದ್ಯಮ ಚಟುವಟಿಕೆಗಳಿಗೆ ಸಾಕಷ್ಟು ಪ್ರೋತ್ಸಾಹ ನೀಡುತ್ತಿದೆ. ವಿದೇಶಿ ವಿನಿಮಯ ಗಳಿಕೆಯ ಆಧಾರದ ಮೇಲೆ ಪ್ರವಾಸಿ ಸಂಸ್ಥೆಗಳಿಗೆ ನಿರ್ಯಾತ ಗೃಹಗಳ ಶ್ರೇಣಿಯನ್ನು ನೀಡಿ ಪ್ರೋತ್ಸಾಹಿಸುತ್ತಿದೆ.[4] ಹೋಟೆಲ್‌ಗಳು, ಪ್ರವಾಸಿ ಏಜಂಟರುಗಳು, ಪ್ರವಾಸಿ ನಿರ್ವಾಹಕ ಮತ್ತು ಸಂಘಟನೆಕಾರರನ್ನೊಳಗೊಂಡ ಘಟಕಗಳಿಗೆ ಅವಕಾಶ

ನೀಡಿದೆ. 1991ರ ಮುಕ್ತ ಆರ್ಥಿಕ ನೀತಿ, ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣದ ನ್ವಯ ಪ್ರವಾಸೋದ್ಯಮವನ್ನು ವಿದೇಶಿ ಬಂಡವಾಳ ಹೂಡಿಕೆಗೆ ಆದ್ಯತಾ ವಲಯವೆಂದು ಗುರುತಿಸಿ ಶೇ.51ರವರೆಗೂ ನೇರ ವಿದೇಶಿ ಬಂಡವಾಳ ಹೂಡಿಕೆಗೆ ಪರವಾನಿಗೆ ನೀಡಲಾಗಿದೆ. ಅನಿವಾಸಿ ಭಾರತೀಯರು ನೂರಕ್ಕೆ ನೂರರಷ್ಟು ಬಂಡವಾಳ ಹೂಡಬಹುದಾಗಿದೆ. ಹಾಗೂ ಒಂದು ನಿರ್ದಿಷ್ಟ ಪರಿಮಿತಿಯಲ್ಲಿ ವಿದೇಶಿ ತಂತ್ರಜ್ಞಾನ ಒಡಂಬಡಿಕೆ ಮತ್ತು ಆಡಳಿತಕ್ಕೆ ಅವಕಾಶ ಕಲ್ಪಿಸಲಾಗಿದೆ. ಹೋಟೆಲ್‌ಗಳು ಗಳಿಸುವ ವಿದೇಶಿ ವಿನಿಮಯದ ಲಾಭದಲ್ಲಿ ಶೇ.50ರಷ್ಟು ತೆರಿಗೆ ರಿಯಾಯ್ತಿ ನೀಡಲಾಗಿದೆ. ಉಳಿದ ಶೇಕಡ 50ನ್ನು ಪ್ರವಾಸೋದ್ಯಮದಲ್ಲೇ ವಿನಿಯೋಗಿಸಿದರೆ ಅದಕ್ಕೂ ತೆರಿಗೆ ವಿನಾಯಿತಿ ನೀಡಲಾಗುತ್ತದೆ.[5]

1992ರಲ್ಲಿ ಭಾರತ ಸರ್ಕಾರವು ಪ್ರವಾಸೋದ್ಯಮದ ರಾಷ್ಟ್ರೀಯ ಕ್ರಿಯಾ ಯೋಜನೆಯನ್ನು ಜಾರಿಗೊಳಿಸಿತು. ಇದು ವಸ್ತುಸ್ಥಿತಿಯ ಸಮರ್ಪಕ ಅಂದಾಜು ಆಗಿದ್ದು ಅಂದಾಜಿನ ಆಧಾರದ ಮೇಲೆ ಪರಿಣಾಮಕಾರಿ ಯೋಜನೆ ರೂಪಿಸುವುದು ಮತ್ತು ಉದ್ದೇಶಗಳನ್ನು ನಿಗಧಿ ಮಾಡುವುದು, ಹಾಗೂ ಗುರಿಸಾಧನೆಗಾಗಿ ಸಾಂಸ್ಥಿಕ ಸಾಮರ್ಥ್ಯವಾದ ಅಂದಾಜು ಮಾಡುವುದು ಇತ್ಯಾದಿಗಳನ್ನು ಒಳಗೊಂಡಿದೆ.[6] ಪ್ರವಾಸೋದ್ಯಮದ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರದಿಂದ ಸೀಮಿತ ಹಣಕಾಸಿನ ನೆರವು ರಾಜ್ಯ ಸರ್ಕಾರಗಳಿಗೆ ದೊರಕುತ್ತಿದೆ. ಸೌಲಭ್ಯಗಳಾದ ಪ್ರವಾಸಿ ಸಂಕೀರ್ಣಗಳು, ರಸ್ತೆಯ ಬದಿಯ ಸೌಲಭ್ಯಗಳು, ಸಾಹಸ ಕ್ರೀಡೆಗಳಿಗೆ ಅಗತ್ಯವಿರುವ ಉಪಕರಣಗಳ ಖರೀದಿ, ಪ್ರವಾಸೋದ್ಯಮ ತಾಣಗಳಲ್ಲಿ ದೀಪಗಳ ವ್ಯವಸ್ಥೆ, ಇತ್ಯಾದಿ ಸೌಲಭ್ಯಗಳನ್ನು ರೂಪಿಸಲು ಕೇಂದ್ರ ಸರಕಾರದ ನೆರವು ದೊರಕುತ್ತಿದೆ. ಅದೇ ರೀತಿ ಸಾಂಸ್ಕೃತಿಕ ಮತ್ತು ಐತಿಹಾಸಿಕ ಸ್ಮಾರಕಗಳ ಸಂವರ್ಧನೆ ಮತ್ತು ರಕ್ಷಣೆ, ಇವುಗಳ ಹೆಸರಿನಲ್ಲಿ ನಡೆಯುವ ಉತ್ಸವ, ಜಾತ್ರೆಗಳ ಸಂದರ್ಭದಲ್ಲಿ ನೆರಳು ಬೆಳಕಿನ ರೂಪಗಳ ಪ್ರದರ್ಶನ, ಕುಶಲಕಲೆ ಮತ್ತು ಜಾನಪದ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಉತ್ತೇಜನ ನೀಡಲು ನೆರವು ನೀಡುತ್ತಿದೆ. ಪ್ರವಾಸೋದ್ಯಮ ಅಭಿವೃದ್ಧಿಗೆ ಸಂಬಂಧಿಸಿದಂತೆ ಸ್ಥೂಲವಾದ ಕಾರ್ಯತಂತ್ರ ಗಳನ್ನು ರೂಪಿಸುವುದು, ಖಾಸಗೀ ವಲಯಕ್ಕೆ ಬೇಕಾಗುವಂತ ಆರ್ಥಿಕ ಹಾಗೂ ಹಣಕಾಸಿನ ಉತ್ತೇಜನಗಳನ್ನು ನೀಡುವುದು, ನಿಯಂತ್ರಣ, ಮೇಲ್ವಿಚಾರಣೆ ವ್ಯವಸ್ಥೆ ಇತ್ಯಾದಿಗಳನ್ನು ರಾಜ್ಯ ಸರ್ಕಾರಗಳು ಮಾಡುತ್ತಿವೆ. ಖಾಸಗೀಕರಣದ ಲಾಭ ಪಡೆಯುವುದರೊಂದಿಗೆ ಆಯಾ ರಾಜ್ಯ ಸರ್ಕಾರಗಳು ಖಾಸಗಿ ಕ್ಷೇತ್ರದ ಸಹಭಾಗಿತ್ವಕ್ಕೆ ಅವಕಾಶ ಮಾಡಿಕೊಟ್ಟಿವೆ.

ಕರ್ನಾಟಕ ಪ್ರವಾಸೋದ್ಯಮ ಇಲಾಖೆ 1997ರಲ್ಲಿ (1997 ರಿಂದ 2002ರವರೆಗಿನ) ಪ್ರವಾಸೋದ್ಯಮದ ಕರಡು ನೀತಿಯನ್ನು ರೂಪಿಸಿತು. ಇದರ ಪ್ರಕಾರ ವಿದೇಶಿ ಪ್ರವಾಸಿಗರು ಬಹುತೇಕ ಆಯ್ದ ಪ್ರವಾಸಿ ಕೇಂದ್ರ ಮತ್ತು ಸ್ಥಳಗಳಿಗೆ ಭೇಟಿ ನೀಡುವುದರಿಂದ ಆ ಸ್ಥಳಗಳಿಗೆ ನಿರ್ದಿಷ್ಟ ಕಾಲಮಾನದಲ್ಲಿ ಬರುವ ಪ್ರವಾಸಿಗರ ಸಂಖ್ಯೆಯ ಹೆಚ್ಚಳದಿಂದ ಸೌಲಭ್ಯ ಕೊರತೆ

ಆಗುವುದರೊಂದಿಗೆ ಪರಿಸರ ಹಾನಿಯಾಗುವ ಸಾಧ್ಯತೆಗಳು ಇವೆ. ಈ ಸಮಸ್ಯೆಗಳ ಪರಿಹಾರಕ್ಕಾಗಿ ಬರುವ ಹೆಚ್ಚಿನ ಪ್ರವಾಸಿಗರ ಬೇಡಿಕೆಗೆ ಅನುಗುಣವಾಗಿ ನೂತನ ಪ್ರವಾಸಿ ತಾಣಗಳನ್ನು ಆಯ್ಕೆ ಮಾಡಿ ಅಭಿವೃದ್ಧಿಪಡಿಸುವುದು ಈ ಕರಡು ನೀತಿಯ ಮುಖ್ಯ ಉದ್ದೇಶ. ಇದರ ಸಮಗ್ರ ಅಭಿವೃದ್ಧಿಗಾಗಿ ಪ್ರವಾಸೋದ್ಯಮದ ಕ್ರಿಯಾ ಯೋಜನೆಯನ್ನು ಜಾರಿಗೆ ತರಲಾಗಿದೆ. ಜತೆಗೆ ಪ್ರವಾಸಿಗರನ್ನು ಆಕರ್ಷಿಸಲು ಅಗತ್ಯವಿರುವ ಕ್ರಮಗಳ ಅನಿವಾರ್ಯತೆಯನ್ನು ಈ ಕ್ರಿಯಾ ಯೋಜನೆ ತಿಳಿಸುತ್ತದೆ.[7]

ಈ ಹೊಸ ಪ್ರವಾಸೋದ್ಯಮ ನೀತಿಯ ಮುಖ್ಯ ಉದ್ದೇಶ ಪ್ರವಾಸೋದ್ಯಮ ಸಂಬಂಧಿತ ಚಟುವಟಿಕೆಗಳನ್ನು ಅಭಿವೃದ್ಧಿಪಡಿಸುವುದು. ಜತೆಗೆ ಜನರಿಗೆ ಉದ್ಯೋಗ ಅವಕಾಶಗಳನ್ನು ಒದಗಿಸುವುದು. ಪ್ರವಾಸೋದ್ಯಮದಲ್ಲಿ ತೊಡಗಿಸಿಕೊಳ್ಳುವವರ ಸಂಖ್ಯೆ ಹೆಚ್ಚಾಗಿ ಅಲ್ಲಿಯ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿಗಳು ಉತ್ತಮಗೊಳ್ಳುತ್ತವೆ ಎನ್ನುವ ಗ್ರಹಿಕೆ ಇಲ್ಲಿದೆ. ಪ್ರವಾಸೋದ್ಯಮದ ಉನ್ನತೀಕರಣಕ್ಕಾಗಿ ಪ್ರವಾಸೋದ್ಯಮವನ್ನು ವಲಯವನ್ನಾಗಿ ವರ್ಗೀಕರಿಸುವುದು, ಪುರಾತನ ಮತ್ತು ಐತಿಹಾಸಿಕ ಸ್ಥಳಗಳನ್ನು ಅಭಿರುಚಿಗೆ ತಕ್ಕಂತೆ ಸಂರಕ್ಷಿಸುವುದು, ವನ್ಯಜೀವಿ ಮತ್ತು ಸಸ್ಯ ಸಂಪತ್ತನ್ನು ಅಭಿವೃದ್ಧಿಪಡಿಸುವುದು, ಆರ್ಥಿಕ ಪ್ರವಾಸೋದ್ಯಮವನ್ನು ಬೆಳೆಸುವುದು ಹಾಗೂ ಮೂಲ ಸೌಲಭ್ಯಗಳ ಅಭಿವೃದ್ಧಿಗಾಗಿ ಖಾಸಗಿ ಸಹಭಾಗಿತ್ವಕ್ಕೆ ಉತ್ತೇಜನವನ್ನು ನೀಡುವುದು ಇತ್ಯಾದಿ ಈ ಯೋಜನೆಯಲ್ಲಿ ಸೇರಿವೆ. ಈ ಉದ್ದೇಶಗಳ ಸಫಲತೆಗಾಗಿ ಕರ್ನಾಟಕ ಪ್ರವಾಸೋದ್ಯಮ ಇಲಾಖೆ ಪ್ರವಾಸೋದ್ಯಮ ಘಟಕಗಳನ್ನು ಹೊಂದಿದೆ. ಪ್ರವಾಸೋದ್ಯಮ ವಾಣಿಜ್ಯಾತ್ಮಕ ಸಂಸ್ಥೆಗಳಾಗಿದ್ದು, ಪ್ರವಾಸಿಗರಿಗೆ ಸೇವಾ ಸೌಲಭ್ಯಗಳನ್ನು ಒದಗಿಸುತ್ತಿವೆ. ಇವುಗಳಲ್ಲಿ ವಸತಿ ಘಟಕಗಳಾದ ಹೋಟೆಲ್‌ಗಳು, ರೆಸಾರ್ಟ್‌ಗಳು, ಡಾರ್ಮೆಟ್ರಿಗಳು, ಚೌಲ್ಟ್ರಿಸ್, ರಸ್ತೆ ಬದಿಯ ಸೌಲಭ್ಯಗಳು, ಪರಂಪರೆಯ ಹೋಟೆಲ್‌ಗಳು ಇತ್ಯಾದಿಗಳು ಮುಖ್ಯವಾಗಿವೆ. ರಸ್ತೆಯ ಬದಿಯ ಸೌಲಭ್ಯಗಳೊಳಗೆ ಹೋಟೆಲ್, ಮೋಟೆಲ್, ರೆಸ್ಟೋರೆಂಟ್ ಹಾಗೂ ಇತರ ಸೌಲಭ್ಯಗಳಾದ ದೂರ ಸಂಪರ್ಕ, ಮಂಟಪ, ಶೌಚಾಲಯ, ವಿಶ್ರಾಂತಿ ತಾಣಗಳು ಹಾಗೂ ವಾಹನ ನಿಲುಗಡೆ ಇತ್ಯಾದಿ ಒಳಗೊಂಡಿವೆ. ಟೂರಿಸಂ ರೆಸಾರ್ಟ್, ವಿನೋದದ ಉದ್ಯಾನಗಳು ಮತ್ತು ಸಾಹಸಕ್ರೀಡೆಗಳು, ಸರೋವರ ದೋಣಿಗಳು ಮತ್ತು ಹೌಸ್ ಬೋಟ್ಸ್ ಹಾಗೂ ಟೂರಿಸ್ಟ್ ವಿಲೇಜ್ ಇತ್ಯಾದಿಗಳನ್ನು ಬರುವ ಪ್ರವಾಸಿಗರಿಗೆ ಪ್ರವಾಸೋದ್ಯಮ ಘಟಕಗಳ ಮೂಲಕ ಸೇವಾ ಸೌಲಭ್ಯಗಳನ್ನು ಒದಗಿಸುವುದಾಗಿದೆ.[8]

ಅಧ್ಯಯನದ ಉದ್ದೇಶ

ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಪ್ರವಾಸೋದ್ಯಮದ ಅಭಿವೃದ್ಧಿ ನೀತಿಗಳ ಹಿಂದಿರುವ ಗ್ರಹಿಕೆಗಳು ಇಂತಿವೆ. ಒಂದು ಪ್ರವಾಸಿಗರೆಲ್ಲ ವಿದೇಶಿಯರು ಮತ್ತು ಶ್ರೀಮಂತರು. ಎರಡು, ಪ್ರವಾಸಿಗರು ದುಬಾರಿ ಬೆಲೆಯ ಐಷರಾಮಿ ಸೌಲಭ್ಯಗಳನ್ನು ಇಚ್ಛಿಸುತ್ತಾರೆ. ಮೂರು, ಅಂತಹ ಶ್ರೀಮಂತ ಪ್ರವಾಸಿಗರ ಬೇಡಿಕೆಗಳನ್ನು ಪೂರೈಸಲು ಸ್ಟಾರ್‌ಹೋಟೆಲ್, ಲಕ್ಸುರಿ ರಿಸಾರ್ಟ್ ಹಾಗು

ಇನ್ನಿತರ ಆಧುನಿಕ ಸೌಲಭ್ಯಗಳ ಅಗತ್ಯವಿದೆ. ನಾಲ್ಕು, ಶ್ರೀಮಂತ ಪ್ರವಾಸಿಗರ ಅಭಿರುಚಿಗೆ ತಕ್ಕಂತೆ ಪ್ರವಾಸೋದ್ಯಮ ಘಟಕಗಳನ್ನು ರೂಪಿಸಲಿಕ್ಕೆ ಬಂಡವಾಳ ಆಧಾರಿತ ಯೋಜನೆಗಳನ್ನು ರೂಪಿಸಬೇಕಾಗುತ್ತದೆ. ಈ ಅಧ್ಯಯನದ ಮುಖ್ಯ ಉದ್ದೇಶ ಮೇಲಿನ ಗ್ರಹಿಕೆಗಳನ್ನು ಪರೀಕ್ಷಿಸುವುದು. ಈ ಪೂರ್ವಗ್ರಹಿಕೆಗಳನ್ನು ಪರೀಕ್ಷಿಸಲು ಈ ಕೆಳಗಿನ ನಿರ್ದಿಷ್ಟ ಉದ್ದೇಶಗಳನ್ನು ಅಧ್ಯಯನ ಮುಂದಿಡುತ್ತಿದೆ.

1. ಪ್ರವಾಸಿಗರ ಆರ್ಥಿಕ ಮತ್ತು ಸಾಮಾಜಿಕ ಹಿನ್ನಲೆಗಳನ್ನು ಗುರುತಿಸುವುದು ಹಾಗು ಅವರ ಆದ್ಯತೆಗಳನ್ನು ಅರ್ಥಮಾಡಿಕೊಳ್ಳುವುದು
2. ಪ್ರವಾಸಿಗರ ಬೇಕು ಬೇಡಗಳನ್ನು ಪೂರೈಸಲು ಸ್ಥಳೀಯರು ಒದಗಿಸುವ ಸೇವಾ ಸೌಲಭ್ಯಗಳನ್ನು ಪಟ್ಟಿಮಾಡುವುದು
3. ಪ್ರವಾಸಿಗರ ನಿರೀಕ್ಷೆ ಮತ್ತು ಸ್ಥಳೀಯರು ಒದಗಿಸುವ ಸೇವಾ ಸೌಲಭ್ಯಗಳ ನಡುವಿನ ಅಂತರವನ್ನು ಪರೀಕ್ಷಿಸುವುದು.
4. ಸ್ಥಳೀಯ ಅರ್ಥ ವ್ಯವಸ್ಥೆಯ ಮೇಲೆ ಪ್ರವಾಸೋದ್ಯಮದಿಂದ ಆದ ಪರಿಣಾಮವನ್ನು ಅಧ್ಯಯನ ಮಾಡುವುದು
5. ಸ್ಥಳೀಯ ಸಮಾಜದ ಮೇಲೆ ಪ್ರವಾಸೋದ್ಯಮ ಬೀರಿದ ಪರಿಣಾಮವನ್ನು ಅಧ್ಯಯನ ಮಾಡುವುದು.

ಅಧ್ಯಯನದ ವಿಧಾನ

ಅಧ್ಯಯನ ಉದ್ದೇಶಗಳಿಗೆ ಸಂಬಂಧಿಸಿದ ಮಾಹಿತಿಗಳು ಇಂತಿವೆ. ಒಂದು, ಪ್ರವಾಸಿಗರ ಹಿನ್ನೆಲೆ ಮತ್ತು ಅವರ ಬೇಕು ಬೇಡಗಳು. ಎರಡು, ಪ್ರವಾಸಿಗರ ಬೇಕು ಬೇಡಗಳನ್ನು ಪೂರೈಸಲು ಸ್ಥಳೀಯರು ಆರಂಭಿಸಿದ ಉದ್ಯಮಗಳು. ಮೂರು, ಪ್ರವಾಸೋದ್ಯಮದಿಂದ ಆದ ಸಾಮಾಜಿಕ ಹಾಗೂ ಆರ್ಥಿಕ ಪರಿವರ್ತನೆ. ಈ ಮಾಹಿತಿಗಳನ್ನು ಹಂಪಿಯಲ್ಲಿನ ಪ್ರವಾಸೋದ್ಯಮವನ್ನು ಅಧ್ಯಯನ ಮಾಡುವುದರಿಂದ ಸಂಗ್ರಹಿಸಲಾಗಿದೆ. ವಿದೇಶಿಯರ ಆರ್ಥಿಕ ಮತ್ತು ಸಾಮಾಜಿಕ ಹಿನ್ನೆಲೆಯನ್ನು ಕಂಡುಕೊಳ್ಳಲು ಪ್ರಶ್ನಾವಳಿ ಮತ್ತು ಸಂದರ್ಶನ ವಿಧಾನವನ್ನು ಬಳಸಿಕೊಳ್ಳಲಾಗಿದೆ. ಪ್ರವಾಸಿಗರು ಅಧ್ಯಯನ ಕ್ಷೇತ್ರವಾದ ಹಂಪೆಗೆ ಬರುವುದು ಉಳಿಯುವುದು ಮತ್ತು ಹೊರಡುವುದರಲ್ಲಿ ನಿರ್ಧಿಷ್ಟತೆ ಇಲ್ಲ. ಪ್ರತಿ ವರ್ಷ ಬರುವ ವಿದೇಶಿ ಪ್ರವಾಸಿಗರ ಸಂಖ್ಯೆಯೂ ಖಚಿತವಾಗಿಲ್ಲ. ಆದುದರಿಂದ ಈ ಅಧ್ಯಯನದಲ್ಲಿ ವಿದೇಶಿ ಪ್ರವಾಸಿಗರನ್ನು ಸಂದರ್ಶನ ಮಾಡುವ ಮಾದರಿ ಆಯ್ಕೆ ಮಾಡಲು ಅನುಕೂಲಾತ್ಮಕ ಮಾದರಿ ವಿಧಾನವನ್ನು ಅಳವಡಿಸಿಕೊಳ್ಳಲಾಗಿದೆ. ಪ್ರವಾಸಿಗರಲ್ಲಿ 23 ರಾಷ್ಟ್ರಗಳಿಂದ

ಬಂದು ಹೋಗಿರುವ 162ಜನ ಪ್ರವಾಸಿಗರನ್ನು ಸಂದರ್ಶನ ಮತ್ತು ಪ್ರಶ್ನಾವಳಿ ಮೂಲಕ ಅವರ ದೇಶ, ಭಾಷೆ, ಲಿಂಗ, ವಯಸ್ಸು, ವೃತ್ತಿ ಮತ್ತು ವೈವಾಹಿಕ ಜೀವನ ಇತ್ಯಾದಿ ವಿವರಗಳನ್ನು ಪಡೆದುಕೊಳ್ಳಲಾಗಿದೆ. ಪ್ರವಾಸಿಗರ ಅಭಿರುಚಿ, ಬೇಡಿಕೆಗಳನ್ನು ಈಡೇರಿಸುವ ಸೇವಾ ಸೌಲಭ್ಯಗಳನ್ನು ಪೂರೈಸುವ ಸ್ಥಳೀಯ ಅನೌಪಚಾರಿಕ ವ್ಯವಸ್ಥೆ, ದರಗಳು, ಆಹಾರದ ರುಚಿ, ಸಾರಿಗೆ ವ್ಯವಸ್ಥೆ, ಸಂಪರ್ಕ ವ್ಯವಸ್ಥೆ, ಭಾಷೆಯ ತೊಡುಕು ಮುಂತಾದವುಗಳ ಬಗ್ಗೆ ಪ್ರವಾಸಿಗರಿಂದ ಮಾಹಿತಿಯನ್ನು ಪಡೆಯಲಾಗಿದೆ.

ಪ್ರವಾಸೋದ್ಯಮ ಚಟುವಟಿಕೆಗಳಲ್ಲಿ ನೇರವಾಗಿ ಹಾಗೂ ಪರೋಕ್ಷವಾಗಿ ತೊಡಗಿಸಿಕೊಂಡವರ ಹಿಂದಿನ ಮತ್ತು ಈಗಿನ ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿಗತಿಗಳಿಗೆ ಸಂಬಂಧಿಸಿದ ಮಾಹಿತಿ ಸಂಗ್ರಹಿಸಲಾಗಿದೆ. ಸಾಮಾಜಿಕ ಪರಿವರ್ತನೆಯನ್ನು ಅಳೆಯಲು ಏಳು ಸೂಚ್ಯಂಕಗಳನ್ನು ಬಳಸಲಾಗಿದೆ. ಇವುಗಳು ವಿಭಕ್ತ ಮತ್ತು ಅವಿಭಕ್ತ ಕುಟುಂಬಗಳ ಸಂಖ್ಯೆ, ಶಿಕ್ಷಣ, ಆರೋಗ್ಯ, ಮಹಿಳೆಯರ ಸ್ಥಾನಮಾನಗಳಲ್ಲಿನ ಬದಲಾವಣೆ, ಅಂತರ್ ಜಾತಿ ವಿವಾಹಗಳು ಮತ್ತು ಜಾತಿ ಏಣಿಶ್ರೇಣಿಗಳಲ್ಲಿನ ಪರಿವರ್ತನೆ, ಆರ್ಥಿಕ ಪರಿವರ್ತನೆಯನ್ನು ಗುರುತಿಸಲು ಬಳಸಿದ ಸೂಚ್ಯಂಕಗಳು ಇಂತಿವೆ. ಮೂಲಭೂತ ಸೌಲಭ್ಯಗಳ ಪೂರೈಕೆ, ವೃತ್ತಿ ರಚನೆಯಲ್ಲಿ ಬದಲಾವಣೆ, ತಲಾ ವರಮಾನ, ಕುಟುಂಬದ ಸಂಪನ್ಮೂಲ ಸ್ಥಿತಿ, ಭೂ ಹಿಡುವಳಿಯ ಪ್ರಮಾಣ, ಗ್ರಾಮ ಪಂಚಾಯತಿ ಆದಾಯ ಹಾಗು ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳ ಸಂಖ್ಯೆ. ಈ ಸೂಚ್ಯಂಕಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಹಂಪೆಯಲ್ಲಿರುವ ಎಲ್ಲ ಕುಟುಂಬಗಳನ್ನು ಸಂದರ್ಶನ ಮಾಡಿ ಸಂಗ್ರಹಿಸಲಾಗಿದೆ. ಜತೆಗೆ ಹಲವು ತಿಂಗಳುಗಳ ಕಾಲ ಗ್ರಾಮದಲ್ಲಿ ತಂಗುವ ಮೂಲಕ, ಜನರ ದೈನಂದಿಕ ಚಟುವಟಿಕೆಗಳಲ್ಲಿ ಭಾಗಿಯಾಗುವುದರೊಂದಿಗೆ ಗ್ರಾಮದ ಜನಜೀವನ, ಸಾಮಾಜಿಕ ಬದುಕು, ಸಾಂಸ್ಕೃತಿಕ ಬದುಕು, ಕಸಬು, ಜಾತಿ, ಇತ್ಯಾದಿಗಳ ನಿಖರವಾದ ಮಾಹಿತಿಯನ್ನು ಸಂಗ್ರಹಿಸಲು ಪ್ರಯತ್ನಿಸಲಾಗಿದೆ. ವೈಯಕ್ತಿಕ ಆದಾಯ ಮತ್ತು ಸಂಪನ್ಮೂಲಗಳ ಬಗ್ಗೆ ಸಂದರ್ಶಿಗಳು ಅಂಕಿ-ಅಂಶಗಳನ್ನು ನಿಖರವಾಗಿ ಹೇಳದಿರುವ ಸಂದರ್ಭದಲ್ಲಿ ಅವರ ಸ್ನೇಹಿತರು ಮತ್ತು ಪರಿಚಯಸ್ಥರಿಂದ ಪಡೆದು ಮರು ಪರಿಶೀಲನೆಗೆ ಒಳಪಡಿಸಿಕೊಳ್ಳಲಾಗಿದೆ.

ಅಧ್ಯಯನದಲ್ಲಿ ಉಪಯೋಗಿಸಲಾದ ಆನುಷಂಗಿಕ ಮೂಲಗಳು ಇಂತಿವೆ. ಹಂಪೆಯ ಪೋಲಿಸ್ ಠಾಣೆಯ ದಾಖಲೆಗಳು, ಹಂಪೆ ವಿರೂಪಾಕ್ಷೇಶ್ವರ ದೇವಸ್ಥಾನದ ಮುಜರಾಯಿ ಇಲಾಖೆಯವರ ದಾಖಲೆಗಳು, ಗ್ರಾಮಪಂಚಾಯತಿ ಕಚೇರಿ ಪುಸ್ತಕಗಳು, ಅಂಚೆ ಕಚೇರಿ, ರಾಷ್ಟ್ರೀಕೃತ ಬ್ಯಾಂಕ್, ಪ್ರವಾಸೋದ್ಯಮ ಇಲಾಖೆ - ಹೊಸಪೇಟೆ, ಪುರಾತತ್ವ ಇಲಾಖೆ - ಕಮಲಾಪುರ, ಮತ್ತು ಪ್ರವಾಸೋದ್ಯಮ ಇಲಾಖೆ, ಕರ್ನಾಟಕ ಸರ್ಕಾರ - ಬೆಂಗಳೂರು. ಇವುಗಳ ವರದಿ ಮತ್ತು ದಾಖಲೆಗಳು. ಈ ಮೂಲಗಳಿಂದ ಹಂಪೆಗೆ ಬರುವ ಪ್ರವಾಸಿಗರ ಸಂಖ್ಯೆ, ಅವರ ರಾಷ್ಟ್ರೀಯ ಹಿನ್ನೆಲೆ,

ಅವರಿಂದ ಸಂಗ್ರಹವಾದ ಪ್ರವೇಶ ಮೊತ್ತ, ಹಣದ ವಿನಿಮಯ ಇತ್ಯಾದಿ ಮಾಹಿತಿಗಳನ್ನು ಸಂಗ್ರಹಿಸಲಾಗಿದೆ. ಒಟ್ಟು ಕುಟುಂಬಗಳ ಸಂಖ್ಯೆ, ಸಾಕ್ಷರತೆ, ಕೆಲಸಗಾರರ ಸಂಖ್ಯೆ, ಇತ್ಯಾದಿ ಅಂಕಿ ಅಂಶಗಳನ್ನು ಸೆನ್ಸಸ್ ದಾಖಲೆಗಳಿಂದ ಪಡೆಯಲಾಗಿದೆ. ಪುಸ್ತಕಗಳು, ಸಂಶೋಧನಾ ಪ್ರಬಂಧಗಳು, ನಿಯತಕಾಲಿಕೆಗಳು ಈಗಾಗಲೇ ಪ್ರವಾಸೋದ್ಯಮದ ಬಗ್ಗೆ ನಡೆದ ಅಧ್ಯಯನಗಳ ಪರಿಚಯವನ್ನು ಮಾಡಿಸಿವೆ. ಈ ಅಂಕಿ-ಅಂಶಗಳನ್ನು ಬಳಸಿಕೊಂಡು ಪ್ರವಾಸೋದ್ಯಮದಿಂದ ಹಂಪಿ ಗ್ರಾಮದಲ್ಲಿ ಆದ ಸಾಮಾಜಿಕ ಹಾಗೂ ಆರ್ಥಿಕ ಪರಿವರ್ತನೆಗಳನ್ನು ವಿಶ್ಲೇಷಿಸಲಾಗಿದೆ. ಪ್ರವಾಸೋದ್ಯಮ ಇರುವ ಹಂಪೆಯನ್ನು ಪ್ರವಾಸೋದ್ಯಮ ಇಲ್ಲದ ಹಳ್ಳಿಗೆ ಹೋಲಿಸಿ ಸಾಮಾಜಿಕ ಹಾಗೂ ಆರ್ಥಿಕ ಪರಿವರ್ತನೆ ಕುರಿತು ತೀರ್ಮಾನಕ್ಕೆ ಬರುವುದು ಸಮಾಜ ವಿಜ್ಞಾನ ಅಧ್ಯಯನ ವಿಧಾನದ ಅವಿಭಾಜ್ಯ ಅಂಗ. ಇಲ್ಲಿ ಆ ರೀತಿ ಮಾಡಿಲ್ಲ. ಆ ಕೊರತೆಯನ್ನು ತುಂಬಲು ಮೇಲೆ ಸೂಚಿಸಿದ ಸಾಮಾಜಿಕ ಹಾಗೂ ಆರ್ಥಿಕ ಸೂಚ್ಯಂಕಗಳಿಗೆ ಸಂಬಂಧಿಸಿದ ಅಂಕಿ ಅಂಶಗಳನ್ನು ಹೊಸಪೇಟೆ, ಬಳ್ಳಾರಿ ಮತ್ತು ಕರ್ನಾಟಕದ ಅಂಕಿ ಅಂಶಗಳಿಗೆ ಹೋಲಿಸಿ ಸಾಮಾಜಿಕ ಹಾಗೂ ಆರ್ಥಿಕ ಪರಿವರ್ತನೆ ಬಗ್ಗೆ ತೀರ್ಮಾನಕ್ಕೆ ಬರಲಾಗಿದೆ.

ಅಧ್ಯಯನದ ಮಹತ್ವ

ಸರ್ಕಾರದ ಪ್ರವಾಸೋದ್ಯಮ ನೀತಿಗಳು ಬಂಡವಾಳ ಪ್ರಧಾನ ಪ್ರವಾಸೋದ್ಯಮದ ಆರ್ಥಿಕ ಚಟುವಟಿಕೆಗಳಿಗೆ ಒತ್ತನ್ನು ನೀಡುತ್ತಿವೆ. ಬೃಹತ್ ಬಂಡವಾಳವನ್ನು ತೊಡಗಿಸಿ, ಸ್ಟಾರ್ ಹೋಟೆಲ್, ಐಷಾರಾಮಿ ರೆಸ್ಟೋರೆಂಟ್, ರೆಸಾರ್ಟ್‌ಗಳನ್ನು, ನಿರ್ಮಿಸಿ, ಪ್ರವಾಸಿಗರಿಗೆ ಮೂಲ ಸೌಲಭ್ಯಗಳನ್ನು ಒದಗಿಸುವುದು ಇದರ ಮೂಲ ಉದ್ದೇಶ. ಪ್ರವಾಸಿಗರು ಶ್ರೀಮಂತ ವರ್ಗದವರೆಂದು ನಂಬಲಾಗಿದೆ. ಹೆಚ್ಚಿನ ಬಂಡವಾಳ ಉಳ್ಳ ವ್ಯಕ್ತಿ ಮತ್ತು ಸಂಸ್ಥೆಗಳು ಮಾತ್ರ ಪ್ರವಾಸೋದ್ಯಮದ ಪೂರಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಈ ಮೂಲಕ ಪ್ರವಾಸೋದ್ಯಮವು ಒಂದು ಔಪಚಾರಿಕ ವ್ಯವಸ್ಥೆ ಅಥವಾ ಸಂಘಟಿತ ವಲಯವೆಂದು ರೂಪಿಸಲಾಗಿದೆ. ಆದರೆ ಪ್ರವಾಸೋದ್ಯಮದ ಮೂಲ ಆಶಯವೆಂದರೆ ಕಡಿಮೆ ಬಂಡವಾಳ ಹೂಡಿಕೆ, ತ್ವರಿತ ಉದ್ಯೋಗ ಸೃಷ್ಟಿ ಇತ್ಯಾದಿ. ಅಂದರೆ ಪ್ರವಾಸೋದ್ಯಮ ಚಟುವಟಿಕೆಗಳಲ್ಲಿ ಕಡಿಮೆ ಬಂಡವಾಳದೊಂದಿಗೆ ಉದ್ಯೋಗಗಳಲ್ಲಿ ನಿರತರಾಗುವ ಮೂಲಕ ಅವರ ಆರ್ಥಿಕ, ಸಾಮಾಜಿಕ ಸ್ಥಿತಿಗತಿಗಳನ್ನು ಸುಧಾರಿಸಿಕೊಳ್ಳುವುದರೊಂದಿಗೆ ಅಭಿವೃದ್ಧಿ ಹೊಂದುವ ಅವಕಾಶ ಪಡೆಯಬಹುದೆಂಬುದು. ಈ ಅವಕಾಶಗಳು ಸಂಘಟಿತ ವಲಯದ ಪ್ರವಾಸೋದ್ಯಮದಿಂದ ಮಾತ್ರ ಸಾಧ್ಯ ಎಂದು ತಿಳಿಯುವುದು ಸರಿಯಲ್ಲ.

ಸಂಘಟಿತವಲಯಕ್ಕೆ ಪರ್ಯಾಯವಾಗಿ ಮತ್ತೊಂದು ವಲಯ ಅಸ್ತಿತ್ವದಲ್ಲಿದೆ. ಇದನ್ನು ಅನೌಪಚಾರಿಕ ಅಥವಾ ಅಸಂಘಟಿತ ವಲಯವೆಂದು ಕರೆಯಲಾಗುತ್ತಿದೆ. ಇಲ್ಲಿ ಸರ್ಕಾರ ರೂಪಿತ

[illegible]

ಪ್ರವಾಸೋದ್ಯಮ ನೀತಿಗಳು ಅನ್ವಯವಾಗುವುದಿಲ್ಲ. ಇಲ್ಲಿ ಹೆಚ್ಚಿನ ಬಂಡವಾಳವನ್ನು ತೊಡಗಿಸಿ ರ್ಮಿಸಿದ ಐಷಾರಾಮಿ ಅತಿಥಿಗೃಹ, ರೆಸ್ಟೋರೆಂಟ್, ಹೋಟೆಲ್ ಇತ್ಯಾದಿಗಳು ಇರುವುದಿಲ್ಲ. ಬದಲಿಗೆ ಸಾಮಾನ್ಯ ದರ್ಜೆಯ ಸೌಲಭ್ಯಗಳು, ವಾಸಿಸುವ ಮನೆಯ ಒಂದು ಭಾಗದಲ್ಲಿ ಅತಿಥಿಗೃಹ, ರೆಸ್ಟೋರೆಂಟ್ ಮತ್ತು ಹೋಟೆಲ್ ಸ್ಥಾಪಿತಗೊಂಡಿವೆ. ಈ ಸಾಮಾನ್ಯ ದರ್ಜೆಯ ಅತಿಥಿಗೃಹ, ರೆಸ್ಟೋರೆಂಟ್ ಮತ್ತು ಹೋಟೆಲ್‌ಗಳ ಗ್ರಾಹಕರೆಂದರೆ ಮಧ್ಯಮ ಮತ್ತು ಶ್ರಮಿಕ ವರ್ಗದ ಪ್ರವಾಸಿಗರು. ಅಂದರೆ ಪ್ರವಾಸಿಗರಲ್ಲಿ ಶ್ರೀಮಂತ ವರ್ಗದವರಲ್ಲದೆ, ಮಧ್ಯಮ ಮತ್ತು ಶ್ರಮಿಕ ವರ್ಗದವರು ಇರುವುದು ಕಂಡುಬರುತ್ತದೆ.

ಅಸಂಘಟಿತ ವಲಯವು ಔಪಚಾರಿಕ ಅಥವಾ ಸಂಘಟಿತ ವಲಯಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಗ್ರಾಮದ ಜನಸಾಮಾನ್ಯರಿಗೆ ಮತ್ತು ಪ್ರವಾಸಿಗರಿಗೆ ಉಪಯೋಗವಾಗುವುದರಿಂದ ಅಸಂಘಟಿತ ವಲಯವನ್ನು ಸಂಘಟಿತ ವಲಯದಂತೆ ಸರ್ಕಾರ ಪ್ರೋತ್ಸಾಹಿಸಬೇಕಾಗಿರುವ ಅವಶ್ಯಕತೆ ಇದೆ. ಪ್ರವಾಸಿ ತಾಣವಾದ ಹಂಪೆಯ ಅಸಂಘಟಿತ ವಲಯವನ್ನು ಸಂಘಟಿತ ವಲವನ್ನಾಗಿ ಪರಿವರ್ತಿಸುವ ಪ್ರಯತ್ನದ ಪ್ರಕ್ರಿಯೆಗಳು ಸರ್ಕಾರದ ತೆರೆಮರೆಯಲ್ಲಿ ಇತ್ತೀಚೆಗೆ ನಡೆಯುತ್ತಿವೆ. ಅಸಂಘಟಿತ ವಲಯವು ಅಭಿವೃದ್ಧಿಯಲ್ಲಿ ಸಹಕಾರಿಯಾದರೆ ಅದನ್ನು ಮುಂದುವರಿಸಿಕೊಂಡು ಹೋಗುವುದು ಅನಿವಾರ್ಯವಾಗಬಹುದೆಂಬ ಅಂಶದ ಮೇಲೆ ಅಧ್ಯಯನ ಬೆಳಕನ್ನು ಚೆಲ್ಲುತ್ತದೆ. ಪ್ರಸ್ತುತ ಅಧ್ಯಯನವು ಈ ಎಲ್ಲಾ ಕಾರಣಗಳಿಂದ ಮಹತ್ವವನ್ನು ಪಡೆದುಕೊಂಡಿದೆ.

ಅಧ್ಯಯನದ ವಿನ್ಯಾಸ

ಈ ಮಹಾ ಪ್ರಬಂಧವು ಪ್ರಸ್ತಾವನೆ ಮತ್ತು ಸಮಾರೋಪಗಳನ್ನು ಹೊರತುಪಡಿಸಿ ಒಟ್ಟು ಆರು ಅಧ್ಯಾಯಗಳನ್ನು ಒಳಗೊಂಡಿದೆ. ಅಧ್ಯಾಯಗಳನ್ನು ಕೆಳಗಿನಂತೆ ರಚಿಸಲಾಗಿದೆ. ಅಧ್ಯಯನದ ಉದ್ದೇಶ, ವಿಧಾನ, ಮಹತ್ವ ಮತ್ತು ಅಧ್ಯಾಯಗಳ ವಿನ್ಯಾಸಗಳನ್ನು ಪ್ರಸ್ತಾವನೆ ಭಾಗದಲ್ಲಿ ಕೊಡಲಾಗಿದೆ.

ಅಧ್ಯಾಯ ಒಂದು - ಹಂಪೆಯ ಚಾರಿತ್ರಿಕ ಹಿನ್ನೆಲೆ, ಗ್ರಾಮದಲ್ಲಿ ಇರುವ ವಿವಿಧ ಜಾತಿಗಳು, ಕುಟುಂಬಗಳ ಆದಾಯ, ಉದ್ಯೋಗ, ಶಿಕ್ಷಣ ಇತ್ಯಾದಿಗಳ ವಿವರ ಈ ಅಧ್ಯಾಯದಲ್ಲಿ ಇದೆ. ಪ್ರವಾಸೋದ್ಯಮ ಆರಂಭವಾಗುವ ಹಿಂದಿನ ಹಂಪೆಯ ಆರ್ಥಿಕ ಹಾಗು ಸಾಮಾಜಿಕ ಬದುಕಿನ ವಿವರಗಳನ್ನು ಈ ಅಧ್ಯಾಯದಲ್ಲಿ ಕಾಣಬಹುದು.

ಅಧ್ಯಾಯ ಎರಡು - ಪ್ರವಾಸೋದ್ಯಮದ ಕಿರು ಚರಿತ್ರೆ, ಪ್ರವಾಸ ಪದದ ಅರ್ಥ, ವ್ಯಾಖ್ಯಾನ ಇತ್ಯಾದಿಗಳನ್ನು ಈ ಅಧ್ಯಾಯದಲ್ಲಿ ಸಂಕ್ಷಿಪ್ತವಾಗಿ ವಿವರಿಸಲಾಗಿದೆ. ಹಂಪೆಗೆ ಬರುವ ವಿದೇಶಿ

ಪ್ರವಾಸಿಗರ ಆರ್ಥಿಕ, ಸಾಮಾಜಿಕ ಹಿನ್ನೆಲೆ ಹಾಗೂ ಇವರ ನಿರೀಕ್ಷೆಗಳು ಇತ್ಯಾದಿಗಳಿಗೆ ಸಂಬಂಧಿಸಿದ ಮಾಹಿತಿಗಳನ್ನು ಕೊಡಲಾಗಿದೆ. ಇದೆ ಅಧ್ಯಾಯದಲ್ಲಿ ದೇಶಿ ಪ್ರವಾಸಿಗರ ಬಗ್ಗೆಯೂ ಕೆಲವು ವಿವರಗಳು ಇವೆ.

ಅಧ್ಯಾಯ ಮೂರು - ವಿದೇಶಿ ಪ್ರವಾಸಿಗರ ಬೇಡಿಕೆಗಳು ಮತ್ತು ಅವುಗಳನ್ನು ಪೂರೈಸಲು ಸ್ಥಳೀಯರು ಮಾಡುವ ಪ್ರಯತ್ನಗಳನ್ನು ಈ ಅಧ್ಯಾಯದಲ್ಲಿ ವಿವರಿಸಲಾಗಿದೆ. ಪ್ರವಾಸಿಗರಿಗೆ ಸರಕು ಮತ್ತು ಸೇವೆಗಳನ್ನು ಒದಗಿಸಲು ಆರಂಭವಾದ ವಿವಿಧ ಉದ್ಯಮಗಳ ಪಟ್ಟಿ ಇಲ್ಲಿದೆ. ಮುಖ್ಯವಾಗಿ ಸ್ಥಳೀಯರು ತೊಡಗಿಸಿಕೊಂಡಿರುವ ಅತಿಥಿ ಗೃಹ, ರೆಸ್ಟೋರೆಂಟ್, ಹೋಟೆಲ್, ಸಾರಿಗೆ ಮತ್ತು ಇತರ ಸೌಲಭ್ಯಗಳ ಸಂಪೂರ್ಣ ವಿವರಣೆಯನ್ನು ಈ ಅಧ್ಯಯನದಲ್ಲಿ ಕೊಡಲಾಗಿದೆ.

ಅಧ್ಯಾಯ ನಾಲ್ಕು - ಪ್ರವಾಸಿಗರ ನಿರೀಕ್ಷೆ ಮತ್ತು ಸ್ಥಳೀಯರು ಒದಗಿಸುವ ಸೌಲಭ್ಯಗಳ ನಡುವಿನ ಅಂತರವನ್ನು ಈ ಅಧ್ಯಾಯದಲ್ಲಿ ವಿಶ್ಲೇಷಿಲಾಗಿದೆ. ಹಂಪೆಯ ಸ್ಥಳೀಯರು ಪೂರೈಸುವ ವಸತಿ, ಆಹಾರ, ಸಾರಿಗೆ, ಸಂಪರ್ಕ, ಇತ್ಯಾದಿಗಳ ಬಗ್ಗೆ ವಿದೇಶಿ ಪ್ರವಾಸಿಗರ ಅಭಿಪ್ರಾಯಗಳನ್ನು ಸಂಗ್ರಹಿಸಲಾಗಿದೆ.

ಅಧ್ಯಾಯ ಐದು - ಗ್ರಾಮದ ಆರ್ಥಿಕತೆಯ ಮೇಲೆ ಪ್ರವಾಸೋದ್ಯಮದಿಂದ ಆಗುವ ಪರಿಣಾಮಗಳನ್ನು ಈ ಅಧ್ಯಾಯದಲ್ಲಿ ವಿಶ್ಲೇಷಿಸಲಾಗಿದೆ. ಉದ್ಯೋಗ, ತಲಾ ವರಮಾನ, ಸಂಪನ್ಮೂಲ ಸ್ಥಿತಿ, ಭೂ ಹಿಡುವಳಿ, ಬಡತನ ರೇಖೆಗಿಂತ ಕೆಳಗಿರುವವರ ಸಂಖ್ಯೆ ಮತ್ತು ಗ್ರಾಮ ಪಂಚಾಯತಿ ಆದಾಯ ಇತ್ಯಾದಿ ಸೂಚ್ಯಂಕಗಳ ಮೂಲಕ ಆರ್ಥಿಕ ಪರಿಣಾಮವನ್ನು ಅಳೆಯಲಾಗಿದೆ.

ಅಧ್ಯಾಯ ಆರು - ಪ್ರವಾಸೋದ್ಯಮದಿಂದ ಆದ ಸಾಮಾಜಿಕ ಪರಿವರ್ತನೆಯನ್ನು ಈ ಅಧ್ಯಾಯದಲ್ಲಿ ವಿವರಿಸಲಾಗಿದೆ. ಶಿಕ್ಷಣ, ಆರೋಗ್ಯ, ಅಂತರ್‌ಜಾತಿಯ ವಿವಾಹಗಳು, ಮಹಿಳೆಯರ ಸ್ಥಾನಮಾನ, ಸಮಾಜದ ಏಣಿಶ್ರೇಣಿ ಇತ್ಯಾದಿ ಸೂಚ್ಯಂಕಗಳನ್ನು ಬಳಸಿಕೊಂಡು ಸಾಮಾಜಿಕ ಪರಿವರ್ತನೆಯನ್ನು ವಿಶ್ಲೇಷಿಸಲಾಗಿದೆ.

ಸಮಾರೋಪ - ಅಧ್ಯಯನದ ಸಾರಾಂಶ, ಫಲಿತಗಳನ್ನು ಇಲ್ಲಿ ನೀಡಲಾಗಿದೆ. ಜೊತೆಗೆ ಅಸಂಘಟಿತ ಅಥವಾ ಸ್ಥಳೀಯ ಸಮುದಾಯಗಳನ್ನು ಬಳಸಿಕೊಂಡು ನಡೆಸುವ ಪ್ರವಾಸೋದ್ಯಮದ ಅಭಿವೃದ್ಧಿಗೆ ಪೂರಕವಾಗುವ ಕೆಲವು ಸಲಹೆಗಳನ್ನು ಕೂಡ ಇಲ್ಲಿ ನೀಡಲಾಗಿದೆ.

ಅಡಿಟಿಪ್ಪಣಿಗಳು

1. ಜೀಮಲ್ ಉನ್ನಿ, ''ಜಂಡರ್ ಆ್ಯಂಡ್ ಇನ್‌ಫಾರಮಾಲೀಟಿ ಇನ್ ಲೇಬರ್ ಮಾರ್ಕೆಟ್ ಇನ್ ಸೌತ್ ಏಷಿಯಾ'' *ಎಕನಾಮಿಕ್ ಆ್ಯಂಡ್ ಪೊಲಿಟಿಕಲ್ ವೀಕ್ಲಿ*, ಸಂಚಿಕೆ 36, ಸಂಖ್ಯೆ 26, ಜೂನ್ 30, 2001, ಪುಟ. 2361
2. ರೇಮಂಡ್ ನರೋನ್ಹಾ, *ಸ್ಯೂಶಿಯಲ್ ಆ್ಯಂಡ್ ಕಲ್ಚರಲ್ ಡೈಮೆನಶನ್ ಆಫ್ ಟ್ಯೂರಿಸಂ* (ವರ್ಕಿಂಗ್ ಪೇಪರ್ ನಂಬರ್ 326), ವಾಷಿಂಗ್‌ಟನ್ ಡಿ.ಸಿ.: ವರ್ಲ್ಡ್ ಬ್ಯಾಂಕ್ 1979, ಪುಟ. 9
3. ಧರ್ಮರಾಜನ್ ಎಸ್., ''ಅಭಿವೃದ್ಧಿಯ ಸಾಧನವಾಗಿ ಪ್ರವಾಸೋದ್ಯಮ'', *ಯೋಜನೆ*, ಸಂಚಿಕೆ 1, ಸಂಪುಟ 5, ಆಗಸ್ಟ್ 1999, ಪುಟ. 18
4. ಹರಜಿತ್ ಆಹ್ಲುವಾಲಿಯಾ, ''ಕಾದಿರುವ ವಿಪುಲ ಅವಕಾಶಗಳು,'' *ಯೋಜನೆ*, ಸಂಚಿಕೆ 1, ಸಂಪುಟ 5, ಆಗಸ್ಟ್ 1999, ಪುಟ. 26
5. ರವೀಂದ್ರ ಸೇಠ್, ''ಪ್ರವಾಸೋದ್ಯಮ-ಸಮಸ್ಯೆಗಳು ಮತ್ತು ಭವಿತವ್ಯ'', *ಯೋಜನೆ*, ಸಂಚಿಕೆ 1, ಸಂಪುಟ 5, ಆಗಸ್ಟ್ 1999, ಪುಟ. 21
6. ಬೇಜ್ ಬರುವಾ ಎಂ.ಪಿ., 'ಪ್ರವಾಸೋದ್ಯಮ- ಇಂದು ಮತ್ತು ನಾಳೆ'', *ಯೋಜನೆ*, ಸಂಚಿಕೆ 1, ಸಂಪುಟ 5, ಆಗಸ್ಟ್ 1999, ಪುಟ. 12
7. ನಿರ್ದೇಶಕರು, *ರಿವೈಸಡ್ ಮಾಸ್ಟರ್ ಪ್ಲಾನ್ ಫಾರ್ ಡೆವಲಪ್‌ಮೆಂಟ್ ಆ್ಯಂಡ್ ಟ್ಯೂರಿಸಂ ಇನ್ ಕರ್ನಾಟಕ(1997-2002)*, ಬೆಂಗಳೂರು: ಡಿಪಾರ್ಟ್‌ಮೆಂಟ್ ಆಫ್ ಟ್ಯೂರಿಸಂ, 1997
8. ಗವರ್ನ್‌ಮೆಂಟ್ ಆಫ್ ಕರ್ನಾಟಕ, *ಗೈಡ್‌ಲೈನ್ಸ್ ಫಾರ್ ಇಂಪ್ಲಿಮೆಂಟೇಶನ್ ಆಫ್ ನ್ಯೂ ಟ್ಯೂರಿಸಂ ಪಾಲಿಸಿ ವಿಥ್ ಎಫೆಕ್ಟ್ ಫ್ರಮ್ 1.06.1997*, ಬೆಂಗಳೂರು: ಕರ್ನಾಟಕ ಟ್ಯೂರಿಸಂ, 1997

ಅಧ್ಯಾಯ 1

ಹಂಪೆ - ಒಂದು ಕಿರು ಪರಿಚಯ

ಹಂಪೆ ಒಂದು ಚಾರಿತ್ರಿಕ ಸ್ಥಳವಾಗಿ, ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾಗಿ ಬಹುಪರಿಚಿತ. ವಿಜಯನಗರ ಕಾಲದ ದೇವಸ್ಥಾನಗಳು, ಹಳೆಯ ಕಟ್ಟಡಗಳು, ಕೋಟೆಗಳ ಅವಶೇಷಗಳು, ಸ್ಮಾರಕಗಳು- ಇವೆಲ್ಲಾ ಹಳೆಯ ಹಂಪೆಯನ್ನು ಜೀವಂತವಾಗಿಟ್ಟಿವೆ. ಪ್ರವಾಸಿಗರಾಗಿ ಹಂಪೆಗೆ ಭೇಟಿ ನೀಡುವವರಿಗೆ ಈ ಪಳೆಯುಳಿಕೆಗಳು ಹಳೆಯ ಹಂಪೆಯ ಚಿತ್ರಣವನ್ನು ಜೀವಂತ ಕಟ್ಟಿಕೊಡುವಲ್ಲಿ ತಕ್ಕಮಟ್ಟಿಗೆ ಸಫಲವಾಗಿವೆ. ವಾಸ್ತವದಲ್ಲಿ ಹಂಪೆ ಇಂದು ತುಂಬಾ ಬದಲಾಗಿದೆ. ಅದೊಂದು ವಿಶ್ವ ಪ್ರಸಿದ್ಧ ಪ್ರವಾಸಿ ತಾಣವಾಗಿ ಪರಿವರ್ತಿತವಾಗಿದೆ. ವಿರೂಪಾಕ್ಷ ದೇವಸ್ಥಾನದ ಮುಂದಿರುವ ಬಜಾರ್ ರಸ್ತೆಯ ಎರಡೂ ಬದಿಯಲ್ಲಿ ಹೊಟೇಲು, ಅಂಗಡಿ-ಮುಂಗಟ್ಟು ಮತ್ತು ಇತರ ವ್ಯಾಪಾರ ವಹಿವಾಟುಗಳು ತುಂಬಿ ಹೋಗಿವೆ. ರಸ್ತೆಯ ಹಿಂಭಾಗದಲ್ಲಿರುವ ಮನೆಗಳು ಅತಿಥಿಗೃಹಗಳಾಗಿ ಪರಿವರ್ತಿತನೆಗೊಂಡಿವೆ. ಇವು ಸಾವಿರಾರು ವಿದೇಶಿ ಪ್ರವಾಸಿಗರ ಅಪೇಕ್ಷೆಯನ್ನು ತೃಪ್ತಿ ಪಡಿಸುತ್ತಿವೆ. ನೂರು ಎಕರೆಗಳಲ್ಲಿ ಹರಡಿಕೊಂಡಿದ್ದ ವಿಜಯನಗರದ ರಾಜಧಾನಿಯೊಳಗೆ ಇಂದು ಹಲವಾರು ಎಕರೆ ಬಾಳೆ ಮತ್ತು ಕಬ್ಬಿನ ತೋಟಗಳು ಬೆಳೆದು ನಿಂತಿವೆ. ಹೀಗೆ ಇಂದಿನ ಹಂಪೆ ತನ್ನ ಹಳೆಯ ನೆನಪುಗಳೊಂದಿಗೆ ಹೊಸತನ್ನು ರೂಢಿಸಿಕೊಳ್ಳುತ್ತಿದೆ. ಹಂಪೆಯ ಇಂದಿನ ಸ್ವರೂಪ ಮತ್ತು ಅಲ್ಲಿನ ಜನ- ಜೀವನದ ಬಗ್ಗೆ ಒಂದು ಕಿರು ಪರಿಚಯ ನೀಡುವುದು ಈ ಅಧ್ಯಾಯದ ಮುಖ್ಯ ಉದ್ದೇಶ. ಈ ಅಧ್ಯಾಯವನ್ನು ಎರಡು ಭಾಗಗಳಾಗಿ ವಿಂಗಡಿಸಿ ಕೊಂಡಿದ್ದೇನೆ. ಭಾಗ ಒಂದರಲ್ಲಿ ಹಂಪೆಯ ಸಂಕ್ಷಿಪ್ತ ಚಾರಿತ್ರಿಕ ವಿವರಣೆ ಇದೆ. ಎರಡನೆಯ ಭಾಗದಲ್ಲಿ ಹಂಪೆಯ ಇಂದಿನ ಚಿತ್ರಣವಿದೆ.

ಭಾಗ 1

ಕ್ರಿ.ಶ. 1336ರಲ್ಲಿ ಹಕ್ಕಬುಕ್ಕರಿಂದ ವಿಜಯನಗರ ಸಾಮ್ರಾಜ್ಯ ಸ್ಥಾಪನೆಗೊಂಡಿತು. ಈ ವಿಜಯನಗರದ ಸಾಮ್ರಾಜ್ಯವು ಸಂಗಮ, ಸಾಳುವ, ತುಳುವ ಮತ್ತು ಅರವಿಡು ಅರಸು ವಂಶಗಳ ಆಳ್ವಿಕೆಗೆ ಒಳಪಟ್ಟಿತ್ತು. ವಿಜಯನಗರವು ಪ್ರೌಢದೇವರಾಯ ಮತ್ತು ಕೃಷ್ಣದೇವರಾಯನ ಕಾಲದಲ್ಲಿ ಸಮೃದ್ಧಗೊಂಡು ಸಕಲ ಸಂಪತ್ತಿನೊಂದಿಗೆ ಅಭಿವೃದ್ಧಿ ಹೊಂದಿತ್ತೆಂದು ಅಂದು ವಿಜಯನಗರ ಸಾಮ್ರಾಜ್ಯಕ್ಕೆ ಭೇಟಿಕೊಟ್ಟು ವಿವಿಧ ದೇಶದ ಪ್ರವಾಸಿಗರು ಹೇಳಿದ್ದಾರೆ. ವಿಜಯನಗರಕ್ಕೆ ಭೇಟಿಕೊಟ್ಟ ಪ್ರವಾಸಿಗರಲ್ಲಿ ಡೊಮಿಂಗೋ ಪೇಸ್, ಕೊಲ ಕಾಂಟಿ, ನ್ಯೂನಿಜ್ ಮತ್ತು ಅಬ್ದುಲ್ ರಜಾಕ್ ಪ್ರಮುಖರು. ಅಬ್ದುಲ್ ರಜಾಕ್ ತನ್ನ ದಾಖಲೆಯಲ್ಲಿ, ವಿಜಯನಗರ ಸಾಮ್ರಾಜ್ಯ ಹೇಗಿದೆಯೆಂದರೆ ಕಣ್ಣು ಅಂತಹ ಊರನ್ನು ಕಂಡರಿಯದು, ಇಡೀ ಪ್ರಪಂಚದಲ್ಲಿ ಅದಕ್ಕೆ ಸರಿಸಮಾನವಾದುದು

ಎಲ್ಲಿಯಾದರೂ ಇದ್ದುದ್ದನ್ನು ಕಿವಿ ಕೇಳರಿಯದು ಎಂದು ನಮೂದಿಸಿದ್ದಾನೆ.[1] ಡೊಮಿಂಗೋ ಪೇಸ್ ತನ್ನ ದಿನಚರಿಯಲ್ಲಿ ವಿಜಯನಗರ ಸಾಮ್ರಾಜ್ಯದ ಬಗ್ಗೆ ವಿವರಿಸುತ್ತಾ ಈ ನಗರದ ಗಾತ್ರದ ಬಗ್ಗೆ ನಾನೇನೂ ಬರೆಯುವುದಿಲ್ಲ. ಏಕೆಂದರೆ ಯಾವ ಸ್ಥಳದಲ್ಲಿಯೂ ಅದು ಕಾಣಸಿಗದು. ಆದರೆ ನಾನೊಂದು ಬೆಟ್ಟ ಏರಿದೆ. ಅಲ್ಲಿಂದ ಬಹು ಭಾಗವನ್ನು ನೋಡಲು ಶಕ್ತವಾಯಿತು. ಅದನ್ನು ಎಲ್ಲಾ ನೋಡಲಾಗಲಿಲ್ಲ. ಏಕೆಂದರೆ ಅದು ಹಲವಾರು ಬೆಟ್ಟ ಸಾಲುಗಳ ಮಧ್ಯೆ ಇದೆ. ಅಲ್ಲಿಂದ ನಾನು ನೋಡಿದ್ದು ರೋಮ್‌ನಷ್ಟು ವಿಶಾಲವಾಗಿಯೂ ಮತ್ತು ಬಹಳ ಸುಂದರವಾಗಿಯೂ ಕಂಡಿತು ಎಂದಿದ್ದಾನೆ.[2] ಇಂತಹ ವಿಜಯನಗರ ರಾಜಧಾನಿಯೆ ಹಂಪೆ. ಪ್ರಸಿದ್ದ ಮತ್ತು ವೈಭವಯುತವಾದ, ವಿಶ್ವವಿಖ್ಯಾತ ಈ ಸಾಮ್ರಾಜ್ಯ ಸುಮಾರು 229 ವರ್ಷಗಳ ಕಾಲ ಕನ್ನಡದ ನೆಲದಲ್ಲಿ ವಿಜೃಂಭಿಸಿತು. ಈ ಸಾಮ್ರಾಜ್ಯ ಕ್ರಿ.ಶ. 1565ರಲ್ಲಿ ವಿಜಯನಗರದ ಅರಸನಾದ ಅಳಿಯ ರಾಮರಾಯನಿಗೂ ಬಹುಮ ಸುಲ್ತಾನರಿಗೂ ನಡೆದ ನಿರ್ಣಾಯಕ ತಾಳಿಕೋಟೆ ಯುದ್ಧದಲ್ಲಿ ಪತನಗೊಂಡಿತು, ಹಾಗೂ ಲೂಟಿಗೊಳಗಾಯಿತು. ತಿರುಮಲರಾಯನ ಕೈಗೊಂಬೆಯಂತಿದ್ದ ರಾಜ ಸದಾಶಿವರಾಯ ಪೆನಗೊಂಡಕ್ಕೆ ಹೋಗಿ ನೆಲೆಸಿದನು. ವಿಜಯನಗರದ ಅರಸರಿಗೆ ನಿಷ್ಠರಾಗಿದ್ದ ಸಾಮಂತರು ಕ್ರಮೇಣ ದೂರಸರಿದು ಸ್ವತಂತ್ರರಾಗಲಾರಂಭಿಸಿದರು. ಕ್ರಿ.ಶ. 1578-1588ರ ವರೆಗೆ ಭಾರತದಲ್ಲಿದ್ದ ಪ್ರವಾಸಿ ಸ್ಯಾಸತಿಯವರ ದಾಖಲೆಯಂತೆ ಪೋರ್ಚುಗೀಸರ ಹೆಚ್ಚಿನ ವ್ಯಾಪಾರ ವಹಿವಾಟು ವಿಜಯನಗರದ ಸಾಮ್ರಾಜ್ಯ ದೊಂದಿಗಿತ್ತು. ವಿಜಯನಗರದ ಪತನದಿಂದ ಪೋರ್ಚುಗೀಸರ ವ್ಯಾಪಾರಕ್ಕೆ ಬಹು ದೊಡ್ಡ ಪೆಟ್ಟಾಯಿತು.[3] ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿ ಭಾರತಕ್ಕೆ ಕಾಲಿಟ್ಟ ಕೆಲವೆ ವರ್ಷಗಳ ಪೂರ್ವದಲ್ಲಿ ಇನ್ನೊಬ್ಬ ಪ್ರವಾಸಿಗ ಫಿರಿಸ್ತಾನ್ ಹೇಳಿಕೆಯಂತೆ ವಿಜಯನಗರವನ್ನು ಎಷ್ಟೊಂದು ನಾಶಪಡಿಸಲಾಗಿತ್ತೆಂದರೆ ಅದು ಸಂಪೂರ್ಣ ಭಗ್ನಾವಸ್ಥೆಯಲ್ಲಿತ್ತು, ನಿರ್ಜನವಾಗಿತ್ತು. ನಾಡಿನ ಚಿಕ್ಕಪಾಳೆಯಗಾರರಲ್ಲಿ ಪ್ರತಿಯೊಬ್ಬನೂ ಸ್ವತಂತ್ರನಾಗಿದ್ದನು.[4]

ವಿಜಯನಗರ ಪತನವಾದ ನಂತರ 288 ವರ್ಷಗಳ ನಂತರ ಬ್ರಿಟಿಶ್ ವಸಹಾತು ಆಡಳಿತದಲ್ಲಿ ಮದ್ರಾಸ್ ಪ್ರಾಂತ್ಯದ ಮುಖ್ಯ ಇಂಜಿನೀಯರನ ಸಹಾಯಕ ಮತ್ತು ಛಾಯಾಚಿತ್ರಗಾರನೂ ಆದ ಅಲೆಕ್ಸಾಂಡರ್ ಗ್ರೀನ್‌ಲಾ 1856ರಲ್ಲಿ ಅಳಿದುಳಿದ ಹಂಪೆಗೆ ಭೇಟಿ ನೀಡಿದ ಸಂದರ್ಭದಲ್ಲಿ ತೆಗೆದ ಛಾಯಾಚಿತ್ರಗಳು ಹಂಪೆಯಲ್ಲಿನ ಕರ್ನಾಟಕ ಸರಕಾರ ಪುರಾತತ್ವ ನಿರ್ದೇಶನ ಇಲಾಖೆಯ ಮ್ಯೂಜಿಯಂನಲ್ಲಿ ಪ್ರದರ್ಶಿತಗೊಂಡಿವೆ.[5] 1856ರ ಈ ಛಾಯಾಚಿತ್ರಗಳನ್ನು ಪ್ರಸ್ತುತ ಹಂಪೆಯ ಗ್ರಾಮ ಮತ್ತು ಸ್ಮಾರಕಗಳಿಗೆ ಹೋಲಿಸಿ ಒಂದು ತೀರ್ಮಾನಕ್ಕೆ ಬರಲು ಸಾಧ್ಯವಾಗಲಾರದು. ಅಷ್ಟೊಂದು ಅಂತರ ಅಂದು ಮತ್ತು ಇಂದಿನ ಹಂಪೆಯ ನಡುವೆ ಇದೆ. ಗ್ರೀನ್‌ಲಾ ಅವರು ವೈಯಕ್ತಿಕ ಕಾಳಜಿ ವಹಿಸಿ ತೆಗೆದ ಛಾಯಾಚಿತ್ರಗಳು ಅಳಿದುಳಿದ ಸ್ಮಾರಕಗಳ ರಕ್ಷಣೆ ಮಾಡಲು ಸಹಕಾರಿಯಾಗಿವೆ. ಅದರ ಫಲವೆ ಇಂದು ಹಂಪೆಗೆ ಬರುವ ಪ್ರವಾಸಿಗರು ವಿಜಯನಗರದ ಕಲೆ ಮತ್ತು ಸಂಸ್ಕೃತಿಯನ್ನು

ಸ್ಮೃತಿ ಪಟಲದಲ್ಲಿ ಮೆಲುಕು ಹಾಕುವಂತಾಗಿದೆ. ಈಗಿನ ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆ (ಎ.ಎಸ್.ಐ.) ಅಸ್ತಿತ್ವಕ್ಕೆ ಬರುವ (1958) ಮುನ್ನ ಕೇಂದ್ರಿಯ ಲೋಕೋಪಯೋಗಿ ಇಲಾಖೆ (CPWD) ಐತಿಹಾಸಿಕ ಸ್ಮಾರಕಗಳ ಸಂರಕ್ಷಣೆಯ ಹೊಣೆಗಾರಿಕೆ ಹೊತ್ತಿತು.[6] ಕೇಂದ್ರ ಮತ್ತು ರಾಜ್ಯ ಪುರಾತತ್ವ ಇಲಾಖೆಗಳು ಅಸ್ತಿತ್ವಕ್ಕೆ ಬಂದಾಗಿನಿಂದ ವಿಜಯನಗರದ ಇತಿಹಾಸ ಮತ್ತು ಸಂಸ್ಕೃತಿಯನ್ನು ಎತ್ತಿಹಿಡಿದು ವಿಶ್ವಕ್ಕೆ ಸಾರಲು ಹಲವಾರು ಕಾರ್ಯಕ್ರಮ ಹಾಗೂ ಯೋಜನೆಗಳನ್ನು ಹಾಕಿಕೊಂಡು ಬಂದಿವೆ. ಪುರಾತತ್ವ ಇಲಾಖೆಗಳು 1975 ರಿಂದ ನಿರಂತರವಾಗಿ ಉತ್ಖನನ ಮತ್ತು ಸ್ಮಾರಕಗಳ ಜೀರ್ಣೋದ್ಧಾರ ಮತ್ತು ಸಂರಕ್ಷಣೆ ಕಾರ್ಯಗಳನ್ನು ಕೈಗೊಂಡಿವೆ. ಇದರೊಂದಿಗೆ ದೇಶಿ-ವಿದೇಶಿ ಪ್ರವಾಸಿಗರನ್ನು, ವಿದ್ವಾಂಸರನ್ನು ಆಕರ್ಷಿಸಲು ಸಮರ್ಥವಾಗಿವೆ. 1985ರಲ್ಲಿ ಹಂಪೆಯ ಸ್ಮಾರಕಗಳು ವಿಶ್ವಪರಂಪರೆ ಪಟ್ಟಿಯಲ್ಲಿ (World Heritage list) ಸ್ಥಾನ ಪಡೆದಿವೆ.[7] ಇದರಿಂದ ಅಂತಾರಾಷ್ಟ್ರೀಯ ಸಂಸ್ಥೆಯಾದ ಯುನೆಸ್ಕೋ (UNESCO) ಹಂಪೆಯ ನಿಸರ್ಗ ರಮಣೀಯತೆಯನ್ನು ಮತ್ತು ಭಗ್ನಗೊಂಡಿರುವ ಸ್ಮಾರಕಗಳನ್ನು ಯಥಾವತ್ತಾಗಿ ಇಡಲು ಪ್ರಯತ್ನಿಸುತ್ತಿದೆ. ಭಾರತೀಯ ಪುರಾತತ್ವ ಇಲಾಖೆ ಹಲವು ವರ್ಷಗಳಿಂದ ಸಾರ್ವಜನಿಕರಲ್ಲಿ ಸ್ಮಾರಕಗಳ ಮಹತ್ವ ಮತ್ತು ಸಂರಕ್ಷಣೆ ಕುರಿತು ತಿಳುವಳಿಕೆ ಮೂಡಿಸುವ ಪ್ರಯತ್ನ ಪ್ರತಿವರ್ಷ ಮಾಡುತ್ತಿದೆ. ಇದರೊಂದಿಗೆ ಸಂಸ್ಕೃತಿಯ ಪ್ರಚಾರಕಾರ್ಯದಲ್ಲಿ ತೊಡಗಿ ರಾಷ್ಟ್ರದ ಮತ್ತು ರಾಜ್ಯದ ವಿವಿಧ ಕಡೆಗಳಿಂದ ವಿದ್ವಾಂಸರನ್ನು, ಕಲಾಕಾರರನ್ನು ಆಹ್ವಾನಿಸಿ ನೃತ್ಯ, ರೂಪಕ, ಗೋಷ್ಠಿಗಳನ್ನು ಏರ್ಪಡಿಸುತ್ತ ಬಂದಿದೆ. ಇಲಾಖೆ ವಿಶ್ವಪರಂಪರೆ ಸಪ್ತಾಹವನ್ನು ಈ ಮೂಲಕ ಆಚರಿಸುತ್ತ ಬಂದಿದೆ. ಆದರೆ ಅದಿಂದು ವಿಶ್ವಪರಂಪರೆ ದಿನವಾಗಿ ಮಾರ್ಪಟ್ಟು ಒಂದು ದಿನದ ಮಟ್ಟಿಗೆ ಉಳಿದುಹೋಗಿದೆ.

ಕರ್ನಾಟಕ ಸರಕಾರದ ಪುರಾತತ್ವ ನಿರ್ದೇಶನಾಲಯ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ವಿಜಯನಗರದ ಅಭ್ಯುದಯ ಕಾಲದಲ್ಲಿ ವಿಜೃಂಭಣೆಯಾಗಿ ಜರಗುತ್ತಿದ್ದ ದಸರಾ ಉತ್ಸವವನ್ನು 1986ರಲ್ಲಿ ಆರಂಭಿಸಲಾಯಿತು. ಇದು ರಾಜ್ಯದ ಆಡಳಿತ ಚುಕ್ಕಾಣಿಯನ್ನು ಹಿಡಿದಿದ್ದ ಅಂದಿನ ಜನತಾದಳದ ರಾಮಕೃಷ್ಣ ಹೆಗ್ಡೆ ಸರಕಾರದಲ್ಲಿ ಕನ್ನಡ ಮತ್ತು ಸಂಸ್ಕೃತಿ ಸಚಿವರಾಗಿದ್ದ ಎಂ.ಪಿ. ಪ್ರಕಾಶ್‌ರವರ ಪ್ರಯತ್ನದಿಂದ ಸಾಧ್ಯವಾಯಿತು ಎಂದು ಹೇಳಬಹುದು. ಹಂಪೆ ಉತ್ಸವದಲ್ಲಿ ದೇಶಿ ವಿದೇಶಿ ಕಲಾವಿದರನ್ನು ಕರೆಸಲಾಗಿದೆ. ಈ ಮೂಲಕ ಸಂಸ್ಕೃತಿ, ಕಲೆ, ಸಾಹಿತ್ಯವನ್ನು ಪಸರಿಸುವ ಕಾರ್ಯ ಕೈಗೆತ್ತಿಕೊಳ್ಳಲಾಗಿದೆ. ವಿಜಯನಗರದ ಹಿಂದಿನ ಗತವೈಭವವನ್ನು ನೆನೆಪಿಸುವುದರೊಂದಿಗೆ ದೇಶ ವಿದೇಶಗಳಲ್ಲಿ ಹಂಪೆಯ ಪ್ರಸ್ತುತತೆ ಬಗ್ಗೆ ಗಮನ ಸೆಳೆಯಲಾಗಿದೆ. ಕೇಂದ್ರ ಮತ್ತು ರಾಜ್ಯ ಪ್ರವಾಸೋದ್ಯಮ ಇಲಾಖೆಗಳು 1970ರ ದಶಕದಿಂದ ಭಾರತದಲ್ಲಿನ ಸ್ಮಾರಕಗಳು, ಐತಿಹಾಸಿಕ ಸ್ಥಳಗಳ ಬಗ್ಗೆ ಮಾಹಿತಿ ಪ್ರಕಟಿಸಿವೆ. ಅವುಗಳ ಸಾಹಿತ್ಯವನ್ನು ಮಾರ್ಗದರ್ಶಿ, ಕೈಪಿಡಿಗಳಂಥ ಚಿಕ್ಕ ಪುಸ್ತಕಗಳ ರೂಪದಲ್ಲಿ ಅವು ಬಿಡುಗಡೆಗೊಂಡಿವೆ. ಪ್ರಸಾರ ಮಾಧ್ಯಮಗಳಲ್ಲಿ ಹಂಪೆ ಕುರಿತ

ಕಾರ್ಯಕ್ರಮಗಳು ಬಿತ್ತರಗೊಳ್ಳುತ್ತ ಬಂದಿವೆ. ಹಂಪೆಯ ಪ್ರವಾಸೋದ್ಯಮ ಅಭಿವೃದ್ಧಿಗಾಗಿ ಹಲವಾರು ಯೋಜನೆಗಳನ್ನು ರೂಪಿಸಲಾಗಿದೆ. ಅದರಲ್ಲಿ ಹಂಪೆಯ ಪ್ರವಾಸೋದ್ಯಮದ ಬೆಳವಣಿಗೆಗಾಗಿ ವಿಶೇಷ ಅನುದಾನ ನೀಡಲು ಕೇಂದ್ರ ಸರಕಾರ ಒಪ್ಪಿಗೆ ನೀಡಿದೆ. ಅದನ್ನು ಕಾರ್ಯರೂಪಕ್ಕೆ ತರಲು ಮುಂದಾಗಿದೆ. ಈ ಎಲ್ಲಾ ಕಾರ್ಯಕ್ರಮ, ಯೋಜನೆಗಳ ಫಲಿತಗಳೆಂದರೆ, ದೇಶ ವಿದೇಶಗಳ ಪ್ರವಾಸಿಗರ ಸಂಖ್ಯೆಯಲ್ಲಿ ಆಗಿರುವ ಹೆಚ್ಚಳ. ಅದರೊಂದಿಗೆ 1980-90 ದಶಕದಲ್ಲಿ ವಿಶ್ವದಲ್ಲಿ ಬದಲಾದ ಆರ್ಥಿಕ ನೀತಿಗಳನ್ನು- ಖಾಸಗೀಕರಣ, ಉದಾರೀಕರಣ ಮತ್ತು ಜಾಗತೀಕರಣ ಪ್ರಕ್ರಿಯೆಗಳನ್ನು- ಭಾರತವು ಅನುಕರಣೆ ಮಾಡಿದ್ದರಿಂದ ಗಣನೀಯ ಪ್ರಮಾಣದಲ್ಲಿ ವಿದೇಶಿಯ ಪ್ರವಾಸಿಗರ ಸಂಖ್ಯೆ ಹೆಚ್ಚಲು ಕಾರಣವಾಗಿದೆ ಎನ್ನಬಹುದು.

ಭಾಗ 2

ಹೊಸಪೇಟೆಯು ಬಳ್ಳಾರಿ ಜಿಲ್ಲೆಯ ಒಂದು ತಾಲೂಕು. ಅದು ವಿಜಯನಗರ ಕಾಲದಲ್ಲಿ ಕೃಷ್ಣದೇವರಾಯ ನಿರ್ಮಿಸಿದ ಹೊಸ ಪಟ್ಟಣವಾಗಿತ್ತು. ಆದರೆ ಇಂದು ಹೊಸಪೇಟೆ ಬಳ್ಳಾರಿ ಜಿಲ್ಲೆಯಲ್ಲಿ ತೀವ್ರಗತಿಯಲ್ಲಿ ಆಧುನೀಕರಣಗೊಳ್ಳುತ್ತಿರುವ ಒಂದು ತಾಲೂಕು ಆಗಿದೆ. ಇದಕ್ಕೆ ಹಲವಾರು ಕಾರಣಗಳಿವೆ. ಅವುಗಳಲ್ಲಿ ಎದ್ದು ಕಾಣುವ ಅಂಶಗಳೆಂದರೆ ಈ ತಾಲ್ಲೂಕಿನಲ್ಲಿ ಭರದಿಂದ ನಡೆಯುವ ಗಣಿಗಾರಿಕೆ ಮತ್ತು ತುಂಗಭದ್ರಾ ಅಣೆಕಟ್ಟು. ಹೊಸಪೇಟೆಯಿಂದ ಬಳ್ಳಾರಿಗೆ ಹೋಗುವ ರಸ್ತೆಯ ಬಲಬದಿಗೆ ಗುಡ್ಡಗಳ ಸಾಲುಗಳಿವೆ. ಇವು ಕಬ್ಬಿಣದ ನಿಕ್ಷೇಪಗಳಿಂದ ತುಂಬಿವೆ. ಈ ಪ್ರದೇಶ ಗಣಿಗಾರಿಕೆಯ ಚಟುವಟಿಕೆಯಿಂದ ತುಂಬಿಹೊಗಿದೆ. ಪಟ್ಟಣದ ಸುತ್ತಲಿನ ಸ್ಥಳಗಳಲ್ಲಿ ಕಬ್ಬಿಣ ಮತ್ತು ಉಕ್ಕು ಕೈಗಾರಿಕೆಗಳು ತಲೆ ಎತ್ತಿ ನಿಂತಿವೆ. ಈ ಪ್ರದೇಶದ ಕಬ್ಬಿಣದ ಅದಿರು ಹೊರದೇಶಗಳಿಗೆ ರಫ್ತಾಗುತ್ತದೆ.[8] 1991ರಲ್ಲಿ ತಾಲ್ಲೂಕಿನ ಶೇ.8ರಷ್ಟು ಕೆಲಸಗಾರರು ಗಣಿ ಕೆಲಸದಲ್ಲಿ ನಿರತರಾಗಿದ್ದಾರೆ.[9] ಹೊಸಪೇಟೆಯ ಮತ್ತೊಂದು ನೈಸರ್ಗಿಕ ಕೊಡುಗೆಯೆಂದರೆ ನೈರುತ್ಯದಿಂದ ಈಶಾನ್ಯಕ್ಕೆ ಹರಿಯುವ ತುಂಗಭದ್ರಾ ನದಿ. ಈ ನದಿಗೆ ಅಡ್ಡಲಾಗಿ ಕಟ್ಟಿರುವ ಅಣೆಕಟ್ಟಿನಿಂದ ಹೆಚ್ಚಿನ ಭೂಪ್ರದೇಶ ನೀರಾವರಿಯಾಗಿದ್ದು, ಜಲವಿದ್ಯುತ್‌ನ್ನು ಉತ್ಪಾದಿಸಲಾಗುತ್ತಿದೆ. ಬಳ್ಳಾರಿ ಜಿಲ್ಲೆಯ ಬಹುಪಾಲು ತಾಲೂಕುಗಳು ಅಪರೂಪಕ್ಕೆ ಬರುವ ಮಳೆಯ ಮೇಲೆ ಅವಲಂಬಿತವಾಗಿದ್ದರೆ, ಹೊಸಪೇಟೆ ತಾಲೂಕಿನ ಅರ್ಧದಷ್ಟು ಹಳ್ಳಿಗಳಿಗೆ ಅಣೆಕಟ್ಟಿನ ನೀರು ದೊರಕುತ್ತಿದೆ. ಇಲ್ಲಿ ಹೆಚ್ಚಾಗಿ ವಾಣಿಜ್ಯ ಬೆಳೆಗಳಾದ ಕಬ್ಬು, ಬಾಳೆ, ತೆಂಗು ಮತ್ತು ಆಹಾರದ ಬೆಳೆಗಳಾದ ಭತ್ತ ಬೆಳೆಯಲಾಗುತ್ತಿದೆ. ಮಳೆ ಅವಲಂಬಿತ ಮತ್ತು ಕೊಳವೆ ಬಾವಿ ಆಧಾರಿತ ಪ್ರದೇಶದಲ್ಲಿ ಹತ್ತಿ, ಸೂರ್ಯಕಾಂತಿ, ಜೋಳ, ನವಣೆ, ಶೇಂಗಾ, ಮುಸುಕಿನ ಜೋಳ, ಈರುಳ್ಳಿ ಮತ್ತು ಅಲ್ಪ ಪ್ರಮಾಣದಲ್ಲಿ ದ್ವಿದಳ ಧಾನ್ಯಗಳನ್ನು ಬೆಳೆಯುವುದು ಸಾಮಾನ್ಯ. ಹೊಸಪೇಟೆಯ ಪಟ್ಟಣದ ಸುತ್ತಲೂ 30 ಕಿ.ಮೀ. ವ್ಯಾಪ್ತಿಯಲ್ಲಿ ಬರುವ ಹಳ್ಳಿಗಳೆಲ್ಲವೂ ವ್ಯಾಪಾರಕ್ಕೆ ಹೊಸಪೇಟೆಯನ್ನೆ ಅವಲಂಬಿಸಿವೆ. ಹೊಸಪೇಟೆ ಪಟ್ಟಣ ತಾಲೂಕು ಕೇಂದ್ರ. ಜತೆಗೆ

ಜಿಲ್ಲೆಯ ಇತರ ತಾಲೂಕಿಗೆ ಹೋಲಿಸಿದರೆ ತುಂಬಾ ತ್ವರಿತಗತಿಯಲ್ಲಿ ಅಭಿವೃದ್ಧಿ ಹೊಂದುತ್ತಿರುವ ತಾಲೂಕಾಗಿದೆ.

ಹಂಪೆ ಹೊಸಪೇಟೆ ತಾಲೂಕಿನಲ್ಲಿರುವ ಒಂದು ಗ್ರಾಮ. ಇದು ಹೊಸಪೇಟೆಯಿಂದ 13 ಕಿ.ಮೀ. ದೂರದಲ್ಲಿದೆ. ಹಂಪೆ ಗ್ರಾಮದ ವಿಸ್ತೀರ್ಣ 3.43 ಚದರ ಕಿ. ಮೀ. ಇದೆ. 2001ರ ಜನಗಣತಿಯ ಪ್ರಕಾರ ಹಂಪೆಯ ಜನಸಂಖ್ಯೆ 2172. ಇದರಲ್ಲಿ ಸಾಕ್ಷರರ ಸಂಖ್ಯೆ1237 (ಶೇ.65.76) ಇದೆ. ಈ ಪ್ರಮಾಣವನ್ನು ತಾಲೂಕಿನ ಸಾಕ್ಷರತೆಗೆ ಹೊಲಿಸಿದರೆ ಶೇ.4.49, ಮತ್ತು ಜಿಲ್ಲೆಯ ಸಾಕ್ಷರತೆಗೆ ಹೊಲಿಸಿದರೆ ಶೇ.7.72 ಹೆಚ್ಚಿದೆ. ಹಾಗಾಗಿ ಹಂಪೆಯ ಸಾಕ್ಷರತೆ ತಾಲೂಕು ಮತ್ತು ಜಿಲ್ಲೆಗಿಂತ ಉತ್ತಮವಾಗಿದೆ. ಆದರೆ ರಾಜ್ಯದ ಸಾಕ್ಷರತೆ ಪ್ರಮಾಣಕ್ಕಿಂತ ಶೇ.1.28 ಕಡಿಮೆ ಇದೆ.[10] 1991ರ ಜನಗಣತಿಯ ಪ್ರಕಾರ ಹಂಪೆ ಗ್ರಾಮದಲ್ಲಿ ಸಾಗುವಳಿದಾರರ ಪ್ರಮಾಣ ಶೇ.7.38 ಇದೆ. ಇದು ಹೊಸಪೇಟೆ ತಾಲೂಕಿನ (ಶೇ.22.05), ಬಳ್ಳಾರಿ ಜಿಲ್ಲೆಯ (ಶೇ. 31.14) ಮತ್ತು ರಾಜ್ಯದ (ಶೇ. 34.21) ಸರಾಸರಿಗಿಂತ ತುಂಬಾ ಕಡಿಮೆ ಇದೆ. ಅದೇ ಅವಧಿಯ ಅಂಕಿ ಅಂಶ ಪ್ರಕಾರ ಹಂಪೆ ಗ್ರಾಮದಲ್ಲಿ ಕೃಷಿ ಕಾರ್ಮಿಕರ ಪ್ರಮಾಣ ತಾಲೂಕು, ಜಿಲ್ಲೆ ಮತ್ತು ರಾಜ್ಯದ ಸರಾಸರಿಗಿಂತ ಹೆಚ್ಚಿದೆ. ಇದು ತಾಲೂಕಿಗಿಂತ ಶೇ.11.18ರಷ್ಟು, ಜಿಲ್ಲೆಗಿಂತ 10.92ರಷ್ಟು, ರಾಜ್ಯಕ್ಕಿಂತ 22.90ರಷ್ಟು ಇದೆ. (ಕೋಷ್ಠಕ-1)2001ರ ವೇಳೆಗೆ ಈ ಅಂಕಿ ಅಂಶಗಳಲ್ಲಿ ಸಾಕಷ್ಟು ಬದಲಾವಣೆ ಹೊಂದಿದೆ. ಪ್ರವಾಸೋದ್ಯಮ ಮತ್ತು ಅದರಿಂದ ಸಾಧ್ಯವಾದ ಈ ಬದಲವಾಣೆಯನ್ನು ಮುಂದಿನ ಅಧ್ಯಾಯಗಳಲ್ಲಿ ವಿಸ್ತಾರವಾಗಿ ವಿವರಿಸಲಾಗಿದೆ. ಉತ್ತರ ಕರ್ನಾಟಕದಲ್ಲಿ ಪಶುಸಂಗೋಪನೆ ಬಹು ಮುಖ್ಯ ಆರ್ಥಿಕ ಚಟುವಟಿಕೆ. ಆದರೆ ಹಂಪೆ ಗ್ರಾಮದಲ್ಲಿ ಪಶು ಸಂಗೋಪನೆಯಲ್ಲಿ ತೊಡಗಿಸಿಕೊಂಡವರ ಸಂಖ್ಯೆ ಶೇ.0.87. ಇದು ತಾಲೂಕು (ಶೇ.0.97) ಜಿಲ್ಲೆ (ಶೇ.1.23) ಹಾಗೂ ರಾಜ್ಯದ ಪ್ರಮಾಣಕ್ಕಿಂತ (ಶೇ. 3.57) ಕಡಿಮೆ ಇದೆ. ಅದೇ ರೀತಿ ಬಳ್ಳಾರಿ ಜಿಲ್ಲೆ ಮತ್ತು ಹೊಸಪೇಟೆಯಲ್ಲಿ ಗಣಿಗಾರಿಕೆ ಮತ್ತೊಂದು ಪ್ರಮುಖ ಆರ್ಥಿಕ ಚಟುವಟಿಕೆ. ಆದರೆ ಹಂಪೆಯಲ್ಲಿ ಗಣಿಗಾರಿಕೆಯಲ್ಲಿ ತೊಡಗಿಸಿಕೊಂಡವರ ಪ್ರಮಾಣ ಶೇ. 0.29 ಮಾತ್ರ ಇದೆ. ಇದು ಹೊಸಪೇಟೆ (5.32) ಮತ್ತು ಬಳ್ಳಾರಿ ಜಿಲ್ಲೆಯ (ಶೇ. 2.23) ಪ್ರಮಾಣಕ್ಕಿಂತ ತುಂಬಾ ಕಡಿಮೆ. ಗುಡಿ ಕೈಗಾರಿಕೆ ಮತ್ತು ಆಧುನಿಕ ಕೈಗಾರಿಕೆ ಕೂಡ ಹಂಪಿಯಲ್ಲಿ ವಿಶೇಷ ಬೆಳೆದಿಲ್ಲ. ತಾಲೂಕು, ಜಿಲ್ಲೆ ಹಾಗು ರಾಜ್ಯಕ್ಕಿಂತ ಕಡಿಮೆ ಪ್ರಮಾಣದಲ್ಲಿ ಜನ ಕೈಗಾರಿಕೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಹಂಪೆ ಗ್ರಾಮದ ಜನಸಂಖ್ಯೆ ಶೇ.0.56ರಷ್ಟು ಮಾತ್ರ ಆಧುನಿಕ ಕೈಗಾರಿಕೆಯಲ್ಲಿ ತೊಡಗಿಸಿಕೊಂಡಿದ್ದರೆ. ಆದರೆ ತಾಲೂಕು ಮಟ್ಟದಲ್ಲಿ ಶೇ.6.49, ಜಿಲ್ಲೆಯಲ್ಲಿ ಶೇ.4.26 ಹಾಗೂ ರಾಜ್ಯಮಟ್ಟದಲ್ಲಿ ಶೇ.8.84ರಷ್ಟು ಜನ ಆಧುನಿಕ ಕೈಗಾರಿಕೆಯಲ್ಲಿ ತೊಡಗಿಸಿಕೊಂಡಿದ್ದಾರೆ.(ಕೋಷ್ಠಕ-1)

ಇತ್ತೀಚಿನ ದಿನಗಳಲ್ಲಿ ದೇಶದ ಎಲ್ಲ ಕಡೆ ಬೆಳೆಯುತ್ತಿರುವ ಮತ್ತೊಂದು ಚಟುವಟಿಕೆ ಎಂದರೆ ಕಟ್ಟಡ ನಿರ್ಮಾಣ. ಬಳ್ಳಾರಿ ಜಿಲ್ಲೆಯಲ್ಲಿ ಹೊಸಪೇಟೆ ಬೆಳೆಯುತ್ತಿರುವ ನಗರ. ಹಾಗಾಗಿ ಇಲ್ಲಿ ಕಟ್ಟಡ ನಿರ್ಮಾಣದಲ್ಲಿ ತೊಡಗಿಸಿಕೊಂಡವರ ಪ್ರಮಾಣ ಶೇ.2.18 ಇದೆ. ಇದು ಜಿಲ್ಲೆಯ ಸರಾಸರಿಗಿಂತ (1.79) ತುಂಬಾ ಹೆಚ್ಚು. ರಾಜ್ಯ ಮಟ್ಟದಲ್ಲಿ ಶೇ.2.47ರಷ್ಟು ಕೆಲಸಗಾರರು ತಮ್ಮ ಆದಾಯವನ್ನು ಕಟ್ಟಡ ನಿರ್ಮಾಣ ಕೆಲಸದಿಂದ ಪಡೆಯುತ್ತಿದ್ದಾರೆ. ಆದರೆ ಹಂಪೆಯಲ್ಲಿ ಕಟ್ಟಡ ನಿರ್ಮಾಣದಲ್ಲಿ ತೊಡಗಿಸಿಕೊಂಡವರ ಸಂಖ್ಯೆ ಶೇ.1.16. ಹಂಪೆಯ ಬಹುದೊಡ್ಡ ವಿಶೇಷವೆಂದರೆ ಇಲ್ಲಿನ ತೃತೀಯ ವಲಯದ ಬೆಳವಣಿಗೆ. ಉತ್ತರ ಕರ್ನಾಟಕದ ಇನ್ನ್ಯಾವುದೇ ಪ್ರದೇಶದಲ್ಲಿ ಕಂಡು ಬರದ ತೃತೀಯ ವಲಯದ ಬೆಳವಣಿಗೆಯನ್ನು ಹಂಪಿಯಲ್ಲಿ ಕಾಣಬಹುದು. ಶೇ. 21.71ರಷ್ಟು ಹಂಪೆಯ ಕೆಲಸಗಾರರು ತಮ್ಮ ಆದಾಯವನ್ನು ವ್ಯಾಪಾರ ಮತ್ತು ವಾಣಿಜ್ಯದಿಂದ ಪಡೆಯುತ್ತಿದ್ದಾರೆ. ತೃತೀಯ ವಲಯಲ್ಲಿ ತೊಡಗಿಸಿಕೊಂಡವರು ಹೊಸಪೇಟೆ ತಾಲೂಕಿನಲ್ಲಿ ಶೇ.9.60, ಜಿಲ್ಲೆಯಲ್ಲಿ ಶೇ, 6.84 ಮತ್ತು ರಾಜ್ಯದಲ್ಲಿ ಶೇ.7.98 ಇದ್ದಾರೆ.[11] ಹಂಪೆ ಗ್ರಾಮದಲ್ಲಿ ವ್ಯಾಪಾರ ಮತ್ತು ವಾಣಿಜ್ಯದಲ್ಲಿ ತೊಡಗಿಸಿಕೊಂಡವರ ಪ್ರಮಾಣ ತಾಲೂಕಿಗಿಂತ ಶೇ. 12.11 ರಷ್ಟು ಹೆಚ್ಚಿದೆ. ಹಾಗೆಯೆ ಜಿಲ್ಲೆಗಿಂತ ಶೇ. 14.87 ರಷ್ಟು ಮತ್ತು ರಾಜ್ಯಕ್ಕಿಂತ ಶೇ. 13.73ರಷ್ಟು ಹೆಚ್ಚಿದೆ(ಕೋಷ್ಟಕ-1). ಮೇಲೆ ಕೊಟ್ಟ ತೃತೀಯ ವಲಯದ ಅಂಕಿ ಅಂಶಗಳಲ್ಲಿ ಸಾರಿಗೆ ಮತ್ತು ಸಂಪರ್ಕದಲ್ಲಿ ತೊಡಗಿಸಿಕೊಂಡವರ ಸಂಖ್ಯೆಯನ್ನು ಸೇರಿಸಿಲ್ಲ. ಅದೇ ರೀತಿ ಇತರ ಸೇವೆಗಳಲ್ಲಿ ತೊಡಗಿಸಿಕೊಂಡವರ ಸಂಖ್ಯೆಯನ್ನೂ ಸೇರಿಸಿಲ್ಲ. ಅವುಗಳನ್ನು ಸೇರಿಸಿದರೆ ತೃತೀಯ ವಲಯದ ಗಾತ್ರ ಇನ್ನೂ ಹೆಚ್ಚಾಗುತ್ತದೆ. ಉದಾಹರಣೆಗೆ ಹಂಪಿಯ ಶೇ. 15.34 ಕೆಲಸಗಾರರು ಇತರ ಸೇವೆಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಇದು ಹೊಸಪೇಟೆ ತಾಲೂಕಿನ (ಶೇ. 8.04), ಬಳ್ಳಾರಿ ಜಿಲ್ಲೆಯ (ಶೇ.6.6) ಮತ್ತು ರಾಜ್ಯದ (ಶೇ8.84) ಸರಾಸರಿಗಿಂತ ತುಂಬಾ ಹೆಚ್ಚು ಇದೆ. ಹಂಪೆ ಗ್ರಾಮದಲ್ಲಿ ಇತರ ಸೇವೆಗಳಲ್ಲಿ ತೊಡಗಿಸಿಕೊಂಡವರ ಪ್ರಮಾಣ ಹೊಸಪೇಟೆ ತಾಲೂಕಿಗಿಂತ ಶೇ. 7.3ರಷ್ಟು, ಬಳ್ಳಾರಿ ಜಿಲ್ಲೆಗಿಂತ ಶೇ.8.71ರಷ್ಟು ಹಾಗೂ ರಾಜ್ಯಕ್ಕಿಂತ ಶೇ.3.5ರಷ್ಟು ಹೆಚ್ಚು ಇದೆ. ಅಂದರೆ ಹೆಚ್ಚು ಕಡಿಮೆ ಹಂಪೆಯ ಶೇ.38ರಷ್ಟು ಜನ ತೃತೀಯ ವಲಯದಲ್ಲಿ ತೊಡಗಿಸಿಕೊಂಡಿದ್ದಾರೆ(ಕೋಷ್ಟಕ-1). ಇದು ತಾಲೂಕು, ಜಿಲ್ಲೆ ಮತ್ತು ರಾಜ್ಯದ ಸರಾಸರಿಗಿಂತ ಹೆಚ್ಚಿದೆ. ತೃತೀಯ ವಲಯದ ಈ ಪ್ರಮಾಣದ ಬೆಳವಣಿಗೆಯಲ್ಲಿ ಪ್ರವಾಸೋದ್ಯಮದ ಪಾತ್ರವನ್ನು ಅರ್ಥ ಮಾಡಿಕೊಳ್ಳುವುದು ಈ ಪ್ರಬಂಧದ ಮುಖ್ಯ ಉದ್ದೇಶ.

ವಿಜಯನಗರದ ಐತಿಹಾಸಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆ ಹೊಂದಿರುವ ಹಂಪೆ ಇಂದು ವಿಶ್ವ ಪ್ರಸಿದ್ದ ಪ್ರವಾಸಿ ತಾಣವಾಗಿದೆ. ಹಂಪೆಗೆ ಸಾಕಷ್ಟು ಸಾರಿಗೆ ಸೌಕರ್ಯವಿದೆ. ಹೊಸಪೇಟೆಯಿಂದ ಹಂಪೆಗೆ ಕೇವಲ 30 ನಿಮಿಷಗಳ ಪ್ರಯಾಣ. ಹಂಪೆಯ ಈಶಾನ್ಯಕ್ಕಿರುವ ಕಂಪ್ಲಿ ಪಟ್ಟಣ, ಆಗ್ನೇಯಕ್ಕಿರುವ ಪಾಪಿನಾಯಕನಹಳ್ಳಿ ಮತ್ತು ನೈರುತ್ಯಕ್ಕಿರುವ ಹೊಸಪೇಟೆಯಿಂದ ಹಂಪೆ ಗ್ರಾಮಕ್ಕೆ

ಬರಲು ಸಾರಿಗೆ ವ್ಯವಸ್ಥೆ ಇದೆ. ಆದರೆ 30 ಕಿ.ಮೀ. ದೂರದಲ್ಲಿರುವ ಕಂಪ್ಲಿ ಪಟ್ಟಣದಿಂದ ಬರುವವರ ಸಂಖ್ಯೆ ಕಡಿಮೆಯಿದ್ದು, ಯಾತ್ರಿಕರು ಮಾತ್ರ ಬರುವುದಿದೆ. ಅದೇ ರೀತಿ ಪಾಪಿನಾಯಕನಹಳ್ಳಿ ಗ್ರಾಮದಿಂದ ಬಳ್ಳಾರಿ - ಹೊಸಪೇಟೆ ರಾಷ್ಟ್ರೀಯ ಹೆದ್ದಾರಿ 63ರ, ಉಪರಸ್ತೆ(By pass road) ಮೂಲಕ 12 ಕಿ.ಮೀ.ದೂರವಿರುವ ಹಂಪಿಗೆ ಬರುವವರು ಇದ್ದಾರೆ. ಆದರೆ ಈ ರಸ್ತೆಯಿಂದ ಸಾರ್ವಜನಿಕ ಸಾರಿಗೆ ವ್ಯವಸ್ಥೆ ಇಲ್ಲ; ಖಾಸಗಿ ವಾಹನಗಳಲ್ಲಿ ಪ್ರಯಾಣ ಮಾಡಬೇಕಾಗುತ್ತದೆ. ಹಾಗಾಗಿ ಈ ಮೂಲಕ ಬರುವ ಯಾತ್ರಿಕ, ಪ್ರವಾಸಿಗರ ಸಂಖ್ಯೆಯೂ ವಿರಳ. ಇನ್ನೂ ನೈರುತ್ಯಕ್ಕಿರುವ ಹೊಸಪೇಟೆ ಪಟ್ಟಣ ರೈಲ್ವೆ ಮತ್ತು ರಸ್ತೆ ಸಾರಿಗೆಯನ್ನು ಹೊಂದಿದ್ದು,ಅನೇಕ ದೂರದ ಸ್ಥಳಗಳಿಗೆ ಸಾರಿಗೆ ವ್ಯವಸ್ಥೆಯ ಕೊಂಡಿಯಾಗಿದೆ. ಜಿಲ್ಲೆ, ರಾಜ್ಯ, ರಾಜಧಾನಿಗಳಿಂದ ಬರುವ ಅನೇಕ ದೇಶೀಯ ಯಾತ್ರಿಕರು, ವಿದೇಶಿ ಪ್ರವಾಸಿಗರು, ಹೊಸಪೇಟೆ ಪಟ್ಟಣಕ್ಕೆ ರಸ್ತೆ ಸಾರಿಗೆಯಿಂದಲೂ ರೈಲ್ವೆ ಸಾರಿಗೆಯಿಂದಲೂ ಬಂದು ಹಂಪೆಗೆ ಭೇಟಿ ನೀಡುತ್ತಾರೆ. ಹೊಸಪೇಟೆ-ಕಮಲಾಪುರದ ಮಾರ್ಗವಾಗಿ ಗುಲ್ಬರ್ಗಾ, ರಾಯಚೂರು, ಹೈದರಾಬಾದ್‌ಗೆ ಹೋಗುವ ರಸ್ತೆ, ಕಂಪ್ಲಿಯ ಪಟ್ಟಣದವರೆಗೆ ಜಿಲ್ಲಾ ಮುಖ್ಯ ರಸ್ತೆಯಾಗಿದೆ. ಈ ರಸ್ತೆಯಲ್ಲಿ ಹೊಸಪೇಟೆಯಿಂದ 8ಕಿ.ಮೀ ಅಂತರದಲ್ಲಿ ಕಡ್ಡಿರಾಂಪುರ ಗ್ರಾಮಕ್ಕೆ ಹೋಗಲು ಕೂಡು ರಸ್ತೆಯಿದೆ. ಇಲ್ಲಿ ಹಂಪೆಗೆ ಸ್ವಾಗತ ಕೋರುವ ಬೃಹದಾಕಾರದ ಮಹಾದ್ವಾರವನ್ನು ಹೊಸಪೇಟೆ ನಗರಾಭಿವೃದ್ಧಿ ಪ್ರಾಧಿಕಾರದವರು ಕಟ್ಟಿಸಿದ್ದಾರೆ. ಇಲ್ಲಿಂದ ಉತ್ತರಕ್ಕೆ 4 ಕಿ.ಮೀ. ಅಂತರದಲ್ಲಿ ಹಂಪೆ ಇದೆ. ಈ ರಸ್ತೆಯಲ್ಲಿ ಸಾರಿಗೆ ಬಸ್ಸುಗಳು ಮತ್ತು ಖಾಸಗಿ ಆಟೋ ರಿಕ್ಷಾಗಳು ಹೆಚ್ಚಿನ ಸಂಖ್ಯೆಯಲ್ಲಿ ಸಂಚರಿಸುತ್ತವೆ.

ಕಮಲಾಪುರ ಮತ್ತು ಕಡ್ಡಿರಾಂಪುರ ಮಾರ್ಗವಾಗಿಯೂ ಹಂಪೆಗೆ ಹೋಗಬಹುದು. ಈ ಎರಡು ರಸ್ತೆ ಮಾರ್ಗಗಳು ಹಂಪೆಯ ಹೊರವಲಯದಲ್ಲಿರುವ ಸಾಸಿವೆಕಾಳು ಗಣಪತಿ ಸ್ಮಾರಕದ ಮುಂಭಾಗದ ಪೂರ್ವದಲ್ಲಿ ಸೇರುತ್ತವೆ. ಇಲ್ಲಿಂದ 10-20 ಅಡಿ ದೂರದಲ್ಲಿ ಬೇರೆ ಸ್ಥಳಗಳಿಂದ ಬರುವ ಪ್ರವಾಸಿಗರ ವಾಹನಗಳಿಗೆ (ದ್ವಿಚಕ್ರ ವಾಹನಗಳನ್ನು ಹೊರತುಪಡಿಸಿ) ಪ್ರವೇಶ ದರವನ್ನು ಸಂಗ್ರಹಿಸಲಿಕ್ಕಾಗಿ ಹಾಕಿರುವ ಅಡ್ಡೆ ಸಿಗುತ್ತದೆ. ಅಲ್ಲಿಂದ ಸ್ವಲ್ಪ ಮುಂದೆ ಬಂದರೆ ರಸ್ತೆ ಬಲಬದಿಯಲ್ಲಿ ಕುಡಿಯುವ ನೀರಿಗಾಗಿ ನಿರ್ಮಿಸಿರುವ ಸಾರ್ವಜನಿಕ ಚಿಕ್ಕ ಟ್ಯಾಂಕ್ ಇದೆ. ಎಡಬದಿಯಲ್ಲಿ ನೋಡಿದರೆ ಶಿವರಾಮ ಅವದೂತರ ಆಶ್ರಮ ಮತ್ತು ಕಲ್ಯಾಣ ಮಂಟಪ ಇದೆ. ಅದರ ಮುಂಭಾಗದಲ್ಲಿ ಪೂರ್ವಕ್ಕೆ ಕಡಲೆಕಾಳು ಗಣಪತಿ ದೇವಾಲಯದ ಸ್ಮಾರಕವಿದೆ. ನಂತರ ರಸ್ತೆಯ ಬಲಬದಿಯಲ್ಲಿಯೆ ವಿಜಯನಗರ ಕಾಲದಲ್ಲಿ ಉಪಯೋಗಿಸುತ್ತಿದ್ದ ರಸ್ತೆ ದ್ವಾರದ ಮಂಟಪವಿದೆ. ಈಗ ಇದರ ಒಳಗಡೆಯಿಂದ ಪ್ರವೇಶ ನಿಷೇದವಿದ್ದು, ಹೊರಗಡೆ ಅಂದರೆ ಪೂರ್ವ ಬದಿಯಿಂದ ವಾಹನವನ್ನು ಸಂಚರಿಸುವಂತೆ ವ್ಯವಸ್ಥೆ ಮಾಡಲಾಗಿದೆ. ಇಲ್ಲಿಂದ ಹಂಪೆ ಗ್ರಾಮ ಕೇವಲ 50-100 ಅಡಿ ಅಂತರದಲ್ಲಿದೆ. ಗ್ರಾಮದ ಒಳಗಡೆ ಬರುವುದಕ್ಕೆ ತಡೆಯೊಡ್ಡಿರುವ ಗೇಟಿನವರೆಗೆ ರಸ್ತೆ ತುಂಬಾ ಕಡಿದಾಗಿದೆ. ಈ ಕಡಿದಾದ

ರಸ್ತೆಯನ್ನು ಇಳಿಯುವ ಮೊದಲು ರಸ್ತೆಯ ಬಲಭಾಗಕ್ಕೆ ಇರುವ ಖಾಸಗಿ ರಸ್ತೆಯನ್ನು ಹಿಡಿದು 30-40 ಅಡಿ ದೂರ ನಡೆದರೆ, ಕಬ್ಬಿಣದ ಗೇಟು ಇದಿರಾಗುತ್ತದೆ. ಇಲ್ಲಿ ಜೈನ ಧರ್ಮದವರು 1-2 ಎಕರೆ ಜಾಗದಲ್ಲಿ ಕಲ್ಲು ಬಂಡೆಗಳನ್ನು ಸೀಳಿ ಅವುಗಳ ಮೇಲೆ ಕಾಂಕ್ರೀಟ್ ಕಟ್ಟಡಗಳನ್ನು ನಿರ್ಮಿಸಲಾಗಿದೆ. ಇದಕ್ಕೆ ರತ್ನಕೂಟ ಅಥವಾ ಶ್ರೀಮದ್ ರಾಮಚಂದ್ರ ಆಶ್ರಮ ಎಂದು ಕರೆಯುತ್ತಾರೆ.

ಕಡಿದಾದ ರಸ್ತೆಯನ್ನು 40 ಅಡಿಗಳಷ್ಟು ಕ್ರಮಿಸಿದರೆ ರಸ್ತೆಯ ಎಡಬದಿಯ ಮುಂಭಾಗದಲ್ಲಿ ಎರಡು ಮನೆಗಳು, ಖಾಸಗಿ ಆಸ್ಪತ್ರೆ, ಗ್ರಾಮ ಪಂಚಾಯತಿ ಕಚೇರಿ, ಅದರ ಪಕ್ಕದಲ್ಲಿ ಹಿಂಭಾಗದ ಮನೆಗಳಿಗೆ ಹೊಗುವ ರಸ್ತೆ, ನಂತರ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಕಟ್ಟಡ, ಹಾಗೆಯೆ ಸ್ವಲ್ಪ ಮುಂದೆ ಹೋದರೆ ಪ್ರವಾಸಿಗರ ವಾಹನಗಳನ್ನು ಹಂಪೆಯ ಬಜಾರದಲ್ಲಿ ಬಿಡದಂತೆ ತಡೆಯಲು ನಿರ್ಮಿಸಿರುವ ಕಬ್ಬಿಣದ ಗೇಟು, ಕಡಿದಾದ ರಸ್ತೆಯ ಬಲಬದಿಗೆ ವಿಶಾಲವಾದ ಬಯಲು ಎದುರಾಗುತ್ತವೆ. ಈ ಪ್ರದೇಶ ವಿರೂಪಾಕ್ಷೇಶ್ವರ ದೇವಸ್ಥಾನದ ಮಠಾಧಿಕಾರಿಗಳಾದ ವಿದ್ಯಾರಣ್ಯ ಮಠದ ಸ್ವಾಮಿಗಳಿಗೆ ಸೇರಿದ್ದಾಗಿದೆ. ಈ ಸ್ಥಳವು ಈಗ ಪಾರ್ಕಿಂಗ್ ಮತ್ತು ಬಸ್ಸು ನಿಲ್ದಾಣವಾಗಿದೆ. ಇದರ ದಕ್ಷಿಣಕ್ಕೆ ಕೆಲವು ಪೆಟ್ಟಿಗೆ ಅಂಗಡಿಗಳು ಮತ್ತು ಚಿಕ್ಕ ಹೋಟಲ್‌ಗಳು ಇವೆ. ಈ ಪಾರ್ಕಿಂಗ್ ಸ್ಥಳವನ್ನು ವಿದ್ಯಾರಣ್ಯ ಮಠವು ಪ್ರತಿವರ್ಷ ಟೆಂಡರ್ ಕರೆದು ವಾರ್ಷಿಕ ಗುತ್ತಿಗೆ ನೀಡುತ್ತದೆ. ಕಡಿದಾದ ರಸ್ತೆಯ ಕೊನೆಯಲ್ಲಿ ಉತ್ತರಕ್ಕೆ ಕಬ್ಬಿಣದ ಗೇಟನ್ನು ವಾಹನಗಳು ಹಂಪಿಯ ಬಜಾರದಲ್ಲಿ ಪ್ರವೇಶಿಸದಂತೆ ಯಾವಾಗಲೂ ಮುಚ್ಚಿರುತ್ತಾರೆ. ಗ್ರಾಮಸ್ಥರು, ಪ್ರವಾಸಿಗರು ಹಾಗೂ ದ್ವಿಚಕ್ರ ವಾಹನಗಳು ಸಂಚರಿಸಲು ಗೇಟಿನ ಆಚೆ-ಈಚೆ ಹಾದಿಯನ್ನು ಬಿಟ್ಟಿದ್ದಾರೆ. ಹಂಪೆ ಬಜಾರು ರಸ್ತೆ ವಿರುಪಾಕ್ಷೇಶ್ವರ ಮುಖ್ಯ ಗೋಪುರದಿಂದ ಬೀದಿಯ ಕೊನೆಯಲ್ಲಿರುವ ಕಲ್ಲಿನ ನಂದಿ ಮಂಟಪದವರೆಗೆ ವಿಸ್ತರಿಸಿದೆ. 10 ಮೀಟರು ಅಗಲ ಮತ್ತು 750 ಮೀಟರು ಉದ್ದವಿರುವ ಈ ಬೀದಿ ಗ್ರಾಮವನ್ನು ಇಭ್ಭಾಗ ಮಾಡಿದೆ. ಮುಖ್ಯ ಗೋಪುರದಿಂದ ಸುಮಾರು 300-400 ಮೀ.ರಸ್ತೆ ಉದ್ದಕ್ಕೂ ಎರಡು ಬದಿಗಳಲ್ಲಿ ಅಂದರೆ ಹಂಪೆಯಿಂದ ಹೊರಗೆ ಹೋಗಲಿಕ್ಕೆ ಇರುವ ಗೇಟಿನ ರಸ್ತೆಯವರೆಗೆ ಬಹುತೇಕ ಅಂಗಡಿ ಮಳಿಗೆಗಳಿವೆ. ಎಲ್ಲಾ ತರಹದ ಅಂಗಡಿ ಮುಂಗಟ್ಟುಗಳು, ಹೋಟೆಲುಗಳು, ಇಂಟರ್‌ನೆಟ್, ಈ-ಮೇಲ್, ಹಣ ವಿನಿಮಯ ಶಾಪ್‌ಗಳು, ಕಲ್ಯಾಣ ಮಂಟಪ, ಪ್ರವಾಸೋದ್ಯಮ ಮಾಹಿತಿ ಕೇಂದ್ರ ಇತ್ಯಾದಿಗಳು ಇಲ್ಲಿವೆ. ಸುಮಾರು 400-600 ಮೀಟರುವರೆಗೆ ಬೀದಿಯ ಎರಡು ಬದಿಯಲ್ಲಿ ವಿಜಯನಗರ ಕಾಲದ ಮಂಟಪಗಳಲ್ಲಿ ಸುತ್ತ ಮುತ್ತ ಊರುಗಳಿಂದ ಗುಳೆ ಬಂದ ಜನರು ಸಣ್ಣ ಪುಟ್ಟ ಬದಲಾವಣೆಗಳೊಂದಿಗೆ ಮನೆ ಮಾಡಿಕೊಂಡಿದ್ದಾರೆ. ಮಂಟಪಗಳಲ್ಲಿ ವಾಸಿಸುತ್ತಾ ಮುಂಭಾಗದಲ್ಲಿ ಪೆಟ್ಟಿಗೆ ಅಂಗಡಿಯನ್ನು, ಬೀದಿ ಬದಿಯಲ್ಲಿ ಚಿಕ್ಕ ಹೋಟೆಲುಗಳನ್ನು ಇಟ್ಟುಕೊಂಡು ಬದುಕು ಸಾಗಿಸುವವರು ತುಂಬ ಜನ ಇದ್ದಾರೆ. ಈ ರೀತಿ ಜೀವನ ಸಾಗಿಸುವವರಲ್ಲಿ ಸಮಾಜದ

[illegible]

ಕೆಳವರ್ಗದ ಮುಸ್ಲಿಮ್(ಪಿಂಜಾರ), ಲಂಬಾಣಿ, ವಡ್ಡರು, ಕಿಳ್ಳ್ಯಾಕ್ಯಾತರು, ನಾಯಕರು - ಇವರು ಹೆಚ್ಚು ಸಂಖ್ಯೆಯಲ್ಲಿದ್ದಾರೆ. ಇದರ ಅರ್ಥ ಇಲ್ಲಿ ಮೇಲುಜಾತಿಗೆ ಸೇರಿದ ಜನರು ಇಲ್ಲಿ ಇಲ್ಲವೆಂದಲ್ಲ. ಅವರ ಸಂಖ್ಯೆ ಕಡಿಮೆ ಇದೆಯಷ್ಟೆ. ಕಬ್ಬಿಣದ ಗೇಟಿನ ಪೂರ್ವಕ್ಕೆ ಅಂಟಿಕೊಂಡಂತೆ ರಾಷ್ಟ್ರೀಕೃತ ಕೆನರಾ ಬ್ಯಾಂಕ್ ಇದೆ. ಇದೇ ಬದಿಯ ಕೊನೆಯಲ್ಲಿ ಒಂದು ಇಂಗ್ಲಿಷ್ ಮಾಧ್ಯಮದ ಕಿರಿಯ ಪ್ರಾಥಮಿಕ ಖಾಸಗಿ ಶಾಲೆ ಇದೆ. ಹಂಪೆಯ ಬಜಾರದ ಪಶ್ಚಿಮದಿಂದ ಪೂರ್ವಕ್ಕೆ 600ಮೀ ನಂತರ ಎರಡು ಬದಿಗಳಲ್ಲಿ ರಾಜ್ಯ ಸರಕಾರದ ಪುರಾತತ್ವ ಇಲಾಖೆ ಜೀರ್ಣೋದ್ಧಾರ ಮಾಡಿದ ಮಂಟಪಗಳ ಸಾಲುಗಳಿವೆ. ಈ ಬೀದಿಯ ಎಡಬದಿಯ ಮಂಟಪಗಳನ್ನು ರಾಜ್ಯ ಪುರಾತತ್ವ ಇಲಾಖೆಯವರೆ ತಮ್ಮ ವಸ್ತುಗಳನ್ನು ಇಡುವ ದಾಸ್ತಾನು ಮಳಿಗೆ ಮತ್ತು ಛಾಯಾಚಿತ್ರ ಸಂಗ್ರಹಾಲಯವನ್ನಾಗಿ ಮಾಡಿಕೊಂಡಿದ್ದಾರೆ. ಕೆಲವು ಮಂಟಪಗಳು ಖಾಲಿ ಇವೆ.

ಮುಖ್ಯ ಬೀದಿಯ ಎರಡು ಬದಿಗಳ 400 ಮೀ.ವರೆಗೆ ಇರುವ ಮನೆ, ಅಂಗಡಿ, ಹೋಟೆಲ್ ಇತ್ಯಾದಿಗಳೆಲ್ಲ ಲಿಂಗಾಯತ, ಸಿಂಗ್, ವೈಶ್ಯ, ಕುರುಬ, ದೇವಾಂಗ, ನಾಯ್ಡು, ಜೈನ, ಬ್ರಾಹ್ಮಣ ಮತ್ತು ನಾಯಕ ಕೋಮಿನವರಿಗೆ ಸೇರಿದವಾಗಿವೆ. ಇದರಲ್ಲಿ ಸಿಂಹಪಾಲು ಲಿಂಗಾಯತ ಮತ್ತು ಸಿಂಗ್‌ರವು. ಉಳಿದ ಕೋಮಿನವರ ಅಂಗಡಿ, ಹೋಟೆಲ್‌ಗಳು ಒಂದೆರಡು ಇವೆ. ಇಲ್ಲಿರುವ ಕುಟುಂಬಗಳೆಲ್ಲ ಹಂಪಿಗೆ ಬಹು ಹಿಂದೆಯೆ ವಲಸೆ ಬಂದ ಕುಟುಂಬಗಳಾಗಿವೆ. ಇತ್ತೀಚೆಗೆ ಬಂದ ವಲಸಿಗರು ಕೂಡ ಆರ್ಥಿಕವಾಗಿ ಸಬಲರಾಗಿದ್ದು ಇಲ್ಲಿ ನೆಲೆಸಿದ್ದಾರೆ. ಕೆಲವರು ಇಲ್ಲಿನ ಬಡ ಕುಟುಂಬಗಳಿಂದ ಜಾಗ ಕ್ರಯಕ್ಕೆ ತೆಗೆದುಕೊಂಡವರು ಇದ್ದಾರೆ. ಈ ಬೀದಿಯ ಎಡಬದಿಯಲ್ಲಿ ಗ್ರಾಮ ಹೆಚ್ಚಿಗೆ ವಿಸ್ತರಿಸಿಕೊಂಡಿದೆ. ತುಂಗಭದ್ರಾ ನದಿಯ ದಡದವರೆಗೂ ಮನೆಗಳಾಗಿವೆ. ಆದರೆ ಬೀದಿಯ ಬಲಭಾಗದಲ್ಲಿ ಕಲ್ಲಿನ ಶಿಲೆಗಳು ಚಾಚಿಕೊಂಡಿರುವುದರಿಂದ ಮನೆಗಳ ಸಂಖ್ಯೆ ಅತ್ಯಲ್ಪ. ಇಲ್ಲಿ ಸಿಂಗ್, ಲಿಂಗಾಯತ, ಕುರುಬ, ನಾಯ್ಡುಗಳ ಅತಿಥಿ ಗೃಹಗಳಿವೆ. ನಾಯಕ, ವಡ್ಡ, ಹರಿಜನರ ಒಂದೆರೆಡು ಮನೆಗಳಿವೆ. ಇದೆ ಭಾಗದಲ್ಲಿ ವಿರೂಪಾಕ್ಷೇಶ್ವರ ದೇವಸ್ಥಾನಕ್ಕೆ ತಗಲಿಕೊಂಡು ಅಂಚೆ ಕಚೇರಿ ಇದೆ. ಇದರ ಮುಂಭಾಗದಿಂದ ಶಿವರಾಮ ಅವಧೂತ ಆಶ್ರಮಕ್ಕೆ ಮತ್ತು ಹೇಮಕೂಟದಲ್ಲಿರುವ ಗುಂಪಿನ ಜೈನ ದೇವಸ್ಥಾನಗಳಿಗೆ ಹೋಗಲು ವಿಜಯನಗರ ಕಾಲದ ಕಲ್ಲಿನ ಮೆಟ್ಟಿಲುಗಳ ಹಾದಿ ಇದೆ. ಬಜಾರು ರಸ್ತೆಯ ಉತ್ತರಕ್ಕೆ ಹಂಪಿ ಗ್ರಾಮ ಹೆಚ್ಚು ಹಬ್ಬಿದೆ. ಗೋಪುರದ ಪಕ್ಕದಲ್ಲಿ ನದಿಗೆ ಹೋಗುವ ರಸ್ತೆ ಮತ್ತು ಪ್ರವಾಸೋದ್ಯಮ ಕಚೇರಿಯ ಪೂರ್ವದಿಂದ ನಿಜಲಿಂಗಮ್ಮನ ದೇವಸ್ಥಾನದ ರಸ್ತೆಗಳು ಬಜಾರದ ರಸ್ತೆಗೆ ಉಪ ಮುಖ್ಯ ರಸ್ತೆಗಳಾಗಿವೆ. ನಿಜಲಿಂಗಮ್ಮ ದೇವಸ್ಥಾನದಿಂದ ಪೂರ್ವಕ್ಕೆ ಹೋಗುವ ಕಿರಿದಾದ ರಸ್ತೆಯಲ್ಲಿ ಮುಂದುವರೆದು ಹೋದರೆ ಸುಧಾ ಗೆಸ್ಟ ಹೌಸ್ ಇದೆ. ಅಲ್ಲಿಂದ ಮುಂದೆ ಹೋದರೆ ನದಿ ದಡದಲ್ಲಿ ಒಂದು ಎಕರೆಯಷ್ಟು ಸ್ಮಶಾನ ಭೂಮಿ ಇದೆ. ಇದನ್ನು ನಾಯಕ, ವಡ್ಡ, ಲಂಬಾಣಿ, ಕುರುಬ, ಕಿಳ್ಳ್ಯಾಕ್ಯಾತ, ದೇವಾಂಗ, ಬಾರಿಕ ಹಾಗೂ ಇತರ ಹಿಂದುಳಿದ ಜಾತಿಗಳು

ಅಂತ್ಯಕ್ರಿಯೆಗೆ ಬಳಸಿಕೊಳ್ಳುತ್ತಿವೆ. ಗ್ರಾಮದ ಇತರೆ ಜಾತಿಗಳಾದ ಬ್ರಾಹ್ಮಣರ, ವೈಶ್ಯ, ಲಿಂಗಾಯತ, ಸಿಂಗ್ ಮತ್ತು ಮುಸ್ಲಿಮ್, ಜೈನರು ಇದನ್ನು ಉಪಯೋಗಿಸುತ್ತಿಲ್ಲ.

ಹಂಪೆಯ ಉಪ ಮುಖ್ಯ ರಸ್ತೆಗಳ ಬದಿಯಲ್ಲಿ ಅತಿಥಿಗೃಹಗಳು, ರೆಸ್ಟೋರೆಂಟುಗಳು, ಲಂಬಾಣಿ ಉಡುಪಿನ ಅಂಗಡಿಗಳು, ಸ್ಟೇಶನರಿ ಶಾಪುಗಳು, ಬ್ಯೂಟಿ ಪಾರ್ಲರುಗಳು, ಕಾಶ್ಮೀರಿ ವ್ಯಾಪಾರಿಗಳ ಹಳೆಯ ಸಾಮಾನು ಅಂಗಡಿಗಳು, ಹಣದ ವಿನಿಮಯ ಶಾಪುಗಳು ಇತ್ಯಾದಿಗಳು ಇವೆ. ಈ ಎರಡು ರಸ್ತೆಗಳ ಮಧ್ಯಭಾಗ ಹೆಚ್ಚು ಮನೆಗಳನ್ನು ಒಳಗೊಂಡಿರುವ ಸ್ಥಳ. ಇಲ್ಲಿ ಹಲವಾರು ಕಿರಿದಾದ ಓಣಿಗಳಿವೆ. ರಸ್ತೆಗೆ ಬೇರೆ ಯಾವುದೆ ಗ್ರಾಮದಲ್ಲಿರುವಂತೆ ಕುರುಬ, ಕುಂಬಾರ, ನಾಯಕ ಕೇರಿ ಇತ್ಯಾದಿ ಓಣಿಗಳ ಹೆಸರಿಲ್ಲ. ಈ ಸ್ಥಳಗಳನ್ನು ಸ್ಥಳೀಯರು ಕರೆಯುವುದು ಜನತಾ ಕಾಲೋನಿ ಅಥವಾ ಜನತಾ ಪ್ಲಾಟ್ ಎಂದು. ಇಲ್ಲಿ ಹಲವಾರು ಗೆಸ್ಟ್ ಹೌಸ್‌ಗಳು, ರೆಸ್ಟೋರೆಂಟುಗಳು, ಕಿರಾಣಿ ಅಂಗಡಿಗಳು, ಪೆಟ್ಟಿಗೆ ಅಂಗಡಿಗಳು ಮುಂತಾದವುಗಳಿವೆ. ಈ ಪ್ರದೇಶದಲ್ಲಿ ವಾಸಿಸುತ್ತಿರುವವರಲ್ಲಿ ಬ್ರಾಹ್ಮಣ, ಲಿಂಗಾಯತ, ವೈಶ್ಯ, ದೇವಾಂಗ, ನಾಯಕ, ಬಾರಿಕ, ವಡ್ಡರು, ಮುಸ್ಲಿಂ, ಸಿಂಗ್, ಅಗಸರು, ಕ್ಷೌರಿಕರು ಮುಖ್ಯರು. ಹೆಚ್ಚಿನ ಸಂಖ್ಯೆಯಲ್ಲಿ ಬ್ರಾಹ್ಮಣರ ಮತ್ತು ಲಿಂಗಾಯತರ ಮನೆಗಳಿವೆ. ನಂತರದ ಸ್ಥಾನದಲ್ಲಿ ಬಾರಿಕರು, ಸಿಂಗ್, ದೇವಾಂಗ, ವಡ್ಡರು, ನಾಯಕ, ಅಗಸರು, ಕ್ಷೌರಿಕರು ಇದ್ದಾರೆ. ಹರಿಜನ ಮತ್ತು ಲಂಬಾಣಿ ಮನೆಗಳ ಸಂಖ್ಯೆ ತಲಾ ಎರಡು ಇವೆ. ಮುಖ್ಯ ಗೋಪುರದ ಪಕ್ಕದಲ್ಲಿ ಹಾದು ಹೋಗುವ ದಾರಿಯ ಎಡಬದಿಯಲ್ಲಿ ಮನ್ಮಥ ಕುಂಡ ನಂತರ ವಿದ್ಯಾರಣ್ಯ ಪೀಠಕ್ಕೆ ಹೋಗುವ ದಾರಿ ಬದಿಯಲ್ಲಿ ಮನೆಗಳಿವೆ. ಹಾಗೆಯೆ ಮುಂದುವರಿದರೆ ರೆಸ್ಟೋರೆಂಟುಗಳು, ಕಾಶ್ಮೀರಿ ವ್ಯಾಪಾರಿಗಳ ಅಂಗಡಿಗಳು, ನದಿಯ ದಡಕ್ಕೆ ಶೌಚಾಲಯದ ಕಟ್ಟಡ, ರಸ್ತೆಯಲ್ಲಿ ಪುನಃ ಮುಂದೆ ಸಾಗಿದರೆ ಎಡಭಾಗದಲ್ಲಿ ಕೊಟ್ಟೂರು ಸ್ವಾಮಿ ಮಠ, ಬಲಭಾಗಕ್ಕೆ ನದಿ ಎದುರಾಗುತ್ತವೆ. ನದಿ ದಾಟಲು ಇಂದು ಕೂಡ ಹಳೆಯ ಕಾಲದ ನಾಡದೋಣಿ ಬಳಕೆಯಾಗುತ್ತಿದೆ. ಇತ್ತೀಚೆಗೆ ನದಿ ದಾಟಲು ಒಂದು ತೂಗು ಸೇತುವೆ ಕೆಲಸದ ನಡೆದಿತ್ತು. ಯುನೆಸ್ಕೊದವರು ತೂಗು ಸೇತುವೆ ನಿರ್ಮಾಣ ಕಾರ್ಯವನ್ನು ವಿರೋಧಿಸಿದ ಕಾರಣ ಸೇತುವೆ ಕೆಲಸ ಅರ್ಧಕ್ಕೆ ನಿಂತಿದೆ. ಸೇತುವೆಗಾಗಿ ನಿರ್ಮಿಸಿದ ಬೃಹದಾಕಾರದ ಕಂಬಗಳು ಈಗಲು ಕಾಣಸಿಗುತ್ತವೆ. ರಸ್ತೆಯ ಕೊನೆಯಲ್ಲಿ ಸ್ನಾನಘಟ್ಟ ಪಕ್ಕದಲ್ಲಿ ರೆಸ್ಟೋರೆಂಟ್ ಹಾಗೂ ಎದುರಿಗೆ ಶಿವಾನಂದ ಯೋಗಾಶ್ರಮ ಇದೆ. ರಸ್ತೆ ಹಾಗೆಯೆ ಮುಂದುವರಿದು ಎಂ.ಪಿ.ಪ್ರಕಾಶ್ ನಗರಕ್ಕೆ ಹೋಗುತ್ತದೆ. ಮಧ್ಯದಲ್ಲಿ ಪಶ್ಚಿಮಕ್ಕೆ ಮ್ಯಾಂಗೊ ಟ್ರೀ ಹೆಸರಿನ ರೆಸ್ಟೋರೆಂಟು ಮತ್ತು ಗದ್ದೆಗಳಿಗೆ ಹೋಗುವ ಸೀಳುದಾರಿ ಸಿಗುತ್ತದೆ.

ಪ್ರಕಾಶ್ ನಗರ ಹಂಪೆ ಗ್ರಾಮದ ಪ್ರಮುಖ ಭಾಗವಾಗಿದೆ. 1992-93ರಲ್ಲಿ ತುಂಗಭದ್ರಾ ನದಿ ನೆರೆ ಹಾವಳಿಗೆ ತುತ್ತಾದಾಗ ಹಂಪೆ ಬಜಾರದ ಪೂರ್ವದ ಕೊನೆಯ ಮಂಟಪಗಳಲ್ಲಿ ವಾಸಿಸುತ್ತಿದ್ದ ಜನರು ತಮ್ಮ ಆಶ್ರಯವನ್ನು ಕಳೆದುಕೊಂಡರು. ಆ ಪ್ರದೇಶ ನೀರಿನಿಂದ ಆವೃತವಾದಾಗ ಅಲ್ಲಿನ

ಜನರನ್ನು ತಾತ್ಕಾಲಿಕವಾಗಿ ಈಗಿನ ವಾಹನಗಳ ಪಾರ್ಕಿಂಗ್ ಸ್ಥಳದಲ್ಲಿ ನಿರಾಶ್ರಿತ ಶಿಬಿರ ನಿರ್ಮಿಸಿ ಸ್ಥಳಾಂತರಿಸಲಾಯಿತು. ನಂತರ ಈ ಕುಟುಂಬಗಳಿಗೆ ಆಶ್ರಯ, ಇಂದಿರಾ ಆವಾಸ್ ಮುಂತಾದ ಯೋಜನೆಗಳಲ್ಲಿ ಮನೆಗಳನ್ನು ನಿರ್ಮಿಲಾಯಿತು. ಈ ಹೊಸ ಜಾಗಕ್ಕೆ ಸ್ಥಳಾಂತರಿಸಿ, ಆ ಪ್ರದೇಶಕ್ಕೆ ಪ್ರಕಾಶ್ ನಗರವೆಂದು ಹೆಸರಿಡಲಾಯಿತು. ಇಲ್ಲಿ ಒಟ್ಟು 142 ಮನೆಗಳಿವೆ. ಇಲ್ಲಿ ವಾಸಿಸುವ ಬಹುತೇಕ ಕುಟುಂಬಗಳು ನಾಯಕ, ವಡ್ಡರು, ಲಂಬಾಣಿ, ಮುಸ್ಲಿಂ, ಕಿಳ್ಯಾಕ್ಯಾತ, ಸಿಂಗ್, ಬಾರಿಕ ಹಾಗೂ ಕುರುಬರ ಜಾತಿಗಳಾಗಿವೆ. ಅವರ ಮುಖ್ಯ ಉದ್ಯೋಗ ಕೃಷಿ ಕೂಲಿ. ಆದರೂ ಇವರಲ್ಲಿ ಆಟೋ ಓಡಿಸುವವರು, ಬೀದಿಯಲ್ಲಿ ಹಣ್ಣು, ತರಕಾರಿ ಇತರ ವಸ್ತುಗಳನ್ನು ಮಾರುವವರು ಇದ್ದಾರೆ. ಕೆಲವರು ಅತಿಥಿಗೃಹಗಳಲ್ಲಿಯೂ ಕೂಲಿಗಳಾಗಿ ಕೆಲಸ ಮಾಡುತ್ತಿದ್ದಾರೆ. ಇಲ್ಲಿ ಒಂದು ಸರಕಾರಿ ಕಿರಿಯ ಪ್ರಾಥಮಿಕ ಶಾಲೆ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರ ಇವೆ. ಪ್ರಕಾಶ್‌ನಗರಕ್ಕೆ ಮುಖದ್ವಾರವೆಂದರೆ ಕಡ್ಡಿರಾಂಪುರ ರಸ್ತೆ. ಈ ರಸ್ತೆ ಸಾಸಿವೆಕಾಳು ಗಣಪತಿ ದೇವಸ್ಥಾನ ಹಿಂಬದಿಗಿದೆ. ಇದರ ಪಕ್ಕದಲ್ಲಿ ಹಂಪೆ ಪ್ರಕಾಶ್ ನಗರವೆಂಬ ದೊಡ್ಡದಾದ ಕಮಾನು ರೂಪದಲ್ಲಿ ಬೋರ್ಡ್ ಹಾಕಲಾಗಿದೆ. ಇದರೊಳಗಿಂದ ಹಾದು ಹೋದರೆ, ಬಲಕ್ಕೆ ಸ್ವಲ್ಪ ದೂರದಲ್ಲಿ ಆಶ್ರಯ ಮನೆ ಮತ್ತು ಗುಡಿಸಲುಗಳ ಸಮೂಹ ಕಾಣಸಿಗುತ್ತದೆ. ಇಲ್ಲಿ ಒಟ್ಟು 20 ಮನೆಗಳಿವೆ. ಇದಕ್ಕೆ ಕೃಷ್ಣಪುರವೆಂದು ಕರೆಯಲಾಗುತ್ತಿದೆ. ಈ ಮನೆಗಳಿಗೆ ತಾಗಿ ಕೊಂಡಂತೆ ದೇವಾಂಗ ಜನಾಂಗದ ಗಾಯಿತ್ರಿ ಪೀಠದ ಆಶ್ರಮಕ್ಕೆ ಹೋಗುವ ದಾರಿ ಇದೆ.

ಹಂಪೆ ಗ್ರಾಮದ ಸುತ್ತಮುತ್ತ ಬೆಟ್ಟಗುಡ್ಡಗಳಿವೆ. ತುಂಗಭದ್ರಾ ನದಿ ಪಶ್ಚಿಮದಿಂದ ಪೂರ್ವಕ್ಕೆ ಹರಿಯುತ್ತಿದೆ. ಊರಿನ ಬಹುತೇಕ ಭಾಗ ಅಳಿದುಳಿದ ಸ್ಮಾರಕಗಳಿಂದ ತುಂಬಿದೆ. ಗ್ರಾಮದ ಒಟ್ಟು ವಿಸ್ತೀರ್ಣ 343.30 ಹೆಕ್ಟೇರು. ಅದರಲ್ಲಿ ನೀರಾವರಿ ಕೃಷಿ ಭೂಮಿಯ ವಿಸ್ತೀರ್ಣ 354.20 ಎಕರೆ ಇದೆ.[12] ಕೃಷಿ ಹಿಡುವಳಿದಾರರಲ್ಲಿ ಹೆಚ್ಚಿನವರು ಗ್ರಾಮದ ಆಸುಪಾಸಿನ ಗ್ರಾಮಗಳಾದ ಕಮಲಾಪುರ, ಕಡ್ಡಿರಾಂಪುರ, ಮಲಪನಗುಡಿಯವರು. ಕ್ಷೇತ್ರಕಾರ್ಯದ ಪ್ರಾಥಮಿಕ ಅಂಕಿ-ಅಂಶಗಳ ಪ್ರಕಾರ ಗ್ರಾಮದ ಒಟ್ಟು ಜನಸಂಖ್ಯೆ 2188. ಕುಟುಂಬಗಳ ಸಂಖ್ಯೆ 485. ಮನೆಗಳ ಸಂಖ್ಯೆ 557. ಆದರೆ 2001ರ ಜನಗಣತಿಯ ಪ್ರಕಾರ ಗ್ರಾಮದ ಜನಸಂಖ್ಯೆ 2172, ಕುಟುಂಬಗಳ ಸಂಖ್ಯೆ 460, ಮನೆಗಳ ಸಂಖ್ಯೆ ಹಂಪೆಯ ಗ್ರಾಮಪಂಚಾಯತಿಯಲ್ಲಿರುವ ಬೇಡಿಕೆ ನೋಂದಣಿ ಪುಸ್ತಕದ ಪ್ರಕಾರ 436 ಇವೆ.[13] ಹಂಪೆಯ ಮೂಲ ನಿವಾಸಿಗಳೆಂದು ಹೇಳಿಕೊಳ್ಳುವ ಕುಟುಂಬಗಳು ಬೆರಳಣಿಕೆಯಷ್ಟು ಮಾತ್ರ. ಇಲ್ಲಿರುವ ಬಹುತೇಕ ಕುಟುಂಬಗಳು ವಲಸೆ ಬಂದವು. ಇಲ್ಲಿಗೆ ಕೆಲಸ ಹುಡುಕಿಕೊಂಡು ಬಂದ ಕುಟುಂಬಗಳು ಹೆಚ್ಚು ಇವೆ. ಈ ಕುಟುಂಬಗಳು ಕರ್ನಾಟಕದ ವಿವಿಧ ಜಿಲ್ಲೆಗಳಿಂದ ಮತ್ತು ಹೊರರಾಜ್ಯಗಳಿಂದ ಹಾಗೂ ಪಕ್ಕದ ಹಳ್ಳಿಗಳಿಂದ ಬಂದಿವೆ. ಹಂಪೆಯಲ್ಲಿ ಸುಮಾರು 24 ಜಾತಿಯ ಜನರಿದ್ದಾರೆ.(ಕೋಷ್ಟಕ-2)

[illegible]

[illegible]

ಇಲ್ಲಿಬ್ರಾಹ್ಮಣರ ಕುಟುಂಬಗಳು 40 ಇವೆ. ಬಹುತೇಕ ಬ್ರಾಹ್ಮಣ ಕುಟುಂಬಗಳು ಆಂಧ್ರ ಪ್ರದೇಶದಿಂದ ವಲಸೆ ಬಂದವು. ಇವರಲ್ಲಿ ಎಂಟರಿಂದ ಹತ್ತು ಕುಟುಂಬಗಳು ದೇವಸ್ಥಾನದ ಅರ್ಚಕರಾಗಿದ್ದಾರೆ. ಬ್ರಾಹ್ಮಣ ಕುಟುಂಬಗಳಲ್ಲಿ ಕೆಲವು ಅತಿಥಿಗೃಹ, ರೆಸ್ಟೋರೆಂಟು, ಕಿರಾಣಿ ಅಂಗಡಿ, ಹೋಟೆಲ್ ವ್ಯವಹಾರಗಳಲ್ಲಿ ತೊಡಗಿಸಿಕೊಂಡಿವೆ. ಹಾಗೂ ವಿದೇಶಿ ಹಣದ ವಿನಿಮಯ 3, ಪ್ರವಾಸಿಗರ ಮಳಿಗೆಗಳು ಮತ್ತು ಪ್ರಯಾಣದ ಟಿಕೆಟ್ ಕಾಯ್ದಿರಿಸುವುದು 3, ಎಸ್.ಟಿ.ಡಿ. ಬೂತ್ 3, ಪೆಟ್ಟಿಗೆ ಅಂಗಡಿ 3, ಕಿರಾಣಿ ಅಂಗಡಿ 1 ಹಾಗೂ ಮೂರು ಕುಟುಂಬಗಳು ಕೃಷಿಯಲ್ಲಿ ತೊಡಗಿಸಿ ಕೊಂಡಿವೆ(ಕೋಷ್ಟಕ-29). ಸುಮಾರು 4-5 ಕುಟುಂಬಗಳು ಹಂಪೆಯಲ್ಲಿ ಜರಗುವ ಮದುವೆ-ಮುಂಜಿ ಕಾರ್ಯಕ್ರಮಗಳನ್ನು ಮಾಡಲು ಬರುವವರಿಗೆ ಊಟಗಳನ್ನು ಒದಗಿಸಿಕೊಡುತ್ತಿವೆ. ದೂರದ ಸ್ಥಳದಿಂದ ಬಂದವರಿಗೆ ಅಥವಾ ಗುಪ್ತ ಮದುವೆ ಆಗುವವರಿಗೆ ಈ ಕುಟುಂಬಗಳು ಊಟದ ವ್ಯವಸ್ಥೆ ಮಾಡುತ್ತಿವೆ. ಗುಪ್ತ ಮದುವೆ ಅಂದರೆ ಸಾಮಾನ್ಯವಾಗಿ ಗಂಡಸರು, ತಮ್ಮ ಹೆಂಡತಿಯನ್ನು ಕಾರಣಾಂತರಗಳಿಂದ ಬಿಟ್ಟು, ನ್ಯಾಯಸಮ್ಮತವಾಗಿ ಗಂಡ ಹೆಂಡತಿ ಬೇರೆಯಾಗದೆ, ಮರು ಮದುವೆಯಾಗುವುದು. ಇವು ಹಂಪೆಯಲ್ಲಿ ಜರಗುತ್ತಿರುತ್ತವೆ. ಮದುವೆ ಮಾಡಿಕೊಳ್ಳುವವರಿಗೆ ಮತ್ತು ಮಾಡುವವರಿಗೆ ಕಾಲಾವಕಾಶ ಕಡಿಮೆ ಇದ್ದು, ಅಡಿಗೆ ತಯಾರಿಸಿ ಊಟ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ. ಏಕೆಂದರೆ ಮೊದಲ ಹೆಂಡತಿಗೆ ಮತ್ತು ಮನೆಯವರಿಗೂ ಗೊತ್ತಾಗದಂತೆ ಕೆಲವೆ ಗಂಟೆಗಳಲ್ಲಿ ಮದುವೆ ಕಾರ್ಯ ಮುಗಿಸಬೇಕಾಗಿರುತ್ತದೆ. ಮೊದಲ ಹೆಂಡತಿ ಮನೆಯವರಿಗೆ ಗೊತ್ತಾದರೆ ಮದುವೆ ನಿಲ್ಲುತ್ತದೆ ಎನ್ನುವ ಭಯವೂ ಇದೆ. ಬೇಕಾಗುವ ಊಟದ ಸಂಖ್ಯೆಗಳನ್ನು ಮದುವೆ ಪಾರ್ಟಿಗಳು ಬ್ರಾಹ್ಮಣರ ಕುಟುಂಬಗಳಿಗೆ ತಿಳಿಸುತ್ತಾರೆ. ಊಟದ ಐಟಮ್‌ಗಳ ಮೇಲೆ ಊಟದ ದರವನ್ನು ನಿರ್ಧರಿಸಿ ಊಟಗಳನ್ನು ಸರಬರಾಜು ಮಾಡುತ್ತಾರೆ.

ಇದೇ ರೀತಿ ದೂರದ ಸ್ಥಳಗಳಿಂದ ಬಂದ ಯಾತ್ರಾರ್ಥಿಗಳಿಗೂ ಈ ಬ್ರಾಹ್ಮಣ ಕುಟುಂಬಗಳು ಊಟದ ವ್ಯವಸ್ಥೆ ಮಾಡುತ್ತವೆ. ಸಾಮಾನ್ಯವಾಗಿ ಊಟದ ದರ ರೂ. 40 ರಿಂದ ರೂ.50 ನಿಗದಿ ಮಾಡಲಾಗಿದೆ. ಇದೊಂದು ಹೋಟೆಲ್ ಮತ್ತು ರೆಸ್ಟೋರೆಂಟ್‌ಗಿಂತ ಭಿನ್ನವಾದ ವ್ಯಾಪಾರವಾಗಿದೆ. ಇಲ್ಲಿ ಹೋಟೆಲು ಅಥವಾ ಗೆಸ್ಟ್‌ಹೌಸ್ ಎನ್ನುವ ಬೋರ್ಡ್ ಇಲ್ಲ. ಇವರು ತಮ್ಮ ಮನೆಗಳಲ್ಲಿರುವ ಸವಲತ್ತುಗಳನ್ನು ಬಳಸಿಕೊಂಡು ಈ ವ್ಯಾಪಾರ ನಡೆಸುತ್ತಿದ್ದಾರೆ. ಇದೊಂದು ಕಡಿಮೆ ಬಂಡವಾಳದಲ್ಲಿ ಅಧಿಕ ಲಾಭ ತರುವ ಒಂದು ಉತ್ತಮ ವ್ಯಾಪಾರ. ಇದೇ ರೀತಿ ನಡೆಯುವ ಮತ್ತೊಂದು ವ್ಯವಹಾರವೆಂದರೆ ಕರ್ಮ ಮಾಡುವುದು. ಕರ್ಮ ಅಥವಾ ಸತ್ತವರ ತಿಥಿಯನ್ನು ಸಾಮಾನ್ಯವಾಗಿ ವೈಶ್ಯರು ಮತ್ತು ಬ್ರಾಹ್ಮಣರು ಮಾಡುತ್ತಾರೆ. ಈ ಕಸುಬಿನಲ್ಲಿಸುಮಾರು 8 ಬ್ರಾಹ್ಮಣಕುಟುಂಬಗಳು ತೊಡಗಿಸಿಕೊಂಡಿವೆ. ತಮ್ಮ ಪಿತೃಗಳಿಗೆ ಅನ್ನ ಸಂತರ್ಪಣೆ ಯನ್ನು ವರ್ಷಕ್ಕೆ ಒಂದು ಸಾರಿ ಅಥವಾ ಮೂರು ವರ್ಷಗಳಿಗೊಂದು ಸಾರಿ ಅಥವಾ ಅವರವರ ಅನುಕೂಲಕ್ಕೆ ತಕ್ಕಂತೆ ಮಾಡುತ್ತಾರೆ. ಹಂಪೆ

ಪುಣ್ಯಸ್ಥಳ, ದಕ್ಷಿಣ ಕಾಶಿ ಎನ್ನುವ ನಂಬಿಕೆ ಇದೆ. ಆಂಧ್ರಪ್ರದೇಶ, ಕರ್ನಾಟಕ ರಾಜ್ಯಗಳ ದೂರದ ಜಿಲ್ಲೆಗಳಿಂದ ಮತ್ತು ಹಂಪೆಯ ಸುತ್ತಮುತ್ತಲ ಗ್ರಾಮಗಳಿಂದ ಕರ್ಮ ಮಾಡಿಸಲು ಜನ ಇಲ್ಲಿಗೆ ಬರುತ್ತಾರೆ. ವಿಶೇಷವಾಗಿ ಪಕ್ಷಮಾಸದಲ್ಲಿ (ಜನವರಿ-ಫೆಬ್ರವರಿ) ಹೆಚ್ಚು ಜನ ಬರುತ್ತಾರೆ. ಬರುವವರಲ್ಲಿ ಹೆಚ್ಚಿನವರು ವೈಶ್ಯರಾಗಿದ್ದಾರೆ. ಈ ಅವಧಿಯಲ್ಲಿ ಕರ್ಮಾಚರಣೆ ನಡೆಸುವ ಬ್ರಾಹ್ಮಣ ಕುಟುಂಬಗಳಿಗೆ 15 ದಿನಗಳ ಕಾಲ ಬಿಡುವಿಲ್ಲದ ವ್ಯಾಪಾರ ನಡೆಯುತ್ತದೆ. ಪ್ರತಿನಿತ್ಯ ಸರಾಸರಿ 30 ರಿಂದ 40 ಗುಂಪುಗಳು ಕರ್ಮ ಮಾಡಿಸಲಿಕ್ಕೆ ಬರುತ್ತವೆ. ಕನಿಷ್ಠ ಒಂದು ಗುಂಪಿನಲ್ಲಿ 5 ರಿಂದ 10 ಜನ ಇರುತ್ತಾರೆ. ಒಂದು ಕರ್ಮಾಚರಣೆ ನಡೆಸಿ ಕೊಡಲು ಕನಿಷ್ಟ ರೂ.500 ರಿಂದ 1000ವರೆಗೆ ಹಣ ಪಡೆಯಲಾಗುತ್ತದೆ. ಕರ್ಮ ಮಾಡಿಸುವವರು ತಮಗೆ ಬೇಕಾಗುವ ಊಟವನ್ನು ತಾವೆ ತಯಾರಿಸಿಕೊಳ್ಳುವುದಿಲ್ಲ. ಊಟ ತಯಾರಿಸಲು ಕರ್ಮಾಚರಣೆ ನಡೆಸಿಕೊಡುವ ಬ್ರಾಹ್ಮಣ ಕುಟುಂಬದವರಿಗೆ ಹೇಳಲಾಗುತ್ತದೆ. ಬ್ರಾಹ್ಮಣರು ಒಂದು ಊಟಕ್ಕೆ ಕನಿಷ್ಟ ರೂ.30 ರಿಂದ 40 ನಿಗದಿಮಾಡುತ್ತಾರೆ. ಊಟದ ಪದಾರ್ಥಗಳು ಹೆಚ್ಚಿದಂತೆ ಊಟದ ದರ ಕೂಡ ಹೆಚ್ಚುತ್ತದೆ. ಆಗ ಒಂದು ಊಟದ ದರ ರೂ.50 ರಿಂದ 100ವರೆಗೆ ಇರುತ್ತದೆ. ಹಂಪೆಯಿಂದ 10-12 ಕಿ.ಮೀ. ಅಂತರದಲ್ಲಿರುವವರು, ಕರ್ಮ ಮಾಡಿಸಲು ಬಂದರೆ ಊಟವನ್ನು ತಾವು ತಯಾರಿಸಿಕೊಳ್ಳುತ್ತಾರೆ. ಕರ್ಮಾಚರಣೆ ನಡೆಸುವ ಕುಟುಂಬಗಳು ಪಕ್ಷ ಮಾಸದಲ್ಲಿ ದಿನವೊಂದಕ್ಕೆ ರೂ.5000-6000 ಹಣ ಸಂಪಾದಿಸುತ್ತವೆ. ವರ್ಷದ ಇತರ ದಿನಗಳಲ್ಲಿ ಕರ್ಮ ಮಾಡಿಸುವವರು ವಿರಳ. ಆದರೂ ಪ್ರತಿಯೊಂದು ಕುಟುಂಬ ದಿನನಿತ್ಯ ಕನಿಷ್ಟ 1-2 ಕರ್ಮಾಚರಣೆ ನಡೆಸುವ ಅವಕಾಶ ಪಡೆದಿರುತ್ತದೆ. ಪ್ರವಾಸಿಗರ ಸಂಖ್ಯೆ ಕಡಿಮೆಯಾದರೂ ಕರ್ಮ ಮಾಡಿಸುವವರ ಸಂಖ್ಯೆ ಕಡಿಮೆ ಇರುವುದಿಲ್ಲ.

ಬ್ರಾಹ್ಮಣ ಕುಟುಂಬಗಳಲ್ಲಿ ಎಲ್ಲರೂ ಶಿಕ್ಷಿತರಿದ್ದಾರೆ. ಒಬ್ಬ ಸ್ನಾತಕೋತ್ತರ ಪದವಿ ಪಡೆದ ಯುವಕ ಪ್ರವಾಸೋದ್ಯಮದ ಮಾರ್ಗದರ್ಶಕನಾಗಿ ಕೆಲಸ ಮಾಡುತ್ತಿರುವುದು ಕಂಡುಬರುತ್ತದೆ. ಸರಕಾರಿ ನೌಕರಿ ಮಾಡುವವರು ಯಾರೂ ಇಲ್ಲ. ಹಂಪೆಯಲ್ಲಿ ನಡೆಯುವ ಧಾರ್ಮಿಕ ಚಟುವಟಿಕೆ, ಸಮಾರಂಭಗಳಾದ ರಥೋತ್ಸವ, ಫಲಪೂಜೋತ್ಸವ, ದೇವಸ್ಥಾನಪೂಜೆ ಮೊದಲಾದವುಗಳನ್ನು ಬ್ರಾಹ್ಮಣರೆ ಮಾಡುತ್ತಾರೆ. ಪುರೋಹಿತರಾಗಿ ವಿವಾಹಗಳನ್ನು ಜರುಗಿಸಿ ಕೊಡುತ್ತಾರೆ. ಬ್ರಾಹ್ಮಣ ಕುಟುಂಬಗಳ ಮದುವೆ ಮತ್ತಿತರ ಆಚರಣೆ, ಸಮಾರಂಭಗಳಲ್ಲಿ ಗ್ರಾಮದ ಉಳಿದ ಜಾತಿಯವರು ಕೂಡ ಭಾಗವಹಿಸುತ್ತಾರೆ. ಇತರ ಹಳ್ಳಿಗಳಲ್ಲಿರುವಂತೆ ಮೇಲ್ನೋಟಕ್ಕೆ ಅಸ್ಪೃಶ್ಯತೆಯ ಆಚರಣೆ ಇಲ್ಲಿ ಕಾಣುವುದಿಲ್ಲ. ಬ್ರಾಹ್ಮಣರ ಮನೆಗಳಿಗೆ ಯಾವ ಜಾತಿಯವನಾದರೂ ಪ್ರವೇಶ ಪಡೆಯಬಹುದಾಗಿದೆ. ಅಲ್ಲದೆ ಅವರು ಉಪಹಾರ, ಟೀ, ಕಾಫಿ ಕೊಟ್ಟರೆ ಅದನ್ನು ಸೇವಿಸಿ ತಟ್ಟೆ,ಲೋಟ ತೊಳೆದಿಡುವ ಪದ್ಧತಿ ಇಲ್ಲಿಲ್ಲ. ಇವರ ಅಂತ್ಯಕ್ರಿಯೆಯಲ್ಲಿ ಸ್ವಜಾತಿಯವರು ಮಾತ್ರ ಭಾಗವಹಿಸುತ್ತಾರೆ. ಇವರು ಅಂತ್ಯಕ್ರಿಯೆಯನ್ನು ಮುಖ್ಯ ಗೋಪುರದ ಪೂರ್ವಕ್ಕಿರುವ ಕೋದಂಡರಾಮ

ದೇವಸ್ಥಾನಕ್ಕೆ ಹೋಗುವ ರಸ್ತೆಯ ಎಡಬದಿಯಲ್ಲಿ ಕಲ್ಲುಬಂಡೆಗಳ ಮೇಲೆ ಸುಡುವ ಮೂಲಕ ನೇರವೇರಿಸುತ್ತಾರೆ. ಉಳಿದ ಜಾತಿಗಳು ಸಹ ಇವರ ಹಾಗೆ ಅಂತ್ಯಕ್ರಿಯೆಯನ್ನು ಸುಡುವುದರ ಮೂಲಕ ಮಾಡುವ ಇಲ್ಲಿಯೆ ನೇರವೇರಿಸುತ್ತಾರೆ. ಹಂಪೆಯ ರಾಜಕೀಯದಲ್ಲಿ ಬ್ರಾಹ್ಮಣರ ಕುಟುಂಬಗಳು ತಮ್ಮ ಅಣತಿಯಂತೆ ಗ್ರಾಮಪಂಚಾಯತಿ ಕಾರ್ಯಗಳು ನಡೆಯಬೇಕೆಂದು ಪ್ರಯತ್ನಿಸುತ್ತವೆ. ಆದರೆ ಅವರ ಸಂಖ್ಯೆ ಇದಕ್ಕೆ ಅವಕಾಶ ಕೊಡುತ್ತಿಲ್ಲ. ಗ್ರಾಮ ಪಂಚಾಯತಿಯ ಸದಸ್ಯರಲ್ಲಿ ಬ್ರಾಹ್ಮಣ ಸದಸ್ಯರಿಲ್ಲ. ಅಧ್ಯಕ್ಷರಾಗಿರುವವರು ಮೇಲ್ವರ್ಗದ ಲಿಂಗಾಯಿತ/ಜಂಗಮ ಜಾತಿಗೆ ಸೇರಿದವರು. ಉಳಿದ ಮೂವರು ಸದಸ್ಯರು ಪರಿಶಿಷ್ಟ ಜಾತಿ/ಪಂಗಡಕ್ಕೆ ಸೇರಿದವರು. ಹಂಪೆ ಗ್ರಾಮದ ಗ್ರಾಮಪಂಚಾಯತಿ ಸದಸ್ಯರ ಒಟ್ಟು ಸಂಖ್ಯೆ ಒಂಬತ್ತು. ಇದರಲ್ಲಿ ಕಡ್ಡಿರಾಂಪುರದವರು ಮೂವರು, ಡಾಣಾಪುರ ಮತ್ತು ನರಸಾಪುರ ಒಬ್ಬೊಬ್ಬ ಸದ್ಯಸರಿದ್ದಾರೆ. ಹೊರಗಿನ ಸದಸ್ಯರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಅವರ ಮೂಲಕ ಗ್ರಾಮಪಂಚಾಯತಿ ಆಡಳಿತವನ್ನು ತಮ್ಮಲ್ಲಿ ಉಳಿಸಿಕೊಳ್ಳುವ ಪ್ರಯತ್ನ ನಡೆದಿದೆ. ಒಮ್ಮೆ ಗ್ರಾಮಪಂಚಾಯತಿಯು ವಾಹನಗಳ ಪ್ರವೇಶಕ್ಕಾಗಿ ಟೆಂಡರ್ ಕರೆದಿತ್ತು. ಆ ಟೆಂಡರಿನ ಮೊತ್ತ ಹೆಚ್ಚಾಗದಂತೆ ಬ್ರಾಹ್ಮಣರ ಕುಟುಂಬ ನೋಡಿಕೊಂಡಿತು. ಇದರಿಂದ ಟೆಂಡರ್ ಮೊತ್ತ ಹಿಂದಿನ ವರ್ಷಕ್ಕಿಂತ ಅರ್ಧದಷ್ಟು ಕಡಿಮೆಯಾಯಿತು. ಇದನ್ನು ಅರಿತ ಹಂಪಿಯ ಸದಸ್ಯರು ಮತ್ತು ಅಧ್ಯಕ್ಷರು ವಿರೋಧಿಸಿದರು. ಜಿಲ್ಲಾ ಮಟ್ಟಕ್ಕೆ ದೂರು ಕೊಟ್ಟು ಟೆಂಡರ್ ರದ್ದು ಪಡಿಸಿದರು. ಮತ್ತೊಮ್ಮೆ ಟೆಂಡರ್ ಕರೆದು ಕಳೆದ ವರ್ಷದ ಟೆಂಡರ್ ಮೊತ್ತಕ್ಕಿಂತ ಎರಡುಪಟ್ಟು ಹೆಚ್ಚಿನ ಮೊತ್ತಕ್ಕೆ ನೀಡಲಾಯಿತು. ಈ ಘಟನೆಯಿಂದ ಹಂಪೆಯಲ್ಲಿ ಬ್ರಾಹ್ಮಣ ಮತ್ತು ಲಿಂಗಾಯತರ ನಡುವೆ ಸಣ್ಣಪ್ರಮಾಣದಲ್ಲಿ ಜಗಳಗಳಾದವು. ಇದಲ್ಲದೆ ಅನೇಕ ತರಹದಲ್ಲಿ ರಾಜಕೀಯ ಚಟುವಟಿಕೆಗಳಲ್ಲಿ ಭಾಗವಹಿಸುತ್ತ ಸಕ್ರಿಯವಾಗಿರಲು ಬ್ರಾಹ್ಮಣ ಕುಟುಂಬಗಳು ಯತ್ನಿಸುತ್ತಿವೆ. ಹಂಪೆಯ ಗ್ರಾಮದ ಸ್ಥಳಾಂತರ ವಿರೋಧಿಸಲು ಹಾಗೂ ಹಂಪೆಯಲ್ಲಿ ಯೋಜನೆಗಳನ್ನು ಜಾರಿಗೊಳಿಸುವಾಗ ಸ್ಥಳೀಯರನ್ನು ಕಡೆಗಣಿಸದಿರಲು ಗ್ರಾಮಸ್ಥರ ಸಂಘಟನೆ ನಡೆದಿದೆ. ಆ ಸಂಘಟನೆಯ ನೇತೃತ್ವವನ್ನು ಬ್ರಾಹ್ಮಣರೆ ವಹಿಸಿದ್ದಾರೆ. ಲಿಂಗಾಯತರು ದ್ವಿತೀಯ ಸ್ಥಾನದಲ್ಲಿ ಇದ್ದಾರೆ. ಬ್ರಾಹ್ಮಣರು ಹಂಪೆ ಗ್ರಾಮದ ಸಾಮಾಜಿಕ ಮತ್ತು ರಾಜಕೀಯ ಶ್ರೇಣಿಯಲ್ಲಿ ಮುಂಚೂಣಿಯಲ್ಲಿದ್ದಾರೆ.

ಲಿಂಗಾಯತ ಕುಟುಂಬಗಳು 65 ಇವೆ. ಇವುಗಳಲ್ಲಿ ಜಂಗಮರ ಎರಡು ಕುಟುಂಬಗಳನ್ನು ಸೇರಿವೆ. ವಿರೂಪಾಕ್ಷೇಶ್ವರ ಬಜಾರದಲ್ಲಿರುವ ಬಹುತೇಕ ಹೋಟೆಲ್, ರೆಸ್ಟೋರೆಂಟು, ಅಂಗಡಿ ಮುಂಗಟ್ಟುಗಳು, ಎಸ್‌ಟಿಡಿ ಬೂತ್‌ಗಳು, ಇಂಟರ್‌ನೆಟ್, ಕೂಲ್‌ಡ್ರಿಂಕ್ಸ್ ಮೊದಲಾದ ವ್ಯಾಪಾರ ಮಳಿಗೆಗಳು ಈ ಜಾತಿಯವರಿಗೆ ಸೇರಿದ್ದಾಗಿವೆ. ಈ ಕುಟುಂಬಗಳು ಅಕ್ಕಪಕ್ಕದ ಹಳ್ಳಿಗಳಿಂದ, ಹಾವೇರಿ, ಗದಗ ಜಿಲ್ಲೆಗಳಿಂದ ವಲಸೆ ಬಂದವರಾಗಿದ್ದಾರೆ. ಇವರಲ್ಲಿ 25 ಕುಟುಂಬಗಳು ಜಮೀನು

[illegible]

ಹೊಂದಿರುವವರಾದರೂ ಸ್ವತಃ ಕೃಷಿ ಮಾಡುವವರ ಸಂಖ್ಯೆ ಕಡಿಮೆಯಿದೆ. ಇವರು ಬೇರೆ ಜಾತಿಗಳ ಜನರಿಗೆ ಭೂಮಿಯನ್ನು ಗೇಣಿಗೆ ನೀಡಿದ್ದಾರೆ. ಹೆಚ್ಚಿನ ಕುಟುಂಬಗಳು ಪ್ರವಾಸೋದ್ಯಮ ಚಟುವಟಿಕೆಗಳಿಗೆ ಪೂರಕವಾದ ಕಸಬುಗಳಲ್ಲಿ ನಿರತವಾಗಿವೆ. 14 ಕುಟುಂಬಗಳು ಅತಿಥಿಗೃಹಗಳನ್ನು ಹೊಂದಿದ್ದರೆ, 7 ಕುಟುಂಬಗಳು ರೆಸ್ಟೋರೆಂಟುಗಳನ್ನು, 2 ಕಿರಾಣಿ ಅಂಗಡಿಯನ್ನು, 10 ಹೋಟೆಲ್‌ಗಳನ್ನು, 4 ಎಸ್.ಟಿ.ಡಿಬೂತ್, ಇಂಟರ್‌ನೆಟ್ ಹಾಗು ಕೂಲ್‌ಡ್ರಿಂಕ್ಸಗಳ ಅಂಗಡಿಯನ್ನು, 2 ಹಣದ ವಿನಿಮಯ ಮತ್ತು ಟ್ರಾವೆಲ್ಸ್‌ಶಾಪ್‌ಗಳನ್ನು ಮತ್ತು 5 ಕುಟುಂಬಗಳು ತೆಂಗಿನಕಾಯಿ ವ್ಯಾಪಾರವನ್ನು ಮಾಡುತ್ತಿದ್ದಾರೆ. 2 ಕುಟುಂಬಗಳಿಗೆ ಪೆಟ್ಟಿಗೆ ಅಂಗಡಿಯೆ ಆದಾಯದ ಮೂಲವಾಗಿದೆ. ಅತಿಥಿಗೃಹ, ರೆಸ್ಟೋರೆಂಟ್, ಕಿರಾಣಿ ಅಂಗಡಿ, ಹೋಟೆಲ್, ಪುಸ್ತಕ ಅಂಗಡಿ, ಇಂಟರ್‌ನೆಟ್, ಹಣದ ವಿನಿಮಯ ಇತ್ಯಾದಿ ವ್ಯವಹಾರದಲ್ಲಿ ತೊಡಗಿಸಿಕೊಂಡವರ ಆರ್ಥಿಕ ಸ್ಥಿತಿ ಉತ್ತಮವಾಗಿದೆ. ಕಾಯಿ ಮಾರುವವರು, ಪೆಟ್ಟಿಗೆ ಅಂಗಡಿ ಹಾಗೂ ಕೃಷಿಯಲ್ಲಿ ನಿರತರಾದವರ ಆರ್ಥಿಕ ಸ್ಥಿತಿ ಸಾಧಾರಣವಾಗಿದೆ (ಕೋಷ್ಟಕ-29).

ಲಿಂಗಾಯತರ ಜನಸಂಖ್ಯೆ 295. ಇದರಲ್ಲಿ ಶೇ 68 ರಷ್ಟು ಮಂದಿ ವಿದ್ಯಾವಂತರಿದ್ದಾರೆ.(ಕೋಷ್ಟಕ-1) ಕಾಲೇಜು ಶಿಕ್ಷಣವನ್ನು ಪಡೆದವರ ಸಂಖ್ಯೆ 36. ಯಾರೂ ಸರಕಾರಿ ಸೇವೆಗೆ ಸೇರಿ ನೌಕರಿ ಮಾಡುತ್ತಿಲ್ಲ. 5 ಜನ ಪ್ರವಾಸಿ ಮಾರ್ಗದರ್ಶಿಗಳಾಗಿರುವುದನ್ನು ಬಿಟ್ಟರೆ ಉಳಿದವರೆಲ್ಲಾ ಸ್ವಂತ ಉದ್ಯೋಗದಲ್ಲಿ ತೊಡಗಿಕೊಂಡಿದ್ದಾರೆ. ಶೈವಮತಕ್ಕೆ ಸೇರಿದ ಹಂಪೆಯ ವಿರೂಪಾಕ್ಷೇಶ್ವರ ದೇವಾಲಯದಲ್ಲಿ ಶೈವರಾದ ಲಿಂಗಾಯತರೆ ಪೂಜಾರಿಗಳಾಗಿರಬೇಕಾಗಿತ್ತು. ಉಳಿದ ಗ್ರಾಮಗಳಲ್ಲಿ ಶೈವ ಮತದ ಈಶ್ವರನ ಲಿಂಗವನ್ನು ಲಿಂಗಾಯತ ಜಂಗಮರು ಪೂಜಿಸುವುದನ್ನು ಕಾಣುತ್ತೇವೆ. ಆದರೆ ಇಲ್ಲಿ ಬ್ರಾಹ್ಮಣರು ಪೂಜೆ ನಡೆಸುತ್ತಾರೆ. ಹಂಪೆಯ ಹೊರ ವಲಯದಲ್ಲಿರುವ ಉದ್ದಾನ ವೀರಭದ್ರ ಮೂರ್ತಿಯನ್ನು ಜಂಗಮರು ಪೂಜಿಸುವುದನ್ನು ಬಿಟ್ಟರೆ ಉಳಿದೆಲ್ಲ ಕಡೆ ಬ್ರಾಹ್ಮಣರೆ ಪೂಜಾರಿಗಳಾಗಿದ್ದಾರೆ. ಹಂಪೆಯಲ್ಲಿ ನಡೆಯುವ ಬಹುತೇಕ ಧಾರ್ಮಿಕ ಕಾರ್ಯಕ್ರಮಗಳು ಬ್ರಾಹ್ಮಣರ ಮುಂದಾಳತ್ವದಲ್ಲಿ ನಡೆಯುತ್ತವೆ. ಅವುಗಳಲ್ಲಿ ಲಿಂಗಾಯತರ ಪಾತ್ರಗೌಣವೆಂಬುದು ಕಂಡು ಬರುತ್ತದೆ. ಈ ಕೋಮಿನವರು ಎಲ್ಲ ಹಿಂದೂ ಹಬ್ಬ, ಉತ್ಸವ, ಆಚರಣೆಗಳನ್ನು ಚಾಚೂ ತಪ್ಪದೆ ಮಾಡಿಕೊಂಡು ಬರುತ್ತಿದ್ದಾರೆ. ಮನೆಯಲ್ಲಿ ಜರುಗಬಹುದಾದ ಮದುವೆ ಹಾಗೂ ಇತರ ಸಾಂಪ್ರದಾಯಿಕ ಆಚರಣೆಗಳನ್ನು ವ್ಯಾಪಾರ ಕಡಿಮೆ ಇರುವ ಏಪ್ರಿಲ್ - ಅಕ್ಟೋಬರ್ ತಿಂಗಳುಗಳಲ್ಲಿ ಮಾಡಿ ಮುಗಿಸುತ್ತಾರೆ. ಇವರ ಮದುವೆ ಮತ್ತಿತರ ಆಚರಣೆ, ಸಮಾರಂಭ, ಕಾರ್ಯಕ್ರಮಗಳಿಗೆ ಎಲ್ಲ ಜಾತಿಯ ಜನ ಬರುತ್ತಾರೆ. ಬೇರೆ ಜಾತಿಯ ಸ್ನೇಹಿತರು, ಪರಿಚಯ ಇರುವವರು ಮುಂತಾದವರನ್ನು ಜಾತಿಬೇಧವಿಲ್ಲದೆ ಮನೆಯೊಳಕ್ಕೆ ಸೇರಿಸಿಕೊಳ್ಳುತ್ತಾರೆ. ಊಟ ಉಪಚಾರದಲ್ಲಿ ಭೇದಭಾವ

[illegible]

ತೋರಿಸುವುದಿಲ್ಲ. ಎಲ್ಲರನ್ನು ಸಮಾನ ಮನೋಭಾವದಿಂದ ನೋಡುತ್ತಾರೆ. ಹಾಗೆಂದು ಸ್ಥಳೀಯ ಹರಿಜನರು ಧಾರಳವಾಗಿ ಇವರ ಮನೆಯೊಳಗೆ ಪ್ರವೇಶ ಪಡೆಯುತ್ತಾರೆ ಎನ್ನಲಾಗುವುದಿಲ್ಲ. ಇವರ ವಿವಾಹಗಳು ಇತ್ತೀಚಿನ ದಿನಗಳಲ್ಲಿ ಛತ್ರಗಳಲ್ಲಿ ಹೆಚ್ಚು ಜರುಗುತ್ತಿವೆ. ಲಿಂಗಾಯತರ ಅಂತ್ಯಕ್ರಿಯೆಯಲ್ಲಿ ಇತರ ಜನಾಂಗದವರು ಭಾಗವಹಿಸುತ್ತಾರೆ. ಇವರು ಅಂತ್ಯಕ್ರಿಯೆ ನಡೆಸಲು ತಮ್ಮದೆ ಸ್ಥಳ ಹೊಂದಿದ್ದಾರೆ. ಇದು ಹಂಪೆಯ ಮುಖ್ಯರಸ್ತೆಯ ಪೂರ್ವ ಭಾಗದಲ್ಲಿದೆ. ಪ್ರತಿ ಕುಟುಂಬ ಊರಿನ ಇತರರೊಂದಿಗೆ ಇಟ್ಟುಕೊಂಡಿರುವ ಸಂಬಂಧದ ಮೇಲೆ ಅವಲಂಬನೆಯಾಗಿರುತ್ತದೆ. ಹಿಂದಿನಿಂದಲೂ ಲಿಂಗಾಯತರು ಸ್ಥಳೀಯ ರಾಜಕೀಯದಲ್ಲಿ ಸಕ್ರಿಯರಾಗಿದ್ದಾರೆ. ಅವರಲ್ಲಿ ಯಾರಾದರೊಬ್ಬರು ಗ್ರಾಮಪಂಚಾಯತ್ ಅಧ್ಯಕ್ಷರಾಗಿ ಅಥವಾ ಸದಸ್ಯರಾಗಿ ಸೇವೆ ಸಲ್ಲಿಸುತ್ತಿರುತ್ತಾರೆ. ಇವರು ಪಂಚಾಯತಿ ರಾಜಕೀಯದಲ್ಲಿ ಸಕ್ರಿಯವಾಗಿ ಬಾಗವಹಿಸುವ ಮೂಲಕ ಸ್ಥಳೀಯ ರಾಜಕೀಯ ವ್ಯವಹಾರದ ಮೇಲೆ ಸಾಕಷ್ಟು ನಿಯಂತ್ರಣ ಹೊಂದಿದ್ದಾರೆ.

ಸಿಂಗ್ ಅಥವಾ ರಜಪೂತ ಕುಟುಂಬಗಳು 42 ಇವೆ. ಸಿಂಗ್‌ರೆಂದರೆ ನಮಗೆ ತಕ್ಷಣ ಉತ್ತರ ಭಾರತದ ಸಿಂಗ್‌ಗಳ ನೆನಪು. ಆದರೆ ಇವರು ಗದಗ ಮತ್ತು ಹಾವೇರಿ ಜಿಲ್ಲೆಯ ಗ್ರಾಮಗಳಿಂದ ವಲಸೆ ಬಂದು ನೆಲೆಸಿದವರು. ಇವರ ಮಾತೃ ಭಾಷೆ ಹಿಂದಿ. ಇವರಲ್ಲಿ 10 ಕುಟುಂಬಗಳು ಕೃಷಿ ಭೂಮಿಯನ್ನು ಹೊಂದಿವೆ. 5 ಕುಟುಂಬಗಳು 1-2 ಎಕರೆ ಜಮೀನನ್ನು ಹೊಂದಿದ್ದರೆ ಉಳಿದ ಐದು ಕುಟುಂಬಗಳು 5-10 ಎಕರೆಯ ಒಡೆಯರಾಗಿದ್ದಾರೆ. ಇವರಲ್ಲಿ ಹೆಚ್ಚಿನವರು ಭೂಮಿಯನ್ನು ಗೇಣಿಗೆ ನೀಡಿದ್ದಾರೆ. ಕೆಲವರು ಕೃಷಿ ಕಾರ್ಮಿಕರಿಂದ ಕೃಷಿ ಮಾಡಿಸುತ್ತಾರೆ.(ಹಂಪೆಯಲ್ಲಿ ಪ್ರವಾಸೋದ್ಯಮ ಚಟುವಟಿಕೆಗಳನ್ನು ಪ್ರಥಮ ಬಾರಿಗೆ ಆರಂಭಿಸಿದ ಕೀರ್ತಿ ಸಿಂಗ್‌ರ ಕುಟುಂಬಗಳಿಗೆ ಸಲ್ಲುತ್ತದೆ.)1975ರ ಆಸುಪಾಸಿನಲ್ಲಿ ಸಿಂಗ್ ಕುಟುಂಬದವರೊಬ್ಬರು (ರಾಮ್‌ಸಿಂಗ್) ರೆಸ್ಟೋರೆಂಟೊಂದನ್ನು ಚಿಕ್ಕ ಪ್ರಮಾಣದಲ್ಲಿ ಆರಂಭಿಸಿ ವಿದೇಶಿಯರಿಗೆ ಬೋರ್ಡಿಂಗ್ ವ್ಯವಸ್ಥೆ ಮಾಡಿದರು. ಅದಕ್ಕೂ ಪೂರ್ವದಲ್ಲಿ ರೆಸ್ಟೋರೆಂಟುಗಳೆ ಇರಲಿಲ್ಲ. ಇಂದು ಕೂಡ ಆ ವ್ಯಕ್ತಿಯನ್ನು ಹಂಪೆಯ ಜನ ಮಾಸ್ಟರ್ ಎಂದು ಕರೆದು ಆತನ ಉದ್ಯಮಶೀಲತೆಯನ್ನು ಗೌರವಿಸುತ್ತಾರೆ. ಅವರನ್ನು ನಿಜವಾದ ಹೆಸರಿಂದ ಯಾರೂ ಕರೆಯವುದಿಲ್ಲ. ತದನಂತರ ವ್ಯಾವಹಾರದಲ್ಲಿನ ಲಾಭಾಂಶವನ್ನು ನೋಡಿಕೊಂಡು ಸಿಂಗ್‌ರ ಮತ್ತೊಂದು ಕುಟುಂಬ ಪ್ರವಾಸೋದ್ಯಮದಲ್ಲಿ ತೊಡಗಿಸಿಕೊಂಡಿತು. ರೆಸ್ಟೋರೆಂಟು ಜೊತೆಗೆ ತಮ್ಮ ಮನೆಯ ರೂಂಗಳನ್ನು ವಿದೇಶಿಯರಿಗೆ ಬಾಡಿಗೆ ನೀಡುವ ಮೂಲಕ ಅತಿಥಿಗೃಹವನ್ನು ಮೊದಲಿಗೆ ಆರಂಭಿಸಿದರು. ಅದೇ ಕುಟುಂಬ ಕೆಲವು ಕಾಲ ಕಳೆದ ನಂತರ ರಾಹುಲ್ ಎಂಬ ಅತಿಥಿಗೃಹ ಕಟ್ಟಿಸಿದರು. ಸಿಂಗ್‌ರ ಅನೇಕ ಕುಟುಂಬಗಳು ಇಂದು ಪ್ರವಾಸೋದ್ಯಮ ಪೂರಕ ಚಟುವಟಿಕೆಗಳಾದ ಅತಿಥಿಗೃಹ, ರೆಸ್ಟೋರೆಂಟು, ಹಣದ ವಿನಿಮಯ,

[illegible]

[illegible]

ಟ್ರಾವಲಿಂಗ್ ವ್ಯವಹಾರ, ಇಂಟರನೆಟ್, ಪೆಟ್ಟಿಗೆ ಅಂಗಡಿ, ಹೋಟೆಲ್ ಮುಂತಾದ ವ್ಯವಹಾರಗಳಲ್ಲಿ ತೊಡಗಿಸಿಕೊಂಡಿವೆ. ಸಿಂಗ್ ಕುಟುಂಬಗಳಲ್ಲಿ 11 ಅತಿಥಿಗೃಹ ಮತ್ತು ರೆಸ್ಟೋರೆಂಟುಗಳನ್ನು, 4 ಇಂಟರ್‌ನೆಟ್, ಹಣದ ವಿನಿಮಯ ಹಾಗೂ ಎಸ್.ಟಿ.ಡಿ. ಬೂತಗಳನ್ನು ನಡೆಸುತ್ತಿವೆ(ಕೋಷ್ಟಕ-29).

ಇತ್ತೀಚಿನ ದಿನಗಳಲ್ಲಿ ರಿಯಲ್ ಎಸ್ಟೇಟ್ ವ್ಯವಹಾರ ಕೂಡ ಶುರುವಾಗಿದೆ. ಸಿಂಗ್‌ರ ಎರಡು ಕುಟುಂಬಗಳು ಈ ವ್ಯವಹಾರದಲ್ಲಿ ತೊಡಗಿಸಿಕೊಂಡಿವೆ. ವಿದೇಶಿ ಪ್ರವಾಸಿಗರು ಹಂಪೆಯ ಅಕ್ಕಪಕ್ಕದಲ್ಲಿಯೆ ನೆಲೆಸಲು ಇಷ್ಟಪಟ್ಟು ಭೂಮಿಯನ್ನು ಖರೀದಿಸಲು ಸ್ಥಳೀಯರ ನೆರವನ್ನು ಪಡೆಯುತ್ತಾರೆ. ಆ ಸಂದರ್ಭದಲ್ಲಿ ಸ್ಥಳೀಯರು ಭೂಮಾಲಿಕರ ಮತ್ತು ವಿದೇಶಿಯರ ನಡುವೆ ಮಧ್ಯವರ್ತಿಗಳಾಗಿ ಕಾರ್ಯ ನಿರ್ವಹಿಸುತ್ತಾರೆ. ಎರಡು ಕಡೆಯಿಂದಲೂ ಕಮಿಶನ್ ಪಡೆಯುತ್ತಾರೆ. ವಿದೇಶಿ ಪ್ರವಾಸಿಗರನ್ನು ವೈದ್ಯರ ಹತ್ತಿರ ಕರೆದುಕೊಂಡು ಹೋದರೆ ಇದೇ ರೀತಿ ಕಮಿಶನ್ ದೊರೆಯುತ್ತದೆ. ಖಾಯಿಲೆ ಇರಲಿ ಇಲ್ಲದಿರಲಿ ವಿದೇಶಿ ಪ್ರವಾಸಿಗರನ್ನು ಹೊಸಪೇಟೆಯ ಮೆಡಿನೋವಾ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಪರಿಚಯಿಸಿದರೆ ಸ್ಥಳೀಯರಿಗೆ ಕನಿಷ್ಟ 3000 ದಿಂದ 4000 ದವರೆಗೆ ಕಮಿಶನ್ ದೊರಕುತ್ತದೆ. ವಿದೇಶಿ ಪ್ರವಾಸಿಗರಿಗೂ ರೂ.5 ಸಾವಿರ ದಿಂದ 6 ಸಾವಿರದವರೆಗೂ ಆಸ್ಪತ್ರೆಯವರಿಂದ ಹಣ ದೊರೆಯುತ್ತದೆ. ವಿದೇಶಿಯರು ತಾವು ಪ್ರವಾಸ ಕೈಗೊಳ್ಳುವ ಮುನ್ನ ಆರೋಗ್ಯ ತಪಾಸಣೆ ಮಾಡಿಸಿ, ಜೀವವಿಮೆ ಮಾಡಿಸಿಕೊಂಡು ಬಂದಿರುತ್ತಾರೆ. ಆ ಹಣವನ್ನು ವಿದೇಶಿ ವಿಮೆ ಕಂಪನಿಗಳಿಂದ ಪ್ರವಾಸಿಗರ ಮೂಲಕ ಪಡೆಯಬಹುದಾಗಿದೆ. ವಿದೇಶಿಯರಿಗೆ ಇದರ ಉಪಯೋಗ ಪಡೆದು ಹಣ ಗಳಿಸುವ ಬಗ್ಗೆ ವಿವರಿಸಿ ಅವರು ಒಪ್ಪಿದಲ್ಲಿ ಮಾತ್ರ ಈ ವ್ಯವಹಾರ ಸಾಧ್ಯವಾಗುತ್ತದೆ. ಒಂದು ವೇಳೆ ವ್ಯವಹಾರ ಕುದುರಿದರೆ ಎಲ್ಲರಿಗೂ ಸಾಕಷ್ಟು ಗಳಿಕೆಯಾಗುತ್ತದೆ. ಆರಂಭದಲ್ಲಿ ಒಂದೆರಡು ಇಂತಹ ಕೇಸ್‌ಗಳಿದ್ದರೆ ಇಂದು ಇದೊಂದು ಕಸುಬಾಗಿ ಪರಿವರ್ತನೆಯಾಗಿದೆ. ಇದೊಂದು ಬಂಡವಾಳವಿಲ್ಲದೆ ಸುಲಭವಾಗಿ ಹಣಗಳಿಸುವ ಮಾರ್ಗವಾಗಿದೆ. ಹಾಗಾಗಿ ಇಂದು ಈ ವ್ಯವಹಾರದಲ್ಲಿ ಸಿಂಗ್ ಕುಟುಂಬಗಳ ಜೊತೆ ಇತರ ಜಾತಿಯವರು ಪೈಪೋಟಿ ನಡೆಸುತ್ತಿದ್ದಾರೆ.

ಸಿಂಗರ ಸಮುದಾಯ ಕರ್ನಾಟಕ ರಾಜ್ಯದಲ್ಲಿ ಹಿಂದುಳಿದ ವರ್ಗಗಳಲ್ಲಿ ಸೇರಿದೆ. ಈ ಜನಾಂಗದಲ್ಲಿ ಶೇ 63ರಷ್ಟು ಶಿಕ್ಷಣ ಪಡೆದವರಿದ್ದು ಎಲ್ಲಾರೂ ಸ್ವಯಂ ಉದ್ಯೋಗಗಳಲ್ಲಿ ನಿರತರಾಗಿದ್ದಾರೆ. (ಕೋಷ್ಟಕ-2) ಇವರ ಮದುವೆ ಇತರ ಜಾತಿಗಳಿಗಿಂತ ಭಿನ್ನವಾಗಿರುತ್ತದೆ. ಮದುವೆಯನ್ನು ಹೆಣ್ಣಿನ ಮನೆಯಲ್ಲೇ ಮಾಡಲಾಗುತ್ತದೆ. ಮದುಮಗನನ್ನು ರಾಜಕುಮಾರನ ಮಾದರಿಯಲ್ಲಿ ಸಿಂಗರಿಸಿ ಕುದುರೆಯ ಮೇಲೆ ಹೆಣ್ಣಿನ ಮನೆಗೆ ಕರೆತರುತ್ತಾರೆ. ಇವರು ನಾಮಕರಣ ಮುಂತಾದವುಗಳನ್ನು ಇತರ ಹಿಂದೂಗಳಂತೆ ಆಚರಿಸುತ್ತಾರೆ. ನಾಮಕರಣವನ್ನು ಮಗು ಹುಟ್ಟಿದ ಒಂದು ತಿಂಗಳೊಳಗೆ ಮಾಡುತ್ತಾರೆ. ಇವರು ಧಾರ್ಮಿಕ ಪೂಜೆಗಳನ್ನು ಮಾಡತ್ತಾರಾದರೂ ಸ್ಥಳೀಯವಾಗಿ ನಡೆಯುವ

ಧಾರ್ಮಿಕ ಚಟುವಟಿಕೆಗಳಾದ ಉತ್ಸವ, ಹಬ್ಬಗಳಲ್ಲಿ ಭಾಗವಹಿಸುವುದಿಲ್ಲ. ಈ ಸಮುದಾಯದ ಕೆಲವು ಯುವಕರು ಗಣೇಶ ಉತ್ಸವವನ್ನು ಊರಿನ ಇತರ ಯುವಕರೊಂದಿಗೆ ಸೇರಿ ವಿಜೃಂಭಣೆಯಿಂದ ಆಚರಿಸುತ್ತಾರೆ. ವ್ಯಾಪಾರ ಇಲ್ಲದ ಸಂದರ್ಭದಲ್ಲಿ ತಮ್ಮ ವ್ಯಾಪಾರದಲ್ಲಿ ಯಾವರೀತಿ ಬದಲಾವಣೆ ಮಾಡಿಕೊಳ್ಳಬೇಕೆಂಬುದನ್ನು ತಿಳಿದುಕೊಳ್ಳಲು ಇವರು ಹಲವಾರು ಪ್ರವಾಸಿ ತಾಣಗಳಿಗೆ ಭೇಟಿಕೊಡುತ್ತಾರೆ. ಈ ರೀತಿ ದೊರೆತ ಅನುಭವವನ್ನು ಬಳಸಿಕೊಂಡು ತಮ್ಮ ವ್ಯವಹಾರದಲ್ಲಿ ಹೊಸ ಮಾರ್ಪಾಟುಗಳನ್ನು ಮಾಡಿಕೊಳ್ಳುತ್ತಾರೆ. ಇನ್ನು ಸಮಾಜದಲ್ಲಿ ಸೂತಕವೆನಿಸಿರುವ ಅಂತ್ಯಕ್ರಿಯೆಯನ್ನು ಸುಡುವುದರ ಮೂಲಕ ನೆರವೇರಿಸುತ್ತಾರೆ. ಇದಕ್ಕೆ ಸಂಧಿಸಿದ ಉಳಿದ ಆಚರಣೆಗಳನ್ನು ಹಿಂದೂ ಧರ್ಮದ ಪದ್ದತಿಯಂತೆ ಮಾಡುತ್ತಾರೆ. ಸಿಂಗ್‌ರು ರಾಜಕೀಯದಲ್ಲಿ ಭಾಗಿಗಳಾಗುವುದು ತುಂಬಾ ಕಡಿಮೆ. ರಾಜಕೀಯ ವ್ಯವಸ್ಥೆಯಲ್ಲಿ ಇವರು ಕೇವಲ ಮತದಾರರಾಗಿದ್ದಾರೆ. ರಾಜಕೀಯದಲ್ಲಿ ತೊಡಗಿಸಿಕೊಂಡರೆ ವ್ಯಾಪಾರಕ್ಕೆ ತೊಂದರೆ ಆಗುತ್ತದೆ ಎನ್ನುತ್ತಾರೆ. ತಮ್ಮ ಕೆಲಸಗಳನ್ನು ಮತ ಕೊಟ್ಟವರಿಂದ ಮಾಡಿಸಿಕೊಳ್ಳುತ್ತೇವೆ ಎಂದು ಸಿಂಗ್‌ರೊಬ್ಬರು ಹೇಳುತ್ತಾರೆ.

ಜೈನ ಕುಟುಂಬಗಳು ಕೇವಲ 4 ಇವೆ. ಇವುಗಳೆಲ್ಲ ವಿಭಕ್ತ ಕುಟುಂಬಗಳು ಎಂಬುದು ಗಮನಾರ್ಹ. ಈ ಕುಟುಂಬಗಳಿಗೆ ಭೂಮಿ ಇಲ್ಲ. ಇವರು ಬೇಕರಿ, ಕೂಲ್‌ಡ್ರಿಂಕ್ಸ್ ಶಾಪ್ ಮತ್ತು ಗೊಂಬೆ ಅಂಗಡಿ ನಡೆಸುತ್ತಾರೆ. ಇವರಲ್ಲಿ ಹೆಂಗಸೊಬ್ಬಳು ಮನೆಯಲ್ಲಿಯೇ ಕೆಲವು ರೂಂಗಳನ್ನು ವಿದೇಶಿಯರಿಗೆ ಬಾಡಿಗೆಗೆ ಕೊಟ್ಟಿರುವುದು ತಿಳಿದುಬರುತ್ತದೆ. ಈಕೆ ವಿದೇಶಿಯನನ್ನು ಮದುವೆಯಾಗಿದ್ದಾಳೆ. ಹಂಪೆಯಲ್ಲಿ ಜೈನ ಕುಟುಂಬಗಳು ಕಡಿಮೆ ಇದ್ದರೂ ರತ್ನಕೂಟದಲ್ಲಿ ಜೈನ ಮಂದಿರವಿರುವುದೊಂದು ವಿಶೇಷ. ಜೈನ ಧರ್ಮದ ಪದ್ಧತಿಯಂತೆ ಈ ಕುಟುಂಬಗಳು, ಸಾಮಾಜಿಕ, ಧಾರ್ಮಿಕ ಆಚರಣೆಗಳನ್ನು ನಡೆಸಿಕೊಂಡು ಹೋಗುತ್ತಿವೆ. ಮದುವೆಗಳು ಅನುಕೂಲಕ್ಕೆ ತಕ್ಕ ಹಾಗೆ ಹೆಣ್ಣು ಅಥವಾ ಗಂಡಿನ ಮನೆಯಲ್ಲಿ ಜರಗುತ್ತವೆ. ನಾಮಕರಣವನ್ನು ಮಗು ಹುಟ್ಟಿದ ಮೂರು ತಿಂಗಳೊಳಗೆ ನೆರವೇರಿಸುತ್ತಾರೆ. ಅಂತ್ಯಕ್ರಿಯೆಯನ್ನು ಸುಡುವುದರ ಮೂಲಕ ಮಾಡಲಾಗುತ್ತದೆ. ಇವರ ಆಚರಣೆಗಳಲ್ಲಿ ಸ್ವಮತಸ್ಥರು ಮಾತ್ರ ಪಾಲ್ಗೊಳ್ಳುತ್ತಾರೆ. ಇವರು ಊರಿನ ಯಾವುದೆ ಧಾರ್ಮಿಕ ಆಚರಣೆಗಳಲ್ಲಿ ಭಾಗಿಗಳಾಗುವುದಿಲ್ಲ, ಇವರ ರಾಜಕೀಯ ಪಾಲುಗೊಳ್ಳುವಿಕೆ ಮತ ನೀಡುವುದಕ್ಕೆ ಮಾತ್ರ ಸೀಮಿತವಾಗಿದೆ.

ಕುರುಬರ ಕುಟುಂಬಗಳು 12 ಇವೆ. ಇದರಲ್ಲಿ ಒಂದು ಕುಟುಂಬ ಗೆಸ್ಟ್‌ಹೌಸ್ ಸಹಿತ ರೆಸ್ಟೋರೆಂಟು ಮತ್ತು ಆಟಿಕೆ ಸಾಮಾನುಗಳ ಅಂಗಡಿಯನ್ನು ಹೊಂದಿದೆ. ಮತ್ತೊಂದು ಕುಟುಂಬ ಗೆಸ್ಟ್‌ಹೌಸ್, ಎಸ್‌ಟಿಡಿ ಬೂತ್ ಹೊಂದಿದ್ದು, ಈ ಕುಟುಂಬದಲ್ಲಿ ಒಬ್ಬ ಪ್ರವಾಸಿ ಮಾರ್ಗದರ್ಶಿಯಾಗಿದ್ದಾನೆ. ಒಂದು ಕುಟುಂಬ ಹೋಟೆಲ್ ನಡೆಸುತ್ತಿದೆ. 4 ಕುಟುಂಬಗಳು ಪೆಟ್ಟಿಗೆ ಅಂಗಡಿ ಮತ್ತು ಬೀದಿಬದಿಯಲ್ಲಿ ಸಂಜೆಹೊತ್ತು ತಿಂಡಿಗಳನ್ನು ಮಾರಾಟ ಮಾಡುತ್ತಾರೆ (ಕೋಷ್ಟಕ-29). ಉಳಿದ ಕುಟುಂಬಗಳು ಕೃಷಿ

[illegible]

ಕಾರ್ಮಿಕರಾಗಿದ್ದಾರೆ. ಒಟ್ಟು ಜನಸಂಖ್ಯೆಯಲ್ಲಿ ಶೇ.61.19ರಷ್ಟು ವಿದ್ಯಾವಂತರಿದ್ದಾರೆ.(ಕೋಷ್ಠಕ-2) ಇವರು ಗ್ರಾಮದ ಉತ್ಸವ, ಆಚರಣೆಗಳಲ್ಲಿ ತಕ್ಕಮಟ್ಟಿಗೆ ಪಾಲ್ಗೊಳ್ಳುತ್ತಾರೆ. ಸಾಮಾಜಿಕ ಮತ್ತು ಧಾರ್ಮಿಕ ಕಾರ್ಯಗಳಾದ ವಿವಾಹ, ನಾಮಕರಣ, ಆಚರಣೆಗಳನ್ನು ಸರಳಗೊಳಿಸಿ ಒಂದೇ ದಿನಕ್ಕೆ ಸೀಮಿತಗೊಳಿಸಿಕೊಂಡಿದ್ದಾರೆ. ಪುರಾಣ, ಪ್ರವಚನ ಕೇಳುವ ಅಭಿರುಚಿ ಇನ್ನು ಈ ಕುಟುಂಬಗಳಲ್ಲಿ ಇದೆ. ಯಾತ್ರಾರ್ಥಿಗಳಾಗಿ ಧಾರ್ಮಿಕ ಸ್ಥಳಗಳಿಗೆ ಹಿರಿಯರು ಹೋದರೆ, ವಿದ್ಯಾವಂತ ಯುವಕರು ಹೆಚ್ಚಾಗಿ ಪ್ರವಾಸಿ ತಾಣಗಳಿಗೆ ಹೋಗಿ ಬರುತ್ತಾರೆ. ಈ ಜಾತಿಯಲ್ಲಿ ಅಂತ್ಯಕ್ರಿಯೆಯನ್ನು ಹೂಳುವುದರೊಂದಿಗೆ ನೆರವೇರಿಸುತ್ತಾರೆ. ಇವರಲ್ಲಿ ಸಾವಿನ ಆಚರಣೆಯಲ್ಲಿ ಮನೆ ಬಿಡುವ ಕ್ರಮವಿಲ್ಲ. ಈ ಸಂದರ್ಭದಲ್ಲಿ 3 ದಿನ ಮತ್ತು 9 ದಿನದ ಆಚರಣೆಗಳನ್ನು ಮಾಡಿ ಸೂತಕವನ್ನು ತೀರಿಸುತ್ತಾರೆ. ಸತ್ತವರಿಗಾಗಿ ಅನ್ನ ಸಂತರ್ಪಣೆಯನ್ನು ವರ್ಷಕ್ಕೆ 1 ಬಾರಿ ದಸರಾ ಅಥವಾ ದೀಪಾವಳಿ ಅಮವಾಸ್ಯೆಯ ದಿನ ಮಾಡುತ್ತಾರೆ. ಹೊಸ ಬಟ್ಟೆಯನ್ನು ತಂದು ಪೂಜಿಸಿ, ಸಮರ್ಪಿಸುವ ಕಾರ್ಯವನ್ನು ಹಿರಿಯರ ಹಬ್ಬ ಎನ್ನುತ್ತಾರೆ. ಇದು ಬ್ರಾಹ್ಮಣರ ಮತ್ತು ವೈಶ್ಯರ ಕರ್ಮದ ಹಾಗೆ. ಕುರುಬರ 3 ಕುಟುಂಬಗಳು ಆರ್ಥಿಕವಾಗಿ ಉತ್ತಮ ಸ್ಥಿತಿಯಲ್ಲಿವೆ. ಈ ಕುಟುಂಬಗಳು ರಾಜಕೀಯದಲ್ಲಿ ಸಕ್ರಿಯವಾಗಿವೆ. ಈ ಕುಟುಂಬದವರು ಹಿಂದೆ ಗ್ರಾಮಪಂಚಾಯತಿ ಸದಸ್ಯರು ಮತ್ತು ಅಧ್ಯಕ್ಷರರಾಗಿದ್ದರು. ಈಗ ಮೀಸಲಾತಿಯಿಂದಾಗಿ ಸದಸ್ಯರಾಗಲು ಸಾಧ್ಯವಾಗಿಲ್ಲ ಎನ್ನುತ್ತಾರೆ. ಕಾಂಗ್ರೆಸ್ ಪಕ್ಷ ಮತ್ತು ಜನತಾದಳ ಪಕ್ಷದಲ್ಲಿ ಸದಸ್ಯರಾಗಿ ಕಾರ್ಯಕರ್ತರಾಗಿದ್ದಾರೆ.

ಹಂಪೆ ಗ್ರಾಮದ ಜನಸಂಖ್ಯೆಯಲ್ಲಿ ನಾಯಕ ಅಥವಾ ವಾಲ್ಮೀಕಿ ಜನಾಂಗದವರ ಸಂಖ್ಯೆ ಅತಿ ಹೆಚ್ಚು ಇದೆ. ಇವರ ಕುಟುಂಬಗಳ ಸಂಖ್ಯೆ ಸುಮಾರು 130 ಇವೆ.(ಕೋಷ್ಠಕ-2) ಇದರಲ್ಲಿ 5 ಕುಟುಂಬಗಳು (ಅತಿಥಿಗೃಹ, ರೆಸ್ಟೋರೆಂಟು, ದ್ವಿಚಕ್ರ ವಾಹನಗಳನ್ನು ವಿದೇಶಿಯರಿಗೆ ಬಾಡಿಗೆ ನೀಡುವುದು, ಹಣವಿನಿಮಯ ಮತ್ತು ಟ್ರಾವೆಲ್ಸ್ ಹೌಸ್‌ಗಳನ್ನು ನಡೆಸುವ ವ್ಯವಹಾರದಲ್ಲಿ ತೊಡಗಿವೆ.) 10 ಕುಟುಂಬಗಳು ಪೆಟ್ಟಿಗೆ ಅಂಗಡಿಯನ್ನು, 8 ಕುಟುಂಬಗಳು ತರಕಾರಿ, ಹಣ್ಣು ಹಂಪಲುಗಳನ್ನು ತಲೆಯ ಮೇಲೆ ಹೊತ್ತು ಮತ್ತು ತಳ್ಳು ಗಾಡಿಯಲ್ಲಿಟ್ಟಿಕೊಂಡು ಮಾರಾಟ ಮಾಡುತ್ತಿವೆ.) 4ಕುಟುಂಬಗಳು ಬೀದಿ ಬದಿಯಲ್ಲಿ ಚಿಕ್ಕ ಹೋಟಲುಗಳಲ್ಲಿ ತೊಡಗಿಸಿಕೊಂಡಿವೆ (ಕೋಷ್ಠಕ-29). ಮೂರು ಕುಟುಂಬಗಳಿಗೆ ಮಾತ್ರ 1ರಿಂದ 2 ಎಕರೆ ಭೂಮಿ ಇದ್ದು, ಅವರೇ ಸಾಗುವಳಿ ಮಾಡುತ್ತಿದ್ದಾರೆ. 8 ಕುಟುಂಬಗಳು ನದಿಯ ದಡದಲ್ಲಿ 1ರಿಂದ 2 ಎಕರೆ ಒತ್ತುವರಿ ಜಮೀನನ್ನು ಹೊಂದಿವೆ. ವಿದ್ಯಾವಂತರ ಸಂಖ್ಯೆ ಕಡಿಮೆ ಇರುವ ಈ ಜಾತಿಯಲ್ಲಿ ಒಬ್ಬ ಸಹಕಾರಿ ಸಂಘದಲ್ಲಿ ಗುಮಾಸ್ತನಾಗಿದ್ದು, ಇಬ್ಬರು ಯುವಕರು ಪ್ರವಾಸಿ ಮಾರ್ಗದರ್ಶಿಗಳಾಗಿದ್ದಾರೆ. ಒಬ್ಬರು ಕಂದಾಯ ಇಲಾಖೆಯಲ್ಲಿ ತಲವಾರನಾಗಿದ್ದಾನೆ. ಇಬ್ಬರು ಹಂಪೆ ವಿರೂಪಾಕ್ಷೇಶ್ವರ ದೇವಸ್ಥಾನದಲ್ಲಿ ಕೆಲಸ ಮಾಡುತ್ತಿದ್ದಾರೆ. ಉಳಿದ ಕುಟುಂಬಗಳ ಜನರಲ್ಲಿ ಕೆಲವರು ಭೂಮಿಯನ್ನು ಗುತ್ತಿಗೆಗೆ ಪಡೆದು ವ್ಯವಸಾಯದಲ್ಲಿ

[illegible]

[illegible]

ತೊಡಗಿಕೊಂಡಿದ್ದಾರೆ. ಮಿಕ್ಕವರು ಕೃಷಿಕಾರ್ಮಿಕರಾಗಿ ಮತ್ತು ಗೆಸ್ಟ್‌ಹೌಸ್‌ನಲ್ಲಿ ಕೆಲಸ ಮಾಡಿಕೊಂಡಿದ್ದಾರೆ. ಈ ಕುಟುಂಬಗಳ ಮನೆಗಳು ಹೆಚ್ಚಿನ ಸಂಖ್ಯೆಯಲ್ಲಿ ಪ್ರಕಾಶನಗರ, ಜನತಾ ಪ್ಲಾಟ್ ಮತ್ತು ಹಂಪಿ ಬಜಾರದ ಪೂರ್ವಕ್ಕೆ ಇರುವ ಮಂಟಪಗಳಲ್ಲಿ ಇವೆ. ಸುಮಾರು 40 ಕುಟುಂಬಗಳು ಇನ್ನು ಜೋಪಡಿಗಳಲ್ಲಿಯೆ ವಾಸ ಮಾಡುತ್ತಿವೆ. ವ್ಯಾಪಾರ ಮತ್ತು ಉದ್ಯೋಗಳಲ್ಲಿ ತೊಡಗಿಸಿಕೊಂಡಿರುವವರ ಸ್ಥಿತಿ ಆರ್ಥಿಕವಾಗಿ ಉತ್ತಮವಾಗಿದೆ, ಉಳಿದವರ ಸ್ಥಿತಿ ಉತ್ತಮವಾಗಿಲ್ಲ. ಉಳಿದವರು ವ್ಯಾಪಾರ ವ್ಯವಹಾರಗಳಲ್ಲಿ ತೊಡಗಿಕೊಳ್ಳದಿರಲು ಬಂಡವಾಳದ ಕೊರತೆ ಕಾರಣವಾಗಿದೆ. ಗ್ರಾಮದ ಉತ್ಸವ, ಜಾತ್ರೆಗಳಲ್ಲಿವರು ಭಾಗವಹಿಸುತ್ತಾರೆ. ಎಲ್ಲಾ ಹಿಂದೂ ಹಬ್ಬಗಳನ್ನು ಆಚರಿಸುತ್ತಾರೆ. ವಿವಾಹವನ್ನು ಇವರೀಗ ಗಂಡಿನ ಮನೆಯಲ್ಲಿ ಮಾಡುತ್ತಾರೆ. ಇವರಲ್ಲಿ ವರದಕ್ಷಿಣೆಯ ಪ್ರಭಾವ ತುಂಬಾ ಕಡಿಮೆ ಇದೆಯೆಂದು ತಿಳಿಸುತ್ತಾರೆ. ಮದುವೆಗಳನ್ನು ಮೂರು ದಿನದ ವರೆಗೆ ಮಾಡುತ್ತಾರೆ. ಹಿಂದಿನಂತೆ ಇಂದು ಸಹ ಎತ್ತಿನ ಗಾಡಿಯಲ್ಲೇ ಮೆರವಣಿಗೆಯನ್ನು ಮಾಡುತ್ತಾ ಬರುತ್ತಿದ್ದಾರೆ. ನಾಮಕರಣವನ್ನು ಹೆಣ್ಣಿನ ಮನೆಯಲ್ಲಿ ಮಗು ಜನಿಸಿದ 16ನೆಯ ದಿನ ಮಾಡುತ್ತಾರೆ. ಇವರಲ್ಲಿ ದೇವರ ಹರಕೆಗಳು ಇವೆ. ಮನೆದೇವರ ದರ್ಶನಕ್ಕೆಂದು ವರ್ಷಕ್ಕೊಂದು ಸಾರಿ ಬೇರೆ ಸ್ಥಳಗಳಿಗೆ ಹೋಗುತ್ತಾರೆ. ಸಾವಿನ ಮನೆಯನ್ನು ಇವರು ಸೂತಕವೆಂದು ಭಾವಿಸುತ್ತಿದ್ದು, ಸೂತಕವಿದ್ದು, ಆ ಮನೆಗೆ ಸೂತಕ ಮುಗಿಯುವ ವರೆಗೆ ಚಿಕ್ಕ ಮಕ್ಕಳನ್ನು ಕೂಡ ಕಳುಹಿಸುವುದಿಲ್ಲ. ಇವರಲ್ಲಿ ಹೂಳುವ ಪದ್ದತಿ ಇದ್ದು ಅಂತ್ಯಕ್ರಿಯೆಯಲ್ಲಿ ಹೆಚ್ಚಾಗಿ ತಮ್ಮ ಜನಾಂಗದವರೆ ಪಾಲುಗೊಳ್ಳುತ್ತಾರೆ. ಸಾವು ಸಂಭವಿಸಿದ ದಿನದ ಲೆಕ್ಕವನ್ನು ತೆಗೆದುಕೊಂಡು ಮೂರನೆಯ ದಿನದ ಕಾರ್ಯ ಮತ್ತು ಏಳನೆಯ ದಿನದ ಕಾರ್ಯದಂದು ಮಾಡುತ್ತಾರೆ. ಮೂರನೆಯ ದಿನದ ಕಾರ್ಯವನ್ನು ಮಾಂಸದ ಅಡಿಗೆ ತಯಾರಿಸಿ ಸತ್ತ ಸಮಾಧಿಯ ಮೇಲಿಟ್ಟು ಪೂಜೆ ಮಾಡುತ್ತಾರೆ. ಅಂತ್ಯಕ್ರಿಯೆಯಲ್ಲಿ ಪಾಲ್ಗೊಂಡವರು ಈ ಊಟವನ್ನು ಮಾಡುತ್ತಾರೆ. ನಂತರ 9ನೆಯ ದಿನ ಸಿಹಿ ಅಡಿಗೆ ತಯಾರಿಸಿ ತಮ್ಮ ಸಮುದಾಯದವರಿಗೆ ಉಣ ಬಡಿಸುತ್ತಾರೆ. ಇತರೆ ಕೆಳವರ್ಗದ ಜಾತಿಯವರು ಮಾತ್ರ ಈ ಊಟವನ್ನು ಮಾಡುತ್ತಾರೆ. ಮನೆ ಬಿಡುವ ಪದ್ಧತಿ ಈಗ ಇಲ್ಲ. ಕುಟುಂಬಗಳ ಸಂಖ್ಯೆ ಹೆಚ್ಚಿದ್ದರೂ ರಾಜಕೀಯದಲ್ಲಿ ಭಾಗವಹಿಸುವುಕೆ ಕಡಿಮೆ ಇದ್ದು, ಮತ ಚಲಾಯಿಸುವ ಮಟ್ಟಿಗೆ ರಾಜಕೀಯದಲ್ಲಿ ಆಸಕ್ತಿ ಹೊಂದಿದ್ದಾರೆ. ಗ್ರಾಮಪಂಚಾಯತಿಯ ಚುನಾವಣೆ ಮೂಲಕ ಆಯ್ಕೆಗೊಂಡ ಹಾಲಿ ಸದಸ್ಯರಿದ್ದಾರೆ.

ವಡ್ಡರ ಕುಟುಂಬಗಳು 28 ಇವೆ. ಈ ಕುಟುಂಬಗಳಲ್ಲಿ ಮೂರು ಕುಟುಂಬಗಳು 1ರಿಂದ 2 ಎಕರೆ ಭೂಮಿ ಹೊಂದಿದ್ದು ಕೃಷಿಯಲ್ಲಿ ತೊಡಗಿವೆ. ಮೂರು ಕುಟುಂಬಗಳು ಅತಿಥಿಗೃಹ, ರೆಸ್ಟೋರೆಂಟು, ಎಸ್‌ಟಿಡಿ ಬೂತ್ ಮತ್ತು ಹಣದ ವಿನಿಮಯ ವ್ಯವಹಾರದಲ್ಲಿ ತೊಡಗಿಸಿಕೊಂಡಿವೆ. ಒಬ್ಬರು ಮಾತ್ರ ಪೋಲಿಸ್ ಇಲಾಖೆಯಲ್ಲಿ ಸೇವೆಯಲ್ಲಿದ್ದಾರೆ(ಕೋಷ್ಟಕ-29). ಅವಿಭಕ್ತ ಕುಟುಂಬವೊಂದು ಇಂದು ವಿಭಕ್ತಗೊಂಡು ಐದು ಕುಟುಂಬಗಳಾಗಿವೆ. ಇದರಲ್ಲಿ ಒಂದು ಕುಟುಂಬ

ನದಿಯ ನಾಡು ದೋಣಿ ಗುತ್ತಿಗೆಯನ್ನು ಹಿಡಿದಿದೆ. ಹಿಂದಿನಿಂದಲೂ ಈ ಕುಟುಂಬಗಳೆ ಈ ಗುತ್ತಿಗೆಯನ್ನು ಹಿಡಿಯುತ್ತಿವೆ. 2001ರಲ್ಲಿ ನಾಡದೋಣಿಯ ಟೆಂಡರ್ ಮೊತ್ತ ಹಂಪೆಯಿಂದ ವಿರುಪಾಪುರ ಗ್ರಾಮದ ದಡಕ್ಕೆ ಒಂದು ವರ್ಷಕ್ಕೆ 1.60 ಲಕ್ಷ ಮತ್ತು ವಿರೂಪಾಪುರ ಗಡ್ಡೆಯಿಂದ ಹಂಪಿಯ ದಡಕ್ಕೆ 1.32 ಲಕ್ಷ ಟೆಂಡರ್ ಹಾಕಿದ್ದು ಒಟ್ಟು 2 ಬದಿಯಿಂದ 2.92 ಲಕ್ಷಕ್ಕೆ ಟೆಂಡರ್ ಮುಖಾಂತರ ಗುತ್ತಿಗೆ ಪಡೆಯಲಾಗಿದೆ. ಈ ಮೊತ್ತವನ್ನು ಹೇಗೆ ಹೊಂದಿಸುವಿರೆಂದು ಗುತ್ತಿಗೆ ಪಡೆದವನನ್ನು ಕೇಳಲಾಯಿತು. ಅದಕ್ಕೆ ಅವರು ಸ್ವಲ್ಪ ಕಾಲಾವಕಾಶ ತೆಗೆದುಕೊಂಡು ಎರಡು ಮೂರು ಕಂತುಗಳಲ್ಲಿ ಕಟ್ಟುತ್ತೇವೆ ಎನ್ನುತ್ತಾರೆ. ಇದರಿಂದ ಲಾಭವಿದೆಯೆ ಎಂದು ಕೇಳಿದರೆ ಇದೆ ಎನ್ನುತ್ತಾರೆ. ಈ ವಿಭಕ್ತ ಕುಟುಂಬದಲ್ಲಿ ಒಬ್ಬ ಮಹಿಳೆ ಗ್ರಾಮಪಂಚಾಯತಿ ಸದಸ್ಯಳಾಗಿದ್ದು, ಪೆಟ್ಟಿಗೆ ಅಂಗಡಿಯ ವ್ಯಾಪಾರವನ್ನು ಮಾಡುತ್ತಿದ್ದಾರೆ. ವಡ್ಡರ 10 ಕುಟುಂಬಗಳು ಇಂದಿಗೂ ತಮ್ಮ ಪಾರಂಪರಿಕ ಕಸುಬಾದ ಕಟ್ಟಡ ನಿರ್ಮಾಣದ ಕೆಲಸದಲ್ಲಿ ತೊಡಗಿಸಿಕೊಂಡಿವೆ. 2 ಕುಟುಂಬಗಳು ತರಕಾರಿ ಮತ್ತು ಹಣ್ಣುಗಳ ಮಾರಾಟದಲ್ಲಿ, 5 ಕುಟುಂಬಗಳು ಅರಣ್ಯದಿಂದ ಉರುವಲು ಕಟ್ಟಿಗೆಯನ್ನು ತಂದು ಮಾರಾಟ ಮಾಡುತ್ತಿವೆ. ಉಳಿದ ಕುಟುಂಬಗಳಲ್ಲಿ ಕೃಷಿ ಕೂಲಿ ಮತ್ತು ಗೆಸ್ಟ್‌ಹೌಸ್‌ಗಳಲ್ಲಿ ಕೆಲಸ ಮಾಡುತ್ತಿವೆ. ವಡ್ಡರ 5 ಕುಟುಂಬಗಳ ಆರ್ಥಿಕ ಸ್ಥಿತಿ ಉತ್ತಮವಾಗಿದ್ದರೆ, ಉಳಿದವು ಸಾಮಾನ್ಯ ಜೀವನ ಸಾಗುತ್ತಿವೆ. ವಡ್ಡರ ಕುಟುಂಬಗಳಲ್ಲಿ ಶೇ.55.38ರಷ್ಟು ವಿದ್ಯಾವಂತರಿದ್ದಾರೆ.(ಕೋಷ್ಟಕ-2) ವಡ್ಡರು ತಮ್ಮ ಹಿಂದಿನ ಧಾರ್ಮಿಕ ಪದ್ದತಿಗಳನ್ನು ಸಾಕಷ್ಟು ಪರಿವರ್ತನೆಗಳೊಂದಿಗೆ ಮುಂದುವರಿಸಿಕೊಂಡು ಬಂದಿದ್ದಾರೆ. ಹಿಂದೆ ಇವರ ವಿವಾಹಗಳು ಹೆಣ್ಣಿನ ಮನೆಯ ಮುಂದೆ ನಡೆಯುತ್ತಿದ್ದರೆ ಇಂದು ಹೆಚ್ಚಾಗಿ ಗಂಡಿನ ಮನೆಯ ಅಂಗಳದಲ್ಲಿ ಮತ್ತು ಛತ್ರಗಳಲ್ಲಿ ಜರುಗುತ್ತವೆ. ಹಿಂದೆ ಇದ್ದ ಕೆಲವು ಪದ್ಧತಿಗಳು ಇಂದು ಇಲ್ಲವಾಗಿವೆ. ಹಾಗೆಯೆ ವರದಕ್ಷಿಣೆ ಪದ್ದತಿ ಕೂಡ ಇಲ್ಲ. ದೇವರುಗಳಿಗೆ ಹರಕೆ ಸಲ್ಲಿಸುವ ಕ್ರಮ ಇನ್ನೂ ಮುಂದುವರೆದಿದೆ. ಇವರಲ್ಲಿ ಜರುಗುವ ಮದುವೆಗಳಿಗೆ ಮೇಲ್ಜಾತಿಯವರು ಬಂದು ಊಟ ಮಾಡಿಕೊಂಡು ಹೋಗುತ್ತಾರೆ. ಆರ್ಥಿಕ ಸ್ಥಿತಿಯಲ್ಲಿ ಉತ್ತಮ ಇಲ್ಲದವರು, ಅವರಾಗಿಯೆ ಹೆಚ್ಚಿನ ಜನರನ್ನು ಕರೆಯುವುದಿಲ್ಲ. ಇತರ ಸಾಂಪ್ರದಾಯಿಕ ಆಚರಣೆಗಳಾದ ನಾಮಕರಣ, ಅಂತ್ಯಕ್ರಿಯೆಗಳನ್ನು ಉಳಿದ ಹಿಂದುಳಿದ ಜಾತಿಗಳಂತೆಯೆ ಆಚರಿಸುತ್ತಾರೆ. ಮನೆ ಬಿಡುವ ಕ್ರಮವಿಲ್ಲದಿದ್ದರೂ ಮೂಢನಂಬಿಕೆ ಸ್ವಲ್ಪಮಟ್ಟಿಗೆ ಇವರಲ್ಲಿ ಜಾಸ್ತಿಯೆ ಇದೆ. ಗ್ರಾಮದ ಉತ್ಸವ, ಜಾತ್ರೆಗಳಲ್ಲಿ ಕಮಟಿಗರಾಗಿ ದೇವಸ್ಥಾನ ವತಿಯಿಂದ ಕೆಲಸ ಮಾಡುತ್ತಾರೆ. ಗ್ರಾಮಮಟ್ಟದ ರಾಜಕೀಯದಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಾರೆ. ಗ್ರಾಮಪಂಚಾಯತಿಯ ಹಾಲಿ ಸದಸ್ಯರಾಗಿ ಒಬ್ಬ ಪುರುಪ ಮತ್ತು ಒಬ್ಬ ಮಹಿಳೆ ಇದ್ದಾರೆ. ಪರಿಶಿಷ್ಟ ವರ್ಗದವರಲ್ಲಿ ಬರುವ ಇತರ ಜಾತಿಗಳಾದ ಲಂಬಾಣಿಗಳು, ಹರಿಜನರು ಇದ್ದರೂ, ಪರಿಶಿಷ್ಟ ವರ್ಗದ ಮೀಸಲಾತಿ ಸೌಲಭ್ಯವನ್ನು ಇವರೆ ಪಡೆದಿರುವುದು ವಿಶೇಷ.

ವೈಶ್ಯರ ಅಥವಾ ಶೆಟ್ಟರ ಕುಟುಂಬಗಳ ಸಂಖ್ಯೆ 12 ಇವೆ. ವೈಶ್ಯರು ತಮ್ಮ ಸಾಂಪ್ರದಾಯಿಕ ಕಸುಬಾದ ವ್ಯಾಪಾರವನ್ನು ಮುಂದುವರಿಸುತ್ತಿದ್ದಾರೆ. ಎರಡು ಕುಟುಂಬಗಳು ಗೆಸ್ಟ್‌ಹೌಸ್, ಎಸ್‌ಟಿಡಿ ಬೂತ್, ಇಂಟರ್‌ನೆಟ್‌ನಲ್ಲಿ ತೊಡಗಿಸಿಕೊಂಡಿವೆ. ಎರಡು ಕುಟುಂಬಗಳು ಕಿರಾಣಿ ಅಂಗಡಿ, ವೃತ್ತಪತ್ರಿಕೆ, ಹಾಲು ಇತ್ಯಾದಿಗಳ ಎಜೆನ್ಸಿಯನ್ನು ಪಡೆದುಕೊಂಡು ವ್ಯಾಪಾರ ನಡೆಸುತ್ತಿವೆ. 1 ಕುಟುಂಬ ಹಂಪೆಯ ಬಜಾರದಲ್ಲಿರುವ ಗೀತಾ ಸೇವಾಶ್ರಮದ ಛತ್ರದ ಉಸ್ತುವಾರಿಯನ್ನು ನೋಡಿಕೊಳ್ಳುವುದರೊಂದಿಗೆ ಚಿಕ್ಕಪೆಟ್ಟಿಗೆ ಅಂಗಡಿಯನ್ನು ನಡೆಸುತ್ತಿದೆ. 4 ಕುಟುಂಬಗಳು ಚಿಕ್ಕ ಪೆಟ್ಟಿಗೆ ಅಂಗಡಿಯಲ್ಲಿ ವ್ಯಾಪಾರ ಮಾಡುತ್ತಿದ್ದಾರೆ. 2 ಕುಟುಂಬಗಳು ತೆಂಗಿನಕಾಯಿ ವ್ಯಾಪಾರ ಮಾಡುತ್ತಿವೆ. ಉಳಿದ ಕುಟುಂಬಗಳು ಪುಸ್ತಕ ಮತ್ತು ಕಲ್ಲು ಸಕ್ಕರೆ ಪಾಕೆಟ್‌ಗಳನ್ನು ಬೀದಿಯಲ್ಲಿ ಹೊತ್ತು ಮಾರುತ್ತಿವೆ. ವೈಶ್ಯರ ಜಾತಿಗೆ ಸೇರಿದವರೊಬ್ಬರು ಬ್ಯಾಂಕಿನಲ್ಲಿ ಪಿಗ್ಮಿ ಏಜೆಂಟ್ ಮತ್ತು ಎಲ್.ಐ.ಸಿ ಏಜೆಂಟ್ ಆಗಿದ್ದಾರೆ. ಧಾರ್ಮಿಕ ಪದ್ಧತಿಗಳನ್ನು ಹಿಂದಿನ ರೀತಿಯಲ್ಲಿ ಮುಂದುವರಿಸಿದ್ದಾರೆ. ಇವರಲ್ಲಿ ವರದಕ್ಷಿಣೆ ಹಿಂದೆಯೂ ಇತ್ತು ಈಗಲೂ ಇದೆ ಎನ್ನುತ್ತಾರೆ. ಗ್ರಾಮದ ಧಾರ್ಮಿಕ ಕಾರ್ಯಗಳಲ್ಲಿ ಮತ್ತು ರಾಜಕೀಯದಲ್ಲಿ ಇವರು ಬಾಗವಹಿಸುತ್ತಿಲ್ಲ (ಕೋಷ್ಟಕ-29).

ಬಾರಿಕರು ಸುಮಾರು 1948-49 ಆಸುಪಾಸಿನಲ್ಲಿ ಆಂಧ್ರದ ಪಾಲ್ತರೂ, ಗುತ್ತಿ ಮತ್ತು ಇತರೆ ಪ್ರದೇಶಗಳಿಂದ ವಲಸೆ ಬಂದವರು. ಈ ಸಮುದಾಯದ ಕುಟುಂಬಗಳ ಸಂಖ್ಯೆ ಈಗ 32 ಇದ್ದು, ಒಂದು ಕುಟುಂಬ ಅತಿಥಿಗೃಹವನ್ನು, ಎರಡು ಕುಟುಂಬಗಳು ರೆಸ್ಟೋರೆಂಟುಗಳನ್ನು, ಎರಡು ಸ್ಟೇಷನರಿ ಶಾಪುಗಳನ್ನು ಹೊಂದಿವೆ(ಕೋಷ್ಟಕ-29). ಒಂದು ಕುಟುಂಬದಲ್ಲಿ ಪ್ರವಾಸಿ ಗೈಡ್, ಎಲ್.ಐ.ಸಿ. ಏಜೆಂಟ್‌ರಾಗಿದ್ದು ಮತ್ತು ದೇವಸ್ಥಾನದಲ್ಲಿ ಕೆಲಸ ಮಾಡುವ ಮಹಿಳೆಯೂ ಸೇರಿದ್ದಾರೆ. 8 ಕುಟುಂಬಗಳು ವಿರೂಪಾಕ್ಷ ದೇವಸ್ಥಾನದಲ್ಲಿ ಕಸ ಗುಡಿಸುವ ಕೆಲಸ ಮತ್ತು ಕಮಟಿಗರ ಕೆಲಸದಲ್ಲಿ ನಿರತವಾಗಿವೆ. ಕಮಟಿಗರೆಂದರೆ ವಿರೂಪಾಕ್ಷೇಶ್ವರ ದೇವಸ್ಥಾನದಲ್ಲಿ ನಡೆಯುವ ಉತ್ಸವ, ಜಾತ್ರೆ, ಅಮವಾಸ್ಯೆಗಳಲ್ಲಿ ಉತ್ಸವ ಮೂರ್ತಿಗಳನ್ನು ಹೊತ್ತು ಹಂಪೆ ಬಜಾರಿನಲ್ಲಿ ಮೆರವಣಿಗೆ ತೆಗೆದು, ವಾಪಾಸ್ಸು ದೇವಸ್ಥಾನಕ್ಕೆ ತರುವುದು, ರಥೋತ್ಸವ ಸಂದರ್ಭದಲ್ಲಿ ರಥದ ಮೇಲ್ಭಾವಣಿಯನ್ನು ಕಟ್ಟಿ ಶೃಂಗರಿಸುವುದು ಮುಂತಾದ ಕೆಲಸ ಮಾಡುವವರು. 4 ಕುಟುಂಬಗಳಿಗೆ 1 ರಿಂದ 2 ಎಕರೆ ಜಮೀನು ಇದೆ. 2 ಕುಟುಂಬಗಳಿಗೆ 1 ರಿಂದ 2 ಎಕರೆ ಒತ್ತುವರಿ ಜಮೀನು ಇದೆ. ಜಮೀನು ಇರುವ ಎಲ್ಲರೂ ಕೃಷಿಯಲ್ಲಿ ತೊಡಗಿಸಿಕೊಂಡಿದ್ದಾರೆ. ಉಳಿದ ಕುಟುಂಬಗಳು ಕೃಷಿಕೂಲಿ ಮತ್ತು ರೆಸ್ಟೋರೆಂಟುಗಳ ಕೆಲಸದಲ್ಲಿ ತೊಡಗಿಸಿಕೊಂಡಿವೆ. ಈ ಸಮುದಾಯದಲ್ಲಿ ಶೇ. 64ರಷ್ಟು ಶಿಕ್ಷಣ ಪಡೆದವರಿದ್ದಾರೆ. (ಕೋಷ್ಟಕ-2) ಸರಕಾರಿ ನೌಕರಿ ಯಾರಿಗೂ ಸಿಕ್ಕಿಲ್ಲ. ಸಾಂಪ್ರದಾಯಿಕವಾಗಿ ಎಲ್ಲಾ ಧಾರ್ಮಿಕ ಹಬ್ಬ, ಜಾತ್ರೆಗಳನ್ನು ಆಚರಿಸುತ್ತಾರೆ. ಗ್ರಾಮದ ಉತ್ಸವ, ಜಾತ್ರೆಗಳಲ್ಲಿ ದೇವಸ್ಥಾನದ ಕಮಟಿಗರಾಗಿ

ದುಡಿಯುತ್ತಾರೆ. ಇದಕ್ಕಾಗಿ ದೇವಸ್ಥಾನದಿಂದ ವರ್ಷಕ್ಕೆ ಒಪ್ಪಂದದ ಕರಾರಿನ ಮೇಲೆ ಹಣದ ಸಂಭಾವನೆ ಪಡೆಯುತ್ತಾರೆ. ಕಮಟಿಗರಲ್ಲಿ ಬೇರೆ ಜಾತಿಯವರು ಇದ್ದರೂ ಹೆಚ್ಚಿನ ಸಂಖ್ಯೆಯಲ್ಲಿ ಬಾರಿಕರೆ ಇದ್ದಾರೆ. ಮದುವೆ, ನಾಮಕರಣ, ಅಂತ್ಯಕ್ರಿಯೆ ಆಚರಣೆಗಳು ಇತರ ಹಿಂದುಳಿದ ಜಾತಿಗಳಲ್ಲಿದ್ದಂತೆ ಇದೆ. ಬಾರಿಕರಲ್ಲಿ ಒಬ್ಬ ಯುವಕ ಸ್ವಿಟ್ಜರ್‌ಲ್ಯಾಂಡ್‌ನ ಯುವತಿಯನ್ನು ಮದುವೆಯಾಗಿ ವಿದೇಶದಲ್ಲಿ ನೆಲೆಸಿದ್ದಾನೆ. ಅವರು ವರ್ಷಕ್ಕೆ ಒಂದು ಬಾರಿ ಬರುತ್ತಾರೆ. ವಿದೇಶಿಯರನ್ನು ಮದುವೆಯಾದ ಬಗ್ಗೆ ಬಾರಿಕರಲ್ಲಿ ಹಿರಿಯರನ್ನು ಕೇಳಿದರೆ ಅವರು ಏನನ್ನೂ ಹೇಳುವುದಿಲ್ಲ. ಒಂದು ವೇಳೆ ನಿಮ್ಮ ಜಾತಿ ಹುಡುಗಿಯರು ವಿದೇಶಿಯರನ್ನು ಮದುವೆಯಾದರೆ ನಿಮ್ಮ ಅಭ್ಯಂತರ ಇದೆಯೇ ಎಂದರೆ, ಈಗಂತೂ ಆಗಿಲ್ಲ, ಆದಾಗ ನೋಡುವ, ಎನ್ನುತ್ತಾರೆ. ಇವರ ರಾಜಕೀಯ ಭಾಗವಹಿಸುವಿಕೆ ಮತ ಚಲಾವಣೆಗೆ ಮಾತ್ರ ಸೀಮಿತವಾಗಿದೆ.

ಲಂಬಾಣಿ ಕುಟುಂಬಗಳ ಸಂಖ್ಯೆ 30 ಇದ್ದು ಇವರಲ್ಲಿ 13 ಕುಟುಂಬಗಳು ಲಂಬಾಣಿಗರ ಸಿದ್ಧ ಉಡುಪುಗಳ ಮಾರಾಟ ಮಾಡುತ್ತಿವೆ. ಒಂದು ಕುಟುಂಬ ಅಂಗಡಿ ಮಳಿಗೆಯನ್ನೆ ತೆರೆದು ಉಡುಪುಗಳನ್ನು ಮಾರಾಟ ಮಾಡುತ್ತಿದ್ದರೆ, 12 ಕುಟುಂಬಗಳು ಬೀದಿ ಬದಿಯಲ್ಲಿ ವ್ಯಾಪಾರ ಮಾಡುತ್ತಿವೆ. ಒಂದು ಕುಟುಂಬಕ್ಕೆ ಒತ್ತುವರಿ ಜಮೀನು ಇದೆ. 5 ಕುಟುಂಬಗಳು ಬೀದಿ ಬದಿಯಲ್ಲಿ ಹಣ್ಣು ಮಾರಾಟ, ಗೊಂಬೆಗಳ ಮಾರಾಟ ಇತ್ಯಾದಿಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಉಳಿದ ಕುಟುಂಬಗಳು ಅರಣ್ಯದಿಂದ ಉರುವಲು ಕಟ್ಟಿಗೆ ತಂದು ಮಾರಾಟ ಮಾಡಿ ಜೀವನ ಸಾಗಿಸುತ್ತಿದ್ದಾರೆ. 3 ಕುಟುಂಬದವರು ಮೇಕೆಗಳನ್ನು ಸಾಕಿದ್ದಾರೆ(ಕೋಷ್ಟಕ-29). ಉಳಿದ ಕುಟುಂಬಗಳು ಕೃಷಿಕೂಲಿ ಮಾಡಿ ಜೀವಿಸುತ್ತಿದ್ದಾರೆ. ಪ್ರೌಢಶಾಲೆಯ ಶಿಕ್ಷಣವನ್ನು ಮುಗಿಸಿದ ಇಬ್ಬರು ಯುವಕರು ಲೈಸೆನ್ಸ್ ಹೊಂದಿರದ ಪ್ರವಾಸಿ ಮಾರ್ಗದರ್ಶಿಗಳಾಗಿದ್ದಾರೆ. ಜೊತೆಗೆ ಲಂಬಾಣಿ ಜನರು ಗಾಂಜಾ, ಆಫೀಮು, ಚರಸ್ ಇತ್ಯಾದಿಗಳನ್ನು ಮಾರುತ್ತಿದ್ದಾರೆಂದು ಗ್ರಾಮಸ್ಥರ ತಿಳಿಸುತ್ತಾರೆ. ಈ ಕುಟುಂಬಗಳಲ್ಲಿ ಶೇ. 35.23ರಷ್ಟು ಶಿಕ್ಷಣ ಹೊಂದಿದವರಿದ್ದಾರೆ.(ಕೋಷ್ಟಕ-2) ಇಂದಿಗೂ ಮದುವೆಗಳನ್ನು ಹೆಣ್ಣಿನ ಮನೆಯಲ್ಲಿ ಮಾಡುವುದಿದೆ. ಲಂಬಾಣಿ ಜನರು ಹೆಚ್ಚು ಮದ್ಯ ಸೇವನೆ ಮಾಡುವುದರಿಂದ ಮದುವೆಗಳಲ್ಲಿ ಗಲಾಟೆ ನಡೆಯುವುದು ಸಾಮಾನ್ಯ. ಇವರ ಮದುವೆಯಲ್ಲಿ ಬೇರೆ ಜಾತಿ ಜನರು ಭಾಗವಹಿಸುವುದಿಲ್ಲ. ಧಾರ್ಮಿಕ ಚಟುವಟಿಕೆಗಳಾದ ಹರಕೆ,ಮನೆ ಬಿಡುವ ಕ್ರಮಗಳು ಇನ್ನೂ ಜೀವಂತವಾಗಿವೆ. ಲಂಬಾಣಿ ಹೆಂಗಸರನ್ನು ವಿದೇಶಿ ಪ್ರವಾಸಿಗರು ಮದುವೆಯಾಗುವುದು ಹೆಚ್ಚಾಗುತ್ತಿದೆ. ಹಂಪೆ ಗ್ರಾಮದಲ್ಲಿ ಈಗಾಗಲೇ ಮೂರು ಜನ ವಿದೇಶಿಯರು ಲಂಬಾಣಿ ಹುಡುಗಿಯರನ್ನು ಮದುವೆಯಾಗಿ ಹಂಪೆಯಲ್ಲಿಯೆ ಮನೆ ಮಾಡಿಕೊಂಡಿದ್ದಾರೆ.

ದೇವಾಂಗದ ಕುಟುಂಬಗಳ ಸಂಖ್ಯೆ 6 ಇವೆ. ಇವರು ಬಹು ಹಿಂದೆ ಕಂಪ್ಲಿ ಗ್ರಾಮದಿಂದ ವಲಸೆ ಬಂದವರು. ಈ ಎರಡು ಕುಟುಂಬಗಳು ಇಂದು ಆರಾಗಿವೆ. ಇದರಲ್ಲಿ ಒಂದು ಕುಟುಂಬದವರಿಗೆ

10 ಎಕರೆ ಜಮೀನಿದ್ದು ಸ್ಟೇಷನರಿ ಶಾಪನ್ನು ತೆರೆದಿದ್ದಾರೆ. ಎರಡು ಕುಟುಂಬಗಳು ಅತಿಥಿಗೃಹ ಮತ್ತು ಇಂಟರ್‌ನೆಟ್, ಹಣ ವಿನಿಮಯ ವ್ಯಾಪಾರದಲ್ಲಿ ತೊಡಗಿಸಿಕೊಂಡಿವೆ(ಕೋಷ್ಟಕ-29). ಉಳಿದ ಕುಟುಂಬಗಳು ರಸ್ತೆ ಬದಿಯಲ್ಲಿ ತೆಂಗಿನಕಾಯಿ ಮಾರಾಟದಲ್ಲಿ ತೊಡಗಿಸಿಕೊಂಡಿವೆ. ಒಬ್ಬ ಯುವಕ ಅಂಚೆಕಛೇರಿಯಲ್ಲಿ ಪೋಸ್ಟ್‌ಮ್ಯಾನ್ ಆಗಿ ಕೆಲಸ ನಿರ್ವಹಿಸುತ್ತಿದ್ದಾನೆ. ಧಾರ್ಮಿಕ ಆಚರಣೆಗಳಾದ ಮದುವೆ, ನಾಮಕರಣ, ಅಂತ್ಯಕ್ರಿಯೆ-ಇವುಗಳನ್ನು ಬೇರೆ ಯಾವುದೆ ಹಿಂದುಳಿದ ಜಾತಿಗಳು ಮಾಡುವಂತೆ ಮಾಡುತ್ತಾರೆ. ದೇವಾಂಗದ ಕುಟುಂಬಗಳಲ್ಲಿ ಆರ್ಥಿಕ ಸಬಲತೆ ಇದ್ದರೂ ರಾಜಕೀಯದಲ್ಲಿ ತಲೆ ಹಾಕುವುದಿಲ್ಲ. ಹಂಪೆ ಗ್ರಾಮವನ್ನು ಸ್ಥಳಾಂತರಿಸಕೂಡದೆಂದು ಸ್ಥಳೀಯರು ಕಟ್ಟಿರುವ ಸಂಘದಲ್ಲಿ ದೇವಾಂಗದ ಕುಟುಂಬದವರು ಸೇರಿದ್ದಾರೆ. ದೇವಾಂಗ ಜನಾಂಗದವರು ಧಾರ್ಮಿಕ ಮಠವನ್ನು ಹಂಪೆಯ ಹೊರವಲಯದಲ್ಲಿ ಸ್ಥಾಪಿಸಿ ಗಾಯತ್ರಿ ಪೀಠವೆಂದು ಹೆಸರಿಟ್ಟುಕೊಂಡಿದ್ದಾರೆ. ಹಂಪೆಯ ಗ್ರಾಮಸ್ಥರು ಈ ಮಠದ ಬಗ್ಗೆ ಹೆಚ್ಚಿನ ಆಸಕ್ತಿಯನ್ನೇನೂ ತೋರಿಸುತ್ತಿಲ್ಲ.

ಕಿಳ್ಳೆಕ್ಯಾತರ ಕುಟುಂಬಗಳ ಸಂಖ್ಯೆ 8 ಇವೆ. ಆಗಿನ ಬಿಜಾಪುರ ಜಿಲ್ಲೆಯ ಬಾಗಲಕೋಟೆಯಿಂದ ವಲಸೆ ಬಂದವರು. ನದಿಯಲ್ಲಿ ಮೀನು ಹಿಡಿದು ಮಾರಾಟ ಮಾಡುವುದು ಇವರ ಕೆಲಸ. ಹಿಂದೆ ನದಿ ತುಂಬಿ ಹರಿಯುತ್ತಿದ್ದಾಗ 200-250 ಕಿಲೋ ತೂಕದ ಮೀನನ್ನು ಹಿಡಿಯುತ್ತಿದ್ದರೆಂದು ಗ್ರಾಮಸ್ಥರು ತಿಳಿಸುತ್ತಾರೆ. ಸುಮಾರು 5-6 ತಿಂಗಳು ವಾಸವಿದ್ದು ಪುನಃ ತಮ್ಮ ಗ್ರಾಮಕ್ಕೆ ಮರಳುತ್ತಿದ್ದರು. ಆದರೆ ಎರಡು ಕುಟುಂಬಗಳು ಮಾತ್ರ ಇಲ್ಲಿಯೆ ನೆಲೆ ನಿಂತವು. ಹಾಗೆ ನೆಲೆ ನಿಂತ ಕುಟುಂಬಗಳು ಇಂದು ಎಂಟಾಗಿವೆ. ಕಿಳ್ಳೆಕ್ಯಾತರ ಮತ್ತೊಂದು ಕಸುಬು ಹಗಲುವೇಷ ಧರಿಸಿ ಗ್ರಾಮಗಳಲ್ಲಿ ಸುತ್ತಾಡುವುದು. ಆದರೆ ಈಗ ಜನರು ಪ್ರೋತ್ಸಾಹ ಕೊಟ್ಟು ನೋಡುವುದು ಕಡಿಮೆ ಆಗಿದೆ. ಆದ್ದರಿಂದ ಆ ಕಸುಬನ್ನು ಬಿಟ್ಟಿದ್ದೇವೆನ್ನುತ್ತಾರೆ. ಕಿಳ್ಳೆಕ್ಯಾತರ ಒಂದು ಕುಟುಂಬ ಅತಿಥಿಗೃಹ ಹೊಂದಿದೆ. ಮತ್ತೊಂದು ಕುಟುಂಬ ಎರಡು ಆಟೋಗಳನ್ನು ಖರೀದಿಸಿ ಬಾಡಿಗೆಗೆ ನೀಡುತ್ತಿವೆ. ಇನ್ನೊಂದು ಕುಟುಂಬ ದ್ವಿಚಕ್ರ ವಾಹನಗಳನ್ನು ವಿದೇಶಿಯರಿಗೆ ಬಾಡಿಗೆಗೆ ನೀಡುತ್ತದೆ. 3 ಕುಟುಂಬಗಳು 1ರಿಂದ 2 ಎಕರೆ ಒತ್ತುವರಿ ಜಮೀನನ್ನು ಹೊಂದಿ ಕೃಷಿಯಲ್ಲಿ ತೊಡಗಿವೆ. ಈ ಕುಟುಂಬಗಳು ಇಂದಿಗೂ ನದಿಯಲ್ಲಿ ಮೀನು ಹಿಡಿಯುವುದನ್ನು ಮುಂದುವರಿಸಿವೆ. ಈ ಕುಟುಂಬದಲ್ಲಿ ಶಿಕ್ಷಣ ಪಡೆದವರ ಸಂಖ್ಯೆ ಶೇ.50ರಷ್ಟಿದೆ.(ಕೋಷ್ಟಕ-2) ಧಾರ್ಮಿಕ ವಿಧಿ ವಿಧಾನಗಳನ್ನು ಇತರ ಹಿಂದುಳಿದ ಜಾತಿಗಳ ಜನರಂತೆ ಆಚರಣೆ ಮಾಡುತ್ತಾರೆ.

ಕ್ಷತ್ರಿಯರು ಅಥವಾ ರಾಜರ ಕುಟುಂಬಗಳು 9 ಇವೆ. ಈ ಕುಟುಂಬಗಳು ಮೂಲತಃ ಆಂಧ್ರದವರಾಗಿದ್ದು ಅಲ್ಲಿ ಅವರನ್ನು ರಾಜರೆಂದು ಕರೆಯುತ್ತಾರೆ. 7 ಕುಟುಂಬಗಳು ಅತಿಥಿ ಗೃಹ,

ರೆಸ್ಟೋರೆಂಟು, 8 ಪೆಟ್ಟಿಗೆ ಅಂಗಡಿಗಳನ್ನು ಮತ್ತು ಒಂದು ಇಂಟರ್‌ನೆಟ್ ವ್ಯವಹಾರವನ್ನು ಮಾಡುತ್ತಿವೆ (ಕೋಷ್ಟಕ-29). 9 ಕುಟುಂಬಗಳಲ್ಲಿ 5 ಕುಟುಂಬಗಳಿಗೆ 1ರಿಂದ 2 ಎಕರೆ ಭೂಮಿ ಇದ್ದು, 2 ಕುಟುಂಬಗಳಿಗೆ 2ರಿಂದ 5 ಎಕರೆ. 1 ಕುಟುಂಬಕ್ಕೆ 5 ರಿಂದ 10 ಎಕರೆ ಭೂಮಿ ಇದೆ. ಕುಟುಂಬದವರೆ ಕೃಷಿ ಮಾಡುತ್ತಿದ್ದಾರೆ. ಈ ಜಾತಿಯ ಕೆಲವರು ದೇವಸ್ಥಾನದ ಮುಜರಾಯಿ ಇಲಾಖೆಯಲ್ಲಿ 'ಡಿ' ದರ್ಜೆಯ ನೌಕರರಾಗಿದ್ದಾರೆ. ಈ ಕುಟುಂಬಗಳಲ್ಲೊಬ್ಬರು ಹಿಂದೆ ಹಂಪೆ ಗ್ರಾಮ ಪಂಚಾಯತಿ ಅಧ್ಯಕ್ಷರು ಆಗಿದ್ದರು. ಈಗ ಇವರು ವಿರುಪಾಪುರ ಗಡ್ಡೆಯ ದಡದಲ್ಲಿ ಅತಿಥಿಗೃಹವನ್ನು ನಡೆಸುತ್ತಿದ್ದಾರೆ. ಇಂದಿಗೂ ಇವರ ಮಾತೃಭಾಷೆ ತೆಲುಗು. ಇವರು ಕನ್ನಡವನ್ನು ತೆಲುಗು ಮಿಶ್ರಿತ ಭಾಷೆಯಲ್ಲಿ ಮಾತನಾಡುತ್ತಾರೆ. ಹಿಂದಿ ಭಾಷೆ ಕೂಡ ಈ ಜನರಿಗೆ ತಿಳಿದಿದೆ. ಸಿಂಗ್ ಮತ್ತು ರಾಜ/ಕ್ಷತ್ರಿಯರ ಕುಟುಂಬಗಳಲ್ಲಿ ಸಾಮ್ಯತೆ ಕಂಡುಬರುತ್ತದೆ. ಆದರೆ ಇವರ ನಡುವೆ ಕೊಡು-ಕೊಳ್ಳುವಿಕೆ ಇಲ್ಲ. ಆಂಧ್ರದ ರಾಜರ ಕುಟುಂಬಗಳಿಗೆ ಚಂದ್ರ ವಂಶದವರೆಂದು ಕರೆದರೆ, ಇಲ್ಲಿನ ಸಿಂಗ್‌ರಿಗೆ ಸೂರ್ಯವಂಶದವರೆಂದು ಸ್ಥಳೀಯರು ಕರೆಯುತ್ತಾರೆಂದು ಸಿಂಗ್‌ರು ಹೇಳುತ್ತಾರೆ. ಧಾರ್ಮಿಕ ಕ್ರಿಯೆಗಳನ್ನು ರಾಜರು ಮತ್ತು ಸಿಂಗ್‌ರು ಒಂದೇ ವಿಧದಲ್ಲಿ ಆಚರಿಸುತ್ತಾರೆ. ಸಿಂಗ್‌ರಂತೆ ಕ್ಷತ್ರಿಯರು ರಾಜಕೀಯದಲ್ಲಿ ಹಿಂದೆ ಉಳಿದಿಲ್ಲ.

ತಮಿಳರ ಬೋವಿ 6 ಕುಟುಂಬಗಳು ಮತ್ತು ನಾಯ್ಡುಗಳ ಎರಡು ಕುಟುಂಬಗಳಿದ್ದು, ಈ ಕುಟುಂಬಗಳ ಭಾಷೆ ತಮಿಳು. ತಮಿಳರ ಬೋವಿ ಕುಟುಂಬಗಳಲ್ಲಿ ಒಂದು ಹೋಟೆಲ್, ಪೆಟ್ಟಿಗೆ ಅಂಗಡಿಯಿದೆ(ಕೋಷ್ಟಕ-29). ಮೀನು ಹಿಡಿದು ವ್ಯಾಪಾರ ಮಾಡುವುದು ಮುಖ್ಯ ಕಸುಬು. ನಾಯ್ಡು ಕುಟುಂಬಗಳು ಎರಡು ಗೆಸ್ಟ್‌ಹೌಸ್ ಎರಡು ಆಟಿಕೆ ಸಾಮಾನುಗಳ ಅಂಗಡಿಯನ್ನು ಹೊಂದಿವೆ. ಜೊತೆಗೆ ಒಂದು ಕುಟುಂಬ ರಿಯಲ್ ಎಸ್ಟೇಟ್ ಮಧ್ಯವರ್ತಿಯಾಗಿದೆ. ಇವರ ಧಾರ್ಮಿಕ ಆಚರಣೆಗಳಲ್ಲಿ ತಮಿಳರ ಮಾದರಿಯಲ್ಲಿಯೆ ಮುಂದುವರಿದಿವೆ. ಸ್ಥಳೀಯವಾಗಿ ಜರುಗುವ ಯಾವುದೆ ಹಬ್ಬಗಳನ್ನು ಮಾಡುವುದಿಲ್ಲ. ತಮಿಳುನಾಡಿನಲ್ಲಿ ಆಚರಿಸುವ ಪೊಂಗಲ್ ಹಬ್ಬವನ್ನು ದೊಡ್ಡ ಮಟ್ಟದಲ್ಲಿ ಆಚರಿಸುತ್ತಾರೆ.

ಪಿಂಜಾರ ಅಥವಾ ಮುಸ್ಲಿಮ್ ಕುಟುಂಬಗಳು 27 ಇವೆ. ಪಿಂಜಾರ ಕುಟುಂಬಗಳಲ್ಲಿ ಯಾರೂ ಅತಿಥಿಗೃಹಗಳನ್ನು ಹೊಂದಿಲ್ಲ. ಒಂದು ಕುಟುಂಬ 1ಎಕರೆ ಭೂಮಿಯನ್ನು ಹೊಂದಿದ್ದು ಕೃಷಿ ಮಾಡುತ್ತಿದೆ. ಒಂದು ಹೋಟಲ್, 3 ಪೆಟ್ಟಿಗೆ ಅಂಗಡಿಗಳು, ತಳ್ಳುವ ಬಂಡಿಯಲ್ಲಿ ಸಾಯಂಕಾಲ ತಿನಿಸು ತಯಾರಿಸಿ ಮಾರುವ 2ಕುಟುಂಬ, ಐಸ್‌ಕ್ರಿಮ್ ಮಾರುವ 3ಕುಟುಂಬಗಳು ಮತ್ತು ಹಣ್ಣುಗಳನ್ನು, ತೆಂಗಿನಕಾಯಿ ಮಾರುವ 4ಕುಟುಂಬಗಳು, ಆಟೋವನ್ನು ಓಡಿಸಿ ಜೀವನ ಮಾಡುವ 1ಕುಟುಂಬ ಹಾಗೂ 1ಕುಟುಂಬ ಸರಾಯಿ ವ್ಯಾಪಾರ ಮಾಡುತ್ತಿವೆ(ಕೋಷ್ಟಕ-29). ಇನ್ನುಳಿದ ಕುಟುಂಬಗಳು ಕಟ್ಟಡ ರ್ಮಾಣ ಕೆಲಸಗಳಲ್ಲಿ, ಗೆಸ್ಟ್‌ಹೌಸ್‌ಗಳಲ್ಲಿ ಕೆಲಸ ಮಾಡಿಕೊಂಡಿದ್ದಾರೆ. ಈ ಕುಟುಂಬಗಳಲ್ಲಿ

ವಿದ್ಯಾವಂತ ಯುವಕ ಯುವತಿಯರಿದ್ದು, ಇವರಲ್ಲಿ ಒಬ್ಬ ಯುವಕ ಸರಕಾರಿ ನೌಕರಿಯಲ್ಲಿದ್ದು, ಈತನ ಸೋದರಿ ಸಹ ಅನುದಾನಿತ ಪ್ರೌಢಶಾಲೆಯಲ್ಲಿ ಅರೆಕಾಲಿಕ ಶಿಕ್ಷಕಿಯಾಗಿ ಕೆಲಸ ಮಾಡುತ್ತಿದ್ದಾರೆ. ಇಬ್ಬರು ಯುವಕರು ಪ್ರವಾಸಿಗರ ಗೈಡ್‌ಗಳಾಗಿ ಸೇವೆಯಲ್ಲಿ ನಿರತರಾಗಿದ್ದಾರೆ. ಈ ಕುಟುಂಬಗಳ ಮನೆಗಳು ಹಂಪೆಯ ಬಜಾರದ ಪೂರ್ವಕ್ಕೆ ಎರಡು ಬದಿಗಳಲ್ಲಿ ಇವೆ. ಇವರು ಮುಸ್ಲಿಂ ಧರ್ಮದಂತೆ ಎಲ್ಲಾ ಆಚರಣೆಗಳನ್ನು ಮಾಡುತ್ತಾರೆ. ಆದರೆ ಮೊಹರಂ ಹಬ್ಬವನ್ನು ಹಂಪೆ ಗ್ರಾಮದಲ್ಲಿ ಮಾಡುವುದಿಲ್ಲ. ಏಕೆಂದು ಪ್ರಶ್ನೆ ಮಾಡಿದರೆ ಅವರು ಆಸಕ್ತಿ ಇಲ್ಲ ಎನ್ನುತ್ತಾರೆ. ಮುಸ್ಲಿಂರಿಗೆ ಹಂಪೆಯಲ್ಲಿ ಪ್ರತ್ಯೇಕ ಸ್ಮಶಾನವಿಲ್ಲ. ಈ ಕುಟುಂಬಗಳು ಅಂತ್ಯಕ್ರಿಯೆ ನಡೆಸಲು ಕಮಲಾಪುರದ ಮುಸ್ಲಿಂ ಸ್ಮಶಾನಕ್ಕೆ ಹೋಗುತ್ತಾರೆ. ಈ ಕುಟುಂಬಗಳಿಗೆ ರಾಜಕೀಯದ ಒಡನಾಟ ಕೂಡ ಅಷ್ಟಕಷ್ಟೆ.

ಉಪ್ಪಾರ, ಅಗಸರವು ತಲಾ 4 ಕುಟುಂಬಗಳು ಇವೆ. ಉಪ್ಪಾರ ಕುಟುಂಬಗಳಲ್ಲಿ ಒಂದು ಹೋಟಲ್ ಇದ್ದು, ಹಣ್ಣಿನ ಮತ್ತು ತೆಂಗಿನಕಾಯಿ ಅಂಗಡಿಗಳು 3 ಇವೆ. ಅಗಸರ 2 ಪೆಟ್ಟಿಗೆ ಅಂಗಡಿಯಿದ್ದು, ಬಟ್ಟೆ ತೊಳೆಯುವುದು, ಬಟ್ಟೆಗಳಿಗೆ ಇಸ್ತ್ರಿ ಹಾಕುವ ಕಸುಬನ್ನು ಮುಂದುವರಿಸಿ ಕೊಂಡು ಬರುತ್ತಿದ್ದಾರೆ(ಕೋಷ್ಟಕ-29). ಕೊರವರ ಕುಟುಂಬಗಳು 6 ಇವೆ.(ಕೋಷ್ಟಕ-2) ಇವರು ಇಂದಿಗೂ ಮೇಳ ಉದುವುದನ್ನು ಮುಂದುವರಿಸಿಕೊಂಡು ಬಂದಿದ್ದಾರೆ. ಅಲ್ಲದೆ ಬುಟ್ಟಿ ಮತ್ತು ಕಸಬರಿಕೆ ತಯಾರು ಮಾಡುತ್ತಾರೆ. ದೇವಸ್ಥಾನದಲ್ಲಿ ಸ್ವಚ್ಛಗೊಳಿಸುವ ಕೆಲಸದಲ್ಲಿ ಕೊರವರ ಹೆಂಗಸರಿದ್ದಾರೆ. ಅಗಸರು ಮತ್ತು ಕೊರವರು ದೇವಸ್ಥಾನದ ಧಾರ್ಮಿಕ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಾರೆ. ಅಗಸರು ಪಂಜು ಹಿಡಿದರೆ, ಕೊರವರು ಮೇಳ ಬಾರಿಸುತ್ತಾರೆ. ಕ್ಷೌರಿಕರು ಮತ್ತು ಬಳೆಗಾರರು ತಲಾ ಮೂರು ಕುಟುಂಬಗಳಿವೆ. ಕ್ಷೌರಿಕರ ಮೂರು ಕುಟುಂಬಗಳು ತಮ್ಮ ವೃತ್ತಿಯಾದ ಕ್ಷೌರಿಕ ಕೆಲಸವನ್ನೆ ಮಾಡಿಕೊಂಡು ಬಂದಿವೆ. ಕ್ಷೌರಿಕ ಶಾಪ್‌ಗಳನ್ನು ತೆರೆದಿದ್ದಾರೆ. ಬಿಡುವಿಲ್ಲದಂತೆ ಯಾವಾಗಲೂ ಈ ಶಾಪ್‌ಗಳು ತುಂಬಿರುತ್ತವೆ. ವಿದೇಶಿ ಪ್ರವಾಸಿಗರು ಬರುವ ನವೆಂಬರ್-ಏಪ್ರಿಲ್ ತಿಂಗಳುಗಳ ಸೀಜನ್‌ನಲ್ಲಿ ಹೆಚ್ಚು ದುಡಿಮೆ ಮಾಡುತ್ತಾರೆ. ಕರ್ಮ ಮಾಡುವವರು ಸಹ ಇವರ ಗಿರಾಕಿಗಳೆ ಆಗಿದ್ದಾರೆ. ಬಳೆಗಾರ ಕುಟುಂಬಗಳಲ್ಲಿ ಒಂದು ಬಳೆ ಶಾಪ್ ಮತ್ತು ಎರಡು ಕುಟುಂಬಗಳು ತೆಂಗಿನಕಾಯಿ ಮಾರಾಟ ಮಾಡುತ್ತಿವೆ. ಈಡಿಗರ ಕುಟುಂಬಗಳು 5 ಇವೆ. ಇವರು ಕೃಷಿ ಮತ್ತು ಕೂಲಿ ಮಾಡುತ್ತಿವೆ. ಒಂದು ಕುಟುಂಬ ಒಂದು ಎಕರೆ ಒತ್ತುವರಿ ಭೂಮಿಯನ್ನು ಪಡೆದು ಕೃಷಿ ಮಾಡುತ್ತಿದೆ. ಬಿಡುವಿದ್ದಾಗ ಹಣ್ಣು ತರಕಾರಿಗಳನ್ನುಕೂಡ ಮಾರಾಟ ಮಾಡುತ್ತದೆ. ಒಂದು ಎಕರೆ ಭೂಮಿಯನ್ನು ಹೊಂದಿದ್ದು ಕೃಷಿಯಲ್ಲಿ ಒಂದು ಕುಟುಂಬ ನಿರತವಾಗಿದೆ.

ವಿಶ್ವಕರ್ಮ ಜನಾಂಗದ ಎರಡು ಕುಟುಂಬಗಳು ಮೂರ್ತಿ ಕೆತ್ತುವ ಹಾಗೂ ಟಿ.ವಿ.ಗಳಿಗೆ ಡಿಶ್ ಕನೆಕ್ಷನ ಕೊಡುವ ಸೇವೆಯಲ್ಲಿ ತೊಡಗಿವೆ. ಇವರಿಗೆ ಮೂರ್ತಿಗಳ ಕೆತ್ತನೆಗೆ ಬೇರೆ ಬೇರೆ ಸ್ಥಳಗಳಿಂದ

ಆರ್ಡರ್ ಬರುತ್ತವೆ. ಹರಿಜನ ಕುಟುಂಬಗಳು 4 ಇವೆ. ಎರಡು ಕುಟುಂಬಗಳು ಪೆಟ್ಟಿಗೆ ಅಂಗಡಿ ವ್ಯಾಪಾರವನ್ನು ಮಾಡುತ್ತಿವೆ. ಈ ಒಂದು ಕುಟುಂಬದ ಮುಖ್ಯಸ್ಥ ಗ್ರಾಮಪಂಚಾಯತಿ ಕಛೇರಿಯಲ್ಲಿ ಜವಾನನಾಗಿ ಕೆಲಸ ಮಾಡುತ್ತಿದ್ದಾನೆ. ಮತ್ತೊಂದು ಕುಟುಂಬ ಬೀದಿಯ ಕಸ ಗುಡಿಸುವುದು, ಶೌಚಾಲಯ ಸ್ವಚ್ಛ ಗೊಳಿಸುವುದು ಮುಂತಾದ ಕೆಲಸಗಳಲ್ಲಿ ನಿರತವಾಗಿದೆ. ಇನ್ನೊಂದು ಕುಟುಂಬದ ಯಜಮಾನ ಹಲವು ವರ್ಷಗಳ ಹಿಂದೆ ಹಲವಾರು ರೆಸ್ಟೋರೆಂಟುಗಳಲ್ಲಿ ಅಡಿಗೆಯವನಾಗಿ ಕೆಲಸ ನಿರ್ವಹಿಸಿದ್ದಾನೆ. ರೆಸ್ಟೋರೆಂಟ್ ಮಾಲಿಕರು ವಿದೇಶಿಯರ ಆಹಾರವನ್ನು ತಾವೆ ತಯಾರಿಸಲು ಕಲಿತ ನಂತರ ಆತನನ್ನು ಕೆಲಸದಿಂದ ಬಿಡಿಸಿದ್ದಾರೆ. ಈಗ ಆ ವ್ಯಕ್ತಿ ಕೃಷಿ ಕೂಲಿಗೆ ಹೋದರೆ, ಹೆಂಡತಿ ಎಳೆ ನೀರು, ತೆಂಗಿನ ಕಾಯಿ ಮಾರಟ ಮಾಡುತ್ತಾಳೆ. ನಾಲ್ಕನೆಯ ಕುಟುಂಬದ ಮುಖ್ಯಸ್ಥ ರೈಲ್ವೆ ಇಲಾಖೆಯಲ್ಲಿ ಕೆಲಸದಲ್ಲಿದ್ದು ಒಂದು ಪೆಟ್ಟಿಗೆ ಅಂಗಡಿಯನ್ನು ಪ್ರಾರಂಭಿಸಿದ್ದಾರೆ. ಈ ಕುಟುಂಬದ ಯುವತಿ ಬೇರೆಯವರ ಎಸ್.ಟಿ.ಡಿ.ಬೂತನಲ್ಲಿ ಕೆಲಸ ಮಾಡುತ್ತಾಳೆ. ಹರಿಜನ ಕುಟುಂಬಗಳೆ ಇಂದಿಗೂ ಸತ್ತವರಿಗಾಗಿ ಸ್ಮಶಾನದಲ್ಲಿ ಗುಂಡಿ ತೋಡುವುದು ಮತ್ತು ಸತ್ತ ದನಗಳನ್ನು ಹೊತ್ತೊಯ್ಯುವುದು ಮುಂತಾದ ಕೆಲಸಗಳನ್ನು ಮಾಡುತ್ತವೆ. ಇವರು ಕಡಿಮೆ ಜನರಿರುವುದರಿಂದ ತಮ್ಮ ಈ ಕೆಲಸಕ್ಕೆ ವಡ್ಡರು, ಲಂಬಾಣಿಗಳ ಸಹಾಯ ಪಡೆಯುತ್ತಾರೆ. ಹಂಪೆಯ ಗ್ರಾಮದಲ್ಲಿ ಅಸ್ಪೃಶ್ಯತೆ ಇಲ್ಲ. ಹರಿಜನರೆ ತಿಳಿಸುವಂತೆ ಬ್ರಾಹ್ಮಣರಾಗಲಿ, ಬೇರೆಯವರಾಗಲಿ ಪಕ್ಕದಲ್ಲಿ ಕುಳಿತು ಊಟ, ತಿಂಡಿ ಸೇವಿಸುತ್ತಾರೆಂದು ಹೇಳುತ್ತಾರೆ.

ಜಮ್ಮು ಮತ್ತು ಕಾಶ್ಮೀರದಲ್ಲಿ ಭಯೋತ್ಪಾದನೆ ಇತ್ತೀಚಿನ ದಿನಗಳಲ್ಲಿ ಹೆಚ್ಚಾಗಿದ್ದರಿಂದ, ಅಲ್ಲಿಗೆ ಹೋಗುವ ವಿದೇಶಿ ಪ್ರವಾಸಿಗರ ಸಂಖ್ಯೆ ಕ್ಷೀಣಿಸಿದೆ. ಇದರಿಂದ ಕಾಶ್ಮೀರದ ವ್ಯಾಪಾರಿಗಳು ಸೀಜನ್‌ನಲ್ಲಿ ವ್ಯಾಪಾರಕ್ಕಾಗಿ ಹಂಪೆಗೆ ಬಂದು ನಂತರ ಮರಳಿ ಹೋಗುತ್ತಾರೆ. ಆದರೆ ಅವರಲ್ಲಿ 4 ಕುಟುಂಬಗಳು ವಾಪಸ್ಸು ಹೋಗದೆ ಇಲ್ಲಿಯೆ ನೆಲೆಸಿವೆ. ಇದರಲ್ಲಿ 3 ಕುಟುಂಬಗಳು ಹಂಪೆಯಲ್ಲಿ ವಾಸವಾಗಿವೆ. ಇವರು ಸಿದ್ಧ ಉಡುಪು, ಬಿನ್ನ ಲೋಹದ ಆಭರಣಗಳು, ಪುರಾತನ ವಸ್ತುಗಳು, ಹರಳು ಮತ್ತು ರುದ್ರಾಕ್ಷಿ ಮಾಲೆಗಳನ್ನು ಮಾರಾಟ ಮಾಡುತ್ತಾರೆ. ಒಂದು ಕುಟುಂಬದವರು ಮಾತ್ರ ಹೊಸಪೇಟೆಯಿಂದ ಬಂದು ಹೋಗುತ್ತಾರೆ. ಈ ಕುಟುಂಬಗಳೆಲ್ಲವು ಮುಸ್ಲಿಂ ಕೋಮಿನವರು. ಇವರು ಇಲ್ಲೆ ನೆಲಸಲು ಬಯಸುತ್ತೇವೆ ಎಂದು ತಿಳಿಸುತ್ತಾರೆ. ಹೀಗೆ ಗ್ರಾಮದ ಬಹುತೇಕ ಎಲ್ಲ ಕುಟುಂಬಗಳು ಪ್ರವಾಸೋದ್ಯಮಕ್ಕೆ ಪೂರಕವಾಗಿರುವ ವಾಣಿಜ್ಯ ವ್ಯಾಪಾರಗಳಲ್ಲಿ ಪರೋಕ್ಷವಾಗಿ ಮತ್ತು ಪ್ರತ್ಯಕ್ಷವಾಗಿ ತೊಡಗಿಸಿಕೊಂಡಿರುವುದು ಕಂಡುಬರುತ್ತದೆ. ಅದರಲ್ಲೂ ಇಲ್ಲಿನ ಹಿಂದುಳಿದ ಜಾತಿ ಮತ್ತು ವರ್ಗಗಳು ಈ ಪ್ರಕ್ರಿಯೆಯಲ್ಲಿ ತೊಡಗಿಸಿಕೊಂಡಿರುವುದು ವಿಶೇಷವಾಗಿದೆ. ಉದ್ಯಮ ಅದರಲ್ಲೂ ಅತಿಯಾದ ಬಂಡವಾಳದ ವಿನಿಯೋಜನೆ ಬಯಸುವ ಆಧುನಿಕ ಉದ್ಯಮಗಳಲ್ಲಿ ಸಮಾಜದ ಕೆಳವರ್ಗದ ಇರುವಿಕೆ ಅತಿ ವಿರಳ. ಹಂಪೆಯ ಈ ಬೆಳವಣಿಗೆ (ಸಮಾಜದ

ಕೆಳವರ್ಗವನ್ನು ಒಳಗೊಂಡು ನಡೆದಿರುವ ಪ್ರವಾಸೋದ್ಯಮ) ನಮ್ಮ ತೃತೀಯ ವಲಯದ ಬೆಳವಣಿಗೆಯ ಚರಿತ್ರೆಯಲ್ಲಿ ಒಂದು ವಿಶೇಷ. ಈ ವಿಶೇಷವನ್ನು ಅರ್ಥ ಮಾಡಿಕೊಳ್ಳಲು ಹಂಪಿಯ ಪ್ರವಾಸೋದ್ಯಮದ ಎಲ್ಲ ಆಯಾಮಗಳನ್ನು ಅರ್ಥ ಮಾಡಿಕೊಳ್ಳಬೇಕು. ಪ್ರವಾಸೋದ್ಯಮ ಯಾವಾಗ? ಹೇಗೆ? ಯಾರಿಂದ? ಯಾಕೆ ಬೆಳೆಯಿತು? ಇದರಿಂದ ಹಂಪೆಯ ಸಾಮಾಜಿಕ ಹಾಗು ಆರ್ಥಿಕ ಪರಿಸರ ಯಾವ ಬದಲಾವಣೆಗಳನ್ನು ಕಂಡಿದೆ? ಸಮಾಜದ ವಿವಿಧ ಜಾತಿ ಜನರು ಹೇಗೆ ಪ್ರವಾಸೋದ್ಯಮದಿಂದ ಲಾಭ ಪಡೆದಿದ್ದಾರೆ? ಇತ್ಯಾದಿ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಬೇಕಾಗಿದೆ. ಪ್ರಬಂಧದ ಮುಂದಿನ ಅಧ್ಯಾಯಗಳಲ್ಲಿ ಈ ಎಲ್ಲ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಲು ಪ್ರಯತ್ನಿಸಲಾಗಿದೆ.

ಅಡಿಟಿಪ್ಪಣಿಗಳು

1. ಸದಾನಂದ ಕನವಳ್ಳಿ (ಅನು), *ಮರೆತುಹೋದ ಮಹಾ ಸಾಮ್ರಾಜ್ಯ ವಿಜಯನಗರ,* ಹಂಪೆ : ಕನ್ನಡ ವಿಶ್ವವಿದ್ಯಾಲಯ, 1992, ಪುಟ. 275
2. ಅದೇ , ಪುಟ. 95
3. ಅದೇ , ಪುಟ. 225
4. ಅದೇ , ಪುಟ. 226
5. ನಾಗರಾಜರಾವ್ ಎಂ. ಎಸ್., *ವಿಜಯನಗರ ದಿ ಐಸ್ ಆಫ್ ಅಲೆಕ್ಸ್‌ಜಾಂಡರ್ ಜೆ. ಗ್ರೀನ್ ಲಾ, 1856, ಜಾನ್ ಗೊಲ್ಲಿಂಗ್ಸ್, 1983,* ಮೈಸೂರು: ಡೈರೆಕ್ಟರೇಟ್ ಆಫ್ ಆರ್ಕ್ಯಾಲಜಿ ಆ್ಯಂಡ್ ಮ್ಯೂಸಿಯಂ, 1988, ಪು. 07
6. ಸ್ಮಾರಕಗಳ ಹಿರಿಯ ಸಂರಕ್ಷಣಾಧಿಕಾರಿಗಳು, *ಕೇಂದ್ರ ಪುರಾತತ್ವ ಇಲಾಖೆಯಲ್ಲಿ ದಾಖಲೆಗಳು,* ಕಮಲಾಪುರ: ಪುರಾತತ್ವ ಇಲಾಖೆ, 2001
7. ಪುರಾತತ್ವ ಇಲಾಖೆಯ ದಾಖಲೆಗಳು, *ಪೂರ್ವೋಕ್ತ, ಪು. 08*
8. ಚಂದ್ರಪೂಜಾರಿ ಎಂ., *ದೇಶಿಯತೆ ನೆರಳಲ್ಲಿ ವಿಕೇಂದ್ರೀಕರಣ,* ಹಂಪಿ : ಕನ್ನಡ ವಿಶ್ವವಿದ್ಯಾಲಯ, 2001, ಪುಟ. 63
9. ಡೈರೆಕ್ಟರ್ ಆಫ್ ಸೆನ್ಸ್‌ಸ್ ಅಪರೇಶನ್, ಡಿಸ್ಟ್ರಿಕ್ಟ್ ಸೆನ್ಸ್‌ಸ್ ಹ್ಯಾಂಡ್ ಬುಕ್, ಬಳ್ಳಾರಿ ಡಿಸ್ಟ್ರಿಕ್ಟ್, ಬೆಂಗಳೂರು : ಗವರ್ನಮೆಂಟ್ ಆಫ್ ಕರ್ನಾಟಕ, 1991
10. ಗವರ್ನ್‌ಮೆಂಟ್ ಆಫ್ ಕರ್ನಾಟಕ, *ಹೈಪವರ್ ಕಮಿಟಿ ಪಾರ್ ರಿ ಅಡ್ರೆಸಲ್ ಆಫ್ ರೀಜನಲ್ ಇಂಬ್ಯಾಲೆನ್ಸ್ ಫೈನಲ್ ರೀಪೊರ್ಟ್* , ಪಾರ್ಟ್ VII, ಅಪೆಂಡಿಕ್ಸ್ ಜೂನ್ 2002, ಬೆಂಗಳೂರು: 2001

11. ಡೈರೆಕ್ಟರ್ ಆಫ್ ಸೆನ್ಸಸ್ ಅಪರೇಶನ್, ಡಿಸ್ಟ್ರಿಕ್ಟ್ ಸೆನ್ಸಸ್ ಹ್ಯಾಂಡ್ ಬುಕ್, ಪೂರ್ವೋಕ್ತ

12. ತಹಸಿಲ್ದಾರರು, *1996ರ ಕೃಷಿಗಣತಿ ಮಾಹಿತಿ ಪುಸ್ತಕ*, ಹೊಸಪೇಟೆ : ತಾಲೂಕು ಕಚೇರಿ,2001

13. ಪಂಚಾಯತಿ ಕಾರ್ಯದರ್ಶಿಗಳು, *ಗ್ರಾಮಪಂಚಾಯತಿ ಬೇಡಿಕೆ ರಿಜಿಸ್ಟರ್*, ಹಂಪೆ : ಗ್ರಾಮ ಪಂಚಾಯತಿ ಕಚೇರಿ, 2001

ಕೋಷ್ಟಕ-1

ತಾಲೂಕು, ಜಿಲ್ಲೆ ಮತ್ತು ರಾಜ್ಯಕ್ಕೆ ಹೋಲಿಸಿ ಹಂಪೆಯ ಕೆಲವು ಅಂಕಿ ಅಂಶಗಳು

ಕ್ರ.ಸಂ.	ವಿವರಗಳು	ಹಂಪೆ	ಹೊಸಪೇಟೆ	ಬಳ್ಳಾರಿ	ಕರ್ನಾಟಕ
01	ವಿಸ್ತೀರ್ಣ(ಚ.ಕಿ.ಮೀ)	3.43	934.19	8447.00	191791.00
02	ಜನಸಂಖ್ಯೆ (2001ರ ಜನಗಣತಿ)	2172	377665	2025242	52733958
03	ಸಾಕ್ಷರರು (2001ರ ಜನಗಣತಿ)	1237 (65.76)	197195 (61.29)	1000602 (58.04)	30774988 (67.04)
04	ಸಾಗುವಳಿದಾರರು	51 (7.38)	28025 (22.05)	227663 (32.14)	5915633 (34.21)
05	ಕೃಷಿ ಕಾರ್ಮಿಕರು	358 (51.81)	51624 (40.63)	289605 (40.89)	4999959 (28.91)
06	ಪಶುಸಂಗೋಪನೆ	06 (0.87)	1232 (0.97)	8690 (1.23)	616733 (3.57)
07	ಗಣಿಗಾರಿಕೆ	02 (0.29)	6757 (5.32)	1572 (2.23)	116369 (0.67)
08	ಗುಡಿ ಕೈಗಾರಿಕೆ	02 (0.29)	1435 (1.13)	9687 (1.37)	322151 (1.86)
09	ಆಧುನಿಕ ಕೈಗಾರಿಕೆ	04 (0.56)	8243 (6.49)	30208 (4.26)	1528975 (8.84)
10	ಕಟ್ಟಡ ನಿರ್ಮಾಣ	08 (1.16)	2768 (2.18)	12706 (1.79)	427972 (2.47)
11	ವ್ಯಾಪಾರ ಮತ್ತು ವಾಣಿಜ್ಯ	150 (21.71)	12197 (9.60)	48462 (6.84)	1379954 (7.98)
12	ಸಾರಿಗೆ ಮತ್ತು ಸಂಪರ್ಕ	04 (0.56)	4575 (3.60)	18588 (2.62)	454964 (2.63)
13	ಇತರೇ ಸೇವೆಗಳು	106 (15.34)	10215 (8.04)	46969 (6.63)	1529407 (8.84)
14	ಪ್ರಧಾನ ಕೆಲಸಗಾರರು (1991ರ ಜನಗಣತಿ)	691 (100)	127071 (100)	708299 (100)	17292117 (100)

ಸೂಚನೆ : 2001ರ ಜನಗಣತಿಯಲ್ಲಿ ದುಡಿಮೆಗಾರ ವರ್ಗದ ಅಂಕಿ ಅಂಶಗಳು ಲಭ್ಯ ಇಲ್ಲದ ಕಾರಣ 1991ರ ಜನಗಣತಿಯ ಅಂಕಿ ಅಂಶಗಳನ್ನು ಬಳಸಿಕೊಳ್ಳಲಾಗಿದೆ.

ಮೂಲ : 1. ಡೈರೆಕ್ಟರ್ ಆಫ್ ಸೆನ್ಸಸ್ ಆಪರೇಶನ್, *ಡಿಸ್ಟ್ರಿಕ್ಟ್ ಸೆನ್ಸಸ್ ಹ್ಯಾಂಡ್ ಬುಕ್, ಬಳ್ಳಾರಿ ಡಿಸ್ಟ್ರಿಕ್ಟ್,* ಬೆಂಗಳೂರು : ಗವರ್ನ್‌ಮೆಂಟ್ ಆಫ್ ಕರ್ನಾಟಕ, 1991

2. ಗವರ್ನ್‌ಮೆಂಟ್ ಆಫ್ ಕರ್ನಾಟಕ, *ಹೈಪವರ್ ಕಮಿಟಿ ಫಾರ್ ರಿ ಅಡ್ರೆಸೆಲ್ ಆಫ್ ರೀಜನಲ್ ಇಂಬ್ಯಾಲೆನ್ಸ್ ಫೈನಲ್ ರಿಪೋರ್ಟ್ ಪಾರ್ಟ್* VII *ಜೂನ್ 2002,* ಬೆಂಗಳೂರು : 2001

ಕೋಷ್ಟಕ-2
ಹಂಪೆ ಕುಟುಂಬಗಳ ವಿವರ

ಕ್ರ. ಸಂ.	ಜಾತಿಗಳು	ಕುಟುಂಬ ಗಳು	ಒಟ್ಟು ಜನಸಂಖ್ಯೆ	ಸಾಕ್ಷರರು	
				ಸಂಖ್ಯೆ	ಶೇಕಡವಾರು
1	ರಜಪೂತ್	42	173	106	61.27
2	ಲಿಂಗಾಯಿತ	65	295	200	67.79
3	ನಾಯಕ	130	562	250	44.48
4	ಕ್ಷತ್ರಿಯ	09	55	25	45.45
5	ವೈಶ್ಯ	12	62	54	87.70
6	ದೇವಾಂಗ	06	24	22	91.66
7	ಬಾರಿಕ	32	150	96	64.00
8	ವಡ್ಡರು	28	130	72	55.38
9	ಕುರುಬರು	12	67	41	61.19
10	ನಾಯ್ಡು	02	10	08	80.00
11	ಬ್ರಾಹ್ಮಣ	40	139	131	94.24
12	ಕಿಳೇಕ್ಯಾತ	08	46	23	50.00
13	ತಮಿಳ ಬೋವಿ	06	23	14	60.86
14	ಮುಸ್ಲಿಂ	27	122	73	59.83
15	ಬಳಿಗಾರ	03	15	05	33.33
16	ಹರಿಜನ	04	24	12	50.00
17	ಅಗಸರು	04	16	08	50.00
18	ಲಂಬಾಣಿ	30	153	54	35.23
19	ಜೈನ	04	16	11	68.75
20	ಉಪ್ಪಾರ	04	16	08	50.00
21	ಕ್ಷೌರಿಕರು	03	14	08	57.14
22	ಈಡಿಗ	05	26	07	26.72
23	ಕೊರವರು	06	32	09	28.12
24	ವಿಶ್ವಕರ್ಮ	03	18	13	72.22
	ಒಟ್ಟು	485	2188	1249	57.08

ಸೂಚನೆ : ಜಾತಿವಾರು 0-6 ಜನಸಂಖ್ಯೆ ಲಭ್ಯವಿಲ್ಲದ ಕಾರಣ, 0-6 ಜನಸಂಖ್ಯೆಯನ್ನು ಸೇರಿಸಿ ಸಾಕ್ಷರತೆಯ ಪ್ರಮಾಣವನ್ನು ಮಾಪನ ಮಾಡಲಾಗಿದೆ.

ಮೂಲ : ಪ್ರಾಥಮಿಕ ಮಾಹಿತಿ

ಅಧ್ಯಾಯ 2

ಪ್ರವಾಸಿಗರ ಹಿನ್ನೆಲೆ

ಪ್ರವಾಸೋದ್ಯಮ ಮತ್ತು ಅದು ಸಾಧ್ಯವಾಗಿಸುವ ಸಾಮಾಜಿಕ, ಆರ್ಥಿಕ ಪರಿವರ್ತನೆಯನ್ನು ಅಧ್ಯಯನ ಮಾಡುವುದು ಈ ಪ್ರಬಂಧದ ಮೂಲ ಉದ್ದೇಶ. ಪರಿವರ್ತನೆಗೆ ಒಳಗಾಗುವ ಸಾಮಾಜಿಕ ಪರಿಸರ ಒಂದು ಕಡೆ ಇದ್ದರೆ ಪರಿವರ್ತನೆಗೆ ಕಾರಣವಾಗುವ ಪ್ರವಾಸೋದ್ಯಮ ಮತ್ತೊಂದು ಕಡೆ ಇದೆ. ಪ್ರಬಂಧದ ಮೂಲ ಉದ್ದೇಶಕ್ಕೆ ಪೂರಕವಾಗುವ ಅಂಶಗಳನ್ನು ವಿಶ್ಲೇಷಣೆ ಮಾಡುವ ಮುನ್ನ ಈ ಎರಡರ ಪರಿಚಯ ಆಗಬೇಕಾಗಿದೆ. ಹಿಂದಿನ ಅಧ್ಯಾಯದಲ್ಲಿ ಪ್ರವಾಸೋದ್ಯಮಕ್ಕೆ ತೆರೆದುಕೊಂಡ ಹಳ್ಳಿಯ ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ಬದುಕಿನ ಕಿರು ಪರಿಚಯವನ್ನು ಮಾಡಿಕೊಡಲಾಗುವುದು. ಪ್ರಬಂಧದ ಈ ಅಧ್ಯಾಯದಲ್ಲಿ ಹಂಪೆಗೆ ಬರುವ ಪ್ರವಾಸಿಗರ ಪರಿಚಯವನ್ನು ಮಾಡಲಾಗುವುದು. ಪ್ರವಾಸಿಗರು ಯಾರು? ಅವರ ದೇಶ, ಭಾಷೆ ಏನು? ಅವರ ಸಾಮಾಜಿಕ ಹಾಗು ಆರ್ಥಿಕ ಸ್ಥಿತಿಗತಿ ಏನು? ಹಂಪೆ ಬಗ್ಗೆ ಯಾವ ಮೂಲದಿಂದ ಅವರು ತಿಳಿದುಕೊಂಡಿದ್ದಾರೆ? ಇತ್ಯಾದಿ ಪ್ರಶ್ನೆಗಳನ್ನು ಗಮನದಲ್ಲಿಟ್ಟುಕೊಂಡು ಈ ಅಧ್ಯಾಯವನ್ನು ರಚಿಸಲಾಗಿದೆ. ಈ ಅಧ್ಯಾಯ ಎರಡು ಭಾಗಗಳನ್ನೊಳಗೊಂಡಿದೆ. ಭಾಗ ಒಂದರಲ್ಲಿ ಪ್ರವಾಸ ಮತ್ತು ಪ್ರವಾಸೋದ್ಯಮಕ್ಕೆ ಸಂಬಂಧಿಸಿದ ಕೆಲವು ಪದಗಳ ವಿವರಣೆ ಮತ್ತು ಪ್ರವಾಸೋದ್ಯಮ ಬೆಳೆದು ಬಂದ ಬಗೆಯನ್ನು ಕುರಿತು ಕಿರು ಪರಿಚಯ ಮಾಡಲಾಗಿದೆ. ಭಾಗ ಎರಡರಲ್ಲಿ ಪ್ರವಾಸಿಗರ ಸಾಮಾಜಿಕ, ಆರ್ಥಿಕ ಹಿನ್ನೆಲೆ, ಪ್ರವಾಸದ ಉದ್ದೇಶ, ಇತ್ಯಾದಿಗಳಿಗೆ ಸಂಬಂಧಿಸಿದ ಮಾಹಿತಿ ಇದೆ.

ಭಾಗ 1

ಪುರಾತನ ಕಾಲದಿಂದಲೂ ಸಂಚಾರ ಅಥವಾ ಪ್ರವಾಸವು ಮಾನವ ಜನಾಂಗದ ಕುತೂಹಲಕಾರಿ ವಿಷಯವಾಗಿತ್ತು. ಹಿಂದೆ ವಾಣಿಜ್ಯೋದ್ಯಮಿಗಳು, ಯಾತ್ರಿಗಳು, ಜ್ಞಾನವನ್ನು ಬಯಸುವ ವಿದ್ವಾಂಸರು ಸಂಚಾರಿಗಳಾಗಿದ್ದರು. ವ್ಯಾಪಾರದ ಸಲುವಾಗಿ ವಾಣ್ಯೆಜ್ಯೋದ್ಯಮಿಗಳು ಸಮುದ್ರಯಾನವನ್ನು ಕೈಗೊಳ್ಳುತ್ತಿದ್ದರು. ವಾಣಿಜ್ಯ ಮಾರ್ಗಗಳು ತೆರೆದುಕೊಂಡಂತೆ ಅಂತಾರಾಷ್ಟ್ರೀಯ ವಾಣಿಜ್ಯೋದ್ಯಮಗಳು ಹೆಚ್ಚಾದವು. ಇದರೊಂದಿಗೆ ಭಿನ್ನ ಸಂಸ್ಕೃತಿಗಳು ಹತ್ತಿರವಾದವು. 16 ಮತ್ತು 17ನೆ ಶತಮಾನದಲ್ಲಿ ವಾಣಿಜ್ಯ ಮತ್ತು ಧಾರ್ಮಿಕ ಉದ್ದೇಶಗಳಿಗಾಗಿ ಪ್ರವಾಸ ಕೈಗೊಳ್ಳುತ್ತಿದ್ದರೆ, 18-19ನೆ ಶತಮಾನದಲ್ಲಿ ಖುಷಿ ಸಂಚಾರಿಯಾಗಿ(Pleasure Traveller) ಪ್ರವಾಸ ಕೈಗೊಳ್ಳುವುದು ಹೆಚ್ಚಾಯಿತು. ಅಂಥವರಲ್ಲಿ ರೋಮನ್ನರು ಮೊದಲಿಗರು. ದೇವಾಲಯ, ಸ್ಮಾರಕಗಳು, ಈಜಿಪ್ಟ್‌ನ ಪಿರಾಮಿಡ್‌ಗಳು ಮತ್ತು ರಜೆ ದಿನಗಳಲ್ಲಿ ಒಲಂಪಿಕ್ಸ್ ಕ್ರೀಡೆಗಳನ್ನು ನೋಡಲು ಹೋಗುತ್ತಿದ್ದರು.[1] ಕೈಗಾರಿಕಾ ಕ್ರಾಂತಿಯ

ನಂತರ ಇಂಗ್ಲೆಂಡಿನಲ್ಲಿ ಮತ್ತು ಯೂರೋಪಿನ ಇತರ ರಾಷ್ಟ್ರಗಳಲ್ಲಿ ಸಂಬಳ ಸಹಿತ ರಜೆ (Paid holidays) ಮತ್ತು ವಾರ್ಷಿಕ ರಜೆ (Annual holiday) ಜಾರಿಗೆ ಬಂದಿತು. ಇವು ಜನರಿಗೆ ಪ್ರವಾಸ ಕೈಗೊಳ್ಳಲು ಹೆಚ್ಚಿನ ಪ್ರೇರಣೆ ಒದಗಿಸಿದವು.[2] ಇದರಿಂದ ಯೂರೋಪಿನ ಹಲವಾರು ರಾಷ್ಟ್ರಗಳಲ್ಲಿ ಸಮುದ್ರ ದಂಡೆಯ ವಿಶ್ರಾಂತಿ ಧಾಮಗಳು ಪ್ರಾರಂಭಗೊಂಡವು. ಇವುಗಳಿಗೆ ಸ್ಪಾಸ್ (spass) ಎಂದು ಕರೆಯುತ್ತಿದ್ದರು.[3] ಈ ಬಗೆಯ ಪ್ರವಾಸಿ ತಾಣಗಳಲ್ಲಿ ಔಷಧಿಯುಕ್ತ ಸ್ನಾನಗಳು (madicinal baths), ಖನಿಜಯುಕ್ತ ಜಲಸೇವನೆ ಅಥವಾ ಅದರ ಸ್ನಾನ ಹಾಗೂ ಮನೋರಂಜನಾ ಕಾರ್ಯಕ್ರಮಗಳು ಇರುತ್ತಿದ್ದವು. ಈ ತಾಣಗಳು ಪ್ರವಾಸಿಗರನ್ನು ಹೆಚ್ಚು ಆಕರ್ಷಿಸುತ್ತಿದ್ದವು. ಹಾಲಿಡೇ (Holiday) ಎಂಬ ಪದ ಮೊದಲಿಗೆ ಹೋಲಿ ಡೇ (Holy-day) ಎಂದಾಗಿತ್ತು. ಈ ಪದ ಧಾರ್ಮಿಕ ಆಚರಣೆಗೆ ಸಂಬಂಧಿಸಿದ ಅರ್ಥ ನೀಡುತ್ತದೆ. ಆದರೆ ಇಂದು ಈ ಪದವು ದಿನನಿತ್ಯದ ಜೀವನದಲ್ಲಿ ಬಿಡುವು ಅಥವಾ ವಿಶ್ರಾಂತಿ ಪಡೆಯುವುದು ಎಂಬ ಅರ್ಥದಲ್ಲಿ ಬಳಕೆಯಲ್ಲಿದೆ. ಕೈಗಾರಿಕಾ ಕ್ರಾಂತಿಯ ನಂತರ ಕಾರ್ಮಿಕರಿಗೆ ರಜೆ ಸಿಗುವುದರೊಂದಿಗೆ ರೈಲ್ವೆ ಮತ್ತು ಹಡಗು ಸಂಚಾರ ಕೂಡ ಶುರುವಾಯಿತು. ಇವೆಲ್ಲ ದೇಶಿಯ ಮತ್ತು ವಿದೇಶಿಯ ಪ್ರವಾಸಿಗರಿಗೆ ಅನುಕೂಲವಾದವು. 1869ರಲ್ಲಿ ಸೂಯೆಜ್ ಕಾಲುವೆ ತೆರೆದಿದ್ದರಿಂದ ಪಶ್ಚಿಮ ಮತ್ತು ಪೂರ್ವ ರಾಷ್ಟ್ರಗಳ ಚಲನವಲನ ಜಾಸ್ತಿಯಾಯಿತು.[4] ಇದರಿಂದ ಪ್ರವಾಸಿಗರ ಸಂಖ್ಯೆಯಲ್ಲಿ ಹೆಚ್ಚಳ ಉಂಟಾಯಿತು. 1945ರಿಂದೀಚೆಗೆ ಶೀಘ್ರ, ಸುರಕ್ಷಿತ ಮತ್ತು ಸುಸಜ್ಜಿತ ಪ್ರಯಾಣದ ಬೇಡಿಕೆ ಹೆಚ್ಚುದುದರಿಂದ ವಿದೇಶಿ ಪ್ರವಾಸಿಗರು ವಿಮಾನ ಪ್ರಯಾಣ ಆಯ್ದುಕೊಳ್ಳುವುದು ಸಾಮಾನ್ಯವಾಯಿತು.

'Tourist' ಎಂಬ ಪದ ಕ್ರಿ.ಶ. 1292ಕ್ಕಿಂತ ಹಿಂದಿನದು. ಇದು 'Tour' ಎಂಬ ಪದದಿಂದ ಬಂದಿದೆ. 'TORNUS' ಎಂಬ ಲ್ಯಾಟಿನ್ ಪದವು ಟೂರ್ ಪದದ ಮೂಲರೂಪ. ಇದರ ಅರ್ಥ ಸುತ್ತುವವನ ಚಕ್ರ ಅಥವಾ ವೃತ್ತವೊಂದನ್ನು ವಿವರಿಸುವ ಸಾಮಗ್ರಿ ಎಂದಾಗುತ್ತದೆ. ಈ ಪದವು ಮೊದಲಿಗೆ ಸ್ಥಳದಿಂದ ಸ್ಥಳಕ್ಕೆ ಸಂಚರಿಸುವುದು ಎಂದರ್ಥ ಪಡೆದಿತ್ತು. ಪ್ರವಾಸವೆಂದರೆ ಒಂದು ವಿಹಾರಯಾತ್ರೆ, ಒಂದು ದೇಶ ಅಥವಾ ಪ್ರಾಂತ್ಯದ ಪ್ರಮುಖ ಭಾಗಗಳ (Circuitious)ಸಂಚಾರ ಎಂದು 17ನೆಯ ಶತಮಾನದಲ್ಲಿ ಬಳಸಲಾಗಿದೆ. ಆಕ್ಸ್‌ಫರ್ಡ್ ಡಿಕ್ಷ್ಯನರಿಯು 'Tourist' ಪದವನ್ನು ಕ್ರಿ.ಶ. 1800ಕ್ಕಿಂತ ಹಿಂದೆಯೇ ಬಳಸಲಾಗಿದೆ ಎಂದು ತಿಳಿಸುತ್ತದೆ. ಇತ್ತೀಚೆಗೆ 'Tourist' ಪದವನ್ನು ವಿಹಾರಕ್ಕಾಗಿ ಮಾಡುವ ಸಂಚಾರ ಎಂಬ ಅರ್ಥದಲ್ಲಿ ಬಳಸಲಾಗುತ್ತಿದೆ.[5] 1923ರಲ್ಲಿ ಲೀಗ್ ಆಫ್ ನೇಷನ್ಸ್ 'Tourist' ಪದವನ್ನು ವಿದೇಶಿ ಪ್ರವಾಸಿಗ ಎನ್ನುವ ಅರ್ಥದಲ್ಲಿ ಬಳಸಿದೆ. ವಿದೇಶಿ ಪ್ರವಾಸಿಗ (Foreign Tourist) ಎಂಬ ಪದವು ಸಾಮಾನ್ಯವಾಗಿ ದೇಶದ ಹೊರಗೆ 24 ಗಂಟೆಗಳ ಕಾಲ ಕನಿಷ್ಟ ತಂಗುವ ಮತ್ತು ಸಂಚಾರ ಮಾಡುವ ವ್ಯಕ್ತಿಯನ್ನು ಕುರಿತು ವಿವರಿಸುತ್ತದೆ. ಯಾವಾತನು ತಾನು

ವಾಸ ಮಾಡುವ ದೇಶದ ಹೊರಗೆ ಕೊನೆಯ ಪಕ್ಷ 24 ಗಂಟೆಗಳ ಅವಧಿಯವರೆಗೆ ಬೇರೆ ದೇಶಕ್ಕೆ ಭೇಟಿ ನೀಡುವವನು ಎಂದು ವಿದೇಶಿ ಪ್ರವಾಸಿಗನನ್ನು ಕುರಿತು ಹೇಳಲಾಗಿದೆ. ಈ ವಿವರಣೆಯ ಹಿನ್ನೆಲೆಯಲ್ಲಿ ಈ ಕೆಳಗಿನ ವ್ಯಕ್ತಿಗಳನ್ನು ಪ್ರವಾಸಿಗರೆಂದು ಭಾವಿಸಬಹುದು. [6]

ಅ. ಖುಷಿಗಾಗಿ, ಗೃಹ ಕಾರ್ಯಕ್ಕಾಗಿ, ಆರೋಗ್ಯ ಸುಧಾರಣೆಗಾಗಿ- ಸಂಚರಿಸುವವರು.

ಆ. ಯಾವುದೇ ಬಗೆಯ ಪ್ರತಿನಿಧಿಯಾಗಿ - ವಿಜ್ಞಾನಿ, ಆಡಳಿತಗಾರ, ರಾಯಭಾರಿ, ಧಾರ್ಮಿಕ, ಕ್ರೀಡಾಪಟುಗಳಾಗಿ - ಸಭೆಗಳಲ್ಲಿ ಭಾಗವಹಿಸಲು ತೆರಳುವ ವ್ಯಕ್ತಿಗಳು.

ಇ. ವ್ಯಾಪಾರೋದ್ದೇಶಕ್ಕಾಗಿ ಸಂಚರಿಸುವ ವ್ಯಕ್ತಿಗಳು.

ಈ. ಸಾಗರದ ಮೇಲೆದ್ದ ಬಿರುಗಾಳಿಯ ಕಾರಣವಾಗಿ ಬರುವ ವ್ಯಕ್ತಿಗಳು (ಅವರು 24 ಗಂಟೆಗಳಿಗಿಂತ ಕಡಿಮೆ ಕಾಲ ತಂಗಿದ್ದರೂ ಕೂಡಾ).

ಈ ಕೆಳಗಿನವರನ್ನು ಟೂರಿಸ್ಟ್‌ಗಳಾಗಿ ಪರಿಗಣಿಸಲಾಗುವುದಿಲ್ಲ

1. ಕೆಲಸವೊಂದರ ಒಪ್ಪಂದ ಪಡೆದು ಅಥವಾ ಪಡೆಯದೆ ದೇಶವೊಂದಕ್ಕೆ ಬರುವ ವ್ಯಕ್ತಿಗಳು; ಒಂದು ವೃತ್ತಿ ಅಥವಾ ವ್ಯಾಪಾರಿ ಚಟುವಟಿಕೆಯಲ್ಲಿ ತೊಡಗಲು ದೇಶವೊಂದಕ್ಕೆ ಬರುವ ವ್ಯಕ್ತಿಗಳು.
2. ದೇಶವೊಂದರಲ್ಲಿ ವಾಸಗೃಹವನ್ನು ನಿರ್ಮಿಸಲು ಬರುವವರು.
3. ಬೋರ್ಡಿಂಗ್ ವ್ಯವಸ್ಥೆಯ ಅಥವಾ ಶಾಲೆಗಳ ವಿದ್ಯಾರ್ಥಿಗಳು ಮತ್ತು ಕಿರಿಯರು.
4. ಗಡಿ ಪ್ರದೇಶವೊಂದರ ನಿವಾಸಿಗಳು ಮತ್ತು ಖಾಯಂ ಆಗಿ ಒಂದೆಡೆ ವಾಸಿಸುತ್ತಾ ನೆರೆದೇಶದಲ್ಲಿ ಕೆಲಸ ಮಾಡುವವರು.
5. ಸಂಚಾರವು 24 ಗಂಟೆಗಳಿಗಿಂತ ಹೆಚ್ಚು ಕಾಲ ತೆಗೆದುಕೊಂಡರೂ ಎಲ್ಲೂ ನಿಲ್ಲದೆ ಒಂದು ದೇಶವನ್ನು ಹಾದು ಹೋಗುತ್ತಿರುವ ಪ್ರವಾಸಿಗರು.

ಪ್ರವಾಸಿಗರು ಕುರಿತ ಈ ಮೇಲಿನ ವಿವರಣೆಯನ್ನು 1945ರಲ್ಲಿ ಸಂಯುಕ್ತ ಸಂಸ್ಥಾನ ದೃಢೀಕರಿಸಿತು. ಪ್ರವಾಸಿಗನೆಂದರೆ ವ್ಯಕ್ತಿಯೋರ್ವನು ಯಾವುದೇ ವಲಸೆಹೋಗುವ ಉದ್ದೇಶವನ್ನು ಇಟ್ಟುಕೊಳ್ಳದೆ ವಿದೇಶವೊಂದರಲ್ಲಿ 24 ಗಂಟೆಗಳಿಗಿಂತ ಹೆಚ್ಚು ಮತ್ತು ಆರು ತಿಂಗಳಿಗಿಂತ ಕಡಿಮೆ ಕಾಲ ನೆಲೆ ನಿಲ್ಲುವವನು ಎಂದು ಹೇಳಲಾಯಿತು. ಪ್ರವಾಸಿಗಳ ಅಂಕಿ-ಅಂಶಗಳ ಸಂಗ್ರಹಣೆಗಾಗಿ ಬಹಳಷ್ಟು ದೇಶಗಳಲ್ಲಿ ಈ ವ್ಯಾಖ್ಯಾನ ಸ್ವೀಕೃತವಾಯಿತು. 1963ರಲ್ಲಿ ರೋಮ್‌ನಲ್ಲಿ ನಡೆದ ಅಂತಾರಾಷ್ಟ್ರೀಯ ಪ್ರವಾಸ ಹಾಗೂ ಪ್ರವಾಸೋದ್ಯಮದ ಮೇಲೆ ಸಂಯುಕ್ತ ಸಂಸ್ಥಾನಗಳ ಸಮಾವೇಶ ನಡೆದು

ಟೂರಿಸ್ಟ್ ಪದದ ವ್ಯಾಖ್ಯೆಯನ್ನು ವಿವೇಚನೆ ಮಾಡಲಾಯಿತು. ಅದು ಅಂಕಿ-ಅಂಶಗಳ ಸಂಗ್ರಹಣ ಉದ್ದೇಶಗಳಿಗಾಗಿ ಹೀಗೆ ವಿವರಣೆ ನೀಡುತ್ತದೆ.[7] ಯಾವುದೇ ವ್ಯಕ್ತಿಯು ತಾನೂ ಸಾಮಾನ್ಯವಾಗಿ ವಾಸವಿರುವ ಸ್ಥಳದಿಂದ ಹೊರಗೆ, ತಾನು ಭೇಟಿ ಕೊಟ್ಟ ದೇಶದ ಒಳಗೆ ಆದಾಯ ತರುವ ವೃತ್ತಿಯೊಂದನ್ನು ಅನುಸರಿಸಿ ದೇಶವೊಂದಕ್ಕೆ ಭೇಟಿ ನೀಡುವುದು

ಈ ವ್ಯಾಖ್ಯಾನವು ಹೆಚ್ಚಿನ ವಿವರಗಳನ್ನು ಬಯಸುತ್ತದೆ. ಅವನ್ನು ಹೀಗೆ ಹೇಳಲಾಗಿದೆ.

ಪ್ರವಾಸಿಗರು (Tourist)´ಭೇಟಿ ನೀಡಿದ ದೇಶದಲ್ಲಿ ಕನಿಷ್ಠಪಕ್ಷ 24 ಗಂಟೆಗಳವರೆಗೆ ವಾಸ್ತವ್ಯ ಹೂಡುವ ತಾತ್ಕಾಲಿಕ ಸಂದರ್ಶಕರ ಪ್ರಯಾಣದ ಉದ್ದೇಶವನ್ನು ಈ ಕೆಳಗಿನಂತೆ ವಿಂಗಡಿಸುವುದು.

1. ವಿರಾಮ (ಮನೋರಂಜನೆ, ರಜೆ, ಆರೋಗ್ಯ, ಅಧ್ಯಯನ, ಧಾರ್ಮಿಕ ಹಾಗೂ ಕ್ರೀಡೆ).
2. ವ್ಯಾಪಾರ, ಕುಟುಂಬ, ಆಯೋಗ, ಸಭೆ.
3. ವಿಹಾರ ಪ್ರಯಾಣಿಕರು ಭೇಟಿ ನೀಡಿದ ದೇಶದೊಳಗೆ 24 ಗಂಟೆಗಳಿಗಿಂತ ಕಡಿಮೆ ವಾಸ್ತವ್ಯ ಹೂಡುವ ತಾತ್ಕಾಲಿಕ ಸಂದರ್ಶಕರು(ಸಮುದ್ರ ವಿಕೋಪಕ್ಕೆ ಒಳಗಾದ ಪ್ರವಾಸಿಗರನ್ನು ಒಳಗೊಂಡು).

ಈ ವಿವರಗಳು ಕಾನೂನಿನ ದೃಷ್ಟಿಯಲ್ಲಿ ದೇಶವನ್ನು ಪ್ರವೇಶಿಸದೆ ಇರುವ ಪ್ರವಾಸಿಗರನ್ನು ಹೊರತು ಪಡಿಸುತ್ತದೆ.

ಭಾರತ ಸರಕಾರದ ಪ್ರವಾಸೋದ್ಯಮ ಇಲಾಖೆ, 1963ರಲ್ಲಿ ರೋಮ್‌ನಲ್ಲಿ ನಡೆದ ಅಂತಾರಾಷ್ಟ್ರೀಯ ಪ್ರವಾಸ ಮತ್ತು ಪ್ರವಾಸೋದ್ಯಮ ಕುರಿತು ಸಂಯುಕ್ತ ಸಂಸ್ಥಾನದ ಸಮಾವೇಶದ ಶಿಫಾರಸ್ಸನ್ನೆಲ್ಲಾ ಅಂಗೀಕರಿಸಿದೆ. ವಿದೇಶಿ ಪ್ರವಾಸಿಗರೆಂದರೆ ವಿದೇಶಿ ಪಾಸ್‌ಪೋರ್ಟ‌ನ ಮೇಲೆ ಭೇಟಿ ನೀಡಿದವನಾಗಿದ್ದು, ಕನಿಷ್ಟ 24 ಗಂಟೆಗಳ ಕಾಲ ಭಾರತದಲ್ಲಿ ವಾಸ್ತವ್ಯ ಹೂಡುವವನಾಗಿರಬೇಕು. ಅವನ ಪ್ರವಾಸದ ಉದ್ದೇಶ ಈ ಮೇಲಿನ ವಿವರಣೆಗಳಲ್ಲಿ ಯಾವುದಾದರೊಂದು ಆಗಿರಬಹುದು.

ವಿದೇಶಿ ಪ್ರವಾಸಿಗರ ವ್ಯಾಖ್ಯಾನದೊಳಗೆ ಈ ಕೆಳಗಿನ ವಿವರಣೆ ಇರುವ ವ್ಯಕ್ತಿಗಳು ಒಳಗೊಳ್ಳುವುದಿಲ್ಲ.

1. ಪಾಕಿಸ್ತಾನ ಮತ್ತು ಬಾಂಗ್ಲಾದೇಶದ ರಾಷ್ಟ್ರೀಯರು.
2. ಭೂಮಾರ್ಗದ ಮೂಲಕ ಭಾರತವನ್ನು ಪ್ರವೇಶಿಸುವ ನೇಪಾಳದ ರಾಷ್ಟ್ರೀಯರು.
3. ಭೂತಾನದ ಭೂ ಮಾರ್ಗದ ಮೂಲಕ ಭಾರತವನ್ನು ಪ್ರವೇಶಿಸುವ ಎಲ್ಲ ವಿದೇಶಿಯರು.

ತಮ್ಮ ವಾಸಸ್ಥಾನಗಳಿಂದ ಹೊರಗೆ, ತಮ್ಮ ದೇಶದ ಒಳಗೆ ನಿರ್ದಿಷ್ಟ ಸ್ಥಳಗಳಿಗೆ ಹೋಗಿ ಬರುವವರನ್ನು ದೇಶಿಯ ಪ್ರವಾಸಿಗರೆಂದು ವ್ಯಾಖ್ಯಾನಿಸಲಾಗಿದೆ. ಇವರಿಗೆ ಯಾವುದೇ

ನಿರ್ಬಂಧಗಳಿರುವುದಿಲ್ಲ. ಹಾಗೂ ಕರೆನ್ಸಿ ಬದಲಾವಣೆ, ಭಾಷೆ, ಪಾಸ್‌ಪೋರ್ಟ್, ವೀಸಾ, ಆರೋಗ್ಯದ ತಪಾಸಣೆ ಪತ್ರಗಳು ಇತ್ಯಾದಿಗಳು ಬೇಕಿರುವುದಿಲ್ಲ.

ಪ್ರವಾಸೋದ್ಯಮ ಅಭಿವೃದ್ಧಿ ಕುರಿತ ಕಾರ್ಯಚಟುವಟಿಕೆ ಭಾರತದಲ್ಲಿ ಆರಂಭವಾದದ್ದು 1945ರಲ್ಲಿ. ಭಾರತ ಸರಕಾರ ತನ್ನ ಆಗಿನ ಶೈಕ್ಷಣಿಕ ಸಲಹೆಗಾರ ಸರ್ ಜಾನ್ ಸಾರ್ಜೆಂಟ್‌ರವರ ಅಧ್ಯಕ್ಷತೆಯಲ್ಲಿ ಪ್ರವಾಸೋದ್ಯಮವನ್ನು ಅಭಿವೃದ್ಧಿಗೊಳಿಸಲು ಸಮಿತಿಯೊಂದನ್ನು ರಚಿಸಿತು. ಅದರ ಮುಖ್ಯ ಉದ್ದೇಶ ದೇಶದ ಪ್ರವಾಸೋದ್ಯಮದ ಸಾಧ್ಯತೆಗಳನ್ನು ಅಭಿವೃದ್ಧಿಗೊಳಿಸಲು ಸರ್ವೆ ಮಾಡುವುದಾಗಿತ್ತು. ಈ ಸಮಿತಿಯು ಪ್ರವಾಸೋದ್ಯಮದ - ಒಳ (ದೇಶಿಯ) ಮತ್ತು ಹೊರ (ವಿದೇಶಿಯ) ಸಂಚಾರಕ್ಕೆ ಪ್ರೋತ್ಸಾಹ ನೀಡುವುದೆಂದು, ಇದರಿಂದ ಭಾರತದ ಆರ್ಥಿಕ ಆದಾಯವನ್ನು ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಹೆಚ್ಚಿಸುವುದೆಂದು ತಿಳಿಸಿತು. ಹಾಗಾಗಿ ಪ್ರವಾಸಿ ಸಂಸ್ಥೆಯೊಂದನ್ನು ಪ್ರತ್ಯೇಕವಾಗಿ ಕೇಂದ್ರದಲ್ಲಿ ಸ್ಥಾಪಿಸಬೇಕು. ಅದರ ಶಾಖೆಗಳನ್ನು ಮುಖ್ಯ ಪಟ್ಟಣಗಳಾದ ಮುಂಬಯಿ, ದೆಹಲಿ, ಕಲಕತ್ತಾ ಮತ್ತು ಮದ್ರಾಸ್‌ಗಳಲ್ಲಿ(ಈಗಿನ ಚೆನ್ನೈ) ಪ್ರಾರಂಭಿಸಬೇಕು. ಪ್ರವಾಸಿ ಪ್ರಚಾರ ವಿಭಾಗಗಳನ್ನು ಪ್ರಪಂಚದಲ್ಲಿನ ಎಲ್ಲಾ ರಾಯಭಾರಿ ಕಛೇರಿಗಳಲ್ಲಿ ತೆರೆಯಬೇಕು ಎಂದು ಸರ್‌ಜಾನ್ ಸಾರ್ಜೆಂಟ್ ಸಮಿತಿ 1946ರ ವರದಿಯಲ್ಲಿ ತಿಳಿಸಿತು. ಸಾರ್ಜೆಂಟ್ ಸಮಿತಿಯ ಶಿಫಾರಸ್ಸಿನಂತೆ ಪ್ರವಾಸೋದ್ಯಮವನ್ನು ಅಭಿವೃದ್ಧಿ ಪಡಿಸುವ ಸಲುವಾಗಿ 1949ರಲ್ಲಿ ಕೇಂದ್ರದ ಸಾರಿಗೆ ಸಚಿವಾಲಯದಲ್ಲಿ ಪ್ರತ್ಯೇಕವಾದ ಪ್ರವಾಸ ಸಂಚಾರಿ ಶಾಖೆಯನ್ನು ತೆರೆಯಲಾಯಿತು.[8]

ವಿದೇಶಿ ಪ್ರವಾಸಿಗರು ಭಾರತಕ್ಕೆ ಪ್ರವಾಸ ಕೈಗೊಳ್ಳುವಂತೆ ಮಾಡಲು, ಪ್ರವಾಸ ಮಾಹಿತಿ ಕೇಂದ್ರ ಮತ್ತು ಕಚೇರಿಗಳನ್ನು ವಿದೇಶಗಳಲ್ಲಿ ಸ್ಥಾಪಿಸಲಾಯಿತು. 1952ರಲ್ಲಿ ನ್ಯೂಯಾರ್ಕನಲ್ಲಿ, 1955ರಲ್ಲಿ ಲಂಡನ್‌ನಲ್ಲಿ, 1956ರಲ್ಲಿ ಪ್ಯಾರೀಸ್, ಪ್ರಾಂಕ್‌ಪೋರ್ಟನಲ್ಲಿ ಹಾಗೂ ಆಸ್ಟ್ರೇಲಿಯಾ ಮತ್ತು ನ್ಯೂಜಿಲ್ಯಾಂಡ್ ದೇಶಗಳ ಕಚೇರಿಯನ್ನು ಸಿಡ್ನಿಯಲ್ಲಿ ಆರಂಭಿಸಲಾಯಿತು. ಆನಂತರ ವಿವಿಧ ದೇಶಗಳಲ್ಲಿ ಅಂದರೆ ಆಸ್ಟ್ರಿಯಾ, ಬೆಲ್ಜಿಯಂ, ಕೆನಡಾ, ಜಪಾನ್, ಸ್ವೀಡನ್, ಸಿಂಗಾಪುರ್, ಸ್ವಿಟ್ಜರ್‌ಲ್ಯಾಂಡ್, ದುಬೈ, ಮಲೇಶಿಯಾ ಮೊದಲಾದ ಕಡೆಗಳಲ್ಲಿ ವಿಸ್ತರಿಸಲಾಯಿತು. ಭಾರತದ ಪ್ರವಾಸೋದ್ಯಮ ಇಲಾಖೆಯನ್ನು 1958ನೇ ಮಾರ್ಚ 1 ರಂದು ಸ್ಥಾಪಿಸಲಾಯಿತು. 1968ರಲ್ಲಿ ಭಾರತೀಯ ಪ್ರವಾಸೋದ್ಯಮ ವಾಣಿಜ್ಜೀಕರಣಗೊಂಡಿತು. 1963ರ ಜ್ಞಾ ಸಮಿತಿಯ ವರದಿಯಂತೆ 1966ರಲ್ಲಿ ಇಂಡಿಯಾ ಟೂರಿಜಂ ಡೆವಲೆಪ್‌ಮೆಂಟ್ ಕಾರ್ಪೊರೇಷನ್ ಲಿಮಿಟೆಡ್ ಅಸ್ತಿತ್ವಕ್ಕೆ ಬಂದಿತು. 1967ರಲ್ಲಿ ಸಾರಿಗೆ ಮತ್ತು ವಿಮಾನಯಾನ ಸಚಿವಾಲಯ (Ministry of Transport and Civil Aviation)ವು ಬೇರ್ಪಟ್ಟು ಪ್ರವಾಸೋದ್ಯಮ ಮತ್ತು ವಿಮಾನಯಾನ ಸಚಿವಾಲಯ(Tourism and Civil Aviation) ಅಸ್ತಿತ್ವಕ್ಕೆ ಬಂದಿತು. ಈ ಸಚಿವಾಲಯವು ಪ್ರವಾಸೋದ್ಯಮದ ರಾಷ್ಟ್ರೀಯ ಧೋರಣೆಗಳನ್ನು(National policies), ಪರಿಣತ ಸಮಿತಿ ಹಾಗೂ ಮಂಡಲಿಗಳ ಮೂಲಕ

ರೂಪಿಸುತ್ತದೆ.[9] ಪುನಃ 1990ರಲ್ಲಿ ಪ್ರವಾಸೋದ್ಯಮ ಇಲಾಖೆ ವಿಮಾನಯಾನ ಸಚಿವಾಲಯದಿಂದ ಬೇರ್ಪಟ್ಟಿತು. ಸಚಿವಾಲಯವು ಪ್ರವಾಸೋದ್ಯಮಕ್ಕೆ ಸಂಬಂಧ ಪಟ್ಟ ಕೋರ್ಸ್‌ಗಳಾದ IITTM(Indian Institute of Tourism and Travel Managament), MDPC (Management Development Programme), DTM, AND PG, DTM(Diplomo in Tourism Management)ಗಳನ್ನು ತೆರೆಯಿತು.

ಭಾರತದಲ್ಲಿ ಪ್ರವಾಸೋದ್ಯಮದ ಅಭಿವೃದ್ಧಿಯು ಮೂರು ಹಂತಗಳಲ್ಲಿ ನಡೆಯುತ್ತಿದೆ. ಈ ಮೂಲಕ ಪ್ರವಾಸಿಗರಿಗೆ ಅಗತ್ಯ ಸೌಲಭ್ಯ ಪರಿಕರಗಳನ್ನೊದಗಿಸುವ ಕಾರ್ಯ ಪ್ರವೃತ್ತಗೊಂಡಿದೆ. ಇದರಲ್ಲಿ ಕೇಂದ್ರೀಯ ಪ್ರವಾಸೋದ್ಯಮ ಇಲಾಖೆ ಮೊದಲನೆಯ ಹಂತವಾಗಿದೆ. ಇದು ರಾಷ್ಟ್ರಮಟ್ಟದ ಪ್ರಮುಖ ಸಲಹಾ ಸಮಿತಿಯಾದ ಪ್ರವಾಸಿ ಅಭಿವೃದ್ಧಿ ಮಂಡಳಿಯ ಸಹಾಯವನ್ನು ಪಡೆಯುತ್ತದೆ. ಕೇಂದ್ರೀಯ ಪ್ರವಾಸೋದ್ಯಮ ಅಭಿವೃದ್ಧಿ ಮಂಡಲಿಯು ಸ್ವಾಯತ್ತ ಸಂಸ್ಥೆಯಾಗಿದ್ದು, ಇದರ ಕಾರ್ಯಚಟುವಟಿಕೆಗಳು ಸೀಮಿತ ವ್ಯಾಪ್ತಿಗೆ ಒಳಪಟ್ಟಿವೆ. ಇದು ಕೇಂದ್ರೀಯ ಪ್ರವಾಸೋದ್ಯಮ ಇಲಾಖೆಗೆ ಪೂರಕವಾಗಿ, ಪೋಷಕವಾಗಿ ಹಾಗೂ ವಾಣಿಜ್ಯ ಅಂಗವಾಗಿ ಕೆಲಸ ನಿರ್ವಹಿಸುತ್ತದೆ. ಇದು ಎರಡನೆಯ ಹಂತವಾಗಿದೆ. ರಾಜ್ಯಗಳದ್ದುದು ಮೂರನೆಯ ಹಂತ. ರಾಜ್ಯಗಳ ಪ್ರವಾಸೋದ್ಯಮ ಇಲಾಖೆಗಳು ಸ್ಥಳೀಯ ಪ್ರವಾಸಕ್ಕೆ ಅನುಕೂಲವಾಗುವಂತೆ ಕಡಿಮೆ ಆದಾಯದ ವಿಶ್ರಾಂತಿ ಗೃಹಗಳನ್ನು ನಿರ್ಮಿಸುವುದು, ಪ್ರವಾಸಿ ಕೇಂದ್ರಗಳನ್ನು ಅಭಿವೃದ್ಧಿ ಪಡಿಸುವುದು, ಪ್ರವಾಸಿ ಆಕರ್ಷಣೆಗಳ ಬಗ್ಗೆ ವ್ಯಾಪಕವಾದ ಪ್ರಚಾರ ಕೈಗೊಳ್ಳುವುದು ಇತ್ಯಾದಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದುಹಾಗೂ ಕಾರ್ಯರೂಪಕ್ಕೆ ತರುವ ಜವಾಬ್ದಾರಿಯನ್ನು ಹೊತ್ತಿವೆ. ಕರ್ನಾಟಕದಲ್ಲಿ 1974ರಲ್ಲಿ ವಾರ್ತಾ ಇಲಾಖೆಯಿಂದ ಬೇರ್ಪಟ್ಟ ಪ್ರವಾಸೋದ್ಯಮ ನಿರ್ದೇಶನಾಲಯವು ಸ್ವತಂತ್ರವಾಗಿ ಅಸ್ತಿತ್ವ ಪಡೆಯಿತು. ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮವು ಪ್ರವಾಸೋದ್ಯಮ ನಿರ್ದೇಶನಾಲಯದ ಒಂದು ಅಂಗ ಸಂಸ್ಥೆ. ಈ ನಿಗಮವು ಒಂದು ಸ್ವಾಯತ್ತ ಸಂಸ್ಥೆಯಾಗಿದ್ದು, ರಾಜ್ಯದ ಪ್ರವಾಸಿ ತಾಣಗಳಿಗೆ ಭೇಟಿ ನೀಡುವ ಪ್ರವಾಸಿಗರಿಗಾಗಿ ವಸತಿ, ಆಹಾರ ಮತ್ತು ಸಾರಿಗೆ ಸೌಲಭ್ಯಗಳನ್ನು ವ್ಯವಸ್ಥೆ ಮಾಡುತ್ತದೆ. 1991ರ ಇಸವಿಯನ್ನು ಪ್ರವಾಸಿ ವರ್ಷವೆಂದು ಭಾರತ ಸರಕಾರ ಘೋಷಿಸಿತು. ಅದು ವಿದೇಶಿ ಪ್ರವಾಸಿಗರನ್ನು ಆಕರ್ಷಿಸಲು ಭಾರತಕ್ಕೆ ಭೇಟಿ ಕೊಡಿ ಎಂಬ ಪ್ರಚಾರವನ್ನು ವಿದೇಶಗಳಲ್ಲಿ ಆರಂಭಿಸಿತು. ಕರ್ನಾಟಕ ಸರಕಾರ ರಾಜ್ಯದ ಪ್ರವಾಸಿ ತಾಣಗಳ ಬಗ್ಗೆ ಪ್ರಚಾರ ಮಾಡಲು ಹಾಗೂ ವಿದೇಶಿ ಪ್ರವಾಸಿಗರನ್ನು ಆಕರ್ಷಿಸಲು ಹಲವಾರು ಕ್ರಮಗಳನ್ನು ಕೈಗೊಂಡಿತು.

ಭಾಗ 2

ಹಂಪೆಗೆ ದೇಶ ವಿದೇಶದ ಪ್ರವಾಸಿಗರು ಭೇಟಿ ನೀಡುತ್ತಾರೆ. ಸರ್ಕಾರದ ಬೇರೆ ಬೇರೆ ಇಲಾಖೆಗಳು ಈ ಬಗ್ಗೆ ಅಂಕಿ-ಅಂಶಗಳನ್ನು ಸಂಗ್ರಹಿಸಿವೆ. ಅವುಗಳಲ್ಲಿ ಕೇಂದ್ರ ಪುರಾತತ್ವ ಸರ್ವೇಕ್ಷಣಾ ಇಲಾಖೆ, ಕೇಂದ್ರ ಪುರಾತತ್ವ ವಸ್ತು ಸಂಗ್ರಹಾಲಯ, ರಾಜ್ಯ ಮುಜರಾಯಿ ಇಲಾಖೆ

ಹಾಗೂ ರಾಜ್ಯ ಪ್ರವಾಸೋದ್ಯಮ ಇಲಾಖೆ ಮುಖ್ಯವಾದವು. ಈ ಇಲಾಖೆಗಳಲ್ಲಿ ಕೊನೆಯ ಇಲಾಖೆಯು ಸಂಗ್ರಹಿಸಿರುವ ವಿವರಗಳ ಮೂಲ ಭಿನ್ನ ಮಾದರಿಯದಾಗಿದೆ. ಉಳಿದ ಮೂರು ಇಲಾಖೆಗಳು- ಹಂಪೆಯ ಸ್ಮಾರಕಗಳು, ವಸ್ತು ಸಂಗ್ರಹಾಲಯ ಮತ್ತು ದೇವಾಲಯಗಳಿಗೆ ಪ್ರವೇಶ ದರ ವಿಧಿಸಿವೆ. ಈ ಅಂಕಿ- ಅಂಶಗಳು ಟಿಕೆಟ್ ಮಾರಾಟದ ಪ್ರಮಾಣವನ್ನು ಆಧರಿಸಿವೆ. ಕೇಂದ್ರ ಪುರಾತತ್ವ ಸರ್ವೇಕ್ಷಣ ಇಲಾಖೆ ಅಂಕಿ-ಅಂಶಗಳ ಪ್ರಕಾರ ಹಂಪೆಗೆ ಬಂದ ಪ್ರವಾಸಿಗರ ಸಂಖ್ಯೆ 1996-97ರಲ್ಲಿ 172503. 1997-98ನೇ ಸಾಲಿನಲ್ಲಿ 183048, 1998-99ರ ಸಾಲಿನಲ್ಲಿ 320540, 1999-2000ದ ಸಾಲಿನಲ್ಲಿ 286468, 2000-2001ರಲ್ಲಿ 248489 ಇದೆ.[10] ಈ ಅಂಕಿ-ಅಂಶಗಳ ಪ್ರಕಾರ ಪ್ರವಾಸಿಗರು ಹಂಪಗೆ ಬಂದಿರುವ ಪ್ರಮಾಣ 1996-97 ರಿಂದ 1998-99ಸಾಲಿನವರಗೆ ಏರಿಕೆಯಾಗಿದ್ದು, 1999-2000 ಮತ್ತು 2000-2001ರಲ್ಲಿ ಹಂಪೆಗೆ ಬಂದ ಪ್ರವಾಸಿಗರ ಸಂಖ್ಯೆಯಲ್ಲಿ ಇಳಿಮುಖವಾಗಿರುವುದು ಕಂಡುಬರುತ್ತದೆ. ರಾಜ್ಯದ ಮುಜರಾಯಿ ಇಲಾಖೆ(ಹಂಪೆ ವಿರೂಪಾಕ್ಷೇಶ್ವರ ದೇವಾಲಯ)ಯ ಅಂಕಿ-ಅಂಶಗಳ ಪ್ರಕಾರ, ಹಂಪೆಗೆ ಬಂದ ಪ್ರವಾಸಿಗರ ಸಂಖ್ಯೆ 1996-97ರಲ್ಲಿ 347944, 1997-98ರಲ್ಲಿ 245563, 1999-2000ದಲ್ಲಿ 569026 ಮತ್ತು 2000-2001ರಲ್ಲಿ 612533 ಆಗಿದೆ.[11] ಈ ಅಂಕಿ-ಅಂಶಗಳ ಪ್ರಕಾರ 1997-98ನೆಯ ಸಾಲಿನಲ್ಲಿ ಮಾತ್ರ ಪ್ರವಾಸಿಗರ ಸಂಖ್ಯೆಯಲ್ಲಿ ಇಳಿಕೆಯಾಗಿದ್ದು, ಉಳಿದ ವರ್ಷಗಳಲ್ಲಿ ಏರಿಕೆಯಾಗಿರುವುದು ಕಂಡುಬರುತ್ತದೆ. ಕರ್ನಾಟಕ ಪ್ರವಾಸೋದ್ಯಮ ಇಲಾಖೆಯ ಅಂಕಿ-ಅಂಶಗಳ ಪ್ರಕಾರ 1996-97ರಲ್ಲಿ ಹಂಪೆಗೆ ಬಂದ ಪ್ರವಾಸಿಗರ ಸಂಖ್ಯೆ 65329, 1997-98ರಲ್ಲಿನ ಪ್ರವಾಸಿಗರ ಸಂಖ್ಯೆ 80377, 1998-99 ಅಲ್ಲಿನ ಪ್ರವಾಸಿಗರ ಸಂಖ್ಯೆ 104093, 1999-2000 ಹಂಪೆಗೆ ಬಂದ ಪ್ರವಾಸಿಗರ ಸಂಖ್ಯೆ 7098, 2000-2001ರಲ್ಲಿ ಪ್ರವಾಸಿಗರ ಸಂಖ್ಯೆ 481030 ಇದೆ.[12] ಈ ಇಲಾಖೆಯ ಅಂಕಿ-ಅಂಶಗಳ ಪ್ರಕಾರ 1996-97ರಿಂದ 1999ರವರೆಗೆ ಪ್ರವಾಸಿಗರ ಸಂಖ್ಯೆ ಏರಿಕೆಯಾಗಿದ್ದು, 1999-2000ದಲ್ಲಿ ಪ್ರವಾಸಿಗರ ಸಂಖ್ಯೆ 7098ಕ್ಕೆ ಇಳಿದಿದೆ. ಪುನಃ 2000-2001ರಲ್ಲಿ ನಾಲ್ಕು ಲಕ್ಷಕ್ಕೆ ಏರಿಕೆಯಾಗಿದೆ.

ಹಂಪೆಗೆ ಬಂದ ಪ್ರವಾಸಿಗರ ಈ ಅಂಕಿ-ಅಂಶಗಳು ಈ ಮೂರು ಇಲಾಖೆಗಳಲ್ಲಿಯೂ ಸಾಮ್ಯತೆ ಕಂಡುಬರುವುದಿಲ್ಲ. ಕೇಂದ್ರ ಪುರಾತತ್ವ ಇಲಾಖೆ ಸಂಗ್ರಹಿಸಿದ ಮಾಹಿತಿ ಪ್ರಕಾರ 1996-97ರಲ್ಲಿ ಹಂಪೆಗೆ ಬಂದ ಪ್ರವಾಸಿಗರ ಸಂಖ್ಯೆ 1,72,503, ಮುಜರಾಯಿ ಇಲಾಖೆಯ ಪ್ರಕಾರ 3,47,944 ಮತ್ತು ಕರ್ನಾಟಕ ಪ್ರವಾಸೋದ್ಯಮ ಇಲಾಖೆಯ ಪ್ರಕಾರ 65,329 ಆಗಿದೆ. 1997-98ರಲ್ಲಿ ಹಂಪೆಗೆ ಬಂದ ಪ್ರವಾಸಿಗರ ಸಂಖ್ಯೆ ಕೇಂದ್ರ ಪುರಾತತ್ವ ಇಲಾಖೆಯ ಮಾಹಿತಿ ಪ್ರಕಾರ 1,83,048 ಇದ್ದರೆ, ಮುಜರಾಯಿ ಇಲಾಖೆಯ ಪ್ರಕಾರ 2,45,563 ಇದ್ದು, ಪ್ರವಾಸೋದ್ಯಮ ಇಲಾಖೆ ಅಂಕಿ-ಅಂಶಗಳ ಪ್ರಕಾರ 80,377 ಇದೆ. 1998-99ರಲ್ಲಿ ಹಂಪೆಗೆ ಬಂದ ಪ್ರವಾಸಿಗರ ಸಂಖ್ಯೆ ಕೇಂದ್ರ ಪುರಾತತ್ವ ಇಲಾಖೆಯ ಮಾಹಿತಿಯ ಪ್ರಕಾರ 3,20,540, ಮುಜರಾಯಿ ಇಲಾಖೆಯ ಪ್ರಕಾರ 3,37,770 ಮತ್ತು

ಪ್ರವಾಸೋದ್ಯಮ ಇಲಾಖೆಯ ಪ್ರಕಾರ 1,04,093 ಆಗಿದೆ. 1999-2000ದಲ್ಲಿಯು ಹಂಪೆಗೆ ಬಂದ ಪ್ರವಾಸಿಗರ ಸಂಖ್ಯೆ ಕೇಂದ್ರ ಪುರಾತತ್ವ ಇಲಾಖೆಯ ಪ್ರಕಾರ 2,86,468, ಮುಜರಾಯಿ ಇಲಾಖೆಯ ಪ್ರಕಾರ ಪ್ರವಾಸಿಗರ ಸಂಖ್ಯೆ 5,69,026 ಆಗಿದ್ದು, ಪ್ರವಾಸೋದ್ಯಮ ಇಲಾಖೆಯ ಪ್ರಕಾರ 7,098 ಆಗಿದೆ. ಈ ಅಂಕಿ ಅಂಶಗಳಲ್ಲಿ ಪ್ರವಾಸೋದ್ಯಮ ಇಲಾಖೆ ಸಂಗ್ರಹಿಸಿದ ಹಂಪೆಗೆ ಬಂದ ಪ್ರವಾಸಿಗರ ಸಂಖ್ಯೆ ತುಂಬಾ ಕಡಿಮೆ ಇರುವುದು ಕಂಡುಬರುತ್ತದೆ. 2000-2001ರಲ್ಲಿ ಹಂಪೆಗೆ ಬಂದ ಪ್ರವಾಸಿಗರ ಸಂಖ್ಯೆ ಕೇಂದ್ರ ಪುರಾತತ್ವ ಇಲಾಖೆಯ ಪ್ರಕಾರ 2,48,489 ಆದರೆ ಮುಜರಾಯಿ ಇಲಾಖೆಯ ಪ್ರಕಾರ 6,12,533 ಆಗಿದೆ. ಮತ್ತು ಪ್ರವಾಸೋದ್ಯಮ ಇಲಾಖೆಯ ಪ್ರಕಾರ 8,41,030 ಇದೆ. 2001-2002ರ ಸಾಲಿನಲ್ಲಿ ಕೇಂದ್ರ ಪುರಾತತ್ವ ಇಲಾಖೆಯ ಅಂಕಿ ಅಂಶಗಳ ಪ್ರಕಾರ ಪ್ರವಾಸಿಗರ ಸಂಖ್ಯೆ 1,91,390, ಮುಜರಾಯಿ ಇಲಾಖೆಯ ಪ್ರಕಾರ 6,19,796 ಮತ್ತು ಪ್ರವಾಸೋದ್ಯಮ ಇಲಾಖೆಯ ಪ್ರಕಾರ 3.78,594 ಆಗಿದೆ.

1999-2000ದಲ್ಲಿ ಕೇಂದ್ರ ಪುರಾತತ್ವ ವಸ್ತುಸಂಗ್ರಹಾಲಯವು ಪ್ರವಾಸಿಗರಿಗೆ ಪ್ರವೇಶ ದರ ಜಾರಿಗೆ ತಂದ ಪರಿಣಾಮವಾಗಿ ಈ ಇಲಾಖೆಯಲ್ಲೂ ಪ್ರವಾಸಿಗರ ಅಂಕಿ- ಅಂಶಗಳು ಲಭ್ಯವಾಗುತ್ತವೆ. ಇದರ ಪ್ರಕಾರ ಈ ಸಾಲಿನ ಪ್ರವಾಸಿಗರ ಸಂಖ್ಯೆ 58,320 ಆಗಿದೆ. 2001-02ನೆಯ ಸಾಲಿನಲ್ಲಿ ಈ ಸಂಖ್ಯೆ 51,419 ಆಗಿದೆ.[13] ಹಂಪೆಯಲ್ಲಿರುವ ಪೋಲಿಸ್ ಠಾಣೆಯಲ್ಲಿ ಹಂಪೆಗೆ ಬರುವ ವಿದೇಶಿ ಪ್ರವಾಸಿಗರ ಮಾಹಿತಿಯನ್ನು 1988-99ರಿಂದ ಪ್ರಾರಂಭಿಸಲಾಯಿತು. 1998-99ರಲ್ಲಿ ವಿದೇಶಿ ಪ್ರವಾಸಿಗರ ಸಂಖ್ಯೆ 4,862, 1999-2000ರಲ್ಲಿ ಪ್ರವಾಸಿಗರ ಸಂಖ್ಯೆ 3,888 ಮತ್ತು 2000-2001ರಲ್ಲಿ ವಿದೇಶಿ ಪ್ರವಾಸಿಗರ ಸಂಖ್ಯೆ 3,484 ಆಗಿದೆ.[14] 1996-97ರಿಂದ 2001-02ರ ಅವಧಿಯ ವರೆಗೆ ಹಂಪೆಗೆ ಬಂದಿರುವ ಪ್ರವಾಸಿಗರ ಸಂಖ್ಯೆಯಲ್ಲಿ ಹೆಚ್ಚಳ ಕಂಡುಬಂದರೂ ಬೇರೆಬೇರೆ ಇಲಾಖೆಗಳು ಸಂಗ್ರಹಿಸಿದ ಪ್ರವಾಸಿಗರ ಅಂಕಿ-ಅಂಶಗಳಲ್ಲಿ ಸಾಮ್ಯತೆ ಕಾಣುವುದಿಲ್ಲ. ಹಾಗಾಗಿ ಹಂಪೆಗೆ ಬಂದ ಪ್ರವಾಸಿಗರ ಸಂಖ್ಯೆಯನ್ನು ನಿಖರವಾಗಿ ಹೇಳಲು ಸಾಧ್ಯವಾಗುವುದಿಲ್ಲ.(ಕೋಷ್ಟಕ-3)

ಪ್ರವಾಸಿಗರ ಸಂಖ್ಯೆಯಲ್ಲಿ ಸಾಮ್ಯತೆ ಕಂಡುಬರದಿರಲು ಕಾರಣಗಳನ್ನು ಹೀಗೆ ಗುರುತಿಸಬಹುದು. ಕೇಂದ್ರ ಪುರಾತತ್ವ ಸರ್ವೇಕ್ಷಣಾ ಇಲಾಖೆಯ ಆಡಳಿತಕ್ಕೆ ಒಳಪಟ್ಟಿರುವ ವಿಠ್ಠಲ ದೇವಾಲಯ ಮತ್ತು ಕಮಲ ಮಹಲ್‌ಗೆ ಸ್ಮಾರಕ ವೀಕ್ಷಣೆಗೆ ಹೋದವರು ಪುರಾತತ್ವ ಇಲಾಖೆಯ ವಸ್ತುಸಂಗ್ರಹಾಲಯವನ್ನು ಸಂದರ್ಶಿಸದೆ ಹೋಗಬಹುದು, ಅಥವಾ ಅಂಥವರ ಪ್ರಮಾಣ ಕಡಿಮೆಯಿರಬಹುದು. ಹಾಗೆಯೆ ಹಂಪೆಗೆ ಬಂದ ಪ್ರವಾಸಿಗರೆಲ್ಲ ವಿರೂಪಾಕ್ಷ ದೇವಾಲಯದಲ್ಲಿ ದೇವರ ದರ್ಶನ ಪಡೆಯುತ್ತಾರೆ ಎಂದು ಹೇಳಲುಬರುವುದಿಲ್ಲ. ಒಟ್ಟಿನಲ್ಲಿ ಹಂಪೆಗೆ ಬಂದ ಪ್ರವಾಸಿಗರೆಲ್ಲ ಪ್ರತಿಯೊಂದು ಸ್ಮಾರಕ, ದೇವಾಲಯ ಹಾಗೂ ವಸ್ತು ಸಂಗ್ರಹಾಲಯಗಳಿಗೆ ಭೇಟಿ ನೀಡಿದ್ದಾರೆಂದು ಹೇಳಲಾಗುವುದಿಲ್ಲ. ಇದಕ್ಕೆ ಇಲ್ಲಿಗೆ ಬಂದ ಪ್ರವಾಸಿಗರ ಉದ್ದೇಶಗಳು ಭಿನ್ನಬಗೆಗಳಾಗಿರುವುದೆ

ಕಾರಣವಾಗಿರಬಹುದು. ಕರ್ನಾಟಕ ಇಲಾಖೆಯು ಹಂಪೆಗೆ ಬಂದ ಪ್ರವಾಸಿಗರ ವಿವರಗಳನ್ನು ಹೋಟೆಲ್, ಪೋಲಿಸ್ ಇಲಾಖೆ, ಮುಜರಾಯಿ ಇಲಾಖೆ ಮುಂತಾದ ವಿವಿಧ ಮೂಲಗಳಿಂದ ಸಂಗ್ರಹಿಸುತ್ತದೆ. ಈ ಇಲಾಖೆಯ ಅಂಕಿ-ಅಂಶಗಳಲ್ಲೂ ಏಕರೂಪತೆ ಕಂಡುಬರುವುದಿಲ್ಲ. ಅಲ್ಲದೆ ಹಂಪೆ ಪೋಲಿಸ್ ಠಾಣೆಯಲ್ಲಿರುವ ವಿದೇಶಿ ಪ್ರವಾಸಿಗರ ನಮೂದು ದಾಖಲಾತಿ ಪುಸ್ತಕದ ವಿವರಗಳು ಕೂಡ ಇತರ ಇಲಾಖೆಯ ಅಂಕಿ-ಅಂಶಗಳೊಂದಿಗೆ ಹೊಂದಾಣಿಕೆ ಆಗುವುದಿಲ್ಲ. ಹಾಗಾಗಿ ಬೇರೆಬೇರೆ ಇಲಾಖೆಗಳು ಸಂಗ್ರಹಿಸಿರುವ ಅಂಕಿ-ಅಂಶಗಳು ಭಿನ್ನತೆ ಎದ್ದು ಕಾಣುತ್ತದೆ.

ದೇಶಿ ಪ್ರವಾಸಿಗರು

ಭಾರತ ದೇಶದ ವಿವಿಧ ಪ್ರದೇಶಗಳಿಂದ ಹಂಪೆಗೆ ಬರುವ ಪ್ರವಾಸಿಗರನ್ನು ದೇಶಿ ಪ್ರವಾಸಿಗರೆಂದು ಕರೆಯಲಾಗಿದೆ. ದೇಶಿಯ ಪ್ರವಾಸಿಗರು ಧಾರ್ಮಿಕ ಯಾತ್ರೆ ಮತ್ತು ಶೈಕ್ಷಣಿಕ ದೃಷ್ಟಿಯಿಂದ ಪ್ರವಾಸ ಮಾಡುವವರು ಹೆಚ್ಚು. ಇವರಲ್ಲಿ ಶಾಲಾ ಕಾಲೇಜಿನ ವಿದ್ಯಾರ್ಥಿಗಳು, ವಿದ್ವಾಂಸರು ಮತ್ತು ಮಧ್ಯಮ ವರ್ಗದವರು ಸೇರಿದ್ದಾರೆ. 2001ರಲ್ಲಿ ಹಂಪೆಗೆ ಬಂದ ಪ್ರವಾಸಿಗರ ಒಟ್ಟು ಸಂಖ್ಯೆ 6,19,796. ಇವರಲ್ಲಿ ದೇಶಿಯ ಪ್ರವಾಸಿಗರು 6,03,655. ಪರರಾಜ್ಯಗಳಾದ ಆಂಧ್ರಪ್ರದೇಶದಿಂದ ಬಂದ ಪ್ರವಾಸಿಗರು 1,20,731 ಇದ್ದು, ಅವರ ಪ್ರಮಾಣ ಶೇ.20ರಷ್ಟು ಆಗಿದೆ. ತಮಿಳುನಾಡಿನಿಂದ ಬಂದ ಪ್ರವಾಸಿಗರ ಸಂಖ್ಯೆ 60,365 ಇದ್ದು ಅವರ ಪ್ರಮಾಣ ಶೇ. 10 ರಷ್ಟಾಗಿದೆ. ಇತರ ರಾಜ್ಯಗಳಾದ ಬಿಹಾರ, ರಾಜಸ್ಥಾನ, ಉತ್ತರ ಪ್ರದೇಶಗಳಿಂದ ಬಂದ ಪ್ರವಾಸಿಗರ ಸಂಖ್ಯೆ 48,293 ಇದ್ದು ಅವರ ಪ್ರಮಾಣ ಶೇ. 8ರಷ್ಟಾಗಿದೆ. ಹಂಪೆ ಇರುವ ಕರ್ನಾಟಕ ರಾಜ್ಯದಿಂದ ಬಂದ ಪ್ರವಾಸಿಗರ ಸಂಖ್ಯೆ 3,74,266 ಇದ್ದು ಅವರ ಪ್ರಮಾಣ ಶೇ.62ರಷ್ಟಿದೆ. ಒಟ್ಟು ಪ್ರವಾಸಿಗರಲ್ಲಿ ಶೈಕ್ಷಣಿಕ ಪ್ರವಾಸಕ್ಕಾಗಿ ಬಂದ ವಿದ್ಯಾರ್ಥಿಗಳ ಸಂಖ್ಯೆ 1,26,768 ಇದ್ದು ಅವರ ಪ್ರಮಾಣ ಶೇ. 21ರಷ್ಟಾಗಿದೆ. ಧಾರ್ಮಿಕ ಪ್ರವಾಸ ಕೈಗೊಂಡ ಯಾತ್ರಿಕರ ಸಂಖ್ಯೆ 4,76,887 ಇದ್ದು ಶೇ. 79ರಷ್ಟಾಗಿದೆ. ಹಂಪೆ ಇರುವ ಕರ್ನಾಟಕದಿಂದ ಬರುವ ಪ್ರವಾಸಿಗರು ಮೊದಲ ಸ್ಥಾನ ಪಡೆದಿದ್ದರೆ, ಆಂಧ್ರ ಪ್ರದೇಶ ಮತ್ತು ತಮಿಳುನಾಡು ಕ್ರಮವಾಗಿ ಎರಡು ಮತ್ತು ಮೂರನೆಯ ಸ್ಥಾನದಲ್ಲಿವೆ (ಕೋಷ್ಟಕ-4). ಕರ್ನಾಟಕ ರಾಜ್ಯದ ದಕ್ಷಿಣ ಜಿಲ್ಲೆಗಳಾದ ಬೆಂಗಳೂರು, ಮಂಡ್ಯ, ಮೈಸೂರು, ಹಾಸನ, ತುಮಕೂರು, ಚಿತ್ರದುರ್ಗಗಳಿಂದ ಹಂಪೆಗೆ ಬಂದ ಪ್ರವಾಸಿಗರ ಸಂಖ್ಯೆ 1,95,526. ಅವರ ಪ್ರಮಾಣ ಶೇ. 52.24 ಆಗಿದೆ. ಉತ್ತರ ಕರ್ನಾಟಕ ಪ್ರವಾಸಿಗರ ಸಂಖ್ಯೆ 1,78,740. ಅವರ ಪ್ರಮಾಣ ಶೇ.47.76 ಆಗಿದೆ. ಉತ್ತರ ಕರ್ನಾಟಕದ ಜಿಲ್ಲೆಗಳಾದ ಗದಗ, ಧಾರವಾಡ, ಹಾವೇರಿಗಳಿಂದ ಬಂದ ಪ್ರವಾಸಿಗರ ಸಂಖ್ಯೆ 14,299 ಇದ್ದು ಅವರ ಪ್ರಮಾಣ ಶೇ. 8ರಷ್ಟಾಗಿದೆ. ಇತರ ಜಿಲ್ಲೆಗಳಾದ ಬೀದರ್, ಬಿಜಾಪುರ, ಬೆಳಗಾಂ ಮುಂತಾದವುಗಳಿಂದ ಬಂದ ಪ್ರವಾಸಿಗರ ಸಂಖ್ಯೆ 36,323 ಇದ್ದು ಅವರ ಪ್ರಮಾಣ ಶೇ.20.32ರಷ್ಟಾಗಿದೆ. ಪಕ್ಕದ ಜಿಲ್ಲೆಗಳಾದ ಕೊಪ್ಪಳದಿಂದ ಬಂದ ಪ್ರವಾಸಿಗರ ಸಂಖ್ಯೆ 26,811 ಇದ್ದು

ಅವರ ಪ್ರಮಾಣ ಶೇ.15ರಷ್ಟಿದೆ. ಹಾಗೂ ರಾಯಚೂರ ಜಿಲ್ಲೆಯಿಂದ ಬಂದ ಪ್ರವಾಸಿಗರ ಸಂಖ್ಯೆ 17,874ಇದ್ದು ಅವರ ಪ್ರಮಾಣ ಶೇ.10ರಷ್ಟಿದೆ. ಸ್ಥಳೀಯ ಬಳ್ಳಾರಿ ಜಿಲ್ಲೆಯಿಂದ ಬಂದ ಪ್ರವಾಸಿಗರ ಸಂಖ್ಯೆ 83,433 ಇದ್ದು ಅವರ ಪ್ರಮಾಣ ಶೇ.46.68ರಷ್ಟಿದೆ(ಕೋಷ್ಟಕ-5).[15] ಹಂಪೆ ಇರುವ ಬಳ್ಳಾರಿ ಜಿಲ್ಲೆಯಿಂದ ಬರುವ ಪ್ರವಾಸಿಗರ ಸಂಖ್ಯೆ ಪ್ರಥಮ ಸ್ಥಾನದಲ್ಲಿದ್ದರೆ, ಕೊಪ್ಪಳ ಮತ್ತು ರಾಯಚೂರು ಕ್ರಮವಾಗಿ ಎರಡು ಮತ್ತು ಮೂರನೆಯ ಸ್ಥಾನ ಪಡೆದಿವೆ. ಆಂಧ್ರಪ್ರದೇಶ ಮತ್ತು ತಮಿಳುನಾಡಿನಿಂದ ಬರುವ ಪ್ರವಾಸಿಗರು ಟ್ಯಾಕ್ಸಿ ಮತ್ತು ರೈಲುಗಳಲ್ಲಿ ಬರುತ್ತಾರೆ. ಹಂಪೆಯಲ್ಲಿ ತಂಗುವವರಲ್ಲಿ ಹೆಚ್ಚು ಛತ್ರಗಳಲ್ಲಿ, ವಿರೂಪಾಕ್ಷ ದೇವಸ್ಥಾನದ ಆವರಣದ ಕೊಠಡಿಗಳಲ್ಲಿ ಉಳಿಯುತ್ತಾರೆ. ಆರ್ಥಿಕವಾಗಿ ಉತ್ತಮ ಸ್ಥಿತಿಯಲ್ಲಿದ್ದವರು ಗೆಸ್ಟ ಹೌಸ್‌ಗಳಲ್ಲಿ ಉಳಿಯುತ್ತಾರೆ. ಪ್ರವಾಸಿಗರು ಹಂಪೆಗೆ ಅನ್‌ಸೀಸನ್ ಕಾಲದಲ್ಲಿ ಬಂದರೆ ಗೆಸ್ಟ್‌ಹೌಸ್ ಮಾಲಿಕರು ಕೊಠಡಿಗಳನ್ನು ಕಡಿಮೆ ಬಾಡಿಗೆಗೆ ಕೊಡುತ್ತಾರೆ. ಈ ಸಂದರ್ಭದಲ್ಲಿ ಹೆಚ್ಚಿನ ಪ್ರವಾಸಿಗರು ಗೆಸ್ಟ್‌ಹೌಸಗಳಲ್ಲಿ ಉಳಿಯುತ್ತಾರೆ. ಬಾಡಿಗೆ ಕಡಿತಗೊಳಿಸುವುದರಲ್ಲೂ ಗೆಸ್ಟ್‌ಹೌಸ್ ಮಾಲಿಕರ ನಡುವೆ ಪೈಪೋಟಿ ಇರುತ್ತದೆ. ಈ ಪೈಪೋಟಿಯಿಂದಾಗಿ ದೇಶಿ ಪ್ರವಾಸಿಗರು ಕೂಡ ಗೆಸ್ಟ್‌ಹೌಸ್‌ಗಳಲ್ಲಿ ಉಳಿಯಲು ಸಾಧ್ಯವಾಗುತ್ತಿದೆ.

ಉತ್ತರ ಭಾರತದ ರಾಜ್ಯಗಳಾದ ಬಿಹಾರ, ರಾಜಸ್ಥಾನ ಮತ್ತು ಉತ್ತರ ಪ್ರದೇಶದ ಪ್ರವಾಸಿಗರು ಬಾಡಿಗೆ ಅಥವಾ ಒಪ್ಪಂದದ ಮೇರೆಗೆ ಬಸ್ಸು ಅಥವಾ ಇನ್ನಿತರ ವಾಹನಗಳಲ್ಲಿಬರುತ್ತಾರೆ. ತಮ್ಮ ಜೊತೆಯಲ್ಲಿ ಅಡಿಗೆ ತಯಾರಿಸುವ ಪಾತ್ರೆಗಳು, ಆಹಾರ ಧಾನ್ಯಗಳು, ಸ್ಟೌವ್ ಹಾಗೂ ಹೊದೆಯಲು ಬೆಡ್‌ಶೀಟ್‌ನಂತಹ ಅವಶ್ಯಕ ವಸ್ತುಗಳನ್ನು ತರುತ್ತಾರೆ. ಈ ರೀತಿ ಬರುವ ಪ್ರವಾಸಿಗರಲ್ಲಿ ಸಾಮಾನ್ಯವಾಗಿ ಮಧ್ಯ ವಯಸ್ಸಿನವರು ಹೆಚ್ಚಾಗಿರುತ್ತಾರೆ. ಯಾತ್ರಾರ್ಥಿಗಳು ಧಾರ್ಮಿಕ ಸ್ಥಳಗಳನ್ನು ಸಂದರ್ಶಿಸು ವುದರಿಂದ ಒಳಿತಾಗುತ್ತದೆ ಎನ್ನುವ ನಂಬಿಕೆ ಯಾತ್ರಾಸ್ಥಳಗಳನ್ನು ಸಂದರ್ಶಿಸಲು ಪ್ರೇರಣೆಯಾಗಿದೆ. ಇವರು ಹಂಪೆಯಲ್ಲಿ ಕನಿಷ್ಠ 2-3 ದಿನಗಳವರೆಗೆ ತಂಗುತ್ತಾರೆ. ಈ ಸಮಯದಲ್ಲಿ ಬಸ್ಸನ್ನು ಹಂಪೆಯ ಬಜಾರದ ಪೂರ್ವದ ಕೊನೆಯಲ್ಲಿ ನಿಲ್ಲಿಸುತ್ತಾರೆ. ಇಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಮತ್ತು ತಂಗಲು ತೆರೆದ ಮಂಟಪಗಳು ಇವೆ. ಬಸ್ಸಿನಲ್ಲಿ ಅನೇಕ ಕುಟುಂಬಗಳು ಇರುವುದರಿಂದ ತಮ್ಮದೆ ಪಾತ್ರೆ, ಆಹಾರ ಧಾನ್ಯ, ಸ್ಟೌವ್, ರೊಟ್ಟಿ ಬೇಯಿಸುವ ಹೆಂಚು ಇತ್ಯಾದಿಗಳನ್ನು ತಂದಿರುತ್ತಾರೆ. ರಸ್ತೆ ಪಕ್ಕದಲ್ಲಿಯೆ ಆಹಾರ ತಯಾರಿಸುತ್ತಾರೆ. ಹೆಂಗಸರು ರೊಟ್ಟಿಯನ್ನು ಉದ್ದಿಕೊಟ್ಟರೆ ಗಂಡಸರು ಬೇಯಿಸುತ್ತಾರೆ. ಈ ಪ್ರವಾಸಿಗರು ತಮ್ಮ ಊಟ ತಿಂಡಿಗಳಿಗಾಗಿ ಸ್ಥಳೀಯ ಹೋಟೆಲು ಅಥವಾ ರೆಸ್ಟೋರೆಂಟ್‌ಗಳನ್ನು ಅವಲಂಬಿಸುವುದಿಲ್ಲ. ಅದೇ ರೀತಿ ಸ್ಮಾರಕಗಳನ್ನು ಯಾವುದೇ ಮಾರ್ಗ ದರ್ಶಕರ ಸಹಾಯವಿಲ್ಲದೆ ಎಲ್ಲಾ ಸ್ಮಾರಕಗಳಿಗೆ ಭೇಟಿ ನೀಡುತ್ತಾರೆ. ಭಾರತದ ಇತರ ರಾಜ್ಯಗಳಿಂದ ಬರುವ ಪ್ರವಾಸಿಗರ ಸಂಖ್ಯೆ ತುಂಬಾ ವಿರಳ.

ದಕ್ಷಿಣ ಕರ್ನಾಟಕದ ಬೆಂಗಳೂರು, ಮೈಸೂರು, ತುಮಕೂರು, ಚಿತ್ರದುರ್ಗ, ಹಾಸನ ಮುಂತಾದ ಜಿಲ್ಲೆಗಳಿಂದ ಶಾಲಾ ಕಾಲೇಜು ಮಕ್ಕಳು ಶೈಕ್ಷಣಿಕ ಪ್ರವಾಸಕ್ಕಾಗಿ ಹಂಪಗೆ ಬರುತ್ತಾರೆ. ಅಲ್ಲದೆ

ವೈಯಕ್ತಿಕ ಪ್ರವಾಸ ಕೂಡ ಕೈಗೊಂಡ ಯಾತ್ರಿಕರು ಹಂಪೆಯಲ್ಲಿ ಕಾಣಸಿಗುತ್ತಾರೆ. ಶೈಕ್ಷಣಿಕ ಪ್ರವಾಸಕ್ಕಾಗಿ ಗುಂಪಿನಲ್ಲಿ ಬಂದವರು ಹಂಪೆಯ ಛತ್ರಗಳಲ್ಲಿ ಮತ್ತು ಹೊಸಪೇಟೆ ಛತ್ರಗಳಲ್ಲಿ ತಂಗುತ್ತಾರೆ. ತಮ್ಮ ಆಹಾರವನ್ನು ತಾವೆ ತಯಾರಿಸಿಕೊಳ್ಳಲು ಅಗತ್ಯವಿರುವ ಪಾತ್ರೆಗಳನ್ನು ಆಹಾರ ಸಾಮಗ್ರಿಗಳನ್ನು ತಂದಿರುತ್ತಾರೆ. ಹೆಚ್ಚಿನವರು ಐತಿಹಾಸಿಕ ಸ್ಮಾರಕಗಳನ್ನು ನೋಡಲು ಪ್ರವಾಸಿ ಮಾರ್ಗದರ್ಶಕರ ಸಹಾಯವನ್ನು ಪಡೆಯುತ್ತಾರೆ. ಇವರಲ್ಲಿ ಈ ಪ್ರವಾಸಿಗರು 1 ರಿಂದ 2 ದಿನಗಳ ಮಟ್ಟಿಗೆ ಹಂಪೆಯಲ್ಲಿ ತಂಗುತ್ತಾರೆ. ಹಾಗೆಯೆ ಉತ್ತರ ಕರ್ನಾಟಕದ ಜಿಲ್ಲೆಗಳಾದ ಗುಲಬರ್ಗಾ, ಬೀದರ್, ಬೆಳಗಾಂ, ವಿಜಾಪುರ, ಧಾರವಾಡ, ಹಾವೇರಿ ಮುಂತಾದ ಜಿಲ್ಲೆಗಳಿಂದ ಶೈಕ್ಷಣಿಕ ಪ್ರವಾಸಕ್ಕಾಗಿ ಪ್ರವಾಸಿಗರು ಇಲ್ಲಿಗೆ ಬರುತ್ತಾರೆ. ಇವರಲ್ಲಿ ಚಿತ್ರಕಲಾ ಶಾಲೆ-ಕಾಲೇಜುಗಳ ಅಧ್ಯಾಪಕರು, ಚಿತ್ರಕಲೆಯ ಪ್ರಾಯೋಗಿಕ ಪರೀಕ್ಷೆಗಾಗಿ ತಮ್ಮ ವಿದ್ಯಾರ್ಥಿಗಳನ್ನು ಹಂಪೆಗೆ ಕರೆತರುತ್ತಾರೆ. ಹಾಗೂ 10 ರಿಂದ 15 ದಿನಗಳ ಕಾಲ ತಂಗಿದ ಅವಧಿಯಲ್ಲಿ ವಿದ್ಯಾರ್ಥಿಗಳು ಹಂಪೆಯ ಅಳಿದುಳಿದ ಸ್ಮಾರಕಗಳನ್ನು, ನೈಸರ್ಗಿಕ ರಮ್ಯನೋಟಗಳಿಂದ ಕೂಡಿದ ಬೆಟ್ಟ-ಗುಡ್ಡಗಳ ಚಿತ್ರಗಳನ್ನು ಬಿಡಿಸುತ್ತಾರೆ.

ಅಕ್ಕಪಕ್ಕದ ಜಿಲ್ಲೆಗಳಾದ ಕೊಪ್ಪಳ, ರಾಯಚೂರು ಹಾಗೂ ಸ್ಥಳೀಯ ಬಳ್ಳಾರಿ ಜಿಲ್ಲೆಯ 50 ರಿಂದ 100 ಕಿ.ಮೀ. ಅಂತರದಲ್ಲಿರುವ ಗ್ರಾಮ ಮತ್ತು ಪಟ್ಟಣಗಳಿಂದ ಯಾತ್ರಿಕರು ಹಂಪೆಗೆ ಬರುತ್ತಾರೆ. ಮುಖ್ಯವಾಗಿ ಬಳ್ಳಾರಿ ಜಿಲ್ಲೆಯ ಸ್ಥಳೀಯರು ಹಂಪೆಯಲ್ಲಿ ಜರಗುವ ಉತ್ಸವ, ಜಾತ್ರೆ, ಮಕರ ಸಂಕ್ರಮಣ,ಅಮವಾಸ್ಯೆ ಮುಂತಾದ ಧಾರ್ಮಿಕ ಪುಣ್ಯತಿಥಿ, ಅನ್ನಸಂತರ್ಪಣೆ ಕಾರ್ಯಕ್ರಮಗಳಿಗೆ ಬರುತ್ತಾರೆ. ಇಂತಹ ಯಾತ್ರಿಕರು ಹಂಪೆಯಲ್ಲಿ ಒಂದು ದಿನದ ಮಟ್ಟಿಗೆ ತಂಗುತ್ತಾರೆ. ಇನ್ನೂ ಕೆಲವರು ಬೆಳಗ್ಗೆ ಬಂದು ಸಾಯಂಕಾಲ ಹೊರಟು ಹೋಗುತ್ತಾರೆ. ಯಾತ್ರಿಕರು ಹಂಪೆಗೆ ಬರುವ ಮುನ್ನ ಮನೆಯಲ್ಲಿ ತಯಾರಿಸಿದ ಆಹಾರ ಪದಾರ್ಥಗಳನ್ನು ತೆಗೆದುಕೊಂಡು ಬಂದು ತಿಂದುಂಡು ಮರು ಪ್ರಯಾಣ ಮಾಡುತ್ತಾರೆ. ಇವರು ಕೇವಲ ಟೀ,ಕಾಫಿ, ತಿಂಡಿಗಳಿಗೆ ಮಾತ್ರ ಖರ್ಚು ಮಾಡುತ್ತಾರೆ. ಅಲ್ಲದೆ ದಿನ ನಿತ್ಯ ಬಳಸುವ ಧಾರ್ಮಿಕ ವಸ್ತುಗಳಾದ ದೇವರ ಫೋಟೋಗಳು, ಚಿಕ್ಕ ಮೂರ್ತಿಗಳು, ವಿಭೂತಿ ಉಂಡೆಗಳು ಮೊದಲಾದವನ್ನು ಕೊಂಡುಕೊಳ್ಳುತ್ತಾರೆ. ಜೊತೆಗೆ ಹೆಂಗಸರು ಕೂಡ ತಮ್ಮ ದಿನಬಳಕೆಯ ವಸ್ತುಗಳನ್ನು ಕೊಂಡುಕೊಳ್ಳುತ್ತಾರೆ. ದೇಶಿಯ ಪ್ರವಾಸಿಗರು ತಮ್ಮ ಜೊತೆಯಲ್ಲಿ ಊಟ-ತಿಂಡಿ ತೆಗೆದುಕೊಂಡು ಬರಲು ಹಂಪೆಯಲ್ಲಿ ಊಟ-ತಿಂಡಿ ಇತ್ಯಾದಿ ವಸ್ತುಗಳ ಬೆಲೆಗಳು ತಮ್ಮ ಹಳ್ಳಿಗಿಂತ ಎರಡು ಪಟ್ಟು ಹೆಚ್ಚಿರುವುದೆ ಕಾರಣ ಆಗಿದೆ. ಇದು ದೇಶಿ ಪ್ರವಾಸಿಗರಿಗೆ ತಿಳಿದಿರುವ ಅಂಶವಾಗಿದೆ. ವಿದೇಶಿ ಪ್ರವಾಸಿಗರಿಗೆ ತೋರಿಸುವ ಆದರ ಆತಿಥ್ಯವನ್ನು ಹಂಪಿಯ ವ್ಯಾಪಾರಿಗಳು ದೇಶಿ ಪ್ರವಾಸಿಗರಿಗೆ ತೋರಿಸುವುದಿಲ್ಲ. ದೇಶಿ ಪ್ರವಾಸಿಗರು ಹಂಪೆಯಲ್ಲಿನ ರೆಸ್ಟೋರೆಂಟುಗಳು ಮತ್ತು ಹೋಟೆಲ್‌ಗಳ ಒಳಗೆ ಬರುವ ಮೊದಲೇ ನಿಮಗೆ ಏನು ಬೇಕೆಂದು ವಿಚಾರಿಸುತ್ತಾರೆ. ಇನ್ನೊಂದು ವಿಧದಲ್ಲಿ ಹೇಳುವುದಾದರೆ ಅವರನ್ನು ಬಾಗಿಲಲ್ಲೆ ತಡೆದು

[illegible]

ವಿಚಾರಿಸುತ್ತಾರೆ. ಒಂದು ವೇಳೆ ದೇಶಿ ಪ್ರವಾಸಿಗರು ತಮಗೆ ಕಾಫಿ ಅಥವಾ ಟೀ ಬೇಕು ಎಂದು ಒಳಗೆ ನುಗ್ಗಲು ಪ್ರಯತ್ನಸಿದರೆ ಮತ್ತೊಂದು ಪರೀಕ್ಷೆ ರೆಡಿ ಇರುತ್ತದೆ. ಒಟ್ಟಾರೆ ಅಸಡ್ಡೆತನವನ್ನು ತೋರಿಸಿ ದೇಶಿ ಪ್ರವಾಸಿಗರನ್ನು ದೂರ ಇಡಲು ಪ್ರಯತ್ನಿಸುತ್ತಾರೆ. ಸ್ಥಳೀಯ ಉದ್ಯಮಿಗಳ ಈ ನಡವಳಿಕೆ ಕೂಡ ಸ್ಥಳೀಯ ಪ್ರವಾಸಿಗರು ಊಟ-ತಿಂಡಿಯನ್ನು ಮನೆಯಿಂದಲೆ ತರುವಂತೆ ಮಾಡಿದೆ.

ದೇಶಿಯ ಪ್ರವಾಸಿಗರು ಹಂಪೆಯಲ್ಲಿ ವಾಸ್ತವ್ಯವನ್ನು ಹೂಡುವುದು ಕಡಿಮೆ. ಅವರು ಗುಂಪುಗಳಲ್ಲಿ ಬಂದು ಹೆಚ್ಚು ಕಾಲ ಒಂದು ಸ್ಥಳದಲ್ಲಿ ನಿಲ್ಲದೆ ಬೇರೆ ಸ್ಥಳಗಳಿಗೆ ಪ್ರವಾಸ ಹೊರಡುತ್ತಾರೆ. ಆದರೆ ವಿದೇಶಿ ಪ್ರವಾಸಿಗರು ಮಂದಗತಿಯ ವೀಕ್ಷಣೆಯಲ್ಲಿ ತೊಡಗುತ್ತಾರೆ (Liesurely movement). ಹಂಪೆಯಲ್ಲಿ ಹಲವಾರು ದಿನಗಳ ಕಾಲ ತಂಗುತ್ತಾರೆ. ಅವರಿಗೆ ತಮ್ಮ ದೈನಂದಿನ ಬದುಕಿನ ಅಗತ್ಯಗಳ ಪೂರೈಕೆಗಾಗಿ ಹಂಪೆ ಗ್ರಾಮದವರನ್ನೆ ಅವಲಂಬಿಸಬೇಕಿರುವುದು ಅನಿವಾರ್ಯವಾಗಿದೆ. ಇದು ಗ್ರಾಮದ ಆರ್ಥಿಕ, ಸಾಮಾಜಿಕ ಬದುಕಿನ ಪರಿವರ್ತನೆಗೆ ಕಾರಣವಾಗಿದೆ. ಗ್ರಾಮದ ಆರ್ಥಿಕ, ಸಾಮಾಜಿಕ ಏರಿಳಿತಗಳನ್ನು ಕಂಡುಕೊಳ್ಳುವ ಮುನ್ನ ವಿದೇಶಿ ಪ್ರವಾಸಿಗರ ತಂಗುವಿಕೆಯ ಅವಧಿ ಹಾಗೂ ಅವರ ಆರ್ಥಿಕ ಚಟುವಟಿಕೆಗಳ ಬಗ್ಗೆ ತಿಳಿದುಕೊಳ್ಳುವುದು ಅವಶ್ಯಕವಿದೆ. ಇದಕ್ಕೆ ಮೊದಲು ವಿದೇಶಿ ಪ್ರವಾಸಿಗರ ಸಾಮಾಜಿಕ, ಆರ್ಥಿಕ ಹಾಗೂ ರಾಷ್ಟ್ರೀಯ ಹಿನ್ನೆಲೆಗಳ ಪರಿಚಯ ಮಾಡಿಕೊಳ್ಳುವುದು ಅಗತ್ಯವಿದೆ.

ವಿದೇಶಿ ಪ್ರವಾಸಿಗರು

ವಿಶ್ವದ ಜನರು ತಾವು ನೆಲೆಸಿರುವ ಭಾಗದಿಂದ ಮತ್ತೊಂದು ಭಾಗದ ರಾಷ್ಟ್ರಗಳ ಪ್ರಕೃತಿ ಸೌಂದರ್ಯ, ಅಳಿದುಳಿದ ಐತಿಹಾಸಿಕ ಸ್ಮಾರಕಗಳು, ಸಂಸ್ಕೃತಿ ಮುಂತಾದವುಗಳನ್ನು ವೀಕ್ಷಿಸಿ ಆನಂದಿಸಲು ಪ್ರವಾಸ ಕೈಗೊಳ್ಳುತ್ತಾರೆ. ಈ ಉದ್ದೇಶಗಳನ್ನು ಹೊಂದಿರುವ ಪ್ರವಾಸಿಗರು ವಿಶ್ವದ ಅನೇಕ ರಾಷ್ಟ್ರಗಳಿಂದ ಭಾರತಕ್ಕೆ ಬರುತ್ತಾರೆ. ಭಾರತಕ್ಕೆ ಬಂದವರು ಭಾರತದಲ್ಲಿನ ಪ್ರಮುಖವಾದ ಐತಿಹಾಸಿಕ ಸ್ಮಾರಕಗಳು ಮತ್ತು ನೈಸರ್ಗಿಕ ಸೌಂದರ್ಯ ಇರುವ ಪ್ರವಾಸಿ ತಾಣಗಳಿಗೆ ಭೇಟಿ ನೀಡುತ್ತಾರೆ. ಕರ್ನಾಟಕ ರಾಜ್ಯದಲ್ಲಿನ ಹಲವಾರು ಪ್ರಮುಖ ಪ್ರವಾಸಿ ತಾಣಗಳಲ್ಲಿ ಹಂಪೆಯೂ ಒಂದು. ವಿದೇಶಿ ಪ್ರವಾಸಿಗರು ಹಂಪೆಗೆ ಬರಲು ಶುರುವಾಗಿದ್ದು 1970ರ ದಶಕದಿಂದ ಇಚೀಗೆ ಗ್ರಾಮದ ಕೆಲವು ಹಿರಿಯರ ಪ್ರಕಾರ 1970-80ರಲ್ಲಿ ಹಂಪೆಗೆ ಬಂದ ವಿದೇಶಿ ಪ್ರವಾಸಿಗರ ಸಂಖ್ಯೆ ಪ್ರತಿ ವರ್ಷ 10 ರಿಂದ 15 ಜನ ಮಾತ್ರವಿತ್ತು. ಇತ್ತೀಚಿನ ವರ್ಷಗಳಲ್ಲಿ ಹಂಪೆಗೆ ಬರುವ ವಿದೇಶಿ ಪ್ರವಾಸಿಗರ ಸಂಖ್ಯೆ ಹೆಚ್ಚಿದೆ. 1995ರಲ್ಲಿ ಭಾರತಕ್ಕೆ ಭೇಟಿ ನೀಡಿದ ವಿದೇಶಿ ಪ್ರವಾಸಿಗರ ಸಂಖ್ಯೆ 21,23,683. ಇದೇ ಅವಧಿಯಲ್ಲಿ ಕರ್ನಾಟಕಕ್ಕೆ ಭೇಟಿ ನೀಡಿದ ಪ್ರವಾಸಿಗರ ಸಂಖ್ಯೆ 88,920 ಹಾಗೂ ಹಂಪೆಗೆ ಭೇಟಿ ನೀಡಿದವರ ಸಂಖ್ಯೆ 15,404. ಕರ್ನಾಟಕದಿಂದ ಹಂಪೆಗೆ ಬಂದ ವಿದೇಶಿ ಪ್ರವಾಸಿಗರ ಪಾಲು

ಶೇ.17.32, 1996ರಲ್ಲಿ ಭಾರತಕ್ಕೆ ಬಂದ ಪ್ರವಾಸಿಗರ ಸಂಖ್ಯೆ 22,87,860. ಪ್ರವಾಸಿಗರ ಬೆಳವಣಿಗೆಯ ಪ್ರಮಾಣ ದರ ಶೇ. 7.17 ಆಗಿದೆ. ಕರ್ನಾಟಕಕ್ಕೆ ಬಂದವರು 90,978 ಇದ್ದು ಹಿಂದಿನ ವರ್ಷಕ್ಕೆ ಹೋಲಿಸಿದರೆ ಬೆಳವಣಿಗೆ ಪ್ರಮಾಣ ದರ ಶೇ.2.31ರಷ್ಟು ಆಗಿದೆ. ಈ ಅವಧಿಯಲ್ಲಿ ಹಂಪೆಗೆ ಬಂದ ವಿದೇಶಿ ಪ್ರವಾಸಿಗರ ಸಂಖ್ಯೆ 5,319 ಆಗಿದ್ದು ಹಿಂದಿನ ವರ್ಷಕ್ಕಿಂತ ಬೆಳವಣಿಗೆ ಪ್ರಮಾಣ ದರ 189.60 ಆಗಿದೆ. ಹಾಗೆಯೇ ರಾಜ್ಯಕ್ಕೆ ಬಂದ ಪ್ರವಾಸಿಗರಲ್ಲಿ ಹಂಪೆಗೆ ಬಂದವರು ಶೇ. 5.85 ಆಗಿದೆ. 1997ರಲ್ಲಿ ಭಾರತಕ್ಕೆ ಬಂದ ಪ್ರವಾಸಿಗರ ಸಂಖ್ಯೆ 23,74,094 ಆಗಿದ್ದು, ಇದರ ಬೆಳವಣಿಗೆ ಪ್ರಮಾಣ ದರ ಶೇ. 3.63 ಆಗಿದೆ. ಈ ಅವಧಿಯಲ್ಲಿ ರಾಜ್ಯಕ್ಕೆ ಬಂದವರು 1,59,459 ಇದ್ದು ಬೆಳವಣಿಗೆ ಪ್ರಮಾಣ ದರ ಹಿಂದಿನ ವರ್ಷಕ್ಕಿಂತ ಶೇ. 42.94ರಷ್ಟಾಗಿದೆ. ಹಂಪೆಗೆ ಬಂದ ಪ್ರವಾಸಿಗರ ಸಂಖ್ಯೆ 10,502 ಇದ್ದು, ಬೆಳವಣಿಗೆ ಪ್ರಮಾಣ ದರ ಶೇ.49.35 ಆಗಿದೆ. ರಾಜ್ಯಕ್ಕೆ ಬಂದ ಪ್ರವಾಸಿಗರಲ್ಲಿ ಹಂಪೆಗೆ ಬಂದವರ ಪಾಲು ಶೇ.6.51.ಆಗಿದೆ. 1998ರಲ್ಲಿ ಭಾರತಕ್ಕೆ ವಿವಿಧ ದೇಶಗಳಿಂದ ಬಂದ ಪ್ರವಾಸಿಗರ ಸಂಖ್ಯೆ 5339704 ಇದ್ದು,ಬೆಳವಣಿಗೆ ಪ್ರಮಾಣ ದರ ಶೇ.55.53ರಷ್ಟಿದೆ. ಈ ಅವಧಿಯಲ್ಲಿ ಕರ್ನಾಟಕಕ್ಕೆ ಭೇಟಿ ನೀಡಿದ ಪ್ರವಾಸಿಗರ ಸಂಖ್ಯೆ 84,734 ಇದ್ದು, ಬೆಳವಣಿಗೆ ಪ್ರಮಾಣ ದರ ಹಿಂದಿನ ವರ್ಷಕ್ಕಿಂತ 88.15ರಷ್ಟಿದೆ. ಹಂಪೆಗೆ ಬಂದ ವಿದೇಶಿ ಪ್ರವಾಸಿಗರ ಸಂಖ್ಯೆ 18,337ರಷ್ಟಿದ್ದು ಬೆಳವಣಿಗೆ ಪ್ರಮಾಣ ದರ ಶೇ.42.72 ಆಗಿದೆ. ರಾಜ್ಯದಿಂದ ಹಂಪೆಗೆ ಬಂದ ವಿದೇಶಿ ಪ್ರವಾಸಿಗರ ಪಾಲು ಶೇ.21.64 ಆಗಿದೆ(ಕೋಷ್ಟಕ ಸಂಖ್ಯೆ-6).

1999ರಲ್ಲಿ ಭಾರತಕ್ಕೆ ಬಂದ ವಿದೇಶಿ ಪ್ರವಾಸಿಗರ ಸಂಖ್ಯೆ 58,32,105 ಇದ್ದು ಬೆಳವಣಿಗೆ ಪ್ರಮಾಣ ದರ ಶೇ. 8.44 ಆಗಿದೆ. ಕರ್ನಾಟಕಕ್ಕೆ ಭೇಟಿ ನೀಡಿದ ವಿದೇಶಿ ಪ್ರವಾಸಿಗರ ಸಂಖ್ಯೆ 82,953 ಆಗಿದ್ದು, ಪ್ರವಾಸಿಗರ ಬೆಳವಣಿಗೆ ಪ್ರಮಾಣ ದರ ಶೇ. 2.14 ಆಗಿದೆ. ಹಂಪೆಗೆ ಭೇಟಿಯನ್ನಿತ್ತ ವಿದೇಶಿ ಪ್ರವಾಸಿಗರ ಸಂಖ್ಯೆ3,953 ಆಗಿದ್ದು, ಹಿಂದಿನ ಅವಧಿಗಿಂತ ಪ್ರವಾಸಿಗರ ಬೆಳವಣಿಗೆ ಪ್ರಮಾಣ ದರ ಶೇ. 363.87 ಆಗಿದೆ. ಈ ಅವಧಿಯಲ್ಲಿ ವಿದೇಶಿ ಪ್ರವಾಸಿಗರು ಕಡಿಮೆ ಸಂಖ್ಯೆಯಲ್ಲಿ ಹಂಪೆಗೆ ಭೇಟಿ ಇತ್ತಿರುವುದು ಕಾಣುತ್ತದೆ. ಕರ್ನಾಟಕ ರಾಜ್ಯದಿಂದ ಹಂಪೆಗೆ ಬಂದ ಪ್ರವಾಸಿಗರ ಪಾಲು ಶೇ.4.76 ಆಗಿದೆ. 2000ರಲ್ಲಿ ಭಾರತಕ್ಕೆ ಭೇಟಿ ನೀಡಿದ ವಿದೇಶಿ ಪ್ರವಾಸಿಗರ ಸಂಖ್ಯೆ 60,68,809 ಆಗಿದೆ. ಈ ಅವಧಿಯಲ್ಲಿ ಪ್ರವಾಸಿಗರ ಬೆಳವಣಿಗೆ ಪ್ರಮಾಣ ದರ ಶೇ.3.90 ಇದೆ. ಹಾಗೇಯೆ ಕರ್ನಾಟಕಕ್ಕೆ ಭೇಟಿ ನೀಡಿದ ವಿದೇಶಿ ಪ್ರವಾಸಿಗರ ಸಂಖ್ಯೆ 1,76,600 ಇದ್ದು, ಪ್ರವಾಸಿಗರ ಬೆಳವಣಿಗೆ ದರ ಶೇ.53.03ರಷ್ಟಾಗಿದ್ದು ಕಳೆದ ವರ್ಷಕ್ಕಿಂತ ಹೆಚ್ಚಿದೆ. ಈ ಅವಧಿಯಲ್ಲಿ ಹಂಪೆಗೆ ಭೇಟಿ ನೀಡಿದ ವಿದೇಶಿ ಪ್ರವಾಸಿಗರ ಸಂಖ್ಯೆ 10,446 ಇದ್ದು, ಪ್ರವಾಸಿಗರ ಬೆಳವಣಿಗೆಯ ಪ್ರಮಾಣ ದರ ಶೇ.62.15 ರಷ್ಟಾಗಿದೆ. ರಾಜ್ಯದಿಂದ ಹಂಪೆಗೆ ಬಂದ ವಿದೇಶಿ ಪ್ರವಾಸಿಗರ ಪಾಲು ಶೇ.5.91 ಆಗಿದೆ. 2001ರಲ್ಲಿ ಕರ್ನಾಟಕಕ್ಕೆ ಭೇಟಿ ನೀಡಿದ ವಿದೇಶಿ ಪ್ರವಾಸಿಗರ ಸಂಖ್ಯೆ 1,44,402 ಇದ್ದು, ಪ್ರವಾಸಿಗರ ಬೆಳವಣಿಗೆ

[illegible]

ಪ್ರಮಾಣ ದರ ಶೇ.22.29 ಆಗಿದೆ.[16] ಇದು ಕಳೆದ ವರ್ಷಕ್ಕಿಂತ ಕಡಿಮೆ ಇದೆ. ಈ ಅವಧಿಯಲ್ಲಿ ಹಂಪೆಗೆ ಭೇಟಿ ನೀಡಿದ ವಿದೇಶಿ ಪ್ರವಾಸಿಗರ ಸಂಖ್ಯೆ 16,041 ಇದ್ದು, ಪ್ರವಾಸಿಗರ ಬೆಳವಣಿಗೆ ಪ್ರಮಾಣ ದರ ಶೇ.34.87 ಆಗಿದೆ. ರಾಜ್ಯದಿಂದ ಹಂಪೆಗೆ ಬಂದ ವಿದೇಶಿ ಪ್ರವಾಸಿಗರ ಪಾಲು ಶೇ.11.10 ಆಗಿದೆ(ಕೋಷ್ಟಕ-6).[17]

ಹಂಪೆಗೆ ಬರುವ ಎಲ್ಲಾ ದೇಶದ ಎಲ್ಲಾ ಪ್ರವಾಸಿಗರನ್ನು ಸಂದರ್ಶನ ಮಾಡಲು ಸಾಧ್ಯವಾಗಲಿಲ್ಲ. ಅದಕ್ಕೆ ಹಲವಾರು ಕಾರಣಗಳನ್ನು ಕೊಡಬಹುದು. ಅವುಗಳಲ್ಲಿ ಕೆಲವು ಇಂತಿವೆ. ವಿದೇಶಿ ಪ್ರವಾಸಿಗರನ್ನು ಸಂದರ್ಶನ ಮಾಡಲು ಇರುವ ತೊಡಕುಗಳು ಆ ಕಾರಣಗಳಲ್ಲಿ ಪ್ರಮುಖ. ವಿದೇಶಿ ಪ್ರವಾಸಿಗರು ಭೇಟಿಯಾದ ಸ್ಥಳದಲ್ಲಿ ಸಂದರ್ಶನ ಮಾಡಲು ಯತ್ನಿಸಿದರೆ ತಕ್ಷಣ ಅವರು ಒಪ್ಪಿಕೊಳ್ಳುವುದಿಲ್ಲ. ವಿದೇಶಿಯರು ತಮ್ಮ ಸಂದರ್ಶನ ನೀಡಲು ಕಾಲಾವಕಾಶ ಕೇಳುತ್ತಾರೆ. ಕೆಲವರು ಸಂದರ್ಶನ ಕೊಡಲು ಇಷ್ಟಪಡದೆ ದಯಮಾಡಿ ತೊಂದರೆ ಕೊಡಬೇಡಿ ಎಂದು ಹೇಳಿದರೆ ಇನ್ನೂ ಕೆಲವರು 5 ರಿಂದ 10 ಮಿಷಗಳಲ್ಲಿ ಸಂದರ್ಶನ ಮುಗಿಸಿದರೆ ಮಾತ್ರ ಸಂದರ್ಶನ ಕೊಡುತ್ತೇವೆ ಎನ್ನುತ್ತಾರೆ. ನಮಗೆ ಬೇರೆ ಕಡೆ ಹೋಗಲು ಇದೆ ದಯವಿಟ್ಟು ತೊಂದರೆ ಕೊಡಬೇಡಿ ಎಂದು ಇನ್ನು ಕೆಲವು ಪ್ರವಾಸಿಗರು ಸಂಶೋಧಕರನ್ನು ದೂರ ಇಡುತ್ತಾರೆ. ಅವರು ರೆಸ್ಟೋರೆಂಟುಗಳಲ್ಲಿ ಆಹಾರಕ್ಕೆ ಆರ್ಡರ್ ಕೊಟ್ಟು ವಿಶ್ರಾಂತಿ ತೆಗೆದುಕೊಳ್ಳುವ ಅಥವಾ ಹರಟೆ ಹೊಡೆಯುವ ಸಂದರ್ಭದಲ್ಲಿ ಮಾತಾಡಲು ಆಸಕ್ತಿ ತೋರಿಸುತ್ತಾರೆ. ಆ ಸಂದರ್ಭದಲ್ಲಿ ಪ್ರವಾಸಿಗರನ್ನು ಮಾತಾಡಿಸಬೇಕಾದರೆ ರೆಸ್ಟೋರೆಂಟ್ ಮಾಲಿಕನ ವಿಶ್ವಾಸ ಗಳಿಸಿರಬೇಕಾಗುತ್ತದೆ. ಈ ಎರಡು ಸಮಸ್ಯೆಗಳ ಪರಿಹಾರ ಮಾಡಿಕೊಂಡು ಹೆಚ್ಚಿನ ಸಂದರ್ಶನಗಳನ್ನು ಮಾಡಲಾಗಿದೆ. ಪ್ರವಾಸಿಗರು ಕೊಠಡಿಗಳಲ್ಲಿ ಇದ್ದು ವಿಶ್ರಾಂತಿ ತೆಗೆದುಕೊಳ್ಳುವ ಸಂದರ್ಭದಲ್ಲಂತೂ ಬೇರೆಯವರನ್ನು ಒಳಗಡೆ ಸೇರಿಸಿಕೊಳ್ಳುವುದಿಲ್ಲ. ಒಟ್ಟಿನಲ್ಲಿ ವಿದೇಶಿ ಪ್ರವಾಸಿಗರು ಮೂಡಿ ಪರ್ಸನ್ಸ್(Moody persons) ಹಾಗೆ ಕಂಡುಬರುತ್ತಾರೆ. ಸಂದರ್ಶನದ ಮಧ್ಯದಲ್ಲಿಯೆ ಕೆಲವರು ನಮಗೆ ಬೇರೆ ಕಡೆ ಕೆಲಸವಿದೆ ಎಂದು ಎದ್ದುಹೋಗುತ್ತಾರೆ. ಆದ್ದರಿಂದ ಪ್ರವಾಸಿಗರು ಖುಷಿಯಿಂದ ಇದ್ದ ಸಂದರ್ಭದಲ್ಲಿ, ಸಾರ್ವಜಕ ಸ್ಥಳಗಳಲ್ಲಿ, ರಸ್ತೆ ಪಕ್ಕದಲ್ಲಿ, ಪ್ರವಾಸೋದ್ಯಮ ಇಲಾಖೆಯ ಮಾಹಿತಿ ಕೇಂದ್ರದಲ್ಲಿ, ವಿರೂಪಾಕ್ಷ ದೇವಸ್ಥಾನದ ಆವರಣದಲ್ಲಿ ಮತ್ತು ಹೊರ ಪೋಲಿಸ್ ಠಾಣೆಯ ಹತ್ತಿರ ಹಾಗೂ ಅತಿಥಿಗೃಹಗಳ ರಿಸೆಪ್ಷನ್ ಕೌಂಟರ್‌ನಲ್ಲಿ (Reception) ಸಂದರ್ಶನ ಮಾಡಲಾಗಿದೆ.

ಹಂಪೆಗೆ ಬಂದ ಪ್ರವಾಸಿಗರಲ್ಲಿ ಒಟ್ಟು 23 ರಾಷ್ಟ್ರಗಳ, 162 ಜನ ಪ್ರವಾಸಿಗರನ್ನು ಸಂದರ್ಶಿಸಲಾಗಿದೆ. ಇವರಲ್ಲಿ ಇಂಗ್ಲೆಂಡಿನಿಂದ ಬಂದ ಪ್ರವಾಸಿಗರಲ್ಲಿ 33 ಜನರನ್ನು, ಫ್ರಾನ್ಸ್‌ನಿಂದ ಬಂದ 10 ಪ್ರವಾಸಿಗರನ್ನು, ಜರ್ಮನಿಯಿಂದ ಬಂದ 12 ಜನರನ್ನು, ಇಸ್ರೇಲ್‌ನಿಂದ 11 ಜನ ಪ್ರವಾಸಿಗರನ್ನು, ಹಾಲೆಂಡ್, ಇಟಲಿ, ಸ್ವೀಡನ್, ಅಮೇರಿಕ ಮತ್ತು ಕೆನಡಾದಿಂದ ಬಂದ ತಲಾ 8 ಜನ ಪ್ರವಾಸಿಗರನ್ನು,

ಆಸ್ಟ್ರೀಯ, ಡೆನ್‌ಮಾರ್ಕ್, ನಾರ್ವೆ ಮತ್ತು ಸ್ಪೇನ್‌ನಿಂದ ಬಂದ ತಲಾ 4 ಪ್ರವಾಸಿಗರನ್ನು, ಬೆಲ್ಜಿಯಂ ಮತ್ತು ಜಪಾನಿಂದ ಬಂದ ತಲಾ 6 ಪ್ರವಾಸಿಗರನ್ನು, ಸ್ವಿಟ್ಜರ್‌ಲ್ಯಾಂಡ್ ಮತ್ತು ದಕ್ಷಿಣ ಕೊರಿಯದ ತಲಾ 5 ಪ್ರವಾಸಿಗರನ್ನು, ಐರೆಲ್ಯಾಂಡ್ ಮತ್ತು ಪೋರ್ಚ್‌ಗಲ್‌ನಿಂದ ಬಂದ ತಲಾ 3 ಪ್ರವಾಸಿಗರನ್ನು, ಪೋಲೆಂಡ್ ಮತ್ತು ಚೆಚೆನ್ಯಾದಿಂದ ಬಂದ ತಲಾ 2 ಪ್ರವಾಸಿಗರನ್ನು ಹಾಗೂ ಆಸ್ಟ್ರೇಲಿಯಾದಿಂದ ಬಂದ 7 ಜನ ಪ್ರವಾಸಿಗರನ್ನು ಮತ್ತು ಸ್ಯಾಂಟುಗೋನಿಯದಿಂದ ಬಂದ ಒಬ್ಬ ಪ್ರವಾಸಿಗರನ್ನು ಸಂದರ್ಶನ ಮಾಡಲಾಗಿದೆ. ಈ ಪ್ರವಾಸಿಗರಲ್ಲಿ 20 ರಿಂದ 30 ವರ್ಷ ವಯೋಮಾನದವರು 88 ಜನ ಇದ್ದರೆ, 30 ರಿಂದ 50 ವರ್ಷದೊಳಗಿನವರು 42 ಜನ, 20 ವರ್ಷದ ಒಳಗಿನವರು 18 ಜನ ಮತ್ತು 50 ವರ್ಷ ಮೇಲ್ಪಟ್ಟವರು 14 ಪ್ರವಾಸಿಗರಿದ್ದಾರೆ. ಇವರಲ್ಲಿ 86 ಜನ ಮಹಿಳೆ ಮತ್ತು 76 ಜನ ಪುರುಷ ಪ್ರವಾಸಿಗರಿದ್ದಾರೆ.ವಿದೇಶಿ ಪ್ರವಾಸಿಗರಲ್ಲಿ ಮದುವೆಯಾಗದವರೆ ಹೆಚ್ಚು. 162 ಸಂದರ್ಶಕರಲ್ಲಿ 113 ಜನ ಅವಿವಾಹಿತರು ಇದ್ದಾರೆ (ಕೋಷ್ಟಕ-7).ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಮದುವೆ ಸಾಂಪ್ರದಾಯಿಕ ಅಲ್ಲ. ಇಷ್ಟ ಪಟ್ಟರೆ ಮದುವೆ ಆಗುತ್ತೇವೆ ಇಲ್ಲದಿದ್ದರೆ ಸ್ನೇಹಿತರಾಗಿಯೆ ಮುಂದುವರಿಯುತ್ತೇವೆ. ಮದುವೆಯಾದರೂ ಸಂಬಂಧ ಬಹುತೇಕ ಸಂದರ್ಭಗಳಲ್ಲಿ ಬಹುಕಾಲ ಉಳಿಯದೆ ಮುರಿದು ಬೀಳುವುದೆ ಹೆಚ್ಚು. ಹಾಗೆಯೇ ತಮ್ಮಲ್ಲಿ ಮುಕ್ತ ಲೈಂಗಿಕತೆ ಇರುವುದರಿಂದ ಮದುವೆಗೆ ಹೆಚ್ಚಿನ ಮಹತ್ವವನ್ನು ಕೊಡುವುದಿಲ್ಲ ಎನ್ನುತ್ತಾರೆ. ಅವಿವಾಹಿತರೆಂದರೆ ಬ್ರಹ್ಮಚಾರಿ ಅಥವಾ ಬ್ರಹ್ಮಚಾರಿಣಿಗಳೆಂದೇನೂ ಅಲ್ಲ. ಸಂದರ್ಶನ ಸಮಯದಲ್ಲಿ ಗಂಡು-ಹೆಣ್ಣು ಒಟ್ಟಿಗೆ ಇರುತ್ತಾರೆ. ಹೆಚ್ಚಿನ ಸಂದರ್ಭದಲ್ಲಿ ಗಂಡ-ಹೆಂಡಿಂದಿರೆಂದು ತಿಳಿದು ಪುರುಷರಿಗೆ ನಿಮಗೆ ಮದುವೆ ಆಗಿದೆಯೆ, ಇವಳು ನಿಮ್ಮ ಹೆಂಡತಿಯೆ ಎಂದರೆ ಇಲ್ಲ ನಾನು ಅವಿವಾಹಿತ ಇವಳು ನನ್ನ ಸ್ನೇಹಿತೆ ಎನ್ನುತ್ತಾರೆ. ಮದುವೆಯಾಗದಿದ್ದರೂ ಗೆಸ್ಟ್‌ಹೌಸ್‌ಗಳಲ್ಲಿ ಒಂದೇ ಕೊಠಡಿಯಲ್ಲಿ ತಂಗುವುದು, ಒಟ್ಟಿಗೆ ಓಡಾಡುವುದು ಸರ್ವೆಸಾಮಾನ್ಯ. ಇವರನ್ನು ಒಂದೇ ದೇಶದವರೆಂದು ಭಾವಿಸಬೇಕಾಗಿಲ್ಲ. ಗಂಡಸರು ಯಾವುದೋ ಒಂದು ರಾಷ್ಟ್ರದವರಾಗಿದ್ದರೆ, ಹೆಂಗಸರು ಇನ್ನೊಂದು ರಾಷ್ಟ್ರದವರಾಗಿರುತ್ತಾರೆ. ಇವರು ಹಂಪೆಗೆ ಬರುವಾಗ ಒಟ್ಟಿಗೆ ಬರುವುದಿಲ್ಲ. ಹಂಪೆಯಿಂದ ಹೋಗುವಾಗ ಒಟ್ಟಿಗೆ ಹೋಗುತ್ತಾರೆ ಎಂದು ಹೇಳಲು ಸಾಧ್ಯವಿಲ್ಲ. ಕೆಲವು ಬಾರಿ ಪುರುಷರು ಹೋದ ಎಷ್ಟೋ ದಿನಗಳ ನಂತರ ಹೆಂಗಸರು ಹೋಗುತ್ತಾರೆ. ಇನ್ನೂ ಕೆಲವು ಬಾರಿ ಇಬ್ಬರೂ ಒಟ್ಟಿಗೆ ಹೋಗುತ್ತಾರೆ. ಇದು ಅವರ ಸ್ನೇಹ ಸಂಬಂಧಗಳ ಮೇಲೆ ಅವಲಂಬನೆಯಾಗಿರುತ್ತದೆ.

ಒಮ್ಮೆ ಹಂಪೆಯ ಒಂದು ಅತಿಥಿ ಗೃಹದಲ್ಲಿ ಜರ್ಮನಿಯ ಇಬ್ಬರು ಯುವಕರು ಬಂದು ತಂಗಿದ್ದರು. ಎರಡು ದಿನಗಳ ತರುವಾಯ ಫ್ರಾನ್ಸ್‌ನ ಇಬ್ಬರು ಹುಡುಗಿಯರು ಪಕ್ಕದ ಕೊಠಡಿಗೆ ಬಂದರು. ಆ ಹುಡುಗಿಯರ ಮತ್ತು ಹುಡುಗರ ನಡುವೆ ಪರಿಚಯವಾಗಿ, ಸ್ನೇಹವಾಯಿತು. ಯುವಕರ ಪರಿಚಯವಾದ ನಂತರ ಯುವತಿಯರು ಯುವಕರ ಕೊಠಡಿಯಲ್ಲಿ ನಾಲ್ಕು ದಿನಗಳ ಕಾಲ

[illegible]

[illegible]

[illegible]

ಒಟ್ಟಿಗೆ ಇದ್ದರು. ಹಂಪೆಯಿಂದ ಹೊರಡುವ ಮೊದಲೆ ಹುಡುಗರಿಗೆ ಬಾಯ್ ಎಂದು ಹೇಳಿ ಹುಡುಗಿಯರು ತಮ್ಮ ದಾರಿ ಹಿಡಿದರು. ಈ ಘಟನೆಯನ್ನು ಅತಿಥಿಗೃಹದ ಮಾಲಿಕರೊಬ್ಬರು ಹೀಗೆ ವಿವರಿಸುತ್ತಾರೆ. ಅತಿಥಿಗೃಹದಲ್ಲಿ ಇದ್ದಾಗ ಆ ಯುವತಿಯರನ್ನು ನೀವು ಸ್ನೇಹಿತರೆ ಎಂದು ಕೇಳಿದರೆ ಅವರಲ್ಲಿ ಒಬ್ಬಳು ಅಲ್ಲ ಇವಳು ನನ್ನ ಅಣ್ಣನ ಹೆಂಡತಿ ಎಂದು ಇನ್ನೊಬ್ಬ ಯುವತಿಯನ್ನು ತೋರಿಸಿದಳೆಂದು ಹೇಳುತ್ತಾರೆ. ನಮ್ಮಲ್ಲಿ ಇದು ಸಾಧ್ಯವಿಲ್ಲ. ಅದೂ ಇನ್ನೊಬ್ಬ ಯುವಕನ ಜೊತೆಗೆ ಇರುವುದನ್ನು ನಮ್ಮಲ್ಲಿ ಸಹಿಸುವುದು ಸಾಧ್ಯವೆ ಇಲ್ಲ. ಪ್ರವಾಸಿಗರಲ್ಲಿ ಮುಕ್ತ ಲೈಂಗಿಕತೆ ಹೆಚ್ಚು, ಆದ್ದರಿಂದ ಇದು ಸಾಧ್ಯವಾಗುತ್ತಿದೆ ಎನ್ನುತ್ತಾರೆ. ವಿದೇಶಿ ಪ್ರವಾಸಿಗರಲ್ಲಿ ಯುವಕ-ಯುವತಿಯರು ಮದುವೆಗೆ ಮುನ್ನ ಡೇಟಿಂಗ್‌ಗೆ ಎಂದು ಬರುತ್ತಾರೆ. ಇಲ್ಲಿಯೂ ಸಹ ಯುವತಿ ಮತ್ತು ಯುವಕ ಒಂದು ರಾಷ್ಟ್ರದಿಂದ ಬಂದವರೆಂದು ಭಾವಿಸಬೇಕಾಗಿಲ್ಲ. ಕೆಲವೊಮ್ಮೆ ಬೇರೆ ಬೇರೆ ರಾಷ್ಟ್ರದವರು ಆಗಿರುತ್ತಾರೆ. ಇವರಲ್ಲಿ ನೀವು ಮುಂದೆ ಮದುವೆ ಮಾಡಿಕೊಳ್ಳುವಿರಾ ಎಂದರೆ, ಈಗಲೇ ಹೇಳುವುದು ಕಷ್ಟ, ಇಬ್ಬರಿಗೂ ಸರಿ ಹೊಂದಿದರೆ ಮುಂದೆ ಮದುವೆ ಆಗಲೂಬಹುದು ಎನ್ನುತ್ತಾರೆ. ಈ ಗುಂಪಿಗೆ ಸೇರಿದ ಹೆಚ್ಚಿನ ಪ್ರವಾಸಿಗರು ವಿದ್ಯಾರ್ಥಿಗಳಾಗಿರುತ್ತಾರೆ. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಮದುವೆಗೆ ಮೊದಲೆ ಡೇಟಿಂಗ್ ಹೋಗುವುದು ಸಾಮಾನ್ಯ. ಡೇಟಿಂಗ್ ಹೋದವರು ಮದುವೆ ಆಗಲೇಬೇಕೆಂಬುದು ಕಡ್ಡಾಯವೇನಿಲ್ಲ. 10 ಜನ ಇಂತಹ ಪ್ರವಾಸಿಗರನ್ನು ಸಂದರ್ಶನ ಮಾಡಲಾಗಿದೆ (ಕೋಷ್ಟಕ-7). ಇನ್ನೂ ಮದುವೆ ಆಗಿ ಬಂದ ಪ್ರವಾಸಿಗರಲ್ಲಿ 39 ಜನರನ್ನು ಸಂದರ್ಶಿಸಲಾಗಿದೆ. ಇವರು ಚರ್ಚ್‌ಗಳಲ್ಲಿ ಪಾದ್ರಿಯ ಸಮ್ಮುಖದಲ್ಲಿ ಬೆರಳಿನ ಉಂಗುರವನ್ನು ಬದಲಾಯಿಸಿಕೊಂಡು ಪಾದ್ರಿಯ ಆರ್ಶೀವಾದ ಪಡೆದು ಮದುವೆ ಆಗಿದ್ದೇವೆಂದು ತಿಳಿಸಿದರು. ಮದುವೆಯಾದಾಗಿಂದ ಒಟ್ಟಿಗೆ ವಾಸ ಮಾಡುತ್ತಿದ್ದೇವೆ ಎಂದು ಹೇಳುತ್ತಾರೆ.

ಸಂದರ್ಶನದಲ್ಲಿ 32 ವಿದ್ಯಾರ್ಥಿಗಳು ಸೇರಿದ್ದಾರೆ. 14 ವರ್ಷದವರೆಗೂ ಶಿಕ್ಷಣ ಕಡ್ಡಾಯವೆಂದು ತಿಳಿಸುತ್ತಾ ಸರಕಾರಗಳೆ ಎಲ್ಲಾ ಶೈಕ್ಷಣಿಕ ವೆಚ್ಚವನ್ನು ಭರಿಸುತ್ತದೆನ್ನುತ್ತಾರೆ. ಉನ್ನತ ಶಿಕ್ಷಣವನ್ನು ಪಡೆಯಲು ವೈಯಕ್ತಿಕವಾಗಿ ವೆಚ್ಚವನ್ನು ಭರಿಸಬೇಕಂತೆ. ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಮಾತ್ರ ಮೆರಿಟ್ ಸ್ಕಾಲರ್‌ಶಿಪ್ ದೊರೆಯುತ್ತದೆ. ಪ್ರವಾಸಿಗರು 85 ಜನ ಇಂಟರ್‌ಮೀಡಿಯಟ್ ಆದವರು, 45 ಜನ ಪದವಿ ಪಡೆದವರು ಹಾಗೂ 32ಜನ ಇತರೆ (ತಾಂತ್ರಿಕ) ಶಿಕ್ಷಣ ಹೊಂದಿದವರು ಇದ್ದಾರೆ(ಕೋಷ್ಟಕ-7). ಸಂದರ್ಶನ ಮಾಡಿದವರಲ್ಲಿ 108(ಶೇ 66.66) ಜನ ವಿದೇಶಿ ಪ್ರವಾಸಿಗರು ಸೇವಾ ವಲಯದ ವಿವಿಧ ಉದ್ಯೋಗಗಳಲ್ಲಿ ತೊಡಗಿಕೊಂಡವರಿದ್ದಾರೆ. ಇವರು ಶಿಕ್ಷಕರಾಗಿ, ಸಮಾಜ ಕಾರ್ಯಕರ್ತರಾಗಿ, ಬ್ಯಾಂಕಿನ ಉದ್ಯೋಗಿಗಳಾಗಿ, ಮೋಟಾರು ಚಾಲಕರಾಗಿ, ಮಾರಾಟ ಪ್ರತಿನಿಧಿಗಳಾಗಿ, ಹೋಟೆಲ್‌ಗಳಲ್ಲಿ ವೇಟರ್ ಮತ್ತು ಮ್ಯಾನೇಜರ್ ಆಗಿ, ಟ್ರಾವೆಲ್ಸ್ ಪ್ರತಿನಿಧಿಯಾಗಿ, ನರ್ಸ್‌ಗಳಾಗಿ ಕೆಲಸ ಮಾಡುತ್ತಿದ್ದಾರೆ. ಕೃಷಿ ವಲಯದಲ್ಲಿ ಕೇವಲ ಒಬ್ಬರು, ಕೈಗಾರಿಕಾ ವಲಯದಲ್ಲಿ

ನಾಲ್ಕು ಜನರಿದ್ದಾರೆ. ಕೃಷಿಯಲ್ಲಿ ತೊಡಗಿಸಿಕೊಂಡ ಪ್ರವಾಸಿಗ ಸಣ್ಣಮಟ್ಟಿನ ಭೂಮಾಲಿಕನಾಗಿದ್ದಾನೆ. ಅವನ ಪ್ರಕಾರ ಅಲ್ಲಿ ಹೆಚ್ಚು ಜನ ಕೃಷಿಯಲ್ಲಿ ತೊಡಗಿಸಿ ಕೊಳ್ಳುವುದಿಲ್ಲ. ಯಾಕೆಂದರೆ 300-400 ಹೆಕ್ಟೇರುಗಳುಳ್ಳ ಎಸ್ಟೇಟ್‌ಗಳಿದ್ದು ಯಂತ್ರಗಳ ಬಳಕೆ ಹೆಚ್ಚಿದೆ. ಹೆಚ್ಚು ಜನ ಸೇವಾ ವಲಯದ ಕೆಲಸದಲ್ಲಿ ನಿರತರಾಗಿರುತ್ತಾರೆಂದು ಹೇಳುತ್ತಾನೆ. ಕೈಗಾರಿಕಾ ವಲಯದಲ್ಲಿ ಸ್ವಯಂಚಾಲಿತ ಆಟೊ ಯಂತ್ರಗಳು ಬಂದಿರುವುದರಿಂದ ಉದ್ಯೋಗಗಳು ಕಡಿಮೆಗೊಳ್ಳುತ್ತಿವೆ ಎಂದು ಕೈಗಾರಿಕಾ ವಲಯದಲ್ಲಿನ ಉದ್ಯೋಗಿಗಳು ಹೇಳುತ್ತಾರೆ(ಕೋಷ್ಟಕ-8). ವಿದೇಶಿ ಪ್ರವಾಸಿಗರು ತಮ್ಮ ಉದ್ಯೋಗದ ಬಗ್ಗೆ ವಿವರ ನೀಡಲು ಹಿಂಜರಿಯುವುದಿಲ್ಲ. ಆದರೆ ಅವರ ಆದಾಯದ ಬಗ್ಗೆ ವಿಚಾರಿಸಿದರೆ ಸರಿಯಾದ ಉತ್ತರ ಸಿಗುವುದಿಲ್ಲ. ಅದು ನಮ್ಮ ಖಾಸಗೀ ವಿಷಯ, ಹೇಳಲಿಕ್ಕೆ ಆಗುವುದಿಲ್ಲ ಎನ್ನುತ್ತಾರೆ. 112 ಪ್ರವಾಸಿಗರು ಇದೆ ಉತ್ತರ ಕೊಟ್ಟಿದ್ದಾರೆ. ಇವರೊಳಗೆ 40 ಪ್ರವಾಸಿಗರು ಪದೆ ಪದೆ ಉದ್ಯೋಗವನ್ನು ಬದಲಿಸುವುದರಿಂದ ಆದಾಯದಲ್ಲಿ ತುಂಬಾ ವ್ಯತ್ಯಾಸ ಆಗುತ್ತದೆ. ಆದ್ದರಿಂದ ನಮ್ಮ ವಾರ್ಷಿಕ ಆದಾಯ ಇಷ್ಟೇ ಎಂದು ಖಚಿತವಾಗಿ ಹೇಳಲು ಆಗುವುದಿಲ್ಲ ಎನ್ನುತ್ತಾರೆ. ಸಂದರ್ಶಕರಲ್ಲಿ 50 ಪ್ರವಾಸಿಗರು ವಿದ್ಯಾರ್ಥಿಗಳು ಹಾಗೂ ಉದ್ಯೋಗಿಗಳು ತಮ್ಮ ಆದಾಯವನ್ನು ತಿಂಗಳು ಮತ್ತು ವಾರ್ಷಿಕ ಗಳಿಕೆಯಲ್ಲಿ ತಿಳಿಸಿದ್ದಾರೆ. ಇವರಲ್ಲಿ 22ಜನ ಪ್ರವಾಸಿಗರ ಆದಾಯ ತಿಂಗಳಿಗೆ 500 ರಿಂದ 1000ಡಾಲರ್‌ಗಳಾಗಿದೆ. 8 ಜನರ ಪ್ರವಾಸಿಗರ ಆದಾಯ 1001 ರಿಂದ 1500 ಡಾಲರ್‌ಗಳು, 5 ಜನರ ಪ್ರವಾಸಿಗರ ಆದಾಯ 1501 ರಿಂದ 2000 ಡಾಲರ್‌ಗಳಾಗಿದೆ. 10ಜನ ಪ್ರವಾಸಿಗರ ವಾರ್ಷಿಕ ಆದಾಯ 10 ಸಾವಿರ ದಿಂದ 25 ಸಾವಿರದವರೆಗೆ ಇದ್ದರೆ, 5ಜನ ಪ್ರವಾಸಿಗರ ಆದಾಯ 25,000ಡಾಲರ್ ಮೇಲ್ಪಟ್ಟಿದೆ. ಈ ಅಂಕಿ-ಅಂಶಗಳಿಂದ ತಿಳಿದುಬರುವುದೇನೆಂದರೆ ಪ್ರವಾಸಿಗರಲ್ಲಿ ಕಡಿಮೆ ಆದಾಯ ಇರುವವರು ಹೆಚ್ಚಿನ ಸಂಖ್ಯೆಯಲ್ಲಿ ಇದ್ದಾರೆ. ಇದನ್ನು ಆಯಾಯ ರಾಷ್ಟ್ರಗಳಲ್ಲಿ ಇರುವ ವಾರ್ಷಿಕ ಆದಾಯದ ಮೂಲಕ ತಿಳಿದುಕೊಳ್ಳಬಹುದಾಗಿದೆ(ಕೋಷ್ಟಕ-9).

ಸಂದರ್ಶನ ಮಾಡಿದ ಮಾಹಿತಿದಾರರ ಕೆಲವು ರಾಷ್ಟ್ರಗಳ ತಲಾವರಮಾನವನ್ನು ಅಮೇರಿಕನ್ ಡಾಲರ್‌ಗಳಲ್ಲಿ ನೋಡಿದಾಗ, ಯುನೈಟೆಡ್ ಕಿಂಗ್‌ಡಮ್ 23509, ಯುನೈಟೆಡ್ ಸ್ಟೇಟ್ಸ್ 34,172, ಫ್ರಾನ್ಸ್ 24,223, ಜರ್ಮನಿ 25,103, ಇಸ್ರೇಲ್ 20,131, ಇಟಲಿ 23,626, ಸ್ವೀಡನ್ 24,277, ಆಸ್ಟ್ರೀಯ 26,765, ಡೆನ್‌ಮಾರ್ಕ್ 27,627, ನಾರ್ವೆ 29,918, ಸ್ಪೇನ್ 19,472, ಬೆಲ್ಜಿಯಂ 27,178, ಮತ್ತು ಜಪಾನ್ 26,755, ಸ್ವಿಟ್ಜರ್‌ಲ್ಯಾಂಡ್ 28,769, ಐರೆಲ್ಯಾಂಡ್ 29,866 ಆಸ್ಟ್ರೇಲಿಯಾ 25,693 ಮತ್ತು ಇಂಡಿಯಾ 2,358 ಆಗಿದೆ.[18] ಈ ರಾಷ್ಟ್ರಗಳ ತಲಾ ವರಮಾನವನ್ನು ಗಮನಿಸಿದಾಗ ಭಾರತಕ್ಕಿಂತ ಉತ್ತಮವಾಗಿರುವುದು ಕಂಡುಬಂದಿದೆ. ಹಂಪೆಯಲ್ಲಿ ಹಲವಾರು ವರ್ಷಗಳಿಂದ ವಾಸವಾಗಿರುವ ಹಾಲೆಂಡ್‌ನ ಒಬ್ಬ ವಿದೇಶಿ ಪ್ರವಾಸಿಗನಲ್ಲಿ ಪ್ರವಾಸಿಗರು ಯಾಕೆ ತಮ್ಮ ಆದಾಯವನ್ನು ಹೇಳುತ್ತಿಲ್ಲವೆಂದು ಕೇಳಿದರೆ ಕಾನೂನು ಬಾಹಿರ ಚಟುವಟಿಕೆಗಳಿಂದ ಹಣ ಗಳಿಸಿರುವ

(ಕೋಷ್ಟಕ-10). ಭಾರತಕ್ಕೆ ತಲುಪಲು ಪ್ರವಾಸಿಗರು ವಾಯು ಮಾರ್ಗವನ್ನೆ ಬಳಸುತ್ತೆವೆಂದು ಎಲ್ಲ ಪ್ರವಾಸಿಗರು ಹೇಳಿದ್ದಾರೆ. ಆದರೆ ಭಾರತಕ್ಕೆ ಬಂದ ನಂತರ ದೇಶದ ಬೇರೆ ಬೇರೆ ಪ್ರದೇಶಗಳಿಗೆ ಅಥವಾ ಪ್ರವಾಸಿ ತಾಣಗಳಿಗೆ ಹೋಗಲು ರೈಲು, ಸಾರಿಗೆ ಮತ್ತು ಟ್ಯಾಕ್ಸಿಗಳನ್ನು ಅವಲಂಬಿಸುತ್ತಾರೆ.

ಹಂಪೆಗೆ ಹೇಗೆ ಪ್ರಯಾಣಿಸಿದ್ದೀರಿ ಎನ್ನುವ ಪ್ರಶ್ನೆಗೆ 40 ಜನ(ಶೇ 24.69) ರೈಲು ಮಾರ್ಗದಲ್ಲಿ ಮತ್ತು 37ಜನ(ಶೇ 22.84) ರಸ್ತೆ ಸಾರಿಗೆ ಬಸ್ಸುಗಳಲ್ಲಿ ಪ್ರಯಾಣಿಸಿದ್ದೇವೆ ಎಂದು ಹೇಳಿದ್ದಾರೆ. 83 ಜನ(ಶೇ 51.23) ಪ್ರವಾಸಿಗರು ರೈಲು ಮತ್ತು ಬಸ್ಸಿನಲ್ಲಿ ಪ್ರಯಾಣಿಸಿದ್ದೇವೆಂದು ಹಾಗೂ ಸಂದರ್ಶಕರಲ್ಲಿ 2ಜನ(ಶೇ 1.24) ಮಾತ್ರ ಟ್ಯಾಕ್ಸಿಯಲ್ಲಿ ಪ್ರಯಾಣಿಸಿದವೆಂದು ತಿಳಿಸಿದ್ದಾರೆ (ಕೋಷ್ಟಕ-11): (ಪ್ರಯಾಣ ಸುಖಕರವಾಗಿತ್ತೆಂದು 112ಜನ ಪ್ರವಾಸಿಗರು ಹೇಳಿದರೆ, 50 ಜನರು ಮಾತ್ರ ಪ್ರಯಾಣ ಸುಖಕರವಾಗಿಲ್ಲವೆಂದು ತಿಳಿಸಿದ್ದಾರೆ. ಪ್ರಯಾಣ ದರಗಳು ತೃಪ್ತಿಕರವಾಗಿದೆ ಎಂದು 133ಜನ ತಿಳಿಸಿದರೆ, 29ಜನ ಪ್ರವಾಸಿಗರು ತಮ್ಮ ಅತೃಪ್ತಿಯನ್ನು ವ್ಯಕ್ತಪಡಿಸಿದ್ದಾರೆ. ಭಾರತದಲ್ಲಿ ಬಂದಿಳಿದ ನಂತರ ಆ ಪ್ರದೇಶಗಳಿಂದ ಹಂಪೆಗೆ ಬರಲು ರೈಲು ಗಾಡಿಯಲ್ಲಿ ಹೆಚ್ಚಿನ ಪ್ರವಾಸಿಗರು ಬರುತ್ತಾರೆ. ಬಸ್ಸುಗಳಲ್ಲಿ ವಿದೇಶಿ ಪ್ರವಾಸಿಗರು ಪ್ರಯಾಣ ಕೈಗೊಳ್ಳುವುದು ರೈಲು ಸೌಲಭ್ಯ ದೊರಕದಿದ್ದಾಗ ಮಾತ್ರ. ರೈಲು ದರಗಳು ರಸ್ತೆ ಸಾರಿಗೆ ದರಗಳಿಗಿಂತ ಕಡಿಮೆ ಇವೆ ಹಾಗೂ ರೈಲು ಪ್ರಯಾಣವು ಬಸ್ಸು ಪ್ರಯಾಣಕ್ಕಿಂತ ಸುಖಕರವಾಗಿರುತ್ತದೆಂದೂ ತಿಳಿಸುತ್ತಾರೆ. ರಸ್ತೆಗಳು ಉತ್ತಮ ಸ್ಥಿತಿಯಲ್ಲಿ ಇಲ್ಲದಿರುವುದರಿಂದ ರಸ್ತೆ ಸಾರಿಗೆ ಪ್ರಯಾಣ ಸುಖಕರವಾಗಿರುವುದಿಲ್ಲ ಎನ್ನುತ್ತಾರೆ. ವಿದೇಶಿ ಪ್ರವಾಸಿಗರಲ್ಲಿ ಶ್ರೀಮಂತರು ಅಥವಾ ಮಧ್ಯಮ ವರ್ಗಕ್ಕಿಂತ ಮೇಲ್ಮಟ್ಟವರಿದ್ದರೆ, ಹಂಪೆಗೆ ಟ್ಯಾಕ್ಸಿ ಮಾಡಿಕೊಂಡು ಬಂದು ನೋಡಿ ಮರಳುತ್ತಾರೆ.)

ಸಂದರ್ಶನ ಮಾಡಿದ 162 ಜನ ಪ್ರವಾಸಿಗರಲ್ಲಿ 159 ಜನ(ಶೇ 98.15) ಹಂಪೆಯಲ್ಲಿಯೆ ತಂಗಿದ್ದಾರೆ. ಕೇವಲ ಮೂರು ಜನ(ಶೇ1.85) ಮಾತ್ರ ಹೊಸಪೇಟೆಯಲ್ಲಿ ತಂಗಿದ್ದಾರೆ (ಕೋಷ್ಟಕ-12). ಹೊಸಪೇಟೆ ಪಟ್ಟಣ ಹತ್ತಿರವಿದ್ದರೂ ಪಟ್ಟಣದಲ್ಲಿನ ತಂಗುವಿಕೆಯು ದುಬಾರಿಯಾಗುವುದರಿಂದ ಇಷ್ಟಪಡುತ್ತಿಲ್ಲವೆಂದೂ ಪ್ರವಾಸಿಗರು ಸಂದರ್ಶನ ಸಮಯದಲ್ಲಿ ಹೇಳಿದ್ದಾರೆ. ಜೊತೆಗೆ ಪ್ರವಾಸಿಗರು ಆಧುನಿಕತೆಯನ್ನು ಬಿಂಬಿಸುವ ಗೋಜಲುಗಳಿಂದ ದೂರ ಇರಲು ಬಯಸುತ್ತಾರೆ. ಹಾಗೂ ಹಳ್ಳಿಯ ಪರಿಸರ ತುಂಬಾ ಇಷ್ಟವೆಂದು ತಿಳಿಸಿದ್ದಾರೆ. ಹಂಪೆಯು ಹಳ್ಳಿಯ ಪರಿಸರದ ಜೊತೆಗೆ ನೈಸರ್ಗಿಕ ಬೆಟ್ಟಗುಡ್ಡಗಳಿಂದ ಕೂಡಿದ ಐತಿಹಾಸಿಕ ಸ್ಮಾರಕಗಳನ್ನು ಹೊಂದಿದೆ. ಅಷ್ಟೆ ಅಲ್ಲ ಆಧುನಿಕ ಸಂಪರ್ಕ ಸಾಧನಗಳಾದ ಇಂಟರ್‌ನೆಟ್ ಮತ್ತು ಇ-ಮೇಲ್ ಸೌಲಭ್ಯಗಳಿರುವುದರಿಂದ ಸಂಪರ್ಕದ ತೊಂದರೆಗಳಿಲ್ಲ. ವಸ್ತುಗಳ ಬೆಲೆಗಳು ಹೆಚ್ಚೇನೂ ಇಲ್ಲ. ಆದ್ದರಿಂದ ಹಂಪೆಯಲ್ಲೆ ಉಳಿಯಲು ಇಷ್ಟಪಡುತ್ತೇವೆನ್ನುತ್ತಾರೆ. ಪ್ರವಾಸೋದ್ಯಮ ಇಲಾಖೆ ಟಿ.ಬಿ.ಡ್ಯಾಂ ಮತ್ತು ಕಮಲಾಪುರದಲ್ಲಿ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ವತಿಯಿಂದ ಹೋಟೆಲ್ ಸ್ಥಾಪಿಸಿದೆ. ಆದರೆ

ಈ ಹೋಟಲ್‌ಗಳಲ್ಲಿ ವಿದೇಶಿಯರು ತಂಗುವುದು ವಿರಳ. ಪ್ರವಾಸಿಗರನ್ನು ಈ ಹೋಟೆಲ್‌ಗಳಲ್ಲಿ ಯಾಕೆ ತಂಗುವುದಿಲ್ಲ ಎಂದು ವಿಚಾರಿಸಿದರೆ ಆ ಸ್ಥಳಗಳಿಂದ ಸ್ಮಾರಕಗಳನ್ನು ನೋಡಲಿಕ್ಕೆ ಅನುಕೂಲ ಆಗುವುದಿಲ್ಲ ಎಂದು ಅಭಿಪ್ರಾಯ ಪಟ್ಟಿದ್ದಾರೆ. ಇನ್ನೂ ಕೆಲವು ಪ್ರವಾಸಿಗರು ಹೋಟೆಲ್ ದರಗಳು ಹೆಚ್ಚಿದ್ದು, ಸ್ವಚ್ಛತೆ ಇಲ್ಲವೆಂದು ತಿಳಿಸಿದ್ದಾರೆ. ಇಲ್ಲಿಗೆ ಬಂದು ಹೋದ ತಮ್ಮ ಸ್ನೇಹಿತರು ಆ ಹೋಟೆಲುಗಳ ಬಗ್ಗೆ ಒಳ್ಳೆಯ ಅಭಿಪ್ರಾಯ ನೀಡಿಲ್ಲ ಆದುದರಿಂದ ಅಲ್ಲಿ ಉಳಿಯುವುದಿಲ್ಲ ಎನ್ನುತ್ತಾರೆ.

ವಿದೇಶಿ ಪ್ರವಾಸಿಗರು ಜನವರಿ ಮತ್ತು ಫೆಬ್ರವರಿ ತಿಂಗಳುಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಾರೆ. ಈ ಪ್ರವಾಸಿಗರಲ್ಲಿ ಖುಷಿ ಸಂಚಾರಕ್ಕಾಗಿ ರಜೆ ಕಳೆಯಲು, ಯೋಗ ಕಲಿಯಲು ಇತ್ಯಾದಿಗಳಿಗಾಗಿ ಪ್ರವಾಸ ಕೈಗೊಂಡಿರುವುದೆಂದು ತಿಳಿಸುತ್ತಾರೆ. ಬಂದ ಪ್ರವಾಸಿಗರು ಕನಿಷ್ಠ ಎರಡು ದಿನದಿಂದ ಗರಿಷ್ಠ ಹತ್ತು ದಿನಗಳವರೆಗೆ ತಂಗುವುದಿದೆ. ಸಂದರ್ಶಿಸಿದ ಪ್ರವಾಸಿಗರಲ್ಲಿ 54 ಜನ(ಶೇ 9.88) 1 ರಿಂದ 2 ದಿನ ತಂಗಿದ್ದರೆ, 82 ಜನ(ಶೇ 87.03) 3 ರಿಂದ 7 ದಿನ ತಂಗಿದ್ದಾರೆ. 16 ಜನ(ಶೇ 6.17) 8 ರಿಂದ 10 ದಿನಗಳು ತಂಗಿರುವರು ಹಾಗೂ 10 ದಿನಗಳ ಮೇಲ್ಪಟ್ಟು ತಂಗಿದವರು 10 ಜನ(ಶೇ 6.17) ಮಾತ್ರ ಇದ್ದಾರೆ(ಕೋಷ್ಟಕ-13). ಖುಷಿ ಸಂಚಾರಕ್ಕಾಗಿ 141 ಜನ,(ಶೇ 87.03) ರಜೆ ಕಳೆಯಲೆಂದು ಬಂದವರು 19 ಜನ, ಇತರ ಉದ್ದೇಶಗಳಿಗೆಂದು ಉದಾಹರಣೆಗೆ ಯೋಗ ಕಲಿಯಲು ಬಂದವರು ಇಬ್ಬರು(ಶೇ 2.23) (ಕೋಷ್ಟಕ-14). ಹಂಪೆಯ ನೈಸರ್ಗಿಕ ಸೌಂದರ್ಯ ಮತ್ತು ಸ್ಮಾರಕಗಳು ನಮಗೆ ಹೆಚ್ಚಿನ ಖುಷಿಯನ್ನು ನೀಡುತ್ತಿರುವುದರಿಂದ ಹಂಪೆಯಲ್ಲಿ ತಂಗುತ್ತೇವೆ ಎಂದು ತಿಳಿಸುತ್ತಾರೆ. ಇದಕ್ಕೆ ಪೂರಕವೆನ್ನುವಂತೆ ಪ್ರವಾಸಿ ತಾಣವಾದ ಇಂಡೋನೇಶಿಯದ ಮಂತ್ರಿಗಳ ಒಬ್ಬರ ಪ್ರಕಾರ ಪ್ರವಾಸಿಗರು ಹೊಟೆಲ್‌ಗಳಿಗಾಗಿ ಬರುವುದಿಲ್ಲ. ನೈಸರ್ಗಿಕತೆ, ಸಂಸ್ಕೃತಿ ಆಕರ್ಷಣೆ ಮತ್ತು ಮನೋರಂಜನೆ ನೀಡುವ ಟೂರಿಸ್ಟ್ ವಸ್ತುಗಳಿಗಾಗಿ ಬರುತ್ತಾರೆ.[19]

ವಿದೇಶಿ ಪ್ರವಾಸಿಗರ ನಿರೀಕ್ಷೆಗಳು

ಬಹುತೇಕ ವಿದೇಶಿ ಪ್ರವಾಸಿಗರು ಏಕಾಂತತೆಯನ್ನು ಬಯಸುತ್ತಾರೆ. ಆಧುನಿಕ ಸೌಲಭ್ಯಗಳು ಅವರ ಬಹು ಮುಖ್ಯ ಆದ್ಯತೆಗಳಲ್ಲ. ಆಧುನಿಕತೆಯಿಂದ ಹೊರಗಿರುವ ಬದುಕನ್ನು ಇಷ್ಟ ಪಡುತ್ತಾರೆ. ಇದರಿಂದ ನೆಮ್ಮದಿ ಸಿಗುತ್ತದೆ ಎಂದು ತಿಳಿಸುತ್ತಾರೆ. ಹಂಪೆಗೆ ಬರುವ ವಿದೇಶಿ ಪ್ರವಾಸಗರಲ್ಲಿ ಮಧ್ಯಮ ವರ್ಗದ ಕಡಿಮೆ ಅದಾಯವುಳ್ಳವರ ಸಂಖ್ಯೆ ಹೆಚ್ಚು. ಇವರು ತಮ್ಮ ದುಡಿಮೆಯ ಕೆಲಭಾಗವನ್ನು ಉಳಿತಾಯ ಮಾಡಿ ಅದರಲ್ಲಿ ಪ್ರವಾಸ ಕೈಗೊಂಡವರು. ಇವರು ನಿರಂತರವಾಗಿ ಉದ್ಯೋಗದಲ್ಲಿರುವವರು ಅಥವಾ ದುಡಿಯುವವರು. ಅವಿಶ್ರಾಂತ ಬದುಕಿನಿಂದ ತಾತ್ಕಾಲಿಕ ವಿಶ್ರಾಂತಿಯನ್ನು ಬಯಸುವವರು. ಬೆಟ್ಟ ಗುಡ್ಡಗಳಿಂದ ಕೂಡಿದ ನಿರ್ಜನ ಪ್ರದೇಶ, ಕಡಿಮೆ ಜೀವನ

ವೆಚ್ಚವುಳ್ಳ ಸ್ಥಳಗಳಲ್ಲಿ ತಮ್ಮ ಪ್ರವಾಸಿ ದಿನಗಳನ್ನು ಕಳೆಯಲು ಇಷ್ಟಪಡುತ್ತಾರೆ. ಹಂಪೆಗೆ ಬಂದ ಪ್ರವಾಸಿಗರು ಹಂಪೆಯಲ್ಲಿ ಉಳಿದುಕೊಳ್ಳಲು ಹಲವು ಕಾರಣಗಳಿವೆ. ನೈಸರ್ಗಿಕ ಕೊಡುಗೆಯಾದ ಬೆಟ್ಟಗುಡ್ಡ, ನದಿ, ನಿರ್ಜನತೆ ಹಾಗೂ ಐತಿಹಾಸಿಕ ಸ್ಮಾರಕಗಳು ಮತ್ತು ಕಡಿಮೆ ಜೀವನ ವೆಚ್ಚವಿರುವ ಹಂಪೆಯ ಅತಿಥಿ ಗೃಹಗಳು ಅವುಗಳಲ್ಲಿ ಮುಖ್ಯ ಕಾರಣಗಳು. ಪ್ರವಾಸಿಗರ ಈ ಹಿನ್ನೆಲೆ ಅವರ ನಿರೀಕ್ಷೆಗಳನ್ನು ಪ್ರಭಾವಿಸಿವೆ. ಉದಾಹರಣೆಗೆ ಹಂಪೆಯನ್ನು ಹೆಚ್ಚಿನ ಮಟ್ಟದಲ್ಲಿ ಅಭಿವೃದ್ಧಿ ಪಡಿಸಿದರೆ ನೈಸರ್ಗಿಕತೆ ನಾಶವಾಗುತ್ತದೆ ಎಂದು ಹೆಚ್ಚು ಕಡಿಮೆ ಎಲ್ಲ ಪ್ರವಾಸಿಗರು ಅಭಿಪ್ರಾಯ ಪಡುತ್ತಾರೆ. ವಿರೂಪಾಕ್ಷ ದೇವಸ್ಥಾನದ ಹತ್ತಿರ ನದಿಗೆ ಅಡ್ಡಲಾಗಿ ಕಟ್ಟಬೇಕೆಂದಿರುವ ತೂಗುಸೇತುವೆಯನ್ನು ಪೂರ್ಣಗೊಳಿಸುವುದು ಬೇಡವೆನ್ನುವ ಪ್ರವಾಸಿಗರ ಅಭಿಪ್ರಾಯವನ್ನು ಈ ಹಿನ್ನೆಲೆಯಲ್ಲಿ ನೋಡಬಹುದು. ಹಂಪೆಯ ಗ್ರಾಮದ ಸ್ಥಳಾಂತರ ಬಗ್ಗೆಯೂ ಪ್ರವಾಸಿಗರು ವಿರೋಧ ಸೂಚಿಸುತ್ತಾರೆ. ಹಂಪೆ ಗ್ರಾಮವನ್ನು ಸ್ಥಳಾಂತರಿಸುವ ಬದಲು ಯಾವುದೆ ಆಧುನಿಕ ಕಟ್ಟಡಗಳು ಮತ್ತು ಬಹು ಅಂತಸ್ತಿನ ಮನೆಗಳನ್ನು ಕಟ್ಟದಂತೆ ಎಚ್ಚರವಹಿಸಿ ಅಕ್ರಮಗಳನ್ನು ತಡೆದರೆ ಸಾಕಾಗಬಹುದು ಎಂಬ ಸಲಹೆಯನ್ನು ನೀಡುತ್ತಾರೆ. ಇತ್ತೀಚಿನ ದಿನಗಳಲ್ಲಿ ಹಂಪೆಯಲ್ಲಿ ಪ್ರವಾಸಿಗರ ಸಂಖ್ಯೆ ಹೆಚ್ಚಿದೆ. ಹೆಚ್ಚು ಹೆಚ್ಚು ಜನ ಹಂಪೆಯಲ್ಲಿ ಇರುತ್ತಾರೆ. ವ್ಯಾಪಾರ ವಹಿವಾಟು ಕೂಡ ಹೆಚ್ಚುತ್ತಿದೆ. ಇದು ಪ್ರವಾಸಿಗರ ದೃಷ್ಟಿಯಿಂದ ಉತ್ತಮ ಬೆಳವಣಿಗೆಗಳಲ್ಲ. ಏಕಾಂತತೆ ಮತ್ತು ನಿರ್ಜನ ಪ್ರದೇಶವನ್ನು ಬಯಸುವ ವಿದೇಶಿ ಪ್ರವಾಸಿಗರು ಈ ಕಾರಣಗಳಿಂದಾಗಿ ನದಿಯ ಆಚೆ ದಡದಲ್ಲಿರುವ ವಿರೂಪಾಪುರ ಗಡ್ಡೆಗೆ (ಗ್ರಾಮಕ್ಕೆ) ಹೋಗತ್ತಾರೆ. ಈ ವಿರೂಪಾಪುರ ಗಡ್ಡೆಯನ್ನು ತುಂಗಭದ್ರ ನದಿಯು ಸುತ್ತುವರೆದಿದೆ. ಮುಖ್ಯರಸ್ತೆಯಿಂದ ದೂರದಲ್ಲಿದ್ದು, ಬೆಟ್ಟಗುಡ್ಡಗಳಿಂದ ಆವೃತವಾಗಿದೆ. ಜತೆಗೆ ಈ ಗ್ರಾಮ ಕಡಿಮೆ ಜನಸಂಖ್ಯೆಯನ್ನು ಹೊಂದಿದೆ. ಪ್ರವಾಸಿಗರು ವಿರುಪಾಪುರ ಗಡ್ಡೆಗೆ ಹೋಗುತ್ತಿರುವುದರಿಂದ ಅಲ್ಲಿ ಕೂಡ ಅತಿಥಿ ಗೃಹಗಳು ಹುಟ್ಟಿಕೊಳ್ಳುತ್ತಿವೆ. ಎರಡು ಮೂರು ವರ್ಷಗಳ ಹಿಂದೆ ಅಲ್ಲಿ ಬೆರಳಣಿಕೆಯಷ್ಟು ಅತಿಥಿಗೃಹಗಳು ಇದ್ದವು. ಇಂದು ಹಲವಾರು ಅತಿಥಿ ಗೃಹಗಳು ಮತ್ತು ರೆಸ್ಟೋರೆಂಟುಗಳು ತಲೆ ಎತ್ತಿವೆ. ಜತೆಗೆ ಹೊಸ ಅತಿಥಿಗೃಹಗಳು ಮತ್ತು ರೆಸ್ಟೋರೆಂಟ್ ಕಟ್ಟಡಗಳು ನಿರ್ಮಾಣವಾಗುತ್ತಲಿವೆ. ಈಗ ಇವುಗಳ ಸಂಖ್ಯೆ ಕ್ಷೇತ್ರಕಾರ್ಯದ ಪ್ರಕಾರ 25. ಹಂಪೆಯಲ್ಲಿನ ಅತಿಥಿಗೃಹ ಮತ್ತು ರೆಸ್ಟೋರೆಂಟುಗಳ ದರಗಳಿಗಿಂತ ಈ ಪ್ರದೇಶದಲ್ಲಿ ಕಡಿಮೆ ದರಗಳು ಇವೆಯೆಂದು ಪ್ರವಾಸಿಗರು ತಿಳಿಸುತ್ತಾರೆ. ಮುಖ್ಯವಾಗಿ ಈ ಪ್ರದೇಶ ವಿದೇಶಿ ಪ್ರವಾಸಿಗರ ಮುಕ್ತತೆ ಮತ್ತು ಏಕಾಂತತೆಗೆ ಯಾವುದೆ ಭಂಗ ತರದಿರುವ ತಾಣವಾಗಿದೆ. ಹಾಗಾಗಿ ಪ್ರವಾಸಿಗರು ಅಲ್ಲಿಗೆ ಹೋಗಲು ಪ್ರಾರಂಭಿಸಿದ್ದಾರೆ. ಆದರೆ ಸಂಪರ್ಕ ಮಾಧ್ಯಮ ಮತ್ತು ಸಾರಿಗೆ ವ್ಯವಸ್ಥೆ ಕೊರತೆ ಇರುವುದರಿಂದ ಹೆಚ್ಚಿನ ಸಂಖ್ಯೆಯ ಪ್ರವಾಸಿಗರು ಹಂಪೆಯಲ್ಲಿ ಉಳಿದುಕೊಳ್ಳುತ್ತಿದ್ದಾರೆ.

ಹಂಪೆಯ ಅತಿಥಿಗೃಹಗಳಲ್ಲಿನ ಕೊಠಡಿಗಳು ವಿರೂಪಾಪುರ ಗಡ್ಡೆಯಲ್ಲಿರುವಂತೆ, ಗಾಳಿ ಬೆಳಕು ಮತ್ತು ವಿಶಾಲತೆ ಹೊಂದಿಲ್ಲ ಎಂದು ಪ್ರವಾಸಿಗರು ತಿಳಿಸುತ್ತಾರೆ. ಗಾಳಿ ಬೆಳಕಿಗಾಗಿ ವಿಶಾಲ ಕಿಟಕಿಗಳಿರುವ ಕೊಠಡಿಗಳನ್ನು ನಿರ್ಮಿಸಬೇಕೆಂಬ ಆಶಯ ವ್ಯಕ್ತಪಡಿಸುತ್ತಾರೆ. ಹಂಪೆಯಲ್ಲಿ ಖಾಸಗಿ ಆತಿಥಿಗೃಹಗಳು ಇರುವುದರಿಂದ ಸೀಜನ್‌ನಲ್ಲಿ ಕೊಠಡಿಗಳ ದರಗಳನ್ನು ತುಂಬಾ ಹೆಚ್ಚಿಸಲಾಗುತ್ತದೆ. ಕೊಠಡಿ ದರಗಳ ಬದಲಾವಣೆಯ ಮಾಹಿತಿಯನ್ನು -ಲೊನ್ಲಿ ಪ್ಲಾನೆಟ್ ಮಾರ್ಗದರ್ಶಕ ಪುಸ್ತಕದಲ್ಲಿ ಕೊಟ್ಟಿರುತ್ತಾರೆ.[20] ಆದರೆ ಈ ಪುಸ್ತಕದ ತಯಾರಕರು ಮೂರು ವರ್ಷಗಳಿಗೊಮ್ಮೆ ಕ್ಷೇತ್ರಕಾರ್ಯ ಕೈಗೊಂಡು ಅಂಕಿ-ಅಂಶಗಳನ್ನು ನೀಡುತ್ತಾರೆ. ಆ ಮೂರು ವರ್ಷಗಳ ಅವಧಿಯಲ್ಲಿ ಅದೇ ದರಗಳು ಮುಂದುವರೆಯಲಾರವು. ದರಗಳನ್ನು ಬದಲಾವಣೆ ಮಾಡುವುದು ಮಾಲಿಕರಿಗೆ ಅನಿವಾರ್ಯವಾಗಬಹುದು. ಆದರೆ ಸೀಸನ್‌ನಲ್ಲಿ ಮಾತ್ರ ಹೆಚ್ಚು ಮಾಡುವುದು ಸರಿಯಾದ ಕ್ರಮವಲ್ಲ. ಅತಿಥಿಗೃಹಗಳ ಮಾಲಿಕರು ಒಂದು ಸರಾಸರಿ ದರಗಳನ್ನು ನಿರ್ಧರಿಸಿದರೆ ಒಳ್ಳೆಯದು. ಇಲ್ಲವಾದಲ್ಲಿ ಪ್ರವಾಸಿಗರು ಅತಿಥಿ ಗೃಹಗಳ ಮಾಲಿಕರು ಅಥವಾ ವ್ಯವಸ್ಥಾಪಕರು ಕೇಳಿದ ಹಣವನ್ನು ನೀಡಬೇಕಾಗುತ್ತದೆ ಎಂದು ಪ್ರವಾಸಿಗರು ಅಭಿಪ್ರಾಯ ಪಡುತ್ತಾರೆ. ಈ ಗೊಂದಲಗಳನ್ನು ನಿವಾರಿಸಲು ಪ್ರವಾಸೋದ್ಯಮ ಇಲಾಖೆ ಮತ್ತು ಸರಕಾರ ಈ ಅತಿಥಿ ಗೃಹಗಳ ದರವನ್ನು ನಿರ್ಧರಿಸಿ ಸಾರ್ವಜನಿಕ ಸ್ಥಳಗಳಲ್ಲಿ ಪ್ರಕಟಿಸಿ ಪ್ರವಾಸಿಗರಿಗೆ ಅನುಕೂಲ ಮಾಡಿಕೊಡಬೇಕೆಂದು ಅಪೇಕ್ಷೆಪಡುತ್ತಾರೆ. ಈ ನಿಟ್ಟಿನಲ್ಲಿ ಕ್ರಮ ಕೈಗೊಂಡರೆ ದಿನಕ್ಕೊಂದು ಬೆಲೆ ನಿಗದಿ ಪಡಿಸಿ ವಿದೇಶಿ ಪ್ರವಾಸಿಗರನ್ನು ಶೋಷಣೆ ಮಾಡುವುದು ಸ್ವಲ್ಪ ಮಟ್ಟಿಗೆ ಕಡಿಮೆಯಾಗಬಹುದು, ಹಂಪೆಗೆ ಬರುವ ಪ್ರವಾಸಿಗರ ಸಂಖ್ಯೆಯಲ್ಲಿ ಹೆಚ್ಚಳವೂ ಆಗಬಹುದೆಂದು ವಿದೇಶಿ ಪ್ರವಾಸಿಗರು ಹೇಳುತ್ತಾರೆ. ಐತಿಹಾಸಿಕ ಸ್ಮಾರಕಗಳಾದ ವಿಠಲ ದೇವಸ್ಥಾನ ಮತ್ತು ಕಮಲಮಹಲ್ ಆವರಣದ ಪ್ರವೇಶದರ ವಿದೇಶಿಯರಿಗೆ ಐದು ಡಾಲರ್ ಮಾಡಿ ದೇಶೀಯರಿಗೆ 10ರೂ. ಮಾಡಿರುವ ನಿರ್ಧಾರ ಪಕ್ಷಪಾತದ ನಿರ್ಧಾರ ಎಂದು ಎಲ್ಲ ವಿದೇಶಿ ಪ್ರವಾಸಿಗರು ಅಭಿಪ್ರಾಯ ಪಡುತ್ತಾರೆ. ಈ ದರಗಳನ್ನು ಕಡಿಮೆ ಮಾಡುವುದರಿಂದ ಇನ್ನೂ ಹೆಚ್ಚಿನ ಪ್ರವಾಸಿಗರು ಸ್ಮಾರಕಗಳನ್ನು ನೋಡಬಹುದು ಎಂಬುದು ಕೆಲವು ಪ್ರವಾಸಿಗರ ಅಭಿಪ್ರಾಯವಾಗಿದೆ. ಕೆಲವು ಪ್ರವಾಸಿಗರ ಪ್ರಕಾರ ಸ್ಮಾರಕಗಳನ್ನು ನೋಡಲು ಕೊಡುವ ಪ್ರವೇಶ ದರಗಳು ತುಂಬಾ ದುಬಾರಿಯಾಗಿವೆ. ಸ್ಮಾರಕಗಳನ್ನು ನೋಡುವ ಬದಲು ಹಂಪೆಯಲ್ಲಿ ಒಂದು ದಿನ ಉಳಿಯಬಹುದು. ಅವು ಅಷ್ಟು ದುಬಾರಿಯಾಗಿವೆ ಎನ್ನುತ್ತಾರೆ. ಅಂದರೆ ಸ್ಮಾರಕಗಳ ಪ್ರವೇಶ ದರ ಹಂಪೆಯಲ್ಲಿ ಒಂದು ದಿನ ತಂಗಲು ಆಗುವ ಖರ್ಚಿಗೆ ಸಮಾನವಾಗಿದೆ.

ಹಂಪೆಗೆ ಬರುವ ರಸ್ತೆಗಳ ಬಗ್ಗೆ ಪ್ರವಾಸಿಗರು ತುಂಬಾ ಉತ್ತಮ ವಿಶ್ಲೇಷಣೆ ಮಾಡಿದ್ದಾರೆ. ರಸ್ತೆ ಚೆನ್ನಾಗಿಲ್ಲ, ಉಬ್ಬುತಗ್ಗುಗಳಿಂದ ಕೂಡಿದೆ. ಬಸ್ಸುಗಳಲ್ಲಿ ಪ್ರಯಾಣಿಸಿದರೆ ಬಸ್ಸುಗಳ ಹೊಯ್ದಾಟದಿಂದ ಒಂದು ಆಸನದಲ್ಲಿ ಕುಳಿತಿರುವವರು ಇನ್ನೊಂದು ಬದಿಯ ಆಸನಕ್ಕೆ ಹೋಗುವ ಅನುಭವವಾಗುತ್ತದೆ.

[illegible]

ರಸ್ತೆಗಳು ದುರಸ್ಥಿಯಾಗಬೇಕು ಹಾಗೂ ಜನಸಂಖ್ಯೆಗೆ ಅನುಗುಣವಾಗಿ ಬಸ್ಸುಗಳ ಮತ್ತು ರೈಲು ಗಾಡಿಗಳ ಸಂಖ್ಯೆಯನ್ನು ಹೆಚ್ಚಿಸಬೇಕು. ಇಲ್ಲವಾದರೆ ಪ್ರಯಾಣಿಕರು ಅವಸರದಿಂದ ಮತ್ತು ಸೀಟು ಪಡೆಯುವ ಆತುರದಿಂದ ಒಳನುಗ್ಗುತ್ತಾರೆ. ಇದರಿಂದ ಪ್ರಯಾಣಿಕರಿಗೆ ಸಹಿಸಲಾರದ ತೊಂದರೆಗಳಾಗುತ್ತವೆ. ಹೊಸಪೇಟೆಯಿಂದ ಹಂಪೆಗೆ ಬರುವ ಬಸ್ಸುಗಳಲ್ಲಿ ಒಳಹೋಗಲು ಪ್ರಯಾಣಿಕರು ಮಾಡುವ ನೂಕು ನುಗ್ಗಲನ್ನು ಕಂಡು ಬಹುತೇಕ ವಿದೇಶಿ ಪ್ರವಾಸಿಗರು ಕಂಗಲಾಗಿದ್ದಾರೆ. ಜನರು ಯಾಕಿಷ್ಟು ಅವಸರ ಪಡುತ್ತಾರೆಂದು ಆಶ್ಚರ್ಯಪಟ್ಟಿದ್ದಾರೆ. ಹಂಪೆ ಒಂದು ಪ್ರವಾಸಿ ತಾಣವಾಗಿ ದೇಶ ವಿದೇಶಗಳಲ್ಲಿ ಪ್ರಸಿದ್ದಿ ಪಡೆದಿದೆ. ಸಾವಿರಾರು ಪ್ರವಾಸಿಗರು ಪ್ರತಿ ವರ್ಷ ಹಂಪೆ ವೀಕ್ಷಣೆಗೆ ಬರುತ್ತಾರೆ. ಆದರೂ ಹಂಪೆ ಮತ್ತು ಹೊಸಪೇಟೆ ನಡುವೆ ಒಡಾಡುವ ಬಸ್ಸುಗಳ ಸಂಖ್ಯೆಯಲ್ಲಿ ವಿಶೇಷ ಬದಲಾವಣೆಯಾಗಿಲ್ಲ ಎಂದು ಕೆಲವು ಪ್ರವಾಸಿಗರ ಅನಿಸಿಕೆ. ಸರಕಾರ ಬಸ್ಸುಗಳನ್ನು ಹೆಚ್ಚು ಮಾಡಬೇಕೆಂದು ಪ್ರವಾಸಿಗರು ಬಯಸುತ್ತಾರೆ. ಹಂಪೆಯ ಸ್ಮಾರಕಗಳು ತುಂಬಾ ವಿಸ್ತಾರವಾದ ಪ್ರದೇಶಗಳಲ್ಲಿ ಹರಡಿಕೊಂಡಿವೆ. ಆ ಸ್ಮಾರಕಗಳಿಗೆ ಹೋಗಲು ರಸ್ತೆ ಮತ್ತು ಕೆಲವು ಕಡೆ ಕಿರು ದಾರಿಗಳಿವೆ. ಆದರೆ ಎಲ್ಲೂ ಕೂಡ ಸರಿಯಾದ ನಾಮಫಲಕಗಳಿಲ್ಲ. ರಸ್ತೆಯ ಬದಿಯಲ್ಲಿ ರಸ್ತೆ ಎಲ್ಲಿಗೆ ಕೊಂಡಯ್ಯುತ್ತದೆಯೆಂದು ತೋರಿಸುವ ಪಾದಾಚಾರಿ ಫಲಕಗಳನ್ನು ಹಾಕಿದರೆ ಪ್ರವಾಸಿಗರು ದಾರಿ ಹುಡುಕುವ ತಾಪತ್ರಯ ಕಡಿಮೆ ಆಗುತ್ತದೆ ಎಂದು ಪ್ರವಾಸಿಗರು ಹೇಳುತ್ತಾರೆ.

ನಮ್ಮಲ್ಲಿನ ಪ್ರವಾಸೋದ್ಯಮ ಇಲಾಖೆ ಬಗ್ಗೆ ಹಲವಾರು ನಿರೀಕ್ಷೆಗಳನ್ನು ಪ್ರವಾಸಿಗರು ಹೊಂದಿದ್ದಾರೆ. ಹಂಪಿಯಲ್ಲಿ ದೊರಕುವ ಸೌಲಭ್ಯಗಳ ಬಗ್ಗೆ, ನೋಡಬಹುದಾದ ಸ್ಥಳಗಳ ಬಗ್ಗೆ, ಸ್ಮಾರಕಗಳ ಬಗ್ಗೆ, ಸ್ಥಳೀಯ ಜನರ ಬಗ್ಗೆ- ಹೀಗೆ ಹತ್ತು ಹಲವಾರು ವಿಚಾರಗಳ ಬಗ್ಗೆ ಪ್ರವಾಸಿಗರು ಪ್ರವಾಸೋದ್ಯಮ ಇಲಾಖೆಯವರಿಂದ ಮಾಹಿತಿ ಬಯಸುತ್ತಾರೆ. ಹಂಪೆಯಲ್ಲಿನ ಮಾಹಿತಿ ಕೇಂದ್ರದಲ್ಲಿ ಮಾಹಿತಿ ಒದಗಿಸಲು ಆಧುನಿಕ ಉಪಕರಣ ಹಾಗೂ ಹೆಚ್ಚಿನ ಸಿಬ್ಬಂದಿಯನ್ನು ನಿಯುಕ್ತಗೊಳಿಸಬೇಕು ಎನ್ನುತ್ತಾರೆ. ಹಂಪೆ ಸುತ್ತಮುತ್ತಲಿನ ಪರಿಸರದ ಬಗ್ಗೆ ಕೂಡ ಪ್ರವಾಸಿಗರು ಆಸಕ್ತಿ ತೋರಿಸುತ್ತಾರೆ. ಪರಿಸರ ಮಾಲಿನ್ಯವಾಗದಂತೆ ತಡೆಯಲು ಬರುವ ಪ್ರವಾಸಿಗರಿಗೆ ಪ್ರವಾಸೋದ್ಯಮ ಇಲಾಖೆ ಸರಿಯಾದ ಸೂಚನೆ ಕೊಡಬೇಕು. ಈ ರೀತಿ ಮಾಡುವುದರಿಂದ ಪರಿಸರಕ್ಕೆ ಹಾನಿ ತರುವ ಪ್ಲಾಸ್ಟಿಕ್ ಪೊಟ್ಟಣಗಳು, ಕಾಗದದ ಚೀಲಗಳನ್ನು ರಸ್ತೆಯಲ್ಲಿ ಎಸೆಯದಂತೆ ಮಾಡಬಹುದು. ರಸ್ತೆ ಬದಿಯಲ್ಲಿ ಕಸದ ಬುಟ್ಟಿ ಇಡಬೇಕು ಅಥವಾ ಬೇರೆ ಪ್ರವಾಸಿ ತಾಣಗಳಲ್ಲಿ ಇರುವಂತೆ ಪ್ಲಾಸ್ಟಿಕ್ ಉಪಯೋಗವನ್ನು ರದ್ದುಗೊಳಿಸಬೇಕು. ಎಲ್ಲಾ ವಿಧಗಳಿಂದಲೂ ನೈರ್ಮಲ್ಯತೆಯನ್ನು ಕಾಪಾಡುವಂತೆ ಪ್ರವಾಸಿಗರಿಗೆ ಸೂಚನೆ ನೀಡಬೇಕು. ಸ್ಥಳೀಯ ಸ್ವಯಂ ಸೇವಾ ಸಂಸ್ಥೆಗಳು ಪರಿಸರ ಮಾಲಿನ್ಯ ತಡೆಯಲು ಮುಂದೆ ಬರಬೇಕು. ಹಂಪೆಯಲ್ಲಿರುವ ಸಾರ್ವಜನಿಕ ಶೌಚಾಲಯಗಳನ್ನು ಸ್ವಚ್ಛವಾಗಿಡಬೇಕು. ಜನರು ದೇವಸ್ಥಾನ, ನದಿ ಹಾಗೂ ಗ್ರಾಮದ ಸುತ್ತಲೂ ಬರ್ಹಿದೆಸೆಗೆ ಹೋಗಿ ತುಂಬಾ ಹೊಲಸು

ಮಾಡುತ್ತಿದ್ದಾರೆ ಎನ್ನುತ್ತಾರೆ. ಊರವರು ಬರ್ಹಿದೆಸೆಗೆ ಗ್ರಾಮದ ಸಮೀಪ ಹೊರವಲಯದಲ್ಲಿ ಹೋಗದೆ ತಮ್ಮ ಮನೆಯಲ್ಲಿಯೆ ವ್ಯವಸ್ಥೆ ಮಾಡಿಕೊಂಡರೆ ಹಂಪೆಯ ಪರಿಸರ ಸ್ವಚ್ಛವಾಗಿರುತ್ತದೆ. ಸಾರ್ವಜನಿಕ ಶೌಚಾಲಯಗಳನ್ನು ನಿರ್ಮಿಸಿ ಕಟ್ಟುನಿಟ್ಟಾದ ನಿಯಮದಿಂದ ಸಾರ್ವಜನಿಕ ಸ್ಥಳಗಳಲ್ಲಿ ಗಲೀಜು ಮಾಡದಂತೆ ನೋಡಿಕೊಳ್ಳಬೇಕು.

ಹಂಪೆಗೆ ಬಂದು ಹೋಗುವ ವಿದೇಶಿ ಪ್ರವಾಸಿಗರೆಲ್ಲರೂ ವಿರೂಪಾಕ್ಷ ದೇವಸ್ಥಾನ ಆವರಣದಲ್ಲಿರುವ ಹೊರವಲಯ ಪೋಲಿಸ್ ಸ್ಟೇಷನ್‌ನಲ್ಲಿ ಕಡ್ಡಾಯವಾಗಿ ತಮ್ಮ ವಿವರಗಳನ್ನು ದಾಖಲಿಸಬೇಕೆಂದು ನಿಯಮವಿದೆ. ಈ ಕ್ರಮ ಕುರಿತು ಪ್ರವಾಸಿಗರ ನಿರೀಕ್ಷೆ ಬೇರೆಯೆ ಇದೆ. ಅವರ ಪ್ರಕಾರ ಅತಿಥಿಗೃಹಗಳ ಮಾಲಿಕರು ಕೊಠಡಿ ಕೊಡುವ ಮುನ್ನ ಹೆಸರು ವಿಳಾಸ, ಪಾಸ್‌ಪೋರ್ಟ್, ವೀಸಾ ಇತ್ಯಾದಿಗಳ ಮಾಹಿತಿ ಪಡೆದು ಸಹಿ ಮಾಡಿಸಿಕೊಂಡು ಕೊಠಡಿಗಳನ್ನು ನೀಡುತ್ತಾರೆ. ಇಷ್ಟೆಲ್ಲಾ ವಿಧಿ ವಿಧಾನಗಳ ನಂತರ ಪೋಲಿಸ್ ಸ್ಟೇಷನ್‌ಗೆ ಹೋಗಿ ಅಲ್ಲಿರುವ ಪುಸ್ತಕದಲ್ಲಿ ಕೇಳಿರುವ ಮಾಹಿತಿಯನ್ನು ಬರೆದು ಸಹಿ ಮಾಡಿ ಬರಬೇಕು. ಈ ಸಂದರ್ಭದಲ್ಲಿ ಪೋಲಿಸರು ಕೇಳುವ ಹಲವಾರು ಪ್ರಶ್ನೆಗಳಿಗೆ ಉತ್ತರಿಸಬೇಕು. ಇದರಿಂದ ಸಮಯದ ಅಭಾವ ಮತ್ತು ಕಿರುಕುಳವಾಗುತ್ತದೆ. ಇದನ್ನು ನಿಲ್ಲಿಸಬೇಕು ಎಂದು ಪ್ರವಾಸಿಗರು ಬಯಸುತ್ತಾರೆ.

ಇಲ್ಲಿನ ಕುಟುಂಬ ವ್ಯವಸ್ಥೆ ಬಗ್ಗೆ ಪ್ರವಾಸಿಗರಿಗೆ ಒಂದು ರೀತಿಯ ಮೇಲು ನೋಟದ ಮೋಹ ಇದೆ. ಕುಟುಂಬದೊಳಗಿನ ಸದಸ್ಯ ಸಂಬಂಧಿಗಳಾದ ತಂದೆ ತಾಯಿ, ಮಕ್ಕಳು, ಅಣ್ಣ-ತಮ್ಮ, ಅಕ್ಕ-ತಂಗಿ, ಗಂಡ-ಹೆಂಡತಿ ಮುಂತಾದವರು ಒಟ್ಟಿಗೆ ಇರುವುದನ್ನು ಕಂಡು ಖುಷಿಪಡುತ್ತಾರೆ. ಈ ತೆರನಾದ ಸಂಬಂಧಗಳು ತಮ್ಮಲ್ಲಿ ಇಲ್ಲ. ಇದು ತಮಗೆ ತುಂಬಾ ಖುಷಿ ಕೊಡುತ್ತದೆ. ತಾವು ಈ ರೀತಿ ಇರಲು ಇಚ್ಛೆ ಪಡುತ್ತೇವೆ ಎನ್ನುತ್ತಾರೆ. ಇಂತಹ ಸಂಬಂಧದೊಳಗೆ ಬದುಕಲು ಬಯಸುವ ಕೆಲವು ವಿದೇಶಿ ಪ್ರವಾಸಿಗರು ಇಲ್ಲಿಯೆ ಉಳಿದು ಮದುವೆಯಾಗಿ ಮಕ್ಕಳನ್ನು ಪಡೆದು ಸಂಸಾರ ಮಾಡಿಕೊಂಡಿದ್ದಾರೆ. ಮಾನವನ ಜೀವನದಲ್ಲಿ ಮದುವೆ ಎನ್ನುವುದು ಪ್ರಮುಖ ಘಟನೆ. ವಿದೇಶಿಯರಲ್ಲಿ ಅದು ಸುಲಭದಲ್ಲಿ ಮುರಿದು ಬೀಳುತ್ತದೆ ಎಂದು ಪ್ರವಾಸಿಗರು ತಿಳಿಸುತ್ತಾರೆ. ಆದ್ದರಿಂದ ಭಾರತದಲ್ಲಿನ ಮದುವೆ ಸಂಬಂಧಗಳನ್ನು ಗೌರವಿಸುತ್ತಾರೆ. ಜತೆಗೆ ಮದುವೆ ಸಮಾರಂಭಗಳು ಇದ್ದರೆ ತಿಳಿಸಿ ನಾವು ತಪ್ಪದೆ ನೋಡಬೇಕು ಎನ್ನುತ್ತಾರೆ. ಇಲ್ಲಿನ ಸಂಪ್ರದಾಯ, ಸಾಮಾಜಿಕತೆ, ಧಾರ್ಮಿಕತೆಯಿಂದ ಪ್ರಭಾವಿತರಾಗಿ ಇಲ್ಲಿನ ವ್ಯವಸ್ಥೆಗಳನ್ನು ಅಳವಡಿಸಿಕೊಳ್ಳಲು ಕಷ್ಟವಾದರೂ ಪ್ರವಾಸದಿಂದ ಮರಳಿದ ನಂತರ ತಕ್ಕಮಟ್ಟಿಗೆ ಅಳವಡಿಸಿಕೊಳ್ಳಲು ಪ್ರಯತ್ನಿಸತ್ತಾರಂತೆ. ಹಂಪೆಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳಾದ ಜಾತ್ರೆ, ಉತ್ಸವ, ಹಬ್ಬಗಳು ನಡೆಯುತ್ತಿರುವುದು ಸಾಮಾನ್ಯ. ಅವುಗಳನ್ನು ಪ್ರವಾಸಿಗರು ವೀಕ್ಷಿಸಲು ಮರೆಯುವುದಿಲ್ಲ. ಇವುಗಳಿಂದ ಆಧ್ಯಾತ್ಮಿಕ ಸ್ಫೂರ್ತಿ ದೊರೆಯುತ್ತದೆ ಎನ್ನುತ್ತಾರೆ. ಇಲ್ಲಿನ

ಉಡುಪುಗಳನ್ನು ಮೆಚ್ಚುತ್ತಾರೆ, ಹಾಕಿಕೊಳ್ಳಲೂ ಇಷ್ಟಪಡುತ್ತಾರೆ, ಆದರೆ ಅವರಿಗೆ ಸರಿಯಾಗಿ ಧರಿಸಲು ಬರುವುದಿಲ್ಲ. ಆದರೂ ಕಷ್ಟಪಟ್ಟು ಹಾಕಿಕೊಳ್ಳುವುದರಲ್ಲಿ ಏನೊ ಸುಖ ಕಾಣುತ್ತಾರೆ. ವಿದೇಶಿ ಪ್ರವಾಸಿಗರು ಇಲ್ಲಿನ ಅನುಭವಗಳನ್ನು ಕೊಂಡೊಯ್ದು ತಮ್ಮ ರಾಷ್ಟ್ರಗಳಲ್ಲಿ ಸ್ವಲ್ಪ ಮಟ್ಟಿಗೆ ಆಚರಣೆಗೆ ತಂದುಕೊಳ್ಳಲು ಪ್ರಯತ್ನಿಸುತ್ತಾರೆ ಎಂದು ಕೆಲವು ಪ್ರವಾಸಿಗರು ಹೇಳುತ್ತಾರೆ.

ಪ್ರವಾಸಿ ತಾಣ ಕುರಿತು ಹಲವಾರು ನಕರಾತ್ಮಕ ಚಿತ್ರಣಗಳಿವೆ. ಅವುಗಳಲ್ಲಿ ಒಂದು ಪ್ರವಾಸಿ ತಾಣಗಳನ್ನು ವೇಶ್ಯಾವಾಟಿಕೆಯ ಸ್ಥಳಗಳೆಂದು ತಿಳಿದುಕೊಳ್ಳುವುದು. ಚೆಚೆನ್ಯಾದ ಮಹಿಳಾ ಪ್ರವಾಸಿಯೊಬ್ಬರು ಸಂದರ್ಶನ ಮಧ್ಯದಲ್ಲಿ ಹಂಪೆಯಲ್ಲಿ ವೇಶ್ಯಾವಾಟಿಕೆ ಇದೆಯೆ ಎಂದು ಕೇಳಿದಳು. ಆಕೆಯ ಪ್ರಶ್ನೆಗೆ ಇಲ್ಲವೆಂದು ಉತ್ತರಿಸಲಾಯಿತು. ಆಕೆಗೆ ಇಂಥ ಪ್ರಶ್ನೆಗಳು ಬರಲು ಭಾರತದಲ್ಲಿ ವೇಶ್ಯಾವಾಟಿಕೆ ಹೆಚ್ಚು ಎಂದು ತನ್ನ ದೇಶದ ಸ್ನೇಹಿತರು ತಿಳಿಸಿದ್ದರು. ಹಂಪೆ ಪ್ರವಾಸಿ ತಾಣ. ಇಲ್ಲಿಗೆ ಬಂದು ಹೋಗುವ ಜನಸಂಖ್ಯೆ ಕೂಡ ಹೆಚ್ಚು. ವೇಶ್ಯಾವಾಟಿಕೆ ಇರಬಹುದು ಎಂದು ಕೇಳಿದೆ ಎಂದಳು. ಹಂಪೆಯಲ್ಲಿ ವೇಶ್ಯವಾಟಿಕೆ ಇಲ್ಲ ಎಂದದ್ದು ಕೇಳಿ ಆಶ್ಚರ್ಯ ಮತ್ತು ಸಂತೋಷವಾಗುತ್ತದೆ ಎಂದಳು. ಇಂಥ ಪ್ರವಾಸಿ ತಾಣಗಳು ವೇಶ್ಯಾವಾಟಿಕೆಯ ಕೇಂದ್ರಗಳಾಗದಂತೆ ಸರಕಾರ ಮತ್ತು ನಾಗರಿಕರು ನೋಡಿಕೊಳ್ಳಬೇಕು. ಇದರಿಂದ ನಿಮಗೆ ತಿಳಿದಿರುವಂತೆ ಅನೇಕ ಮಾರಕ ಕಾಯಿಲೆಗಳು ಉಲ್ಬಣವಾಗುತ್ತವೆ ಎಂದಳು. ಪ್ರವಾಸಿಗರು ಆಫೀಮು, ಗಾಂಜಾ, ಚರಸ್, ಕೊಕೆನ್ ಮುಂತಾದ ಅಮಲು ಬರಿಸುವ ಮಾದಕ ವಸ್ತುಗಳನ್ನು ಉಪಯೊಗಿಸುವುದು ಹೆಚ್ಚಿದೆ ಎಂದು ಹೇಳಲಾಗುತ್ತದೆ. ಈ ಬಗ್ಗೆ ಹಾಲೆಂಡಿನ ಯುವ ಪ್ರವಾಸಿಗನೊಬ್ಬನನ್ನು ಕೇಳಲಾಯಿತು. ಆತನ ಉತ್ತರ ಸಕಾರಾತ್ಮಕವಾಗಿತ್ತು. ಅವುಗಳನ್ನು ಪೂರೈಸಿಕೊಳ್ಳುವ ಬಗ್ಗೆ ಕೇಳಲಾಯಿತು. ಅದಕ್ಕೆ ಆತ ಗೊತ್ತಿಲ್ಲವೆಂದು ಹೇಳಿದ. ಸಾಮಾನ್ಯವಾಗಿ ವಿದೇಶಿ ಪ್ರವಾಸಿಗರು ಹಿಮಾಚಲ ಪ್ರದೇಶದಿಂದ ಬರುವಾಗ ತರುತ್ತಾರೆ ಎಂಬುದು ಆತನ ಅಭಿಪ್ರಾಯವಾಗಿತ್ತು. ಅಲ್ಲಿ ಈ ಮಾದಕ ವಸ್ತುಗಳ ಬೆಲೆಗಳು ಕಡಿಮೆ ಇವೆ. ಸರಕಾರ ಇವುಗಳ ನಿಷೇಧದ ಬಗ್ಗೆ ಕಟ್ಟುನಿಟ್ಟಿನ ಕ್ರಮಗಳನ್ನು ತೆಗೆದುಕೊಳ್ಳಬೇಕು. ಇದನ್ನು ಪ್ರವಾಸಿಗರಾಗಲಿ, ಸ್ಥಳೀಯರಾಗಲಿ ಉಪಯೋಗಿಸುವುದನ್ನು ಮತ್ತು ಮಾರಾಟ ಮಾಡುವುದನ್ನು ತಡೆಯಬೇಕು. ತಪ್ಪಿತಸ್ಥರು ಯಾರೆ ಆಗಿರಲಿ ಅವರಿಗೆ ಕಠಿಣ ಶಿಕ್ಷೆಯನ್ನು ಜಾರಿಗೊಳಿಸಬೇಕು ಎಂಬುದು ಆತನ ನಿಲುವಾಗಿತ್ತು.ಆತನ ಅಭಿಪ್ರಾಯದ ಪ್ರಕಾರ, ಇವುಗಳ ಸೇವನೆಯಲ್ಲಿ ಗಂಡು ಮತ್ತು ಹೆಣ್ಣು ಎಂಬ ಭೇದ ಪ್ರವಾಸಿಗರಲ್ಲಿಲ್ಲ. ಎಲ್ಲರೂ ಎಲ್ಲ ಚಟುವಟಿಕೆಗಳಲ್ಲಿ ಸಮಾನರು. ಮಾದಕ ವಸ್ತುಗಳನ್ನು ಮಹಿಳೆಯರು ಮತ್ತು ಪುರುಷರು ಸೇವಿಸುತ್ತಾರೆ.ವಿಶೇಷವಾಗಿ ಹೆಂಗಸರು ಸೇವಿಸುವುದರಿಂದ ಅವರ ದೇಹದ ಮೇಲೆ ಪ್ರಭಾವ ಬೀರುತ್ತದೆ. ಇದರಿಂದ ಹುಟ್ಟುವ ಮಕ್ಕಳ ಮೇಲೆ ಮಾರಕ ಪರಿಣಾಮವಾಗುತ್ತಿದ್ದರೂ ಸೇವನೆ ಮಾಡುವುದು ನಿಂತಿಲ್ಲ. ಇತ್ತೀಚಿಗೆ ಅನೇಕ ರಾಷ್ಟ್ರಗಳಲ್ಲಿ ಸರಕಾರಗಳು ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಂಡಿವೆಯಾದರೂ ಕಡಿಮೆಯಾಗಿಲ್ಲವೆಂದು

[illegible]

ಖೇಧ ವ್ಯಕ್ತಪಡಿಸಿದ್ದಾನೆ. ಅಲ್ಲದೆ ತಾನು ಕೂಡ ಮಾದಕ ವಸ್ತುಗಳ ವ್ಯಸನಿಯಾಗಿದ್ದು ಕೆಲವು ತಿಂಗಳ ಹಿಂದೆಯಷ್ಟೆ ಬಿಟ್ಟಿರುವುದಾಗಿ ತಿಳಿಸಿದ. ಸ್ಥಳೀಯರ ಪ್ರಕಾರ ಮಾದಕ ವಸ್ತುಗಳು ಹಂಪೆಯಲ್ಲಿ ಮಾರಾಟವಾಗುತ್ತವೆ ಮತ್ತು ಅವುಗಳನ್ನು ಸೇವಿಸುವವರೂ ಇದ್ದಾರೆ. ಇದರ ಪೂರೈಕೆಯನ್ನು ನೇಪಾಳಿ ವ್ಯಾಪಾರಿಗಳು ಒದಗಿಸುತ್ತಾರೆಂದು ಹೇಳಲಾಗುತ್ತದೆ.

ದೇಶಿ ಮತ್ತು ವಿದೇಶಿ ಪ್ರವಾಸಿಗರು ಹಂಪಿಗೆ ಬರುತ್ತಾರೆ. ವಿದೇಶಿ ಪ್ರವಾಸಿಗರಿಗೆ ಹೋಲಿಸಿದರೆ ದೇಶಿ ಪ್ರವಾಸಿಗರ ಸಂಖ್ಯೆ ಹೆಚ್ಚು ಇದೆ. ದೇಶದ ಎಲ್ಲ ಕಡೆಯಿಂದ ದೇಶಿ ಪ್ರವಾಸಿಗರು ಬರುತ್ತಾರೆ. ಆದರೆ ದಕ್ಷಿಣ ಭಾರತದ ರಾಜ್ಯಗಳಿಂದ ಬರುವ ಪ್ರವಾಸಿಗರ ಸಂಖ್ಯೆ ಉತ್ತರ ಭಾರತದ ರಾಜ್ಯಗಳಿಂದ ಬರುವ ಪ್ರವಾಸಿಗರ ಸಂಖ್ಯೆಗಿಂತ ಹೆಚ್ಚು ಇದೆ. ಕರ್ನಾಟಕದ ವಿವಿಧ ಜಿಲ್ಲೆಗಳಿಂದ ಬರುವ ಪ್ರವಾಸಿಗರ ಸಂಖ್ಯೆ ದಕ್ಷಿಣ ಭಾರತದ ಇತರ ರಾಜ್ಯಗಳಿಂದ ಬರುವ ಪ್ರವಾಸಿಗರಿಂದ ಹೆಚ್ಚು ಇದೆ. ದೇಶಿ ಪ್ರವಾಸಿಗರಲ್ಲಿ ವಿದ್ಯಾರ್ಥಿಗಳು ಮತ್ತು ಹಂಪೆಯ ವಿರೂಪಾಕ್ಷನ ದರ್ಶನಕ್ಕೆ(ಧಾರ್ಮಿಕ ಕಾರ್ಯಗಳಿಗೆ) ಬರುವ ಪ್ರವಾಸಿಗರ ಸಂಖ್ಯೆ ಹೆಚ್ಚು. ದೇಶಿ ಪ್ರವಾಸಿಗರು ಹಂಪಿಯಲ್ಲಿ ಉಳಿಯುವ ಸಾಧ್ಯತೆಗಳು ಕಡಿಮೆ. ಒಂದು ವೇಳೆ ಉಳಿದರೂ ಅವರು ತಮ್ಮ ಊಟ ತಿಂಡಿಯ ವ್ಯವಸ್ಥೆಯನ್ನು ತಾವೆ ಮಾಡಿಕೊಳ್ಳುವುದು ಹೆಚ್ಚು. ಹಾಗಾಗಿ ಹಂಪೆ ಪ್ರವಾಸೋದ್ಯಮಿಗಳಿಗೆ ದೇಶಿ ಪ್ರವಾಸಿಗರೆಂದರೆ ಅಷ್ಟಕಷ್ಟೆ. ಪ್ರವಾಸೋದ್ಯಮಿಗಳ ಮುಖ್ಯ ಕಾಳಜಿ ವಿದೇಶಿ ಪ್ರವಾಸಿಗರನ್ನು ಆಕರ್ಷಿಸಿ ತಮ್ಮ ವ್ಯಾಪಾರ ವೃದ್ಧಿಸಿಕೊಳ್ಳುವುದು. ವಿದೇಶಿ ಪ್ರವಾಸಿಗರಲ್ಲಿ ಇಂಗ್ಲೇಂಡಿನಿಂದ ಬಂದ ಪ್ರವಾಸಿಗರ ಸಂಖ್ಯೆ ಹೆಚ್ಚು ಇದೆ. ಅವರ ನಂತರದ ಸ್ಥಾನದಲ್ಲಿ ಪ್ರಾನ್ಸ್, ಜರ್ಮನಿ, ಇಟಲಿ ಮುಂತಾದ ಯುರೋಪಿನ ರಾಷ್ಟ್ರಗಳ ಪ್ರವಾಸಿಗರಿದ್ದಾರೆ. ಹಂಪಿಯಲ್ಲಿ ಉಳಿಯುವ ಪ್ರವಾಸಿಗರು ಆರ್ಥಿಕವಾಗಿ ಉತ್ತಮ ಸ್ಥಿತಿಯಲ್ಲಿ ಇದ್ದಾರೆ ಎನ್ನಲಾಗುವುದಿಲ್ಲ. ನಮ್ಮ ಜೀವನ ಮಟ್ಟ ಮತ್ತು ತಲಾ ಆದಾಯಕ್ಕೆ ಹೋಲಿಸಿದರೆ ವಿದೇಶಿ ಪ್ರವಾಸಿಗರ ಸ್ಥಿತಿ ಉತ್ತಮವಾಗಿದೆ ಎನ್ನಬಹುದು. ಆದರೆ ಅವರ ರಾಷ್ಟ್ರಗಳ ಜೀವನ ಮಟ್ಟ ಮತ್ತು ತಲಾ ಆದಾಯಕ್ಕೆ ಹೋಲಿಸಿದರೆ ಹಂಪೆಯಲ್ಲಿ ಉಳಿಯುವ ಪ್ರವಾಸಿಗರು ಕೆಳ ಮಧ್ಯಮ ಅಥವಾ ಬಡ ಆರ್ಥಿಕ ಹಿನ್ನೆಲೆಯವರೆನ್ನಬಹುದು. ಅವರು ಹಂಪೆಯನ್ನು ಇಷ್ಟ ಪಡಲು ಹಲವಾರು ಕಾರಣಗಳಿವೆ. ಅವುಗಳಲ್ಲಿ ಒಂದು ಅವರ ಬಜೆಟ್‌ನೊಳಗೆ ಹಂಪೆಯ ಸವಲತ್ತುಗಳು ಸಿಗುವುದು ಸೇರಿದೆ ಮತ್ತು ಅದು ಬಹುಮುಖ್ಯ ಅಂಶ ಕೂಡ. ಹೀಗೆ ಹಂಪೆಗೆ ಬರುವ ವಿದೇಶಿ ಪ್ರವಾಸಿಗರ ಸಾಮಾಜಿಕ, ಆರ್ಥಿಕ ಹಿನ್ನಲೆಯನ್ನು ಸಂಕ್ಷಿಪ್ತವಾಗಿ ಈ ಅಧ್ಯಾಯದಲ್ಲಿ ತಿಳಿಸಲಾಗಿದೆ. ಇಂತಹ ಪ್ರವಾಸಿಗರ ಬೇಡಿಕೆಗಳನ್ನು ಪೂರೈಸಲು ಹಂಪೆಯಲ್ಲಿ ರೂಪುಗೊಂಡ ವಿವಿಧ ಸೌಲಭ್ಯಗಳ ಪರಿಚಯವನ್ನು ಮುಂದಿನ ಅಧ್ಯಾಯದಲ್ಲಿ ಮಾಡಲಾಗಿದೆ.

ಅಡಿ ಟಿಪ್ಪಣಿಗಳು

1. ರಾಬಿನ್‌ಸನ್ ಎಚ್., ಎ ಜಿಯಾಗ್ರಾಫಿ ಆಫ್ ಟೂರಿಜಂ , ಲಂಡನ್ : ಮೆಕ್ ಡೋನಾಲ್ಡ್ ಆ್ಯಂಡ್ ಇವೆನ್ಸ್, 1976, ಪುಟ. 3
2. ಪ್ರವೀಣ್ ಸೇಥಿ, ಬಿಜಿನೆಸ್ ಟೂರಿಜ್ಂ, ನ್ಯೂಡೆಲ್ಲಿ : ರಜತ್ ಪಬ್ಲೀಕೇಷನ್ಸ್,2000, ಪುಟ -11
3. ರಾಬಿನ್‌ಸನ್ ಎಚ್., ಪೂರ್ವೋಕ್ತ, ಪುಟ. 6
4. ವಿದ್ಯಾಶಂಕರ್ ಎಸ್., ಪ್ರವಾಸೋದ್ಯಮ ಹಾಗೂ ಕನ್ನಡದಲ್ಲಿ ಪ್ರವಾಸಿ ಸಾಹಿತ್ಯ, ಬೆಂಗಳೂರು: ಸೆಂಟರ್ ಫಾರ್ ಕನ್ನಡ ಸ್ಟಡೀಸ್, ಜ್ಞಾನಭಾರತಿ, 1991, ಪುಟ. 12
5. ಅದೇ, ಪುಟ. 29
6. ಪ್ರವೀಣ್ ಸೇಥಿ, ಪೂರ್ವೋಕ್ತ, ಪುಟ. 21-26
7. ರೇಮಂಡ್ ನರೋನ್ಹಾ, ಸ್ಯೂಶಿಯಲ್ ಆ್ಯಂಡ್ ಕಲ್ಚರಲ್ ಡೈಮೆನಶನ್ ಆಫ್ ಟ್ಯೂರಿಸಂ, (ವರ್ಕಿಂಗ್ ಪೇಪರ್ ನಂಬರ್ 326) ವಾಷಿಂಗ್‌ಟನ್ ಡಿ.ಸಿ.: ವರ್ಲ್ಡ್ ಬ್ಯಾಂಕ್ 1979, ಪುಟ. 2
8. ರವಿಭೂಷಣ್ ಕುಮಾರ್, ಕೊಸ್ಟಲ್ ಟೂರಿಸಂ ಆ್ಯಂಡ್ ಎನ್‌ವಿರಾನ್ ಮೆಂಟ್,ನ್ಯೂಡೆಲ್ಲಿ : ಎ.ಪಿ.ಎಚ್ ಪಬ್ಲಿಷಿಂಗ್ ಕಾರ್ಪೋರೇಷನ್, 1995, ಪುಟ. 35
9. ವಿದ್ಯಾಶಂಕರ್ ಎಸ್., ಪೂರ್ವೋಕ್ತ, ಪುಟ. 40
10. ಹಿರಿಯ ಸ್ಮಾರಕ್ಷಣಾಧಿಕಾರಿಗಳು, ಪ್ರವಾಸಿಗರ ಪ್ರವೇಶದರದ ನೊಂದಣಿ ಪುಸ್ತಕ, ಕಮಲಾಪುರ: ಪುರಾತತ್ವ ಇಲಾಖೆ, 2001
11. ಕಾರ್ಯನಿರ್ವಾಹಕ ಅಧಿಕಾರಿಗಳು, ಪ್ರವಾಸಿಗರ ಪ್ರವೇಶದರದ ನೊಂದಣಿ ಪುಸ್ತಕ, ಹಂಪೆ: ಮುಜರಾಯಿ ಇಲಾಖೆ, 2001
12. ಸಹಾಯಕ ನಿರ್ದೇಶಕರು, ಪ್ರವಾಸಿಗರ ಮಾಹಿತಿ ಸಂಗ್ರಹ ಪುಸ್ತಕ, ಹೊಸಪೇಟೆ : ಪ್ರವಾಸೋದ್ಯಮ ಇಲಾಖೆ, 2001
13. ಸಹಾಯಕ ಸೂಪರ್ ಇಂಟೆಂಡೆಂಟ್, ಪ್ರವಾಸಿಗರ ಪ್ರವೇಶದರದ ನೊಂದಣಿ ಪುಸ್ತಕ, ಕಮಲಾಪುರ: ಕೇಂದ್ರ ಪುರಾತತ್ವ ವಸ್ತುಸಂಗ್ರಹಾಲಯ ಇಲಾಖೆ, 2001
14. ಅಸಿಸ್ಟೆಂಟ್ ಸಬ್‌ಇನ್‌ಸ್ಪೆಕ್ಟರ್, ವಿದೇಶಿ ಪ್ರವಾಸಿಗರ ಮಾಹಿತಿ ಸಂಗ್ರಹಣೆ ಪುಸ್ತಕ, ಹಂಪೆ: ಪೋಲಿಸ್ ಠಾಣೆ, 2001

15. ಕಾರ್ಯನಿರ್ವಾಹಕ ಅಧಿಕಾರಿಗಳು, *ಪ್ರವಾಸಿಗರ ಪ್ರವೇಶದರದ ನೊಂದಣಿ ಪುಸ್ತಕ*, ಹಂಪೆ: ಮುಜರಾಯಿ ಇಲಾಖೆ, 2001,

16. ನಿರ್ದೇಶಕರು, *ಪ್ರವಾಸಿಗರ ಮಾಹಿತಿ ಸಂಗ್ರಹ ಪುಸ್ತಕ*, ಬೆಂಗಳೂರು : ಪ್ರವಾಸೋದ್ಯಮ ಇಲಾಖೆ, 2001

17. ಸಹಾಯಕ ನಿರ್ದೇಶಕರು, *ಪೂರ್ವೋಕ್ತ*, 2001, ಪುಟ. 8

18. ಯು.ಎನ್.ಡಿ.ಪಿ. *ಹ್ಯೂಮನ್ ಡೆವಲಪ್‌ಮೆಂಟ್ ರಿಪೋರ್ಟ್-2002*, ಆಕ್ಸ್‌ಫರ್ಡ್ : ಒ. ಯು.ಪಿ.2002

19. ಪ್ರವೀಣ ಸೇಥಿ, ಹ್ಯಾಂಡ್ ಬುಕ್ ಆಫ್ ಎಫೆಕ್ಟೀವ್ ಟ್ರಾವೆಲ್ಸ್ ಆ್ಯಂಡ್ ಟ್ಯೂರಿಸಂ, ನ್ಯೂಡೆಲ್ಲಿ: ರಜತ್ ಪಬ್ಲಿಕೇಶನ್ಸ್, 1999, ಪುಟ.314

20. ಸರಿನ್ ಸಿಂಗ್ ಆ್ಯಂಡ್ ಅದರ್ಸ್ ,ಲೋನ್ಲಿ ಪ್ಲಾನೆಟ್ ಇಂಡಿಯಾ, ಮೆಲ್ಬರ್ನ್ : ಲೋನ್ಲಿ ಪ್ಲಾನೆಟ್ ಪಬ್ಲಿಕೇಷನ್, 2001, ಪುಟ-855

ಕೋಷ್ಟಕ-3

ಹಂಪೆಗೆ ಭೇಟಿಕೊಟ್ಟ ಪ್ರವಾಸಿಗರ ವಿವರ 1996-2002

ಕ್ರ ಸಂ.	ವಿವರಗಳು	ಪ್ರವಾಸಿಗರ ಸಂಖ್ಯೆ					
		1996-97	1997-98	1998-99	1999-2000	2000-2001	2001-2002
01	ಕೇಂದ್ರ ಪುರಾತತ್ವ ಇಲಾಖೆ (ಕಮಲಮಹಲ್ ಮತ್ತು ವಿಠಲ ದೇವಸ್ಥಾನ)	172503	183048	320540	286468	248489	191390
02	ಕೇಂದ್ರ ಪುರಾತತ್ವ ಮತ್ತು ವಸ್ತುಸಂಗ್ರಹಾಲಯ	---	---	----	----	58320	51419
03	ಹಂಪಿ ವಿರೂಪಾಕ್ಷೇಶ್ವರ ದೇವಸ್ಥಾನ	347944	245563	337770	569026	612533	619796
04	ಕರ್ನಾಟಕ ಪ್ರವಾಸೋದ್ಯಮ ಇಲಾಖೆ	65329	80377	104093	7098	481030	378544
05	ಪೋಲಿಸ್ ಇಲಾಖೆ	---	---	4862	3888	3484	---

ಸೂಚನೆ : 1. ಕೇಂದ್ರ ಪುರಾತತ್ವ ಮತ್ತು ವಸ್ತುಸಂಗ್ರಹಾಲಯದಲ್ಲಿ ಪ್ರವೇಶದರವನ್ನು 2001 ರಿಂದ ಪ್ರಾರಂಭಿಸಲಾಗಿದೆ. 2. ಈ ಕೋಷ್ಟಕದಲ್ಲಿ ನಮೂದಿಸಿರುವ ಅಂಕಿ ಅಂಶಗಳು ಪರಸ್ಪರ ತಾಳೆಯಾಗುವುದಿಲ್ಲ. 3. ಪೋಲಿಸ್ ಇಲಾಖೆಯಲ್ಲಿ ವಿದೇಶಿ ಪ್ರವಾಸಿಗರ ಅಂಕಿ ಅಂಶಗಳು 1998 ರಿಂದ ಲಭ್ಯವಿವೆ.

ಮೂಲ : 1. ಸ್ಮಾರಕಗಳ ಹಿರಿಯ ಸಂರಕ್ಷಣಾಧಿಕಾರಿ, *ಕಮಲ್‌ಮಹಲ್ ಮತ್ತು ವಿಠಲ ದೇವಸ್ಥಾನದ ಪ್ರವೇಶದರ ಟಿಕೇಟ್‌ಗಳ ನೋಂದಣಿ ಪುಸ್ತಕ*, ಕಮಲಾಪುರ : ಕೇಂದ್ರ ಪುರಾತತ್ವ ಇಲಾಖೆ, 2002, 2. ಸಹಾಯಕ ಸೂಪರ್‌ಇಂಟೆಂಡೆಂಟ್, *ಪ್ರವೇಶದರದ ಟಿಕೇಟ್‌ಗಳ ನೋಂದಣಿ ಪುಸ್ತಕ*, ಕಮಲಾಪುರ : ಕೇಂದ್ರ ಪುರಾತತ್ವ ವಸ್ತುಸಂಗ್ರಹಾಲಯ, 2002, 3. ಕಾರ್ಯನಿರ್ವಾಹಕ ಅಧಿಕಾರಿಗಳು, *ಪ್ರವೇಶದರದ ನೋಂದಣಿ ಪುಸ್ತಕ*, ಹಂಪೆ : ಮುಜಾರಾಯಿ ಇಲಾಖೆ(ಹಂಪೆ ವಿರೂಪಾಕ್ಷೇಶ್ವರ ದೇವಸ್ಥಾನ) 2002, 4. ಸಹಾಯಕ ನಿರ್ದೇಶಕರು, *ಪ್ರವಾಸಿಗರ ಮಾಹಿತಿ ಸಂಗ್ರಹ ಪುಸ್ತಕ*, ಹೊಸಪೇಟೆ : ಕರ್ನಾಟಕ ಪ್ರವಾಸೋದ್ಯಮ ಇಲಾಖೆ, 2002, 5. ಅಸಿಸ್ಟೆಂಟ್ ಸಬ್‌ಇನಸ್ಪೆಕ್ಟರ್, *ವಿದೇಶಿ ಪ್ರವಾಸಿಗರ ನೋಂದಣಿ ಪುಸ್ತಕ*, ಹಂಪೆ : ಪೋಲಿಸ್ ಠಾಣೆ, 2002

ಕೋಷ್ಟಕ-4

ದೇಶದ ವಿವಿಧ ಭಾಗಗಳಿಂದ ಹಂಪೆಗೆ ಬಂದಿರುವ ಪ್ರವಾಸಿಗರ ವಿವರ 2001

ಕ್ರ.ಸಂ.	ಸ್ಥಳಗಳು	ಪ್ರವಾಸಿಗರ ಸಂಖ್ಯೆ	ಶೇಕಡವಾರು
01	ಆಂಧ್ರಪ್ರದೇಶ	120731	(20.00)
02	ತಮಿಳುನಾಡು	60365	(10.00)
03	ಇತರ ರಾಜ್ಯಗಳು(ರಾಜಸ್ಥಾನ ಪಶ್ಚಿಮ ಬಂಗಾಳ, ಮಹಾರಾಷ್ಟ್ರ ಉತ್ತರ ಪ್ರದೇಶ ಇತ್ಯಾದಿ)	48293	(8.00)
04	ಕರ್ನಾಟಕ	374266	(62.00)
05	ಒಟ್ಟು ಪ್ರವಾಸಿಗರು		
	ವಿದ್ಯಾರ್ಥಿಗಳು	126768	(21.00)
	ಯಾತ್ರಿಕರು	476887	(79.00)
	ಒಟ್ಟು	**603655**	**(100.00)**

ಸೂಚನೆ : ದೇಶದ ವಿವಿದೆಡೆಯಿಂದ ಬಂದ ಪ್ರವಾಸಿಗರ ಅಂಕಿ ಅಂಶಗಳನ್ನು ಪ್ರವೇಶದರದ ಟಿಕೇಟ್‌ಗಳ ಕೌಂಟರ್‌ಗಳಲ್ಲಿನ ಮಾಹಿತಿಯ ಆಧಾರದ ಮೇಲೆ ನಿರ್ಧರಿಸಲಾಗಿದೆ.

ಮೂಲ : ಕಾರ್ಯನಿರ್ವಾಹಕ ಅಧಿಕಾರಿಗಳು, *ಪ್ರವೇಶ ದರದ ನೋಂದಣಿ ಪುಸ್ತಕ* ಹಂಪೆ : ಮುಜರಾಯಿ ಇಲಾಖೆ, 2001

ಕೋಷ್ಟಕ-5

ರಾಜ್ಯದ ವಿವಿಧ ಭಾಗಗಳಿಂದ ಹಂಪೆಗೆ ಬಂದಿರುವ ಪ್ರವಾಸಿಗರ ವಿವರ 2001

ಕ್ರ.ಸಂ.	ಸ್ಥಳಗಳು	ಪ್ರವಾಸಿಗರ ಸಂಖ್ಯೆ	ಶೇಕಡವಾರು
01	ಕರ್ನಾಟಕ ಅ.ದಕ್ಷಿಣ ಜಿಲ್ಲೆಗಳು	195526	(52.24)
	ಆ.ಉತ್ತರ ಜಿಲ್ಲೆಗಳು	178740	(47.76)
	1.ಬಳ್ಳಾರಿ	83433	(46.68)
	2.ಕೊಪ್ಪಳ	26811	(15.00)
	3. ರಾಯಚೂರು	17874	(10.00)
	4. ಗದಗ, ಧಾರವಾಡ, ಹಾವೇರಿ	14299	(8.00)
	5. ಇತರೆ	36323	(20.32)
	ಒಟ್ಟು	**178740**	**(100.00)**

ಸೂಚನೆ : ದೇಶದ ವಿವಿದೆಡೆಯಿಂದ ಬಂದ ಪ್ರವಾಸಿಗರ ಅಂಕಿ ಅಂಶಗಳನ್ನು ಪ್ರವೇಶದರದ ಟಿಕೇಟ್‌ಗಳ ಕೌಂಟರ್‌ಗಳಲ್ಲಿನ ಮಾಹಿತಿಯ ಆಧಾರದ ಮೇಲೆ ನಿರ್ಧರಿಸಲಾಗಿದೆ.

ಮೂಲ : ಕಾರ್ಯನಿರ್ವಾಹಕ ಅಧಿಕಾರಿಗಳು, *ಪ್ರವೇಶ ದರದ ನೋಂದಣಿ ಪುಸ್ತಕ* ಹಂಪೆ : ಮುಜರಾಯಿ ಇಲಾಖೆ, 2001

ಕೋಷ್ಟಕ-6

ರಾಷ್ಟ್ರ, ರಾಜ್ಯಕ್ಕೆ ಹೋಲಿಸಿ ಹಂಪೆಗೆ ಭೇಟಿ ನೀಡಿದ ವಿದೇಶಿ ಪ್ರವಾಸಿಗರ ಅಂಕಿ ಅಂಶಗಳು 1995-2000

ಕ್ರ. ಸಂ.	ವರ್ಷ	ಭಾರತ	ಬೆಳವಣಿಗೆ ದರ (ಶೇ.)	ಕರ್ನಾಟಕ	ಬೆಳವಣಿಗೆ ದರ(ಶೇ.)	ಹಂಪೆ	ಬೆಳವಣಿಗೆ ದರ(ಶೇ.)	ಕರ್ನಾಟಕದಿಂದ ಹಂಪೆಗೆ ಬಂದ ವಿದೇಶಿ ಪ್ರವಾಸಿಗರ ಪಾಲು (ಶೇಕಡವಾರು)
01	1995	2123683	---	88920	---	15404	---	17.32
02	1996	2287860	7.17	90978	2.31	5319	-189.60	05.85
03	1997	2374094	3.63	159459	42.94	10502	49.35	06.58
04	1998	5339704	55.53	84734	-88.15	18337	42.72	21.64
05	1999	5832105	8.44	82953	-2.14	3953	-363.87	04.76
06	2000	6068809	3.90	176600	53.03	10446	62.15	05.91
07	2001	ಮಾಹಿತಿ ಇಲ್ಲ	ಮಾಹಿತಿ ಇಲ್ಲ	144402	-22.29	16041	34.87	11.10

ಸೂಚನೆ : ವಿದೇಶಿ ಪ್ರವಾಸಿಗರ 2001 ಭಾರತಕ್ಕೆ ಭೇಟಿ ನೀಡಿದ ಅಂಕಿ ಅಂಶಗಳು ಲಭ್ಯವಿಲ್ಲ.

ಮೂಲ : 1. ನಿರ್ದೇಶಕರು, *ಪ್ರವಾಸಿಗರ ಮಾಹಿತಿ ಸಂಗ್ರಹಣ ನೋಂದಣಿ ಪುಸ್ತಕ* ಬೆಂಗಳೂರು : ಪ್ರವಾಸೋದ್ಯಮ ಇಲಾಖೆ, 2001

2. ಸಹಾಯಕ ನಿರ್ದೇಶಕರು, *ಪ್ರವಾಸಿಗರ ಮಾಹಿತಿ ಸಂಗ್ರಹಣ ನೋಂದಣಿ ಪುಸ್ತಕ*, ಹೊಸಪೇಟೆ : ಪ್ರವಾಸೋದ್ಯಮ ಇಲಾಖೆ, 2001

ಕೋಷ್ಟಕ-7
ಹಂಪಿಗೆ ಸಂದರ್ಶಿಸಿದ ವಿದೇಶಿ ಪ್ರವಾಸಿಗರ ಸಾಮಾಜಿಕ ವಿವರಗಳು

ಕ್ರ. ಸಂ.	ರಾಷ್ಟ್ರಗಳು	ಪ್ರವಾಸಿಗರ ಸಂಖ್ಯೆ	ಲಿಂಗ		ವೈವಾಹಿಕ ಜೀವನ			ವಯೋಮಾನ				ಶಿಕ್ಷಣ		
			ಪುರುಷ	ಮಹಿಳೆ	ವಿವಾಹಿತರು	ಅವಿವಾಹಿತರು	ಡೇಟಿಂಗ್ ಬಂದವರು	20 ವರ್ಷಕ್ಕಿಂತ ಕೆಳಗೆ	21-30 ವರ್ಷ	31-50 ವರ್ಷ	51ಕ್ಕಿಂತ ಹೆಚ್ಚು	ಪ್ರೌಢ	ಪದವಿ	ಇತರೆ
01	ಅಸ್ಟ್ರೀಯ	04	02	02	---	----	01	02	02	--	---	03	01	--
02	ಬೆಲ್ಜಿಯಂ	06	02	04	--	05	01	02	01	03	---	04	01	01
03	ಡೆನ್‌ಮಾರ್ಕ್	04	03	01	01	03	--	---	03	01	---	02	01	01
04	ಇಂಗ್ಲೆಂಡ್	33	12	21	06	23	04	05	03	15	10	13	13	07
05	ಫ್ರಾನ್ಸ್	10	05	05	04	06	---	---	02	06	02	03	03	04
06	ಜರ್ಮನಿ	12	07	05	03	08	01	03	09	---	--	08	02	02
07	ಹಾಲೆಂಡ್	08	04	04	02	06	---	02	06	---	---	06	01	01
08	ಇಟಲಿ	08	04	04	02	05	01	--	05	02	01	03	04	---
09	ಐರ್‌ಲ್ಯಾಂಡ್	03	01	02	---	03	---	01	02	---	---	02	--	01
10	ನಾರ್ವೆ	04	02	02	01	03	---	---	04	---	---	03	01	---
11	ಸಾಂಟ್ಯೋಗೋನಿಯ	01	--	01	---	01	---	---	01	---	---	01	---	--
12	ಪೋರ್ಚಗಲ್	03	02	01	---	03	----	---	03	----	--	01	10	01
13	ಪೋಲೆಂಡ್	02	---	02	---	02	----	---	01	01	---	01	01	---
14	ಸ್ಪೇನ್	04	02	02	01	03	----	---	01	03	---	01	03	--
15	ಸ್ವೀಡನ್	08	04	04	---	06	02	01	05	02	---	06	01	01
16	ಸ್ವಿಡ್ಜರ್‌ಲ್ಯಾಂಡ್	05	02	03	02	03	---	---	---	05	---	03	02	---
17	ಚಿಚೆನ್ಯಾ	02	---	02	---	02	---	---	02	---	---	---	02	---
18	ಇಸ್ರೇಲ್	11	05	06	04	07	---	--	11	--	---	08	02	01
19	ಜಪಾನ್	06	04	02	02	04	---	---	06	04	---	02		
20	ದ.ಕೋರಿಯ	05	03	02	02	03	---	---	05	----	---	03	01	01
21	ಅಸ್ಟ್ರೇಲಿಯ	07	03	04	03	04	---	---	05	02	---	06	---	01
22	ಅಮೇರಿಕಾ	08	05	03	03	05	---	01	03	03	01	02	02	04
23	ಕೆನಡಾ	08	04	04	03	05	---	01	03	04	---	03	02	03
	ಒಟ್ಟು	**162**	**76**	**86**	**39**	**113**	**10**	**18**	**88**	**42**	**14**	**85**	**45**	**32**

ಮೂಲ : ಪ್ರಾಥಮಿಕ ಮಾಹಿತಿ

ಕೋಷ್ಟಕ-8

ಹಂಪೆಗೆ ಬಂದ ವಿದೇಶಿ ಪ್ರವಾಸಿಗರ ಉದ್ಯೋಗದ ವಿವರ

ಕ್ರ. ಸಂ.	ರಾಷ್ಟ್ರಗಳು	ಸಂದರ್ಶಿಸಿದ ಪ್ರವಾಸಿಗರ ಸಂಖ್ಯೆ	ಉದ್ಯೋಗ					
			ಕೃಷಿ ವಲಯ	ಕೈಗಾರಿಕೆ ವಲಯ	ಸೇವಾ ವಲಯ	ವಿದ್ಯಾರ್ಥಿ ಗಳು	ನಿರೋ ದ್ಯೋಗಿಗಳು	ನಿವೃತ್ತಿ ಹೊಂದಿದವರು
01	ಅಸ್ಟ್ರೀಯ	04	---	---	02	02	---	----
02	ಬೆಲ್ಜಿಯಂ	06	---	---	04	02	---	---
03	ಡೆನ್‌ಮಾರ್ಕ್	04	---	----	03	01	---	----
04	ಇಂಗ್ಲೆಂಡ್	33	----	01	19	05	04	04
05	ಫ್ರಾನ್ಸ್	10	---	----	08	01	01	---
06	ಜರ್ಮನಿ	12	----	02	08	02	---	---
07	ಹಾಲೆಂಡ್	08	----	----	07	01	---	---
08	ಇಟಲಿ	08	---	---	02	02	03	01
09	ಐರ್‌ಲ್ಯಾಂಡ್	03	----	----	02	01	---	---
10	ನಾರ್ವೆ	04	----	----	02	02	----	----
11	ಸಾಂಟೋಗೋನಿಯ	01	---	---	01	---	----	---
12	ಪೋರ್ಚಗಲ್	03	---	---	02	01	----	---
13	ಪೊಲೆಂಡ್	02	----	---	02	---	----	---
14	ಸ್ಪೇನ್	04	----	---	02	01	01	---
15	ಸ್ವೀಡನ್	08	---	--	08	----	---	---
16	ಸ್ವಿಡ್ಜರ್‌ಲ್ಯಾಂಡ್	05	---	---	04	01	---	--
17	ಚಿಚೆನ್ಯಾ	02	---	---	01	----	01	----
18	ಇಸ್ರೇಲ್	11	----	---	05	04	02	----
19	ಜಪಾನ್	06	----	01	03	02	---	---
20	ದ.ಕೋರಿಯ	05	---	---	04	01	---	---
21	ಅಸ್ಟ್ರೇಲಿಯ	07	01	----	05	01	---	---
22	ಅಮೇರಿಕಾ	08	--	---	07	01	--	--
23	ಕೆನಡಾ	08	---	---	07	01	----	----
	ಒಟ್ಟು	162	01	04	108	32	12	05

ಮೂಲ : ಪ್ರಾಥಮಿಕ ಮಾಹಿತಿ

ಕೋಷ್ಟಕ-9

ಹಂಪೆಗೆ ಬಂದ ವಿದೇಶಿ ಪ್ರವಾಸಿಗರ ಆದಾಯದ ವಿವರ

ಕ್ರ. ಸಂ.	ರಾಷ್ಟ್ರಗಳು	ಸಂದರ್ಶಿಸಿದ ಪ್ರವಾಸಿಗರ ಸಂಖ್ಯೆ	ಆದಾಯ (ಡಾಲರ್‌ಗಳಲ್ಲಿ)					
			ತಿಂಗಳು			ವಾರ್ಷಿಕ		ಆದಾಯ ಹೇಳದವರು
			500-1000	1001-1500	1501-2000	10-25 ಸಾವಿರ	25ಸಾವಿರ ಮೇಲ್ಪಟ್ಟು	
01	ಅಸ್ಟ್ರೀಯ	04	01	---	---	--	---	03
02	ಬೆಲ್ಜಿಯಂ	06	---	01	---	01	---	04
03	ಡೆನ್‌ಮಾರ್ಕ್	04	01	----	---	---	---	03
04	ಇಂಗ್ಲೆಂಡ್	33	02	01	01	04	01	24
05	ಫ್ರಾನ್ಸ್	10	01	01	---	01	---	07
06	ಜರ್ಮನಿ	12	---	01	---	01	---	10
07	ಹಾಲೆಂಡ್	08	04	---	01	----	---	03
08	ಇಟಲಿ	08	02	01	---	01	---	04
09	ಐರ್‌ಲ್ಯಾಂಡ್	03	---	---	---	01	---	02
10	ನಾರ್ವೆ	04	01	----	---	---	---	03
11	ಸಾಂಟೋಗೋನಿಯ	01	---	---	---	---	---	01
12	ಪೋರ್ಚುಗಲ್	03	---	---	---	----	---	03
13	ಪೊಲೆಂಡ್	02	02	---	---	---	---	---
14	ಸ್ಪೇನ್	04	01	----	---	--	---	03
15	ಸ್ವೀಡನ್	08	---	02	---	01	01	04
16	ಸ್ವಿಡ್ಜರ್‌ಲ್ಯಾಂಡ್	05	--	---	---	---	01	04
17	ಚಿಚೆನ್ಯಾ	02	01	----	---	---	--	01
18	ಇಸ್ರೇಲ್	11	04	----	----	---	--	07
19	ಜಪಾನ್	06	01	---	---	--	---	05
20	ದ.ಕೋರಿಯ	05	01	----	---	--	--	04
21	ಅಸ್ಟ್ರೇಲಿಯ	07	--	----	---	--	---	07
22	ಅಮೇರಿಕಾ	08	---	01	02	---	01	04
23	ಕೆನಡಾ	08	---	---	01	----	02	05
	ಒಟ್ಟು	162	22	08	05	10	05	112

ಮೂಲ : ಪ್ರಾಥಮಿಕ ಮಾಹಿತಿ

ಕೋಷ್ಟಕ -10
ವಿದೇಶಿಯರಿಗೆ ಹಂಪೆಯ ಬಗ್ಗೆ ದೊರೆತ ಮಾಹಿತಿ ಮೂಲ

ಕ್ರ.ಸಂ.	ವಿವರಗಳು	ಸಂದರ್ಶಿಸಿದ ಪ್ರವಾಸಿಗರು	
		ಸಂಖ್ಯೆ	ಶೇಕಡವಾರು
1	ಸ್ನೇಹಿತರು	54	(33.34)
2	ಪುಸ್ತಕಗಳು	32	(19.75)
3	ಸ್ನೇಹಿತರು ಮತ್ತು ಪುಸ್ತಕಗಳು	59	(36.42)
4	ಸಂಪರ್ಕ ಸಾಧನಗಳು	17	(10.49)
	ಒಟ್ಟು	162	(100)

ಮೂಲ : ಪ್ರಾಥಮಿಕ ಮಾಹಿತಿ

ಕೋಷ್ಟಕ -11
ವಿದೇಶಿ ಪ್ರವಾಸಿಗರು ಭಾರತಕ್ಕೆ ತಲುಪಿದ ನಂತರ ಆಯ್ದುಕೊಳ್ಳುವ ಸಾರಿಗೆ ವ್ಯವಸ್ಥೆ

ಕ್ರ.ಸಂ.	ವಿವರಗಳು	ಸಂದರ್ಶಿಸಿದ ಪ್ರವಾಸಿಗರು	
		ಸಂಖ್ಯೆ	ಶೇಕಡವಾರು
1	ರೈಲು	40	(24.69)
2.	ಬಸ್ಸು	37	(22.84)
3.	ರೈಲು ಮತ್ತು ಬಸ್ಸು ಎರಡು	83	(51.23)
4.	ಟ್ಯಾಕ್ಸಿ	02	(01.24)
	ಒಟ್ಟು	162	(100)

ಮೂಲ : ಪ್ರಾಥಮಿಕ ಮಾಹಿತಿ

ಕೋಷ್ಟಕ -12

ವಿದೇಶಿ ಪ್ರವಾಸಿಗರು ತಂಗಲು ಆಯ್ಕೆ ಮಾಡಿಕೊಳ್ಳುವ ಸ್ಥಳ

ಕ್ರ.ಸಂ.	ಸ್ಥಳ	ಸಂದರ್ಶಿಸಿದ ಪ್ರವಾಸಿಗರು	
		ಸಂಖ್ಯೆ	ಶೇಕಡವಾರು
1	ಹಂಪೆ	159	(98.15)
2.	ಹೊಸಪೇಟೆ	03	(01.85)
	ಒಟ್ಟು	162	(100)

ಮೂಲ : ಪ್ರಾಥಮಿಕ ಮಾಹಿತಿ

ಕೋಷ್ಟಕ -13

ವಿದೇಶಿ ಪ್ರವಾಸಿಗರು ಹಂಪೆಯಲ್ಲಿ ತಂಗುವ ದಿನಗಳು

ಕ್ರ.ಸಂ.	ದಿನಗಳು	ಸಂದರ್ಶಿಸಿದ ಪ್ರವಾಸಿಗರು	
		ಸಂಖ್ಯೆ	ಶೇಕಡವಾರು
1.	1 ರಿಂದ 2 ದಿನಗಳು	54	(33.34)
2.	3 ರಿಂದ 7 ದಿನಗಳು	82	(50.61)
3.	8 ರಿಂದ 10 ದಿನಗಳು	16	(09.88)
4	10 ದಿನಗಳ ಮೇಲ್ಪಟ್ಟು	10	(06.17)
	ಒಟ್ಟು	**162**	**(100)**

ಮೂಲ : ಪ್ರಾಥಮಿಕ ಮಾಹಿತಿ

ಕೋಷ್ಟಕ -14

ವಿದೇಶಿಯರು ಹಂಪೆಗೆ ಬಂದ ಪ್ರವಾಸದ ಉದ್ದೇಶಗಳು

ಕ್ರ.ಸಂ.	ಉದ್ದೇಶಗಳು	ಸಂದರ್ಶಿಸಿದ ಪ್ರವಾಸಿಗರು	
		ಸಂಖ್ಯೆ	ಶೇಕಡವಾರು
1.	ಖುಷಿ ಸಂಚಾರ	141	(87.03)
2.	ರಜೆ ಕಳೆಯಲು	19	(11.74)
3.	ಇತರೆ (ಯೋಗ)	02	(02.23)
	ಒಟ್ಟು	162	(100)

ಮೂಲ : ಪ್ರಾಥಮಿಕ ಮಾಹಿತಿ

ಅಧ್ಯಾಯ 3

ಪ್ರವಾಸಿಗರ ಬೇಡಿಕೆಗಳು ಮತ್ತು ಸ್ಥಳೀಯ ಸಂಪನ್ಮೂಲಗಳು

ಹಿಂದಿನ ಅಧ್ಯಾಯದಲ್ಲಿ ಪ್ರವಾಸಿಗರೆಂದರೆ ಯಾರು?ದೇಶಿ ಮತ್ತು ವಿದೇಶಿ ಪ್ರವಾಸಿಗರ ವಿಂಗಡಣೆ; ವಿದೇಶಿ ಪ್ರವಾಸಿಗರು ಬರುವ ಉದ್ದೇಶ ಅವರ ಆರ್ಥಿಕ ಸಾಮಾಜಕ ಹಿನ್ನೆಲೆ, ಅಭಿರುಚಿ, ಬೇಡಿಕೆಗಳನ್ನು ಕಂಡುಕೊಳ್ಳಲಾಗಿದೆ. ಈ ಅಧ್ಯಾಯದಲ್ಲಿ ಪ್ರವಾಸಿಗರ ಬೇಕು ಬೇಡಗಳನ್ನು ಪೂರೈಸಲು ಹಂಪೆಯಲ್ಲಿ ರೂಪುಗೊಂಡ ವಿವಿಧ ಉದ್ಯಮಗಳ ಪರಿಚಯವನ್ನು ಮಾಡಲಾಗಿದೆ. ಹಿಂದಿನ ಅಧ್ಯಾಯದಲ್ಲಿ ತಿಳಿಸಿದಂತೆ ಹಂಪೆಗೆ ಬರುವ ಪ್ರವಾಸಿಗರನ್ನು ಸ್ಥೂಲವಾಗಿ ದೇಶಿ ಮತ್ತು ವಿದೇಶಿ ಪ್ರವಾಸಿಗರೆಂದು ವಿಂಗಡಿಸಲಾಗಿದೆ. ಭಾರತದ ವಿವಿಧ ಪ್ರದೇಶಗಳಿಂದ ಬರುವವರನ್ನು ದೇಶಿ ಪ್ರವಾಸಿಗರೆಂದೂ ಪರದೇಶದಿಂದ ಬರುವ ಪ್ರವಾಸಿಗರನ್ನು ವಿದೇಶಿ ಪ್ರವಾಸಿಗರೆಂದು ಗುರುತಿಸಲಾಗಿದೆ. ವಿದೇಶಿ ಪ್ರವಾಸಿಗರು ಮತ್ತು ಅವರ ಬೇಕು ಬೇಡಗಳ ಬಗ್ಗೆ ಸಾಕಷ್ಟು ಮಾಹಿತಿಯನ್ನು ಹಿಂದಿನ ಅಧ್ಯಾಯದಲ್ಲಿ ನೋಡಿದ್ದೇವೆ. ಅಂತಹ ವಿದೇಶಿ ಪ್ರವಾಸಿಗರನ್ನು ತೃಪ್ತಿಗೊಳಿಸಲು ಹಾಗೂ ಹಂಪೆಯಲ್ಲಿ ತಂಗಿದಾಗ ಅವರ ಅಭಿರುಚಿ ಮತ್ತು ಬೇಡಿಕೆಗಳನ್ನು ಈಡೇರಿಸಲು ಸ್ಥಳೀಯರು ಯಾವ ರೀತಿಯ ಸೇವಾ ಸೌಲಭ್ಯಗಳನ್ನು ಒದಗಿಸುತ್ತಾರೆ ಎನ್ನುವುದನ್ನು ಈ ಅಧ್ಯಾಯದಲ್ಲಿ ವಿವರಿಸಿಲಾಗಿದೆ. ಅದೇ ರೀತಿ ದೇಶಿ ಪ್ರವಾಸಿಗರ ಬೇಡಿಕೆಗಳನ್ನು ಪೂರೈಸಲು ಹಂಪೆಯಲ್ಲಿ ಸಾಕಷ್ಟು ಸೌಲಭ್ಯಗಳಿವೆ. ಅವುಗಳ ಪರಿಚಯವನ್ನು ಕೂಡ ಈ ಅಧ್ಯಾಯದಲ್ಲಿ ಮಾಡಲಾಗಿದೆ. ಪ್ರವಾಸಿಗರ ಬೇಡಿಕೆಗಳನ್ನು ಪೂರೈಸಲು ಹುಟ್ಟಿಕೊಂಡ ವಿವಿಧ ಸೌಲಭ್ಯಗಳ ಪರಿಕರಗಳನ್ನು ಸ್ಥೂಲವಾಗಿ ಈ ಕೆಳಗಿನಂತೆ ವಿಂಗಡಿಸಬಹುದು - ಊಟ ಮತ್ತು ತಂಗುವ ವ್ಯವಸ್ಥೆ, ಸಾರಿಗೆ ಮತ್ತು ಸಂಪರ್ಕ ಸೌಲಭ್ಯಗಳು, ವೈದ್ಯಕೀಯ ಸೌಲಭ್ಯಗಳು, ಕಾನೂನು ವ್ಯವಸ್ಥೆ ಮತ್ತು ಇತರ ಸೌಲಭ್ಯಗಳು. ಈ ಅಧ್ಯಾಯದ ಮುಂದಿನ ಪುಟಗಳಲ್ಲಿ ಹಂಪೆಯಲ್ಲಿ ಇರುವ ವಿವಿಧ ವ್ಯಾಪಾರಗಳು, ವ್ಯಾಪಾರದ ವಿಧಾನ, ಗಿರಾಕಿಗಳನ್ನು ಆಕರ್ಷಿಸಲು ವ್ಯಾಪಾರಿಗಳು ಹೂಡುವ ತಂತ್ರ ಇತ್ಯಾದಿಗಳನ್ನು ವಿವರಿಸಲಾಗಿದೆ.

ಊಟ ಮತ್ತು ತಂಗುವ ವ್ಯವಸ್ಥೆ

1970ರ ಹಿಂದೆ ಹಂಪೆಯಲ್ಲಿ ಹೋಟೆಲ್, ರೆಸ್ಟೋರೆಂಟು, ಅತಿಥಿಗೃಹಗಳು ಇರಲಿಲ್ಲ. ಸ್ಥಳೀಯ ಹಿರಿಯರ ಪ್ರಕಾರ ಬೀದಿ ಬದಿಯಲ್ಲಿ ಎರಡು ಮೂರು ಪೆಟ್ಟಿಗೆ ಅಂಗಡಿ ಮಾದರಿಯ ಹೋಟೆಲುಗಳು ಇದ್ದವು. ಆಗ ಬರುತ್ತಿದ್ದ ವಿದೇಶಿ ಪ್ರವಾಸಿಗರ ಸಂಖ್ಯೆಯು ತುಂಬಾ ಕಡಿಮೆ ಇತ್ತು. ಅವರು ಪಾಳು ಬಿದ್ದ ದೇವಸ್ಥಾನಗಳಲ್ಲಿ ತಂಗುತ್ತಿದ್ದರು. ಜೊತೆಗೆ ತಮ್ಮ ಆಹಾರವನ್ನು ತಾವೆ ಸಿದ್ಧಪಡಿಸಿಕೊಳ್ಳು ತ್ತಿದ್ದರು. 1980-90ರ ದಶಕದ ಅಂತರದಲ್ಲಿ ಪ್ರತಿ ವರ್ಷ ಐವತ್ತರಿಂದ ನೂರು ವಿದೇಶಿ ಪ್ರವಾಸಿಗರು

ಬರಲಾರಂಭಿಸಿದರು. ಆಗ ಸಣ್ಣ ಪ್ರಮಾಣದಲ್ಲಿ ಹೋಟೆಲ್ ಮತ್ತು ಅತಿಥಿ ಗೃಹಗಳು ಶುರುವಾದವು. ಸ್ಥಳೀಯರು ಆರಂಭಿಕ ಹಂತದಲ್ಲಿ ಮನೆಯ ಕೆಲವು ಕೊಠಡಿಗಳನ್ನು ಅಥವಾ ಮನೆಯ ಒಂದು ಭಾಗವನ್ನು ಅತಿಥಿ ಗೃಹಗಳನ್ನಾಗಿ ಮಾರ್ಪಡಿಸಿ ಬಾಡಿಗೆಗೆ ನೀಡಲು ಶುರುಮಾಡಿದರು. ಆರಂಭದ ದಿನಗಳಲ್ಲಿ ಮೇಲ್ಜಾತಿಯವರು ವಿದೇಶಿ ಪ್ರವಾಸಿಗರನ್ನು ಅಸ್ಪೃಶ್ಯ ಮನೋಭಾವದಿಂದ ನೋಡುತ್ತಿದ್ದರು. ನಂತರದ ದಿನಗಳಲ್ಲಿ ರೆಸ್ಟೋರೆಂಟು ಮತ್ತು ಅತಿಥಿಗೃಹಗಳಲ್ಲಿ ಬರುವ ಅಧಿಕ ಲಾಭದ ಆಸೆಯಿಂದ ಅಸ್ಪೃಶ್ಯ ಮನೋಭಾವ ತೊರೆದು ತಾವು ಕೂಡ ರೆಸ್ಟೋರೆಂಟ್ ಮತ್ತು ಗೆಸ್ಟ್‌ಹೌಸ್‌ಗಳನ್ನು ಶುರುಮಾಡಿದರು. ಇದರ ಪ್ರಭಾವವು ಸಮಾಜದ ಇತರ ಜಾತಿಗಳ ಮೇಲೂ ಪರಿಣಾಮ ಬೀರಿತು. ಒಂದು ಕುಟುಂಬವನ್ನು ಅನುಸರಿಸಿ ಮತ್ತೊಂದು ಕುಟುಂಬ, ಒಂದು ಜಾತಿಯನ್ನು ಅನುಸರಿಸಿ ಮತ್ತೊಂದು ಜಾತಿಯ ಜನರು ರೆಸ್ಟೋರೆಂಟ್ ಮತ್ತು ಅತಿಥಿ ಗೃಹಗಳನ್ನು ಪ್ರಾರಂಭಿಸಿದರು.

ಪ್ರವಾಸೋದ್ಯಮದ ಆರಂಭಿಕ ದಿನಗಳಲ್ಲಿ ಸಿಂಗ್(ರಜಪೂತ) ಕುಂಟುಂಬದವರು ಅತಿಥಿಗೃಹ ಮತ್ತು ರೆಸ್ಟೋರೆಂಟ್‌ಗಳನ್ನು ಶುರು ಮಾಡಿದರು.ಇವರಲ್ಲಿ ಒಬ್ಬರು ಫ್ರೆಂಚ್ ವಿದೇಶಿ ಪ್ರವಾಸಿಗರಿಂದ ಆರ್ಥಿಕ ನೆರವು ಪಡೆದರು. ಅವರೆ ಸೂಚಿಸಿದ (ತ್ರಿಶೂಲ್)ಹೆಸರಿನಿಂದ ರೆಸ್ಟೋರೆಂಟನ್ನು ಪ್ರಾರಂಭಿಸಿದರು. ಮತ್ತೊಬ್ಬರು ತಮ್ಮ ಹಿಟ್ಟಿನ ಗಿರಣಿಯ ಕೊಠಡಿಯನ್ನು ಬಾಡಿಗೆಗೆ ನೀಡಲು ಕೇವಲ ಮಲಗುವ ಎರಡು ಕೊಠಡಿಗಳನ್ನಾಗಿ ಪರಿವರ್ತಿಸಿದರು. ಈ ರೂಮುಗಳಲ್ಲಿ ಸ್ನಾನದ ಕೊಠಡಿಯಾಗಲಿ, ಶೌಚಾಲಯದ ಸೌಲಭ್ಯವಾಗಲಿ ಇರಲಿಲ್ಲ. ಪ್ರವಾಸಿಗರು ಬರ್ಹಿದೆಸೆಗೆ ನದಿ ತೀರಕ್ಕೆ ಹೋಗಿ ಬರುತ್ತಿದ್ದರು. 1990ರ ನಂತರದ ದಿನಗಳಲ್ಲಿ ವಿದೇಶಿ ಪ್ರವಾಸಿಗರ ಆಗಮನವು ಹೆಚ್ಚಾಯಿತು. ಸಿಂಗ್‌ರ ಕುಟುಂಬಗಳೊಂದಿಗೆ ಲಿಂಗಾಯತ ಮತ್ತು ಇತರ ಕೋಮುಗಳ ಕುಟುಂಬದವರು ಅತಿಥಿಗೃಹ ಮತ್ತು ರೆಸ್ಟೋರೆಂಟ್‌ಗಳ ವ್ಯವಹಾರದಲ್ಲಿ ತೊಡಗಿಸಿಕೊಳ್ಳಲು ಸಾಧ್ಯವಾಯಿತು. ಪ್ರಾರಂಭದಲ್ಲಿ ಈ ವ್ಯವಹಾರವನ್ನು ಶುರು ಮಾಡಿದಾಗ ಬ್ಯಾಂಕ್ ಮತ್ತು ಇತರ ಸರ್ಕಾರದ ಆರ್ಥಿಕ ಸಂಸ್ಥೆಗಳಿಂದ ಯಾವುದೆ ಹಣಕಾಸಿನ ನೆರವು ದೊರೆಯುತ್ತಿರಲಿಲ್ಲ. ಆದ್ದರಿಂದ ಅವರು ವ್ಯವಹಾರವನ್ನು ಚಿಕ್ಕ ಪ್ರಮಾಣದಲ್ಲಿ ಪ್ರಾರಂಭಿಸಿದರು ಹಾಗೂ ಬಂದ ಲಾಭದ ಹಣದಿಂದ ನಿಧಾನವಾಗಿ ವ್ಯವಹಾರವನ್ನು ಹೆಚ್ಚಿಸಿದರು. ವ್ಯಾಪಾರ ವೃದ್ಧಿಗೊಂಡ ನಂತರ ಬ್ಯಾಂಕಿನವರು ಸಾಲವನ್ನು ಕೊಡಲು ಪ್ರಾರಂಭಿಸಿದರು. ಕೆಲವು ಸಲ ಸಾಲ ಕೊಡುವಾಗ ಸಾಲದ ಹಣಕ್ಕೆ ಆಧಾರದ ವಸ್ತು(ಕೊಲ್ಯಾಟರಲ್ ಸೆಕುರಿಟಿಸ್)ಗಳನ್ನು ಕೇಳಲಾಗುತ್ತಿತ್ತು. ಇದರಿಂದ ಸಾಲ ಪಡೆಯುವುದು ಕಷ್ಟವಾಗಿತ್ತೆಂದು ಅನೇಕ ಅತಿಥಿಗೃಹ ಮತ್ತು ರೆಸ್ಟೋರೆಂಟ್ ಮಾಲಿಕರು ಅಭಿಪ್ರಾಯ ವಾಗಿದೆ.

ಹಂಪೆ ಗ್ರಾಮ ಪಂಚಾಯತಿ ಡಿಮ್ಯಾಂಡ್ ರಿಜಿಸ್ಟರ್ ಪ್ರಕಾರ 2000-2001ರ ಸಾಲಿನ ಆರಂಭದಲ್ಲಿ ಒಟ್ಟು 61 ಅತಿಥಿ ಗೃಹ ಮತ್ತು ರೆಸ್ಟೋರೆಂಟ್‌ಗಳಿದ್ದವು. ಈ ಅವಧಿಯಲ್ಲಿ ಹೊಸಪೇಟೆಯ

ತಾಲೂಕು ಪಂಚಾಯತಿ ವಿಸ್ತರಣಾಧಿಕಾಯವರ ಪರಿಶೀಲನೆಯಿಂದ ಒಟ್ಟು 25 ಅತಿಥಿಗೃಹ ಮತ್ತು ರೆಸ್ಟೋರೆಂಟ್‌ಗಳು ಸೇವೆಗೆ ಯೋಗ್ಯವೆಂದು ಗುರುತಿಸಿದರು. 2000-01ಸಾಲಿನಲ್ಲಿ ಇವುಗಳಿಗೆ ಮಾತ್ರ ಅನುಮತಿಯನ್ನು ನವೀಕರಿಸಲು ಶಿಫಾರಸ್ಸು ಮಾಡಲಾಯಿತು. ಉಳಿದ ಅತಿಥಿಗೃಹ ಮತ್ತು ರೆಸ್ಟೋರೆಂಟ್‌ಗಳ ಲೈಸನ್ಸ್‌ಗಳನ್ನು ರದ್ದುಗೊಳಿಲಾಯಿತು ಎಂದು ಗ್ರಾಮ ಪಂಚಾಯತಿಯ ಅಧಿಕಾರಿಗಳಿಂದ ತಿಳಿದುಬರುತ್ತದೆ.[1] ಹೀಗೆ ರದ್ದುಗೊಳಿಸ್ಪಟ್ಟ ಅತಿಥಿಗೃಹ ಮತ್ತು ರೆಸ್ಟೋರೆಂಟ್‌ಗಳು ಯಾವುದೆ ವ್ಯಾಪಾರ ವಹಿವಾಟು ನಡೆಸಬಾರದೆಂಬ ನಿಯಮಾವಳಿ ಇದೆ. ಆದರೂ ಕೆಲವು ಅತಿಥಿಗೃಹ ಹಾಗೂ ರೆಸ್ಟೋರೆಂಟುಗಳು ಅನಧಿಕೃತವಾಗಿ ನಡೆಯುತ್ತಿರುವುದು ಕಂಡುಬರುತ್ತದೆ. ಇವುಗಳು ಕಡಿಮೆ ಬಂಡವಾಳದಿಂದ ಶುರುಮಾಡಿದ ಚಿಕ್ಕ ಪ್ರಮಾಣದ ಘಟಕಗಳಾಗಿವೆ. ಪ್ರವಾಸಿತಾಣದ ಪ್ರಾರಂಭಿಕ ಹಂತಗಳಲ್ಲಿ ವ್ಯವಹಾರದಲ್ಲಿ ತೊಡಗಿಸಿಕೊಳ್ಳಲು ಹೆಚ್ಚಿನ ಮಟ್ಟದಲ್ಲಿ ಬಂಡವಾಳ ಹೂಡಲು ಸಾಧ್ಯವಾಗಲಿಲ್ಲ. ತಮ್ಮಲ್ಲಿರುವ ಸಂಪನ್ಮೂಲಗಳಿಂದ ಅಂದರೆ ಮನೆಯಲ್ಲಿರುವ ಕೊಠಡಿಗಳನ್ನೇ ಆತಿಥಿಗೃಹಗಳನ್ನಾಗಿ ಪರಿವರ್ತಿಸಿ ಸೇವಾ ಸೌಲಭ್ಯಗಳನ್ನು ಒದಗಿಸಲು ಆರಂಭಿಸಿದರು. ಹಂಪೆಯಲ್ಲಂತೂ ಇಂತಹ ಅತಿಥಿಗೃಹಗಳು ವ್ಯವಹಾರಗಳನ್ನು ಪ್ರಾರಂಭಿಸಲು ಸಂಬಂಧಪಟ್ಟ ಇಲಾಖೆಗಳಿಂದ ಅನುಮತಿ ಪತ್ರ ಪಡೆದವುಗಳಿಗಿಂತ ಪಡೆಯದೆ ಇರುವ ಸಂಖ್ಯೆ ಹೆಚ್ಚಿಗೆ ಇರುತ್ತದೆ. ಇಂಗ್ಲೆಂಡಿನಲ್ಲಿ ಈ ಮಾದರಿಯ ಅತಿಥಿಗೃಹಗಳು ಮೂರನೇ ಎರಡರಷ್ಟು ಇವೆ. ಆದರೆ ಅವುಗಳು ಒಂದು ನಿರ್ದಿಷ್ಟ ಗುಣಮಟ್ಟಕ್ಕೆ ಅನುಗುಣವಾಗಿ ಕಾರ್ಯ ನಿರ್ವಹಿಸಬೇಕಾಗುತ್ತದೆ.[2]

ಹಂಪೆಯಲ್ಲಿಯೂ ಪ್ರವಾಸೋದ್ಯಮದ ಆರಂಭಿಕ ಹಂತದಲ್ಲಿಯು ಬ್ಯಾಂಕ್‌ನಿಂದ ಸಾಲ ಪಡೆಯುವುದು ಕಠಿಣವಾಗಿತ್ತು. ಇದಕ್ಕೆ ಬ್ಯಾಂಕ್‌ನವರು ನಿರೀಕ್ಷಿಸುವ ಸಾಲದ ಆಧಾರವಸ್ತುಗಳನ್ನು ಕೊಡಲು ಸಾಧ್ಯವಾಗದಿದ್ದದು ಪ್ರಮುಖ ಕಾರಣ. ಬ್ಯಾಂಕಿಗೆ ಸಾಲದ ಅಧಾರ ವಸ್ತುಗಳನ್ನು ಕೊಡಲಾಗದ ಬಡ ಮತ್ತು ಮಧ್ಯಮ ವರ್ಗದವರು ತಾವು ಹಿಂದಿನ ಉದ್ಯೋಗದಲ್ಲಿ ಉಳಿತಾಯ ಮಾಡಿದ ಹಣ, ಸ್ನೇಹಿತರು, ಸಂಬಂಧಿಕರಿಂದ ಹಣವನ್ನು ಪಡೆದು ವ್ಯವಹಾರವನ್ನು ಪ್ರಾರಂಭಿಸಿದ್ದಾರೆ. ಇವರಲ್ಲಿ ಕೆಲವರು ತಾವು ವಾಸಿಸುವ ಮನೆಯಲ್ಲಿನ ಕೊಠಡಿಗಳನ್ನು ಪರಿವರ್ತಿಸಿ ಪ್ರವಾಸಿಗರಿಗೆ ವಸತಿ ಸೌಲಭ್ಯ ಕಲ್ಪಿಸಿಕೊಟ್ಟಿದ್ದಾರೆ. ಈ ಮಾದರಿಯ ವ್ಯಾಪಾರಿಗಳು ಚಿಕ್ಕ ಪ್ರಮಾಣದಲ್ಲಿ ಬಂಡವಾಳ ತೊಡಗಿಸಿಕೊಂಡಿದ್ದಾರೆ. ಅತಿಥಿಗೃಹಗಳ ಕಟ್ಟಡ ನಿರ್ಮಾಣ, ಆಧುನಿಕ ವಸ್ತುಗಳಾದ ಫ್ರಿಜ್, ಕೂಲರ್ ಇತ್ಯಾದಿ ವಸ್ತುಗಳನ್ನು ಅತಿಥಿಗೃಹಗಳಲ್ಲಿ ಅಳವಡಿಸಿಕೊಳ್ಳಲು ಬಯಸಿದವರು ಹೆಚ್ಚಿನ ಬಂಡವಾಳವನ್ನು ವ್ಯವಹಾರದ ಪ್ರಾರಂಭಿಕ ಹಂತಗಳಲ್ಲಿ ತೊಡಗಿಸಿಕೊಂಡಿದ್ದಾರೆ. ರೂ.10,000 ದಿಂದ 20,000ದವರೆಗೆ ಬಂಡವಾಳ ವಿನಿಯೋಗಿಸಿದ ಅತಿಥಿಗೃಹಗಳ ಸಂಖ್ಯೆ 06(ಶೇ.13.04), ರೂ.20,000 ದಿಂದ 30,000 ಬಂಡವಾಳ ತೊಡಗಿಸಿದ ಅತಿಥಿಗೃಹಗಳ ಸಂಖ್ಯೆ 15(ಶೇ.32.61), ರೂ.30,000 ದಿಂದ 50,000 ಬಂಡವಾಳ ತೊಡಗಿಸಿರುವ ಅತಿಥಿಗೃಹಗಳ ಸಂಖ್ಯೆ 18(ಶೇ.39.13)

[illegible]

ಹಾಗೂ ರೂ. 50,000 ರದ ಮೇಲೆ ಬಂಡವಾಳ ವಿನಿಯೋಗಿಸಿದ ಅತಿಥಿಗೃಹಗಳ ಸಂಖ್ಯೆ 07(ಶೇ.15.22) ಇದೆ. ಇವರಲ್ಲಿ ಶೇ. 30.43ರಷ್ಟು ಉದ್ಯಮೆದಾರರು ಬ್ಯಾಂಕಿನಲ್ಲಿ ಸಾಲವನ್ನು ಪಡೆದಿದ್ದರೆ, ಶೇ.69.57ರಷ್ಟು ಇತರ ಮೂಲಗಳಿಂದ ಬಂಡವಾಳವನ್ನು ಪಡೆದು ವ್ಯವಹಾರದಲ್ಲಿ ತೊಡಗಿಸಿದ್ದಾರೆ(ಕೋಷ್ಟಕ-15).

2001-2002 ಸಾಲಿನಿಂದ ಯಾವುದೆ ಬಗೆಯ ಗೆಸ್ಟ್‌ಹೌಸ್, ರೆಸ್ಟೋರೆಂಟ್, ಹೋಟೆಲ್, ಅಂಗಡಿ ಮುಂಗಟ್ಟು ಹಾಗೂ ವ್ಯಾಪಾರ ಮಳಿಗೆಗಳಿಗೆ ಅನುಮತಿ ನವೀಕರಣ ಮಾಡುತ್ತಿಲ್ಲ. ಹೊಸ ವ್ಯಾಪಾರ ಮಳಿಗೆಗಳನ್ನು ಪ್ರಾರಂಭಿಸಲು ಮತ್ತು ವಸತಿ ಕಟ್ಟಡಗಳನ್ನೊಳಗೊಂಡು ಯಾವುದೆ ಬಗೆಯ ಕಟ್ಟಡ ನಿರ್ಮಾಣ ಮಾಡಲು ತಾಲೂಕು ಪಂಚಾಯತಿ ಅಧಿಕಾರಿಗಳು ಅನುಮತಿ ನೀಡುತ್ತಿಲ್ಲ. ಮನೆ ತೆರಿಗೆ, ಕುಡಿಯುವ ನೀರಿನ ಕರವನ್ನು ಪಟ್ಟಾ ಹೊಂದಿರುವ ಮನೆ ಮಾಲಿಕರಿಂದ ಮಾತ್ರ ಸಂಗ್ರಹಿಸಲಾಗುತ್ತಿದೆ. ಇತರ ಯಾವುದೆ ವಾಣಿಜ್ಯ ವಹಿವಾಟುಗಳನ್ನೊಳಗೊಂಡ ಅಂಗಡಿ, ಹೋಟಲ್ ಇತ್ಯಾದಿಗಳಿಂದ ತೆರಿಗೆಗಳನ್ನು ಸಂಗ್ರಹಿಸುತ್ತಿಲ್ಲವೆಂದು ಗ್ರಾಮಪಂಚಾಯತಿ ಸಿಬ್ಬಂದಿಗಳು ತಿಳಿಸುತ್ತಾರೆ.[3] ಇದರಿಂದ ಗ್ರಾಮಪಂಚಾಯತಿ ಆದಾಯ ಕಡಿಮೆಯಾಗುವುದಿಲ್ಲವೇ? ಎಂದು ಸಂಬಂಧಪಟ್ಟವರನ್ನು ವಿಚಾರಿಸಲಾಯಿತು. ಈ ವಿಚಾರದಲ್ಲಿ ನಮಗೆ ಸ್ವಾತಂತ್ರ್ಯ ಇಲ್ಲ. ಮೇಲಾಧಿಕಾರಿಗಳ ಆದೇಶ ಪಾಲಿಸುವುದು ನಮಗೆ ಅನಿವಾರ್ಯ ಎಂದು ತಮ್ಮ ಅಸಹಾಯಕತೆಯನ್ನು ಸ್ಥಳೀಯ ಅಧಿಕಾರಿಗಳು ಮತ್ತು ಪಂಚಾಯತ್ ಅಧ್ಯಕ್ಷರು ತೋರಿಸಿದರು. ಹಂಪೆ ಗ್ರಾಮವನ್ನು ಬೇರೆಡೆಗೆ ಸ್ಥಳಾಂತರಿಸಬೇಕೆಂದು ಸರ್ಕಾರದ ಮಟ್ಟದಲ್ಲಿ ಚಿಂತನೆ ನಡೆಯುತ್ತಿದೆ. ಈ ಸಂದರ್ಭದಲ್ಲಿ ಸರಕಾರವು ಗ್ರಾಮದ ಸಾರ್ವಜನಿಕರಿಂದ ಪಟ್ಟಾ ಇರುವ ವಸತಿ ತೆರಿಗೆಗಳನ್ನು ಹೊರತುಪಡಿಸಿ ಇತರೆ ತೆರಿಗೆಗಳನ್ನು ಕಟ್ಟಿಸಿಕೊಳ್ಳಲು ಸಿದ್ಧವಿರುವಂತೆ ಕಂಡುಬರುವುದಿಲ್ಲ. ಇದಕ್ಕೆ ವಿರುದ್ಧವಾಗಿ ಗ್ರಾಮ ಪಂಚಾಯತಿ ಪ್ರಕಾರ ತೆರಿಗೆಗಳನ್ನು ಕಟ್ಟದ, ಅನುಮತಿಗಳನ್ನು ನವೀಕರಿಸದ ಪ್ರತಿಯೊಂದು ನಿರ್ಮಾಣ ಮತ್ತು ವ್ಯವಹಾರ ಅನಧಿಕೃತವಾಗುತ್ತದೆ ಎಂದು ಹೇಳಲಾಗುತ್ತದೆ. ಆದರೆ ತೆರಿಗೆ ಕಾನೂನಿನ ಆಶಯಗಳಿಗೆ ವಿರುದ್ಧವಾಗಿ ಕರವಸೂಲಿ ಮಾಡದಿರುವುದು ಗ್ರಾಮವನ್ನು ಸ್ಥಳಾಂತರ ಮಾಡಲು ಸರಕಾರ ಸುಲಭವಾಗಿಸಿಕೊಂಡ ಕ್ರಮ ಎಂಬುದು ಸಾರ್ವಜನಿಕರ ಅಭಿಪ್ರಾಯ.

ಸ್ಥಳೀಯ ಅತಿಥಿಗೃಹ ಮತ್ತು ರೆಸ್ಟೋರೆಂಟ್ ಸೌಲಭ್ಯಗಳ ಬಗ್ಗೆ ವಿದೇಶಿ ಪ್ರವಾಸಿಗರು ಮಾಹಿತಿಗಳನ್ನು ಹಲವು ಬಗೆಯಲ್ಲಿ ಸಂಗ್ರಹಿಸುತ್ತಾರೆ. ಬಹುತೇಕ ವಿದೇಶಿ ಪ್ರವಾಸಿಗರು ಹಂಪೆಗೆ ಬರುವ ಮುನ್ನ ಸ್ನೇಹಿತರಿಂದ, ಸಹ ಪ್ರಯಾಣಿಕರಿಂದ ಅಥವಾ ಪ್ರವಾಸಿಗರ ಮಾರ್ಗದರ್ಶಕ ಪುಸ್ತಕವಾದ ಲೋನ್ಲಿ ಪ್ಲಾನೆಟ್‌ನಿಂದ ಹಂಪೆಯಲ್ಲಿರುವ ವಿವಿಧ ಸೌಲಭ್ಯಗಳ ಬಗ್ಗೆ ತಕ್ಕ ಮಟ್ಟಿನ ತಿಳುವಳಿಕೆ ಪಡೆದಿರುತ್ತಾರೆ.[4] ಅವರು ಸಾಮಾನ್ಯವಾಗಿ ಗೋವಾದಿಂದ ಹಂಪೆಗೆ ಬರುವುದು ಕಂಡುಬರುತ್ತದೆ. ಗೋವಾದಿಂದ ಹಂಪೆಗೆ ಬರುವ ಪೋಲೊ ಬಸ್ಸು ಪ್ರತಿನಿತ್ಯ ಬೆಳಿಗ್ಗೆ 9 ಗಂಟೆಗೆ

[illegible]

ಬರುತ್ತದೆ. ಈ ಸಮಯದಲ್ಲಿ ಶಾಲೆಗೆ ಹೋಗುವ ಮಕ್ಕಳು ಗೋವೆ ಬಸ್ಸಿನ ನಿರೀಕ್ಷೆಯಲ್ಲಿರುತ್ತಾರೆ. ಈ ಬಸ್ಸಿನಲ್ಲಿ ಬರುವ ವಿದೇಶಿ ಪ್ರವಾಸಿಗರು ತಮ್ಮ ಬಳಿ ಇರುವ ಅತಿಥಿಗೃಹ ಹಾಗೂ ರೆಸ್ಟೋರೆಂಟ್‌ಗಳ ಬಗೆಗೆ ಮಾರ್ಗದರ್ಶನ ಕೋರಿ ಸಹಾಯ ಕೇಳುತ್ತಾರೆ. ಮಕ್ಕಳ ಗುಂಪು ವಿದೇಶಿ ಪ್ರವಾಸಿಗರನ್ನು ಮುತ್ತಿಕೊಂಡು ಅವರು ಕೇಳುವ ಅತಿಥಿ ಗೃಹಗಳಿಗೆ ಕರೆದೊಯ್ಯುತ್ತಾರೆ. ಅತಿಥಿ ಗೃಹಗಳ ಮಾಲಿಕರು ಪ್ರವಾಸಿಗರನ್ನು ಕರೆದು ಕೊಂಡುಬಂದ ಮಕ್ಕಳಿಗೆ ತಲಾ ಒಂದು ಕೊಠಡಿಗೆ ರೂ. 5 ರಿಂದ 10ಗಳನ್ನು ಕಮಿಶನ್ ನೀಡುತ್ತಾರೆ. ಆದರೆ ಲೋನ್ಲಿ ಪ್ಲಾನೆಟ್‌ನ ಪುಸ್ತಕದಲ್ಲಿ ದಾಖಲಾಗಿರುವ ಕೆಲವೊಂದು ಅತಿಥಿಗೃಹಗಳಿಂದ ಮಕ್ಕಳಿಗೆ ಕಮಿಶನ್ ದೊರೆಯುವುದಿಲ್ಲ. ಯಾಕೆಂದರೆ ಈ ಅತಿಥಿಗೃಹಗಳ ಮಾಲಿಕರು ತಮಗೆ ಗಿರಾಕಿಗಳನ್ನು ಆಕರ್ಷಿಸಲು ಮಧ್ಯವರ್ತಿಗಳ ಅವಶ್ಯಕತೆ ಇಲ್ಲ ಎಂದು ಅಭಿಪ್ರಾಯ ಪಡುತ್ತಾರೆ. ಅಂಥಹ ಸಂದರ್ಭದಲ್ಲಿ ಪ್ರವಾಸಿಗರು ಮಕ್ಕಳಿಗೆ ಹಣವನ್ನು ನೀಡುತ್ತಾರೆ. ಪ್ರವಾಸಿಗರ ಮಾರ್ಗದರ್ಶಿ ಪುಸ್ತಕವಾದ ಲೋನ್ಲಿಪ್ಲಾನೆಟ್‌ನಲ್ಲಿ ಅತಿಥಿಗೃಹ, ರೆಸ್ಟೋರೆಂಟ್‌ಗಳ ಹೆಸರು ದಾಖಲಾಗಿದೆ ಎಂಬುದು ಅತಿಥಿಗೃಹಗಳ ಮಾಲಿಕರಿಗೆ ಹೆಮ್ಮೆಯ ವಿಷಯ. ಈ ಗೈಡ್ ಪುಸ್ತಕದಲ್ಲಿ ಅತಿಥಿಗೃಹಗಳು ದಾಖಲಾಗಬೇಕಾದರೆ ಅವು ಸ್ವಚ್ಛವಾಗಿರಬೇಕು ಹಾಗೂ ಉತ್ತಮ ಸೇವೆಗೆ ಹೆಸರು ಮಾಡಿರಬೇಕು. ವಿದೇಶಿ ಪ್ರವಾಸಿಗರಲ್ಲಿ ಪ್ರತಿಯೊಬ್ಬರೂ ಈ ಪುಸ್ತಕವನ್ನು ಖರೀದಿಸುವುದರೊಂದಿಗೆ ಅದರಲ್ಲಿನ ಮಾಹಿತಿಯಂತೆ ನಿರ್ಧಾರ ತೆಗೆದುಕೊಳ್ಳುವುದು ಕಂಡುಬರುತ್ತದೆ. ಈ ಪುಸ್ತಕವು ಭಾರತದ ವಿವಿಧ ಪ್ರವಾಸಿ ತಾಣಗಳ ಬಗೆಗೆ ವಿವರವಾದ ಮಾಹಿತಿಯನ್ನೊಳಗೊಂಡಿದೆ. ಜತೆಗೆ ಪ್ರಯಾಣ ಮಾಡಬೇಕಾಗಿರುವ ಮಾರ್ಗ ಮತ್ತು ಭೂಪಟ ಕೂಡ ಈ ಪುಸ್ತಕದಲ್ಲಿದೆ. ಕೆಲವು ಪ್ರವಾಸಿಗರು ಬೇರೆಯವರ ಸಹಾಯ ಪಡೆಯದೆ ತಾವೆ ಅತಿಥಿಗೃಹಗಳನ್ನು ಹುಡುಕಿಕೊಂಡು ಬಂದು ತಂಗುವುದು ಕೂಡ ಕಂಡುಬರುತ್ತದೆ.

ಹಂಪೆಯಲ್ಲಿರುವ ಅತಿಥಿಗೃಹ ಮತ್ತು ರೆಸ್ಟೋರೆಂಟ್‌ಗಳಲ್ಲಿ ಮೂರು ಬಗೆಗಳಿರುವುದು ಕಂಡುಬರುತ್ತದೆ. ಒಂದು: ಅತಿಥಿಗೃಹಗಳು, ಎರಡು: ಅತಿಥಿಗೃಹ ಸಹಿತ ರೆಸ್ಟೋರೆಂಟ್‌ಗಳು, ಮತ್ತು ಮೂರು ಅತಿಥಿಗೃಹ ರಹಿತ ರೆಸ್ಟೋರೆಂಟ್‌ಗಳು. ರೆಸ್ಟೋರೆಂಟ್ ಇರುವ ಅತಿಥಿ ಗೃಹಗಳ ಕಟ್ಟಡದ ಮಹಡಿಯ ಮೇಲೆ ಸಾಮಾನ್ಯವಾಗಿ ರೆಸ್ಟೋರೆಂಟ್‌ಗಳಿದ್ದರೆ, ಕಟ್ಟಡದ ಕೆಳಭಾಗದಲ್ಲಿ ರೂಮುಗಳಿರುತ್ತವೆ. ಇಲ್ಲದಿದ್ದರೆ ಕಟ್ಟಡದ ಒಂದು ಬದಿಯಲ್ಲಿ ರೆಸ್ಟೋರೆಂಟ್‌ಗಳನ್ನು ನಿರ್ಮಿಸಲಾಗಿರುತ್ತದೆ. ಒಟ್ಟು ಅತಿಥಿಗೃಹಗಳ ಸಂಖ್ಯೆಯಲ್ಲಿ 2-4 ಕೊಠಡಿಗಳನ್ನು ಹೊಂದಿರುವ ಅತಿಥಿ ಗೃಹಗಳ ಸಂಖ್ಯೆ 18(ಶೇ.39.13), 5-8 ಕೊಠಡಿಗಳನ್ನು ಹೊಂದಿರುವ ಅತಿಥಿ ಗೃಹಗಳ ಸಂಖ್ಯೆ 21(ಶೇ.45.65), 9 ರ ಮೇಲ್ಪಟ್ಟು ಕೊಠಡಿಗಳನ್ನು ಹೊಂದಿದ ಅತಿಥಿ ಗೃಹಗಳ ಸಂಖ್ಯೆ 7(ಶೇ.15.22) ಆಗಿವೆ. (ಕೋಷ್ಟಕ-16) ಸಾಮಾನ್ಯ ಬಾತ್‌ರೂಂನ ಸೇವಾ ಸೌಲಭ್ಯವನ್ನು ಹೊಂದಿರುವ ಅತಿಥಿ ಗೃಹಗಳ ಸಂಖ್ಯೆ 28(ಶೇ.60.87) ಇದ್ದು, ಇವುಗಳಲ್ಲಿನ ಕೊಠಡಿಗಳ ಸಂಖ್ಯೆ 192(ಶೇ.66.21) ಇವೆ.

ಬಾತ್ ರೂಂಗಳು ಕೊಠಡಿಗಳಿಗೆ ಹೊಂದಿಕೊಂಡಂತೆ ಇರುವ ಅತಿಥಿ ಗೃಹಗಳ ಸಂಖ್ಯೆ 18(ಶೇ.39.13) ಇದ್ದು, ಕೊಠಡಿಗಳ ಸಂಖ್ಯೆ 98(ಶೇ.33.79) ಆಗಿವೆ (ಕೋಷ್ಟಕ-17). ಕೊಠಡಿಗಳ ವಿಸ್ತೀರ್ಣ ಸಾಮಾನ್ಯವಾಗಿ 8 ಅಡಿ ಆಗಲ ಮತ್ತು 9 ಅಡಿ ಉದ್ದ ಅಥವಾ 8 ಅಡಿ ಅಗಲ 10ಅಡಿ ಉದ್ದವಿರುವುದು ಕಂಡುಬರುತ್ತದೆ. ಪ್ರಾರಂಭದಲ್ಲಿನ ಬಂಡವಾಳ ಸಹ ಕಡಿಮೆ ಇದ್ದು, ಈ ಬಂಡವಾಳವನ್ನು ಮೊದಲು ಮಾಡುತ್ತಿದ್ದ ವ್ಯವಹಾರದಲ್ಲಿನ ಉಳಿತಾಯ ಮತ್ತು ಲಾಭಾಂಶಗಳಿಂದ ಮಿಗತೆ ಹಣವನ್ನೆ ಪ್ರಮುಖವಾಗಿ ತೊಡಗಿಸಿಕೊಳ್ಳಲಾಗಿದೆ. ಬ್ಯಾಂಕ್ ಮತ್ತು ಸೊಸೈಟಿಗಳಿಂದ ಸಾಲವನ್ನು ಪಡೆಯುವುದು ಕಷ್ಟಕರವಾಗಿರುವುದರಿಂದ ಅಥವಾ ಬ್ಯಾಂಕ್‌ಗಳು ಸಾಲಕ್ಕೆ ಆಧಾರಿತವಾಗಿ ಕೇಳುವ ಮೌಲ್ಯಧಾರಿತ ವಸ್ತುಗಳನ್ನು ನೀಡುವುದು ಸಾಧ್ಯವಾಗದಿರುವುದು. ಬ್ಯಾಂಕ್ ಮತ್ತು ಸೊಸೈಟಿಗಳಿಂದ ಸಾಲಪಡೆದು ವ್ಯಾಪಾರ ಪ್ರಾರಂಭಿಸುವುದು ದ್ವಿತೀಯ ಸ್ಥಾನವನ್ನು ಪಡೆಯುತ್ತದೆ. ರೂಮುಗಳು ಒಂದಕ್ಕೊಂದು ತಾಗಿಕೊಂಡಿರುವುದರಿಂದ ಕಿಟಕಿಗಳನ್ನು ಇಡಲು ಸಾಧ್ಯವಾಗಿಲ್ಲ. ಕೊಠಡಿಗಳಲ್ಲಿ ಗಾಳಿ ಬೆಳಕಿನ ಕೊರತೆಯನ್ನು ನೀಗಿಸಲು ದೀಪ ಹಾಗೂ ಪ್ಯಾನ್ ವ್ಯವಸ್ಥೆ ಮಾಡಿರುವುದು ಕಂಡುಬರುತ್ತದೆ. ಎಲ್ಲಾ ಅತಿಥಿ ಗೃಹಗಳಲ್ಲಿ ಕೊಠಡಿಗಳು ಡಬಲ್ ಬೆಡ್‌ರೂಂ ವ್ಯವಸ್ಥೆಯಿಂದ ಕೂಡಿವೆ. ಪ್ರವಾಸಿಗರು ಒಬ್ಬರಿರಲಿ ಇಬ್ಬರಿರಲಿ ಕೊಠಡಿಯೊಂದಕ್ಕೆ ಡಬಲ್ ಬೆಡ್‌ರೂಮು ದರವನ್ನೆ ಪಡೆಯಲಾಗುತ್ತದೆ. ಹಾಗಾಗಿ ಪ್ರವಾಸಿಗರು ಮತ್ತೊಬ್ಬ ಪ್ರವಾಸಿಗರನ್ನು ಜೊತೆ ಮಾಡಿಕೊಂಡು ಬಾಡಿಗೆಗೆ ಕೊಠಡಿ ಪಡೆಯುತ್ತಾರೆ. ಅತಿಥಿಗೃಹಗಳಲ್ಲಿ ರೂಮುಗಳ ಬಾಡಿಗೆಯು ಸೀಸನ್ (ನವೆಂಬರ್ -ಏಪ್ರಿಲ್)ನಲ್ಲಿ ದಿನ ಒಂದಕ್ಕೆ ರೂ 120 ರಿಂದ 350ಗಳ ವರೆಗೆ ಇರುತ್ತದೆ. ಒಂದು ದಿನ ಎಂದರೆ 24 ಘಂಟೆಗಳು ಎಂದರ್ಥವಲ್ಲ. ಪ್ರವಾಸಿಗರು ಕೊಠಡಿಯನ್ನು ಯಾವ ಸಮಯದಲ್ಲಿ ಪಡೆದರೂ ಬಾಡಿಗೆಯನ್ನು ಬೆಳಿಗ್ಗೆ ಸಮಯ 9 ಅಥವಾ 10ಗಂಟೆಯಿಂದ ಮರುದಿನ ಬೆಳಿಗ್ಗೆ9 ಅಥವಾ 10 ಗಂಟೆಯ ವರೆಗೆ ಒಂದು ದಿನವೆಂದು ನಿರ್ಧರಿಸಿ ಬಾಡಿಗೆ ಪಡೆಯಲಾಗುತ್ತದೆ. ಇದನ್ನು ಚೆಕ್‌ಔಟ್ ಸಮಯ ಎಂದು ಕರೆಯಲಾಗುತ್ತದೆ. ಈ ಬಗೆಯ ಮಾಹಿತಿ ಒದಗಿಸುವ ಬೋರ್ಡ್‌ಗಳನ್ನು ಅತಿಥಿಗೃಹಗಳ ಕೌಂಟರ್ ಹತ್ತಿರ ಹಾಕಿರುವುದು ಕಂಡುಬರುತ್ತದೆ.

ದೊರೆಯುವ ಸೌಲಭ್ಯಗಳು

ಹಂಪೆಯ ಅತಿಥಿ ಗೃಹವೊಂದರಲ್ಲಿ ಮಾತ್ರ ಸ್ಟೇಷನರಿ ಶಾಪ್ ಮತ್ತು ಪುಸ್ತಕ ಮಾರಾಟದ ಅಂಗಡಿ ವ್ಯವಸ್ಥೆಯಿರುವುದು ಕಂಡುಬರುತ್ತದೆ. ಹಾಗೂ ಖನಿಜಯುಕ್ತ ನೀರಿನ ಬಾಟಲುಗಳು, ವಿವಿಧ ಬಗೆಯ ತಂಪು ಪಾನೀಯಗಳು ಒದಗಿಸಲಾಗುತ್ತದೆ. ಈ ಅತಿಥಿಗೃಹದಲ್ಲಿ ಪ್ರವಾಸಿಗರ ಉಪಯೋಗಕ್ಕಾಗಿ ಪುಸ್ತಕವನ್ನು ಕೌಂಟರ್‌ನಲ್ಲಿ ಇಡಲಾಗಿದೆ.ಅದರಲ್ಲಿ ಪ್ರತಿಯೊಂದು ರೂಮಿನಲ್ಲಿ ತಂಗಿದ ಪ್ರವಾಸಿಗರು ತಮಗೆ ಬೇಕಾದ ವಸ್ತುಗಳನ್ನು ತಾವು ಅತಿಥಿ ಗೃಹದಲ್ಲಿ ತಂಗಿರುವವರೆಗೂ

[illegible]

[illegible]

[illegible]

ತಮ್ಮ ರೂಮು ನಂಬರಿನ ಪ್ರತ್ಯೇಕ ಪುಸ್ತಕದಲ್ಲಿ ನಮೂದಿಸಿ ಬಳಸಿಕೊಳ್ಳುವ ಅವಕಾಶ ಒದಗಿಸಲಾಗಿದೆ.ಅವುಗಳ ಒಟ್ಟು ಮೊತ್ತವನ್ನು ಪ್ರವಾಸಿಗರು ರೂಮು ಬಿಡುವ ಸಂದರ್ಭದಲ್ಲಿ ಪಡೆಯಲಾಗುತ್ತದೆ. ಮತ್ತೊಂದು ಅತಿಥಿಗೃಹದಲ್ಲಿ ಮಿನರಲ್ ವಾಟರ್ ಬಾಟಲ್ ಮತ್ತು ಕೂಲ್‌ಡ್ರಿಂಕ್ಸ್‌ಗಳನ್ನು ಪೂರೈಸುವುದರೊಂದಿಗೆ ಇಂಟರ್‌ನೆಟ್, ಇ-ಮೇಲ್ ಸೌಲಭ್ಯವನ್ನು ಸಹ ಕಲ್ಪಿಸಲಾಗಿದೆ.

ಎರಡರಿಂದ ನಾಲ್ಕು ರೂಮುಗಳಿರುವ ಅತಿಥಿಗೃಹಗಳಲ್ಲಿ ವಾಸದ ಮನೆಯ ಪಕ್ಕದ ರೂಮುಗಳನ್ನೆ ಬಾಡಿಗೆಗೆ ನೀಡಿರುವುದು ಕಂಡುಬರುತ್ತದೆ. ಆದರೆ ಕೂಲ್‌ಡ್ರಿಂಕ್ಸ್, ಮಿನಿರಲ್‌ವಾಟರ್ ಬಾಟಲ್, ಸಿಗರೇಟ್‌ಗಳು ಇತ್ಯಾದಿಗಳನ್ನೇನೂ ಒದಗಿಸಲಾಗುವುದಿಲ್ಲ. ಪ್ರವಾಸಿಗರು ಕೇಳಿದರೆ ಮನೆಯಲ್ಲಿ ತಯಾರಿಸಬಹುದಾದ ಟೀ, ಕಾಫಿ, ಉಪಹಾರ ಮತ್ತು ಊಟದ ವ್ಯವಸ್ಥೆಯನ್ನು ಮಾಡಲಾಗುತ್ತದೆ. ಈ ಪ್ರವಾಸಿಗರನ್ನು ಪೇಯಿಂಗ್ ಗೆಸ್ಟ್‌ಗಳಂತೆ ಉಪಚರಿಸಲಾಗುತ್ತದೆ. ಹಾಗಾಗಿ ಕೆಲವು ವಿದೇಶಿ ಪ್ರವಾಸಿಗರು ಇಂತಹ ಅತಿಥಿಗೃಹಗಳಲ್ಲಿ ತಂಗಲು ಇಷ್ಟಪಡುವುದು ಕಂಡುಬರುತ್ತದೆ. ಅತಿಥಿಗೃಹಗಳಲ್ಲಿ ರೂಮುಗಳನ್ನು ಪ್ರತಿದಿನ ಸ್ವಚ್ಚಗೊಳಿಸಲಾಗುತ್ತದೆ. ಪ್ರತಿ ಎರಡು ದಿನಗಳಿಗೊಮ್ಮೆ ಬೆಡ್‌ಶೀಟ್‌ಗಳನ್ನು ಬದಲಿಸಲಾಗುತ್ತದೆ, ಸೊಳ್ಳೆ ಪರದೆಯನ್ನು ಒದಗಿಸಲಾಗುತ್ತದೆ. ಪ್ರವಾಸಿಗರು ತಮ್ಮ ಬಟ್ಟೆಗಳನ್ನು ಸ್ವಚ್ಛಗೊಳಿಸಲು ಬಯಸಿದರೆ, ಆ ಕೆಲಸವನ್ನು ಮಾಡಿಸುವ ಮಾಲಿಕರು ಅದಕ್ಕೆ ಸೇವಾಶುಲ್ಕವನ್ನು ವಿಧಿಸುವುದು ಸಾಮಾನ್ಯ.

ಅತಿಥಿಗೃಹ ಸಹಿತ ರೆಸ್ಟೋರೆಂಟ್‌ಗಳು ಬೆಳಗಿನ ಉಪಹಾರ, ಊಟ, ಕಾಫಿ, ಟೀ, ಕೂಲ್‌ಡ್ರಿಂಕ್ಸ್, ಮಿನರಲ್ ವಾಟರ್ ಮುಂತಾದ ಪ್ರವಾಸಿಗರ ಅಗತ್ಯಗಳನ್ನು ಪೂರೈಸುತ್ತಿವೆ. ಪ್ರತಿಯೊಂದು ರೆಸ್ಟೋರೆಂಟ್‌ಗಳಲ್ಲಿ ಮೆನು ಇಡಲಾಗಿರುತ್ತದೆ. ವಿದೇಶಿಯರು ಕೊಟ್ಟ ಆದೇಶದ ಪ್ರಕಾರ ತಿನಿಸು ಗಳನ್ನು ತಯಾರಿಸಿ ಕೊಡಲಾಗುತ್ತದೆ. ಸಸ್ಯಾಹಾರದ ಊಟ ಮತ್ತು ತಿಂಡಿತಿನಿಸುಗಳನ್ನು ಒದಗಿಸಲಾಗುತ್ತದೆ. ಅಲ್ಲದೆ ಮೊಟ್ಟೆ ಆಧರಿಸಿದ ತಿಂಡಿ ಪದಾರ್ಥಗಳನ್ನು ಕೂಡ ತಯಾರಿಸಲಾಗುತ್ತದೆ. ಹಂಪೆಯು ದೇವಸ್ಥಾನಗಳಿಂದ ಕೂಡಿದ ಧಾರ್ಮಿಕ ಕ್ಷೇತ್ರವಾಗಿರುವುದರಿಂದ ಮಾಂಸದ ಮಾರಾಟದ ಅಂಗಡಿಗಳು ಇರುವುದಿಲ್ಲ. ಹಾಗೆಯೆ ರೆಸ್ಟೋರೆಂಟ್‌ಗಳಲ್ಲಿ ಮಾಂಸದ ಆಹಾರ ತಯಾರಿಸಲಾಗು ವುದಿಲ್ಲ. ಸ್ಥಳೀಯರು ಮಾಂಸಹಾರಿಗಳಾಗಿದ್ದರೂ ತಮ್ಮ ಮನೆಗಳಲ್ಲಿ ಮಾಂಸಾಹಾರವನ್ನು ತಯಾರಿಸಿಕೊಂಡು ಉಪಯೋಗಿಸುತ್ತಾರೆಯೆ ಹೊರತು ಮಾರಾಟ ಮಾಡುವಂತೆ ಕಂಡುಬರುವುದಿಲ್ಲ.

ಅತಿಥಿಗೃಹ ಸಹಿತ ರೆಸ್ಟೋರೆಂಟ್‌ಗಳಲ್ಲಿ ಸಾಮಾನ್ಯವಾಗಿ ಕುಟುಂಬದ ಜನರೆ ಎಲ್ಲ ಕೆಲಸಗಳನ್ನು ನಿರ್ವಹಿಸುವುದು ತಿಳಿದು ಬರುತ್ತದೆ. ಗಂಡಸರು ಅಡಿಗೆ ಕೆಲಸದಲ್ಲಿ ನಿರತರಾದರೆ ಮನೆಯಲ್ಲಿ ಹೆಂಗಸರು ಮತ್ತು ಮಕ್ಕಳು ಅವರಿಗೆ ಸಹಾಯ ಮಾಡುವುದು ಸಾಮಾನ್ಯವಾಗಿ ಕಾಣುವ ಚಿತ್ರ. ಜನ

[illegible]

[illegible]

[illegible]

ಕಡಿಮೆ ಇರುವ ಕುಟುಂಬದಲ್ಲಿ ಬೇರೆಯವರನ್ನು ಸಹಾಯಕ್ಕಾಗಿ ನೇಮಿಸಿಕೊಳ್ಳುವುದು ಕಾಣುತ್ತದೆ. ಎಲ್ಲಾ ಬಗೆಯ ಅತಿಥಿಗೃಹ ಮತ್ತು ರೆಸ್ಟೋರೆಂಟ್‌ಗಳಲ್ಲಿ ಕಸಗುಡಿಸಲು ಹಾಗೂ ಸ್ವಚ್ಛತೆಯ ಕೆಲಸಗಳಿಗೆ ಹೊರಗಿನ ಹೆಂಗಸರನ್ನು ನೇಮಕ ಮಾಡಿಕೊಳ್ಳಲಾಗುತ್ತದೆ. ಅತಿಥಿಗೃಹಗಳಲ್ಲಿ ರೂಂಗಳ ಸಂಖ್ಯೆ 10ರ ಮೇಲ್ಪಟ್ಟು ಇದ್ದರೆ, ಇಬ್ಬರು ಹೆಂಗಸರನ್ನು ನೇಮಿಸಿಕೊಳ್ಳಲಾಗುತ್ತದೆ.

ವಿದೇಶಿ ಪ್ರವಾಸಿಗರು ಯಾವಾಗಲೂ ಬಿಸಿ ಉಪಹಾರ, ಊಟವನ್ನು ಅಪೇಕ್ಷೆ ಪಡುತ್ತಾರೆ. ಇದರಿಂದ ಆರ್ಡರ್ ಕೊಟ್ಟ ನಂತರ ಆಹಾರ ಪೂರೈಸಲು ಸುಮಾರು ಮೂವತ್ತು ಮಿಷಗಳ ಕಾಲ ತೆಗೆದುಕೊಳ್ಳಲಾಗುತ್ತದೆ. ಅಡುಗೆ ತಯಾರಿಕೆಯಲ್ಲಿ ಪರಿಣಿತಿ ಹೊಂದಿದವರು ಸಾಮಾನ್ಯವಾಗಿ ಒಬ್ಬರೆ ಇರುವುದರಿಂದ ಬೇಗ ಆಹಾರ ಪೂರೈಸಲು ಸಾಧ್ಯವಾಗುವಂತೆ ಕಂಡುಬರುವುದಿಲ್ಲ. ಈ ಸಂದರ್ಭದಲ್ಲಿ ವಿದೇಶಿ ಪ್ರವಾಸಿಗರು ಟೀ, ಕಾಫಿ, ಕೂಲ್‌ಡ್ರಿಂಕ್ಸ್ ಕುಡಿಯುತ್ತಾ ಹರಟೆ ಹೊಡೆಯುತ್ತಾ ಕಾದು ಕುಳಿತಿರುತ್ತಾರೆ. ಆಗ ಕಾಲಹರಣಕ್ಕಾಗಿ ಮನೋರಂಜನೆ ನೀಡುವಂಥ ಪಾಶ್ಚಾತ್ಯ ಸಂಗೀತದ ಧ್ವನಿ ಮುದ್ರಣವನ್ನು ಮೆಲುಧ್ವನಿಯಲ್ಲಿ ಹಾಕಲಾಗುತ್ತದೆ. ಪ್ರವಾಸಿಗರ ಆಕರ್ಷಣೆ ಮಾಡಲು ಸಾಯಂಕಾಲ 7 ಗಂಟೆಯ ಹೊತ್ತಿಗೆ ಎಲ್ಲಾ ರೆಸ್ಟೋರೆಂಟುಗಳ ಮುಂದೆ ಬಣ್ಣ ಬಣ್ಣದ ಕಡಿಮೆ ಬೆಳಕು ಬೀರುವ ಬಲ್ಬುಗಳನ್ನು ತೂಗು ಹಾಕಲಾಗಿರುತ್ತದೆ. ಅತಿಥಿಗೃಹಗಳಲ್ಲಿ ತಂಗಿರುವ ವಿದೇಶಿಯರು ಅತಿಥಿಗೃಹಗಳಲ್ಲಿರುವ ರೆಸ್ಟೋರೆಂಟುಗಳಲ್ಲಿಯೆ ಉಪಹಾರ ಮತ್ತು ಊಟ ಮಾಡಬೇಕೆಂಬ ಕಡ್ಡಾಯವೇನೂ ಇಲ್ಲ. ಹಾಗಾಗಿ ಪ್ರವಾಸಿಗರು ಯಾವ ರೆಸ್ಟೋರೆಂಟುಗಳಲ್ಲಿ ಆಹಾರ ರುಚಿಕರವಾಗಿರುತ್ತದೆಯೊ ಅಲ್ಲಿ ಉಪಹಾರ ಊಟ ಮಾಡುವುದು ಕಂಡುಬರುತ್ತದೆ. ಇಲ್ಲಿ ವಿವಿಧ ಬಗೆಯ ಆಹಾರಗಳನ್ನು ರುಚಿಯಾಗಿ ತಯಾರಿಸುವ ಅಡಿಗೆಯವರಿಗೆ ತುಂಬಾ ಬೇಡಿಕೆಯಿದೆ. ಇದರಿಂದಾಗಿ ಇಲ್ಲಿಯವರು ಇತರೆ ಪ್ರವಾಸಿ ತಾಣಗಳಾದ ಗೋವ, ಹಿಮಾಚಲ ಪ್ರದೇಶ ಇತ್ಯಾದಿ ಸ್ಥಳಗಳಿಗೆ ಹೋಗಿ ವಿವಿಧ ಬಗೆಯ ಅಡುಗೆ ತಯಾರಿಸುವುದನ್ನು ಕಲಿತುಕೊಂಡು ಬರುವರೆಂದು ತಿಳಿದು ಬರುತ್ತದೆ. ಕೆಲವರು ಅಲ್ಲಿಯ ಅಡುಗೆಯವರನ್ನೆ ಕರೆತಂದು ರೆಸ್ಟೋರೆಂಟುಗಳಲ್ಲಿ ಅಡುಗೆ ತಯಾರಿಸಲು ಇಟ್ಟುಕೊಂಡಿದ್ದಾರೆ. ಇವರಿಗೆ ದಿನಕ್ಕೆ ರೂ.100 ರಿಂದ 150 ಕೂಲಿ ಕೊಟ್ಟು ಊಟ ಮತ್ತು ವಸತಿ ವ್ಯವಸ್ಥೆಯನ್ನು ಒಗಿಸುತ್ತಾರೆ. ಎಲ್ಲಾ ಅತಿಥಿಗೃಹ ಮತ್ತು ರೆಸ್ಟೋರೆಂಟ್‌ಗಳಲ್ಲಿ ಇಂಗ್ಲಿಷ್ ಭಾಷೆಯಲ್ಲಿಯೆ ವ್ಯವಹಾರ ಜರುಗುತ್ತದೆ. ಹೆಚ್ಚಿನ ಇಂಗ್ಲಿಷ್ ಜ್ಞಾನವಿಲ್ಲದವರು ವ್ಯವಹಾರಕ್ಕೆ ಅಗತ್ಯವಿರುವಷ್ಟು ಇಂಗ್ಲಿಷ್ ಭಾಷೆಯನ್ನು ಅವಶ್ಯವಾಗಿ ಕಲಿತಿರುವುದು ಕಾಣುತ್ತದೆ.

ವಿದೇಶಿ ಪ್ರವಾಸಿಗರು ತಮ್ಮ ಅತಿಥಿ ಗೃಹಗಳಿಗೆ ಬರುವ ಹಾಗೆ ವಿವಿಧ ಆಕರ್ಷಣೆಗಳನ್ನು ಮಾಡಲಾಗುತ್ತದೆ. ಪ್ರತಿಯೊಂದು ಅತಿಥಿ ಗೃಹಗಳಲ್ಲಿ ವಿದೇಶಿಯರು ಬಂದಾಗ ಅವರು ಸ್ಪಂದಿಸುವಂತೆ ಹಲೋ ಬಾಬಾ ಎಂದು ಸಂಬೋಧಿಸಲಾಗುತ್ತದೆ. ಹಲೋ ಬಾಬಾ ಎಂಬುದು ವಿದೇಶಿಯರಿಗೆ ತುಂಬಾ ಮೆಚ್ಚುಗೆಯಾಗುವ ಮಾತಾಗಿದೆ. ವಿದೇಶಿ ಪ್ರವಾಸಿಗರಲ್ಲಿ ಕೆಲವರು ಅಡುಗೆ ಮಾಡುವ

ವೃತ್ತಿಯವರು ಇರುತ್ತಾರೆ. ಅಂಥವರು ಬಂದಾಗ ಅವರ ದೇಶದಲ್ಲಿನ ಅಡುಗೆಗಳನ್ನು ಸ್ಥಳೀಯರು ಕಲಿತುಕೊಳ್ಳುವ ಪ್ರವೃತ್ತಿ ಕಂಡುಬರುತ್ತದೆ. ಅಂದರೆ ಪ್ರವಾಸಿಗರ ಅಭಿರುಚಿಗಳನ್ನು ಪ್ರೊತ್ಸಾಹಿಸುತ್ತಾ ತಮ್ಮ ಅತಿಥಿಗೃಹ ಮತ್ತು ರೆಸ್ಟೋರೆಂಟುಗಳಿಗೆ ಬರುವಂತೆ ನೋಡಿಕೊಳ್ಳಲಾಗುತ್ತದೆ. ಅತಿಥಿಗೃಹದ ಮಾಲಿಕರೊಬ್ಬರು ಆಸ್ಟ್ರೇಲಿಯಾದ ಡಿಜುರೊ ವಾದ್ಯವನ್ನು ಕಲಿತು ಪ್ರವಾಸಿಗರು ಬಂದಾಗ ಅವರನ್ನು ಆಕರ್ಷಿಸಲು ಇಂಪಾಗಿ ನುಡಿಸುವುದನ್ನು ಕಾಣಬಹುದು. ಅಲ್ಲದೆ ಈ ವಾದ್ಯವನ್ನು ಬೊಂಬಿನಲ್ಲಿ ತಯಾರಿಸಿ, ಹಲವು ಬಣ್ಣಗಳಿಂದ ಶೃಂಗರಿಸಿ ಸುಮಾರು 300 ರಿಂದ 400 ರೂಪಾಯಿಗಳಿಗೆ ಪ್ರವಾಸಿಗರಿಗೆ ಮಾರಾಟ ಮಾಡಲಾಗುತ್ತದೆ. ವಿದೇಶಿ ಪ್ರವಾಸಿ ಹೆಂಗಸರು ಮೋಜಿಗಾಗಿ ತಮ್ಮ ಅಂಗಾಂಗಗಳಾದ ಕೈ, ಕಾಲು ಮತ್ತು ಪಾದಗಳ ಮೇಲೆ ವಿಭಿನ್ನ ಶೈಲಿಯ ಮೆಹಂದಿ ಚಿತ್ತಾರಗಳನ್ನು ಹಾಕಿಸಿಕೊಳ್ಳುವುದು ಕಂಡುಬರುತ್ತದೆ. ಬಗೆಯ ಬಗೆಯ ಈ ಚಿತ್ತಾರಗಳನ್ನು ಶಾಲಾ ಕಾಲೇಜುಗಳಿಗೆ ಹೋಗುವ ಸ್ಥಳೀಯ ಹುಡುಗಿಯರು ಹಾಕುತ್ತಾರೆ ಹಾಗೂ ರೂ.50 ರಿಂದ 100ರಷ್ಟು ಸಂಭಾವನೆ ಪಡೆದು ಹಣ ಗಳಿಸುತ್ತಾರೆ. ಎಲ್ಲಾ ಅತಿಥಿಗೃಹ ಮತ್ತು ರೆಸ್ಟೋರೆಂಟುಗಳಲ್ಲಿ ಆಹಾರ ಸಪ್ಲೈ ಮಾಡುವ ಅವಧಿಯಲ್ಲಿ ಕಾಲ ಕಳೆಯಲು ಚದುರಂಗ ಮತ್ತು ಕೇರಂ ಬೋರ್ಡುಗಳನ್ನು ಇಡಲಾಗಿರುತ್ತದೆ.

ಅತಿಥಿಗೃಹಗಳ ಮಾಲಿಕರು ತಮ್ಮ ಬಿಡುವಿನ ವೇಳೆಯಲ್ಲಿ ವಿದೇಶಿ ಪ್ರವಾಸಿಗರೊಂದಿಗೆ ಅವರ ಅನುಭವದ ಬಗ್ಗೆ, ಅವರ ದೇಶದ ಬಗ್ಗೆ ಹಾಗೂ ವೈಯಕ್ತಿಕ ವಿಚಾರಗಳ ಬಗ್ಗೆ ಮಾತನಾಡುವುದು ಕಂಡುಬರುತ್ತದೆ. ಕೆಲವರು ತಮ್ಮ ಹಣಕಾಸಿನ ತೊಂದರೆಗಳನ್ನು ಹೇಳಿಕೊಳ್ಳುತ್ತಾರೆ ಹಾಗೂ ವಿದೇಶಿ ಪ್ರವಾಸಿಗರಿಂದ ಹಣಕಾಸಿನ ನೆರವು ಕೂಡ ಪಡೆಯುತ್ತಾರೆ ಎಂದು ತಿಳಿದು ಬರುತ್ತದೆ. ಕೆಲವು ಸಂದರ್ಭಗಳಲ್ಲಿ ವಿದೇಶಿಯರು ತಮ್ಮ ದೇಶಕ್ಕೆ ಹೋದ ನಂತರವೂ ಹಣ ಕಳುಹಿಸಿದ ಉದಾಹರಣೆಗಳು ದೊರಕುತ್ತವೆ. ಇಂತಹ ಹಂಪೆಗೆ ಅನೇಕ ಸಾರಿ ಬಂದು ಹೋಗುವ, ಸ್ಥಳೀಯ ಸ್ನೇಹಿತರನ್ನು ಪಡೆದ ವಿದೇಶಿ ಪ್ರವಾಸಿಗರು ವಿಶಾಲ ಮನೋಭಾವದವರಾಗಿರುವುದು ಕಂಡುಬರುತ್ತದೆ. ಮಾಲಿಕರು ವಿದೇಶಿ ಪ್ರವಾಸಿಗರು ಕೇಳುವ ಅನೇಕ ವಿಷಯಗಳ ಬಗ್ಗೆ ಮಾರ್ಗದರ್ಶನ ನೀಡುವುದು, ಸ್ಮಾರಕಗಳನ್ನು ತೋರಿಸುವುದು, ಮಾರ್ಗದರ್ಶಿಗಳನ್ನು ಬೇಡಿದರೆ ತಾವೆ ಹೋಗುವುದು ಅಥವಾ ಮಾರ್ಗದರ್ಶಕರನ್ನು ಕಳುಹಿಸಿಕೊಡುವುದು ಇತ್ಯಾದಿ ಸೇವೆಗಳನ್ನು ನೀಡುವುದು ಕಾಣಬರುತ್ತದೆ. ಅತಿಥಿಗೃಹಗಳ ಮಾಲಿಕರು ವಿದೇಶಿ ಪ್ರವಾಸಿಗರನ್ನು ಆಕರ್ಷಿಸಲು ಪೈಪೋಟಿಗೆ ಇಳಿದಿರುವುದರಿಂದ ಈ ಮೇಲಿನ ಕ್ರಮಗಳನ್ನಲ್ಲದೆ, ಬಾಡಿಗೆ ಮತ್ತು ಆಹಾರ ದರಗಳನ್ನು ಕಡಿಮೆ ಮಾಡುವುದು ಮತ್ತೊಂದು ಬಗೆಯ ಕ್ರಮವಾಗಿದೆ.

ಅತಿಥಿಗೃಹ ರಹಿತ ರೆಸ್ಟೋರೆಂಟ್‌ಗಳೆಂದರೆ ವಸತಿ ಇರದೆ ಕೇವಲ ಆಹಾರ ತಿನಿಸುಗಳನ್ನು ಒದಗಿಸುವವು. ಇವುಗಳ ಸಂಖ್ಯೆ 15 ಇದೆ. ಇವುಗಳನ್ನು ಪ್ರಾರಂಭದಲ್ಲಿ ಶುರುಮಾಡುವಾಗ ಇತರ ಉದ್ಯೋಗಗಳ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡವರು, ಕಡಿಮೆ ಪ್ರಮಾಣದ ಬಂಡವಾಳ ಹೂಡಲು

ಶಕ್ತರಾದವರು ಹಾಗೂ ಸ್ನೇಹಿತರಿಂದ ಹಣ ಪಡೆದು ವ್ಯವಹಾರ ಪ್ರಾರಂಭಿಸಿದವರೆ ಹೆಚ್ಚು ಸಂಖ್ಯೆಯಲ್ಲಿ ಕಂಡುಬರುತ್ತಾರೆ. ರೂ.5000ದೊಳಗೆ ಈ ವ್ಯವಹಾರದಲ್ಲಿ ಬಂಡವಾಳ ತೊಡಗಿಸಿದವರು ಶೇ.13.33, ರೂ.5000-10000ದೊಳಗೆ ಬಂಡವಾಳ ವಿನಿಯೋಗಿಸಿದವರು ಶೇ.20, 10000-25000ದೊಳಗೆ ಬಂಡವಾಳ ಹೂಡಿದವರು ಶೇ.40ರಷ್ಟು ಇದ್ದಾರೆ. ರೂ.25 ಮೇಲ್ಪಟ್ಟು ಬಂಡವಾಳ ತೊಡಗಿಸಿಕೊಂಡವರ ಶೇ.26.67 ಇದೆ. ಇಲ್ಲಿ 25000ದೊಳಗೆ ಬಂಡವಾಳ ಹೂಡಿದವರು ಶೇ. 73.33ರಷ್ಟಿದ್ದರೆ, 25000 ಮೇಲ್ಪಟ್ಟು ಬಂಡವಾಳ ಹೂಡಿಕೆದಾರರ ಸಂಖ್ಯೆ 26.67 ಇರುವುದು ಅಂಕಿ-ಅಂಶಗಳಿಂದ ತಿಳಿದುಬರುತ್ತದೆ. ಇವರಲ್ಲಿ ಶೇ.20ರಷ್ಟು ಜನ ಬ್ಯಾಂಕ್ ಸಾಲಪಡೆದು ಉದ್ಯಮದಲ್ಲಿ ತೊಡಗಿದರೆ ಶೇ.80ರಷ್ಟು ಜನ ಇತರೆ ಮೂಲಗಳಾದ ಸ್ವಂತ ಉಳಿತಾಯ, ಸ್ನೇಹಿತರು, ಸಂಬಂಧಿಕರಿಂದ ಹಣ ಪಡೆದು ತೊಡಗಿಸಿದ್ದಾರೆ(ಕೋಷ್ಟಕ-18). ಅತಿಥಿಗೃಹ ರಹಿತ ರೆಸ್ಟೋರೆಂಟ್‌ಗಳಲ್ಲಿ ಉಪಹಾರ, ಊಟ ಮತ್ತು ಕೂಲ್‌ಡ್ರಿಂಕ್ಸ್, ಟೀ, ಕಾಫಿ ವ್ಯವಸ್ಥೆ ಮಾತ್ರ ಇರುತ್ತದೆ. ಅತಿಥಿ ಗೃಹಗಳಲ್ಲಿನ ವಿದೇಶಿ ಪ್ರವಾಸಿಗರು ಹಾಗೂ ರೆಸ್ಟೋರೆಂಟ್ ಸಹಿತ ಅತಿಥಿ ಗೃಹಗಳಲ್ಲಿನ ಪ್ರವಾಸಿಗರು ಈ ರೆಸ್ಟೋರೆಂಟುಗಳಿಗೆ ಬಂದು ಟೀ, ಕಾಫೀ, ಉಪಹಾರ, ಊಟ ಮಾಡಿ ಹೋಗುವುದು ಕಂಡುಬರುತ್ತದೆ. ಈ ಬಗೆಯ ರೆಸ್ಟೋರೆಂಟ್‌ಗಳಲ್ಲಿ ಆಹಾರ ರುಚಿಕರವಾಗಿ ಮತ್ತು ಸ್ವಚ್ಛವಾಗಿರುತ್ತದೆ ಹಾಗೂ ದರಗಳು ಕಡಿಮೆಯಾಗಿರುತ್ತವೆ. ಈ ರೆಸ್ಟೋರೆಂಟ್‌ಗಳಿಗೆ ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಭೇಟಿ ನೀಡುತ್ತಾರೆ ಎಂದು ತಿಳಿದುಬರುತ್ತದೆ. ಪ್ರವಾಸಿಗರು ವಿವಿಧ ರೆಸ್ಟೋರೆಂಟ್‌ಗಳಿಗೆ ಒಮ್ಮೆಯಾದರೂ ಭೇಟಿ ನೀಡುತ್ತಾರೆ, ಹಾಗೂ ರೆಸ್ಟೋರೆಂಟ್‌ಗಳ ಆಹಾರದ ರುಚಿ, ದರ ಇತ್ಯಾದಿಗಳ ಬಗ್ಗೆ ಬರುವ ಪ್ರವಾಸಿಗರಿಗೆ ಮಾಹಿತಿ ನೀಡುತ್ತಾರೆ. ಇದರಿಂದ ಈ ರೆಸ್ಟೋರೆಂಟ್‌ಗಳಿಗೆ ಪ್ರಚಾರ ಸಿಗುತ್ತದೆ. ಅಲ್ಲದೆ ಲೋನ್ಲಿ ಪ್ಲಾನೆಟ್ ಪುಸ್ತಕದಲ್ಲಿ ಕೂಡ ರೆಸ್ಟೋರೆಂಟ್‌ಗಳ ವಿವಿಧ ಆಹಾರ ಪದಾರ್ಥಗಳು, ಧರಗಳ ಬಗ್ಗೆ ವಿವರಣೆ ದೊರಕುತ್ತದೆ.ಹಾಗಾಗಿ ಪ್ರವಾಸಿಗರು ಮಾಹಿತಿ ದೊರೆತ ರೆಸ್ಟೋರೆಂಟುಗಳಿಗೆ ಹುಡುಕಿ ಕೊಂಡು ಬರುತ್ತಾರೆ.

ಅತಿಥಿಗೃಹ ರಹಿತ ಬಹುತೇಕ ರೆಸ್ಟೋರೆಂಟ್‌ಗಳಲ್ಲಿ ಅಡುಗೆಯವರು ಒಬ್ಬರೆ ಇರುತ್ತಾರೆ. ಅವರು ದಿನಕೂಲಿಯವರಾಗಿರಬಹುದು ಅಥವಾ ರೆಸ್ಟೋರೆಂಟಿನ ಮಾಲಿಕರೆ ಅಡುಗೆ ತಯಾರಕರಾಗಿರಬಹುದು. ಇಂಥ ರೆಸ್ಟೋರೆಂಟ್‌ಗಳಿಗೆ ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಭೇಟಿ ನೀಡಿದಾಗ ಅಡುಗೆಯವರಿಗೆ ಬಿಡುವೆ ಇರುವುದಿಲ್ಲ. ಆಹಾರ ತಯಾರಿಸುವ ರೆಸ್ಟೋರೆಂಟ್ ಮಾಲಿಕರೊಬ್ಬರನ್ನು ಅಡುಗೆಯ ಕೆಲಸಕ್ಕೆ ಬೇರೆ ಜನ ನೇಮಿಸಿಕೊಳ್ಳುವ ಬಗ್ಗೆ ಕೇಳಲಾಯಿತು. ಅವರು 3 ವರ್ಷಗಳ ಕೆಳಗೆ ಒಬ್ಬ ಅಡುಗೆಯವನನ್ನು ನೇಮಿಸಿಕೊಂಡಿದ್ದ ಬಗ್ಗೆ ಹಾಗೂ ಅವನಿಗೆ ತಿಂಗಳಿಗೆ 3000 ಸಾವಿರ ರೂ.ಸಂಬಳ, ಊಟ ಮತ್ತು ವಸತಿ ನೀಡಿದ್ದ ಬಗ್ಗೆ ವಿವರಿಸಿದರು. ಅಲ್ಲದೆ ಕೆಲಸ ಮಾಡುವವರು ಯಾವಾಗ ಬಿಟ್ಟು ಹೋಗುತ್ತಾರೆ ಎಂಬುದು ಗೊತ್ತಿಲ್ಲವೆಂದು ಉತ್ತರಿಸಿದರು.

[illegible]

[illegible]

ಹಾಗಾಗಿ ಅಡುಗೆಯವರನ್ನು ಕೆಲಸದಿಂದ ಬಿಡಿಸಿದೆವು ಎಂಬುದು ಅವರ ಉತ್ತರವಾಗಿತ್ತು. ಅವರಿಗೆ ತಮ್ಮ ಮಕ್ಕಳು ಮತ್ತು ಹೆಂಡತಿ ಸಹಾಯ ಮಾಡುವುದರಿಂದ ತಿಂಗಳಿಗೆ 3000 ರೂ ಉಳಿತಾಯವಾಗುವುದು ಕೂಡ ಈ ಬಗೆಯ ನಿಲುವಿಗೆ ಕಾರಣವಾಗಿರಬಹುದಾಗಿದೆ. ರೆಸ್ಟೋರೆಂಟ್‌ಗಳಲ್ಲಿ ಕೂಲಿಗಾಗಿ ಅಡುಗೆ ಕೆಲಸವನ್ನು ಮಾಡಿದವರು ಕೆಲಸ ಬಿಟ್ಟ ನಂತರ ತಾವೇ ರೆಸ್ಟೋರೆಂಟ್‌ಗಳನ್ನು ಆರಂಭಿಸಿರುವ ಉದಾಹರಣೆಗಳಿವೆಯೆ ಎಂದು ಮಾಲಿಕರನ್ನು ಕೇಳಲಾಯಿತು. ಪ್ರಾರಂಭದ ಹಂತದಲ್ಲಿ ಗೋವಾದಿಂದ ಹಾಗೂ ಇತರ ಪ್ರವಾಸಿ ತಾಣಗಳಿಂದ ಅಡುಗೆಯವರನ್ನು ಕರೆತರುವುದಿತ್ತು ಎಂದು ತಿಳಿದುಬರುತ್ತದೆ. ಆದರೆ ಅವರು ಸೀಸನ್ ಮುಗಿದ ನಂತರ ಹೊರಟು ಹೋಗುತ್ತಿದ್ದರು ಎಂದು ಹೇಳಲಾಗುತ್ತದೆ. ಕಾಲಕ್ರಮೇಣ ಅಡುಗೆಯವರನ್ನು ಕರೆತರುವ ಪ್ರವೃತ್ತಿ ಕಡಿಮೆಯಾಯಿತು. ಇದಕ್ಕೆ ಹಂಪೆಯಲ್ಲಿನ ಯುವಕರೆ ಅಡುಗೆ ಮಾಡುವುದನ್ನು ಕಲಿಯಲಾರಂಭಿಸಿದ್ದು ಕೂಡ ಕಾರಣವಾಗಿರಬಹುದಾಗಿದೆ. ಈ ಹಿಂದೆ ರೆಸ್ಟೋರೆಂಟ್‌ಗಳಲ್ಲಿ ಸಪ್ಲೈ ಮಾಡುವವರಿಗೆ ಅಡುಗೆ ಮಾಡುವುದು ಫ್ಯಾಸನ್ನಾಗಿತ್ತು, ಪ್ರವಾಸಿಗರ ಜೊತೆಗೆ ಹೋಗುವುದು ಮೋಜಾಗಿತ್ತು. ಹಂಪೆಯ ರೆಸ್ಟೋರೆಂಟುಗಳಲ್ಲಿ ಅಡುಗೆ ಮಾಡುವ ಇಬ್ಬರು ಯುವಕರು ವಿದೇಶಿ ಯುವತಿಯರನ್ನು ಮದುವೆಯಾಗಿ ಹೋಗಿದ್ದಾರೆ. ರೆಸ್ಟೋರೆಂಟ್‌ಗಳಲ್ಲಿ ಅಡುಗೆ ಮಾಡುತ್ತಿದ್ದವರು ಸ್ವಂತ ರೆಸ್ಟೋರೆಂಟ್‌ಗಳನ್ನು ತೆರೆದಿರುವುದು ಇಲ್ಲವೆಂದು ಹೇಳಲಾಗುತ್ತದೆ. ಇಂಥವರು ರೆಸ್ಟೋರೆಂಟ್ ಗಳನ್ನು ಶುರು ಮಾಡಲು ಅಗತ್ಯವಾದ ಬಂಡವಾಳ ಇಲ್ಲದವರಾಗಿದ್ದರು ಹಾಗೂ ಇವರು ಬೇರೆಯವರ ಆಸರೆ, ಬೆಂಬಲ ಇಲ್ಲದವರು ಮೂಲತಃ ಇವರೆಲ್ಲ ಬಡಕುಟುಂಬಗಳಿಂದ ಬಂದವರು. ಹಾಗಾಗಿ ಅಡುಗೆ ಮಾಡುವವರು ತಮ್ಮದೆ ಆದ ರೆಸ್ಟೋರೆಂಟುಗಳನ್ನು ಶುರುಮಾಡಲು ಸಾಧ್ಯವಾಗದಿರಬಹುದಾಗಿದೆ. ಅಡುಗೆಯವರು ಸ್ವಂತ ರೆಸ್ಟೋರೆಂಟ್ ಪ್ರಾರಂಭಿಸಿದರೆ ನಿಮಗೆ ವ್ಯವಹಾರದಲ್ಲಿ ಪೈಪೋಟಿಯಾಗುವುದಿಲ್ಲವೆ ಎಂದು ಕೇಳಲಾಯಿತು. ಅದಕ್ಕೆ ರೆಸ್ಟೋರೆಂಟುಗಳ ಮಾಲೀಕರು ಅದರಿಂದ ತಮಗೇನೂ ನಷ್ಟವಿಲ್ಲವೆಂದೂ ಅವರ ವ್ಯಾಪಾರ ಅವರಿಗೆ ಎಂದೂ ಅಭಿಪ್ರಾಯಪಟ್ಟರು. ಅವರವರ ದುಡಿಮೆಗೆ ತಕ್ಕ ಪ್ರತಿಫಲ ಅವರವರಿಗೆ ಸಿಗುತ್ತದೆ ಎಂಬುದು ಅವರ ನಿಲುವಾಗಿತ್ತು. ಆದರೆ ಇಂದಿಗೂ ರೆಸ್ಟೋರೆಂಟುಗಳಲ್ಲಿ ಅಡುಗೆಯವನನ್ನು ನೇಮಿಸಿ ಕೊಳ್ಳುವುದು ಮುಂದುವರಿದಿದೆ ಎಂದು ತಿಳಿದುಬರುತ್ತದೆ. ಇದಕ್ಕೆ ಮುಖ್ಯ ಕಾರಣ ಕುಟುಂಬದ ಸದಸ್ಯರ ಸಂಖ್ಯೆ ಕಡಿಮೆ ಇರುವುದು ಹಾಗೂ ಅಡುಗೆ ಮಾಡಲು ಬರದೆ ಇರುವುದೆ ಆಗಿದೆ.

ವಿದೇಶಿ ಪ್ರವಾಸಿಗರನ್ನು ಆಕರ್ಷಿಸುವ ಮತ್ತೊಂದು ಕ್ರಮವಾಗಿ, ಗ್ರಾಮದಿಂದ ಸ್ವಲ್ಪ ಆಚೆಗೆ ಹಾಗೂ ನದಿಯ ತೀರದ ದಡದಲ್ಲಿ ಗುಂಪು ಗಿಡಗಳಿಂದ ಕೂಡಿದ ನೈಸರ್ಗಿಕ ಮತ್ತು ಪ್ರಶಾಂತ ಸ್ಥಳಗಳಲ್ಲಿ ರೆಸ್ಟೋರೆಂಟುಗಳು ನಿರ್ಮಾಣವಾಗಿವೆ. ಮ್ಯಾಂಗೊ ಟ್ರಿ ಎಂಬ ಹೆಸರಿನ ರೆಸ್ಟೋರೆಂಟಿಗೆ ವರ್ಷದ ಎಲ್ಲ ಕಾಲದಲ್ಲೂ ಬರುವ ಪ್ರವಾಸಿಗರು ತಪ್ಪದೆ ಭೇಟಿ ನೀಡುತ್ತಾರೆ. ಇಲ್ಲಿ ಆಧುನಿಕ

[illegible]

ಸೌಲಭ್ಯಗಳಲ್ಲೊಂದಾದ ವಿದ್ಯುತ್‌ದೀಪಗಳು ಇಲ್ಲವೆ ಇಲ್ಲ. ಹಿಂದಿನ ಕಾಲದ ಲಾಟೀನುಗಳೆ ರಾತ್ರಿಯ ಹೊತ್ತಿನಲ್ಲು ಇಲ್ಲಿ ಬಳಸಲಾಗುತ್ತದೆ. ಆಧುನಿಕ ಪೂರ್ವ ಸ್ಥಿತಿ ಪ್ರವಾಸಿಗರ ಅಭಿರುಚಿಯ ಮೇಲೆ ಪ್ರಭಾವ ಬೀರಿರುವುದರಿಂದ ಈ ರೆಸ್ಟೋರೆಂಟು ಸೀಸನ್ ಮತ್ತು ಅನ್‌ಸೀಜನ್ ಕಾಲಗಳಲ್ಲೆಲ್ಲ ನಡೆಯುತ್ತದೆ. ಈ ಮಾದರಿಯ ಮತ್ತೊಂದು ರೆಸ್ಟೋರೆಂಟ್ ಎಂದರೆ ರಿವರ್ ವ್ಯೂವ್ ಗಾರ್ಡನ್ ಎಂಬುದು. ಗ್ರಾಮದ ಒಳಗಡೆ ಇರುವ ರೆಸ್ಟೋರೆಂಟ್‌ಗಳಲ್ಲಿ ಪ್ರವಾಸಿಗರ ಆಕರ್ಷಣೆಗಾಗಿ ಕಡಿಮೆ ಬೆಳಕುಳ್ಳ ವಿದ್ಯುತ್ ದೀಪಗಳ ಅಲಂಕಾರ ಮಾಡಲಾಗಿರುತ್ತದೆ ಹಾಗೂ ಮನೋರಂಜನೆಗಾಗಿ ಪಾಶ್ಚಿಮಾತ್ಯ ಸಂಗೀತದ ಕ್ಯಾಸೆಟ್ ಸದಾ ಹಾಕಲಾಗಿರುತ್ತದೆ. ವಿವಿಧ ರೆಸ್ಟೋರೆಂಟುಗಳ ಬೇರೆ ಬೇರೆ ಬಗೆಯ ವಿದೇಶಿ ಮೂಲದ ಉಪಹಾರ, ತಿಂಡಿಗಳ ಮೆನು ಬೋರ್ಡ್‌ಗಳು ರೆಸ್ಟೋರೆಂಟಿನ ಮುಂಭಾಗದಲ್ಲಿ ರಸ್ತೆಯ ಪಕ್ಕದಲ್ಲಿ ಇಟ್ಟಿರುವುದು ಹಂಪೆಯಲ್ಲಿನ ಸಾಮಾನ್ಯ ನೋಟವಾಗಿದೆ. ಅತಿಥಿಗೃಹ ರಹಿತ ರೆಸ್ಟೋರೆಂಟ್‌ಗಳಲ್ಲಿ ಚೆಸ್ , ಕೇರಂ ಬೋರ್ಡ್ ಮುಂತಾದ ಒಳಕ್ರೀಡಾಂಗಣ ಸಲಕರಣೆಗಳನ್ನು ಒದಗಿಸುವ ವ್ಯವಸ್ಥೆ ಇರುವಂತೆ ಕಂಡುಬರುವುದಿಲ್ಲ. ಈ ರೆಸ್ಟೋರೆಂಟ್‌ಗಳಲ್ಲಿ ವಿದೇಶಿ ಪ್ರವಾಸಿಗರೊಂದಿಗೆ ವೈಯಕ್ತಿಕ ವಿಷಯಗಳು ಪ್ರಸ್ತಾಪವಾಗುವ ಸಾಧ್ಯತೆಗಳು ಇರುವಂತೆ ಕಂಡುಬರುವುದಿಲ್ಲ. ವಿದೇಶಿಯರು ಕೂಡ ತಮ್ಮ ಭೇಟಿಯ ಸಮಯದಲ್ಲಿ ಟೀ, ಕಾಫಿ, ಊಟ ಮೊದಲಾದವುಗಳನ್ನು ಸೇವಿಸುತ್ತಾರೆ, ಸ್ವಲ್ಪ ವಿಶ್ರಾಂತಿ ತೆಗೆದುಕೊಂಡು ಹಣಪಾವತಿ ಮಾಡಿ ಹೊರಟು ಹೋಗುತ್ತಾರೆ. ಇಸ್ರೇಲ್‌ನ ಪ್ರವಾಸಿಗರು ಮಾತ್ರ ಒಮ್ಮೊಮ್ಮೆ ತಮ್ಮ ಬಿಲ್ಲು ಪಾವತಿ ಮಾಡುವಲ್ಲಿ ಜಗಳ ಮಾಡಿದ ಸಂದರ್ಭಗಳಿವೆ ಎಂದು ತಿಳಿದುಬರುತ್ತದೆ. ಆದರೆ ಬೇರೆ ಯಾವ ಪ್ರವಾಸಿಗರಿಂದಲೂ ತೊಂದರೆಯಾಗಿಲ್ಲವೆಂದು ಮಾಲೀಕರಿಂದ ತಿಳಿದುಬರುತ್ತದೆ.

ಹೋಟೆಲ್‌ಗಳು

ಹಂಪೆಯಲ್ಲಿ ಹೋಟೆಲ್ ಮತ್ತು ರೆಸ್ಟೋರೆಂಟ್‌ಗಳ ವ್ಯತ್ಯಾಸ ತುಂಬಾ ಸರಳವಾಗಿದೆ. ಕೇವಲ ವಿದೇಶಿ ಪ್ರವಾಸಿಗರ ಆಹಾರವನ್ನು ತಯಾರಿಸಿ ಮಾರುವ ಸ್ಥಳ ರೆಸ್ಟೋರೆಂಟ್ ಆದರೆ ದೇಶಿ ಪ್ರವಾಸಿಗರಿಗೆ ಸೇವೆ ಒದಗಿಸುವುದು ಹೋಟೆಲ್‌ಗಳಾಗಿವೆ. ಕಡಿಮೆ ಹಣವನ್ನು ಖರ್ಚು ಮಾಡಬಯಸುವ ಈ ಹೋಟೆಲ್‌ಗಳಿಗೆ ವಿದೇಶಿ ಪ್ರವಾಸಿಗರು ಕೂಡ ಹೋಗುತ್ತಾರೆ. ಆದ್ದರಿಂದ ಇವುಗಳಲ್ಲಿ ವಿದೇಶಿಯರ ಅಭಿರುಚಿಗೆ ತಕ್ಕಂತೆ ತಾಲೀ ಎಂದು ಕರೆಯುವ ಊಟ ತಯಾರಿಸಲಾಗುತ್ತದೆ. ಇದು 2 ಚಪಾತಿ, 2 ವಿಧವಾದ ಪಲ್ಯ, 1 ಬಟ್ಟಲು ಅನ್ನ, 1 ಲೋಟ ಮೊಸರು ಮತ್ತು ಸಾಂಬಾರನ್ನು ಒಳಗೊಂಡಿರುತ್ತದೆ. ಇದರ ದರ ರೂ 25 ಆಗಿರುತ್ತದೆ. ಈ ಹೋಟೆಲ್‌ಗಳಲ್ಲಿ ಕೂಲ್ ಡ್ರಿಂಕ್ಸ್ ವ್ಯಾಪಾರ ಕೂಡ ಇರುತ್ತದೆ. ದೇಶಿಯ ಪ್ರವಾಸಿಗರಿಗಾಗಿ ಸ್ಥಳೀಯ ತಿನಸು, ಉಪಹಾರಗಳಾದ ಇಡ್ಲಿ, ಪೂರಿ, ಬಜಿ, ಪುರಿ(ಮಂಡಕ್ಕಿ) ಮೊದಲಾದವುಗಳನ್ನು ತಯಾರಿಸಲಾಗುತ್ತದೆ.

[illegible]

[illegible]

ಈ ರೀತಿಯ ಹೋಟೆಲುಗಳ ಸಂಖ್ಯೆ 6 ಇವೆ. ಇವುಗಳನ್ನು ಲಿಂಗಾಯತರು, ನಾಯಕರು ಮತ್ತು ಮುಸ್ಲಿಮರು ನಡೆಸುತ್ತಿದ್ದಾರೆ. ವಿದೇಶಿಯರಿಗೆ ಕೊಡುವ ಊಟವನ್ನೆ ದೇಶಿಯ ಜನರಿಗೆ ಕೊಟ್ಟರೆ ಅವರಿಂದ ರೂ.15 ಪಡೆಯುತ್ತಾರೆ. ಹಾಗಾಗಿ ವಿದೇಶಿ ಪ್ರವಾಸಿಗರಿಗೆ ಹೆಚ್ಚಿನ ಆದ್ಯತೆ ನೀಡುವುದು ಸಹಜವಾಗಿದೆ. ದೇಶೀಯರಿಗಾಗಿಯೆ ಆಹಾರ, ಉಪಹಾರಗಳನ್ನು ತಯಾರಿಸುವ ಹೋಟೆಲುಗಳ ಸಂಖ್ಯೆ 14 ಇವೆ. ಸಾಯಂಕಾಲ ಬಂಡಿಯ ಮೇಲೆ ತಿನಸು ತಯಾರಿಸಿ ಮಾರುವ ಹೋಟೆಲ್‌ಗಳನ್ನು ಮಧ್ಯಮ ವರ್ಗದವರು ಮತ್ತು ಬಡ ಕುಟುಂಬಗಳು ನಡೆಸುತ್ತಿವೆ. ಇಂತಹವು ಒಂಬತ್ತು ಹೋಟೆಲುಗಳು ಇವೆ.

ಹೊಟೇಲ್‌ಗಳ ವ್ಯವಹಾರವನ್ನು ಪ್ರಾರಂಭಿಸಿದವರು ಸುಮಾರು 20 ಜನ. ಇವರಲ್ಲಿ ಶೇ.30ರಷ್ಟು ರೂ.5,000ದೊಳಗೆ ಬಂಡವಾಳ ತೊಡಗಿಸಿಕೊಂಡಿದ್ದರೆ, 5,000-10,000ದೊಳಗೆ ಬಂಡವಾಳ ಹೂಡಿದವರ ಸಂಖ್ಯೆ ಶೇ.30, 10,000-25,000ದೊಳಗೆ ಬಂಡವಾಳ ಹೂಡಿದವರ ಸಂಖ್ಯೆ ಶೇ.25ರಷ್ಟಾಗಿದೆ. 25,000ಮೇಲ್ಪಟ್ಟು ಬಂಡವಾಳ ಹೂಡಿದವರ ಸಂಖ್ಯೆ ಕೇವಲ ಶೇ.15ರಷ್ಟು ಇದೆ. ಇಲ್ಲಿ ಕಾಣಬರುವ ಅಂಶವೆಂದರೆ ಕಡಿಮೆ ಬಂಡವಾಳ ತೊಡಗಿಸಿದವರ ಸಂಖ್ಯೆಯು ಶೇ.85ರಷ್ಟು ಇದೆ. ಇದರಲ್ಲಿ ಬ್ಯಾಂಕಿನ ಹಣಕಾಸಿನ ಸಹಾಯ ಪಡೆದವರ ಸಂಖ್ಯೆ ಶೇ.25ರಷ್ಟು ಇದ್ದರೆ, ಶೇ.75ರಷ್ಟು ಭಾಗ ಉದ್ಯಮೆದಾರರು ಇತರ ಮೂಲಗಳಾದ ಸ್ವಂತ ಉಳಿತಾಯ, ಸ್ನೇಹಿತರು ಹಾಗೂ ಬಂಧುಗಳಿಂದ ಹಣಕಾಸಿನ ಸಹಾಯ ಪಡೆದವರಾಗಿದ್ದಾರೆ. ಪ್ರವಾಸೋದ್ಯಮದ ಆರ್ಥಿಕ ಚಟುವಟಿಕೆಗಳಲ್ಲಿ ಬಡವರು ಮತ್ತು ಕೃಷಿಕಾರ್ಮಿಕರು ತೊಡಗಿಸಿಕೊಂಡಿದ್ದಾರೆ. ಅವುಗಳಲ್ಲಿ ಸಂಚಾರಿ ಹೋಟೆಲ್(ಬಂಡಿ ಹೋಟೆಲ್)ಗಳು ಸೇರಿವೆ. ಇವುಗಳ ಸಂಖ್ಯೆ 9 ಇದೆ. ಇವರೆಲ್ಲ ರೂ.5,000ದೊಳಗೆ ಹಣವನ್ನು ತೊಡಗಿಸಿ ವ್ಯಾಪಾರ ಪ್ರಾರಂಭಿಸಿದವರು. ಹಾಗೂ ಬ್ಯಾಂಕಿನ ಹಣಕಾಸಿನ ನೆರವನ್ನು ಪಡೆದಿಲ್ಲ. ಬ್ಯಾಂಕಿನಲ್ಲಿ ಸಾಲಪಡೆಯಲು ಬ್ಯಾಂಕಿನವರು ಕೇಳುವ ವಸ್ತುಗಳ ಆಧಾರಗಳಾಗಲಿ ಅಥವಾ ಇನ್ಯಾವುದೆ ಆಧಾರಗಳನ್ನು ಒದಗಿಸಲು ಆಗದೆ ಇರುವುದರಿಂದ ಸಾಲ ಪಡೆಯಲು ಕಷ್ಟವೆಂದು ತಿಳಿಸುತ್ತಾರೆ(ಕೋಷ್ಟಕ-18).

ಆಹಾರದ ವಿವಿಧ ಸೌಲಭ್ಯಗಳು

ಬೇಕರಿ, ಕೂಲ್‌ಡ್ರಿಂಕ್ಸ್, ಹಣ್ಣು-ಹಂಪಲುಗಳು ಮತ್ತಿತರ ಅಗತ್ಯ ವಸ್ತುಗಳು ದೊರೆಯುವ ಬಗೆಗೆ ಇಲ್ಲಿ ವಿವೇಚಿಸಲಾಗಿದೆ. ಬಹುತೇಕ ವಿದೇಶಿ ಪ್ರವಾಸಿಗರು ಐಸ್‌ಕ್ರಿಮ್ ಹಾಗೂ ಕೂಲ್‌ಡ್ರಿಂಕ್ಸ್‌ಗಳನ್ನು ರೆಸ್ಟೋರೆಂಟ್ ಮತ್ತು ಹೋಟೆಲ್‌ಗಳಲ್ಲಿ ಸೇವನೆ ಮಾಡುತ್ತಾರೆ. ಜೊತೆಗೆ ಹಂಪೆಯ ಮುಖ್ಯ ಬೀದಿಗಳಲ್ಲಿ ದೊರೆಯುವ ಕೂಲ್‌ಡ್ರಿಂಕ್ಸ್ ಅಂಗಡಿಗಳಲ್ಲಿ ಕೂಡ ಉಪಯೋಗಿಸುತ್ತಾರೆ. ರೆಸ್ಟೋರೆಂಟು, ಹೋಟೆಲ್ಲುಗಳಿಗಿಂತ ಮುಖಬೀದಿಗಳ ಅಂಗಡಿಗಳಲ್ಲಿ

ಗ್ರಾಹಕರು ಕಡಿಮೆ ಇರುವುದರಿಂದ ವಿಶ್ರಾಂತಿ ತೆಗೆದುಕೊಳ್ಳುವುದು ಸಾಧ್ಯವೆಂಬುದು ಪ್ರವಾಸಿಗರ ಅಭಿಪ್ರಾಯ. ಈ ರಸ್ತೆಯ ಬದಿಯಲ್ಲಿ ತಳ್ಳು ಬಂಡಿಗಳಲ್ಲಿ ಐಸ್‌ಕ್ರೀಮ್ ಮಾರುವವರು ಮತ್ತು ಸೋಡಾ ಮಾರುವವರು ಕೂಡ ಹೆಚ್ಚು ಇದ್ದಾರೆ. ಇವರಲ್ಲಿಯೂ ವಿದೇಶಿ ಪ್ರವಾಸಿಗರು ವ್ಯವಹರಿಸುತ್ತಾರೆ. ಸಾಮಾನ್ಯವಾಗಿ ದೇಶೀಯ ಪ್ರವಾಸಿಗರು ಈ ಅಂಗಡಿಗಳಲ್ಲಿ ಹೆಚ್ಚು ವ್ಯವಹರಿಸುತ್ತಾರೆ. ಕೂಲ್‌ಡ್ರಿಂಕ್ಸ್ ಅಂಗಡಿಗಳನ್ನು ಪ್ರಾರಂಭ ಮಾಡಿದವರಲ್ಲಿ ಲಿಂಗಾಯಿತರು ಮೊದಲಿಗರು. ನಂತರ ಹೊಸಪೇಟೆಯ ವೈಶ್ಯರೊಬ್ಬರು ಮತ್ತೊಂದು ಅಂಗಡಿಯನ್ನು ಪ್ರಾರಂಭಿಸಿದರು. ಬೀದಿಯಲ್ಲಿ ತಳ್ಳುವ ಬಂಡಿಗಳಲ್ಲಿ ಮತ್ತು ಬೀದಿಯ ಪಕ್ಕದಲ್ಲಿ ಕುಳಿತು ವಿವಿಧ ಬಗೆಯ ಹಣ್ಣುಗಳನ್ನು ಮಾರಾಟ ಮಾಡುವವರು ಇದ್ದಾರೆ. ಇವರೆಲ್ಲರೂ ಕಡಿಮೆ ಬಂಡವಾಳ ಹೂಡಲು ಶಕ್ತರಾದ ಮಧ್ಯಮ ಮತ್ತು ಬಡವರ್ಗದವರು. ಇವರಲ್ಲಿ ವಾಲ್ಮೀಕಿ, ನಾಯಕ, ಮುಸ್ಲಿಂ, ವಡ್ಡರು ಇತ್ಯಾದಿ ಕುಟುಂಬದವರು ಇದ್ದಾರೆ. ವಿದೇಶಿ ಪ್ರವಾಸಿಗರು ತಮ್ಮ ದಿನನಿತ್ಯದ ಆಹಾರದಲ್ಲಿ ಹಣ್ಣುಗಳನ್ನು ಹೆಚ್ಚು ಬಳಸುವುದರಿಂದ ಹಣ್ಣಿನ ಬೇಡಿಕೆ ಹೆಚ್ಚಿದೆ. ಹಾಗೂ ಹಣ್ಣಿನಿಂದ ತಯಾರಿಸಿದ ಪಾನೀಯಗಳು ರೆಸ್ಟೋರೆಂಟುಗಳಲ್ಲಿ ಕೂಡ ದೊರೆಯುತ್ತದೆ. ಅದೆ ರೀತಿ ಬೇಕರಿ ಉತ್ಪನ್ನಗಳು ವಿದೇಶಿ ಪ್ರವಾಸಿಗರ ಬೇಡಿಕೆಯ ಪಟ್ಟಿಯಲ್ಲಿ ಮೊದಲಸ್ಥಾನ ಪಡೆದಿವೆ. ಹಂಪೆಯಲ್ಲಿ ಬೇಕರಿ ಅಂಗಡಿಗಳು ಎರಡಿವೆ. ಜೈನರು ಇದನ್ನು ಮೊದಲು ಪ್ರಾರಂಭಿಸಿದರು. ನಂತರ ಲಿಂಗಾಯಿತರು ಈ ವ್ಯಾಪಾರ ಮಾಡಲಾರಂಭಿಸಿದರು . ಬೇಕರಿ ಆಹಾರಗಳನ್ನು ತಾವೆ ತಯಾರಿಸದೆ ಹೊಸಪೇಟೆಯಲ್ಲಿ ಸಗಟು ವ್ಯಾಪಾರಿಗಳಿಂದ ತಂದು ಮಾರಾಟ ಮಾಡುತ್ತಿದ್ದಾರೆ. ಅವರು ಬೇಕರಿ ತಿನಿಸುಗಳ ಜೊತೆಯಲ್ಲಿ ಕೂಲ್‌ಡ್ರಿಂಕ್ಸ್‌ಗಳನ್ನು ಮಾರಾಟ ಮಾಡುತ್ತಿರುವುದು ಕಂಡುಬರುತ್ತದೆ. ಪ್ರಾರಂಭದಲ್ಲಿ ಬೇಕರಿ ವ್ಯಾಪಾರವನ್ನು ಶುರು ಮಾಡಲು ರೂ. 5,000 ರಿಂದ 10,000 ಬಂಡವಾಳವನ್ನು ತೊಡಗಿಸಲಾಗಿದೆ. ಇದರಲ್ಲಿ ಒಂದು ಬೇಕರಿ ಬ್ಯಾಂಕ್‌ನಿಂದ ಸಾಲಪಡೆದರೆ, ಇನ್ನೊಂದು ಇತರೆ ಮೂಲಗಳಿಂದ ಬಂಡವಾಳವನ್ನು ತೊಡಗಿಸಿಕೊಂಡಿದೆ.

ಹಂಪೆಯಲ್ಲಿ ವಿವಿಧ ಬಗೆಯ ಅಂಗಡಿಗಳು 31 ಇದ್ದು, ಈ ಅಂಗಡಿಗಳಲ್ಲಿ ಕಿರಾಣಿ, ಸ್ಟೇಷನರಿ, ಪುಸ್ತಕ, ಪುರಾತನ ವಸ್ತುಗಳ ಮಾರಾಟ ಮತ್ತು ತಂಪುಪಾನೀಯ ಅಂಗಡಿಗಳನ್ನು ವ್ಯಾಪಾರದ ಇತರೆ ಚಟುವಟಿಕೆಗಳಲ್ಲಿ ಇದ್ದವರೆ ಹಾಗೂ ತಕ್ಕಮಟ್ಟಿಗೆ ಆರ್ಥಿಕವಾಗಿ ಸುಸ್ಥಿತಿಯಲ್ಲಿದ್ದವರು ಈ ವ್ಯಾಪಾರಗಳನ್ನು ಪ್ರಾರಂಭಿಸಿದ್ದಾರೆ. ಅಂಗಡಿಗಳಲ್ಲಿ 10000-25000ದವರೆಗೆ ಬಂಡವಾಳ ತೊಡಗಿಸಿದವರ ಸಂಖ್ಯೆ ಶೇ.80.65 ಇದ್ದರೆ, 25ಸಾವಿರ ಮೇಲ್ಪಟ್ಟು ಬಂಡವಾಳ ತೊಡಗಿಸಿದವರು ಶೇ.19.35 ಇದೆ. ಪೆಟ್ಟಿಗೆ ಅಂಗಡಿಗಳು ಸಂಖ್ಯೆ 66 ಇವೆ. ತೆಂಗಿನಕಾಯಿ ಮಾರಾಟ ಮಾಡುವವರು ಹಾಗೂ ಚಿಲ್ಲರೆ ವ್ಯಾಪಾರಿಗಳ ಮಾರಾಟ ಮಾಡುವವರು ಸೇರಿಕೊಂಡಿದ್ದಾರೆ. ಪೆಟ್ಟಿಗೆ ಅಂಗಡಿಗಳಲ್ಲಿ ತೊಡಗಿಸಿಕೊಂಡಿರುವವರು ಬಡವರ್ಗದವರಾಗಿದ್ದು, ಇವರ ಬಂಡವಾಳವನ್ನು ವಿನಿಯೋಗವನ್ನು

[illegible]

ನೋಡಿದಾಗ, ಶೇ.30.31ರಷ್ಟು ಕುಟುಂಬಗಳು ರೂ. 5000 ವರೆಗೂ,ಶೇ.56.06ರಷ್ಟು ಕುಟುಂಬಗಳು ರೂ.5000-10000 ವರೆಗೂ ಮತ್ತು ಶೇ.13.63ರಷ್ಟು 10000 ದಿಂದ 25000 ವರೆಗೂ ಬಂಡವಾಳ ಹೂಡಿ ವ್ಯಾಪಾರವನ್ನು ಶುರುಮಾಡಿದ್ದಾರೆ. ಇವರಲ್ಲಿ ಬ್ಯಾಂಕಿಂದ ಹಣಕಾಸು ಪಡೆದವರು ಶೇ.43.94 ಆಗಿದ್ದರೆ, ಇತರೆ ಮೂಲಗಳಿಂದ ಹಣ ಪಡೆದು ಬಂಡವಾಳ ತೊಡಗಿಸಿದವರ ಪ್ರಮಾಣ ಶೇ.56.64 ಆಗಿದೆ. ಪೆಟ್ಟಿಗೆ ಅಂಗಡಿಗಳು ಕಟ್ಟಿಗೆ ಅಥವಾ ಕಬ್ಬಿಣದ ತಗಡಿನಿಂದ ಮಾಡಿದ ಪುಟ್ಟಅಂಗಡಿಗಳಾಗಿವೆ. ಇವುಗಳಲ್ಲಿ ಬೀಡಿ, ಸಿಗರೇಟು, ಪಾನ್, ಪೇಸ್ಟು, ಸೋಪು, ಬಾಳೆಹಣ್ಣು ಇತ್ಯಾದಿಗಳನ್ನು ಮಾರಾಟ ಮಾಡಲಾಗುತ್ತದೆ. ಕಡಿಮೆ ಹಣವುಳ್ಳ ಬಂಡವಾಳದಾರರು ಈ ಮಾದರಿಯ ಅಂಗಡಿಗಳನ್ನು ನಡೆಸುವುದು ಕಾಣುತ್ತದೆ. ಪ್ರಾರಂಭದಲ್ಲಿ ಸಾಲದ ಮರು ಪಾವತಿಗಾಗಿ ಪಿಗ್ಮಿ ವ್ಯವಸ್ಥೆಯನ್ನು ಮಾಡಿಕೊಳ್ಳಲಾಗಿದೆ. ಇವರು ಸಾಲ ತೆಗೆಯುವ ಮುನ್ನ ಬ್ಯಾಂಕಿಗೆ ಯಾವುದೆ ಆಧಾರ ನೀಡಿದಂತೆ ಕಾಣುವುದಿಲ್ಲ. ಬ್ಯಾಂಕಿನ ವ್ಯವಸ್ಥಾಪಕರ ಪ್ರಕಾರ ರೂ.25,000ದೊಳಗೆ ಬ್ಯಾಂಕ್ ನೀಡುವ ಸಾಲಕ್ಕೆ ಆಧಾರ ನೀಡುವ ಅಗತ್ಯ ಇಲ್ಲವೆಂದು ತಿಳಿದುಬರುತ್ತದೆ. (ಕೋಷ್ಟಕ-19).

ಸಾರಿಗೆ ಮತ್ತು ಸಂಪರ್ಕ

ಹಂಪೆಯ ಸ್ಮಾರಕಗಳು ತುಂಬಾ ವಿಶಾಲವಾದ ಪ್ರದೇಶದಲ್ಲಿ ಹರಡಿಕೊಂಡಿವೆ. ಐತಿಹಾಸಿಕ ಸ್ಮಾರಕಗಳು ಮೂರು ನಾಲ್ಕು ಚದರ ಕಿ.ಮೀ. ವಿಸ್ತೀರ್ಣಗಳಲ್ಲಿ ಚದುರಿ ಹೋಗಿವೆ. ಕೆಲವೊಂದು ಸ್ಮಾರಕಗಳನ್ನು ನೋಡಲು ಪ್ರವಾಸಿಗರು ನಡಿಗೆ, ಬೈಸಿಕಲ್ಲು, ಅಥವಾ ಆಟೋಗಳಲ್ಲಿ ಹೋಗುವುದುಂಟು. ಪ್ರವಾಸಿಗರ ಅನುಕೂಲಕ್ಕಾಗಿ ಹಂಪೆಯ ಗ್ರಾಮದಲ್ಲಿ ದ್ವಿಚಕ್ರವಾಹನ ಮತ್ತು ಬೈಸಿಕಲ್ಲು ಅಂಗಡಿಗಳನ್ನು ತೆರೆಯಲಾಗಿದೆ. ಇವುಗಳ ಸಂಖ್ಯೆ 6 ಇದೆ. ಅದರಲ್ಲಿ ಒಂದು ಪ್ರಾರಂಭದಲ್ಲಿ 25-50ಸಾವಿರ ತೊಡಗಿಸಿದ್ದು, ಇದು ಬ್ಯಾಂಕಿನಿಂದ ಸಾಲ ಪಡೆದಿದೆ. ಎರಡು ಶಾಪ್‌ಗಳು ಬ್ಯಾಂಕಿಂದ 50,000 ದಿಂದ 1,00,000 ವರೆಗೆ ಸಾಲ ಪಡೆದು ಬಂಡವಾಳವನ್ನು ತೊಡಗಿಸಿ ವ್ಯಾಪಾರವನ್ನು ಶುರುಮಾಡಿವೆ. ಉಳಿದ ಮೂರು ಶಾಪ್‌ಗಳು ಬಂಡವಾಳವನ್ನು ಇತರ ಮೂಲಗಳಿಂದ ಪಡೆದು ವ್ಯವಹಾರ ಪ್ರಾರಂಭಿಸಿವೆ. ಈ ಶಾಪ್‌ಗಳಲ್ಲಿ ದಿನದ ವಹಿವಾಟು ರೂ200-500 ವರೆಗೆ ಇರುವ ಶಾಪ್‌ಗಳ ಸಂಖ್ಯೆ 2, ರೂ500-1000 ವರೆಗೆ ಇರುವ ಶಾಪ್‌ಗಳ ಸಂಖ್ಯೆ 3 ಹಾಗೂ ರೂ1000-1500 ವರೆಗೆ ವ್ಯಾಪಾರ ಇರುವ ಶಾಪಿನ ಸಂಖ್ಯೆ ಒಂದು ಮಾತ್ರ. ಇವುಗಳಲ್ಲಿ ಅತಿಥಿಗೃಹಗಳ ಮಾಲಿಕರಾದ ಸಿಂಗ್ ಮತ್ತು ವಾಲ್ಮೀಕಿ ಜನಾಂಗದ ಕುಟುಂಬದವರು ತಲಾ ಒಂದೊಂದು ಪ್ರಾರಂಭಿಸಿದ್ದಾರೆ. ಸಿಂಗ್, ಕಿಳ್ಳೆಕ್ಯಾತ, ಲಿಂಗಾಯತ, ವಾಲ್ಮೀಕಿ ಹಾಗೂ ಮುಸ್ಲಿಮರಿಗೆ ಸೇರಿದ 10 ಆಟೋರಿಕ್ಷಾಗಳಿವೆ. ಇವರು ಆಟೋರಿಕ್ಷಾ ಕೊಂಡುಕೊಳ್ಳಲು ಬ್ಯಾಂಕಿನಲ್ಲಿ ಸಾಲ ಪಡೆದಿರುವುದು ತಿಳಿದುಬರುತ್ತದೆ.

ಆಟೋಗಳು ಹಂಪೆಯಿಂದ ಕಮಲಾಪುರ ಮತ್ತು ಹೊಸಪೇಟೆಗಳಿಗೆ ಅಗತ್ಯವಾದ ಸಾರಿಗೆ ವ್ಯವಸ್ಥೆಯನ್ನು ಒದಗಿಸುತ್ತಿವೆ. ಸರಕಾರಿ ಸಿಟಿ ಬಸ್ಸುಗಳು ಸಮಯಕ್ಕೆ ಸರಿಯಾಗಿ ಬರದಿರುವುದು ಹಾಗೂ ಅವುಗಳ ಸಂಖ್ಯೆ ಕಡಿಮೆ ಇರುವುದು ಸ್ಥಳೀಯ ಜನ ಮತ್ತು ಪ್ರವಾಸಿಗರು ಆಟೋಗಳನ್ನೆ ಹೆಚ್ಚು ಅವಲಂಬಿಸಲು ಕಾರಣವಾಗಿದೆ. ದಿನನಿತ್ಯ ಕನಿಷ್ಠ 25 ಆಟೋಗಳು ಪ್ರಯಾಣಿಕರ ಸಾಗಣೆಯಲ್ಲಿ ನಿರತವಾಗಿವೆ. ಅದರಲ್ಲಿ ಸ್ಥಳೀಯ ಆಟೋಗಳು 10 ಇದ್ದರೆ, 15 ಆಟೋಗಳು ಕಮಲಾಪುರ, ಕಡ್ಡಿರಾಂಪುರ ಮತ್ತು ಹೊಸಪೇಟೆಗೆ ಸೇರಿದವಾಗಿವೆ. ಹಂಪೆ-ಕಮಲಾಪುರ ಮಧ್ಯ 4 ಕಿ.ಮಿ.ಅಂತರವಿದ್ದು, ಪ್ರಯಾಣದರ ಒಬ್ಬ ವ್ಯಕ್ತಿಗೆ ಐದು ರೂಪಾಯಿ ಪಡೆಯಲಾಗುತ್ತದೆ. ಹೊಸಪೇಟೆಯಿಂದ ಕಡ್ಡಿರಾಂಪುರ ಗ್ರಾಮದ ಮಾರ್ಗವಾಗಿ ಹಂಪೆಗೆ 12ಕಿ.ಮೀ. ದೂರವಿದ್ದು, ಪ್ರಯಾಣದ ದರ ಒಬ್ಬರಿಗೆ 10 ರೂಪಾಯಿ ತೆಗೆದುಕೊಳ್ಳಲಾಗುತ್ತದೆ. ತುರ್ತು ಸಂದರ್ಭಗಳಲ್ಲಿ ಆಟೋ ಪ್ರಯಾಣ ದುಬಾರಿಯಾಗಿ ಪರಿಣಮಿಸುತ್ತದೆ. ಆಗ ಒಬ್ಬರು ಪ್ರಯಾಣ ಮಾಡಲು ಹಂಪೆಯಿಂದ ಕಮಲಾಪುರಕ್ಕೆ 30 ರೂಪಾಯಿ ಮತ್ತು ಹಂಪೆಯಿಂದ ಹೊಸಪೇಟೆಗೆ 75 ರೂಪಾಯಿಗಳು ಕೊಡಬೇಕಾಗುತ್ತದೆ. ಸೀಸನ್‌ನಲ್ಲಿ ಈ ಆಟೋಗಳಿಗೆ ಹೆಚ್ಚಿನ ದುಡಿಮೆಯಿದ್ದು, ಸೀಸನ್ ಇಲ್ಲದ ಸಂದರ್ಭದಲ್ಲಿ ಕಡಿಮೆ ಆದಾಯವಿರುತ್ತದೆ. ಸ್ಮಾರಕಗಳನ್ನು ನೋಡಲಿಕ್ಕೆ ಸೀಸನ್‌ನಲ್ಲಿ 1ದಿನಕ್ಕೆ ಆಟೋ ಬಾಡಿಗೆ 250ರಿಂದ 300 ರೂ.ಗಳಾಗಿದ್ದರೆ. ಸೀಸನ್ ಇಲ್ಲದ ಸಂದರ್ಭಗಳಲ್ಲಿ 100 ರಿಂದ 150 ರೂ.ಗಳು ಪಡೆಯಲಾಗುತ್ತದೆ. ಪ್ರವಾಸಿಗರ ಮತ್ತು ಸ್ಥಳೀಯರ ಪ್ರಯಾಣಕ್ಕಾಗಿ ಹೊಸಪೇಟೆ-ಕಮಲಾಪುರ ಹಾಗೂ ಹೊಸಪೇಟೆ-ಕಡ್ಡಿರಾಂಪುರ ಮಾರ್ಗವಾಗಿ ಹಂಪೆಗೆ ಹೆಚ್ಚಿನ ಬಸ್ಸಿನ ಸೌಕರ್ಯವನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ನಿಯುಕ್ತಗೊಳಿಸಿದೆ. ಹೊಸಪೇಟೆಯಿಂದ ರಾಜ್ಯ ಮತ್ತು ಹೊರರಾಜ್ಯದ ಮುಖ್ಯ ಪಟ್ಟಣ ಮತ್ತು ಧಾರ್ಮಿಕ ಸ್ಥಳಗಳಿಗೆ ನೇರ ಬಸ್ಸಿನ ಸೌಕರ್ಯವಿದೆ. ಇದರಲ್ಲಿ ಸುವಿಹಾರಿ ಬಸ್ಸುಗಳು ಒಳಗೊಂಡಿವೆ.

ಸಂಪರ್ಕ ಸೌಲಭ್ಯಗಳು

ಅಂಚೆ ಕಛೇರಿ 1973ರಲ್ಲಿ ಆರಂಭವಾಯಿತು. ಅಂದು ಚಿಕ್ಕ ಪ್ರಮಾಣದಲ್ಲಿ ಪ್ರಾರಂಭವಾದ ಈ ಶಾಖೆ 1984ರಲ್ಲಿ ಉನ್ನತಿ ಪಡೆದು ಸಬ್ ಪೋಸ್ಟ್ ಆಫೀಸ್ ಆಯಿತು.[5] ಹಂಪೆಯ ಪ್ರವಾಸೋದ್ಯಮದ ಸೀಸನ್‌ಲ್ಲಿ ವಿದೇಶೀ ಪ್ರವಾಸಿಗರು ಅಂಚೆ ಕಚೇರಿಯಲ್ಲಿ ಸ್ಟಾಂಪ್ ಮತ್ತು ಕಾಗದ ಪತ್ರಗಳನ್ನು ಸ್ಥಳಿಯರಿಗಿಂತ ಹೆಚ್ಚಿನ ಪ್ರಮಾಣದಲ್ಲಿ ತೆಗೆದುಕೊಳ್ಳುತ್ತಾರೆಂದು ಅಂಚೆ ಕಚೇರಿ ಮುಖ್ಯಸ್ಥರು ನೀಡುವ ವಿವರಗಳಿಂದ ತಿಳಿದುಬರುತ್ತದೆ. ಹಂಪೆಯ ಗ್ರಾಮಸ್ಥರ ಉಪಯೋಗಕ್ಕೆ ಮಾತ್ರ ಸೀಮಿತವಾಗಿದ್ದ ಅಂಚೆ ಕಚೇರಿ, ಬ್ಯಾಂಕ್, ಆಸ್ಪತ್ರೆ ಮತ್ತು ಪೋಲಿಸ್ ಠಾಣೆ ಸೌಲಭ್ಯಗಳು ಪ್ರವಾಸಿಗರಿಗೆ ಕೂಡ ಅನುಕೂಲಕರವಾಗಿ ಪರಿಣಮಿಸಿದೆ.

ಹಂಪೆಯಲ್ಲಿ 10 ಎಸ್.ಟಿ.ಡಿ. ಬೂತ್‌ಗಳಿವೆ. ಪ್ರಾರಂಭದಲ್ಲಿ ಈ ಬೂತ್‌ಗಳನ್ನು ಶುರು ಮಾಡಿದವರು ರೂ 25-50ಸಾವಿರ ಬಂಡವಾಳ ಹೂಡಿದ್ದಾರೆ. ಇವರಲ್ಲಿ ನಾಲ್ವರು (ಶೇ.40.00) ಬ್ಯಾಂಕಿನಿಂದ ಸಾಲ ಪಡೆದರೆ ,ಉಳಿದ ಆರು ಜನ (ಶೇ.60.00)ಇತರ ಮೂಲಗಳಿಂದ ಬಂಡವಾಳ ಹೂಡಿದ್ದಾರೆ(ಕೋಷ್ಟಕ-20). ಇವುಗಳಲ್ಲಿ 6 ಬೂತ್‌ಗಳು ರೂ 500-1,000 ವರೆಗೆ ದಿನದ ವಹಿವಾಟು ನಡೆಸಿದರೆ, ಉಳಿದ 4 ಬೂತ್‌ಗಳು ರೂ 1,000-1,500ವರೆಗೆ ವಹಿವಾಟು ನಡೆಸುತ್ತವೆ. ಸೀಜನ್‌ನಲ್ಲಿ ಅಂತರಾಷ್ಟ್ರೀಯ ಕರೆಗಳನ್ನು ಹೆಚ್ಚು ಮಾಡಲಾಗುತ್ತದೆ. ಸ್ಥಳೀಯರು ಬೂತ್‌ಗಳಿಗೆ ಬಂದು ಕರೆಗಳನ್ನು ಮಾಡುವುದು ತೀರಾ ಕಡಿಮೆ. ವಿದೇಶಿ ಪ್ರವಾಸಿಗರಿಲ್ಲದ ಅನ್ ಸೀಜನ್‌ನಲ್ಲಿ ವ್ಯಾಪಾರವಾಗದೆ ದಿನದ ಕೆಲವು ಗಂಟೆಗಳ ಎಸ್.ಟಿ.ಡಿ ಬೂತ್‌ಗಳು ಮುಚ್ಚಿರುತ್ತವೆ. ಒಬ್ಬ ಮಹಿಳಾ ಎಸ್.ಟಿ.ಡಿ. ಬೂತ್ ಮಾಲೀಕರ ಅಭಿಪ್ರಾಯದಂತೆ ಸೀಜನ್‌ನಲ್ಲಿ ವ್ಯಾಪಾರ ವಹಿವಾಟು ದಿನಕ್ಕೆ 2,000 ರಿಂದ 3,000 ರೂ ವರೆಗೂ ಇರುತ್ತದೆ. ಉಳಿದ ಅವಧಿಯಲ್ಲಿ ರೂ. 1,000 ಇರುತ್ತದೆ. ಎಸ್.ಟಿ.ಡಿ. ಬೂತ್‌ಗಳನ್ನು ತೆರೆದವರಲ್ಲಿ ಬ್ರಾಹ್ಮಣ, ಲಿಂಗಾಯತ, ಸಿಂಗ್, ವಡ್ಡ, ಕುರುಬ, ವೈಶ್ಯ ಜಾತಿ ಜನರು ಇದ್ದಾರೆ. ಇವರೆಲ್ಲರೂ ಇದರೊಂದಿಗೆ ಪ್ರವಾಸೋದ್ಯಮದ ಇತರ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವುದು ಕಂಡುಬರುತ್ತೆದೆ. ಇಂಟರ್‌ನೆಟ್ ಮತ್ತು ಇ-ಮೇಲ್ ಶಾಪುಗಳನ್ನು ಪ್ರವಾಸಿಗರ ಬೇಡಿಕೆ ಅರಿತುಕೊಡು ಆರಂಭಿಸಿದವರಲ್ಲಿ ಈ ಮೊದಲೆ ಇತರ ಪ್ರವಾಸೋದ್ಯಮದ ಚಟುವಟಿಕೆಗಳಾದ ರೆಸ್ಟೋರೆಂಟ್ ಮತ್ತು ಅತಿಥಿಗೃಹಗಳಲ್ಲಿ ತೊಡಗಿಸಿಕೊಂಡಿದ್ದ ಸಿಂಗ್,ಲಿಂಗಾಯತ, ವೈಶ್ಯ ಹಾಗೂ ಕ್ಷತ್ರಿಯ ಕೋಮಿಗೆ ಸೇರಿದವರು ಒಳಗೊಂಡಿದ್ದಾರೆ. ಇವುಗಳ ಸಂಖ್ಯೆ 8. ಇವುಗಳಲ್ಲಿ ರೂ50 ಸಾವಿರದಿಂದ 1ಲಕ್ಷದವರೆಗೆ ಬಂಡವಾಳ ತೊಡಗಿಸಿಕೊಂಡು ವ್ಯಾಪಾರ ಪ್ರಾರಂಭಿಸಿದವರ ಸಂಖ್ಯೆ 3 ಇವೆ. ಇದರಲ್ಲಿ ಎರಡು ಬ್ಯಾಂಕಿನ ಸಾಲ ಪಡಿದ್ದಿದ್ದರೆ, ಒಂದು ಇತರ ಮೂಲಗಳಿಂದ ಬಂಡವಾಳ ವಿನಿಯೋಗಿಸಿದೆ. ಆದರೆ 1ಲಕ್ಷ ಮೇಲ್ಪಟ್ಟು ಬಂಡವಾಳ ತೊಡಗಿಸಿ ಪ್ರಾರಂಬಿಸಿದ ಶಾಪ್‌ಗಳ ಸಂಖ್ಯೆ 5 ಇದೆ. ಇವುಗಳಲ್ಲಿ ಒಂದು ಬ್ಯಾಂಕಿನ ಸಾಲ ಪಡೆದರೆ, ಉಳಿದ ನಾಲ್ಕು ಶಾಪ್‌ಗಳು ಇತರ ಮೂಲಗಳಿಂದ ಬಂಡವಾಳ ತೊಡಗಿಸಿಕೊಂಡಿವೆ. ಪ್ರತಿಯೊಂದು ಶಾಪುಗಳಲ್ಲಿ ಕನಿಷ್ಠ 5 ರಿಂದ 8 ಕಂಪ್ಯೂಟರ್‌ಗಳಿವೆ. ಇವೆಲ್ಲವೂ ಸಿಜನ್‌ನಲ್ಲಿ ವಿದೇಶಿ ಪ್ರವಾಸಿಗರಿಂದ ತುಂಬಿರುತ್ತವೆ. ಇಂಟರನೆಟ್ ಉಪಯೋಗಿಸಲು ಕನಿಷ್ಠ ದರ ರೂ 10 ನಿಗಧಿಪಡಿಸಲಾಗಿದ್ದು, ಒಂದು ಗಂಟೆಗೆ ರೂ 60 ಪಡೆಯಲಾಗುತ್ತದೆ (ಕೋಷ್ಟಕ-20).

ಪ್ರವಾಸಿಗರಿಗೆ ಸಲಹೆ, ಸೂಚನೆ, ಮಾರ್ಗದರ್ಶನ ನೀಡಲು ಕರ್ನಾಟಕ ಸರಕಾರದ ಪ್ರವಾಸೋದ್ಯಮ ಇಲಾಖೆಯು ಹೊಸಪೇಟೆ ಮತ್ತು ಹಂಪೆಯಲ್ಲಿ ಮಾಹಿತಿ ಕೇಂದ್ರಗಳನ್ನು ತೆರೆದಿದೆ. ಕರ್ನಾಟಕ ರಾಜ್ಯದ ಪ್ರವಾಸೋದ್ಯಮ ಅಭಿವೃದ್ಧಿ ನಿಗಮವು ಹಂಪೆಯ ಸ್ಮಾರಕಗಳು ಮತ್ತು ಪ್ರೇಕ್ಷಣಿಯ ಸ್ಥಳವಾದ ತುಂಗಭದ್ರ ಅಣೆಕಟ್ಟುಗೆ ಪ್ರತಿನಿತ್ಯ ಹೊಸಪೇಟೆಯಿಂದ ಸಂಚಾರಿ ಬಸ್ಸಿನ

ವ್ಯವಸ್ಥೆ ಮಾಡಿದೆ. ಇದಲ್ಲದೆ ಕಮಲಾಪುರ ಮತ್ತು ಟಿ.ಬಿ.ಡ್ಯಾಂನಲ್ಲಿ ಹೋಟಲ್‌ಗಳನ್ನು ಪ್ರವಾಸಿಗರಿಗೆ ತೆರೆದಿದೆ. ಹೊಸಪೇಟೆಯ ಪ್ರವಾಸೋದ್ಯಮ ಕಛೇರಿಯು ಸಹಾಯಕ ನಿರ್ದೇಶಕರನ್ನು ಒಳಗೊಂಡಿದ್ದು ಪ್ರವಾಸೋದ್ಯಮದ ಚಟುವಟಿಕೆಗಳ ಬಗ್ಗೆ ಮಾಹಿತಿಯನ್ನು ಮುಖ್ಯ ಕಛೇರಿಗೆ ಒದಗಿಸುತ್ತದೆ. ಅಲ್ಲದೆ ಹಂಪೆಯ ಮಾಹಿತಿ ಕಚೇರಿಯು ಉಸ್ತುವಾರಿಯನ್ನು ನೋಡಿಕೊಳ್ಳುತ್ತದೆ.ಹಂಪೆಯ ಮಾಹಿತಿ ಕೇಂದ್ರವು ಪ್ರವಾಸಿಗರಿಗಾಗಿ ತಯಾರಿಸಿದ ಮಾರ್ಗದರ್ಶನದ ಕೈಪಿಡಿ ಗಳನ್ನು,ಭೂಪಟಗಳನ್ನು ಹಾಗೂ ಐತಿಹಾಸಿಕ ಸ್ಮಾರಕಗಳ ಬ್ರೋಚರ್‌ಗಳನ್ನು ನೀಡುವುದರ ಜೊತೆಗೆ ಪ್ರವಾಸಿಗರು ಕೇಳುವ ಅನೇಕ ವಿಷಯಗಳ ಬಗ್ಗೆ ಮೌಖಿಕವಾಗಿ ಹೇಳಲು ಟ್ಯೂರಿಸ್ಟ್ ಪ್ರಮೋಟರ್‌ನನ್ನು ನೇಮಿಸಿದೆ.

ಪ್ರವಾಸೋದ್ಯಮ ಇಲಾಖೆ ಪ್ರವಾಸೋದ್ಯಮದ ಅಭಿವೃದ್ಧಿಗಾಗಿ ರಾಷ್ಟ್ರ ಮತ್ತು ರಾಜ್ಯ ಮಟ್ಟದಲ್ಲಿ ಅನೇಕ ಯೋಜನೆಗಳನ್ನು ರೂಪಿಸುತ್ತಾ ಬಂದಿದೆ. ಪ್ರಸ್ತುತ ವರ್ಷದಲ್ಲಿ ಹಂಪೆ ಅಂತಾರಾಷ್ಟ್ರೀಯ ಮಟ್ಟದ ಐತಿಹಾಸಿಕ ಸ್ಮಾರಕಗಳ ಪಟ್ಟಿಯಲ್ಲಿ ಸೇರಿದ್ದು, ಇದು ರಾಷ್ಟ್ರ ಮಟ್ಟದ 6 ಪ್ರವಾಸಿ ತಾಣಗಳಲ್ಲಿ ಒಂದಾಗಿರುವುದರಿಂದ ಭಾರತದ ಕೇಂದ್ರ ಸರಕಾರವು ಪ್ರವಾಸಿಗರಿಗೆ ಪೂರಕವಾಗುವ ಹಲವಾರು ಕ್ರಮಗಳನ್ನು ಕೈಗೊಂಡಿದೆ. ಅಂತಾರಾಷ್ಟ್ರೀಯ ಸಂಸ್ಥೆಯಾದ ಯುನೆಸ್ಕೋ ಕೂಡ ಪ್ರೋತ್ಸಾಹ ನೀಡುತ್ತಿದೆ. ಹಾಗಾಗಿ ಪ್ರಮುಖವಾಗಿ ವಿದೇಶಿ ಪ್ರವಾಸಿಗರ ಅನುಕೂಲಕ್ಕಾಗಿ ವಿಮಾನ ನಿಲ್ದಾಣವನ್ನು ಹಂಪೆಯ ಸಮೀಪದಲ್ಲಿ ಸ್ಥಾಪಿಸಬೇಕೆಂಬ ಒತ್ತಾಸೆ ಕೇಂದ್ರ ಸರಕಾರಕ್ಕಿದೆ.

ಕರ್ನಾಟಕ ಪ್ರವಾಸೋದ್ಯಮ ಇಲಾಖೆಯು ರಾಜ್ಯ ಮಟ್ಟದಲ್ಲಿ ಪ್ರವಾಸಿ ತಾಣಗಳನ್ನು ಉತ್ತರ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕ ವರ್ತುಲಗಳೆಂದು ವಿಂಗಡಿಸಿಕೊಂಡು ಅವುಗಳ ಅಭಿವೃದ್ಧಿಗಾಗಿ 1997ರಲ್ಲಿ ಮಾಸ್ಟರ್‌ಪ್ಲಾನ್ ಯೋಜನೆ ತಯಾರಿಸಿತು. ಈ ಯೋಜನೆಯಡಿ ಹೋಟೆಲ್, ರೆಸಾರ್ಟ್, ಟೂರಿಸ್ಟ್‌ವಿಲೇಜ್ ಮುಂತಾದವುಗಳನ್ನು ಸ್ಥಾಪಿಸಲು ಖಾಸಗಿಯವರಿಗೆ ಸಹಾಯಧನ ನೀಡುವ ಪ್ರೋತ್ಸಾಹ ಕಾರ್ಯಕ್ರಮಗಳು ಒಳಗೊಂಡಿವೆ.[6] ಈ ಸೌಲಭ್ಯವನ್ನು ಪಡೆದು ಹಂಪೆಯ ವಿರುಪಾಪುರ ಗಡ್ಡೆಯ ಪ್ರದೇಶದಲ್ಲಿ ಒಂದು ರೆಸಾರ್ಟ್ ಮತ್ತು ಅತಿಥಿಗೃಹ ನಿರ್ಮಾಣವಾಗಿವೆ. ಈ ರೆಸಾರ್ಟ್‌ಗೆ ಪ್ರವಾಸಿಗರು ಭೇಟಿ ನೀಡುತ್ತಾರೆ. ಇಲ್ಲಿ ಪ್ರವೇಶದರ ಒಬ್ಬರಿಗೆ 50 ರೂ. ನಿಗಧಿಪಡಿಸಲಾಗಿದೆ.

ವೈದ್ಯಕೀಯ ಸೌಲಭ್ಯಗಳು

ಹಂಪೆಯಲ್ಲಿ ಮೂರು ಖಾಸಗಿ ಕ್ಲಿನಿಕ್‌ಗಳು ಮತ್ತು ಒಂದು ಸರಕಾರಿ ಆಸ್ಪತ್ರೆ (ಆಯುರ್ವೇದಿಕ್)ಇವೆ. ವಿದೇಶಿ ಪ್ರವಾಸಿಗರು ಸಣ್ಣ ಪುಟ್ಟ ಕಾಯಿಲೆಗಳಾದ ಜ್ವರ, ಶೀತ,ಉದರಖಾಯಿಲೆ ಮುಂತಾದ ರೋಗಗಳಿಂದ ಬಳಲುತ್ತಾರೆ. ಪ್ರಮುಖ ಕಾಯಿಲೆಗಳಾದ ಮಲೇರಿಯಾ, ವಿಷಮಶೀತಜ್ವರ, ಕಾಮಲೆ ರೋಗಗಳಿಗೆ ತಾವು ಪ್ರವಾಸ ಕೈಗೊಳ್ಳುವ ಪೂರ್ವದಲ್ಲಿಯೆ ರೋಗ ನಿರೋಧಕ ಲಸಿಕೆಯನ್ನು ಪಡೆದಿರುವುದಾಗಿ ಪ್ರವಾಸಿಗರು ತಿಳಿಸುತ್ತಾರೆ. ಹಾಗೂ ಪ್ರವಾಸಿಗರು ಪ್ರವಾಸ

[illegible]

ಕೈಗೊಳ್ಳುವ ಮೊದಲು ಆರೋಗ್ಯ ತಪಾಸಣೆಗೆ ಗುರಿಯಾಗುತ್ತಾರೆ ಹಾಗೂ ಯಾವುದೆ ಮಾರಕ ಕಾಯಿಲೆಗಳು ಇಲ್ಲವೆಂದು ಖಚಿತ ಪಡಿಸಿಕೊಂಡ ನಂತರವೆ ಪ್ರವಾಸ ಕೈಗೊಳ್ಳಲು ಅನುಮತಿ ನೀಡಲಾಗುತ್ತದೆಯೆಂದು ಹೇಳುತ್ತಾರೆ. ಪ್ರಸ್ತುತ ಗ್ರಾಮದಲ್ಲಿ ಎಂಬಿಬಿಎಸ್., ಬಿಹೆಚ್‌ಎಮ್‌ಎಸ್ (ಹೋಮಿಯೋಪಥಿಯಲ್ಲಿ ಪದವಿ) ಹಾಗೂ ಬಿಎಎಮ್‌ಎಸ್ (ಆರ್ಯುವೇದಿಕ್‌ನಲ್ಲಿ ಪದವಿ) ಪಡೆದ ತಲಾ ಒಬ್ಬರು ಖಾಸಗಿ ವೈದ್ಯರಿದ್ದಾರೆ. ವಿದೇಶಿಯರು ಅಲೋಪತಿ ಔಷಧಕ್ಕಿಂತ ಹೋಮಿಯೋಪತಿ ಮತ್ತು ಆರ್ಯುವೇದಿಕ್ ಔಷಧಿಗಳನ್ನು ತೆಗೆದುಕೊಳ್ಳುವುದು ಹೆಚ್ಚಿದೆಯೆಂದು ಅತಿಥಿಗೃಹದ ಮಾಲಿಕರು ಹೇಳುತ್ತಾರೆ. ವಿದೇಶಿ ಪ್ರವಾಸಿಗರು ಹೋಮಿಯೋಪತಿ ಮತ್ತು ಆರ್ಯುರ್ವೇದಿಕ್ ಔಷಧಿಗಳನ್ನು ಸೇವಿಸುವುದರಿಂದ ಸೈಡ್ ಎಫೆಕ್ಟ್ ಕಡಿಮೆ ಎಂದು ವಿದೇಶಿ ಪ್ರವಾಸಿಗರು ಹೇಳುತ್ತಾರೆ. ಆರೊಗ್ಯ ಬೇಗ ಗುಣವಾಗದ ಪಕ್ಷದಲ್ಲಿ ಮಾತ್ರ ಅಲೋಪತಿ ವೈದ್ಯರ ಹತ್ತಿರ ಹೋಗುತ್ತಾರೆ. ಸರಕಾರಿ ಆಯುರ್ವೇದಿಕ್ ಆಸ್ಪತ್ರೆಯ ಡಾಕ್ಟರು ಪ್ರಕಾರ ತುಂಬಾ ವಿದೇಶಿ ಪ್ರವಾಸಿಗರು ಆಸ್ಪತ್ರೆಗೆ ಭೇಟಿ ನೀಡುತ್ತಾರೆ.[7] ಆದರೆ ಬಂದವರಿಗೆ ತಮ್ಮಲ್ಲಿ ಕೊಡಲು ಸಾಕಷ್ಟು ಔಷಧಿಗಳು ಪೂರೈಕೆಯಾಗಿಲ್ಲ ವೆಂದು ತಿಳಿಸುತ್ತಾರೆ. ವಿದೇಶಿಯರಿಗೆ ಆರೋಗ್ಯ ಸಮಸ್ಯೆಗಳಾದರೆ ಹೊಸಪೇಟೆಯಲ್ಲಿರುವ ಆಸ್ಪತ್ರೆಗಳಿಗೆ ಹೋಗುತ್ತಾರೆ. ರಾಜ್ಯ ಸರಕಾರ ಆಯುರ್ವೇದಿಕ್ ಆಸ್ಪತ್ರೆಯನ್ನು ಸ್ಥಳಿಯರಿಗಾಗಿ ಸ್ಥಾಪಿಸಿದ್ದು, ಇದರ ಉಪಯೋಗವನ್ನು ವಿದೇಶೀಯರು ಪಡೆಯುತ್ತಿರುವುದು ಕಂಡುಬರುತ್ತದೆ.

ಮಾರ್ಗದರ್ಶಿಗಳು ಮತ್ತು ಟ್ರಾವೆಲರ್ಸ್ ಹೌಸ್‌ಗಳು

ಪ್ರವಾಸಿಗರು ಸ್ಮಾರಕಗಳನ್ನು ನೋಡಲು ಮಾರ್ಗದರ್ಶಕರನ್ನು ಬಯಸಿದರೆ ಅವರಿಗೆ ಮಾರ್ಗದರ್ಶನ ನೀಡಲು ಪ್ರವಾಸೋದ್ಯಮ ಇಲಾಖೆ ತರಬೇತಿ ನೀಡಿದ ಮಾರ್ಗದರ್ಶಿಗಳು ಇದ್ದಾರೆ. ಪ್ರವಾಸೋದ್ಯಮ ಇಲಾಖೆ ಲೈಸೆನ್ಸ್ ನೀಡಿದವರಲ್ಲಿ ಇಬ್ಬರು ಭಾರತೀಯ ಪ್ರವಾಸೋದ್ಯಮ ಅಭಿವೃದ್ಧಿ ಗಮ(ಐ.ಟಿ.ಡಿ.ಸಿ.)ಕ್ಕೆ ಸೇರಿದವರು. ಇವರು ಭಾರತದ ಯಾವುದೆ ಪ್ರವಾಸಿ ತಾಣಗಳಿಗೆ ಹೋಗಿ ಮಾರ್ಗದರ್ಶನ ಮಾಡಬಹುದಾಗಿದೆ. ಇವರಿಗೆ ಇಲಾಖೆಯು ತರಬೇತಿ ನೀಡಿ ಒಂದಕ್ಕಿಂತ ಹೆಚ್ಚು ಭಾಷೆಗಳನ್ನು ಕಲಿಯಲು ಅನುವು ಮಾಡಿಕೊಟ್ಟಿದೆ. ಈ ಪ್ರವಾಸಿ ಮಾರ್ಗದರ್ಶಿಗಳಿಗೆ ವ್ಯಾವಹಾರಿಕ ಇಂಗ್ಲಿಷ್ ಜ್ಞಾನವಿದೆ. ಇಂಗ್ಲಿಷ್ ಜ್ಞಾನ ಹೆಚ್ಚಿರುವವರು ವಿದೇಶಿ ಪ್ರವಾಸಿಗರಿಗೆ ಮಾರ್ಗದರ್ಶನ ನೀಡುತ್ತಾರೆ. ಪದವೀಧರ ಗೈಡುಗಳು 15 ಜನರಿದ್ದಾರೆ. ಉಳಿದ 15 ಜನ ಮಾರ್ಗದರ್ಶಿಗಳು ಪದವಿಪೂರ್ವ ಮತ್ತು ಪ್ರೌಢ ಶಿಕ್ಷಣ ಪಡೆದವರು. ಪ್ರವಾಸೋಧ್ಯಮ ಇಲಾಖೆಯು ಮಾರ್ಗದರ್ಶನವನ್ನು ಮಾಡುವವರಿಗೆ 4 ತಾಸುಗಳಿಗೆ ರೂ. 150 ಹಾಗೂ 8 ತಾಸುಗಳಿಗೆ ರೂ.250ಗಳನ್ನು ನಿಗಧಿಪಡಿಸಿದೆ. ಐ.ಟಿ.ಡಿ.ಸಿ. ಗೈಡುಗಳಿಗೆ 4 ತಾಸುಗಳಿಗೆ ರೂ.300, 8 ತಾಸುಗಳಿಗೆ

ರೂ.500 ದರ ಇದೆ. ಹಂಪೆಯಿಂದ ಬೇರೆ ಸ್ಥಳಗಳಿಗೆ ಮಾರ್ಗದರ್ಶಿಗಳಾಗಿ ಹೋದರೆ ಅವರಿಗೆ ಪ್ರವಾಸಿಗರೆ ಪ್ರಯಾಣ ಮತ್ತು ತುಟ್ಟಿಬತ್ಯೆ ನೀಡುತ್ತಾರೆ. ದೇಶಿ ಮತ್ತು ವಿದೇಶಿ ಪ್ರವಾಸಿಗರು ಮಾರ್ಗದರ್ಶಿಯ ನಿರೂಪಣೆಯಿಂದ ಖುಷಿ ಪಟ್ಟರೆ ಊಟ ಇನ್ನಿತರ ಖರ್ಚಗಳನ್ನು ಭರಿಸುತ್ತಾರೆ. ಅನ್‌ಸೀಸನ್‌ನಲ್ಲಿ ರೂ. 50ಗಳಿಗೂ ಮಾರ್ಗದರ್ಶಕರ ಕೆಲಸ ನಿರ್ವಹಿಸಲಾಗುತ್ತದೆ.

ವಿದೇಶಿ ಪ್ರವಾಸಿಗರೊಂದಿಗಿನ ಮಾರ್ಗದರ್ಶಿಗಳ ಅನುಭವ ಬೇರೆ ಬಗೆಯದಾಗಿರುವಂತೆ ಕಂಡುಬರುತ್ತದೆ. ವಿದೇಶಿ ಪ್ರವಾಸಿಗರು ಮಾರ್ಗದರ್ಶಿಗಳ ಸ್ಮಾರಕಗಳ ಕುರಿತ ವಿವರಣೆ ಕೇಳುವುದಕ್ಕಿಂತ ಹೆಚ್ಚಾಗಿ ಅವರ ವೈಯಕ್ತಿಕ ಕಷ್ಟ ಸುಖಗಳನ್ನು ಹೇಳುವುದು ಜಾಸ್ತಿ. ಪ್ರವಾಸಿಗರು ಇಲ್ಲಿನ ಸಾಮಾಜಿಕ ವ್ಯವಸ್ಥೆಯನ್ನು ಮೆಚ್ಚುತ್ತಾರೆ. ಹಾಗೂ ಭಾರತದ ಸಂಸ್ಕೃತಿ ತುಂಬಾ ಉತ್ತಮವೆಂಬ ಅಭಿಪ್ರಾಯ ವ್ಯಕ್ತ ಪಡಿಸುತ್ತಾರೆ. ವಿದೇಶಿಯರಿಗೆ ಗಂಡು ಹೆಣ್ಣು ಎಂಬ ಭೇದ ಭಾವವಿರುವಂತೆ ಕಂಡುಬರುವುದಿಲ್ಲ. ಮಹಿಳೆಯರ ಇರುವಿಕೆಯಲ್ಲಿ ಬರ್ಹಿದೆಸೆಯನ್ನು ದೂರ ಹೋಗಿ ಮಾಡುವ ಬದಲು ಹತ್ತಿರದಲ್ಲಿ ಮಾಡಲು ಪ್ರವಾಸಿಗರು ಹೇಳುತ್ತಾರೆಂದು ಮಾರ್ಗದರ್ಶಿಗಳು ತಿಳಿಸುತ್ತಾರೆ. ವಿದೇಶಿಯರಲ್ಲಿ ಒಬ್ಬೊಂಟಿತನದ ಕೊರಗಿದ್ದು, ಅವರು ಆತ್ಮೀಯ ಸಂಬಂಧಗಳಿಗೆ ಬೇಗ ಮಾರುಹೋಗಲು ಕಾರಣವಿರಬಹುದಾಗಿದೆ.

ಟ್ರಾವೆಲೆರ್ಸ್ ಮತ್ತು ಹಣ ವಿನಿಮಯ ಶಾಪ್‌ಗಳು

ಹಂಪೆಯಲ್ಲಿ ಒಟ್ಟು 21 ಟ್ರಾವೆಲೆರ್ಸ್ ಮತ್ತು ವಿದೇಶಿ ಹಣದ ವಿನಿಮಯ ಶಾಪ್‌ಗಳು ಇವೆ. ಇವು ವಿದೇಶಿಯರು ತರುವ ಹಣವನ್ನು ವಿನಿಮಯ ಮಾಡಿಕೊಡುವುದರೊಂದಿಗೆ ಪ್ರಯಾಣದ ಟಿಕೆಟ್‌ಗಳನ್ನು ಕಾದಿರಿಸಿಕೊಟ್ಟು ಕಮಿಷನ್ ಮೂಲಕ ಆದಾಯ ಪಡೆಯುತ್ತವೆ. ಇವುಗಳನ್ನು ಈ ಮೊದಲೆ ಪ್ರವಾಸೋದ್ಯಮ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡವರೆ ಇದನ್ನು ಶುರು ಮಾಡಿದ್ದಾರೆ. ಇವುಗಳಲ್ಲಿ 6 ಶಾಪ್‌ಗಳು ರೂ 25-50ಸಾವಿರ ಬಂಡವಾಳ ತೊಡಗಿಸಿವೆ. ಇದರಲ್ಲಿ ಬ್ಯಾಂಕಿನ ಸಾಲ ಪಡೆದವರ ಸಂಖ್ಯೆ 2 ಇದ್ದರೆ, 4 ಶಾಪ್‌ಗಳು ಇತರ ಮೂಲಗಳಿಂದ ಬಂಡವಾಳ ವಿನಿಯೋಗಿಸಿವೆ. ರೂ 50ಸಾವಿರದಿಂದ 1ಲಕ್ಷದ ವರೆಗೆ ಬಂಡವಾಳ ತೊಡಗಿಸಿ ಪ್ರಾರಂಬಿಸಿದ ಶಾಪ್‌ಗಳ ಸಂಖ್ಯೆ 9 ಇವೆ. ಇವುಗಳಲ್ಲಿ ನಾಲ್ಕು ಬ್ಯಾಂಕಿನ ಸಾಲ ಪಡೆದಿದ್ದರೆ, ಐದು ಶಾಪ್‌ಗಳು ಇತರ ಮೂಲಗಳಿಂದ ಬಂಡವಾಳ ತೊಡಗಿಸಿವೆ. 1ಲಕ್ಷ ಮೇಲ್ಪಟ್ಟು ಬಂಡವಾಳ ಹೂಡಿದ ಶಾಪ್‌ಗಳ ಸಂಖ್ಯೆ 6 ಇವೆ. ಒಂದು ಬ್ಯಾಂಕಿನ ಸಾಲ ಪಡೆದರೆ, ಉಳಿದವು ಇತರ ಮೂಲಗಳಿಂದ ಬಂಡವಾಳ ತೊಡಗಿಸಿವೆ. ಒಟ್ಟಾರೆ ಬ್ಯಾಂಕಿನ ಹಣಕಾಸು ಸಹಾಯ ಪಡೆದು ಶುರು ಮಾಡಿದವರ ಸಂಖ್ಯೆ ಶೇ.33.33 ಆದರೆ ಇತರೆ ಮೂಲಗಳಿಂದ ಹಣಕಾಸು ನೆರವನ್ನು ಪಡೆದು ವ್ಯಾಪಾರ ಶುರುಮಾಡಿದವರ ಸಂಖ್ಯೆ ಶೇ.66.67 ಆಗಿದೆ. ಹಣದ ವಿನಿಮಯ ಮತ್ತು ಟ್ರಾವಲರ್ಸ ಶಾಪ್‌ಗಳ ದಿನದ ವಹಿವಾಟು ರೂ 200-500

ಇರುವ ಶಾಪ್‌ಗಳ ಸಂಖ್ಯೆ 3, ರೂ 500-1,000 ಇರುವ ಶಾಪ್‌ಗಳ ಸಂಖ್ಯೆ 13 ಹಾಗೂ ರೂ 1,000-1,500 ಇರುವ ಶಾಪ್‌ಗಳ ಸಂಖ್ಯೆ 5 ಇವೆ.

ಹಂಪೆಯಲ್ಲಿ 15 ಟ್ರಾವೆಲ್ಸ್ ಹೌಸ್‌ಗಳಿವೆ. ಅವು ಪ್ರವಾಸಿಗರಿಗೆ ಪ್ರಯಾಣದ ಟಿಕೆಟ್ಟುಗಳನ್ನು ಕಾಯ್ದಿರಿಸುವುದರ ಜೊತೆಗೆ ಉಪಯುಕ್ತವಾದ ಪ್ರಯಾಣದ ಮಾಹಿತಿಯನ್ನು ಕೊಡುತ್ತವೆ. ಅವುಗಳಲ್ಲಿ 4 ಹೌಸ್‌ಗಳು ವಿದೇಶಿ ವಿನಿಮಯ ವ್ಯವಹಾರದೊಂದಿಗೆ ಟ್ರಾವೆಲ್ಸ್ ಕಾರ್ಯಗಳನ್ನೂ ನಿರ್ವಹಿಸುತ್ತವೆ. ಟ್ರಾವೆಲರ್ಸ್ ಹೌಸ್‌ಗಳನ್ನು ಮೊದಲಿಗೆ ಸಿಂಗ್ ಮತ್ತು ಲಿಂಗಾಯತ ಕುಟುಂಬದ ಯುವಕರು ಆರಂಭಿಸಿದರೆಂದು ತಿಳಿದುಬರುತ್ತದೆ. ಇವರು ದೇಶದ ಬೇರೆ ಬೇರೆ ಪ್ರವಾಸಿ ತಾಣಗಳಿಗೆ ಭೇಟಿ ನೀಡಿ ಅಲ್ಲಿ ನಡೆಯುವ ವ್ಯವಹಾರಗಳನ್ನು ಗಮನಿಸಿ, ಅದೆ ಬಗೆಯಲ್ಲಿ ಇಲ್ಲೂ ವ್ಯವಹಾರಗಳನ್ನು ಪ್ರಾರಂಭಿಸಿದರು ಎಂದು ತಿಳಿದು ಬರುತ್ತದೆ. ಟ್ರಾವೆಲ್ಸ್ ಹೌಸ್‌ಗಳು ಮುಖ್ಯವಾಗಿ ಪ್ರವಾಸಿಗರ ಮುಂದಿನ ಪ್ರಯಾಣಕ್ಕಾಗಿ ವಿದೇಶಿಯರು ಇಷ್ಟಪಟ್ಟ ಬಸ್ ಮತ್ತು ರೈಲು ಟಿಕೆಟ್ಟುಗಳನ್ನು ಕಾಯ್ದಿರಿಸುತ್ತವೆ. ಹಂಪೆಯಿಂದ 12 ಕಿ.ಮೀ ದೂರವಿರುವ ಹೊಸಪೇಟೆ ನಗರದಲ್ಲಿ ಅಥವಾ ಖಾಸಗಿ ಬಸ್ಸುಗಳಾಗಿದ್ದರೆ, ಏಜೆನ್ಸಿ ತೆಗೆದುಕೊಂಡಿದ್ದರೆ, ಅವರಿಂದ ಫೋನ್ ಮುಖಾಂತರ ಪ್ರಯಾಣದ ಟಿಕೆಟ್ಟನ್ನು ಕಾಯ್ದಿರಿಸುತ್ತವೆ. ಈ ಕೆಲಸಗಳಿಗೆ ಹಣವನ್ನು ಮುಂಗಡವಾಗಿ ತೆಗೆದುಕೊಳ್ಳಲಾಗುತ್ತದೆ. ಟಿಕೆಟ್ಟು ದರದ ಜೊತೆಗೆ ಒಂದು ಟಿಕೆಟ್‌ಗೆ ರೂ. 50ಗಳನ್ನು ಕಮಿಷನ್ ಪಡೆಯಲಾಗುತ್ತದೆ. ಪ್ರತಿಯೊಂದು ಟ್ರಾವೆಲ್ಸ್ ಹೌಸ್‌ಗಳಲ್ಲಿ ಎರಡು ಮೂರು ಜನ ಈ ಕಾರ್ಯದಲ್ಲಿ ತೊಡಗಿಸಿಕೊಂಡಿರುವುದು ಕಂಡುಬರುತ್ತದೆ. ಒಬ್ಬರು ಶಾಪ್‌ನಲ್ಲಿ ಹಾಜರಿದ್ದರೆ, ಇನ್ನೊಬ್ಬರು ಟಿಕೆಟ್ಟುಗಳನ್ನು ಖರೀದಿಸಿ ತರಲು ಹೊಸಪೇಟೆಗೆ ಭೇಟಿ ನೀಡುವುದು ಸಾಮಾನ್ಯ ಕಾರ್ಯಸೂಚಿಯಾಗಿದೆ. ಸೀಜನ್‌ನಲ್ಲಿ ಪ್ರವಾಸಿಗರು ಹೆಚ್ಚಿರುವುದರಿಂದ ರೈಲ್ವೆ ಟಿಕೆಟ್ಟನ್ನು 1 ರಿಂದ 2 ದಿನದೊಳಗೆ ಕಾಯ್ದಿರಿಸಲು ಸಾಧ್ಯವಾಗುವುದಿಲ್ಲ. ಇಂಥ ಸಂದರ್ಭದಲ್ಲಿ ವೇಟಿಂಗ್ ಲಿಸ್ಟ್‌ನಲ್ಲಿ ಒಂದು ವಾರದ ಮಟ್ಟಿಗೆ ಕಾಯಬೇಕಾಗುತ್ತದೆ. ಆದರೆ ವಿದೇಶಿಯರು ಹೆಚ್ಚು ಕಾಲ ಕಾಯಲು ಅಥವಾ ಉಳಿಯಲು ಸಾಧ್ಯವಿರುವುದಿಲ್ಲ. ಆಗ ರೈಲ್ವೆ ಕಛೇರಿಯಲ್ಲಿ ಟಿಕೆಟ್ಟೊಂದಕ್ಕೆ ರೂ. 5 ಹೆಚ್ಚು ಪಾವತಿಸಿದರೆ ಟಿಕೆಟ್ ನೀಡುವ ಕೌಂಟರ್‌ನಲ್ಲಿ ಟಿಕೇಟು ಕಾಯ್ದಿರಿಸುವ ವ್ಯವಸ್ಥೆ ಇದೆ. ಒಂದು ಪಕ್ಷ ರೈಲು ಟಿಕೆಟ್ಟು ಕಾಯ್ದಿರಿಸಲು ಸಾಧ್ಯವಾಗದಿದ್ದಲ್ಲಿ ಪ್ರವಾಸಿಗರ ಒಪ್ಪಿಗೆ ಮೇರೆಗೆ ಬಸ್ಸು ಟಿಕೆಟ್ಟು ಕಾಯ್ದಿರಿಸಿ ಕೊಡಲಾಗುತ್ತದೆ ಎಂದು ಟ್ರಾವೆಲರ್ಸ ಹೌಸ್‌ರವರು ಹೇಳುತ್ತಾರೆ. ಟ್ರಾವೆಲರ್ಸ್ ಹೌಸ್‌ಗಳ ಪ್ರಕಾರ ವಿದೇಶಿಯರು ರೈಲ್ವೆ ಪ್ರಯಾಣವನ್ನು ಹೆಚ್ಚು ಇಷ್ಟ ಪಡುತ್ತಾರೆ.

ಖಾಸಗಿಯವರು 6 ವಿದೇಶಿ ಹಣದ ವಿನಿಮಯ ಮಳಿಗೆಗಳನ್ನು ಪ್ರಾರಂಭಿಸಿರುವುದು ಕಂಡುಬರುತ್ತದೆ. ರಾಷ್ಟ್ರೀಕೃತ ಬ್ಯಾಂಕ್ ಆದ ಕೆನರಾ ಬ್ಯಾಂಕ್ ಕೂಡ ಇಲ್ಲಿದೆ. ವಿದೇಶಿ ಹಣದ ವಿನಿಮಯ ಕೇಂದ್ರವನ್ನು ಖಾಸಗಿಯಾಗಿ ಸಿಂಗ್ ಮತ್ತು ಲಿಂಗಾಯತ ಜಾತಿಯ ಯುವಕರು ಶುರು

ಮಾಡಿದರು. ಟ್ರಾವೆಲರ್ಸ್ ಹೌಸ್‌ನ ಹಾಗೆ ವಿದೇಶಿ ಹಣ ವಿನಿಮಯ ಕೇಂದ್ರ ಕೂಡ ಸ್ಥಳಿಯರು ಬೇರೆ ಪ್ರವಾಸಿ ತಾಣಗಳಲ್ಲಿ ಗಮನಿಸಿ ಪ್ರಾರಂಭಿಸಿದ ವ್ಯವಹಾರವಾಗಿದೆ. ಈ ವ್ಯವಹಾರವನ್ನು ನಂತರ ಇತರ ಕೋಮಿನವರಾದ ಬ್ರಾಹ್ಮಣರು ಮತ್ತು ಜೈನರು ಕೂಡ ಪ್ರಾರಂಭಿಸಿದರೆಂದು ತಿಳಿದು ಬರುತ್ತದೆ. ನಾಲ್ಕು ಮಳಿಗೆಗಳು ಟ್ರಾವೆಲರ್ಸ್ ವ್ಯವಹಾರದೊಂದಿಗೆ ವಿದೇಶಿ ವಿನಿಮಯ ಮಳಿಗೆಯನ್ನೂ ನಡೆಸುತ್ತಿವೆ. ಪ್ರವಾಸಿಗರು ಸರಕಾರಿ ಬ್ಯಾಂಕ್ ಇದ್ದರೂ ಸಹ ಖಾಸಗಿ ವಿನಿಮಯ ಅಂಗಡಿಗಳಲ್ಲಿಯೆ ಹೆಚ್ಚು ವಿದೇಶಿ ಹಣದ ವಿನಿಮಯ ವ್ಯವಹಾರ ನಡೆಸುತ್ತಾರೆ. ಇದಕ್ಕೆ ಅಂಗಡಿಯವರು ತಮ್ಮ ವ್ಯವಹಾರವನ್ನು ಸೀಮಿತ ಕಾಲಾವಧಿಯಲ್ಲಿ ನಡೆಸದೆ ವಿದೇಶಿ ಪ್ರವಾಸಿಗರು ಯಾವುದೆ ಸಮಯದಲ್ಲಿ ವಿದೇಶಿ ಹಣ ಮತ್ತು ಟ್ರಾವೆಲರ್ಸ್ ಚೆಕ್ ತಂದರೂ ವಿನಿಮಯ ಮಾಡಿಕೊಡುವುದೇ ಮುಖ್ಯ ಕಾರಣವಾಗಿದೆ. ಅಲ್ಲದೆ ಹಂಪೆಯ ಖಾಸಗಿ ಅಂಗಡಿ ಮುಂಗಟ್ಟುಗಳಲ್ಲಿ ವಿದೇಶಿಯರ ಬಳಿಯಿರುವ ಕ್ರೆಡಿಟ್ ಕಾರ್ಡ್‌ಗಳ ಮೂಲಕ ವ್ಯವಹರಿಸಲು ಸಾಧ್ಯವಾಗುವುದಿಲ್ಲ, ಹಾಗೂ ಬ್ಯಾಂಕಿನ ವ್ಯವಹಾರಗಳಿಗೆ ಅದರದೆ ಆದ ನಿಯಮಗಳಿರುವುದರಿಂದ ಹಣವಿನಿಮಯ ಕಾರ್ಯ ಸುಲಲಿತವಾಗಿ ನಡೆಯುವುದಿಲ್ಲ. ಖಾಸಗಿ ವಿದೇಶಿ ಹಣ ವಿನಿಮಯ ಮಳಿಗೆಗಳು ಬ್ಯಾಂಕಿನ ಕಮಿಷನ್‌ಗಿಂತ ಹೆಚ್ಚು ಪಡೆಯುತ್ತವೆ ಯಾದರೂ ಪ್ರವಾಸಿಗರು ಹಣ ವಿನಿಮಯವನ್ನು ಖಾಸಗಿಯವರಲ್ಲೆ ನಡೆಸುತ್ತಾರೆ. ಆದರೂ ಟ್ರಾವೆಲ್ಸ್ ಚೆಕ್ ಮತ್ತು ಕ್ರೆಡಿಟ್ ಕಾರ್ಡುಗಳನ್ನು ಹಣವಾಗಿ ಪರಿವರ್ತಿಸಲು ವಿದೇಶಿ ಪ್ರವಾಸಿಗರು ಬ್ಯಾಂಕಿಗೆ ಹೋಗುತ್ತಾರೆ. ರಾಷ್ಟ್ರೀಕೃತ ಕೆನರಾ ಬ್ಯಾಂಕಿನ ಶಾಖೆ ಹಂಪೆಯಲ್ಲಿ1978ರಲ್ಲಿ ಪ್ರಾರಂಭವಾಗಿ ಸ್ಥಳಿಯರಿಗೆ ಬ್ಯಾಂಕ್ ಸೌಲಭ್ಯಗಳನ್ನು ಒದಗಿಸುವುದರೊಂದಿಗೆ ವಿದೇಶಿಯರಿಗೂ ಬ್ಯಾಂಕ್ ವ್ಯವಹಾರ ಮಾಡಲು ಅನುಕೂಲ ಮಾಡಿಕೊಟ್ಟಿತು. ಸೀಸನ್‌ನಲ್ಲಿ ಬ್ಯಾಂಕಿಗೆ ಪ್ರವಾಸಿಗರಿಂದ ಹೆಚ್ಚಿನ ಆದಾಯ ಲಭ್ಯವಾಗುತ್ತದೆಂಬುದು ವ್ಯವಸ್ಥಾಪಕರ ಅಭಿಪ್ರಾಯವಾಗಿದೆ.[8]

ಇತರ ಅಂಗಡಿಗಳು

ಹಂಪೆಗೆ ಬಂದ ವಿದೇಶಿ ಪ್ರವಾಸಿಗರಾಗಲಿ ಮತ್ತು ದೇಶಿಯರಾಗಲಿ ಪುರಾತನ ಅವಶೇಷ ವಸ್ತುಗಳನ್ನು ಕೊಳ್ಳುವುದು ಸಹಜ. ಇದರ ಪರಿಣಾಮವಾಗಿ ಸೀಸನ್‌ನಲ್ಲಿ 20 ಅಂಗಡಿಗಳು ಇದ್ದರೆ, ಉಳಿದ ದಿನಗಳಲ್ಲಿ ಸ್ಥಳೀಯ ಮೂರು ಅಂಗಡಿ ಮಾತ್ರ ಇರುತ್ತವೆ. ಪುರಾತನ ಅವಶೇಷ ವಸ್ತುಗಳ ಮಾರಾಟದ ಅಂಗಡಿಗಳಲ್ಲಿ ಮನೆ ಬಳಕೆಯ ವಿವಿಧ ಲೋಹದ ಹಳೆಯ ಅಲಂಕೃತ ವಸ್ತುಗಳು, ಕೈಬೆರಳಿಗೆ ಹಾಕುವ ಉಂಗುರ, ಹರಳುಗಳು, ರುದ್ರಾಕ್ಷಿ ಸರಗಳು, ಲಂಬಾಣಿ ಉಡುಪುಗಳು ಮತ್ತು ಚಿಕ್ಕದಾದ ಕಲ್ಲಿನ ಕೆತ್ತನೆಯ ಮೂರ್ತಿಗಳು ಇತ್ಯಾದಿಗಳನ್ನು ಮಾರಾಟ ಮಾಡಲಾಗುತ್ತದೆ. ಈ ಅಂಗಡಿಗಳನ್ನು ಹೆಚ್ಚಾಗಿ ಕಾಶ್ಮೀರಿ ಮುಸ್ಲಿಂರು ನಡೆಸುತ್ತಾರೆ. ಇವರು ಸೀಸನ್‌ನಲ್ಲಿ ವ್ಯಾಪಾರದ ಉದ್ದೇಶಕ್ಕಾಗಿಯೆ ಬರುತ್ತಾರೆ. ಸೀಸನ್ ನಂತರ ಮರಳಿ ಹೊರಟು ಹೋಗುತ್ತಾರೆ. ಆದರೂ ಇವರ

[illegible]

ಮೂರು ಕುಟುಂಬಗಳು ಇಲ್ಲಿಯೆ ನೆಲಸಿವೆ ಎಂದು ತಿಳಿದು ಬರುತ್ತದೆ. ಈ ವ್ಯಾಪಾರದಲ್ಲಿ ಹಂಪೆಯ ಎರಡು ಕುಟುಂಬಗಳಲ್ಲಿ ಸಿಂಗ್‌ರದೊಂದು ಕುಟುಂಬ, ವಾಲ್ಮೀಕಿಯದೊಂದು ಕುಟುಂಬ ಪಾಲ್ಗೊಂಡಿರುವುದು ಕಂಡುಬರುತ್ತದೆ. ಈ ವ್ಯಾಪಾರದಲ್ಲಿ ಭಾಗಿಯಾಗಿರುವ ಮತ್ತೊಬ್ಬ ವ್ಯಕ್ತಿ ಲಿಂಗಾಯತ ಕೋಮಿಗೆ ಸೇರಿದ್ದು, ಅವರು ಕಮಲಾಪುರದಿಂದ ಬಂದು ವ್ಯಾಪಾರ ಮಾಡಿಕೊಂಡು ಹೋಗುತ್ತಾರೆ. ವಿದೇಶಿ ಪ್ರವಾಸಿಗರು ಗುಂಪುಗಳಲ್ಲಿ ಬಂದು ಇಂತಹ ವಸ್ತುಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಕೊಂಡುಕೊಳ್ಳುವುದು ಕಾಣುತ್ತದೆ. ಹಂಪೆಯಲ್ಲಿ ಹೆಚ್ಚು ದಿನಗಳ ಕಾಲ ತಂಗಿದವರು ಈ ವಸ್ತುಗಳನ್ನು ಕೊಂಡುಕೊಳ್ಳುವಂತೆ ಕಂಡುಬರುವುದಿಲ್ಲ. ಮಾರಾಟಗಾರರು ಈ ವಸ್ತುಗಳನ್ನು ದೆಹಲಿ, ಜಯಪುರ ಇತ್ಯಾದಿ ಸ್ಥಳಗಳಿಂದ ಕೊಂಡು ತಂದು ಇಲ್ಲಿ ಮಾರಾಟ ಮಾಡುವುದೊಂದು ವಿಶೇಷ.

ಅಭರಣಗಳ ಅಂಗಡಿಗಳೆಂದರೆ ಇಲ್ಲಿ ಚಿನ್ನದ ಆಭರಣಗಳನ್ನು ಮಾರಾಟ ಮಾಡುವುದಿಲ್ಲ. ಹಿತ್ತಾಳೆ, ತಾಮ್ರ ಮುಂತಾದ ಲೋಹಗಳಿಂದ ತಯಾರಿಸಿ ಬಂಗಾರದ ಲೇಪನ ಲೇಪನ ನೀಡಿದ ಒಡವೆ- ಆಭರಣಗಳಿಗೆ ರೋಲ್ಡ್‌ಗೋಲ್ಡ್ ಎಂದು ಕರೆಯಲಾಗುತ್ತದೆ. ಈ ಬಗೆಯ ಆಭರಣ, ಒಡವೆ ವಸ್ತುಗಳು ಕೈ, ಕಾಲು,ಕೊರಳಿಗೆ ಹಾಕುವ ಅಭರಣಗಳಾಗಿರುತ್ತವೆ. ವಿದೇಶಿ ಪ್ರವಾಸಿಗರಿಗೆ ಭಾರತದಲ್ಲಿನ ಈ ಅಭರಣಗಳು ಹೆಚ್ಚು ಪ್ರಿಯವಾಗಿರುವುದರಿಂದ ಕೊಂಡು ಧರಿಸುವುದು ಕಾಣುತ್ತದೆ. ವಿದೇಶಿ ಪ್ರವಾಸಿಗರ ಅಭಿರುಚಿಗೆ ತಕ್ಕ ಹಾಗೆ ಅಭರಣಗಳನ್ನು ಶಾಪ್‌ಗಳಲ್ಲಿ ಪ್ರದರ್ಶನ ಮಾಡಿ ಮಾರಾಟ ಮಾಡಲಾಗುತ್ತದೆ. ಸೀಸನ್‌ನಲ್ಲಿ ಈ ಬಗೆಯ ವ್ಯಾಪಾರ ವಹಿವಾಟು ಹೆಚ್ಚು ನಡೆಯುತ್ತದೆ.

ದೇಶೀಯರು ಮತ್ತು ವಿದೇಶಿಯರು ಕೊಳ್ಳಬಹುದಾದ ಆಟಿಕೆ ಸಾಮಾನು ಮತ್ತು ಮನೆ ಅಲಂಕಾರದ, ಶೋ ಕೇಸ್‌ನಲ್ಲಿ ಇಡಬಹುದಾದ ವಸ್ತುಗಳು, ಪ್ಲಾಸ್ಟಿಕ್ ವಸ್ತುಗಳು, ಫೋಟೊಗಳು, ಕಟ್ಟಿಗೆಯಿಂದ ತಯಾರಿಸಿದ ಪ್ರಾಣಿ ಪಕ್ಷಿ ಗೊಂಬೆಗಳು, ಹ್ಯಾಟು ಮುಂತಾದ ವಸ್ತುಗಳು ಮಾರಾಟ ಮಾಡಲಾಗುತ್ತವೆ. ತೇಗದ ಕಟ್ಟಿಗೆಯನ್ನು ಗಂಧದ ಕಟ್ಟಿಗೆಯ ಹೆಸರಿನಲ್ಲಿ ಹೆಚ್ಚು ಹಣ ಪಡೆದು ಮಾರಾಟ ಮಾಡಲಾಗುತ್ತದೆ. ವಿದೇಶಿಯರು ಮನೋರಂಜನೆಗಾಗಿ ಬಟ್ಟೆಯ ಮೂರು ಚೆಂಡುಗಳನ್ನು ಕೈಯಲ್ಲಿ ಹಿಡಿದು ಒಂದಾದ ಮೇಲೊಂದರಂತೆ ನಿರಂತರವಾಗಿ ಮೇಲಕ್ಕೆ ಎಸೆಯುತ್ತಾ ಚೆಂಡು ಕೆಳಕ್ಕೆ ಬೀಳದಂತೆ ಆಟವಾಡುತ್ತಾರೆ. ಇಂತಹ ಬಟ್ಟೆ ಚೆಂಡುಗಳನ್ನು ಕೂಡ ಇಲ್ಲಿ ಮಾರಾಟ ಮಾಡಲಾಗುತ್ತದೆ. ಹೀಗೆ ಆಟಿಕೆ ಸಾಮಾನುಗಳ ಅಂಗಡಿಯಲ್ಲಿ ಹಲವಾರು ಮಾದರಿಯ ಆಟಿಕೆಗಳು ದೊರೆಯುತ್ತವೆ. ಈ ವ್ಯಾಪಾರಿಗಳಲ್ಲಿ ಕುರುಬರು, ಜೈನರು ಮತ್ತು ನಾಯ್ಡು ಕೋಮಿಗೆ ಸೇರಿದವರು ತಲಾ ಒಂದೊಂದು ಅಂಗಡಿ ನಡೆಸುತ್ತಿದ್ದಾರೆ. ಈ ವಸ್ತುಗಳನ್ನು ಅವರು ಮೈಸೂರು, ಚೆನ್ನರಾಯಪಟ್ಟಣ, ಹೈದರಾಬಾದ್, ಬೆಂಗಳೂರು ಮುಂತಾದ ಸ್ಥಳಗಳಿಂದ ತಂದು ಮಾರಾಟ ಮಾಡುತ್ತಾರೆ ಎಂದು ತಿಳಿದುಬರುತ್ತದೆ.

[illegible]

[illegible]

ಭಾರತದ ಬುಡಕಟ್ಟು ಜನಾಂಗಗಳಲ್ಲಿ ಒಂದಾದ ಲಂಬಾಣಿ ಮಹಿಳಾ ಉಡುಪುಗಳು ವಿದೇಶಿ ಮಹಿಳಾ ಪ್ರವಾಸಿಗರನ್ನು ತುಂಬಾ ಆಕರ್ಷಿಸಿರುವುದು ಕಂಡುಬರುತ್ತದೆ. ಲಂಬಾಣಿ ಉಡುಪುಗಳನ್ನು ಕೆಂಪು ಬಟ್ಟೆಯಿಂದ ತಯಾರಿಸಲಾಗಿರುತ್ತದೆ. ಅದಕ್ಕೆ ಅಲ್ಲಲ್ಲಿ ಕನ್ನಡಿಯ ಚೂರುಗಳನ್ನು ಕಸೂತಿಯಿಂದ ಅಳವಡಿಸಲಾಗಿರುತ್ತದೆ. ಇದೇ ಬಟ್ಟೆಯಿಂದ ದಿನನಿತ್ಯ ಬಳಸುವ ಕೈ ಚೀಲ, ಚಿಕ್ಕ ಪರ್ಸುಗಳನ್ನು ಸಹ ತಯಾರಿಸಲಾಗುತ್ತದೆ. ಹೆಚ್ಚಿನ ಸಂಖ್ಯೆಯ ವಿದೇಶಿಯರು ಈ ಬಗೆಯ ಉಡುಪು ಮತ್ತು ವಸ್ತುಗಳನ್ನು ಕೊಳ್ಳುತ್ತಾರೆ. ಈ ವಸ್ತುಗಳನ್ನು ಲಂಬಾಣಿಗಳೆ ಮಾರಾಟ ಮಾಡುವುದು ಕಾಣಬಹುದಾಗಿದೆ. ಆದರೆ ಇತ್ತೀಚಿಗೆ ಎಲ್ಲ ಅಂಗಡಿಗಳಲ್ಲಿ ಈ ಉಡುಪುಗಳನ್ನು ಮಾರಾಟ ಮಾಡಲಾಗುತ್ತಿದೆ. ಇದರಿಂದ ತಮ್ಮ ವ್ಯಾಪಾರಕ್ಕೆ ತೊಂದರೆಯಾಗುತ್ತಿದೆ ಎಂಬುದು ಲಂಬಾಣಿ ವ್ಯಾಪಾರಿಗಳ ಅಭಿಪ್ರಾಯ ವಾಗಿದೆ. ಈ ಉಡುಪುಗಳನ್ನು ಸಮಾಜದ ಇತರ ಕೋಮಿನ ವ್ಯಾಪಾರಿಗಳು ಗದಗ ಮತ್ತು ಹುಬ್ಬಳ್ಳಿಯಿಂದ ತಂದು ಮಾರಾಟ ಮಾಡಲಾಗುತ್ತದೆ ಎಂದು ಹೇಳಿಕೊಳ್ಳುತ್ತಾರೆ.

ಹಂಪೆಯ ಪುಸ್ತಕ ಮಾರಾಟ ಮಳಿಗೆಗಳಲ್ಲಿ ಸುಗಂಧ ದ್ರವ್ಯ, ಊದಬತ್ತಿ, ದಿನ ಬಳಕೆ ವಸ್ತುಗಳನ್ನು ಸಹ ಮಾರಾಟ ಮಾಡಲಾಗುತ್ತದೆ. ಒಂದು ಅಂಗಡಿಯಲ್ಲಿ ಇತಿಹಾಸ, ಆಧ್ಯಾತ್ಮಿಕ ಮತ್ತು ಇಂಗ್ಲಿಷಿನ ಶ್ರೇಷ್ಠ ಕಾದಂಬರಿ ಮತ್ತಿತರ ಪುಸ್ತಕಗಳನ್ನು ಮಾರಾಟ ಮಾಡಲಾಗುತ್ತದೆ. ಈ ಬಗೆಯ ಅಂಗಡಿಯನ್ನು 1980ರ ಪೂರ್ವದಲ್ಲಿ ಲಿಂಗಾಯತ ಕೋಮಿನ ಕಾನೂನು ಪದವೀಧರ ರೊಬ್ಬರು ಆರಂಭಿಸಿದರು ಎಂದು ತಿಳಿದುಬರುತ್ತದೆ. ಈ ಅಂಗಡಿಯಲ್ಲಿ ದೊರೆಯುವ ವಸ್ತುಗಳು, ದೊರೆಯುವ ಸೌಲಭ್ಯಗಳು, ಹಂಪೆಯಲ್ಲಿ ನೋಡಬಹುದಾದ ಮುಖ್ಯ ಸ್ಥಳಗಳ ವಿವರ ನಮೂದಿಸಿದ ಭೂಪಟವನ್ನು ಅಚ್ಚು ಹಾಕಿಸಿ ಉಚಿತವಾಗಿ ಹಂಚಲಾಗುತ್ತದೆ. ಇಲ್ಲಿ ಆರೋಗ್ಯ, ವಿಜ್ಞಾನ, ಯೋಗ ಮುಂತಾದ ಪುಸ್ತಕಗಳು ಕನ್ನಡ ಮತ್ತು ಇಂಗ್ಲೀಷ್ ಭಾಷೆಯಲ್ಲಿ ದೊರೆಯುತ್ತವೆ. ಸಿಂಗ್‌ರ ಅತಿಥಿಗೃಹದಲ್ಲೊಂದು ಪುಸ್ತಕ ಅಂಗಡಿಯಿದೆ. ನಾಯ್ಡು ಕೋಮಿಗೆ ಸೇರಿದ ಉಳಿದೆರಡು ಪುಸ್ತಕದ ಅಂಗಡಿಗಳು ಅತಿಥಿಗೃಹ ಮತ್ತು ಟ್ರಾವೆಲರ್ಸ್ ಹೌಸ್‌ಗಳ ಜೊತೆಯಲ್ಲಿವೆ. ಆದರೂ ಇವು ಒಟ್ಟಾಗಿ ಒಂದೆ ಸ್ಥಳದಲ್ಲಿಲ್ಲದೆ ಬೇರೆ ಬೇರೆ ಸ್ಥಳಗಳಲ್ಲಿ ಇವೆ.

ಹಂಪೆಗೆ ಬರುವ ಪ್ರವಾಸಿಗರ ಬಟ್ಟೆ ಸ್ವಚ್ಛಗೊಳಿಸುವ ಎರಡು ದೋಬಿ ಅಂಗಡಿಗಳು ಇವೆ. ಕೆಲವು ಪ್ರವಾಸಿಗರು ದೋಬಿ ಅಂಗಡಿಗಳಿಗೆ ಬಂದು ಬಟ್ಟೆಗಳನ್ನು ಸ್ವಚ್ಛಗೊಳಿಸಲು ಕೊಟ್ಟರೆ, ಇನ್ನು ಕೆಲವರು ತಾವು ಉಳಿದಿರುವ ಅತಿಥಿಗೃಹಗಳಿಗೆ ಅವರಿಗೆ ಬರಲು ತಿಳಿಸುತ್ತಾರೆ. ಅತಿಥಿಗೃಹದ ಮಾಲಿಕರು ವಿದೇಶಿಯರ ಉಡುಪುಗಳನ್ನು ಅತಿಥಿ ಗೃಹದಲ್ಲಿಯೆ ಕಸಗೂಡಿಸುವ ಕೂಲಿ ಹೆಂಗಸರಿಂದ ತೊಳೆಸುತ್ತಾರೆ,ಹಾಗೂ ಅದಕ್ಕೆ ಚಾರ್ಜ್ ತೆಗೆದುಕೊಳ್ಳುತ್ತಾರೆ. ಇಲ್ಲವೆ ಅತಿಥಿ ಗೃಹದ ಮಾಲಿಕರೆ ದೋಬಿಯನ್ನು ಅತಿಥಿಗೃಹಗಳಿಗೆ ಕರೆಸುತ್ತಾರೆ. ಅಥವಾ ತಾವೇ ವಿದೇಶೀಯರಿಂದ ಹಣ ಸಂಗ್ರಹಿಸಿ ದೋಬಿಗೆ ನೀಡುತ್ತಾರೆ. ದೋಬಿ ಒಂದು ಉಡುಪು ಸ್ವಚ್ಛಗೊಳಿಸಿ,ಇಸ್ತ್ರಿ ಮಾಡಿ ಕೊಡಲು ಆರು ರೂಗಳನ್ನು ಪಡೆಯುತ್ತಾರೆ.

ಹಂಪೆಯು ಧಾರ್ಮಿಕ ಮತ್ತು ಐತಿಹಾಸಿಕ ಸ್ಥಳವಾಗಿರುವುದರಿಂದ ಇಲ್ಲಿಗೆ ದೇಶಿಯ ಮತ್ತು ವಿದೇಶಿಯರು ಕ್ರಮವಾಗಿ ಯಾತ್ರಿಕರು ಮತ್ತು ಪ್ರವಾಸಿಗರಾಗಿ ಭೇಟಿ ನೀಡುತ್ತಾರೆ. ದೇಶಿಯ ಯಾತ್ರಿಕರು ದೇವರ ಹೆಸರಿನಲ್ಲಿ ಹರಕೆ ತೀರಿಸಲು ಅಥವಾ ಕರ್ಮಾಚರಣೆ ನಡೆಸಲು ಇಲ್ಲವೆ ಕೇಶಮುಂಡನ ಮಾಡಿಸಿಕೊಳ್ಳಲು ಬರುತ್ತಾರೆ. ವಿದೇಶಿ ಪ್ರವಾಸಿಗರು ಕೇಶಮುಂಡನವನ್ನು ಖುಷಿಗಾಗಿ, ಫ್ಯಾಷನ್‌ಗಾಗಿ ಮಾಡಿಸಿಕೊಳ್ಳುತ್ತಾರೆ. ಕೆಲವು ವಿದೇಶಿಯರು ತಲೆ ಕೂದಲನ್ನು ವಿಶಿಷ್ಟ ವಿನ್ಯಾಸಗಳಲ್ಲಿ ತೆಗೆಸಿಕೊಳ್ಳುತ್ತಾರೆ. ವಿದೇಶಿ ಪ್ರವಾಸಿಗರು ಹೇಳಿದ ಮಾದರಿಯಲ್ಲಿಯೆ ತಲೆಯ ಕೂದಲನ್ನು ತೆಗೆದು ಮೆಚ್ಚುಗೆ ಗಳಿಸುವ ಕ್ಷೌರಿಕರು ಹೆಚ್ಚು ಹಣ ಗಳಿಸುತ್ತಾರೆ. ಇಂಥ ಅಂಗಡಿಗಳ ಸಂಖ್ಯೆ ಎರಡಿವೆ. ಕೆಲವು ವಿದೇಶಿ ಪ್ರವಾಸಿಗರು ಮುಖಕ್ಷೌರ ಮಾಡಿಕೊಳ್ಳಲು ವಿದ್ಯುತ್‌ಯಂತ್ರಗಳನ್ನು ಬಳಸಿದರೆ, ಇನ್ನು ಕೆಲವರು ಸೆಲೂನ್‌ಗಳಿಗೆ ಭೇಟಿ ಕೊಡುತ್ತಾರೆ. ಕ್ಷೌರಿಕ ಅಂಗಡಿಯ ಮಾದರಿಯಲ್ಲಿಯೆ ಹೆಂಗಸರಿಗೆ ಬ್ಯೂಟಿಪಾರ್ಲರ್ ಶಾಪನ್ನು ಅನಂತಶಯನಗುಡಿ ಗ್ರಾಮದ ಮಹಿಳೆಯೊಬ್ಬರು ನಡೆಸುತ್ತಿದ್ದಾರೆ. ಇಲ್ಲಿ ಬಾಡಿ ಮಸಾಜ್ ಕೂಡ ಮಾಡಲಾಗುತ್ತದೆ. ವಿದೇಶಿ ಮಹಿಳಾ ಪ್ರವಾಸಿಗರು ಬ್ಯೂಟಿಪಾರ್ಲರ್ ಶಾಪಿಗೆ ಹೆಚ್ಚಿನ ಸಂಖ್ಯೆಯಲ್ಲಿ ಭೇಟಿ ನೀಡುತ್ತಾರೆ. ಅನ್‌ಸೀಜನ್‌ನಲ್ಲಿ ಈ ಅಂಗಡಿಗಳಿಗೆ ವ್ಯಾಪಾರ ಬಹಳ ಕಡಿಮೆಯಿರುತ್ತದೆ ಎಂದು ಮಾಲಿಕರು ಹೇಳುತ್ತಾರೆ.

ಪುರುಷರು ಬಾಡಿ ಮಸಾಜ್ ಮಾಡುವ ವ್ಯವಸ್ಥೆ ಇದ್ದರೂ ಮಸಾಜ್ ಮಾಡುವವರು ಪ್ರತ್ಯೇಕ ಅಂಗಡಿಗಳನ್ನು ಆರಂಭಿಸಿರುವಂತೆ ಕಂಡು ಬರುವುದಿಲ್ಲ. ಅತಿಥಿಗೃಹಗಳಲ್ಲಿ ಮಸಾಜ್ ಮಾಡಲಾಗುವ ಬಗ್ಗೆ ವಿದೇಶಿ ಪ್ರವಾಸಿಗರಿಗೆ ತಿಳಿದಿರುವುದರಿಂದ ಬಾಡಿ ಮಾಸಾಜ್ ಮಾಡುವವರ ಬಗ್ಗೆ ತಾವೆ ವಿಚಾರಿಸುತ್ತಾರೆ. ಅತಿಥಿ ಗೃಹಗಳ ಮಾಲಿಕರು ಅವರಿಗೆ ಮಸಾಜ್ ಮಾಡುವವರ ವಿಳಾಸ ಕೊಡುತ್ತಾರೆ. ಇಲ್ಲವೆ ಅವರನ್ನು ಅತಿಥಿಗೃಹಗಳಿಗೆ ಕರೆಸಿ ವಿದೇಶಿಯರಿಗೆ ಪರಿಚಯ ಮಾಡಿಸಿಕೊಡುತ್ತಾರೆ. ಪ್ರವಾಸಿಗರು ಮತ್ತೊಬ್ಬ ಪ್ರವಾಸಿಗರಿಂದ ತಿಳಿದು ಮಸಾಜ್ ಮಾಡಿಸಿಕೊಳ್ಳಲು ಅವರಲ್ಲಿಗೆ ಹೋಗುತ್ತಾರೆ. ಹೆಚ್ಚಿನ ಸಂದರ್ಭಗಳಲ್ಲಿ ವಿಶೇಷವಾಗಿ ಸೀಜನ್ ಕಾಲದಲ್ಲಿ ಅತಿಥಿಗೃಹಗಳಿಗೆ ಮಸಾಜ್ ಮಾಡುವವರು ಬಂದು ಪ್ರವಾಸಿಗರನ್ನು ಕೇಳುತ್ತಾರೆ ಎಂದು ತಿಳಿದುಬರುತ್ತದೆ.

ಈಜು ಟ್ಯೂಬುಗಳು ಮತ್ತು ನಾಡದೋಣಿಗಳು

ವಿದೇಶಿಯರು ತಂಪು ಹವಮಾನವನ್ನು ಹೆಚ್ಚು ಇಷ್ಟ ಪಡುತ್ತಾರೆ. ಆದರೆ ಪ್ರವಾಸಿಗರು ಹೆಚ್ಚು ಬರುವುದು ಜನವರಿಯಿಂದ ಏಪ್ರಿಲ್ ತಿಂಗಳ ಮಧ್ಯಕಾಲದಲ್ಲಿ ಈ ಪ್ರದೇಶದಲ್ಲಿ ಬಿಸಿಲು ಹೆಚ್ಚಾಗಿರುವುದರಿಂದ ಪ್ರವಾಸಿಗರು ಬಿಸಿಲಿನ ತಾಪ ತಪ್ಪಿಸಿಕೊಳ್ಳಲು ಹಂಪೆ ಗ್ರಾಮದ ಬದಿಯಲ್ಲಿಯೆ ಹರಿಯುವ ತುಂಗಬದ್ರಾ ನದಿಗೆ ಇಳಿಯುತ್ತಾರೆ. ನದಿಗೆ ಇಳಿಯುವ ಹೆಂಗಸರು ಮತ್ತು ಗಂಡಸರು 4 ಚಕ್ರದ ವಾಹನಗಳ ಟ್ಯೂಬುಗಳನ್ನು ಬಳಸುತ್ತಾರೆ. ಈ ಟ್ಯೂಬ್‌ನ ಮೇಲೆ ಮಲಗಿ ಈಜುವುದು,

[illegible]

ಲಿಂಗ ಭೇದ ಮರೆತು ಜಲ ಕ್ರೀಡೆ ಆಡುವುದು ಪ್ರವಾಸಿಗರ ಮುಕ್ತ ಸ್ವಭಾವವಾಗಿರುವಂತೆ ಕಂಡು ಬರುತ್ತದೆ. ಪ್ರವಾಸಿಗರು ನದಿಯಲ್ಲಿ ಮಧ್ಯಾಹ್ನದ ಸಮಯದಲ್ಲಿ ನಿರಂತರವಾಗಿ 4 ರಿಂದ 5 ಗಂಟೆಗಳ ಕಾಲ ನೀರಿನಲ್ಲಿ ಕಾಲಕಳೆಯುವುದನ್ನು ಕಾಣಬಹುದು. ಕೆಲವರು ನದಿಯ ಮೇಲಿನ ಭಾಗದಿಂದ 1 ರಿಂದ 2 ಕಿ.ಮೀ.ದೂರದವರೆಗೆ ಸಾಗಿ ಹೋಗುತ್ತಾರೆ. ಆವರಿಗೆ ಈ ಟ್ಯೂಬ್‌ಗಳನ್ನು ಅತಿಥಿಗೃಹ, ರೆಸ್ಟೋರೆಂಟ್, ಪೆಟ್ಟಿಗೆ ಅಂಗಡಿ ಮತ್ತು ಸೈಕಲ್ ಶಾಪ್ ಮಾಲಿಕರು ಪೂರೈಸಿ ದಿನವೊಂದಕ್ಕೆ ಟ್ಯೂಬ್‌ನ ಬಾಡಿಗೆ ರೂ 30 ರಿಂದ 40ರೂಪಾಯಿ ಪಡೆಯುತ್ತಾರೆ.

ಹಂಪೆಯ ಪಕ್ಕದಲ್ಲಿ ನದಿಯ ಆಚೆಗಿರುವ ವಿರುಪಾಪುರ, ಆನೆಗೊಂದಿ, ಹನುಮನಹಳ್ಳಿ ಹಾಗೂ ಸಾಣಾಪುರ ಗ್ರಾಮಗಳಿಗೆ ಸೇರಿದ ಗ್ರಾಮಸ್ಥರು ಮತ್ತು ಪ್ರವಾಸಿಗರು ಅಲ್ಲಿಗೆ ಹೋಗಲು ದೋಣಿಗಳನ್ನು ಅವಲಂಬಿಸಿರುವುದು ಅನಿವಾರ್ಯವಾಗಿದೆ. ಸ್ಥಳೀಯರು ಒಂದು ದಡದಿಂದ ಇನ್ನೊಂದು ದಡಕ್ಕೆ ವ್ಯಾಪಾರ, ವ್ಯವಹಾರ ಮತ್ತು ವೈಯಕ್ತಿಕ ಕೆಲಸಗಳಿಗಾಗಿ ಹೋಗಿಬರುತ್ತಾರೆ. ವಿದೇಶಿಯರು ಹಂ ಪೆಯ ಇನ್ನೊಂದು ದಡದಲ್ಲಿರುವ ಐತಿಹಾಸಿಕ ಹಾಗೂ ಧಾರ್ಮಿಕ ಸ್ಮಾರಕಗಳನ್ನು ನೋಡಲು ಹಾಗೂ ಆ ದಡದಲ್ಲಿ ಸ್ಥಾಪಿಸಿರುವ ರೆಸ್ಟೋರೆಂಟ್‌ಗಳಿಗೆ ಹೋಗಲು ಮತ್ತು ವಿರುಪಾಪುರ ಗಡ್ಡೆಗೆಯಲ್ಲಿ ಬೆಟ್ಟ ಗುಡ್ಡಗಳ ಮಧ್ಯ ತಲೆಯತ್ತಿ ನಿಂತಿರುವ ಕುಟಿರ ಮಾದರಿ ಅತಿಥಿಗೃಹಗಳಲ್ಲಿ ತಂಗಲು ಹೋಗುತ್ತಾರೆ. ತುಂಗಾಬದ್ರ ನದಿ ದಾಟಿಸಲು ಪ್ರತಿನಿತ್ಯ ಬೆಳಿಗ್ಗೆ 7 ಗಂಟೆಯಿಂದ ಸಾಯಂಕಾಲ 7ಗಂಟೆಯವರೆಗೆ ನಾಡದೋಣಿ ನಡೆಸುತ್ತಾರೆ. ಒಂದು ದಡದಿಂದ ಮತ್ತೊಂದು ದಡಕ್ಕೆ ತಲುಪಿಸಲು ಸ್ಥಳೀಯರಿಗೆ ಎರಡು ರೂ. ಪಡೆದರೆ, ವಿದೇಶಿಯರಿಗೆ ಐದು ರೂ.ಗಳನ್ನು ಪಡೆಯಲಾಗುತ್ತದೆ. ದ್ವಿಚಕ್ರವಾಹನ ಒಂದಕ್ಕೆ 15 ರೂಪಾಯಿ ತೆಗೆದುಕೊಳ್ಳಲಾಗುತ್ತದೆ. ಈ ನಾಡದೋಣಿಗಳಿಗೆ ಗ್ರಾಮ ಪಂಚಾಯತಿ ಟೆಂಡರ್ ಕರೆದಾಗ ಆಯಾ ದಡಗಳಿಗೆ ಸಂಬಂಧಿಸಿದ ಗ್ರಾಮಸ್ಥರು ಸಾಮಾನ್ಯವಾಗಿ ಟೆಂಡರ್ ಪಡೆದುಕೊಳ್ಳುವುದು ಕಂಡುಬರುತ್ತದೆ. ಈ ರೀತಿಯ ಟೆಂಡರ್‌ನ್ನು ವರ್ಷಕ್ಕೆ ಒಂದು ಬಾರಿ ಕರೆಯಲಾಗುತ್ತದೆ. ಗ್ರಾಮ ಪಂಚಾಯತಿ ನಿರ್ಧರಿಸಿದ ದರ ಪ್ರತಿಯೊಬ್ಬರಿಗೆ ಎರಡು ರೂಪಾಯಿಗಳಾದರೆ ಟೆಂಡರ್ ಪಡೆದವರು ಹೆಚ್ಚಿಗೆ ಹಣವನ್ನು ವಸೂಲಿ ಮಾಡುವುದು ಕಂಡುಬರುತ್ತದೆ. ಸಾರ್ವಜನಿಕರಿಗೆ ದರಗಳ ಬಗ್ಗೆ ಮಾಹಿತಿ ಒದಗಿಸಲು ನದಿಯ ದಡದಲ್ಲಿರುವ ದೊಡ್ಡ ಕಲ್ಲುಗಳ ಮೇಲೆ ಬಿಳಿಬಣ್ಣದಲ್ಲಿ ಬರೆಸಲಾಗಿದ್ದರೂ ಟೆಂಡರ್ ಪಡೆದವರು ಕೆಲವು ದಿನಗಳಲ್ಲೆ ಅದನ್ನು ಕಪ್ಪುಬಣ್ಣದಿಂದ ಅಳಿಸಿಹಾಕಿಸುತ್ತಾರೆ ಎಂದು ತಿಳಿದುಬರುತ್ತದೆ. ಹಲವಾರು ವರ್ಷಗಳಿಂದ ವಡ್ಡರ ಕುಟುಂಬಗಳು ಈ ಟೆಂಡರ್ ಪಡೆಯುತ್ತಿರುವುದೊಂದು ವಿಶೇಷವಾಗಿದೆ.

ಸೀಸನ್‌ನಲ್ಲಿ ದೇಶಿ ಹಾಗೂ ವಿದೇಶಿ ಪ್ರವಾಸಿಗರು ಒಂದು ದಡದಿಂದ ಇನ್ನೊಂದು ದಡಕ್ಕೆ ನಾಡದೋಣಿಯಲ್ಲಿ ಹೋಗಿಬರುವುದು ಹೆಚ್ಚಿರುತ್ತದೆ. ವಿರುಪಾಪುರ(ಗಡ್ಡೆ)ದಲ್ಲಿ ಆಧುನಿಕ ಸಂಪರ್ಕ

ಸಾಧನೆಗಳಾದ ಇಂಟರ್‌ನೆಟ್, ಇ-ಮೇಲ್ ಸೌಲಭ್ಯಗಳಿಲ್ಲ. ಆದರೆ ಅಲ್ಲಿ ಎಸ್.ಟಿ.ಡಿ. ಬೂತ್‌ಗಳು 2 ಇದ್ದು ಅವುಗಳಿಗೆ ಫಾಸ್ಟ್‌ಡೈಲಿಂಗ್ ಸೌಲಭ್ಯವಿರುದಿಲ್ಲ. ಪ್ರವಾಸಿಗರು ಭೇಟಿ ನೀಡುವ ಸ್ಮಾರಕಗಳು ಹಂಪೆಯ ಈ ಭಾಗದಲ್ಲಿಯೂ ಇವೆ. ದಿನನಿತ್ಯದ ವಸ್ತುಗಳನ್ನು ಕೊಳ್ಳಲು, ಮುಂದಿನ ಪ್ರಯಾಣಕ್ಕಾಗಿ ಆಚೆಗಿನ ದಡದಲ್ಲಿ ವಾಸ ಮಾಡುವವರು ಮತ್ತು ಪ್ರವಾಸಿಗರು ಹಂಪೆಗೆ ಬಂದು ಹೊಸಪೇಟೆ ಹೋಗ ಬೇಕಾಗುತ್ತದೆ. ಹಾಗಾಗಿ ಅಲ್ಲಿನ ಅತಿಥಿಗೃಹದಲ್ಲಿ ಉಳಿದವರು ಹಂಪೆಯ ಮುಖಾಂತರವೆ ಹೋಗಬೇಕು. ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿದ್ದಾಗ 3 ರಿಂದ 4 ನಾಡದೋಣಿಗಳನ್ನು ನಡೆಸಲಾಗುತ್ತದೆ. ಜನವರಿ -ಫೆಬ್ರವರಿ ತಿಂಗಳಲ್ಲಿ ನಾಡದೋಣಿ ನಡೆಸುವವರಿಗೆ ದಿನಕ್ಕೆ ಸಾವಿರ ರೂ.ಗಳವರೆಗೆ ವರಮಾನವಿರುತ್ತದೆ ಎಂದು ಹೇಳಲಾಗುತ್ತದೆ. ವಿದೇಶಿ ಪ್ರವಾಸಿಗರಿಗೆ ನಾಡದೋಣಿಯಲ್ಲಿ ಪ್ರಯಾಣ ಮಾಡುವುದು ಮೋಜೆನಿಸುತ್ತದೆ. ಆದ್ದರಿಂದ ಪ್ರವಾಸಿಗರು ಸೇತುವೆ ನಿರ್ಮಾಣ ಒಳ್ಳೆಯದಲ್ಲ ಎಂಬ ಅಭಿಪ್ರಾಯವನ್ನು ವ್ಯಕ್ತ ಪಡಿಸುತ್ತಾರೆ.

ಕಾನೂನು ವ್ಯವಸ್ಥೆ

ಕಮಲಾಪುರದ ಪೋಲಿಸ್‌ಠಾಣೆಯ ಉಸ್ತುವಾರಿಯಲ್ಲಿ ಹಂಪೆಯಲ್ಲಿ ಹೊರವಲಯದ ಪೋಲಿಸ್‌ಠಾಣೆಯಾಗಿ 1982ರಲ್ಲಿ ಸ್ಥಾಪಿಸಲಾಯಿತು. ಈ ಠಾಣೆಯಲ್ಲಿ ಒಬ್ಬ ಅಸಿಸ್ಟೆಂಟ್ ಸಬ್‌ಇನ್‌ಸ್ಪೆಕ್ಟರ್, ಇಬ್ಬರು ಮುಖ್ಯ ಪೇದೆಗಳು ಹಾಗೂ ಐವರು ಪೇದೆಗಳಿದ್ದು, 1998ರಿಂದ ಹಂಪೆಗೆ ಬಂದ ವಿದೇಶಿ ಪ್ರವಾಸಿಗರ ಮೂಲ ಮತ್ತು ತಂಗುವ ಅವಧಿ ಕುರಿತ ಮಾಹಿತಿಯನ್ನು ಹಂಪೆಯ ವಿರುಪಾಕ್ಷೇಶ್ವರ ದೇವಸ್ಥಾನದ ಆವರಣದಲ್ಲಿರುವ ಪೋಲಿಸ್ ಠಾಣೆಯಲ್ಲಿ ತಪ್ಪದೆ ನಮೂದಿಸ ಬೇಕೆಂಬ ನಿಯಮವನ್ನು ಪೋಲಿಸ್ ಇಲಾಖೆ ಮಾಡಿರುವುದು ಕಂಡುಬರುತ್ತದೆ. 1982ರಲ್ಲಿ ಪೋಲಿಸ್‌ಸ್ಟೇಷನ್ ಪ್ರಾರಂಭವಾಗಿದ್ದರೂ ಕೂಡ 1998ರವರೆಗೆ ಯಾವುದೆ ವಿದೇಶಿಪ್ರವಾಸಿಗರ ಬಗ್ಗೆ ಮಾಹಿತಿ ದೊರೆಯುವುದಿಲ್ಲ.[9] 1998ರಲ್ಲಿ ನಡೆದ ದಕ್ಷಿಣ ಕೋರಿಯಾ ಮೂಲದ ಪ್ರವಾಸಿಗನ ಕೊಲೆ ಘಟನೆಯು ವಿದೇಶಿ ಪ್ರವಾಸಿಗರ ಮಾಹಿತಿ ಸಂಗ್ರಹಿಸಲು ಕಾರಣವೆಂದು ಪೋಲಿಸ್ ಮೂಲಗಳಿಂದ ತಿಳಿದುಬರುತ್ತದೆ. ನಂತರ ಬಂದ ವಿದೇಶಿಯರು ತಮ್ಮ ವಿ.ಸಾ. ಹಾಗೂ ಪಾಸ್‌ಪೋರ್ಟ್ ನಂಬರ್ ಮೊದಲಾದ ಹಲವು ವಿವರಗಳನ್ನು ಸ್ಟೇಷನ್‌ನಲ್ಲಿರುವ ವಿದೇಶಿ ಪ್ರವಾಸಿಗರ ಚಲನವಲನ ಪುಸ್ತಕದಲ್ಲಿ ಕಡ್ಡಾಯವಾಗಿ ನಮೂದಿಸಬೇಕೆಂದು ಪ್ರತಿಯೊಂದು ಅತಿಥಿಗೃಹ ಮತ್ತು ರೆಸ್ಟೋರೆಂಟ್‌ಗಳಲ್ಲಿ ಫಲಕಗಳನ್ನು ತೂಗು ಹಾಕಲು ಮಾಲಿಕರಿಗೆ ಸೂಚನೆ ನೀಡಲಾಗಿದೆ. ಇದರಿಂದ ವಿದೇಶಿ ಪ್ರವಾಸಿಗರು ಪೋಲಿಸ್ ಠಾಣೆಯಲ್ಲಿ ತಮ್ಮ ವಿವರಗಳನ್ನು ದಾಖಲಿಸುತ್ತಾರೆಂದು ತಿಳಿದುಬರುತ್ತದೆ. ಇದರ ಜೊತೆಗೆ ಮಾಲಿಕರು ತಮ್ಮ ಅತಿಥಿಗೃಹದಲ್ಲಿ ತಂಗಿರುವ ಪ್ರವಾಸಿಗರ ಸಂಖ್ಯೆ ಮತ್ತಿತರ ವಿವರಗಳನ್ನೊಳಗೊಂಡ 'ಸಿ' ಫಾರಂನ್ನು ಪ್ರತಿನಿತ್ಯ ಪ್ರತಿಯೊಂದು

ಅತಿಥಿಗೃಹದವರು ತಂದು ಸ್ಟೇಷನ್‌ಗೆ ತಲುಪಿಸವುದು ಕಡ್ಡಾಯಗೊಳಿಸಲಾಗಿದೆ. ಅದರಂತೆ ಪ್ರತಿಯೊಂದು ಅತಿಥಿಗೃಹದ ಮಾಲಿಕರು ಈ ನಿಯಮವನ್ನು ಪಾಲಿಸುತ್ತಿರುವುದು ಕಂಡುಬರುತ್ತದೆ. ಪೋಲಿಸ್ ಠಾಣೆ ಸಿಬ್ಬಂದಿ ಈ ನಿಯಮ ಕುರಿತು ಹೀಗೆ ಹೇಳುತ್ತಾರೆ: ಹಂಪಿಯಲ್ಲಿನ ಸ್ಮಾರಕಗಳು ಹಾಗೂ ಬೆಟ್ಟಗುಡ್ಡಗಳ ಮಧ್ಯದ ನಿರ್ಜನ ಪ್ರದೇಶಕ್ಕೆ ಪ್ರವಾಸಿಗರು ಒಬ್ಬೊಬ್ಬರೆ ಹೋಗುವಂತಹ ಸಂದರ್ಭದಲ್ಲಿ ವಿವಿಧ ರೀತಿಯಲ್ಲಿ ಮೋಸ ಹೋಗುತ್ತಿದ್ದರು. ಇದರಿಂದ ಹಣ, ಕ್ಯಾಮರಾದಂತಹ ಬೆಲೆ ಬಾಳುವ ವಸ್ತುಗಳನ್ನು ದೋಚಲಾಗುತ್ತಿತ್ತು. ಆದರೆ ಈಗ ಪ್ರಕರಣಗಳು ಕಡಿಮೆಯಾಗಿವೆ. ಇದಲ್ಲದೆ ಪ್ರವಾಸಿಗರ ಗಮನಕ್ಕಾಗಿ ಬೀದಿ ಬದಿಗಳಲ್ಲಿ, ಪೋಲಿಸ್ ಠಾಣೆಗಳಲ್ಲಿ, ಅತಿಥಿಗೃಹಗಳಲ್ಲಿ, ಒಬ್ಬಂಟಿಯಾಗಿ ನಿರ್ಜನ ಪ್ರದೇಶಕ್ಕೆ ಹೋಗಬಾರದೆಂಬ ಎಚ್ಚರಿಕೆ ಫಲಕಗಳನ್ನು ಹಾಕಿಸಲಾಗಿದೆ. ಹಂಪೆ ಪ್ರವಾಸಿ ತಾಣವಾಗಿರುವುದರಿಂದ ಗಾಂಜ, ಆಫೀಮು, ಕೊಕೆನ್, ಚರಸ್, ಆ್ಯಶ್, ಮದ್ಯ ಇತ್ಯಾದಿಗಳನ್ನು ಸೇವಿಸುವುದಾಗಲಿ ಮತ್ತು ಮಾರಾಟ ಮಾಡುವುದಾಗಲಿ ಕಾನೂನು ಬಾಹಿರ. ಪೋಲಿಸ್ ಇಲಾಖೆ ಇವೆಲ್ಲವನ್ನು ತಡೆಯಲು ಕಟ್ಟೆಚ್ಚರ ವಹಿಸುತ್ತಿದೆ. ಮುಖ್ಯವಾಗಿ ವಿದೇಶಿ ಪ್ರವಾಸಿಗರಿಗೆ ಯಾವುದೆ ಅಹಿತಕರ ಘಟನೆಗಳು ಆಗದಂತೆ ಎಚ್ಚರ ವಹಿಸಲಾಗುತ್ತಿದೆ .

ಪುರಾತತ್ವ ಇಲಾಖೆ

ಈ ಇಲಾಖೆ ಹಂಪೆಯ ಕಮಲಮಹಲ್ ಸ್ಥಳದಲ್ಲಿ 1975ರಿಂದ ಭೂ ಉತ್ಖನನ ಕಾರ್ಯಗಳನ್ನು ಕೈಗೊಂಡಿದ್ದು, ಅಲ್ಲಿ ಭೂ ಆವೃತವಾಗಿದ್ದ ಐತಿಹಾಸಿಕ ಮಹತ್ವವುಳ್ಳ ಅವಶೇಷಗಳನ್ನು ಹೊರತೆಗೆಯಲಾಗಿದೆ. ಅರಮನೆಯ ಆವರಣದಲ್ಲಿರುವ ಪುಷ್ಕರಣಿ, ಅರಮನೆಯ ಅವಶೇಷಗಳು, ಶಾಸನಗಳು ಮೊದಲಾದವನ್ನು ನೋಡಲು ಪ್ರವಾಸಿಗರಿಗೆ ಅನುವು ಮಾಡಿಕೊಡಲಾಗಿದೆ.ಹಾಗೂ ಚರಿತ್ರೆಯ ಮೇಲೆ ಬೆಳಕು ಚೆಲ್ಲುವಂತೆ ಮಾಡಿವೆ. ಪುಷ್ಕರಣಿಯು ಅಂದಿನ ಕಾಲದ ಗತ ವೈಭವವನ್ನು ಸಾರಿ ಹೇಳುತ್ತದೆ.[10] ವಿಜಯ ವಿಠಲ ದೇವಸ್ಥಾನ ಮತ್ತು ಕಮಲಮಹಲ್ ಸ್ಮಾರಕಗಳನ್ನು ನೋಡಲು ಪ್ರವೇಶ ದರವನ್ನು ನಿಗಧಿಗೊಳಿಸಲಾಗಿದೆ. ಉಳಿದ ಸ್ಮಾರಕ ಮತ್ತು ಭೂ ಉತ್ಖನನ ಪ್ರದೇಶಗಳಿಗೆ ಯಾವುದೆ ಪ್ರವೇಶ ದರ ಇರುವುದಿಲ್ಲ. ಕೇಂದ್ರ ಮತ್ತು ರಾಜ್ಯ ಸರಕಾರಗಳಗೆ ಸೇರಿದ ಎರಡು ಇಲಾಖೆಗಳು ವಸ್ತು ಸಂಗ್ರಹಾಲಯವನ್ನು ಹೊಂದಿವೆ. ಭಾರತಿಯ ಪುರಾತತ್ವ ವಸ್ತು ಸಂಗ್ರಹಾಲಯದ ಕಟ್ಟಡ ಕಮಲಾಪುರದಲ್ಲಿ ಇದ್ದು ಇದರ ಪ್ರವೇಶ ದರ ಒಬ್ಬರಿಗೆ ರೂ.ಐದು ನಿಗದಿಮಾಡಲಾಗಿದೆ. ಇಲ್ಲಿ ಭೂ ಉತ್ಖನನದಲ್ಲಿ ದೊರತ ವಿರೂಪಗೊಂಡ ಮೂರ್ತಿ ಶಿಲ್ಪಗಳು, ತಾಮ್ರದ ಮತ್ತು ತಾಳೆಗರಿಗಳ ಶಾಸನಗಳು, ವಿಜಯನಗರ ಕಾಲದ ಯುದ್ಧದಲ್ಲಿ ಬಳಸುತ್ತಿದ್ದ ಖಡ್ಗ, ಗುರಾಣಿಗಳು ಹಾಗೂ ಆಗಿನ ಜನರು ಬಳಸುತ್ತಿದ್ದ ದಿನ ಬಳಕೆಯ ವಸ್ತುಗಳು ಮತ್ತು ಆಭರಣಗಳು ಮೊದಲಾದವನ್ನು ನೋಡಬಹುದು. ಪ್ರವಾಸಿಗರು ಈ ವಸ್ತು ಸಂಗ್ರಹಾಲಯಕ್ಕೆ ಭೇಟಿ ನೀಡುತ್ತಾರೆ.

ರಾಜ್ಯ ಪುರಾತತ್ವ ವಸ್ತು ಸಂಗ್ರಹಾಲಯದ ನಿರ್ದೇಶನಾಲಯ ಮುಖ್ಯ ಕಛೇರಿಯನ್ನು ಮೈಸೂರಿನಿಂದ ಹಂಪೆಗೆ ಸ್ಥಳಾಂತರಿಸಲಾಗಿದೆ. ಈ ಕಛೇರಿಗೆ ಸ್ವಂತ ಕಟ್ಟಡ ಇಲ್ಲದಿರುವುದರಿಂದ ತಾತ್ಕಾಲಿಕವಾಗಿ ಹೊಸಪೇಟೆಯಲ್ಲಿನ ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದೆ. ರಾಜ್ಯ ಪುರಾತತ್ವ ಸಂಗ್ರಹಾಲಯವು ತನ್ನದೆ ಆದ ವಸ್ತುಸಂಗ್ರಹಾಲಯವನ್ನು ಕಮಲಮಹಲ್ ಹತ್ತಿರವಿರುವ ಕಟ್ಟಡದಲ್ಲಿ ಹೊಂದಿದೆ. ಇಲ್ಲಿ ಪ್ರವಾಸಿಗರಿಗೆ ಯಾವುದೆ ಪ್ರವೇಶ ದರವನ್ನು ತೆಗೆದುಕೊಳ್ಳು ವುದಿಲ್ಲ. 1856ರಲ್ಲಿ ಅಲೆಕ್ಸಾಂಡರ್ ಜೆ. ಗ್ರೀನ್ ಲಾ ತೆಗೆದ ಹಂಪೆಯ ಬಜಾರ ಮತ್ತು ಸ್ಮಾರಕಗಳ ಛಾಯಾ ಚಿತ್ರಗಳನ್ನು ಹಾಗೂ 1983ರಲ್ಲಿ ಜಾನ್ ಗೊಲ್ಲಿಂಗ್ ತೆಗೆದ ಅದೇ ಕೋನದ ಕಪ್ಪು ಮತ್ತು ಬಿಳುಪು ಛಾಯಾಚಿತ್ರಗಳನ್ನು ಪ್ರದರ್ಶನ ಇಡಲಾಗಿದೆ. ಹಂಪೆಯ ಬದಲಾದ ಚಿತ್ರಣವನ್ನು ಅರ್ಥೈಸಿಕೊಳ್ಳಲು ಪ್ರವಾಸಿಗರಿಗೆ ಈ ಚಿತ್ರಗಳು ತುಂಬಾ ಅನುಕೂಲಕರವಾಗಿವೆ. ಇಲ್ಲಿ ಈ ಚಿತ್ರಗಳನ್ನು ವೀಕ್ಷಿಸಲು ಎಲ್ಲರಿಗೂ ಮುಕ್ತ ಅವಕಾಶವಿದೆ. ಈ ವಸ್ತು ಸಂಗ್ರಹಾಲಯ ಹಂಪೆ ಬಜಾರಿನ ಪೂರ್ವದ ಕೊನೆಯಲ್ಲಿ ಇರುವುದರಿಂದ ಪ್ರವಾಸಿಗರು ಕಡಿಮೆ ಸಂಖ್ಯೆಯಲ್ಲಿ ಬಂದು ಹೋಗುತ್ತಾರೆಂಬುದು ಅಲ್ಲಿಯ ಸಿಬ್ಬಂದಿಗಳ ಅಭಿಪ್ರಾಯವಾಗಿದೆ.

ಈ ವಿವರಗಳಿಂದ ವಿದೇಶಿ ಪ್ರವಾಸಿಗರ ಅಭಿರುಚಿಗೆ ತಕ್ಕಂತೆ, ವಿದೇಶಿಯರು ಬಯಸುವ ಮಾದರಿಯಲ್ಲಿಯೆ ಮೂಲ ಸೌಲಭ್ಯಗಳನ್ನು ಒದಗಿಸಲು ಸ್ಥಳೀಯರು ನಿರತರಾಗಿದ್ದಾರೆ ಎಂದು ತಿಳಿದು ಬರುತ್ತದೆ. ಈ ಕಾರ್ಯದಲ್ಲಿ ಅತಿಥಿಗೃಹ, ರೆಸ್ಟೋರೆಂಟ್, ಹೋಟೆಲ್, ಇಂಟರ್‌ನೆಟ್, ವಿದೇಶಿ ಹಣ ವಿನಿಮಯ ಮಳಿಗೆ ಮತ್ತು ಟ್ರಾವೆಲರ್ಸ್ ಹೌಸ್‌ಗಳು ಪ್ರಮುಖ ಪಾತ್ರವಹಿಸಿವೆ. ಇಂಥ ಪ್ರವಾಸೋದ್ಯಮ ಚಟುವಟಿಕೆಗಳಲ್ಲಿ ತೊಡಗಿಸಿ ಕೊಳ್ಳುವುದರಿಂದ ಹೆಚ್ಚು ಆದಾಯ ಗಳಿಸಬಹುದೆಂಬ ಸ್ಥಳೀಯರ ನಿರೀಕ್ಷೆ ಹುಸಿಯಾಗದೆ ಉಳಿದಿದೆ. ಹಾಗಾಗಿ ವಿದೇಶಿ ಪ್ರವಾಸಿಗರು ಆಧಾರಿತ ಸೇವಾ ಸೌಲಭ್ಯಗಳಲ್ಲಿ ಗ್ರಾಮದ ಜನತೆ ಹೆಚ್ಚು ತೊಡಗಿಸಿಕೊಂಡಿರುವುದು ಕಂಡು ಬರುತ್ತದೆ. ಈ ಅಧ್ಯಾಯದಲ್ಲಿ ಪ್ರವಾಸಿಗರ ಬೇಡಿಕೆಗಳನ್ನು ಸ್ಥಳೀಯರು ಪೂರೈಸಿರುವ ರೀತಿಯನ್ನು ನೋಡಲಾಗಿದೆ. ಮುಂದಿನ ಅಧ್ಯಾಯದಲ್ಲಿ ಸ್ಥಳೀಯರು ಒದಗಿಸುವ ಸೇವಾ ಸೌಲಭ್ಯಗಳ ಬಗ್ಗೆ ವಿದೇಶಿ ಪ್ರವಾಸಿಗರು ಯಾವ ಅಭಿಪ್ರಾಯವನ್ನು ಹೊಂದಿದ್ದಾರೆ ಹಾಗೂ ಅವರ ನಿರೀಕ್ಷೆ ಮತ್ತು ಸೌಲಭ್ಯ ಪಡೆಯುವಲ್ಲಿನ ಅಂತರವನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ.

ಅಡಿಟಿಪ್ಪಣಿಗಳು

1. ಪಂಚಾಯತಿ ಕಾರ್ಯದರ್ಶಿ, *ಗ್ರಾಮಪಂಚಾಯತಿ ಬೇಡಿಕೆ ರಿಜಿಸ್ಟರ್*, ಹಂಪೆ : ಗ್ರಾಮಪಂಚಾಯತಿ ಕಚೇರಿ, 2001
2. ರಾಬಿನ್‌ಸನ್ ಎಚ್., *ಎ ಜಿಯಾಗ್ರಾಫಿ ಆಫ್ ಟೂರಿಜಂ*, ಲಂಡನ್ : ಮೆಕ್ ಡೋನಾಲ್ಡ್ ಅ್ಯಂಡ್ ಇವೆನ್ಸ್, 1976, ಪುಟ. 132

[illegible]

3. *ಗ್ರಾಮಪಂಚಾಯತಿ ಬೇಡಿಕೆ ರಿಜಿಸ್ಟರ್, ಪೂರ್ವೋಕ್ತ*, 2001

4. ಸರಿನ್ ಸಿಂಗ್ ಆ್ಯಂಡ್ ಅದರ್ಸ್ , *ಲೋನ್ಲಿ ಪ್ಲಾನೆಟ್ ಇಂಡಿಯಾ*, ಮೆಲ್ಬರ್ನ್ : ಲೋನ್ಲಿ ಪ್ಲಾನೆಟ್ ಪಬ್ಲಿಕೇಷನ್, 2001, ಪುಟ. 855

5. ಸಬ್ ಪೋಸ್ಟ್ ಮಾಸ್ಟರ್, *ಅಂಚೆ ಕಚೇರಿ ದಾಖಲೆಗಳು*, ಹಂಪೆ : ಸಬ್ ಪೋಸ್ಟ್ ಆಫೀಸ್,2001

6. ನಿರ್ದೇಶಕರು, *ಪ್ರವಾಸೋದ್ಯಮ ಮಾಸ್ಟರ್ ಪ್ಲಾನ್ ಮಾಹಿತಿ ಪುಸ್ತಕ-1997*, ಬೆಂಗಳೂರು: ಪ್ರವಾಸೋದ್ಯಮ ಇಲಾಖೆ, 1997

7. ವೈದ್ಯಾಧಿಕಾರಿಗಳು, *ರೋಗಿಗಳ ನೊಂದಣಿ ಪುಸ್ತಕ*, ಹಂಪೆ : ಆರ್ಯ್‌ವೇದಿಕ್ ಅಸ್ಪತ್ರೆ,2001

8. ವ್ಯವಸ್ಥಾಪಕರು, *ಬ್ಯಾಂಕಿನ ದಾಖಲಾತಿ ಪುಸ್ತಕ*, ಹಂಪೆ : ಕೆನರಾ ಬ್ಯಾಂಕ್,2001

9. ಸಹಾಯಕ ಪೋಲಿಸ್ ಸಬ್ ಇನ್ಸಪೆಕ್ಟರ್, *ದಾಖಲಾತಿ ಪುಸ್ತಕ* , ಹಂಪೆ : ಪೋಲಿಸ್ ಠಾಣೆ,2001

10. ಸ್ಮಾರಕಗಳ ಹಿರಿಯ ಸಂರಕ್ಷಣಾಧಿಕಾರಿ, *ಭೂ ಉತ್ಪನ್ನ ದಾಖಲೆ ಮಾಹಿತಿ ಪುಸ್ತಕ*, ಕಮಲಾಪುರ: ಕೇಂದ್ರ ಪುರಾತತ್ವ ಸರ್ವೇಕ್ಷಣ ಇಲಾಖೆ, 2001

ಕೋಷ್ಟಕ -15

ಅತಿಥಿ ಗೃಹಗಳಲ್ಲಿ ವಿನಿಯೋಜಿಸಿದ ಬಂಡವಾಳದ ಮೊತ್ತ ಮತ್ತು ಮೂಲ (ರೂ.ಗಳಲ್ಲಿ)

ಕ್ರ.ಸಂ.	ಬಂಡವಾಳ	ಅತಿಥಿಗೃಹಗಳ ಸಂಖ್ಯೆ	ಬಂಡವಾಳದ ಮೂಲ	
			ಬ್ಯಾಂಕು	ಇತರೆ
1.	10,000-20,000	06(13.04)	02(33.33)	04(66.67)
2.	20,000-30,000	15(32.61)	06(40.00)	09(60.00)
3.	30,000-50,000	18(39.13)	04(22.22)	14(77.78)
4.	50,000 ರದ ಮೇಲೆ	07(15.22)	02(28.57)	05(71.43)
ಒಟ್ಟು		46(100)	14(30.43)	32(69.57)

ಸೂಚನೆ : ಇತರೆ ಬಂಡವಾಳ ಎಂದರೆ ಸ್ನೇಹಿತರು, ಬಂಧುಗಳು ಅಥವಾ ಸ್ವಂತ ಉಳಿತಾಯ ಮಾಡಿದ ಹಣವಾಗಿರುತ್ತದೆ ಆವರಣದಲ್ಲಿ ಕೊಟ್ಟಿರುವುದು ಶೇಕಡವಾರು ಪ್ರಮಾಣವನ್ನು ಸೂಚಿಸುತ್ತದೆ.

ಮೂಲ : ಪ್ರಾಥಮಿಕ ಮಾಹಿತಿ

ಕೋಷ್ಟಕ -16

ಅತಿಥಿಗೃಹಗಳಲ್ಲಿನ ಕೊಠಡಿಗಳು

ಕ್ರ.ಸಂ.	ಕೊಠಡಿಗಳು	ಅತಿಥಿಗೃಹಗಳು	
		ಸಂಖ್ಯೆ	ಶೇಕಡವಾರು
1.	2-4 ಕೊಠಡಿಗಳು ಇರುವ ಅತಿಥಿಗೃಹಗಳು	18	39.13
2.	5-8 ಕೊಠಡಿಗಳು ಇರುವ ಅತಿಥಿಗೃಹಗಳು	21	45.65
3.	9 ರ ಮೇಲ್ಪಟ್ಟು ಇರುವ ಅತಿಥಿಗೃಹಗಳು	07	15.22
ಒಟ್ಟು ಅತಿಥಿಗೃಹಗಳು		46	100

ಮೂಲ : ಪ್ರಾಥಮಿಕ ಮಾಹಿತಿ

[illegible]

[illegible]

[illegible]

[illegible]

[illegible]

ಕೋಷ್ಟಕ -17

ಅತಿಥಿಗೃಹಗಳಲ್ಲಿನ ಸೌಲಭ್ಯಗಳು

ಕ್ರ.ಸಂ.	ಸೌಲಭ್ಯಗಳು	ಅತಿಥಿಗೃಹಗಳು	
		ಸಂಖ್ಯೆ	ಶೇಕಡವಾರು
1	ಬಾತು ರೂಂ ರಹಿತ ಕೊಠಡಿಗಳು	192	66.21
2	ಬಾತು ರೂಂ ಸಹಿತ ಕೊಠಡಿಗಳು	98	33.79
3	ಅತಿಥಿಗೃಹಗಳಲ್ಲಿನ ಕೊಠಡಿಗಳ ಒಟ್ಟು ಸಂಖ್ಯೆ	290	100
4	ರೂಂಗಳಿಗೆ ಸ್ನಾನದ ಕೊಠಡಿ ಇಲ್ಲದ ಅತಿಥಿಗೃಹಗಳು	28	60.87
5	ಸ್ನಾನದ ಕೊಠಡಿಗಳಿರುವ ಅತಿಥಿಗೃಹಗಳು	18	39.13
	ಒಟ್ಟು ಅತಿಥಿಗೃಹಗಳು	46	100

ಮೂಲ : ಪ್ರಾಥಮಿಕ ಮಾಹಿತಿ

ಕೋಷ್ಟಕ -18

ರೆಸ್ಟೋರೆಂಟ್ ಮತ್ತು ಹೋಟೆಲ್‌ಗಳು ಬಂಡವಾಳದ ಮೂಲದ ವಿವರ (ರೂ.ಗಳಲ್ಲಿ) 2001

ಕ್ರ. ಸಂ.	ಬಂಡಾಳ	ಬಂಡವಾಳದ ಮೂಲ								
		ರೆಸ್ಟೋರೆಂಟ್			ಹೋಟೆಲ್			ಸಂಚಾರಿ ಹೋಟೆಲ್ (ಬಂಡಿ)		
		ಸಂಖ್ಯೆ	ಬ್ಯಾಂಕ್	ಇತರೆ	ಸಂಖ್ಯೆ	ಬ್ಯಾಂಕ್	ಇತರೆ	ಸಂಖ್ಯೆ	ಬ್ಯಾಂಕ್	ಇತರೆ
1.	5000ದ ಕೆಳಗೆ	02(13.33)	---	02	06(30.00)	02	04	09(100.00)	---	09
2.	5001-10,000	03(20.00)	01	02	06(30.00)	02	04	----	---	----
3	10001-25,000	06(40.00)	01	05	05(25.00)	01	04	-----	----	---------
4.	25001 ರ ಮೇಲ್ಪಟ್ಟ	04(26.67)	01	03	03(15.00)	---	03	---	-----	----
	ಒಟ್ಟು	15(100.00)	03(20.00)	12(80.00)	20(100.00)	05(25.00)	15(75.00)	09(100.00)	---	09(100.00)

ಸೂಚನೆ : ಇತರೆ ಬಂಡವಾಳ ಎಂದರೆ ಸ್ನೇಹಿತರು, ಬಂಧುಗಳು ಅಥವಾ ಸ್ವಂತ ಉಳಿತಾಯ ಮಾಡಿದ ಹಣವಾಗಿರುತ್ತದೆ. ಆವರಣದಲ್ಲಿರುವುದು ಶೇಕಡವಾರು ಪ್ರಮಾಣ ತಿಳಿಸುತ್ತದೆ.

ಮೂಲ : ಪ್ರಾಥಮಿಕ ಮಾಹಿತಿ

ಕೋಷ್ಟಕ-19

ಅಂಗಡಿ, ಪೆಟ್ಟಿಗೆ ಅಂಗಡಿ, ಬೇಕರಿ ಹಾಗೂ ಇತರೆ ವ್ಯಾಪಾರಗಳು : ಬಂಡವಾಳದ ವಿನಿಯೋಗ ವಿವರ (ರೂ.ಗಳಲ್ಲಿ) 2001

ಕ್ರ. ಸಂ.	ಬಂಡವಾಳ	ಬಂಡವಾಳದ ಮೂಲ											
		ಅಂಗಡಿಗಳು			ಪೆಟ್ಟಿಗೆ ಅಂಗಡಿಗಳು			ಬೇಕರಿಗಳು			ಇತರೆ		
		ಸಂಖ್ಯೆ	ಬ್ಯಾಂಕ್	ಇತರೆ	ಸಂಖ್ಯೆ	ಬ್ಯಾಂಕ್	ಇತರೆ	ಸಂಖ್ಯೆ	ಬ್ಯಾಂಕ್	ಇತರೆ	ಸಂಖ್ಯೆ	ಬ್ಯಾಂಕ್	ಇತರೆ
1.	5000ದ ಕೆಳಗೆ	---	---	---	20(30.31)	10	10	---	---	---	39(100)	16	23
2..	5001-10000	---	---	---	37(56.06)	17	10	02(100)	01	01	---	---	---
3.	10001- 25000	25(80.65)	09	21	09(13.63)	04	05	---	---	---	---	---	---
4.	25001 ರ ಮೇಲ್ಪಟ್ಟ	06(19.35)	---	06	---	---	---	----	----	---	---	----	---
ಒಟ್ಟು		31(100.00)	09(29.03)	27(70.97)	66(100.00)	29(43.94)	37(56.06)	02(100)	01(50.00)	01(50.00)	39(100)	16(41.02)	23(58.98)

ಸೂಚನೆ : 1. ಇತರೆ ಬಂಡವಾಳ ಎಂದರೆ ಬಂಡವಾಳದ ಮೂಲ ಸ್ನೇಹಿತರು, ಬಂಧುಗಳು ಅಥವಾ ಸ್ವಂತ ಉಳಿತಾಯ ಮಾಡಿದ ಹಣವಾಗಿರುತ್ತದೆ

2. ಅಂಗಡಿಗಳು, ಕಿರಾಣಿ, ಸ್ಟೇಷನರಿ, ಪುಸ್ತಕ, ಪುರಾತನ ವಸ್ತುಗಳು, ತಂಪುಪಾನೀಯ ಅಂಗಡಿಗಳು ಸೇರಿವೆ.

3. ಪೆಟ್ಟಿಗೆ ಅಂಗಡಿಗಳಲ್ಲಿ ತೆಂಗಿನ ಕಾಯಿ ಮಾರಾಟ ಅಂಗಡಿಗಳು ಸೇರಿವೆ.

4. ಇತರೆ ಎಂದರೆ ಹಣ್ಣು, ತರಕಾರಿ, ಸಂಚಾರಿ ಅಂಗಡಿಗಳು ಐಸ್‌ಕ್ಯಾಂಡಿ ಮಾರುವವರು ಸೇರಿದ್ದಾರೆ.

ಮೂಲ : ಪ್ರಾಥಮಿಕ ಮಾಹಿತಿ

ಕೋಷ್ಟಕ -20

ಸಾರಿಗೆ ಸಂಪರ್ಕ ಸೌಲಭ್ಯಗಳು : ಎಸ್.ಟಿ.ಡಿ. ಇಂಟರ್‌ನೆಟ್, ಹಣದ ವಿನಿಮಯ ಮತ್ತು ಟ್ರಾವೆಲರ್ಸ್ ಶಾಪ್‌ಗಳು ಇತ್ಯಾದಿ ಬಂಡವಾಳದ ವಿನಿಯೋಗದ ವಿವರ (ರೂ.ಗಳಲ್ಲಿ) 2001

ಕ್ರ. ಸಂ.	ಬಂಡವಾಳ	ಬಂಡವಾಳದ ಮೂಲ											
		ಎಸ್‌ಟಿಡಿ			ಇಂಟರ್‌ನೆಟ್			ಹಣದ ವಿನಿಮಯ/ಟ್ರಾವೆಲ್ಸ್			ದ್ವಿಚಕ್ರವಾಹನ ಶಾಪಗಳು		
		ಸಂಖ್ಯೆ	ಬ್ಯಾಂಕ್	ಇತರೆ	ಸಂಖ್ಯೆ	ಬ್ಯಾಂಕ್	ಇತರೆ	ಸಂಖ್ಯೆ	ಬ್ಯಾಂಕ್	ಇತರೆ	ಸಂಖ್ಯೆ	ಬ್ಯಾಂಕ್	ಇತರೆ
1.	25000-50000	10(100)	04	06	---	---	---	06(28.57)	02	04	01(16.67)	---	---
2.	50001-100000	---	---	----	03(37.5)	02	01	09(42.86)	04	05	05(83.33)	03	03
3.	100000 ರ ಮೇಲ್ಪಟ್ಟ	---	---	---	05(62.5)	01	04	06(28.57)	01	05	----	---	---
	ಒಟ್ಟು	10(100)	04(40)	06(60)	08(100)	03(37.5)	05(62.5)	21(100)	07(33.33)	14(66.67)	06(100)	03(50)	03(50)

ಸೂಚನೆ : ಇತರೆ ಎಂದರೆ ಸ್ನೇಹಿತರು, ಬಂಧುಗಳು ಅಥವಾ ಸ್ವಂತ ಉಳಿತಾಯ ಮಾಡಿದ ಹಣವಾಗಿರುತ್ತದೆ

ಮೂಲ : ಪ್ರಾಥಮಿಕ ಮಾಹಿತಿ

ಅಧ್ಯಾಯ 4

ಪ್ರವಾಸಿಗರ ಆದ್ಯತೆ ಮತ್ತು ಸ್ಥಳೀಯ ಸೌಲಭ್ಯಗಳ ನಡುವಿನ ಅಂತರ

ಪ್ರವಾಸಿಗರ ನಿರೀಕ್ಷೆ ಮತ್ತು ಸ್ಥಳೀಯರು ಒದಗಿಸುವ ಸೌಲಭ್ಯಗಳ ನಡುವಿನ ಅಂತರವನ್ನು ಈ ಅಧ್ಯಾಯದಲ್ಲಿ ವಿಶ್ಲೇಷಿಸಲಾಗಿದೆ. ಹಂಪೆಗೆ ಬರುವ ಪ್ರವಾಸಿಗರ ಸರಕು ಮತ್ತು ಸೇವೆಯ ಬೇಡಿಕೆಗಳನ್ನು ಪೂರೈಸಲು ವಸತಿ ಗೃಹಗಳು, ರೆಸ್ಟೋರೆಂಟ್‌ಗಳು, ಹೋಟೆಲುಗಳು, ಆಟೋಗಳು, ಇಂಟರ್‌ನೆಟ್ ಇತ್ಯಾದಿ ಸೌಲಭ್ಯಗಳು ಹಳ್ಳಿಯಲ್ಲಿ ಪ್ರಾರಂಭವಾದವು. ಸುಮಾರು ಹತ್ತು ವರ್ಷದಿಂದ ಹಂಪೆಗೆ ಬರುವ ವಿದೇಶಿ ಪ್ರವಾಸಿಗರ ಸಂಖ್ಯೆ ವರ್ಷ ವರ್ಷ ಹೆಚ್ಚಿದಂತೆ ಪ್ರವಾಸೋದ್ಯಮದಲ್ಲಿ ತೊಡಗಿಸಿಕೊಳ್ಳುವ ಸ್ಥಳೀಯರ ಸಂಖ್ಯೆಯೂ ಹೆಚ್ಚುತ್ತಾ ಬಂತು. ಪ್ರವಾಸಿಗರ ನಿರೀಕ್ಷೆಗಳೇನು? ಸ್ಥಳೀಯವಾಗಿ ದೊರಕುವ ಸೌಲಭ್ಯಗಳು ಎಷ್ಟರ ಮಟ್ಟಿಗೆ ಪ್ರವಾಸಿಗರ ಬೇಕು ಬೇಡಗಳನ್ನು ತೃಪ್ತಿ ಪಡಿಸಲು ಶಕ್ತವಾಗಿವೆ? ಅವರ ನಿರೀಕ್ಷೆ ಮತ್ತು ಈ ಸೌಲಭ್ಯಗಳ ನಡುವಿನ ಅಂತರವೇನು? ಇತ್ಯಾದಿ ಪ್ರಶ್ನೆಗಳಿಗೆ ಉತ್ತರ ಹುಡುಕುವ ಪ್ರಯತ್ನವನ್ನು ಈ ಅಧ್ಯಾಯದಲ್ಲಿ ಮಾಡಲಾಗಿದೆ. ಪ್ರವಾಸಿಗರ ನಿರೀಕ್ಷೆ ಅರ್ಥವಾಗಬೇಕಾದರೆ ಅವರ ಸಾಮಾಜಿಕ ಹಾಗೂ ಆರ್ಥಿಕ ಹಿನ್ನೆಲೆಯೊಂದಿಗೆ, ಪ್ರವಾಸ ಮಾಡುವ ಅವರ ಉದ್ದೇಶ ಅಥವಾ ಪ್ರೇರಣೆಯೂ ಅರ್ಥವಾಗಬೇಕಾಗುತ್ತದೆ. ಪ್ರವಾಸಿಗರ ಹಿನ್ನೆಲೆಯನ್ನು ಹಿಂದಿನ ಅಧ್ಯಾಯದಲ್ಲಿ ನೋಡಲಾಗಿದೆ. ಪ್ರವಾಸದ ಪ್ರೇರಣೆಯನ್ನು ಅರ್ಥಮಾಡಿಕೊಳ್ಳುವುದರೊಂದಿಗೆ ಈ ಅಧ್ಯಾಯ ಆರಂಭವಾಗುತ್ತದೆ. ನಂತರದ ಪುಟಗಳಲ್ಲಿ ಸ್ಥಳೀಯ ಸೌಲಭ್ಯಗಳು ಎಷ್ಟರ ಮಟ್ಟಿಗೆ ಪ್ರವಾಸಿಗರ ನಿರೀಕ್ಷೆಗಳನ್ನು ತೃಪ್ತಿ ಪಡಿಸಲು ಶಕ್ತವಾಗಿವೆ ಎನ್ನುವುದರ ವಿಶ್ಲೇಷಣೆ ಇದೆ.

ಪ್ರೇರಣೆ ಮತ್ತು ಪ್ರವಾಸ

ವ್ಯಕ್ತಿಯೊಬ್ಬ/ಳು ಪ್ರವಾಸ ಕೈಗೊಳ್ಳಲು ಯಾವ ಕಾರಣಗಳು ಪ್ರೇರೇಪಿಸುತ್ತವೆ ಎಂದು ನಿಖರವಾಗಿ ಹೇಳುವುದು ಕಷ್ಟ. ಪ್ರವಾಸದ ಹಿಂದಿನ ಪ್ರೇರಣೆ ಕುರಿತು ಸಾಮಾನ್ಯ ಮಾಹಿತಿ ಪ್ರವಾಸೋದ್ಯಮ ಕುರಿತ ಅಧ್ಯಯನದಲ್ಲಿ ಬಹುಮುಖ್ಯ. ಈ ದೃಷ್ಟಿಯಿಂದ ಪ್ರೇರಣೆಯನ್ನು ಎರಡು ವಿಧದಲ್ಲಿ ನೋಡಬಹುದು. ಒಂದು ನಿರ್ದಿಷ್ಟ ಪ್ರೇರಣೆ, ಮತ್ತೊಂದು ಸಾಮಾನ್ಯ ಪ್ರೇರಣೆ. ನಿರ್ದಿಷ್ಟ ಪ್ರೇರಣೆಯಲ್ಲಿ ಪ್ರವಾಸಿಗರು ಯಾವುದೆ ಒಂದು ನಿರ್ದಿಷ್ಟ ಸ್ಥಳಕ್ಕೆ ಭೇಟಿ ನೀಡಿ ಅಲ್ಲಿನ ಸೌಂದರ್ಯವನ್ನೊಳಗೊಂಡ ನಿಸರ್ಗದಲ್ಲಿ ಸುತ್ತಾಡಿ ಒಳ್ಳೆಯ ಹವಾಗುಣ ಮತ್ತು ಉತ್ತಮ ಆಹಾರ ಪಡೆಯುವ ಮೂಲಕ ವಿಶ್ರಾಂತಿ ಪಡೆಯುವುದು. ಸಾಮಾನ್ಯ ಪ್ರೇರಣೆಯಲ್ಲಿನ ಪ್ರವಾಸಿಗರ ಉದ್ದೇಶವೆಂದರೆ ತಮ್ಮ ದಿನನಿತ್ಯದ ಅವಿಶ್ರಾಂತ ಕರ್ತವ್ಯದಿಂದ ವಿಮುಕ್ತರಾಗಿ ಬೇರೆ ಸ್ಥಳಗಳಲ್ಲಿನ ನಿಸರ್ಗದ ಆರೋಗ್ಯಕರ ಪರಿಸರದಲ್ಲಿ ಇದ್ದು ಬರುವುದು. ವ್ಯಕ್ತಿಗಳು ಸಾಮಾನ್ಯವಾಗಿ ಒಂದಕ್ಕಿಂತ

ಹೆಚ್ಚಿನ ಕಾರಣಗಳಿಗಾಗಿ ಪ್ರವಾಸ ಮಾಡುತ್ತಾರೆ.[1] ಅವುಗಳಲ್ಲಿ ಕುತೂಹಲ, ಉದ್ಯಮ, ವಾಣಿಜ್ಯ, ಆರೋಗ್ಯ ಹಾಗೂ ಮನೋರಂಜನೆಗಳಿವೆ. ಮ್ಯಾಕ್ವಿಂಟಸ್ ಪ್ರಕಾರ ಪ್ರವಾಸದ ಮೂಲ ಪ್ರೇರಣೆಗಳು ನಾಲ್ಕು 1. ಶಾರೀರಿಕ ಪ್ರೇರಣೆ: ಶಾರೀರಿಕ ವಿಶ್ರಾಂತಿ ಹಾಗೂ ವಿರಾಮ, ಕ್ರೀಡಾ ಚಟುವಟಿಕೆಗಳು, ನಿರ್ದಿಷ್ಟ ವೈದ್ಯಕೀಯ ಚಿಕಿತ್ಸೆಗಳಿಗೆ ಸಂಬಂಧಿಸಿದ್ದಾಗಿರುತ್ತದೆ. 2. ಸಾಂಸ್ಕೃತಿಕ ಪ್ರೇರಣೆ: ಅನ್ಯ ದೇಶ ಮತ್ತು ಅಲ್ಲಿನ ಜನರ ಬದುಕನ್ನು ತಿಳಿಯುವುದಾಗಿರುತ್ತದೆ. 3. ವ್ಯಕ್ತಿಯ ಅಂತಪ್ರೇರಣೆ: ತ್ಯದ ಯಾಂತ್ರಿಕ ಜೀವನದಿಂದ ಬಿಡುಗಡೆ ಹೊಂದಿ ವಿಶ್ರಾಂತಿ ಪಡೆಯುವುದು. 4. ಅಂತಸ್ತು ಮತ್ತು ಪ್ರತಿಷ್ಠೆಯ ಪ್ರೇರಣೆ: ಇವು ವೈಯಕ್ತಿಕ ಗೌರವ ಹಾಗೂ ಪ್ರತಿಷ್ಠೆಯ ಜೊತೆಗೆ ಗುರುತಿಸಲ್ಪಡುತ್ತವೆ.[2] ಈ ಅಂಶಗಳಿಂದ ಕಂಡುಬರುವುದೇನೆಂದರೆ ಸಂತೋಷ, ವಿಶ್ರಾಂತಿ, ಮನೋರಂಜನೆ, ಆರೋಗ್ಯ, ಕ್ರೀಡೆಗಳಲ್ಲಿ ಭಾಗವಹಿಸುವುದು, ಕುತೂಹಲ ಹಾಗೂ ಸಂಸ್ಕೃತಿ, ಧಾರ್ಮಿಕ, ಅಂತಸ್ತು, ಪ್ರತಿಷ್ಠೆ ಇತ್ಯಾದಿಗಳು ಪ್ರವಾಸಿಗರ ಪ್ರೇರಣೆಯ ಅಂಶಗಳು. ಶಾರೀರಿಕ ಪ್ರೇರಣೆ ಮತ್ತು ವ್ಯಕ್ತಿಯ ಅಂತರ್ ಪ್ರೇರಣೆಗಳು ಪ್ರವಾಸವನ್ನು ಕೈಗೊಳ್ಳಲು ಪ್ರಚೋದಿಸುವುದರಿಂದ ಇವನ್ನು ತಳ್ಳುವ ಅಂಶಗಳೆಂದು (ಪುಶ್ ಪ್ಯಾಕ್ಟರ್‌ಗಳು) ಮತ್ತು ಸಂಸ್ಕೃತಿ, ಅಂತಸ್ತು ಮತ್ತು ಪ್ರತಿಷ್ಠೆಯ ಪ್ರೇರಣೆಗಳು ಎಳೆಯುವ ಅಂಶಗಳಾಗಿವೆ (ಪುಲ್ ಪೇಕ್ಟರ್‌ಗಳು).

ಕೈಗಾರಿಕಾ ಕ್ರಾಂತಿಯ ನಂತರ ಖುಷಿ ಸಂಚಾರಗಳು ಜೀವನದ ಭಾಗವಾಗಿ ಹೋದವು. ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಕೈಗಾರೀಕರಣದ ಅಭಿವೃದ್ಧಿಯಿಂದ ಹೆಚ್ಚಿನ ಮೂಲ ಸೌಲಭ್ಯಗಳು ದೊರೆಯ ತೊಡಗಿದವು. ಮುಖ್ಯವಾಗಿ ಸಾರಿಗೆ ಸೌಲಭ್ಯ ಮತ್ತು ಜೀವನ ಕ್ರಮದಲ್ಲಿನ ಬದಲಾವಣೆಗಳು ಖುಷಿ ಸಂಚಾರಕ್ಕೆ ಅನುವು ಮಾಡಿಕೊಟ್ಟವು. ಇದು ಕೈಗಾರಿಕಾ ಕ್ರಾಂತಿ ನಂತರದ ವರ್ಷಗಳಲ್ಲಿ ಪ್ರವಾಸಿಗರ ಸಂಖ್ಯೆಯನ್ನು ಹೆಚ್ಚಿಸಿತು. ಆರಂಭದಲ್ಲಿ ಪ್ರವಾಸಿಗರು ರಜಾದಿನ ಕಳೆಯಲು ಖುಷಿ ಸಂಚಾರಕ್ಕಾಗಿ ಸಮುದ್ರ ತೀರಗಳಿಗೆ ಹೋಗುತ್ತಿದ್ದರು. ಇವರ ಪ್ರವಾಸದ ಪ್ರೇರಣೆಗಳೆಂದರೆ ಸಮುದ್ರದ ನೀರು, ಮರಳು ಮತ್ತು ಸೂರ್ಯನ ಬಿಸಿಲು. ಸಮುದ್ರದಲ್ಲಿ ಸ್ನಾನ ಮಾಡಿ ಬಿಸಿಲಿನಲ್ಲಿ ಮರಳಿನ ಮೇಲೆ ಕಾಲಕಳೆಯುತ್ತಾ ಒಳ್ಳೆಯ ಆಹಾರ ಮತ್ತು ಮದ್ಯ ಸೇವನೆ ಮಾಡುತ್ತಿದ್ದರು. ಮದ್ಯಸೇವನೆಯ ಅಮಲಿನಲ್ಲಿ ಅಸಭ್ಯವಾಗಿ ವರ್ತಿಸುವುದು, ಕೂಗಾಡುವುದು, ಪ್ರವಾಸಿಗರ (ಮಹಿಳೆಯರ) ಜೊತೆಗೆ ಪ್ರಣಯದಲ್ಲಿ ತೊಡಗಿಕೊಳ್ಳುವುದು ಇತ್ಯಾದಿಗಳು ಇರುತ್ತಿದ್ದವು. ಇಂತಹ ಚಟುವಟಿಕೆಗಳಿಗೆ ಸಮುದ್ರದ ತೀರಗಳು ಸೂಕ್ತವಾದ ತಾಣಗಳಾಗಿದ್ದವು.[3] ಆದರೆ ಈ ಚಟುವಟಿಕೆಗಳನ್ನು ಅವರು ದಿನನಿತ್ಯ ವಾಸಿಸುವ ಪರಿಸರದ ಸುತ್ತಮುತ್ತಲಲ್ಲಿ ಮಾಡಲು ನಿರ್ಬಂಧಗಳಿರುತ್ತಿದ್ದವು. ಆದ್ದರಿಂದ ಪ್ರವಾಸಿಗರು ತಮ್ಮ ಈ ಬಯಕೆ ಮತ್ತು ಅಗತ್ಯಗಳನ್ನು ಪೂರೈಸಲು ಅಥವಾ ಮನೋರಂಜನೆ ಪಡೆಯಲು ಸಮುದ್ರ ತೀರಗಳಿಗೆ ಹೋಗುವುದು ಸಾಮಾನ್ಯವಾಗಿತ್ತು. ಸಮುದ್ರ, ಮರಳು, ಸೂರ್ಯನ ಬಿಸಿಲು ಮತ್ತು ಲೈಂಗಿಕತೆಗಳನ್ನು ಸಾಂಪ್ರದಾಯಿಕ 4sಗಳೆಂದು ಕರೆಯುತ್ತಾರೆ. ಆದರೆ ಸಮುದ್ರ

ಮಲಿನತೆ, ಸೂರ್ಯನ ಕಿರಣಗಳಿಂದ ಆರೋಗ್ಯದ ಮೇಲಿನ ಹಾನಿ (ಚರ್ಮದ ರೋಗ ಮತ್ತು ಚರ್ಮದ ಕ್ಯಾನ್ಸರ್‌ಗಳು), ಕೆಳದರ್ಜೆಯ ಮರಳು, ಲೈಂಗಿಕತೆಯಿಂದ ಬರಬಹುದಾದ ಆಧುನಿಕ ರೋಗ ಹಾಗೂ ಇತರ ಲೈಂಗಿಕ ರೋಗಗಳು ಮೊದಲಾದವುಗಳು ಈ ತರಹದ ಸ್ವೇಚ್ಛಾಚಾರದ ಪ್ರವಾಸಕ್ಕೆ ತಡೆ ಮಾಡಿವೆ. ಹಾಗಾಗಿ ಇಂದು ಈ ಸಂಪ್ರದಾಯಿಕ 4s ಗಳಿಂದ ಆಧು ಕ 4sಗಳತ್ತ ಪ್ರವಾಸಿಗರು ಚಲಿಸುತ್ತಿದ್ದಾರೆ. ಆಧುನಿಕ 4s ಗಳೆಂದರೆ ಸೋಪೆಸ್ಟಿಕೇಷನ್, ಸ್ಪೆಸಿಲೈಜೇಷನ್, ಸೇಗ್‌ಮೆಂಟೇಷನ್ ಮತ್ತು ಸ್ಯಾಟಿಸ್‌ಪ್ಯಾಕ್ಷನ್‌ಗಳಾಗಿವೆ. [4]

ಪ್ರವಾಸದ ಪ್ರೇರಣೆಯಲ್ಲಾದ ಪರಿವರ್ತನೆ ಪ್ರವಾಸೋದ್ಯಮವನ್ನು ಪ್ರಭಾವಿಸಿದೆ. ಪ್ರವಾಸೋದ್ಯಮದ ವೈಭವಯುತ ಉತ್ಪನ್ನಗಳು ಪ್ರವಾಸಿಗರ ಸಾಂಸ್ಕೃತಿಕ ಭೌತಿಕ ಮತ್ತು ಕ್ರೀಡೆ ಅಭಿರುಚಿಗಳನ್ನು ತೃಪ್ತಿಪಡಿಸುತ್ತವೆ. ಪ್ರವಾಸಿಗರ ಆಧುನಿಕ ಬೇಡಿಕೆಗಳು ಪ್ರವಾಸೋದ್ಯಮವನ್ನು ವೈಭವಯುತ ಮಾರುಕಟ್ಟೆಯ ಸ್ಥಳಕ್ಕೆ ಕೊಂಡೊಯ್ಯುತ್ತವೆ. ಪ್ರವಾಸಿಗರಲ್ಲಿ ಒಂದೆ ತೆರನಾದ ಬಯಕೆ, ವರ್ತನೆ, ಬೇಡಿಕೆಗಳು ಇರದೆ ವಿಭಿನ್ನತೆ ಇರುವುದರಿಂದ ಉತ್ಪನ್ನಗಳಲ್ಲಿ ವಿಶೇಷತೆಯನ್ನು ತರುತ್ತವೆ. ಈ ವಸ್ತುಗಳನ್ನು ಉತ್ಪಾದಿಸುವ ಘಟಕಗಳು ಮತ್ತು ಮಾರುಕಟ್ಟೆಗಳು ಉಗಮವಾಗುವುದರ ಮೂಲಕ ಸಣ್ಣ ಮಾರುಕಟ್ಟೆಗಳು ಅಸ್ತಿತ್ವಕ್ಕೆ ಬರುತ್ತವೆ. ಇದರಿಂದಾಗಿ ಕೇಂದ್ರಿಕೃತ ವಿಸ್ತೃತ ಮಾರುಕಟ್ಟೆಗಳು ಒಡೆದು ನಾಶಹೊಂದುವವು. ಈ ವಿಸ್ತೃತ ಮಾರುಕಟ್ಟೆಗಳ ಧೃವೀಕರಣವು ಜನಾಂಗದ ಸ್ಥಿತಿ ವಿವರಣೆ ಮೇಲಾಗಿರದೆ ಆಧಾರಿತ ಶೈಲಿಯಿಂದ ಆಗುವುದಾಗಿರುತ್ತದೆ. ಈ ರೀತಿಯ ಪ್ರಕ್ರಿಯೆಯೂ ಅನುಭೋಗಿಗಳ ಹೋಲಿಕೆಯನ್ನು ಪ್ರದರ್ಶಿಸುವುದರಿಂದ ಅನುಕೂಲಕರ ಚಟುವಟಿಕೆಗಳು ಕಾರ್ಯರೂಪಕ್ಕೆ ಬರಲು ನೆರವಾಗುತ್ತವೆ. ಪ್ರತಿಯೊಂದು ಪ್ರವಾಸೋದ್ಯಮ ಘಟಕದ ಅಂತಿಮ ಗುರಿ, ಪ್ರವಾಸೋದ್ಯಮದ ಅನುಭೋಗದ ಸರಪಳಿಯಲ್ಲಿನ ಎಲ್ಲಾ ಗ್ರಾಹಕರು ತೃಪ್ತಿ ಹೊಂದುವಂತೆ ನೋಡಿಕೊಳ್ಳುವುದಾಗಿದೆ. ಪ್ರತಿಯೊಂದು ಉದ್ಯಮ ಮತ್ತು ವ್ಯಕ್ತಿಗಳ ಸಹಯೋಗದೊಂದಿಗೆ ಪ್ರವಾಸೋದ್ಯಮದಲ್ಲಿ ಪ್ರವಾಸಿಗರ ಉತ್ಪನ್ನಗಳು ಪ್ರವಾಸಿಗರಿಗೆ ತಲುಪುವುದು ಸಾಧ್ಯವಾಗುತ್ತದೆ. [5]

ಅರ್ಥಶಾಸ್ತ್ರದಲ್ಲಿ ಅನುಭೋಗಿಗಳ ವರ್ತನೆಗಳ ನಿಯಮಗಳು ಯಾವುದೆ ಭೌತಿಕ ವಿಜ್ಞಾನದಷ್ಟು ಖಚಿತವಾಗಿಲ್ಲ. ಈ ಕಾರಣದಿಂದಾಗಿ ಅನುಭೋಗಿಗಳಾದ ಪ್ರವಾಸಿಗರ ವರ್ತನೆಯಲ್ಲಿಯೂ ನಿರ್ದಿಷ್ಟತೆ ಇರದೆ ಅವರ ಬೇಡಿಕೆಗಳಲ್ಲಿಯೂ ವ್ಯತ್ಯಯ ಉಂಟಾಗುತ್ತದೆ. ಪ್ರವಾಸೋದ್ಯಮ ಉತ್ಪನ್ನಗಳಲ್ಲಿ ಮುಖ್ಯವಾಗಿ ಸಾರಿಗೆ, ವಸತಿ, ಆಹಾರ, ದಿನನಿತ್ಯದ ವಸ್ತುಗಳು, ಮನೋರಂಜನೆ ಮತ್ತು ಸಂತೋಷಕ್ಕಾಗಿ ಉದ್ಯಾನವನಗಳು ಹಾಗೂ ರೆಸಾರ್ಟ್‌ಗಳು ಸೇರಿವೆ. ಈ ಸೇವಾ ಸೌಲಭ್ಯಗಳನ್ನು ಒದಗಿಸಲು ಸಾರ್ವಜನಿಕ ಮತ್ತು ಖಾಸಗಿ ವಲಯಗಳೆರಡು ಸಹಯೋಜನೆ ಯೊಂದಿಗೆ ಮುಂದಾಗಿವೆ. ಪ್ರವಾಸೋದ್ಯಮದ ಬೆಳವಣಿಗೆ ಖಾಸಗಿ ಮತ್ತು ಸಾರ್ವಜನಿಕ ಕ್ಷೇತ್ರಗಳು ಕೂಡಿ ಮಾಡುವ ಕೆಲಸದ

ಮೇಲೆ ಅವಲಂಬನೆಯಾಗಿದೆ. ವಿದೇಶಿ ಪ್ರವಾಸಿಗರು ಖುಷಿ ಸಂಚಾರಕ್ಕಾಗಿ ಹಂಪೆಗೆ ಬಂದರೆ, ದೇಶಿಯ ಪ್ರವಾಸಿಗರು ಹೆಚ್ಚಾಗಿ ಧಾರ್ಮಿಕ ಮತ್ತು ಶೈಕ್ಷಣಿಕ ಸಂಚಾರಕ್ಕಾಗಿ ಬರುತ್ತಾರೆ. ದೇಶಿಯ ಪ್ರವಾಸಿಗರು ವರ್ಷದ ಎಲ್ಲಾ ತಿಂಗಳುಗಳಲ್ಲಿ ಬರುತ್ತಿರುತ್ತಾರೆ. ವಿದೇಶಿ ಪ್ರವಾಸಿಗರಂತೆ ಹಲವಾರು ದಿನಗಳ ಕಾಲ ಹಂಪೆಯಲ್ಲಿ ತಂಗುವುದರ ಬದಲು ಒಂದು ದಿನದ ಮಟ್ಟಿಗೆ ಉಳಿದು ಹೋಗುತ್ತಾರೆ. ಒಂದು ದಿನದ ಮಟ್ಟಿಗೆ ಉಳಿಯುವುದಾದರೆ ಧಾರ್ಮಿಕ ಛತ್ರಗಳಲ್ಲಿ ಅಥವಾ ದೇವಸ್ಥಾನದ ಆವರಣಗಳಲ್ಲಿನ ಮಂಟಪ ಹಾಗೂ ಕೊಠಡಿಗಳಲ್ಲಿ ಉಳಿದುಕೊಳ್ಳುತ್ತಾರೆ. ಉಳಿದಂತೆ ಉಪಹಾರ ಮತ್ತು ಊಟವನ್ನು ತಾವೇ ತೆಗೆದುಕೊಂಡು ಬರುತ್ತಾರೆ. ಹೋಟೆಲ್‌ಗಳಲ್ಲಿ ಟೀ, ಕಾಫಿ, ಉಪಹಾರ ಸೇವಿಸುತ್ತಾರೆ. ಧಾರ್ಮಿಕ ಉಪಯೋಗಿ ವಸ್ತುಗಳನ್ನು ಹಾಗೂ ದಿನ ಬಳಕೆಯ ವಸ್ತುಗಳನ್ನು ದೇಶಿ ಪ್ರವಾಸಿಗರು ಕೊಳ್ಳುತ್ತಾರೆ.

ಹಂಪಿಯ ಪ್ರವಾಸೋದ್ಯಮದ ಬೆಳವಣಿಗೆಯಲ್ಲಿ ವಿದೇಶಿ ಪ್ರವಾಸಿಗರ ಪಾತ್ರ ಮಹತ್ವದ್ದು. ಅವರಿಂದಲೆ ಹೆಚ್ಚಿನ ವ್ಯಾಪಾರ ವಹಿವಾಟುಗಳು ನಡೆಯುವುದು. ವಿದೇಶಿ ಪ್ರವಾಸಿಗರ ಬೇಕು ಬೇಡಗಳನ್ನು ಪೂರೈಸುವಂತಹ ಸೇವಾ ಸೌಲಭ್ಯಗಳ ಪೂರೈಕೆಯಲ್ಲಿ ಸ್ಥಳೀಯರು ಹೆಚ್ಚಿನ ಪ್ರಮಾಣದಲ್ಲಿ ತೊಡಗಿಸಿಕೊಂಡಿದ್ದಾರೆ. ಸ್ಥಳೀಯರು ಅಥವಾ ಅನೌಪಚಾರಿಕ ವಲಯದ ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿಕೊಂಡವರು ಒದಗಿಸುವ ಸೇವಾ ಸೌಲಭ್ಯದಿಂದ ವಿದೇಶಿ ಪ್ರವಾಸಿಗರು ತೃಪ್ತರೆ, ತೃಪ್ತರಾಗದಿದ್ದ ಪಕ್ಷದಲ್ಲಿ ತೃಪ್ತಿ ಪಟ್ಟುಕೊಳ್ಳಲು ಏನನ್ನು ನೀರಿಕ್ಷಿಸುತ್ತಾರೆ ಎನ್ನುವುದನ್ನು ಹೀಗೆ ವಿಶ್ಲೇಷಿಸಲಾಗಿದೆ.

ಪ್ರವಾಸಿಗರ ಆದ್ಯತೆ-ಅತಿಥಿಗೃಹಗಳು ಮತ್ತು ರೆಸ್ಟೋರೆಂಟ್‌ಗಳು

ಪ್ರವಾಸೋದ್ಯಮದ ಸೀಸನ್ ನವೆಂಬರ್ ನಿಂದ ಏಪ್ರಿಲ್ ತಿಂಗಳವರೆಗೆ, ಮುಖ್ಯವಾಗಿ ಜನವರಿ-ಫೆಬ್ರವರಿ ತಿಂಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಬರುವ ವಿದೇಶಿ ಪ್ರವಾಸಿಗರು ಹಂಪೆಯ ಅತಿಥಿಗೃಹಗಳಲ್ಲಿ ತಂಗುತ್ತಾರೆ. ಈ ಪ್ರವಾಸಿಗರ ಮಾಹಿತಿಯನ್ನು ಇತಿಹಾಸ ಸ್ಮಾರಕಗಳ (ಕಮಲಮಹಲ್ ಮತ್ತು ವಿಜಯ ವಿಠ್ಠಲ ದೇವಸ್ಥಾನ) ಪ್ರವೇಶ ದರ ನೀಡುವ ಕೌಂಟರ್ ಹಾಗೂ ಹಂಪೆಯ ಹೊರವಲಯದ ಪೋಲಿಸ್ ಸ್ಟೇಷನ್‌ನಲ್ಲಿರುವ ಚಲನ ವಲನ (Movement Register) ಪುಸ್ತಕದಿಂದ ಪಡೆಯಲಾಗಿದೆ. ಈ ಎರಡು ದಾಖಲೆಗಳಲ್ಲಿ ಪ್ರವಾಸಿಗರ ಸಂಖ್ಯೆಯಲ್ಲಿ ಸಾಮ್ಯತೆ ಕಂಡುಬರುತ್ತಿಲ್ಲವೆಂದು ಹಿಂದಿನ ಅಧ್ಯಾಯದಲ್ಲಿ ನೋಡಿದ್ದೇವೆ. ಇದಕ್ಕೆ ಕಾರಣವೇನೆಂದು ಸಂಕ್ಷಿಪ್ತವಾಗಿ ವಿವರಿಸಿ ಪ್ರವಾಸಿಗರ ಆದ್ಯತೆ ಮತ್ತು ಸ್ಥಳೀಯ ಸೌಲಭ್ಯಗಳ ನಡುವಿನ ಅಂತರವನ್ನು ವಿಶ್ಲೇಷಿಸಲಾಗಿದೆ. ಹಂಪೆಗೆ ಬಂದ ವಿದೇಶಿ ಪ್ರವಾಸಿಗರೆಲ್ಲರೂ ಪೋಲಿಸ್ ಸ್ಟೇಷನ್‌ಗೆ ಬಂದು ವಿದೇಶಿ ಪ್ರವಾಸಿಗರಿಗಾಗಿ ಇಟ್ಟಿರುವ ಚಲನವಲನ ಪುಸ್ತಕದಲ್ಲಿ ಪ್ರವಾಸದ ಉದ್ದೇಶ, ವೈಯುಕ್ತಿಕ ವಿವರಗಳನ್ನೊಳಗೊಂಡ ಮಾಹಿತಿಯನ್ನು

ಪ್ರವಾಸಿಗರೆ ನಮೂದಿಸಬೇಕೆಂದು ಕಡ್ಡಾಯಗೊಳಿಸಲಾಗಿದೆ. ಆದರೂ ಪೋಲಿಸ್ ಸ್ಟೇಷನ್‌ನ ಮತ್ತು ಅತಿಥಿಗೃಹಗಳ ಮಾಲಿಕರ ಪ್ರಕಾರ ಪ್ರತಿಯೊಬ್ಬ ಪ್ರವಾಸಿಗರು ಆ ಕೆಲಸವನ್ನು ಪ್ರಾಮಾಣಿಕವಾಗಿ ಮಾಡುತ್ತಾರೆ ಎನ್ನಲಾಗುವುದಿಲ್ಲ. 2002ರ ಜನವರಿ ತಿಂಗಳಲ್ಲಿ, ಪೋಲಿಸ್ ಸ್ಟೇಷನ್‌ನಲ್ಲಿರುವ ಅಂಕಿ-ಅಂಶಗಳ ಪ್ರಕಾರ ಹಂಪೆಗೆ 700 ಜನ ಪ್ರವಾಸಿಗರು ಬಂದು ಹೋಗಿರುತ್ತಾರೆ.[6] ಅತಿಥಿ ಗೃಹಗಳ ಲೆಕ್ಕಚಾರ ಪ್ರಕಾರ ಹಂಪಿಗೆ ಬಂದ ಪ್ರವಾಸಿಗರ ಸಂಖ್ಯೆ 580. ಹಂಪೆಗೆ ಬರುವ ಹೆಚ್ಚಿನ ವಿದೇಶಿ ಪ್ರವಾಸಿಗರು ಹಂಪೆಯ ಅತಿಥಿಗೃಹಗಳಲ್ಲೆ ತಂಗಲು ಕಾರಣಗಳು ಅನೇಕ. ಸ್ಮಾರಕಗಳು ಹಂಪೆಯ ಸುತ್ತಲು ಇರುವುದರಿಂದ ನೋಡಲು ಅನುಕೂಲ, ಬೆಟ್ಟಗುಡ್ಡಗಳು ನೈಸರ್ಗಿಕ ಸೌಂದರ್ಯದಿಂದ ಕೂಡಿವೆ, ಆಧುನಿಕ ಸಂಪರ್ಕದ ಲಭ್ಯತೆ ಇದೆ, ಕಡಿಮೆ ಜೀವನ ವೆಚ್ಚ ಇತ್ಯಾದಿ ಅನುಕೂಲಗಳು ಪ್ರವಾಸಿಗರನ್ನು ಹಂಪೆಯಲ್ಲಿಯೆ ಉಳಿಯುವಂತೆ ಮಾಡುತ್ತವೆ.

ಹಂಪೆಯಲ್ಲಿ ಉಳಿಯುವ ಪ್ರವಾಸಿಗರೆಲ್ಲ ಸಾಮಾನ್ಯವಾಗಿ ಬ್ಯಾಕ್ ಪ್ಯಾಕರ್ಸ್(Back Packers) ಆಗಿದ್ದಾರೆ. ಅಂದರೆ ನಿರ್ದಿಷ್ಟ ಗೊತ್ತುಗುರಿಯಿಲ್ಲದೆ ಪ್ರವಾಸವನ್ನು ಮಾಡುವವರು ಹಾಗೂ ತಮ್ಮ ವಸ್ತುಗಳನ್ನು ಹೆಗಲಿಗೆ ಹಾಕಿಕೊಂಡು ಸುತ್ತುವವರು. ಇವರಿಗೆ ಡ್ರಿಫ್ಟರ್ಸ್ ಮತ್ತು ಎಕ್ಸ್‌ಪ್ಲೋರರ್ಸ್ (Drifters and Explorers) ಎಂತಲೂ ಕರೆಯುತ್ತಾರೆ.[7] ಇವರು ಕಡಿಮೆ ಆದಾಯವುಳ್ಳವರು. ತಮ್ಮ ದುಡಿಮೆಯಲ್ಲಿ ಭಾಗಶಃ ಆದಾಯವನ್ನು ಕೂಡಿಟ್ಟುಕೊಂಡು ಬಂದವರು ಮತ್ತು ಕಡಿಮೆ ವೆಚ್ಚ ಮಾಡಿ ಹೆಚ್ಚು ದಿನ ಇಲ್ಲಿ ಇದ್ದು ಸುಖ ಅನುಭವಿಸಲು ಬಯಸುವವರು. ಈ ವರ್ಗಕ್ಕೆ ಸೇರಿದ ಪ್ರವಾಸಿಗರು ಹಂಪೆಯಲ್ಲಿಯೆ ಉಳಿದುಕೊಳ್ಳುತ್ತಾರೆ. ಈ ತೆರನಾದ ಪ್ರವಾಸಿಗರಿಗೆ ಸೇವಾ ಸೌಲಭ್ಯಗಳನ್ನು ಹಂಪೆಯ ಸ್ಥಳೀಯರು ಒದಗಿಸಿದ್ದಾರೆ. ಹಂಪೆಯಲ್ಲಿ ತಂಗಲು, ಅತಿಥಿಗೃಹಗಳು ಮತ್ತು ಉಳಿದ ಸಂದರ್ಭದಲ್ಲಿ ಆಹಾರದ ಪೂರೈಕೆ ಮಹತ್ವದ ಸಂಗತಿಗಳಾಗುತ್ತವೆ. ಪ್ರವಾಸಿಗರಿಗೆ ವಸತಿ ಸೌಲಭ್ಯಗಳನ್ನು ಒದಗಿಸಲು 61 ಅತಿಥಿಗೃಹ ಮತ್ತು ರೆಸ್ಟೋರೆಂಟ್‌ಗಳಿವೆ. ಇವುಗಳಲ್ಲಿ ಒಟ್ಟು ಕೊಠಡಿಗಳ ಸಂಖ್ಯೆ 290, ಇದರಲ್ಲಿ 98 ಕೊಠಡಿಗಳು ಮಾತ್ರ ಅಟ್ಯಾಚ್ ಬಾತ್ ರೂಂ ವ್ಯವಸ್ಥೆಯನ್ನು ಹೊಂದಿವೆ. ಸೀಸನ್‌ನಲ್ಲಿ ಬರುವ ಪ್ರವಾಸಿಗರ ಸಂಖ್ಯೆಗೆ ಹೋಲಿಸಿದರೆ ಅತಿಥಿಗೃಹಗಳು ಮತ್ತು ಅದರಲ್ಲಿ ಇರುವ ಕೊಠಡಿಗಳ ಸಂಖ್ಯೆ ಕಡಿಮೆಯೆಂದೆ ಹೇಳಬಹುದು.

ವಿದೇಶಿ ಪ್ರವಾಸಿಗರು ಅತಿಥಿಗೃಹಗಳಲ್ಲಿನ ಸೇವಾ ಸೌಲಭ್ಯದ ಬಗ್ಗೆ ಕೆಲವು ಖಚಿತ ಅಭಿಪ್ರಾಯಗಳನ್ನು ವ್ಯಕ್ತ ಪಡಿಸಿದ್ದಾರೆ. ಅವರ ಪ್ರಕಾರ ರೂಂಗಳು ಚಿಕ್ಕದಾಗಿದ್ದು (Congested) ಗಾಳಿ ಬೆಳಕಿನಿಂದ ಕೂಡಿಲ್ಲ. ಬರುವ ಪ್ರವಾಸಿಗರು ಕೊಠಡಿಗಳು ವಿಶಾಲವಾಗಿದ್ದು ಗಾಳಿ, ಬೆಳಕಿನ ವ್ಯವಸ್ಥೆ ಸಮರ್ಪಕವಾಗಿರುವುದನ್ನು ಬಯಸುತ್ತಾರೆ. ಸಂದರ್ಶಕರಲ್ಲಿ ಶೇ.67ರಷ್ಟು ವಿದೇಶಿ ಪ್ರವಾಸಿಗರು ಶೌಚಾಲಯದಲ್ಲಿ ಪಾಶ್ಚಾತ್ಯ ಮಾದರಿಯ ಕಾಮೋಡ್‌ಗಳನ್ನು ಬಯಸುತ್ತಾರೆ. ಆದರೆ ಹಂಪೆಯಲ್ಲಿನ ಬಹುತೇಕ ಅತಿಥಿಗೃಹಗಳಲ್ಲಿ ಪಾಶ್ಚಾತ್ಯ ಮಾದರಿಯ ಕಾಮೋಡ್‌ಗಳಿಲ್ಲ. ಆದರೆ

ಕೆಲವು ಪ್ರವಾಸಿಗರು ಈ ಕುರಿತು ಭಿನ್ನ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಅವರ ಪ್ರಕಾರ ಪಾಶ್ಚಿಮಾತ್ಯ ಶೌಚಾಲಯಕ್ಕಿಂತ ಭಾರತೀಯ ಮಾದರಿಯ ಶೌಚಾಲಯಗಳೆ ಚೆನ್ನಾಗಿರುತ್ತವೆ. ಪಾಶ್ಚಾತ್ಯ ಮಾದರಿಯ ಶೌಚಾಲಯಕ್ಕೆ ಹೋಗುವಾಗ ಪ್ರತಿ ಬಾರಿ ಕಾಮೋಡನ್ನು ಸ್ವಚ್ಛಗೊಳಿಸಬೇಕಾಗುತ್ತದೆ. ಆದರೆ ಭಾರತೀಯ ಶೌಚಾಲಯದಲ್ಲಿ ಈ ಸಮಸ್ಯೆ ಇಲ್ಲ. ಅತಿಥಿಗೃಹಗಳ ಕೆಲವು ಮಾಲಿಕರು ಹೊಂದಿರುವ ಅಭಿಪ್ರಾಯವೇ ಬೇರೆಯಿದೆ. ಪಾಶ್ಚಿಮಾತ್ಯ ಮಾದರಿಯ ಬದಲು ಭಾರತೀಯ ಶೌಚಾಲಯವನ್ನು ಕಟ್ಟಿರುವ ಉದ್ದೇಶವೆಂದರೆ ಪಾಶ್ಚಿಮಾತ್ಯ ಶೌಚಾಲಯಕ್ಕೆ ಹೆಚ್ಚು ನೀರು ಪೂರೈಕೆ ಬೇಕಾಗುವುದು ಮತ್ತು ಪದೆ ಪದೆ ಸ್ವಚ್ಛಗೊಳಿಸುವ ಅವಶ್ಯಕತೆ ಇರುತ್ತದೆ. ಆದ್ದರಿಂದ ಕೆಲವು ಅತಿಥಿ ಗೃಹಗಳ ಮಾಲಿಕರು ಕೊಠಡಿಗಳನ್ನು ಹಾಗೂ ಬಾತ್‌ರೂಂಗಳನ್ನು ಪರಿವರ್ತಿಸುವ ಕಾರ್ಯ ಕೈಗೊಳ್ಳದೆ ಭಾರತೀಯ ಮಾದರಿಯನ್ನೆ ಉಳಿಸಿಕೊಂಡಿದ್ದಾರೆ. ಪಾಶ್ಚಿಮಾತ್ಯ ಮಾದರಿಯ ಶೌಚಾಲಯ ಇಲ್ಲವೆಂದು ಪ್ರವಾಸಿಗರು ಅತಿಥಿಗೃಹಗಳಿಗೆ ಬರುವುದನ್ನು ನಿಲ್ಲಿಸಿಲ್ಲ. ಪ್ರವಾಸಿಗರಿಗೆ ಕೊಠಡಿಗಳು ಸ್ವಚ್ಛವಾಗಿದ್ದು ಬಾಡಿಗೆ ಕಡಿಮೆ ಇದ್ದರೆ, ಶೌಚಾಲಯ ಮತ್ತು ಬಾತ್ ರೂಂಗಳ ಬಗ್ಗೆ ಅಷ್ಟೇನು ಮಹತ್ವ ನೀಡುವುದಿಲ್ಲವೆಂದು ಅತಿಥಿಗೃಹಗಳ ಮಾಲಿಕರ ಅಭಿಪ್ರಾಯವಾಗಿರುತ್ತದೆ. ಆದರೆ ಇತ್ತೀಚೆಗೆ ಕೆಲವು ಮಾಲಿಕರು ತಮ್ಮ ಅತಿಥಿಗೃಹಗಳಲ್ಲಿನ ಕೊಠಡಿಗಳನ್ನು ಪರಿವರ್ತಿಸಿ ಶೌಚಾಲಯದಲ್ಲಿ ಪಾಶ್ಚಾತ್ಯ ಮಾದರಿಯ ಕಾಮೋಡ್‌ಗಳನ್ನು ಜೋಡಿಸುವುದರ ಜೊತೆಗೆ, ಅಟ್ಯಾಚ್ ಬಾತ್‌ರೂಂಗಳ ವ್ಯವಸ್ಥೆಯನ್ನು ಮಾಡುತ್ತಿದ್ದಾರೆ. ಈ ಸಂದರ್ಭದಲ್ಲಿಯೆ ಹಂಪೆಯ ಜನವಸತಿ ಪ್ರದೇಶವನ್ನು ಬೇರೆಡೆಗೆ ಸ್ಥಳಾಂತರಿಸಬೇಕೆಂದು ಸರ್ಕಾರ ನಿರ್ಧರಿಸಿರುವುದರಿಂದ ಹೆಚ್ಚಿನ ಅತಿಥಿಗೃಹಗಳ ಮಾಲಿಕರು ಈಗಿರುವ ಅತಿಥಿಗೃಹಗಳಲ್ಲಿ ವ್ಯವಸ್ಥೆಗಳನ್ನು ಮಾರ್ಪಡಿಸಿ ಸೌಲಭ್ಯಗಳನ್ನು ಒದಗಿಸಲು ಮುಂದಾಗುತ್ತಿಲ್ಲ. ಹಣವನ್ನು ವಿನಿಯೋಗ ಮಾಡಿದ ಕೆಲವೆ ದಿನಗಳಲ್ಲಿ ಸ್ಥಳಾಂತರಿಸಿದರೆ ಹಾಕಿದ ಬಂಡವಾಳ ವಾಪಾಸ್ ಬರುವುದಿಲ್ಲವೆಂದು ಕೆಲವು ಮಾಲಿಕರು ಅಭಿಪ್ರಾಯ ಪಡುತ್ತಾರೆ. ಇನ್ನೂ ಕೆಲವರು ಸರ್ಕಾರ ಅಷ್ಟು ಬೇಗ ಎಲ್ಲಿ ಹಂಪೆಯ ವಸತಿ ಪ್ರದೇಶವನ್ನು ಸ್ಥಳಾಂತರಿಸಲು ಸಾಧ್ಯವೆಂದು ಹೇಳಿಕೊಂಡು ಸಾವಿರಾರು ರೂಪಾಯಿ ಬಂಡವಾಳ ಹಾಕಿ ರಾತ್ರೋರಾತ್ರಿ ಅತಿಥಿಗೃಹಗಳನ್ನು ಪರಿವರ್ತಿಸುವ ಕಾರ್ಯದಲ್ಲಿ ತೊಡಗಿಕೊಂಡಿದ್ದಾರೆ. ಸರ್ಕಾರದ ಅದೇಶದ ಪ್ರಕಾರ ಹಂಪೆಯಲ್ಲಿ ಯಾವುದೆ ಹಳೆಯ ಕಟ್ಟಡಗಳ ರೀಪೇರಿ ಕೆಲಸ ಅಥವಾ ಹೊಸ ಕಟ್ಟಡಗಳ ನಿರ್ಮಾಣ ಮಾಡುವಂತಿಲ್ಲ. ಆದ್ದರಿಂದ ರಾತ್ರಿ ಬೆಳಗಾಗುವುದರ ಒಳಗಾಗಿ ಕಟ್ಟಡಗಳನ್ನು ನಿರ್ಮಿಸಿಕೊಳ್ಳುತ್ತಾರೆ. ವಿದೇಶಿ ಪ್ರವಾಸಿಗರು ಬಯಸುವ ಕೆಲವು ಮೂಲಭೂತ ಸೌಲಭ್ಯಗಳನ್ನು ಎಲ್ಲ ಅತಿಥಿಗೃಹಗಳ ಮಾಲಿಕರು ಈಡೇರಿಸಲು ಸಾಧ್ಯವಾಗುತ್ತಿಲ್ಲ.

ಹಾಗೆಂದು ಎಲ್ಲ ಪ್ರವಾಸಿಗರು ಹೊಸಪೇಟೆ ಅಥವಾ ಸರಕಾರದ ಪ್ರವಾಸಿ ವಾಸಗಳಲ್ಲಿ ತಂಗಲು ಬಯಸುವುದಿಲ್ಲ. ಬದಲು ಸ್ಥಳೀಯರು ಪೂರೈಸುತ್ತಿರುವ ಸೇವಾ ಸೌಲಭ್ಯಗಳೊಂದಿಗೆ ಹೊಂದಾಣಿಕೆ

ಮಾಡಿಕೊಂಡು ತಮ್ಮ ಬಯಕೆಗಳನ್ನು ಈಡೇರಿಸಿಕೊಳ್ಳುತ್ತಾರೆ. ಹಂಪೆಯಲ್ಲಿ ತಂಗಲು ಹಲವಾರು ಕಾರಣಗಳಿವೆ. ಒಂದು ಪ್ರವಾಸಿಗರ ಆರ್ಥಿಕ ಸ್ಥಿತಿಗತಿ. ಹಿಂದಿನ ಅಧ್ಯಾಯದಲ್ಲಿ ಕಂಡುಕೊಂಡಂತೆ ಬಹುತೇಕ ಪ್ರವಾಸಿಗರು ಅವರ ದೇಶದ ಆರ್ಥಿಕ ಸ್ಥಾನಮಾನದ ಹಿನ್ನೆಲೆಯಿಂದ ನೋಡಿದರೆ ಕೆಳಮಧ್ಯಮ ಮತ್ತು ಬಡವರ್ಗಕ್ಕೆ ಸೇರಿದವರು. ಅವರಿಗೆ ಹೆಚ್ಚು ಹಣವನ್ನು ವ್ಯಯಿಸಿ ಐಷಾರಾಮಿ ಹೋಟೆಲ್ ಮತ್ತು ಅತಿಥಿಗೃಹಗಳಲ್ಲಿ ಉಳಿಯಲು ಸಾಧ್ಯವಾಗುವುದಿಲ್ಲ. ಎರಡು, ಪ್ರವಾಸಿಗರು ಸ್ವಚ್ಛಂದವಾಗಿರಲು ನಿರ್ಜನ ಹಾಗೂ ಕಡಿಮೆ ಜನಸಾಂದ್ರತೆ ಇರುವ ಪ್ರದೇಶವನ್ನು ಬಯಸುವುದು. ಮೂರು, ಹಂಪೆ ಇನ್ನೂ ಹಳ್ಳಿ ಮಾದರಿಯಲ್ಲಿಯೆ ಇರುವುದು. ನಾಲ್ಕು, ಹಂಪೆ ಹಳ್ಳಿಯಾದರೂ ಅಲ್ಲಿ ಕೆಲವು ಮೂಲಭೂತ ಸೌಲಭ್ಯಗಳಿಗೆ ಕೊರತೆಯಿಲ್ಲ. ಅವುಗಳ ಜೊತೆಗೆ ಸ್ನೇಹ, ಪ್ರಿತಿ, ಮಮತೆಯ ಉಪಚಾರ ಸಿಗುತ್ತದೆ ಎಂದು ವಿದೇಶೀಯರು ಹೇಳುತ್ತಾರೆ. ಪ್ರವಾಸಿಗರು ಒಬ್ಬರೆ ಇದ್ದು, ಅವರ ಆರೋಗ್ಯ ಕೈಕೊಟ್ಟಂತಹ ಸಂದರ್ಭದಲ್ಲಿ ಅತಿಥಿಗೃಹಗಳ ಮಾಲಿಕರು ಡಾಕ್ಟರ್‌ಗಳ ಹತ್ತಿರ ಕರೆದೊಯ್ದು ಉಪಚಾರ ಕೊಡಿಸುತ್ತಾರೆ. ವಿದೇಶಿ ಪ್ರವಾಸಿಗರು ಆರ್ಥಿಕ ತೊಂದರೆಯಲ್ಲಿ ಸಿಲುಕಿಕೊಂಡಂತಹ ಸಂದರ್ಭದಲ್ಲಿ ಅತಿಥಿಗೃಹದ ಮಾಲಿಕರು ಅವರನ್ನು ಸಂತೈಸಿ ಅವರು ತಮ್ಮ ರಾಷ್ಟ್ರಕ್ಕೆ ಹೋಗಲು ಬೇಕಾಗುವ ಕನಿಷ್ಟ ಹಣವನ್ನು ಒದಗಿಸಿ ಕೊಡುತ್ತಾರೆ. ವಿದೇಶಿ ಪ್ರವಾಸಿಗರು ಅಲ್ಲಿಗೆ ಹೋದನಂತರ ಹಣವನ್ನು ಕಳುಹಿಸಿ ಮರು ಪಾವತಿ ಮಾಡುವುದರ ಜೊತೆಗೆ ಕೃತಜ್ಞತೆ ಸೂಚಿಸುವ ಪತ್ರಗಳನ್ನು ಬರೆಯುತ್ತಾರೆಂದು ಮಾಲಿಕರು ತಿಳಿಸಿದ್ದಾರೆ.

ಕೆಲವು ಅತಿಥಿಗೃಹಗಳ ಮಾಲಿಕರಿಗೆ ಹಣ ಒದಗಿಸಿ ಪ್ರವಾಸಿಗರ ಸಮಸ್ಯೆಗಳನ್ನು ಪರಿಹರಿಸಲು ಸಾಧ್ಯವಾಗುವುದಿಲ್ಲ. ಅಂತಹ ಅತಿಥಿಗೃಹದವರು ಪ್ರವಾಸಿಗರ ಸಂಬಂಧಿಕರ ವಿಳಾಸವನ್ನು ಪಡೆದು ಸುದ್ದಿ ತಿಳಿಸಿ ಹಣವನ್ನು ತರಿಸಿ ಕೊಟ್ಟಿರುವ ಉದಾಹರಣೆಗಳಿವೆ. ಇವೆಲ್ಲವನ್ನು ಹಂಪೆಗೆ ಬಂದು ಹೋದ ಪ್ರವಾಸಿಗರಿಂದ ಹಾಗೂ ಪರಿಚಯಸ್ಥರಿಂದ ತಿಳಿದುಕೊಳ್ಳುವುದರ ಮೂಲಕ ಹಂಪೆಯಲ್ಲಿ ತಂಗಲು ಪ್ರವಾಸಿಗರು ಮನಸ್ಸು ಮಾಡುತ್ತಾರೆ. ವಿದೇಶಿ ಪ್ರವಾಸಿಗರು ಹೇಳುವಂತೆ ಗೋವಾ ವ್ಯಾಪಾರಿಗಳು ಮುಖ ಗಂಟಿಕ್ಕಿ(Grim) ಕೊಂಡಿರುತ್ತಾರೆ ಹಾಗೂ ವ್ಯಾವಹಾರಿಕವಾಗಿ ನಡೆದುಕೊಳ್ಳುತ್ತಾರೆ. ಆದರೆ ಹಂಪೆಯ ಸ್ಥಳೀಯ ವ್ಯಾಪಾರಿಗಳು ನಮ್ಮನ್ನು ನಗು ಮುಖದಿಂದಲೆ ಬರ ಮಾಡಿಕೊಳ್ಳುತ್ತಾರೆ. ಜೊತೆಗೆ ತಿಳಿಯದ ವಿಷಯಗಳನ್ನು ಕೇಳಿದರೆ ವಿವರವಾಗಿ ಬಿಡಿಸಿ ಹೇಳುತ್ತಾರೆ. ಇದರ ಜೊತೆಗೆ ಪ್ರವಾಸಿಗರು ಇಷ್ಟಪಡುವ ಮತ್ತೊಂದು ವಿಷಯವೆಂದರೆ ಇಂಗ್ಲಿಷ್ ಭಾಷೆ. ಹಂಪೆಯಲ್ಲಿ ಭಾಷೆಯ ಸಮಸ್ಯೆಯು ಕೂಡ ತುಂಬಾ ಕಡಿಮೆ. ಎಲ್ಲರೂ ತಕ್ಕಮಟ್ಟಿಗೆ ಇಂಗ್ಲಿಷ್ ಬಲ್ಲವರಾಗಿದ್ದಾರೆ. ಹಂಪೆಯಲ್ಲಿ ವ್ಯಾಪಾರ ವಹಿವಾಟುಗಳಲ್ಲಿ ತೊಡಗಿದ ಮಕ್ಕಳು/ ಗೃಹಿಣಿಯರು ಮತ್ತು ಪುರುಷರೆಲ್ಲರೂ ತಕ್ಕಮಟ್ಟಿಗೆ ಇಂಗ್ಲಿಷ್ ಮಾತನಾಡುತ್ತಾರೆ. ಇದರಿಂದಾಗಿ ಪ್ರವಾಸಿಗರಿಗೆ ಸ್ಥಳೀಯರ ಜತೆ ವ್ಯವಹರಿಸುವುದು ಸಮಸ್ಯೆಯಾಗಿಲ್ಲ.

ವಿದೇಶಿ ಪ್ರವಾಸಿಗರಿಗೆ ತಾವು ಉಳಿದ ಮತ್ತು ವ್ಯವಹರಿಸುವ ಸ್ಥಳಗಳಲ್ಲಿ ಸಹ ಪ್ರವಾಸಿಗರಿಂದ ಅಥವಾ ಸ್ಥಳೀಯರಿಂದ ಸಣ್ಣಪುಟ್ಟ ತೊಂದರೆಗಳಾದರೆ ಅವರು ಅಲ್ಲಿಂದ ಸ್ಥಳ ಬದಲಾಯಿಸುತ್ತಾರೆ. ಹಲವಾರು ವರ್ಷಗಳಿಂದ ಪ್ರವಾಸಿಗರೊಂದಿಗೆ ಅನುಭವ ಇರುವ ಸ್ಥಳೀಯರು ವಿದೇಶಿ ಪ್ರವಾಸಿಗರ ವರ್ತನೆ ಮತ್ತು ಅಭಿರುಚಿಗಳನ್ನು ಅರಿತುಕೊಂಡಿದ್ದಾರೆ. ವಿದೇಶಿ ಪ್ರವಾಸಿಗರಿಗೆ ಇತರರಿಂದ ತೊಂದರೆಯಾಗದ ರೀತಿಯಲ್ಲಿ ಸೇವಾ ಸೌಲಭ್ಯಗಳನ್ನು ಒದಗಿಸುವ ಪರಿಪಾಠವನ್ನು ಹೊಂದಿದ್ದಾರೆ. ಇವುಗಳಲ್ಲಿ ವಿದೇಶಿ ಆಹಾರ ಪಾನೀಯಗಳನ್ನು ನೀಡುವ ರೆಸ್ಟೋರೆಂಟ್‌ಗಳು ಒಂದು. ಇಲ್ಲಿ ವಿದೇಶಿ ಪ್ರವಾಸಿಗರು ಮಾತ್ರ ಇರುತ್ತಾರೆ. ದೇಶಿಯ ಪ್ರವಾಸಿಗರು ಸೇವಿಸುವ ಆಹಾರಗಳನ್ನು ತಯಾರಿಸುವುದಿಲ್ಲ. ಆ ಮೂಲಕ ಈ ರೆಸ್ಟೋರೆಂಟ್‌ಗಳಿಗೆ ದೇಶಿಯ ಪ್ರವಾಸಿಗರು ಬರದಂತೆ ಎಚ್ಚರವಹಿಸಿದ್ದಾರೆ. ವಿದೇಶಿ ಪ್ರವಾಸಿಗರು ಸೇವಿಸುವ ಆಹಾರ ಎಂದರೆ ಮೊಟ್ಟೆ, ಗೋಧಿ, ಮೈದಾ, ಹಾಲು ಹಾಗೂ ತರಕಾರಿಗಳಿಂದ ತಯಾರಿಸುವ ವಿವಿಧ ಬಗೆಯ ಆಹಾರ ಪದಾರ್ಥಗಳು. ವಿದೇಶಿ ಪ್ರವಾಸಿಗರಿಗೆ ರೆಸ್ಟೋರೆಂಟ್‌ಗಳಲ್ಲಿ ದೊರೆಯುವ ಆಹಾರ ಪದಾರ್ಥಗಳ ಬಗ್ಗೆ ಮಾಹಿತಿ ನೀಡಲು ವಿದೇಶಿಯರು ಬಳಸುವ ಆಹಾರದ ಹೆಸರುಗಳನ್ನೆ ಮೆನು (Menu) ಮತ್ತು ರೆಸ್ಟೋರೆಂಟ್ ಮುಂಭಾಗದಲ್ಲಿ ಇರಿಸಲಾಗುವ ಸ್ವಾಗತ ಬೋರ್ಡ್‌ಗಳಲ್ಲಿಯೂ ಬರೆಸಿರುತ್ತಾರೆ. ಉಪಹಾರ ಮತ್ತು ಊಟದಲ್ಲಿ ಸಾಂಬಾರ ಪದಾರ್ಥಗಳನ್ನು ಹಾಗೂ ಅಡಿಗೆಗೆ ಬಳಸುವ ಎಣ್ಣೆಯನ್ನು (Ediable oil) ಕಡಿಮೆ ಉಪಯೋಗಿಸಿ ಆಹಾರ ತಯಾರಿಸಿ ಕೊಡಬೇಕೆಂಬ ಬೇಡಿಕೆಯನ್ನು ಪ್ರವಾಸಿಗರು ಸಾಮಾನ್ಯವಾಗಿ ಮುಂದಿಡುತ್ತಾರೆ.

ವಿದೇಶಿ ಪ್ರವಾಸಿಗರು ಅಪೇಕ್ಷಿಸುವ ಮಾದರಿಯಲ್ಲಿಯೆ ರೆಸ್ಟೋರೆಂಟ್‌ಗಳಲ್ಲಿ ಆಹಾರ ಪದಾರ್ಥಗಳನ್ನು ತಯಾರಿಸುತ್ತಾರೆ. ಆಹಾರವನ್ನು ರುಚಿಯಾಗಿ ತಯಾರಿಸಿ ಬಿಸಿಯಾಗಿರುವಾಗಲೇ ಪೂರೈಸುವರೆಂದು ರೆಸ್ಟೋರೆಂಟ್‌ಗಳ ಬಗ್ಗೆ ಪ್ರವಾಸಿಗರು ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತಾರೆ. ರೆಸ್ಟೋರೆಂಟ್‌ಗಳಲ್ಲಿ ಮಾಲಿಕರು ಸ್ವಚ್ಛತೆಯನ್ನು ಕಾಪಾಡುತ್ತಾರೆಂದು ಅಭಿಪ್ರಾಯಪಡುತ್ತಾರೆ. ಸುತ್ತಮುತ್ತಲು ದೇವಸ್ಥಾನಗಳು ಇರುವುದರಿಂದ ರೆಸ್ಟೋರೆಂಟ್‌ಗಳಲ್ಲಿ ಮಾಂಸದಿಂದ ತಯಾರಿಸಿದ ಉಪಹಾರ ಮತ್ತು ಊಟವನ್ನು ತಯಾರಿಸುವುದಿಲ್ಲವೆಂದು ರೆಸ್ಟೋರೆಂಟ್ ಮಾಲಿಕರು ಹೇಳುತ್ತಾರೆ. ಬಹುತೇಕ ವಿದೇಶಿಯರು ಮಾಂಸಹಾರಿಗಳಾಗಿರುವುದರಿಂದ ಮಾಂಸಾಹಾರ ಬೇಡಿಕೆಯನ್ನು ಮುಂದಿಡುವುದಿಲ್ಲವೆ ಎಂದು ರೆಸ್ಟೋರೆಂಟ್ ಮಾಲಿಕರನ್ನು ವಿಚಾರಿಸಿದರೆ, ವಿದೇಶಿ ಪ್ರವಾಸಿಗರೆಲ್ಲರೂ ಮಾಂಸಾಹಾರಿಗಳಲ್ಲ, ಅವರಲ್ಲೂ ತುಂಬಾ ಜನ ಸಸ್ಯಹಾರಿಗಳಿದ್ದಾರೆ ಎಂದು ಮಾಲಿಕರು ಹೇಳುತ್ತಾರೆ. ಪ್ರವಾಸಿಗರಲ್ಲಿ ಕೆಲವರು ದನದ ಮಾಂಸ (Beef) ಮತ್ತು ಚಿಕನ್ ಊಟ ಸಿಗುತ್ತದೆಯೆ ಎಂದು ಕೇಳುತ್ತಾರೆ. ಇಲ್ಲಿ ದೇವಸ್ಥಾನಗಳು ಇರುವುದರಿಂದ ಮಾಂಸದ ಆಹಾರ ಪದಾರ್ಥಗಳನ್ನು ತಯಾರಿಸುವುದಿಲ್ಲವೆಂದರೆ, ಸಸ್ಯಹಾರವನ್ನೆ ಉಪಯೋಗಿಸುತ್ತಾರೆ. ಹೊಸ ವರ್ಷದ

ದಿನ, ಕ್ರಿಸ್‌ಮಸ್ ದಿನ ಹಾಗೂ ಪ್ರವಾಸಿಗರ ಹುಟ್ಟುಹಬ್ಬದ ದಿನದಂತಹ ವಿಶೇಷ ಸಂದರ್ಭಗಲ್ಲಿ ಕೆಲವು ರೆಸ್ಟೋರೆಂಟ್ ಮಾಲಿಕರು ಆರ್ಡರನ್ನು ತೆಗೆದುಕೊಂಡು ಮಾಂಸದ ತಿನಿಸುಗಳನ್ನು ಮಾಡಿಕೊಡುವುದಿದೆ. ಕೆಲವರು ಆಹಾರವನ್ನು ರೂಂಗಳಿಗೆ ಕೊಂಡೊಯ್ದು ತಿಂದರೆ ಇನ್ನೂ ಕೆಲವರು ಹೊರಗಡೆ ನಿರ್ಜನ ಪ್ರದೇಶಕ್ಕೆ ಕೊಂಡೊಯ್ದು ತಿನ್ನುತ್ತಾರೆ. ಪ್ರವಾಸಿಗರು ಮದ್ಯವನ್ನೂ ಸಹ ಸೇವಿಸುತ್ತಾರೆ. ರೆಸ್ಟೋರೆಂಟ್‌ಗಳಲ್ಲಿ ಮಾಂಸಾಹಾರಿ ವಸ್ತುಗಳನ್ನು ಮತ್ತು ಮದ್ಯವನ್ನು ಸೇವಿಸಲು ಅನುಮತಿ ಇಲ್ಲದಿರುವ ಬಗ್ಗೆ ಪ್ರವಾಸಿಗರಲ್ಲಿ ಶೇ.45ರಷ್ಟು ಜನರು ಅತೃಪ್ತಿಯನ್ನು ಹೊಂದಿದ್ದಾರೆ. ಹಂಪೆಯಲ್ಲಿ ಮದ್ಯ ಮಾರಾಟ ಕಾನೂನು ಪ್ರಕಾರ ನಿಷಿದ್ಧ, ಆದರೂ 4 ಸರಾಯಿ ಅಂಗಡಿಗಳಿವೆ. ಮೊದಲಿದ್ದ ಒಂದು ವೈನ್ ಶಾಪನ್ನು ಪಕ್ಕದ ಕಡ್ಡಿರಾಂಪುರಕ್ಕೆ ಸ್ಥಳಾಂತರಿಸಲಾಗಿದೆ. ವಿದೇಶಿಯರಿಗೆ ಅಫೀಮ್, ಗಾಂಜಾ, ಚರಸ್ ಇತ್ಯಾದಿ ಮಾದಕ ವಸ್ತುಗಳು ಅತ್ಯಗತ್ಯಗಳಾಗಿವೆ. ಆದ್ದರಿಂದ ಮದ್ಯ, ಅಫೀಮ್ ಇತ್ಯಾದಿಗಳನ್ನು ಪ್ರವಾಸಿಗರು ತಮ್ಮ ಕೊಠಡಿಗಳೊಳಗೆ ಉಪಯೋಗಿಸಲು ಮಾಲಿಕರು ಪ್ರವಾಸಿಗರ ಜವಾಬ್ದಾರಿಯ ಮೇಲೆ ಅನುವು ಮಾಡಿಕೊಡುತ್ತಾರೆ. ಈ ಮಾದಕ ವಸ್ತುಗಳನ್ನು ಪ್ರವಾಸಿಗರೆ ಹಂಪೆಗೆ ಬರುವ ಮುನ್ನ ಇತರ ಪ್ರವಾಸಿ ತಾಣವಾದ ಹಿಮಾಚಲ ಪ್ರದೇಶದ ಕುಲು ಮತ್ತು ಮನಾಲಿ ಹಾಗೂ ಗೋವಾದಿಂದ ತರುತ್ತಾರೆ. ಹೊಸಪೇಟೆ ಹಾಗೂ ಸ್ಥಳೀಯ ಕೆಲವರು ಈ ವಸ್ತುಗಳನ್ನು ಗುಪ್ತವಾಗಿ ಪೂರೈಸುತ್ತಾರೆ. ಮದ್ಯದ ಅಂಗಡಿ(Wine shop)ಗಳು ಇಲ್ಲದ್ದಿದ್ದರೂ ಹೊಸಪೇಟೆ, ಕಮಲಾಪುರ, ಕಡ್ಡಿರಾಂಪುರ ಇತ್ಯಾದಿ ಪ್ರದೇಶಗಳಿಂದ ಮದ್ಯ ಸರಬರಾಜು ಆಗುತ್ತದೆ. ಇದನ್ನು ಅತಿಥಿಗೃಹ ಮತ್ತು ರೆಸ್ಟೋರೆಂಟ್‌ಗಳ ಮಾಲಿಕರೆ ಸರಬರಾಜು ಮಾಡುತ್ತಾರೆನ್ನಲಾಗುವುದಿಲ್ಲ. ಇಂತಹ ಪದಾರ್ಥಗಳನ್ನು ಪೂರೈಸುವ ಜಾಲವೆ ಇರುವ ಸಾಧ್ಯತೆ ಇದೆ. ಅವರು ಪ್ರವಾಸಿಗರ ಅಗತ್ಯಗಳನ್ನು ಅರಿತು ಪೂರೈಸುತ್ತಾರೆ. ಮದ್ಯ ಸೇವನೆಗೆ ಇರುವ ನಿಷೇಧ ಪ್ರವಾಸಿಗರಿಗೆ ತುಂಬಾ ಅಸಮಾಧಾನ ತರುವ ವಿಚಾರ. ಅಂತಹ ಗಿರಾಕಿಗಳನ್ನು ಕಳೆದುಕೊಳ್ಳಲು ಇಷ್ಟಪಡದ ಅತಿಥಿಗೃಹದ ಮಾಲಿಕರು ಹೊರಗಡೆ ಕುಡಿದು ಬರಲು ಪ್ರವಾಸಿಗರಿಗೆ ತಿಳಿಸುತ್ತಾರೆ. ಒಂದು ವೇಳೆ ರೂಮಿನಲ್ಲಿಯೆ ಮದ್ಯ ಕುಡಿದರೂ, ಮದ್ಯದ ಬಾಟಲಿಗಳನ್ನು ಬೇರೆ ಕಡೆ ಇಡಿ. ಯಾಕೆಂದರೆ ಪೋಲಿಸರು ಯಾವಾಗ ಬರುತ್ತಾರೆನ್ನುವುದು ಗೊತ್ತಾಗುವುದಿಲ್ಲ ಎಂದು ಅತಿಥಿಗೃಹದ ಮಾಲಿಕರು ವಿದೇಶೀಯರಿಗೆ ಸಲಹೆ ನೀಡಿ ಸಹಕರಿಸುತ್ತಾರೆ.

ಕಮಲಾಪುರದಲ್ಲಿಯ ಕೆ.ಎಸ್.ಟಿ.ಡಿ.ಸಿ.ಯ ಮಯೂರ ಭುವನೇಶ್ವರಿ ಹೋಟೆಲ್ ಸುಸಜ್ಜಿತ ವ್ಯವಸ್ಥೆಯನ್ನು ಹೊಂದಿದೆ. ಇಲ್ಲಿ 32 ಕೊಠಡಿಗಳಿವೆ. ಅದರಲ್ಲಿ 8 ಹವಾನಿಯಂತ್ರಿತ ಕೊಠಡಿಗಳಾಗಿವೆ.[8] ಕೊಠಡಿಗಳು ವಿಶಾಲವಾಗಿದ್ದು ಗಾಳಿ ಬೆಳಕಿನಿಂದ ಕೂಡಿವೆ. ಅಟ್ಯಾಚ್ ಬಾತ್‌ರೂಂಗಳಿವೆ. ಚಿಕ್ಕ ಪ್ರಮಾಣದಲ್ಲಿ ಮನೆಯ ಅಲಂಕೃತ ವಸ್ತುಗಳನ್ನು ಮಾರಾಟ ಮಾಡುವ ಮಳಿಗೆಯೂ ಇದೆ. ವಿಶಾಲವಾದ ಕಾನ್‌ಫರೆನ್ಸ್ ಹಾಲ್, ಆವರಣದಲ್ಲಿರುವ ಯಾತ್ರಿಕರ ನಿವಾಸದಲ್ಲಿದೆ. ಎಲ್ಲಾ

ಕೊಠಡಿಗಳಲ್ಲಿಯೂ ಡಬಲ್ ಬೆಡ್ಡ್‌ಗಳಿದ್ದು, ಸಾಮಾನ್ಯ ಕೊಠಡಿಗಳಿಗೆ ದಿನವೊಂದಕ್ಕೆ ವೆಚ್ಚಕರ ಸಹಿತ ರೂ.330ಗಳು, ಹವಾ ಯಂತ್ರಿತ ಹೊಂದಿರುವ ಕೊಠಡಿಗಳಿಗೆ ರೂ.506ಗಳು ದರ ಇದೆ. ಪ್ರವಾಸಿಗರು ಮಾಡುವ ಖರ್ಚಿನ ಮೇಲೆ ವೆಚ್ಚದ ತೆರಿಗೆಯನ್ನು ವಿಧಿಸಲಾಗುತ್ತದೆ. ವೆಚ್ಚವು ರೂ.300ರವರೆಗೆ ಇದ್ದರೆ ಶೇ. 10ವೆಚ್ಚದ ತೆರಿಗೆ ಹಾಗೂ ರೂ 450ಕ್ಕೂ ಮೇಲ್ಪಟ್ಟಿದ್ದರೆ ಶೇ. 2.5 ಇದೆ. ಈ ಹೋಟೆಲ್‌ಗೆ ಹೋಗುವವರು ಹೆಚ್ಚು ಆದಾಯವಿರುವ ಪ್ರವಾಸಿಗರು. ಕೆ.ಎಸ್.ಟಿ.ಡಿ.ಸಿ.ಯ ಹೋಟೆಲ್ ವ್ಯವಸ್ಥಾಪಕರ ಪ್ರಕಾರ ಕ್ಲಾಸ್ ಟ್ಯೂರಿಸ್ಟಗಳು ಮಾತ್ರ ಬರುತ್ತಾರೆಂದು ತಿಳಿಸುತ್ತಾರೆ. ಹೊಸಪೇಟೆಯ ಹೋಟೆಲ್‌ಗಳಲ್ಲಿ ಉಳಿಯುವವರು ಸಹ ಆದಾಯ ಹೆಚ್ಚಿರುವವರೆ ಆಗಿದ್ದಾರೆ. ಕಮಲಾಪುರದಲ್ಲಿರುವ ಕೆ.ಎಸ್.ಟಿ.ಡಿ.ಸಿ. ಹೋಟೆಲ್ ಮಯೂರ ಭುವನೇಶ್ವರಿಯಲ್ಲಿ ಸಾರ್ವಜನಿಕವಾಗಿ ಅಂದರೆ ಹೋಟೆಲ್ ಆಹಾರ ಸೇವನೆಯ ಸ್ಥಳದಲ್ಲಿ ಕೇವಲ ಬಿಯರ್ ಕುಡಿಯಲು ಅವಕಾಶ ಕಲ್ಪಿಸಲಾಗಿದೆ. ಹಾಟ್ ಡ್ರಿಂಕ್ಸ್‌ಗಳನ್ನು ಸೇವಿಸುವ ಪ್ರವಾಸಿಗರು ತಮ್ಮ ಕೊಠಡಿಗಳಲ್ಲೆ ಸೇವಿಸುತ್ತಾರೆ. ಇಲ್ಲಿಯು ಮದ್ಯ ಸೇವನೆ ಸಾರ್ವಜನಿಕವಾಗಿ ಮಾಡುವಂತಿಲ್ಲ. ಜತೆಗೆ ದುಬಾರಿ ಬೆಲೆ. ವಿದೇಶಿಯರು ಇಲ್ಲಿನ ದರಗಳ ಬಗ್ಗೆ ಅತೃಪ್ತಿ ಹೊಂದಿದ್ದಾರೆ.

ಹೋಟೆಲ್‌ಗಳು

ಹಂಪೆಯಲ್ಲಿರುವ 20 ಹೋಟೆಲ್‌ಗಳಲ್ಲಿ ದೇಶಿಯ ಆಹಾರವನ್ನು ತಯಾರಿಸಲಾಗುತ್ತದೆ. ದೇಶಿಯ ಉಪಹಾರಗಳಲ್ಲಿ ಇಡ್ಲಿ, ಪೂರಿ, ವಡೆ, ಕಾಫಿ, ಟೀ, ಇತ್ಯಾದಿ ಸೇರಿವೆ. ಈ ಹೋಟೆಲ್‌ಗಳಿಗೆ ದೇಶಿ ಪ್ರವಾಸಿಗರು ಹಾಗೂ ಸ್ಥಳೀಯರು ಹೋಗುತ್ತಾರೆ. ವಿದೇಶಿ ಪ್ರವಾಸಿಗರು ಇಂತಹ ಹೋಟೆಲ್‌ಗಳಲ್ಲಿಯೂ ಊಟ ಮಾಡುವವರು ಇದ್ದಾರೆ. ಇವರೆಲ್ಲ ಕಡಿಮೆ ಖರ್ಚಿನಲ್ಲಿ ಪ್ರವಾಸ ಮುಗಿಸಿಕೊಂಡು ಹೋಗಬಯಸುವ ಪ್ರವಾಸಿಗರು ಇಂತಹ ಹೋಟೆಲ್‌ಗಳಲ್ಲಿ ಉಪಹಾರ ಮತ್ತು ಊಟ ಮಾಡುತ್ತಾರೆ. ವಿದೇಶಿಯರು ಇಲ್ಲಿ ಕೊಡುವ ಊಟವನ್ನು ಥಾಲಿ (Thali) ಎನ್ನುತ್ತಾರೆ. ಒಂದು ಊಟಕ್ಕೆ ರೂ. 20 ರಿಂದ 25 ಇರುತ್ತದೆ. ಉಪಹಾರದ ದರಗಳಲ್ಲಿ ಮಾತ್ರ ವ್ಯತ್ಯಾಸಗಳಿರುತ್ತವೆ. ಈ ಹೋಟೆಲ್‌ಗಳಲ್ಲಿ ಸಾಧಾರಣ ಟೀಗೆ 1.50 ಪೈಸೆ ಇದೆ. ಆದರೆ ಉತ್ತಮ ಟೀಗೆ ರೂ. 3.00 ತೆಗೆದುಕೊಳ್ಳುತ್ತಾರೆ. ಒಂದು ಪ್ಲೇಟ್ ಇಡ್ಲಿಗೆ ರೂ.5.00ಗಳು, ಒಂದು ಪ್ಲೇಟ್ ಪೂರಿಗೆ ರೂ.6.00ಗಳು, ವಡೆ ಮತ್ತು ಬಜ್ಜಿಗೆ ಒಂದಕ್ಕೆ ರೂ.1.00ಗಳು ಇರುತ್ತದೆ. ಪುರಿ ಮಂಡಕ್ಕಿಗೆ ರೂ.2.00 ಇರುತ್ತದೆ. ಈ ಹೋಟೆಲ್‌ಗಳಲ್ಲಿಯೆ ಕೆಲವರು ರೂ.15.00ಗಳಿಗೆ ಊಟವನ್ನು ನೀಡಿ ವ್ಯವಹಾರದ ಪೈಪೋಟಿಗೆ ಇಳಿದಿದ್ದಾರೆ. ದೇಶಿಯ ಪ್ರವಾಸಿಗರು ಇಲ್ಲಿನ ದರಗಳು ಬೇರೆ ಸ್ಥಳಗಳಿಗಿಂತ ಹೆಚ್ಚಿವೆ ಎಂದು ದೂರುತ್ತಾರೆ. ವಿದೇಶಿ ಪ್ರವಾಸಿಗರು ಊಟದಲ್ಲಿ ಕೊಟ್ಟಂತಹ ಚಪಾತಿಯನ್ನು ಎಡಗೈಯಿಂದ ತಿನ್ನುತ್ತಾ, ಬಲಗೈಯಿಂದ ಅನ್ನವನ್ನು ಸೇವಿಸುತ್ತಿರುತ್ತಾರೆ. ಇವರಿಗೆ ಇಲ್ಲಿನ ಈ ಊಟ ಸೇವಿಸುವ

ಪದ್ಧತಿ ಗೊತ್ತಿರುವುದಿಲ್ಲ. ಜೊತೆಗೆ ಹೋಟೆಲ್‌ನವರು ಸಹ ವಿದೇಶಿಯರು ಆಹಾರ ತಿನ್ನಲು ಬಳಸುವ ಮುಳ್ಳಿನ ಚಮಚ (Fork) ಇತ್ಯಾದಿಗಳನ್ನು ಪೂರೈಸುವುದಿಲ್ಲ. ಆದರೆ ರೆಸ್ಟೋರೆಂಟ್‌ಗಳಲ್ಲಿ ಈ ವ್ಯವಸ್ಥೆ ಇರುತ್ತದೆ. ಈ ಹೋಟೆಲ್‌ಗಳು ಮುಖ್ಯವಾಗಿ ದೇಶಿಯ ಪ್ರವಾಸಿಗರು ಉಪಯೋಗಿಸುವ ಆಹಾರ ಪದಾರ್ಥಗಳನ್ನು ತಯಾರಿಸುವುದರ ಜೊತೆಗೆ ಕಡಿಮೆ ಬಜೆಟ್ ಹೊಂದಿದ ಪ್ರವಾಸಿಗರಿಗೂ ಕಡಿಮೆ ದರದಲ್ಲಿ ಊಟವನ್ನು ಪೂರೈಸುತ್ತವೆ. ಹಾಗಾಗಿ ಕಡಿಮೆ ಬಜೆಟ್ ಹೊಂದಿರುವ ಪ್ರವಾಸಿಗರು ಹಂಪೆಯಲ್ಲಿ ಹೆಚ್ಚಿನ ದಿನ ತಂಗುವುದಿದೆ. ಅವರೆಲ್ಲ ಈ ಹೋಟೆಲ್‌ಗಳನ್ನು ಇಚ್ಛಿಸುತ್ತಾರೆ.

ಇಂಟರ್‌ನೆಟ್, ಇ-ಮೇಲ್ ಮಳಿಗೆಗಳು

ಪ್ರವಾಸಿಗರಿಗೆ ವಸತಿ ಮತ್ತು ಆಹಾರಗಳ ಅವಶ್ಯಕತೆಯಷ್ಟೆ, ಸಂಪರ್ಕ ಸಾಧನಗಳು ಕೂಡ ಅಷ್ಟೆ ಮುಖ್ಯ. ಇಲ್ಲಿ ವಿದೇಶಿ ಪ್ರವಾಸಿಗರಿಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತದೆ. ವಿದೇಶಿ ಪ್ರವಾಸಿಗರು ತಮ್ಮ ಪ್ರವಾಸದ ಚಲನವಲನದ ಬಗ್ಗೆ, ವಿದೇಶಿ ಸ್ನೇಹಿತರ ಕುಟುಂಬ ವರ್ಗದವರ ಬಗ್ಗೆ ಮಾಹಿತಿ-ವಿವರಗಳನ್ನು ತಿಳಿಯಲು ಇಂಟರ್‌ನೆಟ್ ಮತ್ತು ಇ-ಮೇಲ್‌ಗಳನ್ನು ಬಳಸಿ, ಸಂದೇಶಗಳನ್ನು ರವಾನಿಸುತ್ತಾರೆ ಮತ್ತು ಪಡೆದು ಕೊಳ್ಳುತ್ತಾರೆ. ಇದು ಇತರೆ ಯಾವುದೆ ಸಂಪರ್ಕ ಮಾಧ್ಯಮಕ್ಕಿಂತ ಉತ್ತಮವಾದ ಮತ್ತು ಕಡಿಮೆ ಬೆಲೆಗೆ ದೊರಕುವ ಸೌಲಭ್ಯವಾಗಿದೆ. ಸ್ಥಳೀಯರು ಪ್ರವಾಸಿಗರಿಗೆ ಇಂಟರ್‌ನೆಟ್ ಮತ್ತು ಇ-ಮೇಲ್‌ಗಳ ಮೂಲಕ ಸೌಲಭ್ಯಗಳನ್ನು ಒದಗಿಸಿ ಅನುಕೂಲ ಮಾಡಿಕೊಟ್ಟಿದ್ದಾರೆ. ಇದರಿಂದ ವಿದೇಶಿ ಪ್ರವಾಸಿಗರು ಹಂಪೆಯಲ್ಲಿ ತಂಗುವುದು ಹೆಚ್ಚಾಗುತ್ತಿದೆ. ಈ ಮಳಿಗೆಗಳ ಮಾಲಿಕರು ಇತರ ಸ್ಥಳಗಳಿಗಿಂತ ಕಡಿಮೆ ದರದಲ್ಲಿ ಇಂಟರ್‌ನೆಟ್ ಮತ್ತು ಇ-ಮೇಲ್ ಸೌಲಭ್ಯಗಳನ್ನು ಕಲ್ಪಿಸಿದ್ದೇವೆ ಎನ್ನುತ್ತಾರೆ. ಸ್ಥಳೀಯ ಈ ಬೆಲೆಗಳು ಸಾಧಾರಣವಾಗಿವೆ. ದುಬಾರಿಯಾಗಿಲ್ಲ. ಬೇರೆ ಪ್ರವಾಸಿ ತಾಣ ನೋಡಿಕೊಂಡು ಬಂದು ಈ ದರಗಳನ್ನು ಗೊತ್ತುಪಡಿಸಿದ್ದೇವೆ ಎಂದು ತಿಳಿಸುತ್ತಾರೆ. ಇತರೆ ಪ್ರವಾಸಿ ತಾಣಗಳಿಗಿಂತ ಸ್ವಲ್ಪ ಕಡಿಮೆಯೆ ಇದೆ ಎಂಬುದು ಅವರ ಅಭಿಪ್ರಾಯವಾಗಿದೆ. ಆದರೆ ವಿದೇಶಿ ಪ್ರವಾಸಿಗರ ಪ್ರಕಾರ ಸ್ಥಳೀಯ ದರಗಳು ತುಂಬಾ ದುಬಾರಿ. ಎಸ್.ಟಿ.ಡಿ. ಮತ್ತು ಐ. ಎಸ್.ಡಿ ಕರೆಗಳ ಲಭ್ಯತೆ ಹಂಪೆಯಲ್ಲಿದ್ದರೂ, ಹೆಚ್ಚಿನ ಪ್ರವಾಸಿಗರು ಐ.ಎಸ್.ಡಿ. ಕರೆಗಳನ್ನು ಮಾಡದೆ ಇಂಟರ್‌ನೆಟ್ ಮತ್ತು ಇ-ಮೇಲ್‌ಗಳನ್ನು ಅವಲಂಬಿಸಿದ್ದಾರೆ. ಐ.ಎಸ್.ಡಿ ಮತ್ತು ಎಸ್.ಟಿ.ಡಿ ಬೂತ್‌ಗಳನ್ನು ಹೊಂದಿದ ಸ್ಥಳೀಯರು, ಇಂಟರ್‌ನೆಟ್ ಮತ್ತು ಇ-ಮೇಲ್ ಬಂದು ನಮಗೆ ಆದಾಯದ ಪ್ರಮಾಣ ಕಡಿಮೆಯಾಗಿದೆ ಎಂದು ತಿಳಿಸುತ್ತಾರೆ. ಅಂತಾರಾಷ್ಟ್ರೀಯ ಕರೆಗಳ ಪಲ್ಸ್ ದರ ಹೆಚ್ಚು ಮಾಡಿದ್ದು, ಬರುವ ಕಮಿಷನ್ ಕಡಿಮೆಯಾಗುತ್ತಿದೆ ಎನ್ನುತ್ತಾರೆ.

ಹಣದ ವಿನಿಮಯ ಕೇಂದ್ರಗಳು

ವಿವಿಧ ದೇಶಗಳಿಂದ ಬಂದಿರುವ ಪ್ರವಾಸಿಗರು ತಮ್ಮ ದೇಶದ ಕರೆನ್ಸಿಗಳನ್ನು ತಂದಿರುತ್ತಾರೆ. ಆಯಾ ದೇಶದ ನಾಣ್ಯ ಮತ್ತು ಕರೆನ್ಸಿಗಳು ಆಯಾ ರಾಷ್ಟ್ರದೊಳಗೆ ಚಲಾವಣೆಯಲ್ಲಿರುತ್ತವೆ. ಆದರೆ ಒಂದು ರಾಷ್ಟ್ರದ ನಾಣ್ಯ ಮತ್ತು ಕರೆನ್ಸಿಗಳು, ಇನ್ನೊಂದು ರಾಷ್ಟ್ರದಲ್ಲಿ ಸುಲಭವಾಗಿ ಮತ್ತು ನೇರವಾಗಿ ಚಲಾವಣೆ ಹೊಂದಲಾರವು. ವಿದೇಶಿ ಪ್ರವಾಸಿಗರು ಬರುವಾಗ ತಮ್ಮ ರಾಷ್ಟ್ರದ ಕರೆನ್ಸಿಗಳನ್ನು, ಪ್ರವಾಸಿಗರ ಚೆಕ್‌ಗಳನ್ನು ಅಥವಾ ಕ್ರೆಡಿಟ್ ಮತ್ತು ಡೆಬಿಟ್ ಕಾರ್ಡುಗಳನ್ನು ತರುತ್ತಾರೆ. ಒಂದು ವೇಳೆ ಕರೆನ್ಸಿ ತಂದಿದ್ದರೆ ಭಾರತದ ರೂಪಾಯಿಗೆ ಪರಿವರ್ತಿಸಿಕೊಂಡು ಖರ್ಚುಮಾಡಬೇಕಾಗುತ್ತದೆ. ಹಣ ವಿನಿಮಯ ಮಾಡುವ 08 ಮಳಿಗೆಗಳು ಹಂಪೆಯಲ್ಲಿ ಸ್ಥಾಪಿತವಾಗಿವೆ. ಹಂಪೆಯಲ್ಲಿ ರಾಷ್ಟ್ರೀಕೃತ ಬ್ಯಾಂಕು ಕೂಡ ಪ್ರವಾಸಿಗರ ಚೆಕ್ಕು ಮತ್ತು ಕ್ರೆಡಿಟ್ ಕಾರ್ಡುಗಳನ್ನು ಇಲ್ಲಿನ ಹಣಕ್ಕೆ ಪರಿವರ್ತಿಸಿಕೊಡುತ್ತದೆ. ಹಣ ವಿನಿಮಯ ಮಾಡುವ ಮಳಿಗೆಗಳು ಬೆಳಗ್ಗೆ 8 ಗಂಟೆಯಿಂದ ರಾತ್ರಿ 10 ಗಂಟೆವರೆಗೂ ಕಾರ್ಯನಿರ್ವಹಿಸುತ್ತವೆ. ವಿದೇಶಿ ಪ್ರವಾಸಿಗರು ಈ ಸಮಯದಲ್ಲಿ ಕರೆನ್ನಿ ಅಥವಾ ಪ್ರವಾಸದ ಚೆಕ್‌ಗಳನ್ನು ವಿನಿಮಯ ಮಾಡಿಕೊಳ್ಳುತ್ತಾರೆ. ಈ ಮಳಿಗೆಗಳಲ್ಲಿ ಬ್ಯಾಂಕಿನ ವಿನಿಮಯ ದರಕ್ಕಿಂತ ಸ್ವಲ್ಪ ಹೆಚ್ಚಿನ ಪ್ರಮಾಣದಲ್ಲಿ ಕಮಿಷನ್ ತೆಗೆದುಕೊಂಡು ಹಣವನ್ನು ತಕ್ಷಣವೆ ಪಾವತಿ ಮಾಡುತ್ತಾರೆ. ಜೊತೆಗೆ ವಿದೇಶಿ ಪ್ರವಾಸಿಗರು ಅಪರೂಪಕ್ಕೆ ಹಣ, ವೀಸಾ ವಸ್ತುಗಳನ್ನು ಕಳೆದುಕೊಂಡು ಬರೀ ಕೈಯಲ್ಲಿ ಇದ್ದಂಥ ಸಂದರ್ಭದಲ್ಲಿ ಹಣದ ವಿನಿಮಯ ಮಾಡುವ ಮಳಿಗೆಗಳು ವಿದೇಶಿಯರಿಗೆ ಸಹಾಯ ಮಾಡುತ್ತಿವೆ. ವಿದೇಶಿ ಪ್ರವಾಸಿಗರು ಸ್ನೇಹಿತರು, ಸಂಬಂಧಿಕರ ವಿಳಾಸವನ್ನು ನೀಡಿದರೆ, ಅಲ್ಲಿಂದ ಹಣವನ್ನು ತರಿಸಿಕೊಡುವ ವ್ಯವಸ್ಥೆಯನ್ನು ಮಾಡಲಾಗುತ್ತಿದೆ. ಹಂಪಿಯಲ್ಲಿನ ಸ್ನೇಹ ಟ್ರಾವೆಲ್ಸ್ ಮತ್ತು ಹಣದ ವಿನಿಮಯ ಮಳಿಗೆ ಮಾಲಿಕರು ಈ ವಿಷಯವನ್ನು ತಿಳಿಸುತ್ತಾರೆ.

ಹಣದ ವಿನಿಮಯ ಮಳಿಗೆಯಲ್ಲಿ ಕರೆನ್ಸಿ ಮತ್ತು ಪ್ರವಾಸಿಗರ ಚೆಕ್ ಮಾತ್ರ ಸ್ವೀಕರಿಸಿ ಹಣವನ್ನು ಪಾವತಿಸಲಾಗುತ್ತದೆ. ಕ್ರೆಡಿಟ್ ಮತ್ತು ಡೆಬಿಟ್ ಕಾರ್ಡುಗಳನ್ನು ತೆಗೆದುಕೊಂಡು ಹಣ ಪಾವತಿಸುವ ಕಾರ್ಯವನ್ನು ಇವು ಮಾಡುತ್ತಿಲ್ಲ. ವಿದೇಶಿ ಪ್ರವಾಸಿಗರಲ್ಲಿ ಹಣದ ವಿನಿಮಯ ಮಳಿಗೆಗಳ ಸೇವಾ ಸೌಲಭ್ಯಗಳ ಮತ್ತು ಕಮೀಷನ್‌ಬಗ್ಗೆ ತೃಪ್ತಿ ಇದೆ. ವಿದೇಶಿ ಪ್ರವಾಸಿಗರು ಚೆಕ್‌ಗಳನ್ನು ಕೊಟ್ಟು ಹಣ ತೆಗೆದುಕೊಂಡು ಹೋಗುವ ಮುಂಚೆ ಟ್ರಾವೆಲರ್ಸ್ ಚೆಕ್‌ಗಳಲ್ಲಿ ಸಹಿ ಮಾಡಿ ಹೋಗಿರುತ್ತಾರೆ. ಪ್ರವಾಸಿಗರ ಚೆಕ್‌ಗಳನ್ನು ಸಂಬಂಧಪಟ್ಟ ದೇಶದ ಬ್ಯಾಂಕುಗಳಿಗೆ ಕಳಿಸಿಕೊಡಲಾಗುತ್ತದೆ. ಪ್ರವಾಸಿ ಚೆಕ್ಕುಗಳಲ್ಲಿ ಮೊದಲು ಅಲ್ಲಿಂದ ತರುವಾಗ ಮಾಡಿದ ಸಹಿ ಮತ್ತು ನಂತರ ಮಾಡಿದ ಸಹಿ ಎರಡೂ ಇರುತ್ತವೆ. ಇವೆರಡೂ ಹೋಲಿಕೆ ಇದ್ದರೆ ಅವರು ಕಳುಹಿಸಿದ ಪ್ರವಾಸಿಗರ ಚೆಕ್‌ಗಳನ್ನು ಮುರಿದು

ಹಣವನ್ನು ಕಳಿಸುವುದಿದೆ. ಇಲ್ಲದಿದ್ದಲ್ಲಿ ಪ್ರವಾಸಿ ಚೆಕ್‌ಗಳು ತಿರಸ್ಕೃತಗೊಂಡು ವಾಪಾಸ್ಸು ಬರುತ್ತವೆ. ವಾಪಸ್ಸು ಬಂದ ಪ್ರವಾಸಿಗರ ಚೆಕ್ಕುಗಳನ್ನು ಮಾಲಿಕರು ಕ್ಷೇತ್ರಕಾರ್ಯದಲ್ಲಿ ತೋರಿಸಿದರು. ಅಮೆರಿಕಾದ 50 ಡಾಲರಿನ ಮುಖಬೆಲೆಯ 20 ನೋಟುಗಳು ತಿರಸ್ಕೃತಗೊಂಡು ಬಂದಿದ್ದವು. ರೂ. 48 ಸಾವಿರದವರೆಗೆ ಒಬ್ಬ ಪ್ರವಾಸಿಗರಿಂದಲೆ ನಷ್ಟವಾಯಿತು ಎಂದು ತಿಳಿಸಿದರು. ವಿದೇಶಿ ಪ್ರವಾಸಿಗರಲ್ಲಿಯೂ ಸಹ ಮೋಸ ಮಾಡುವ ಪ್ರವೃತ್ತಿ ಇದೆ. ಇಂಥವರು ಕೆಲವರು ಮಾತ್ರ. ಉಳಿದ ಪ್ರವಾಸಿಗರು ಪ್ರಾಮಾಣಿಕವಾಗಿರುತ್ತಾರೆಂದು ತಿಳಿಸಿದರು. ಪ್ರತಿ ಸೀಸನ್‌ನಲ್ಲಿ ಒಂದು ಅಥವಾ ಎರಡು ಮೋಸ ಮಾಡುವ ಗ್ರಾಹಕರು ನಮಗೆ ಸಿಗುವುದು ಸಹಜವೆನ್ನುತ್ತಾರೆ. ಎಷ್ಟು ಜಾಗರೂಕತೆಯಿಂದ ವ್ಯವಹರಿಸಿದರು ಕೂಡ ಒಮ್ಮೊಮ್ಮೆ ಹೀಗಾಗುತ್ತದೆ ಎನ್ನುತ್ತಾರೆ. ಹಣದ ವಿನಿಮಯ ಪೂರ್ವದಲ್ಲಿ ಸಹಿಗಳನ್ನು ಸರಿಯಾಗಿ ನೋಡಿಕೊಳ್ಳಬಹುದಿತ್ತಲ್ಲಾ ಎಂದರೆ, ಎಲ್ಲಾ ವಿದೇಶಿಯರು ಈ ರೀತಿ ಮಾಡುವುದಿಲ್ಲ. ಪ್ರತಿಯೊಬ್ಬರಿಂದ ಮಾದರಿ ಸಹಿ ಪರೀಕ್ಷಿಸುವುದು, ಅವರ ವಿಳಾಸವನ್ನು ತಿಳಿದುಕೊಳ್ಳುವುದು ಇತ್ಯಾದಿಗಳನ್ನು ಮಾಡಲು ಹೊರಟರೆ ನಿಮಗೆ ಅನುಮಾನವಿದ್ದರೆ ಬೇರೆಡೆಗೆ ಹೋಗುತ್ತೇವೆಂದು ಹೇಳುತ್ತಾರೆ. ವ್ಯವಹಾರವು ಪೈಪೋಟಿ ಇರುವುದರಿಂದ ಎಲ್ಲವನ್ನು ವಿಚಾರ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ ಎನ್ನುತ್ತಾರೆ. ರಾಷ್ಟ್ರೀಕೃತ ಬ್ಯಾಂಕಿನಲ್ಲಿ ವಿದೇಶಿಯರಿಂದ ಪ್ರವಾಸಿ ಚೆಕ್ ಮತ್ತು ಕ್ರೆಡಿಟ್ ಕಾರ್ಡುಗಳನ್ನು ಪಡೆದು ಪರೀಕ್ಷಿಸುವ ಯಂತ್ರದ ಸಹಾಯದಿಂದ ಪ್ರವಾಸಿಗರ ಚೆಕ್ ಮತ್ತು ಕ್ರೆಡಿಟ್ ಕಾರ್ಡುಗಳನ್ನು ಹಣಕ್ಕೆ ಪರಿವರ್ತಿಸಿ ಕೊಡುವುದಿದೆ. ಆದರೆ ಕರೆನ್ಸಿ ನೋಟುಗಳನ್ನು ತೆಗೆದುಕೊಂಡು, ಹಣ ವಿನಿಮಯ ಮಾಡುವ ಕಾರ್ಯವನ್ನು ಮಾಡುವುದಿಲ್ಲ. ಪ್ರವಾಸಿಗರು ಚೆಕ್‌ಗಳನ್ನು ತೆಗೆದು ಕೊಂಡು ಹೋಗಿ ಬ್ಯಾಂಕ್‌ನಲ್ಲಿ ಹಣ ಪಡೆಯುವರು, ಕ್ರೆಡಿಟ್ ದರಕ್ಕಿಂತ ಕಡಿಮೆ ಸಂಖ್ಯೆಯಲ್ಲಿದ್ದಾರೆ. ಕ್ರೆಡಿಟ್ ಕಾರ್ಡ ಸೌಲಭ್ಯ ಖಾಸಗಿಯವರಲ್ಲಿ ಇಲ್ಲದಿರುವ ಕಾರಣವು ಆಗಿರಬಹುದು.

ಆಸ್ಪತ್ರೆ ಮತ್ತು ವೈದ್ಯರು

ವಿದೇಶಿ ಪ್ರವಾಸಿಗರು ತಮ್ಮ ಆರೋಗ್ಯದ ಬಗ್ಗೆ ಪ್ರವಾಸ ಆರಂಭಿಸುವ ಮುನ್ನ ಸಾಕಷ್ಟು ಮುಂಜಾಗ್ರತಾ ಕ್ರಮಗಳನ್ನು ವಹಿಸುತ್ತಾರೆ. ಪ್ರವಾಸಿಗರು ಪ್ರವಾಸ ಶುರು ಮಾಡಿದಾಗಿನಿಂದ ಪುನಃ ವಾಸ ಸ್ಥಳಕ್ಕೆ ಹೋಗುವವರೆಗೂ ಆರೋಗ್ಯ ಸರಿ ಇರಬೇಕಾಗುತ್ತದೆ. ಪ್ರವಾಸದ ಮಧ್ಯದಲ್ಲಿ ಆರೋಗ್ಯ ಕೈ ಕೊಟ್ಟರೆ, ಪ್ರವಾಸದ ಯೋಜನೆಗಳಲ್ಲಿ ವ್ಯತ್ಯಯವಾಗುವುದರೊಂದಿಗೆ, ಹಣವು ಸಹಿತ ವೆಚ್ಚವಾಗತ್ತದೆ. ಜೊತೆಗೆ ಅಪರಿಚಿತ ಸ್ಥಳಗಳಲ್ಲಿ ಹಾರೈಕೆ ಮಾಡಿಕೊಳ್ಳುವುದು ಕಷ್ಟವಾಗುತ್ತದೆ. ಒಬ್ಬರೆ ಪ್ರವಾಸ ಕೈಗೊಂಡಿದ್ದರಂತೂ ಸಮಸ್ಯೆ ಇನ್ನೂ ಜಾಸ್ತಿ. ವಿದೇಶಿ ಪ್ರವಾಸಿಗರು ಪ್ರವಾಸ ಕೈಗೊಳ್ಳುವ ಪೂರ್ವದಲ್ಲಿ ಆರೋಗ್ಯ ಪರೀಕ್ಷೆ ಮಾಡಿಸಿಕೊಳ್ಳುತ್ತಾರೆ. ಆರೋಗ್ಯ ಸರಿ ಇದ್ದರೆ ಮಾತ್ರ

ಪ್ರವಾಸ ಕೈಗೊಳ್ಳುವುದನ್ನು ನಿರ್ಧರಿಸುತ್ತಾರೆ. ಅಲ್ಲಿನ ಸರ್ಕಾರಗಳು ಇವೆಲ್ಲವುಗಳನ್ನು ಪರೀಕ್ಷಿಸಿ ವಿಸಾ, ಪಾಸ್‌ಪೋರ್ಟ್ ಇತ್ಯಾದಿಗಳನ್ನು ನೀಡುತ್ತಿವೆ ಎಂದು ಪ್ರವಾಸಿಗರು ತಿಳಿಸುತ್ತಾರೆ. ಎಲ್ಲಾ ರೋಗಗಳನ್ನು ನಿಯಂತ್ರಿಸುವ ಆ್ಯಂಟಿ ಡೋಸ್(Anti-Dose)ಗಳ ಚುಚ್ಚು ಮದ್ದನ್ನು ತೆಗೆದುಕೊಂಡೆ (Anti-Malaria, Typoid) ಪ್ರವಾಸ ಕೈಗೊಳ್ಳುತ್ತಾರೆ. ಆದರೂ ಕೆಲವೊಮ್ಮೆ ಪ್ರವಾಸಿಗರು ಸಣ್ಣ ಪುಟ್ಟ ಕಾಯಿಲೆಗಳಿಂದ ಹೊರತಾಗಿರುವುದಿಲ್ಲ. ಹಂಪೆಯಲ್ಲಿ ಆಗಸ್ಟ್‌ನಿಂದ ನವೆಂಬರ್‌ವರೆಗೆ ಮಲೇರಿಯಾ ಇರುತ್ತದೆ. ನೀರಿನ ಕಲ್ಮಶತೆಯು (Water Contemnation) ಇರುವುದರಿಂದ ಉದರ ಶೂಲಿ ಕಾಯಿಲೆ, ಅತಿಸಾರಭೇದಿ ಮತ್ತು ರಕ್ತ ಸಾರಭೇದಿ (Loose Motion) ಆಗುತ್ತವೆ. ಹಾಗಾಗಿ ಶುಶ್ರೂಷೆಗೆ ವೈದ್ಯರು ಅಥವಾ ಆಸ್ಪತ್ರೆಗೆ ಹೋಗಬೇಕಾಗುತ್ತದೆ. ಹಂಪೆಯಲ್ಲಿ ನಾಲ್ಕು ಜನ ಡಾಕ್ಟರುಗಳಿದ್ದಾರೆ. ಇವರಲ್ಲಿ ಒಬ್ಬರು ಸರ್ಕಾರಿ ವೈದ್ಯರು ಹಾಗೂ ಮೂರು ಜನ ಖಾಸಗಿ ವೈದ್ಯರು. ಇವರು ಸಣ್ಣಪುಟ್ಟ ಕಾಯಿಲೆಗಳಾದ ಉದರ ಶೂಲಿ, ಸಾಧಾರಣ ಜ್ವರ, ನೆಗಡಿ, ಕೆಮ್ಮು ಇತ್ಯಾದಿಗಳಿಗೆ ಶುಶ್ರೂಷೆ ನೀಡುತ್ತಾರೆ. ಹೆಚ್ಚಿನ ವೈದ್ಯಕೀಯ ತಪಾಸಣೆಗಾಗಿ ಹತ್ತಿರದಲ್ಲಿರುವ ಹೊಸಪೇಟೆಗೆ ರೋಗಿಗಳನ್ನು ಕಳುಹಿಸುತ್ತಾರೆ(ಕೋಷ್ಠಕ-24). ವಿದೇಶಿ ಪ್ರವಾಸಿಗರು ಅಲೋಪತಿಕ್, ಹೋಮಿಯೋಪತಿಕ್ ಅಥವಾ ಆಯುರ್ವೇದಿಕ್ ಔಷಧಿಗಳನ್ನಾಗಲಿ ಬಯಸಿದರೆ ಅವು ಸಹ ಇಲ್ಲಿ ಲಭ್ಯವಾಗುತ್ತವೆ. ವಿದೇಶಿಯರು ರೋಗಗಳನ್ನು ಗುಣಪಡಿಸಿಕೊಳ್ಳಲು ಹೋಮಿಯೋಪತಿಕ್ ಮತ್ತು ಆಯುರ್ವೇದಿಕ್ ಔಷಧಿಗಳನ್ನೆ ಹೆಚ್ಚಾಗಿ ಇಷ್ಟಪಡುತ್ತಾರೆ. ಈ ಔಷಧಿಗಳಿಂದ ದುಷ್ಪರಿಣಾಮವಿಲ್ಲವೆಂದು (Side Effcts) ಇವುಗಳನ್ನು ಬಳಸುತ್ತೇವೆಂದು ಹೇಳುತ್ತಾರೆ. ಅನೇಕ ವಿದೇಶಿ ಪ್ರವಾಸಿಗರು ಇಲ್ಲಿನ ವೈದ್ಯಕೀಯ ಸೌಲಭ್ಯಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸುತ್ತಾರೆ.

ಸ್ಟೇಷನರಿ ಮತ್ತು ಇತರ ಶಾಪ್‌ಗಳು

ಬೆಳಗಿನ ಜಾವ ಮುಖ ಕ್ಷೌರ ಮಾಡಿಕೊಳ್ಳುವ ಬ್ಲೇಡಿನಿಂದ ಹಿಡಿದು, ಮಲಗಿ ಸುಖನಿದ್ರೆ ಮಾಡಲು ಉಪಯೋಗಿಸುವ ಸೊಳ್ಳೆ ಬತ್ತಿಗಳವರೆಗೆ, ದಿನನಿತ್ಯ ಬಳಕೆಯ ವಸ್ತುಗಳ ಅವಶ್ಯಕತೆ ಇರುತ್ತದೆ. ಇವುಗಳಲ್ಲಿ ವಿದೇಶಿ ಪ್ರವಾಸಿಗರ ಟ್ಯಾಲೆಟ್ ಪೇಪರ್, ಟ್ಯೂತ್ ಪೇಸ್ಟ್, ಸಿಗರೇಟ್‌ಗಳಿರಬಹುದು, ಚಾಕಲೇಟ್, ಪೆನ್ನು, ಪುಸ್ತಕ ಇತ್ಯಾದಿ ಹತ್ತು ಹಲವು ವಸ್ತುಗಳು ಪ್ರತಿನಿತ್ಯ ಒಂದಲ್ಲ ಒಂದು ವಸ್ತುಗಳನ್ನು ಕೊಳ್ಳಬೇಕಾಗುತ್ತದೆ. ಇಂತಹ ವಸ್ತುಗಳನ್ನು ಮಾರುವ ಅಂಗಡಿಗಳು ಹಂಪೆಯಲ್ಲಿ ಲಭ್ಯ. ಯಾವುದೇ ಪ್ರವಾಸಿ ತಾಣದಲ್ಲಿ ದೊರಕುವ ವಸ್ತುಗಳು ಇಲ್ಲಿಯೂ ದೊರೆಯುತ್ತವೆಂದು ಪ್ರವಾಸಿಗರು ತಿಳಿಸುತ್ತಾರೆ. ಸ್ಟೇಷನರಿ ಶಾಪ್‌ಗಳೊಂದಿಗೆ ಇತರೆ ಶಾಪ್‌ಗಳೂ ಸಹ ಇವೆ. ಕ್ಷೌರಿಕರ ಪೆಟ್ಟಿಗೆ ಅಂಗಡಿಗಳು 02, ಒಂದು ಬ್ಯೂಟಿಪಾರ್ಲರ್ ಜೊತೆಗೆ ಮಸಾಜ್ ಮಾಡುವವರು ಇದ್ದಾರೆ. ವಿದೇಶಿ ಪ್ರವಾಸಿಗರಲ್ಲಿ ಪುರುಷರು ಕ್ಷೌರ ಮಾಡುವ ಅಂಗಡಿಗಳಿಗೆ

ಹೋದರೆ, ಮಹಿಳೆಯರು ಬ್ಯೂಟಿ ಪಾರ್ಲರ್‌ಗಳಿಗೆ ಹೋಗುತ್ತಾರೆ. ಪ್ರವಾಸಿಗರಲ್ಲಿ ಪುರುಷರ ಹಾಗೆ ಮಹಿಳೆಯರು ಕೂಡ ಬಾಡಿ ಮಸಾಜ್ ಮಾಡಿಸಿ ಕೊಳ್ಳುತ್ತಾರೆ. ಹಂಪೆಯಲ್ಲಿ ಬಾಡಿ ಮಸಾಜ್ ಮಾಡುವ ಪುರುಷರು ಮಸಾಜ್ ಅಂಗಡಿಗಳನ್ನು ಪ್ರಾರಂಭಿಸಿಲ್ಲ. ಪ್ರವಾಸಿಗರ ಅನುಕೂಲಕ್ಕೆ ತಕ್ಕಂತೆ ತಮ್ಮ ಮನೆಯಲ್ಲಿಯೆ ಅಥವಾ ಅತಿಥಿಗೃಹಗಳಲ್ಲಿ ಮಸಾಜ್ ಮಾಡುತ್ತಾರೆ. ಬ್ಯೂಟಿ ಪಾರ್ಲರ್ ನಡೆಸುತ್ತಿರುವ ಮಹಿಳೆ ತನ್ನ ಬ್ಯೂಟಿ ಪಾರ್ಲರ್ ಮಳಿಗೆಯಲ್ಲೆ ಮಸಾಜ್ ವೃತ್ತಿಯನ್ನು ಮಾಡುತ್ತಾಳೆ. ಈ ಸೇವೆಗಳಿಂದ ಪ್ರವಾಸಿಗರು ತೃಪ್ತಿಯಿದೆ ಎಂದು ತಿಳಿಸುತ್ತಾರೆ.

ಬೇಕರಿ ಮತ್ತು ಹಣ್ಣಿನ ವ್ಯಾಪಾರ

ಪ್ರವಾಸಿಗರು ಬೇಕರಿಯಲ್ಲಿ ತಯಾರಿಸುವ ಕೇಕ್ ಮತ್ತು ಇತರ ವಸ್ತುಗಳನ್ನು ಆರ್ಡರ್ ಕೊಟ್ಟು ತರಿಸಿಕೊಂಡು ಉಪಯೋಗಿಸುತ್ತಾರೆ. ಬೇಕರಿಯವರು ಅತಿಥಿ ಗೃಹಗಳಿಂದ ತಾವು ಪೂರೈಸುವ ಹಿಂದಿನ ದಿನವೆ ಬೇಕರಿ ತಿನಿಸುಗಳ ಪಟ್ಟಿಯನ್ನು ತೆಗೆದುಕೊಂಡು ಹೋಗುತ್ತಾರೆ. ವಿದೇಶಿ ಪ್ರವಾಸಿಗರ ಅಭಿರುಚಿಗೆ ತಕ್ಕಂತೆ ಬೇಕರಿ ವಸ್ತುಗಳನ್ನು ತಯಾರಿಸಿಕೊಂಡು ಬಂದು ಮಾರನೆಯ ದಿನ ಬೆಳಿಗ್ಗೆ ತಂದು ಕೊಡುತ್ತಾರೆ. ಕೆಲವೊಮ್ಮೆ ಅತಿಥಿಗೃಹಗಳ ಮಾಲಿಕರೆ ಬೇಕರಿ ವ್ಯವಸ್ಥಾಪಕರಿಗೆ ಫೋನ್ ಮಾಡಿ ಬೇಕರಿ ವಸ್ತುಗಳನ್ನು ಪೂರೈಸುತ್ತಾರೆ. ಬೇಕರಿ ವಸ್ತುಗಳು ರುಚಿ ಮತ್ತು ಶುಚಿತ್ವದಿಂದ ಇರುತ್ತವೆ. ಇವುಗಳ ಬೆಲೆಗಳ ಸಹಿತ ಸಾಧಾರಣವಾಗಿವೆ ಎಂದು ಪ್ರವಾಸಿಗರು ಹೇಳುತ್ತಾರೆ. ಬೇಕರಿ ವಸ್ತುಗಳನ್ನು ನದಿಯ ಆಚೆ ದಡದಲ್ಲಿರುವ ಬೇಕರಿಯವರು ಪ್ರತಿನಿತ್ಯ ಪೂರೈಸುತ್ತಾರೆ. ವಿದೇಶಿ ಪ್ರವಾಸಿಗರು ಹೆಚ್ಚಾಗಿ ದಿನನಿತ್ಯದ ಆಹಾರದಲ್ಲಿ ಹಣ್ಣುಗಳನ್ನು ಸೇವಿಸುತ್ತಾರೆ. ಅದರಲ್ಲೂ ಮುಖ್ಯವಾಗಿ ಪಪ್ಪಾಯಿ, ಬಾಳೆ ಹಣ್ಣುಗಳನ್ನು ಹೆಚ್ಚಾಗಿ ಉಪಯೋಗಿಸಿದರೆ ಸೇಬು, ದ್ರಾಕ್ಷಿಗಳನ್ನು ಕಡಿಮೆ ಪ್ರಮಾಣದಲ್ಲಿ ಬಳಸುವುದು ಕಂಡುಬರುತ್ತದೆ. ಹಂಪೆಯ ಬೀದಿಯ ಪಕ್ಕದಲ್ಲಿ ಸಾಲಾಗಿ ನಿಲ್ಲುವ ತಳ್ಳುವ ಬಂಡಿಗಳಲ್ಲಿ ಹೆಚ್ಚಾಗಿ ಪಪ್ಪಾಯಿ ಹಣ್ಣುಗಳೆ ಸಿಗುತ್ತವೆ. ಪ್ರವಾಸಿಗರು ಪೂರ್ತಿಯಾಗಿ ಒಂದು ಪಪ್ಪಾಯಿ ಹಣ್ಣನ್ನು ತೆಗೆದುಕೊಂಡು ಹೋಗುವುದನ್ನು ಕಾಣಬಹುದು. ವಿದೇಶಿಯರಲ್ಲಿ ಕೆಲವರು ಊಟ ಮಾಡದೆ ಕೇವಲ ಹಣ್ಣು ಹಂಪಲುಗಳನ್ನು ತಿಂದು ದಿನ ಕಳೆಯುತ್ತಾರೆ ಎಂದು ಅತಿಥಿಗೃಹಗಳ ಮಾಲೀಕರು ಹೇಳುತ್ತಾರೆ. ಪ್ರವಾಸಿಗರ ಪ್ರಕಾರ ಹಂಪೆಯಲ್ಲಿ ಹಣ್ಣುಗಳು ತಾಜಾವಾಗಿರುತ್ತವೆ, ಜೊತೆಗೆ ಕಡಿಮೆ ಬೆಲೆಗೆ ಸಿಗುತ್ತವೆ.

ಮಾರ್ಗದರ್ಶಿಗಳು

ವಿದೇಶಿಯರಲ್ಲಿ ಹೆಚ್ಚಿನವರು ವಿಜಯನಗರ ಗತವೈಭವದ ಅಳಿದುಳಿದ ಸ್ಮಾರಕಗಳನ್ನು ವೀಕ್ಷಿಸಲು ಇಷ್ಟಪಡುತ್ತಾರೆ. ಕೆಲವರು ಇಲ್ಲಿನ ನೈಸರ್ಗಿಕ ಸೌಂದರ್ಯವನ್ನು ಸವಿಯಲು ಬರುತ್ತಾರೆ. ಸ್ಥಳೀಯ ಸಾಂಸ್ಕೃತಿಕ ಚಟುವಟಿಕೆಗಳನ್ನು ನೋಡಿ ಖುಷಿ ಪಡುತ್ತಾರೆ. ಹಂಪೆಯ ಸ್ಮಾರಕಗಳು

4ಚ.ಕಿ.ಮೀ.ವಿಸ್ತೀರ್ಣದಲ್ಲಿ ಚದುರಿದ್ದು, ಅವುಗಳನ್ನು ಕೆಲವೆ ತಾಸುಗಳಲ್ಲಿ ಅಥವಾ ಒಂದೇ ದಿನದಲ್ಲಿ ನೋಡಲು ಅಸಾಧ್ಯವಾಗಬಹುದು. ಮುಖ್ಯವಾಗಿ ಈ ಸ್ಮಾರಕಗಳು ಬೆಟ್ಟಗುಡ್ಡಗಳ ನಡುವೆ ಇರುವುದರಿಂದ ಎಲ್ಲಾ ಸ್ಮಾರಕಗಳ ಹತ್ತಿರಕ್ಕೆ ವಾಹನಗಳು ಹೋಗಲು ಸಾಧ್ಯವಿಲ್ಲ. ಕೆಲವು ಕಡೆ ಕಾಲು ದಾರಿಗಳು ಇದ್ದರೆ ಇನ್ನು ಕೆಲವು ಕಡೆ ರಸ್ತೆ ಇದ್ದರೂ ಅಲ್ಲಿ ವಾಹನಗಳು ಹೋಗಲು ಯೋಗ್ಯವಾಗಿಲ್ಲ. ಈ ಸ್ಮಾರಕಗಳನ್ನು ನೋಡ ಬಯಸುವ ವಿದೇಶಿ ಪ್ರವಾಸಿಗರು ಹೆಚ್ಚಾಗಿ ಪ್ರವಾಸೋದ್ಯಮ ಇಲಾಖೆ ಅನುಮತಿ ಪತ್ರ ನೀಡಿರುವ ಪ್ರವಾಸಿ ಮಾರ್ಗದರ್ಶಕರನ್ನು ಕರೆದುಕೊಂಡು ಹೋಗುತ್ತಾರೆ. ಪ್ರವಾಸೋದ್ಯಮ ಇಲಾಖೆ ಪ್ರವಾಸಿ ಮಾರ್ಗದರ್ಶಕರ ದರಗಳನ್ನು ಒಂದು ದಿನಕ್ಕೆ ನಿಗದಿಗೊಳಿಸಿದೆ. ನಾಲ್ಕು ಗಂಟೆಗೆ ಅರ್ಧದಿನವೆಂದು, ಎಂಟುಗಂಟೆಗಳಿಗೆ ಪೂರ್ತಿ ದಿನವೆಂದು ನಿಗದಿ ಪಡಿಸಿದೆ. ವಿದೇಶಿಯರು ಸ್ಮಾರಕಗಳು ತುಂಬಾ ಸೋಗಸಾಗಿವೆ ಮತ್ತು ಮಾರ್ಗದರ್ಶಕರು ಸ್ಮಾರಕಗಳ ಬಗ್ಗೆ ಇಂಗ್ಲಿಷ್‌ನಲ್ಲಿ ವಿವರವಾಗಿ ಅರ್ಥವಾಗುವ ರೀತಿಯಲ್ಲಿ ವಿವರಿಸುತ್ತಾರೆ. ಜತೆಗೆ ಮಾರ್ಗದರ್ಶಿಗಳು ಸ್ನೇಹಿತರಂತೆ ವರ್ತಿಸುತ್ತಾರೆಂದು ತಿಳಿಸುತ್ತಾರೆ.

ಈಜು ಟ್ಯೂಬ್ ಮತ್ತು ನಾಡದೋಣಿ

ಪ್ರವಾಸಿಗರು ಹಂಪೆಗೆ ಬರುವ ಸಮಯ ನವೆಂಬರ್ ತಿಂಗಳಿನಿಂದ ಏಪ್ರಿಲ್ ತಿಂಗಳವರೆಗೆ ಎಂದು ಈ ಮೊದಲು ಹೇಳಲಾಗಿದೆ. ಬಳ್ಳಾರಿಯಲ್ಲಿ ಬಿರುಬಿಸಿಲು ಜನವರಿಯಿಂದ ಪ್ರಾರಂಭವಾಗುತ್ತದೆ, ಹಾಗೂ ಜೂನ್ ತಿಂಗಳವರೆಗೆ ಇರುತ್ತದೆ. ಜನವರಿ ಮತ್ತು ಫೆಬ್ರವರಿ ತಿಂಗಳುಗಳಲ್ಲಿ ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಭೇಟಿ ನೀಡುತ್ತಾರೆ. ವಿದೇಶಿ ಪ್ರವಾಸಿಗರು ಬಿಸಿಲ ತಾಪಕ್ಕೆ ಚಡಪಡಿಸುತ್ತಾರೆ. ಬಿಸಿಲಿನಲ್ಲಿ ಸ್ಮಾರಕಗಳನ್ನು ನೋಡಲು ಹೋದರೆ ಚರ್ಮದ ಬಣ್ಣ ಕಪ್ಪಾಗಿ ಹೋಗಿರುತ್ತದೆ. ಬಿಸಿಲಿನಿಂದ ದಣಿವಾರಿಸಿಕೊಳ್ಳಲು ಅನುಸರಿಸುವ ವಿಧಾನವೆಂದರೆ ಹಂಪೆಯ ಉತ್ತರಕ್ಕೆ ಇರುವ ತುಂಗಬದ್ರಾ ನದಿಗೆ ಇಳಿದು ಈಜುವುದು. ಕೆಲವು ಪ್ರವಾಸಿಗರು ತಮ್ಮ ನದಿ ಸ್ನಾನಕ್ಕೆ ಟ್ಯೂಬ್‌ಗಳನ್ನು ಬಳಸುತ್ತಾರೆ. ಪೆಟ್ಟಿಗೆ ಅಂಗಡಿಯವರು, ಅತಿಥಿಗೃಹ ಮತ್ತು ರೆಸ್ಟೋರೆಂಟ್ ಮಾಲಿಕರು ಈಜು ಟ್ಯೂಬ್‌ಗಳನ್ನು ಪೂರೈಸುತ್ತಾರೆ. ವಿದೇಶಿಯರು ಲಿಂಗಭೇದ ಹೊರತುಪಡಿಸಿ ನದಿಯಲ್ಲಿ ಈಜುವುದು ಸಾಮಾನ್ಯ. ಇದು ಯಾವಾಗಲೂ ನಡೆಯುವುದರಿಂದ ಸ್ಥಳೀಯರು ಯಾರೂ ವಿದೇಶಿಯರ ಬಿಕನಿ ಡ್ರೆಸ್‌ಗಳನ್ನಾಗಲಿ ಅವರು ಮಾಡುವ ಚೇಷ್ಟೆಗಳನ್ನಾಗಲಿ ನೋಡಲು ಹೋಗುವುದಿಲ್ಲ. ಹಂಪೆಗೆ ಬಂದ ದೇಶಿಯ ಪ್ರವಾಸಿಗರಿಗೆ ಹೊಸತೆರನಾದ ವೀಕ್ಷಣೆಯಾಗುವುದರಿಂದ ಅವರು ವಿದೇಶಿಯರ ಚಟುವಟಿಕೆಗಳನ್ನು ಗಮನಿಸುತ್ತಾರೆ. ವಿದೇಶಿಯರ ಪಕ್ಕದಲ್ಲಿ ದೇಶಿಯ ಪ್ರವಾಸಿಗರು ನದಿಯಲ್ಲಿ ಈಜುವುದು, ಸ್ನಾನ ಮಾಡುವುದು, ಬಟ್ಟೆ ತೊಳೆಯುವುದು ಮುಂತಾದ ಕಾರ್ಯಗಳಲ್ಲಿ ನಿರತರಾಗಿರುತ್ತಾರೆ. ಆದರೆ ಸ್ಥಳೀಯರು ವಿದೇಶಿಯರ ವಿಶೇಷ ಚಟುವಟಿಕೆಗೆ ಮಹತ್ವ ಕೊಡದೆ ತಮ್ಮಷ್ಟಕ್ಕೆ ತಾವಿರುತ್ತಾರೆ.

ಹಂಪೆಯಲ್ಲಿ ನಾಡದೋಣಿಯ ವ್ಯವಸ್ಥೆಯು ಬಹಳ ಹಿಂದಿನಿಂದಲೂ ಇದೆ. ಈ ನಾಡದೋಣಿಯನ್ನು ತುಂಗಬದ್ರಾ ನದಿಯನ್ನು ದಾಟಲು ಉಪಯೋಗಿಸಲಾಗುತ್ತದೆ. ನದಿಯ ಆಚೆ ಮತ್ತು ಈಚೆ ದಡದ ಜನರ ಸಂಪರ್ಕ ಕಲ್ಪಿಸುವ ವ್ಯವಸ್ಥೆಯನ್ನು ನಾಡದೋಣಿಯು ಮೊದಲಿನಿಂದಲೂ ಮಾಡುತ್ತಾ ಬಂದಿದೆ. ಆಚೆಯ ದಡದದಿಂದ ಈಚೆಯ ದಡದ ಗ್ರಾಮಗಳಿಗೆ ಜನರು ರಸ್ತೆಯ ಮುಖಾಂತರ ಬರಬೇಕಾದರೆ ಸುಮಾರು 20 ರಿಂದ 30 ಕಿ.ಮೀ ಬಳಸಿಕೊಂಡು ಬರಬೇಕಾಗುತ್ತದೆ. ಆದರೆ ನಾಡದೋಣಿಯಿಂದ ನದಿ ದಾಟಿದರೆ ಕೇವಲ 10 ರಿಂದ 15 ಮಿಷಗಳಲ್ಲಿ ದಡ ಸೇರಬಹುದು. ಇದರಿಂದ ಕಾಲ ಮತ್ತು ಹಣ ಉಳಿತಾಯವಾಗುತ್ತದೆ. ಕೇವಲ ಎರಡು ರೂಪಾಯಿ ಕೊಟ್ಟರೆ ಒಂದು ದಡದಿಂದ ಮತ್ತೊಂದು ದಡ ಸೇರಬಹುದು. ನಾಡದೋಣಿಯ ವ್ಯವಸ್ಥೆಯು ನದಿಯ ಅಚೆಯ-ಈಚೆಯ ಗ್ರಾಮಸ್ಥರಿಗಷ್ಟೆ ಸೀಮಿತವಾಗಿರದೆ ಪ್ರವಾಸಿಗರಿಗೂ ತುಂಬಾ ಉಪಯುಕ್ತವಾಗಿದೆ. ನದಿಯ ಆಚೆಯ ದಡದಲ್ಲಿರುವ ಸ್ಮಾರಕಗಳು, ಆನೆಗುಂದಿ ಇತ್ಯಾದಿ ಸ್ಥಳಗಳನ್ನು ನೋಡಲು ದೇಶ ಮತ್ತು ವಿದೇಶಿ ಪ್ರವಾಸಿಗರು ಈ ನಾಡದೋಣಿ ಸಹಾಯದಿಂದ ಹೋಗುತ್ತಾರೆ. ಈ ನಾಡದೋಣಿಯ ವ್ಯವಸ್ಥೆಯು ಬೆಳಿಗ್ಗೆ 7ಗಂಟೆಯಿಂದ ಸಂಜೆ 7ಗಂಟೆಯವರೆಗೆ ಸತತವಾಗಿ ಕಾರ್ಯನಿರ್ವಹಿಸುತ್ತದೆ. ಗ್ರಾಮ ಪಂಚಾಯತಿಯ ಆದೇಶದ ಪ್ರಕಾರ ನದಿಯನ್ನು ದಾಟಲು ಒಂದು ದಡದದಿಂದ ಇನ್ನೊಂದು ದಡಕ್ಕೆ ಒಂದು ಬಾರಿಗೆ (One side) ರೂ. 2 ತೆಗೆದುಕೊಳ್ಳಬೇಕೆಂದು ಇದೆ. ಆದರೆ ಸಮಯ ಸಂದರ್ಭ ಮತ್ತು ವ್ಯಕ್ತಿಗಳನ್ನು ನೋಡಿ ಹೆಚ್ಚಿನ ಹಣವನ್ನು ವಸೂಲಿ ಮಾಡಲಾಗುತ್ತದೆ. ನಾಡದೋಣಿಯವರು ನದಿಯನ್ನು ದಾಟಿಸಲಿಕ್ಕೆ ತೆಗೆದುಕೊಳ್ಳುವ ದರ ಪ್ರಮಾಣದ ಬಗ್ಗೆ ವಿದೇಶಿ ಪ್ರವಾಸಿಗರು ಅತೃಪ್ತಿಯನ್ನು ವ್ಯಕ್ತಪಡಿಸುತ್ತಾರೆ. ವಿದೇಶಿ ಪ್ರವಾಸಿಗರಿಂದ ತೆಗೆದುಕೊಳ್ಳುವ ದರದಲ್ಲಿ ತಾರತಮ್ಯ ಕಡಿಮೆ ಮಾಡುವುದರಿಂದ ಪ್ರವಾಸಿಗರಲ್ಲಿ ಮತ್ತು ಸ್ಥಳೀಯರಲ್ಲಿ ಸ್ನೇಹ-ಪ್ರೀತಿ ವೃದ್ಧಿಯಾಗುತ್ತವೆ ಎನ್ನುತ್ತಾರೆ. ಇದರಿಂದ ಹಂಪೆಗೆ ಪ್ರವಾಸ ಕೈಗೊಳ್ಳಲು ಹಾಗೂ ಸ್ನೇಹಿತರಿಗೂ ಹೇಳಿ ಕರೆತರಲು ಅನುಕೂಲವಾಗುತ್ತದೆ. ಖುಷಿ ಸಂಚಾರಕ್ಕಾಗಿ ಬಂದವರು ಸ್ಥಳದ ನಡೆ-ನುಡಿ ಸಂಸ್ಕೃತಿಯ ನೆನಪುಗಳನ್ನು ತಮ್ಮೊಂದಿಗೆ ತೆಗೆದುಕೊಂಡು ಹೋಗುತ್ತಾರೆ.

ಇತರ ಅಂಗಡಿಗಳು

ವಿದೇಶಿ ಪ್ರವಾಸಿಗರು ಹಂಪೆಯ ಅತಿಥಿಗೃಹಗಳಲ್ಲಿ ತಂಗಿದ್ದಾಗ ಕಾಲಕಳೆಯಲು ಚೆಸ್ ಮತ್ತು ಕೇರಂನಂತಹ ಆಟಗಳಲ್ಲಿ ತೊಡಗಿರುತ್ತಾರೆ. ಇನ್ನು ಕೆಲವರು ಪುಸ್ತಕಗಳನ್ನು ಓದುವುದರ ಮೂಲಕ ಕಾಲಕಳೆಯಲು ಬಯಸುತ್ತಾರೆ. ಈ ವಸ್ತುಗಳನ್ನು ಸ್ಥಳೀಯ ವ್ಯಾಪಾರಿಗಳು ಒದಗಿಸುತ್ತಾರೆ. ಪ್ರವಾಸಿಗರು ಬಯಸುವ ಇತರ ವಸ್ತುಗಳನ್ನು ಕೊಳ್ಳಲು ಇಚ್ಚಿಸಿದರೆ ಅವುಗಳನ್ನು ಮಾರಾಟ ಮಾಡುವ ಪುಸ್ತಕ, ಸೌಂದರ್ಯವರ್ಧಕ, ಆಟಿಕೆ ಸಾಮಾನುಗಳ ಅಂಗಡಿಗಳಿವೆ. ಪುಸ್ತಕ

[illegible]

ಅಂಗಡಿಗಳಲ್ಲಿ ದೊರೆಯುವ ಎಲ್ಲ ಬಗೆಯ ಪುಸ್ತಕಗಳನ್ನು ವಿದೇಶಿ ಪ್ರವಾಸಿಗರು ಓದುವ ಹವ್ಯಾಸ ಬೆಳಸಿಕೊಂಡಿರುತ್ತಾರೆ ಎಂದು ಅತಿಥಿಗೃಹಗಳವರು ಮತ್ತು ಪುಸ್ತಕ ವ್ಯಾಪಾರಿಗಳು ಹೇಳುತ್ತಾರೆ. ವಿದೇಶಿ ಪ್ರವಾಸಿಗರಲ್ಲಿ ಕೆಲವರು ಹೆಚ್ಚು ಇಷ್ಟಪಡುವ ಆಟವೆಂದರೆ ಬಟ್ಟೆ ಚಂಡಿನ ಅಟ. ವಿದೇಶಿಯರ ಮತ್ತೊಂದು ಹವ್ಯಾಸವೆಂದರೆ ತಬಲ ಬಾರಿಸುವುದು, ಗಿಟಾರ ಮತ್ತು ಕೊಳಲು ವಾದ್ಯಗಳನ್ನು ನುಡಿಸುವುದು. ತಬಲ ಮತ್ತು ಗಿಟಾರದ ಸಲಕರಣೆಗಳನ್ನು ಭಾರತದ ಇತರ ಪ್ರದೇಶಗಳಿಂದ ಕೊಂಡು ತರುತ್ತಾರೆ. ಅಸ್ಟ್ರೇಲಿಯಾದ ಡಿಜೂರು ಸಂಗೀತದ ವಾದ್ಯ ನುಡಿಸುವ ಕೊಳವೆಗಳನ್ನು ಅತಿಥಿ ಗೃಹದ ಮಾಲಿಕರು ತಯಾರಿಸಿ ಮಾರುತ್ತಿದ್ದಾರೆ. ಇದನ್ನು ನುಡಿಸಲು ಸಹ ಕಲಿತಿದ್ದಾರೆ. ಅತಿಥಿಗೃಹಕ್ಕೆ ಬರುವ ಪ್ರವಾಸಿಗರೆದುರು ಇದನ್ನು ನುಡಿಸಿ ಸಂತೋಷಪಡಿಸುತ್ತಾರೆ.

ಮಹಿಳಾ ಪ್ರವಾಸಿಗರು ಭಾರತೀಯರು ಸಾಂಪ್ರದಾಯಿಕ ಚಿನ್ನದ ಅಲಂಕಾರಿಕ ಅಭರಣಗಳನ್ನು ಧರಿಸುತ್ತಾರೆ. ಇದರಿಂದ ಮೋಹಿತರಾದ ಪ್ರವಾಸಿಗರು ಕಡಿಮೆ ದರ್ಜೆಯ ಲೋಹಗಳಾದ ತಾಮ್ರ, ಹಿತ್ತಾಳೆಯಲ್ಲಿ ತಯಾರಿಸಿದ, ಹೊಳೆಯುವ ಲೇಪನ ಕೊಟ್ಟ ಆಭರಣಗಳನ್ನು ಕೊಳ್ಳುತ್ತಾರೆ. ಸಾಮಾನ್ಯವಾಗಿ ದೇಶಿಯ ಪ್ರವಾಸಿಗರು ಇಂತಹ ಅಂಗಡಿಗಳಿಗೆ ಹೋಗುವುದು ಕಡಿಮೆ. ಇವುಗಳ ಮುಖ್ಯ ಗ್ರಾಹಕರೆಂದರೆ ವಿದೇಶಿಯರು. ಬಂದ ವಿದೇಶೀಯರಿಗೆ ಆಭರಣಗಳನ್ನು ಮೈಮೇಲೆ ಹಾಕಿ ತೋರಿಸಿ, ಅಥವಾ ತಾವೆ ಧರಿಸಿ ಅವರನ್ನು ಉತ್ತೇಜಿಸಿ ಮಾರಾಟ ಮಾಡುತ್ತಾರೆ. ವಿದೇಶಿಯರು ಪ್ಯಾಷನ್‌ಗಾಗಿ ಆಭರಣಗಳನ್ನು ಧರಿಸುತ್ತಾರೆ. ಪುರುಷರು ಕಿವಿಯಲ್ಲಿ ಓಲೆ, ಕತ್ತಿನಲ್ಲಿ ಸರಗಳು, ಮುಂಗೈ ಮತ್ತು ಬೆರಳುಗಳಿಗೆ ಕಡಗ ಮತ್ತು ಉಂಗುರಗಳನ್ನು ಧರಿಸಿದರೆ, ಹೆಂಗಸರು ಕಾಲಿಗೆ ಚೈನ್, ಕತ್ತಿಗೆ ಹಾರಗಳು ಇತ್ಯಾದಿ ಆಭರಣಗಳನ್ನು ಹಾಕಿಕೊಳ್ಳುತ್ತಾರೆ. ಇವುಗಳ ಜೊತೆಗೆ ಮನೆಯಲ್ಲಿ ಇಡಬಹುದಾದ ಅಲಂಕೃತ ವಸ್ತುಗಳನ್ನು ಸಹ ಕೊಳ್ಳುತ್ತಾರೆ. ವಿದೇಶಿ ಹೆಂಗಸರು ಕೈ, ಕಾಲಿನ ಪಾದಗಳ ಮೇಲೆ ವಿವಿಧ ಬಣ್ಣಗಳ ಬೇರೆ ಬೇರೆ ಚಿತ್ರಗಳನ್ನು ಮೇಂದಿಯಿಂದ ಹಾಕಿಸಿಕೊಳ್ಳುತ್ತಾರೆ. ತಮ್ಮ ಈ ಬಗೆಯ ಅಭಿರುಚಿಯನ್ನು ಸ್ಥಳಿಯ ಯುವತಿಯರಿಂದ ಪೂರೈಸಿಕೊಳ್ಳುತ್ತಾರೆ. ಕೆಲವು ಪ್ರವಾಸಿ ಮಹಿಳೆಯರು ಲಂಬಾಣಿ ಉಡುಪುಗಳನ್ನು ಕೊಂಡು ಧರಿಸುತ್ತಾರೆ. ಕೆಲವರು ತೆಗೆದುಕೊಂಡು ಹೋಗಿ ತಮ್ಮ ರಾಷ್ಟ್ರದಲ್ಲಿರುವ ಸ್ನೇಹಿತರಿಗೆ ಉಡುಗೊರೆಯಾಗಿ ನೀಡುತ್ತಾರೆ. ಈ ಮಾದರಿಯ ಉಡುಪುಗಳು ನಮ್ಮಲ್ಲಿ ದೊರೆಯದಿರುವುದರಿಂದ ಇವುಗಳನ್ನು ತೊಟ್ಟುಸಂತೋಷ ಪಡುತ್ತೆವೆನ್ನುತ್ತಾರೆ. ಭಾರತೀಯ ಮಹಿಳೆಯರು ಧರಿಸುವ ಉಡುಪುಗಳಾದ ಸೀರೆ ಮತ್ತು ಕುಪ್ಪಸ ತೊಟ್ಟು ಬೀದಿಯಲ್ಲಿ ತಿರುಗುತ್ತಾ ಖುಷಿ ಪಡುತ್ತಾರೆ. ತಮಗೆ ತೊಡಲು ಬರದಿದ್ದರೂ ಸಹ ಬೇರೆಯೊಬ್ಬರ ಸಹಾಯದಿಂದ ತೊಡುತ್ತಾರೆ. ಸೀರೆ ಉಡುವುದರಿಂದ ನಮಗೆ ಸಂತೋಷವಾಗುತ್ತದೆ, ಅದಕ್ಕಾಗಿ ನಾವು ಅದನ್ನು ತೊಡುತ್ತೇವೆ ಎಂದು ತಿಳಿಸುತ್ತಾರೆ.

ಪ್ರವಾಸಿಗರು ತಾವು ಬಂದು ಹೋದ ನೆನಪಿಗಾಗಿ ಹಲವಾರು ವಸ್ತುಗಳನ್ನು ಕೊಂಡು ಕೊಳ್ಳುತ್ತಾರೆ. ಪುರಾತನ ವಸ್ತುಗಳನ್ನು ಸಂಗ್ರಹಿಸುವ ಹವ್ಯಾಸ ಇದ್ದವರು, ಅಂಗಡಿಗಳಲ್ಲಿ ಹಳೆಯ ವಸ್ತುಗಳಿಗಾಗಿ ಹುಡುಕಾಡುತ್ತಾರೆ. ವಿದೇಶಿ ಪ್ರವಾಸಿಗರಲ್ಲಿ ಕೆಲವರು ಹಿತ್ತಾಳೆ , ತಾಮ್ರ ಮುಂತಾದ ಲೋಹಗಳಲ್ಲಿ ಮಾಡಿದ ವಿವಿಧ ಬಗೆಯ ಮೂರ್ತಿ ಹಾಗೂ ಶೋಕೇಸ್‌ನಲ್ಲಿ ಇಡಬಹುದಾದ ಅಲಂಕಾರಿಕ ವಸ್ತುಗಳ ಬಗ್ಗೆ ಹೆಚ್ಚಿನ ಆಸಕ್ತಿ ತೋರಿಸುತ್ತಾರೆ. ಸ್ಥಳೀಯರಿಗೆ ವಿದೇಶಿಯರ ಈ ಆಸಕ್ತಿ ಬಗ್ಗೆ ಅರಿವಿದೆ. ಆದುದರಿಂದ ಸಣ್ಣ ಪುಟ್ಟ ವಿಗ್ರಹಗಳಿಗೆ ವಿಪರೀತ ಬೆಲೆ ಸೂಚಿಸುತ್ತಾರೆ. ಬೆಲೆ ಹೆಚ್ಚಾದರೂ ಕೆಲವು ಪ್ರವಾಸಿಗರು ಅವುಗಳನ್ನು ಕೊಂಡುಕೊಳ್ಳುತ್ತಾರೆ. ಪ್ರವಾಸಿಗರ ಪ್ರಕಾರ ಇದೊಂದು ಕ್ರೆಜಿ ವಿದೇಶಿಯರ ಅಭಿರುಚಿ ಮತ್ತು ಹವ್ಯಾಸಕ್ಕೆ ತಕ್ಕಂತೆ ಸ್ಥಳೀಯ ಅಂಗಡಿಗಳ ಮಾಲಿಕರು ವಸ್ತುಗಳನ್ನು ಒದಗಿಸುತ್ತಾರೆ.

ಟ್ರಾವೆಲರ್ಸ್ ಶಾಪ್‌ಗಳು ಮತ್ತು ಸಾರಿಗೆ ವ್ಯವಸ್ಥೆ

ಪ್ರವಾಸ ಕೈಗೊಳ್ಳವ ಮೊದಲು ತಾವು ಹೋಗುವ ಪ್ರದೇಶದಲ್ಲಿ ಇರುವ ಸಾರಿಗೆ ವ್ಯವಸ್ಥೆ ಬಗೆಗೆ ತಕ್ಕಮಟ್ಟಿನ ಅರಿವನ್ನು ರೂಡಿಸಿಕೊಳ್ಳಲು ಪ್ರವಾಸಿಗರು ಪ್ರಯತ್ನಿಸುತ್ತಾರೆ. ಅಲ್ಲಿನ ರಸ್ತೆ, ಜಲ ಅಥವಾ ವಾಯು ಮಾರ್ಗಗಳ ಸಾರಿಗೆ ವ್ಯವಸ್ಥೆಯಲ್ಲಿ ಉತ್ತಮವಾದುದನ್ನು ಆಯ್ದುಕೊಳ್ಳುವ ವಿಚಾರ ಪ್ರವಾಸಕ್ಕೆ ಮುನ್ನ ನಿರ್ಧರಿಸುತ್ತಾರೆ. ಕೆಲವು ಸಂದರ್ಭಗಳಲ್ಲಿ ಪ್ರವಾಸ ಕೈಗೊಂಡ ನಂತರ ಆದ ಅನುಭವಗಳ ಮೇರೆಗೆ ಕೆಲವೊಬ್ಬರು ಮೊದಲು ಆಯ್ದುಕೊಂಡ ಸಾರಿಗೆ ವ್ಯವಸ್ಥೆ ಬದಲಾಯಿಸಲೂಬಹುದು. ಹೆಚ್ಚು ಕಡಿಮೆ ಎಲ್ಲ ವಿದೇಶಿ ಪ್ರವಾಸಿಗರು ಭಾರತಕ್ಕೆ ಬರಲು ವಾಯು ಮಾರ್ಗವನ್ನೆ ಅವಲಂಭಿಸಿದ್ದಾರೆ. ಭಾರತಕ್ಕೆ ತಲುಪಿದ ನಂತರ, ಭಾರತದೊಳಗೆ ಪ್ರವಾಸ ಕೈಗೊಳ್ಳಲು ಅರಿಸಿಕೊಳ್ಳುವುದು ರೈಲ್ವೆ ಸಾರಿಗೆಯನ್ನೆ. ರಸ್ತೆ ಸಾರಿಗೆಗಿಂತ ರೈಲ್ವೆ ಸಾರಿಗೆ ಸುಖಕರವಾಗಿರುತ್ತದೆ ಹಾಗೂ ದರಗಳು ಸಹಿತ ಕಡಿಮೆ ಇವೆಯೆಂದು ತಿಳಿಸುತ್ತಾರೆ. ವಿದೇಶಿಯರು ಹೋಗಬೇಕೆಂದಿರುವ ಸ್ಥಳಗಳಿಗೆ ರೈಲ್ವೆ ಸಾರಿಗೆ ಇರದಿದ್ದ ಪಕ್ಷದಲ್ಲಿ ಹಾಗೂ ರೈಲ್ವೆ ಪ್ರಯಾಣ ಮಾಡಲು ಕಾದಿರಿಸಬೇಕಾದ ಟಿಕೇಟುಗಳು ದೊರೆಯದಿದ್ದ ಪಕ್ಷದಲ್ಲಿ ಮಾತ್ರ ರಸ್ತೆ ಸಾರಿಗೆಯನ್ನು ಅವಲಂಬಿಸುತ್ತಾರೆ. ರೈಲ್ವೆ ಸಾರಿಗೆಯನ್ನು ಹೆಚ್ಚು ಇಷ್ಟಪಡಲು ಮುಖ್ಯ ಕಾರಣ ರಸ್ತೆಗಳು ಸರಿಯಾಗಿರದೆ ದುಸ್ಥಿತಿಯಲ್ಲಿರುವುದು ಒಂದು ಕಾರಣವಾದರೆ ಸಾರಿಗೆ ಟಿಕೆಟ್ ದರಗಳು ರೈಲ್ವೆ ದರಕ್ಕಿಂತ ಹೆಚ್ಚಾಗಿರುದು ಮತ್ತೊಂದು ಕಾರಣವಾಗಿದೆ. ಹಂಪೆಗೆ ಬರುವ ಪ್ರವಾಸಿಗರಲ್ಲಿ ಗೋವಾ ಮತ್ತು ಬೆಂಗಳೂರಿನಿಂದ ಬರುವವರೆ ಹೆಚ್ಚು. ಉಳಿದವರು ಹೈದರಾಬಾದ್ ಮತ್ತು ಇತರ ಸ್ಥಳಗಳಿಂದ ಬರುತ್ತಾರೆ. ತಾಲೂಕು ಕೇಂದ್ರವಾದ ಹೊಸಪೇಟೆ ತನಕ ಮಾತ್ರ ರೈಲ್ವೆ ವ್ಯವಸ್ಥೆ ಇದೆ. 12 ಕಿ.ಮೀ. ದೂರವಿರುವ ಹಂಪೆಗೆ ಹೊಸಪೇಟೆಯಿಂದ ಬಸ್ಸು, ಟ್ಯಾಕ್ಸಿ, ಮತ್ತು ಆಟೋಗಳಲ್ಲಿ ಬರಬೇಕಾಗಿದೆ.

ಪ್ರವಾಸಿಗರು ಹಂಪೆಯಿಂದ ಬೇರೆ ಪ್ರವಾಸಿ ತಾಣಗಳಿಗೆ ಅಥವಾ ಸ್ಥಳಗಳಿಗೆ ಹೊರಡಬೇಕಾದರೆ ಪುನಃ ಸಾರಿಗೆಯನ್ನು ಅವಲಂಬಿಸಬೇಕಾಗುತ್ತದೆ. ಪ್ರವಾಸಿಗರಿಗೆ ಸಾರಿಗೆ ವ್ಯವಸ್ಥೆಯ ಅನುಕೂಲ

ಮಾಡಿಕೊಡಲಿಕ್ಕೆ ಮತ್ತು ಪ್ರಯಾಣದ ಬಗ್ಗೆ ಮಾರ್ಗದರ್ಶನ ಮಾಡಲಿಕ್ಕೆ ಟ್ರಾವೆಲರ್ಸ್ ಶಾಪ್‌ಗಳಿವೆ. ಟ್ರಾವೆಲರ್ಸ್ ಶಾಪ್‌ಗಳು ಪ್ರವಾಸಿಗರು ಪ್ರಯಾಣಿಸುವ ಸ್ಥಳಗಳಿಗೆ ಪ್ರಯಾಣದ ಸೀಟ್‌ಗಳನ್ನು ಕಾದಿರಿಸಿ ಕೊಡುತ್ತವೆ. ಆದರೆ ಸೀಸನ್‌ನಲ್ಲಿ (ನವೆಂಬರ್-ಏಪ್ರಿಲ್) ಪ್ರವಾಸಿಗರು ಹೆಚ್ಚು ಬರುವುದರಿಂದ ಪ್ರಯಾಣಿಕರು ಬಯಸಿದ ದಿನದಂದು ಟಿಕೆಟ್‌ಗಳು ಲಭ್ಯವಾಗುವುದಿಲ್ಲ. ಅಂತಹ ಸಂದರ್ಭದಲ್ಲಿ ಪ್ರವಾಸಿಗರಿಗೆ ವಾಸ್ತವ ಸ್ಥಿತಿಯನ್ನು ತಿಳಿಸಿ ಬಸ್ಸುಗಳಿಗೆ ಟಿಕೆಟ್‌ಗಳನ್ನು ಕಾದಿರಿಸಿ ಕೊಡಲಾಗುತ್ತದೆ. ಸಾರಿಗೆ ಸೌಲಭ್ಯದಲ್ಲಿನ ಕೊರತೆಯನ್ನು ಸರಿಪಡಿಸಬೇಕೆಂದು ಪ್ರವಾಸಿಗರು ಬಯಸುತ್ತಾರೆ.

ಪ್ರವಾಸೋದ್ಯಮ ಮತ್ತು ಇತರ ಇಲಾಖೆಗಳು

ಹಂಪೆಯಲ್ಲಿರುವ ಪ್ರವಾಸೋದ್ಯಮ ಇಲಾಖೆಯಲ್ಲಿ ಪ್ರವಾಸಿಗರಿಗೆ ಮಾಹಿತಿ ನೀಡಲು ಇಬ್ಬರು ನೌಕರರನ್ನು ನೇಮಿಸಲಾಗಿದೆ. ಇವರು ಪ್ರವಾಸಿಗರಿಗೆ ಮಾಹಿತಿ ನೀಡುವುದರ ಜೊತೆಗೆ ಇಲಾಖೆಯು ಪೂರೈಸಿರುವ ಉಚಿತವಾದ ಮಾರ್ಗದರ್ಶನ ಭೂಪಟ, ಬ್ರೂಚರ್ಸ್‌ಗಳನ್ನು ನೀಡುತ್ತಾರೆ. ಆದರೆ ವಿದೇಶಿ ಪ್ರವಾಸಿಗರು ತಿಳಿಸುವುದೇನೆಂದರೆ ತಮಗೆ ಬೇರೆ ಸ್ಥಳಗಳಿಗೆ ಹೋಗಲು ರೈಲು ಮತ್ತು ಬಸ್ಸುಗಳ ವೇಳಾ ಪಟ್ಟಿ, ದರ ಇತ್ಯಾದಿಗಳ ಬಗ್ಗೆ ಕೇಳಿದರೆ ಸರಿಯಾದ ಮಾಹಿತಿ ದೊರೆಯುವುದಿಲ್ಲ ವೆಂದು ತಿಳಿಸುತ್ತಾರೆ. ಹೆಚ್ಚಿನ ವಿವರಗಳನ್ನು ಒದಗಿಸಲು ಆಧುನಿಕ ಯಂತ್ರಗಳನ್ನು ಬಳಸಬೇಕೆಂಬುದು ವಿದೇಶಿಯರ ಅಭಿಪ್ರಾಯ. ಇಂತಹ ಕೆಲವು ಇಲಾಖೆಗಳಿಗೆ ಸಂಬಂಧಿಸಿದಂತೆ ಪ್ರವಾಸಿಗರು ಅಸಮಾಧಾನ ಸೂಚಿಸುವುದನ್ನು ಬಿಟ್ಟರೆ ಉಳಿದ ಸೌಲಭ್ಯ ಕುರಿತು ಪ್ರವಾಸಿಗರು ಅಷ್ಟೇನು ದೂರುಗಳನ್ನು ಮಾಡಿಲ್ಲ. ವಿದೇಶಿ ಪ್ರವಾಸಿಗರ ಬೇಡಿಕೆಗನುಸಾರವಾಗಿ ಸ್ಥಳೀಯ ಉದ್ದಿಮೆದಾರರು, ಪೂರೈಕೆಗಳನ್ನು ಒದಗಿಸಿಕೊಡುತ್ತಾರೆ. ಹಾಗಾಗಿ ವಿದೇಶಿ ಪ್ರವಾಸಿಗರು ಸೇವಾ ಸೌಲಭ್ಯಗಳಲ್ಲಿ ತೃಪ್ತಿ ಇದೆ ಎಂದು ಅಭಿಪ್ರಾಯ ಪಡುತ್ತಾರೆ. ಹಂಪೆಯಲ್ಲಿ ಎಲ್ಲರಿಗೂ ಸಾಮಾನ್ಯವಾಗಿ ಇಂಗ್ಲಿಷ್ ಭಾಷೆ ಬರುವುದರಿಂದ ಬೇಡುವ ಅಗತ್ಯಗಳನ್ನು ಬೇಗ ಅರ್ಥೈಸಿಕೊಂಡು ಸೇವೆಗಳನ್ನು ಕಲ್ಪಿಸುವುದರೊಂದಿಗೆ ಪ್ರಾಮಾಣಿಕತೆಯಿಂದ ನಡೆದುಕೊಳ್ಳುತ್ತಾರೆ ಎಂದು ಪ್ರವಾಸಿಗರು ತಿಳಿಸುತ್ತಾರೆ.

ಆಧುನಿಕ ಯುಗದಲ್ಲಿ ವಿದ್ಯುತ್ ಅವಶ್ಯಕವಾಗಿದೆ. ಹಂಪೆ ಪ್ರವಾಸ ತಾಣವಾಗಿರುವುದರಿಂದ ವಿದ್ಯುತ್ ಪೂರೈಕೆ ನಿರಂತರವಾಗಿರುತ್ತದೆ. ಕೇವಲ ದುರಸ್ಥಿ ಸಮಯದಲ್ಲಿ ಮಾತ್ರ ವಿದ್ಯುತ್ ಕಡಿತವಾಗುತ್ತದೆ. ಹಂಪೆಯಲ್ಲಿ ವಾಣಿಜ್ಯ ಉದ್ದೇಶಗಳಿಗಾಗಿ ನೀಡಿರುವ ವಿದ್ಯುತ್ ಸಂಪರ್ಕಗಳ ಮೂಲಕ ವಿದ್ಯುತ್ ಇಲಾಖೆ ಸಾಕಷ್ಟು ಪ್ರಮಾಣದ ಆದಾಯವನ್ನು ಪಡೆಯುತ್ತದೆ. ವಿದೇಶಿ ಪ್ರವಾಸಿಗರಲ್ಲಿ ಹಂಪೆಯಲ್ಲಿ ಕೆಲವರು ವಿದ್ಯುತ್ ಸಂಪರ್ಕ ಕಲ್ಪಸಿಕೊಳ್ಳದೆ ವಿದೇಶಿ ಪ್ರವಾಸಿಗರ ಅಭಿರುಚಿಯಂತೆ ಹಿಂದಿನ ಕಾಲದ ಸೀಮೆಎಣ್ಣೆ ದೀಪಗಳನ್ನು (Lanterin)ರಾತ್ರಿಯ ಸಮಯದಲ್ಲಿ

[illegible]

[illegible]

[illegible]

ಹೊತ್ತಿಸುತ್ತಾರೆ. ಈ ಬಗೆಯ ವ್ಯವಸ್ಥೆ ಕೆಲವು ಬಗೆಯ ರೆಸ್ಟೋರೆಂಟ್‌ಗಳಲ್ಲಿ ಮಾತ್ರವಿದೆ. ಇವು ಆಂಧ್ರ ಮಾದರಿಯ ಹುಲ್ಲಿನ ಜೋಪಡಿಗಳಾಗಿದ್ದು, ಇಲ್ಲಿಗೆ ವಿದೇಶಿ ಪ್ರವಾಸಿಗರು ಹೆಚ್ಚಾಗಿ ಹೋಗುತ್ತಾರೆ. ಈ ರೆಸ್ಟೋರೆಂಟ್‌ಗೆ ಬೆಳಗಿನ ಜಾವ 7 ಗಂಟೆಯಿಂದ ರಾತ್ರಿ 12 ಗಂಟೆಯವರೆಗೂ ಹೋಗಿ ಬರುತ್ತಿರುತ್ತಾರೆ. ವಿದ್ಯುತ್ ಕಂಬಗಳು ಹತ್ತಿರವಿದ್ದರೂ ವಿದ್ಯುತ್‌ನ್ನು ಏಕೆ ತೆಗೆದುಕೊಂಡಿಲ್ಲ ಎಂದು ಮಾಲಿಕರನ್ನು ಕೇಳಿದರೆ, ಪ್ರವಾಸಿಗರು ಸೀಮೆಎಣ್ಣೆ ದೀಪದ ಬೆಳಕನ್ನೆ ಇಷ್ಟಪಡುತ್ತಾರೆ ಎಂದು ತಿಳಿಸುತ್ತಾರೆ.

ಬೆಲೆಗಳು ಮತ್ತು ಸ್ವಚ್ಛತೆ

ಪ್ರತಿಯೊಬ್ಬ ಗ್ರಾಹಕ ತನ್ನ ಅಗತ್ಯತೆಗಳನ್ನು ಪೂರೈಸಿಕೊಳ್ಳಲು ಕಡಿಮೆ ಹಣ ಖರ್ಚು ಮಾಡಿ ಹೆಚ್ಚು ತೃಪ್ತಿ ಪಡೆಯಲು ಇಚ್ಛಿಸುತ್ತಾನೆ. ಅಂದರೆ ಕಡಿಮೆ ಹಣ ನೀಡಿ ಹೆಚ್ಚು ಸರಕು-ಸೇವೆಗಳನ್ನು ಕೊಳ್ಳುವುದು. ಹಾಗಾಗಿ ಪ್ರತಿಯೊಬ್ಬರೂ ಸರಕು-ಸೇವೆಗಳ ದರಗಳು ಕಡಿಮೆ ಇರಬೇಕೆಂದು ಬಯಸುತ್ತಾರೆ. ಹಂಪೆಗೆ ಬರುವ ಪ್ರವಾಸಿಗರು ಸ್ಥಳೀಯರ ದೃಷ್ಟಿಯಲ್ಲಿ ಗ್ರಾಹಕರಾಗಿದ್ದಾರೆ. ಹಾಗಾಗಿ ವಿದೇಶಿ ಪ್ರವಾಸಿಗರಿಗೆ ಸೇವಾ ಸೌಲಭ್ಯ ಒದಗಿಸುವುದರಲ್ಲಿ ಮೊದಲ ಆದ್ಯತೆ ಮತ್ತು ಆಸಕ್ತಿಯನ್ನು ತೋರಿಸುತ್ತಾರೆ. ವಿದೇಶಿ ಪ್ರವಾಸಿಗರು ಗ್ರಾಹಕರಾಗಿ ಹಂಪೆಯಲ್ಲಿನ ದರಗಳ ಬಗ್ಗೆ ಏನನ್ನು ಹೇಳುತ್ತಾರೆ ಎಂಬುದನ್ನು ಇಲ್ಲಿ ಕಾಣಬಹುದಾಗಿದೆ.

ಪ್ರವಾಸಿಗರು ತಾವು ತಂಗುವ ಕೊಠಡಿಗಳ ದರ ಮತ್ತು ಸ್ವಚ್ಛತೆ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ಹೀಗೆ ಹೇಳಿದ್ದಾರೆ. ಸಂದರ್ಶಿಸಿದ ಪ್ರವಾಸಿಗರಲ್ಲಿ ಕೊಠಡಿಗಳು ಗಾಳಿ ಬೆಳಕಿನಿಂದ ಕೂಡಿವೆ ಎಂದು 68(42%) ತಿಳಿಸಿದರೆ, 94(58%) ಕೊಠಡಿಗಳು ಗಾಳಿ, ಬೆಳಕಿನಿಂದ ಕೂಡಿಲ್ಲ ಎಂದು ತಿಳಿಸಿದ್ದಾರೆ. ಆದರೆ ಸ್ವಚ್ಛತೆ ಬಗ್ಗೆ 104(65%) ಪ್ರವಾಸಿಗರು ಒಳ್ಳೆಯ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಕೊಠಡಿ ಬಾಡಿಗೆಯ ಬಗ್ಗೆ ಸಂದರ್ಶಕರಲ್ಲಿ 15(9%) ಜನ ಕಡಿಮೆ ಇದೆ ಎಂದು ಅಭಿಪ್ರಾಯಪಟ್ಟಿದ್ದಾರೆ. 110(68%)ಜನ ಬೆಲೆಗಳು ಸಾಧಾರಣವಿದೆ ಎಂದು ತಿಳಿಸಿದರೆ 28(23%)ಜನ ದರ ಹೆಚ್ಚಿದೆ ಎಂದು ತಿಳಿಸಿದ್ದಾರೆ.(ಕೋಷ್ಟಕ-21) ಜೊತೆಗೆ ಸೊಳ್ಳೆ ಪರದೆ ಇತ್ಯಾದಿಗಳನ್ನು ಒದಗಿಸಲಾಗಿದೆ. ಕೊಠಡಿಗಳ ದಿನದ ಬಾಡಿಗೆ ವಿಶೇಷ ಹೆಚ್ಚೇನು ಇಲ್ಲ ಎಂದು ಪ್ರವಾಸಿಗರು ಅಭಿಪ್ರಾಯ ಪಡುತ್ತಾರೆ. ಗೋವಾದ ಸಮುದ್ರದ ದಡದಲ್ಲಿ ಗುಡಿಸಲು ಮಾದರಿಯ ಅತಿಥಿಗೃಹಗಳಲ್ಲಿ, ಗಾಳಿ-ಬೆಳಕು ಚೆನ್ನಾಗಿದ್ದು, ಕೊಠಡಿಗಳು ವಿಶಾಲವಾಗಿರುತ್ತವೆ. ಸ್ವಚ್ಛತೆ ಇರುತ್ತದೆ. ಹಂಪೆಯಲ್ಲಿನ ಅತಿಥಿ ಗೃಹಗಳಿಗಿಂತ ಗುಡಿಸಲು ಮಾದರಿಯ ಕೊಠಡಿಗಳ ದಿನದ ಬಾಡಿಗೆ ಜೂನ್-ಜುಲೈ ತಿಂಗಳಲ್ಲಿ ಸ್ವಲ್ಪ ಮಟ್ಟಿಗೆ ಅಧಿಕವಿರುತ್ತದೆಂದು ಹೇಳುತ್ತಾರೆ.

ವಿದೇಶಿ ಪ್ರವಾಸಿಗರ ಅಭಿರುಚಿಗೆ ತಕ್ಕಂತೆ, ಬೇಡಿಕೆಗೆ ತಕ್ಕಂತೆ ಆಹಾರ ಪೂರೈಸಬೇಕಾಗುತ್ತದೆ. ರೆಸ್ಟೋರೆಂಟ್‌ಗಳ ಆಹಾರದ ರುಚಿ ಶುಚಿತ್ವ, ದರಗಳು ಮತ್ತು ಉತ್ತಮ ಸೇವೆಗಳ ಬಗ್ಗೆ ವಿದೇಶಿ ಪ್ರವಾಸಿಗರು ಮೆಚ್ಚಿಕೊಳ್ಳುತ್ತಾರೆ. ಆಹಾರದ ರುಚಿಯ ಬಗ್ಗೆ ಸಂದರ್ಶಿಸಿದ ವಿದೇಶಿ ಪ್ರವಾಸಿಗರಲ್ಲಿ 122(75.31) ಜನ ತೃಪ್ತಿ ವ್ಯಕ್ತ ಪಡಿಸಿದ್ದಾರೆ. 40(24.69)ಜನ ತೃಪ್ತಿಕರವಾಗಿಲ್ಲ ವೆಂದು ಅಭಿಪ್ರಾಯ ಪಟ್ಟಿದ್ದಾರೆ. ರೆಸ್ಟೋರೆಂಟ್‌ಗಳ ಸ್ವಚ್ಛತೆಯ ಬಗ್ಗೆ 140(86.42) ಜನ ಚೊಕ್ಕಟವಾಗಿದೆ ಎಂದು ಅಭಿಪ್ರಾಯಪಟ್ಟರೆ, 22(13.58) ಜನ ಸ್ವಚ್ಛವಿಲ್ಲವೆಂದು ತಿಳಿಸಿದ್ದಾರೆ. ಆಹಾರದ ದರಗಳು ಕಡಿಮೆ ಇವೆಯೆಂದು 154(95.06)ಜನ ಅಭಿಪ್ರಾಯಪಟ್ಟಿದ್ದಾರೆ. ರೆಸ್ಟೋರೆಂಟ್‌ಗಳಲ್ಲಿನ ದರ ಹೆಚ್ಚಿವೆ ಎಂದು 08(4.94)ರಷ್ಟು ಜನ ಹೇಳಿದ್ದಾರೆ. ಹಂಪೆಯಲ್ಲಿ ಇತರ ದಿನನಿತ್ಯ ಬಳಸುವ ವಸ್ತುಗಳ ಬಗ್ಗೆ ಸಂದರ್ಶಿಸಿದ ಪ್ರವಾಸಿಗರಲ್ಲಿ 135(83.33) ಜನ ಸಾಧರಣವಾಗಿವೆ ಎಂದು ತೃಪ್ತಿ ವ್ಯಕ್ತಪಡಿಸಿದ್ದರೆ, 27 ಪ್ರವಾಸಿಗರು ದರಗಳು ಹೆಚ್ಚಿವೆ ಎಂದು ಹೇಳಿದ್ದಾರೆ (ಕೋಷ್ಟಕ-22). ವಿದೇಶಿ ಮಹಿಳೆಯೊಬ್ಬಳು ಹಂಪೆಯಲ್ಲಿ ರೆಸ್ಟೋರೆಂಟ್‌ನಲ್ಲಿ ಆಹಾರ ಪೂರೈಸುವವರು (Waitors) ಸ್ಪೇನಿನ ವೇಟರ್‌ಗಿಂತ ತುಂಬಾ ಶುಚಿತ್ವ ಮತ್ತು ನಮ್ರತೆ, ವಿನಯತೆಯನ್ನು ಹೊಂದಿರುತ್ತಾರೆಂದು ತಿಳಿಸಿದ್ದಾಳೆ. ಥಾಲಿ ಊಟದ ರುಚಿ, ದರ ಇತ್ಯಾದಿಗಳ ಬಗ್ಗೆ ಪ್ರವಾಸಿಗರನ್ನು ಕೇಳಿದರೆ ತುಂಬಾ ಚೆನ್ನಾಗಿರುತ್ತದೆಂದು ತಿಳಿಸುತ್ತಾರೆ. ಆಹಾರದ ದರಗಳು ಗೋವಾದ ರೆಸ್ಟೋರೆಂಟ್‌ಗಳಿಗಿಂತ ಕಡಿಮೆ ಇದ್ದು, ಆಹಾರವು ತುಂಬಾ ರುಚಿಯಾಗಿರುತ್ತದೆ ಎಂಬುದು ಪ್ರವಾಸಿಗರ ಅಭಿಪ್ರಾಯ. ಸಂದರ್ಶಿಸಿದ 162 ಜನ ಪ್ರವಾಸಿಗರಲ್ಲಿ 115ಜನ ಗೋವಾದಲ್ಲಿ ಊಟದ ದರ ಕನಿಷ್ಟ 100 ರೂಗಳಿದ್ದರೆ, ಹಂಪೆಯಲ್ಲಿ ರೂ.50 ರಿಂದ ರೂ.75ಗಳಲ್ಲಿ ಉತ್ತಮ ಊಟ ದೊರೆಯುತ್ತದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ನೀರನ್ನು ಶುದ್ಧೀಕರಣ ಮಾಡುವುದಿಲ್ಲವೆಂಬುದು ಪ್ರವಾಸಿಗರ ದೂರು. ವಿದೇಶಿ ಪ್ರವಾಸಿಗರು ಖನಿಜಯುಕ್ತ ನೀರನ್ನೆ ಕುಡಿಯಲು ಬಳಸುತ್ತಾರೆ. ರೆಸ್ಟೋರೆಂಟ್ ಮತ್ತು ಹೋಟೆಲ್‌ಗಳ ಆಹಾರ ತಯಾರಿಕೆಯಲ್ಲಿ ನೀರಿನ ಕಲ್ಮಶತೆಯಿಂದ ಆಗುವ ಪರಿಣಾಮದಿಂದ ಪ್ರವಾಸಿಗರಲ್ಲಿ ಸಣ್ಣಪುಟ್ಟ ಕಾಯಿಲೆಗಳು ಕಾಣಿಸಿಕೊಳ್ಳುವುದು ಸರ್ವೆಸಾಮಾನ್ಯ. ಹಾಲೇಂಡ್‌ನ ಪ್ರವಾಸಿ ದಂಪತಿಗಳು ಹಾಗೂ ಇಟಲಿಯ ಮಹಿಳೆಯೊಬ್ಬಳು ಹೊಸಪೇಟೆಯಲ್ಲಿರುವ ಮೆಡಿನೋವ ಆಸ್ಪತ್ರೆಯಲ್ಲಿನ ತಪಾಸಣೆ ಮತ್ತು ಶುಶ್ರೂಷೆಗಳಿಗೆ ತೆಗೆದುಕೊಳ್ಳುವ ದುಬಾರಿ ಹಣದ ಬಗ್ಗೆ ದೂರಿದ್ದಾರೆ. ಜೊತೆಗೆ ಹಂಪೆ ಗ್ರಾಮದಲ್ಲಿ ಸ್ಥಳೀಯರು ಮತ್ತು ದಿನನಿತ್ಯ ಬಂದು ಹೋಗುವ ದೇಶಿಯ ಪ್ರವಾಸಿಗರು ಮಲಮೂತ್ರಗಳನ್ನು ನದಿಯ ದಡದಲ್ಲಿ ಮತ್ತು ಗ್ರಾಮದ ಸುತ್ತಮುತ್ತ ಮಾಡುವುದರಿಂದಲೂ ಪರಿಸರ ಹಾಳಾಗುತ್ತದೆ. ಈ ಕಾರಣಗಳಿಂದಲೂ ಸಾಂಕ್ರಾಮಿಕ ರೋಗಗಳು ಹೆಚ್ಚುತ್ತವೆ. ಈ ಪದ್ಧತಿಯನ್ನು ತಡೆಯಬೇಕೆಂಬ ಅಭಿಪ್ರಾಯವನ್ನು ಪ್ರವಾಸಿಗರು ವ್ಯಕ್ತಪಡಿಸುತ್ತಾರೆ. ಬಾಡಿ ಮಸಾಜ್ ಮಾಡಲು ತೆಗೆದುಕೊಳ್ಳುವ ಹಣ ರೂ.250 ರಿಂದ 300ಗಳು ಇರುತ್ತದೆ. ಬಾಡಿ ಮಸಾಜ್

ಮಾಡಿಸಿಕೊಳ್ಳುವ ಪ್ರವಾಸಿಗರು ಈ ದರವನ್ನು ಸಾಧರಣವಾಗಿದೆ ಎನ್ನುತ್ತಾರೆ. ಬೇಕರಿ ವಸ್ತುಗಳು ರುಚಿ ಮತ್ತು ಶುಚಿತ್ವದಿಂದ ಇದ್ದು, ಹಣ್ಣುಗಳು ಸಹ ತಾಜಾವಾಗಿದ್ದು ಬೆಲೆಗಳು ಕೂಡ ಕಡಿಮೆ ಇವೆ ಎಂಬ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ಇತರೆ ಪ್ರವಾಸಿ ಸ್ಥಳಗಳಿಗಿಂತ ಇಲ್ಲಿನ ದರ ತಕ್ಕಮಟ್ಟಿಗೆ ಕಡಿಮೆ ಇರುತ್ತವೆಂದು ಪ್ರವಾಸಿಗರು ತಿಳಿಸುತ್ತಾರೆ. ಬ್ಯಾಂಕಿನ ಹಣ ವಿನಿಮಯ ಕಮಿಷನ್ ಕಡಿಮೆ ಇದೆ. ಬ್ಯಾಂಕಿನ ಸೇವಾ ಸೌಲಭ್ಯದ ಬಗ್ಗೆಯು ಪ್ರವಾಸಿಗರು ತೃಪ್ತಿಯನ್ನು ವ್ಯಕ್ತಪಡಿಸಿದ್ದಾರೆ. ಅದರಲ್ಲಿ ಕೆಲವರು ಮಾತ್ರ ಬ್ಯಾಂಕಿನಲ್ಲಿ ಹಣ ಪಡೆಯಲು ಕಾಯಬೇಕು ಎನ್ನುತ್ತಾರೆ. ಬ್ಯಾಂಕಿನಲ್ಲಿ ಆಧುನಿಕ ಸೌಲಭ್ಯವನ್ನು ಅಳವಡಿಸಿ ವ್ಯವಹಾರಗಳು ತೀವ್ರವಾಗಿ ಆಗುವಂತೆ ನೋಡಿಕೊಳ್ಳಬೇಕು ಎನ್ನುತ್ತಾರೆ.

ವಿದೇಶಿ ಪ್ರವಾಸಿಗರಲ್ಲಿ ಪ್ರವಾಸಿ ತಾಣವಾದ ಹಂಪೆಗೆ ಬರುವ ಪ್ರಯಾಣದ ಸೌಲಭ್ಯಗಳ ಬಗ್ಗೆ ಸಂದರ್ಶಿಸಿದ 162 ಜನ ಪ್ರವಾಸಿಗರಲ್ಲಿ 112(69.13) ಜನ ಪ್ರಯಾಣದ ಸೌಲಭ್ಯಗಳು ತೃಪ್ತಿಕರವಾಗಿವೆಯೆಂದು ಹೇಳಿದರೆ, 50(30.87) ಜನ ಪ್ರವಾಸಿಗರು ತೃಪ್ತಿಕರವಾಗಿಲ್ಲ ವೆಂದು ಹೇಳಿದ್ದಾರೆ. ಪ್ರಯಾಣದ ಸೌಲಭ್ಯಗಳಲ್ಲಿ ಇನ್ನು ಹೆಚ್ಚಿನ ಸೌಕರ್ಯಗಳನ್ನು ಒದಗಿಸಬೇಕೆಂದು ತಿಳಿಸಿದ್ದಾರೆ. ಹಾಗೆಯೇ ಪ್ರಯಾಣದ ದರಗಳು ತೃಪ್ತಿಕರವಾಗಿಲ್ಲವೆಂದು 133(82.10) ಹೇಳಿದ್ದರೆ, 29(17.90)ಜನ ಪ್ರವಾಸಿಗರು ಪ್ರಯಾಣದರಗಳು ಹೆಚ್ಚಿವೆ ಎಂದು ತಿಳಿಸಿದ್ದಾರೆ. ಇಂಟರ್‌ನೆಟ್ ಮತ್ತು ಇ-ಮೇಲ್ ದರಗಳು ಹೆಚ್ಚಿವೆ ಎಂದು 137(84.57)ಜನ, ಕಡಿಮೆಯೆಂದು 25(15.43)ಜನ ಹೇಳಿದ್ದಾರೆ. ಇ-ಮೇಲ್ ದರಗಳ ಬಗ್ಗೆ ವಿದೇಶಿ ಪ್ರವಾಸಿಗರು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಇಂಟರ್‌ನೆಟ್ ಇ-ಮೇಲ್ ಸೌಲಭ್ಯವನ್ನು ಉಪಯೋಗಿಸುವವರು ಒಂದು ಗಂಟೆಗೆ 60 ರೂ. ನೀಡಬೇಕಾಗುತ್ತದೆ. ಮಾಲಿಕರೆಲ್ಲ ಸೇರಿ ಒಂದು ದರವನ್ನು ನಿಗದಿಪಡಿಸಿಕೊಂಡಿದ್ದಾರೆ. ಈ ಸೌಲಭ್ಯಗಳು ಹಂಪೆಯನ್ನು ಹೊರತುಪಡಿಸಿ ಹತ್ತಿರದಲ್ಲಿ ಬೇರೆಲ್ಲೂ ಇಲ್ಲ. ಆದುದರಿಂದ ಸ್ಥಳೀಯರು ನಿರ್ಧರಿಸುವ ಬೆಲೆ ತೆರುವುದು ಪ್ರವಾಸಿಗರಿಗೆ ಅನಿವಾರ್ಯವಾಗಿದೆ. ಹಣದ ವಿನಿಮಯ ಮತ್ತು ಟ್ರಾವೆಲರ್ಸ್ ಶಾಪ್‌ಗಳ ಬಗ್ಗೆ ಪ್ರವಾಸಿಗರಲ್ಲಿ ಹಣದ ವಿನಿಮಯ ತೆಗೆದುಕೊಳ್ಳುವ ಕಮೀಷನ್ ಮತ್ತು ಸೇವಾ ಸೌಲಭ್ಯಗಳ ಬಗ್ಗೆ ಪ್ರವಾಸಿಗರಲ್ಲಿ 120(74.07) ಜನ ತೃಪ್ತಿಯನ್ನು ವ್ಯಕ್ತಪಡಿಸಿದ್ದರೆ, 42(25.93) ಜನ ಆತೃಪ್ತಿಯನ್ನು ವ್ಯಕ್ತಪಡಿಸಿದ್ದಾರೆ. ಟ್ರಾವೆಲರ್ಸ್ ಶಾಪ್‌ಗಳು ಒಂದು ಟಿಕೆಟ್‌ಗೆ ರೂ.50 ಕಮಿಷನ್ ಪಡೆಯುತ್ತವೆ. ಬಹುತೇಕ ವಿದೇಶಿ ಪ್ರವಾಸಿಗರು ಟ್ರಾವೆಲರ್ಸ್ ಶಾಪ್‌ಗಳ ಮೂಲಕವೆ ಟಿಕೆಟ್‌ಗಳನ್ನು ಕಾದಿರಿಸುತ್ತಾರೆ. ಪ್ರವಾಸಿಗರೆ ನೇರ ಹೋಗಿ ಟಿಕೆಟ್ ಪಡೆಯುವುದು ಬಹಳ ಅಪರೂಪವೆಂದೆ ಹೇಳಬಹುದು. ಪ್ರವಾಸಿ ಸೌಕರ್ಯಗಳನ್ನು ಹೆಚ್ಚಿಸಬೇಕು. ಪ್ರಯಾಣದ ದರಗಳು ಸಾಧಾರಣವಾಗಿವೆ. ಟ್ರಾವೆಲರ್ಸ್ ಶಾಪ್‌ಗಳು ತೆಗೆದುಕೊಳ್ಳುವ ಕಮಿಷನ್ ಸಹಿತ ಕಡಿಮೆ ಎಂದು ಹೇಳುತ್ತಾರೆ. ಸ್ಮಾರಕಗಳನ್ನು ವೀಕ್ಷಿಸಲು(ವಿಠ್ಠಲ ಮತ್ತು ಕಮಲಮಹಲ್‌ಗಳನ್ನು) ಇಟ್ಟಿರುವ

ದರ ಜಾಸ್ತಿಯಾಯಿತೆಂದು 145(89.51)ಜನ ಹೇಳಿದರೆ, 17(10.49)ಜನ ಸಾಧಾರಣವಾಗಿದೆ ಎಂದು ತಿಳಿಸಿದ್ದಾರೆ. ವಿದೇಶಿಯರು ಸ್ಮಾರಕಗಳನ್ನು ನೋಡಲು ತಗಲುವ ವೆಚ್ಚ ಐದು ಡಾಲರಾಗಿದೆ. ಇಲ್ಲಿ ವಿದೇಶಿಯರು ಮತ್ತು ದೇಶಿಯರು ಎಂದು ತಾರತ್ಯಮ ಮಾಡಲಾಗಿದೆ. ದೇಶಿಯರಿಗೆ ಕೇವಲ 10 ರೂ.ಗಳು, ವಿದೇಶೀಯರಿಗೆ ಅಮೆರಿಕಾದ 5 ಡಾಲರ್. ಇದು ರೂ. 240 ರಿಂದ 250 ರೂಗಳು ಆಗುತ್ತವೆ. ಭಾರತೀಯರಿಗಿಂತ ವಿದೇಶಿ ಪ್ರವಾಸಿಗರು 24 ಪಟ್ಟು ಜಾಸ್ತಿ ಹಣವನ್ನು ತೆರಬೇಕಾಗಿದೆ. ಒಬ್ಬ ವಿದೇಶಿ ಪ್ರವಾಸಿಗ ಸ್ಮಾರಕಗಳ ಪ್ರವೇಶ ದರ (5ಡಾಲರ್)ದ ಬಗ್ಗೆ ಅಸಮಾಧಾನವನ್ನು ವ್ಯಕ್ತಪಡಿಸುತ್ತಾ, ಸ್ಮಾರಕಗಳನ್ನು ನೋಡಲು ಖರ್ಚಾಗುವ ದರವನ್ನು ಉಳಿಸಿದರೆ ಹಂಪೆಯಲ್ಲಿನ ಒಂದು ದಿನದ ಖರ್ಚಿಗೆ ಸಮ ಎಂದು ಹೇಳಿರುವುದು ಗಮನಿಸಬೇಕಾದ ಅಂಶವಾಗಿದೆ. ಇದಲ್ಲದೆ ಮಾರ್ಗದರ್ಶಕರ ಶುಲ್ಕ (Guide Fee)ಕಡಿಮೆ ಇದೆ ಎಂದು 158(97.53)ಜನ, ಬೆಲೆ ಹೆಚ್ಚೆಂದು 4(2.47) ಜನ ಹೇಳಿದ್ದಾರೆ. ಆದರೆ ಗೋವಾದಲ್ಲಿ ದಿನದ ವೆಚ್ಚ 400 ರೂಗಳಿಂದ 500 ರೂಗಳಾಗುತ್ತವೆ ಎಂದು ಹೇಳುತ್ತಾರೆ. ಈ ದರವನ್ನು ಕಡಿಮೆ ಮಾಡಬೇಕು. ಇಲ್ಲವಾದಲ್ಲಿ ವಿದೇಶಿ ಪ್ರವಾಸಿಗರ ಸಂಖ್ಯೆ ಕಡಿಮೆಯಾಗುತ್ತದೆ ಎನ್ನುತ್ತಾರೆ. ಮ್ಯೂಜಿಯಂ ಮತ್ತು ವಿರೂಪಾಕ್ಷ ದೇವಸ್ಥಾನದಲ್ಲಿ ದೇಶಿ ಮತ್ತು ವಿದೇಶಿಯರಿಗೆ ಒಂದೆ ದರವಿದೆ. ಇಲ್ಲಿ ಏಕೆ ಹೀಗಿದೆ ಎಂದು ಕೇಳುತ್ತಾರೆ(ಕೋಷ್ಟಕ-23).

ಪ್ರವಾಸಿಗರಿಗೆ ಈಜು ಟ್ಯೂಬ್‌ಗಳನ್ನು ಬಾಡಿಗೆಗೆ ಸರಬರಾಜು ಮಾಡುವ ವ್ಯಾಪಾರಿಗಳು ಒಂದು ಟ್ಯೂಬಿಗೆ ದಿನವೊಂದಕ್ಕೆ ರೂ.30 ರಿಂದ ರೂ.40 ಪಡೆಯುತ್ತಾರೆ. ಈ ದರ ಸಾಧಾರಣವೆಂಬುದು ಪ್ರವಾಸಿಗರ ಅಭಿಪ್ರಾಯವಾಗಿದೆ.ನಾಡದೋಣಿಗಳು ನದಿ ದಾಟಲಿಕ್ಕೆ ವಿದೇಶಿಯರಿಗೆ ರೂ.5 ನಿಂದ ರೂ.10 ಗಳನ್ನು ಹಗಲು ಸಮಯದಲ್ಲಿ ತೆಗೆದು ಕೊಂಡರೆ, ಸಂಜೆ 7ಗಂಟೆಯ ನಂತರ ಒಬ್ಬರಿಗೆ ರೂ.25 ನಿಂದ ರೂ.100ಗಳನ್ನು ವಸೂಲಿ ಮಾಡುತ್ತಾರೆ. ವಿದೇಶಿಯರ ತುರ್ತಿನ ಸಮಯದಲ್ಲಿ ಹೆಚ್ಚು ಹಣ ಪಡೆಯುತ್ತಾರೆ. ಕೆಲವೊಮ್ಮೆ ಚೌಕಾಸಿ ಮಾಡಿದರೆ ಕಡಿಮೆ ಕೂಡ ಮಾಡಿಕೊಳ್ಳುತ್ತಾರೆ. ಪ್ರವಾಸಿಗರಲ್ಲಿ ಕೆಲವರು ಹೊಸಪೇಟೆಯಿಂದ ಹಂಪೆಗೆ ಆಟೋಗಳಲ್ಲಿ ಬರುತ್ತಾರೆ. ಅಟೋಗಳು ಹೊಸಪೇಟೆಯಿಂದ ಹಂಪೆಗೆ ಪ್ರವಾಸಿಗರನ್ನು ಸಾಗಿಸುವುದರ ಜೊತೆಗೆ ಪ್ರವಾಸಿಗರಿಗೆ ಸ್ಮಾರಕಗಳನ್ನು ನೋಡಲು ಸಹಾಯಕಾರಿಯಾಗಿವೆ. ಪ್ರವಾಸಿಗರು ಹಂಪೆಯಲ್ಲಿ ತಂಗಿದ್ದಾಗ ಸ್ಮಾರಕಗಳನ್ನು ವೀಕ್ಷಿಸಲು ಬಯಸಿದರೆ, ಕಾಲು ನಡುಗೆಯಿಂದ ಅಥವಾ ಅಟೋ ಇಲ್ಲವೆ ದ್ವಿಚಕ್ರವಾಹನಗಳನ್ನು ಅವಲಂಬಿಸ ಬೇಕಾಗಿದೆ. ದ್ವಿಚಕ್ರವಾಹನಗಳ ಬಾಡಿಗೆ ದರ ಸರಾಸರಿ ಇದ್ದು, ಆಟೋ ಬಾಡಿಗೆ ದರ ಹೆಚ್ಚಾಗಿದೆ. ಅಷ್ಟೇ ಅಲ್ಲ ಆಟೋಗಳಿಗೆ ಮೀಟರ್‌ಗಳೆ ಇಲ್ಲದಿರುವುದರಿಂದ ಸರಿಯಾದ ದರವನ್ನು ನಿರ್ಧರಿಸು ವುದು ಕಷ್ಟವಾಗಿದೆಯೆಂದು ಪ್ರವಾಸಿಗರು ಅತೃಪ್ತಿ ವ್ಯಕ್ತಪಡಿಸಿದ್ದಾರೆ. ವಿವಿಧ ಸಾರಿಗೆ ವ್ಯವಸ್ಥೆಯನ್ನು ಬಳಸುವ ಪ್ರವಾಸಿಗರು ಅವುಗಳ ಬಗ್ಗೆ ವಿವಿಧ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಭಾರತದ ಇನ್ನಿತರ ಪ್ರವಾಸಿ ತಾಣಗಳಿಗಿಂತ ಹಂಪೆಯಲ್ಲಿ ಬೆಲೆಗಳು ತೃಪ್ತಿಕರವಾಗಿವೆಯೆಂದು ಭಾವಿಸುತ್ತಾರೆ.

ಆದರೆ ದೇಶಿ ಮತ್ತು ವಿದೇಶಿ ಪ್ರವಾಸಿಗರ ನಡುವೆ ಬೆಲೆಗಳಲ್ಲಿರುವ ತಾರತಮ್ಯ ಕುರಿತು ತಮ್ಮ ಅಸಮಾಧಾನ ವ್ಯಕ್ತ ಪಡಿಸುತ್ತಾರೆ.

ಕಾನೂನು ಮತ್ತು ರಕ್ಷಣೆ

ಸಮಾಜದಲ್ಲಿ ಶಾಂತಿ ಮತ್ತು ಕಾನೂನು ಪರಿಸ್ಥಿತಿ ಕಾಪಾಡಲು ಆರಕ್ಷಕ ಠಾಣೆಗಳನ್ನು ಸ್ಥಾಪಿಸಲಾಗಿದೆ. ಆರಕ್ಷಕ ಠಾಣೆ ಇರುವ ಪ್ರದೇಶದಲ್ಲಿ ತಕ್ಕಮಟ್ಟಿಗೆ ಅಹಿತಕರ ಘಟನೆಗಳು ಕಡಿಮೆಯಾಗುತ್ತಿವೆ. ಹಂಪೆಯಲ್ಲಿ ಆರಕ್ಷಕ ಠಾಣೆಯನ್ನು ಸಾಮಾನ್ಯ ಉದ್ದೇಶದಿಂದಲೆ ಸ್ಥಾಪಿಸಲಾಗಿತ್ತು. ಈಗ ಈ ವ್ಯವಸ್ಥೆ ವಿದೇಶಿಯರ ರಕ್ಷಣೆಗೂ ವಿಸ್ತರಿಸಿಕೊಂಡಿದೆ. ಆದರೆ ಹಂಪೆಗೆ ಬರುವ ಪ್ರವಾಸಿಗರ ಸಂಖ್ಯೆ ಜಾಸ್ತಿಯಾಗುತ್ತಿರುವುದರಿಂದ ಅಪರಾಧ ನಡೆಯುವ ಸಂದರ್ಭಗಳು ಕೂಡ ಹೆಚ್ಚಾಗುತ್ತಿವೆ. ವಿದೇಶಿ ಪ್ರವಾಸಿಗರಿಗೆ ಯಾವುದೆ ರೀತಿಯ ಅಹಿತಕರ ಘಟನೆಗಳು ಎದುರಾಗದಂತೆ ನೋಡಿಕೊಳ್ಳುವ ಹೊಣೆ ಪೋಲಿಸ್ ಇಲಾಖೆಯದಾಗಿದೆ. ಇದರ ಪರಿಣಾಮವಾಗಿ ಹಂಪೆಯಲ್ಲಿ ಇತ್ತೀಚಿನ ದಿನಗಳಲ್ಲಿ ಕಳ್ಳತನ, ಮೋಸ ಮುಂತಾದ ಅಪರಾಧಗಳ ಸಂಖ್ಯೆ ಕಡಿಮ ಇದೆ ಎಂದು ಪೋಲಿಸ್ ಇಲಾಖೆಯವರು ಹೇಳುತ್ತಾರೆ. ಕಳ್ಳತನ, ಮೋಸ ಇನ್ನಿತರ ತೊಂದರೆಗಳು ತಮಗೆ ಆಗಿಲ್ಲವೆಂದು ಪ್ರವಾಸಿಗರು ಕೂಡ ತಿಳಿಸುತ್ತಾರೆ. ಆದರೆ ಪ್ರವಾಸಿಗರೆಲ್ಲ ಪೋಲಿಸ್ ಠಾಣೆಗೆ ಬಂದು ತಮಗೆ ಸಂಬಂಧಿಸಿದ ಮಾಹಿತಿಯನ್ನು ಒದಗಿಸುವುದಿಲ್ಲವೆಂದು ಠಾಣೆಯ ಸಿಬ್ಬಂದಿ ಹೇಳುತ್ತಾರೆ. ಪ್ರವಾಸಿಗರು ಪೋಲಿಸ್ ಸ್ಟೇಷನ್‌ಗೆ ಯಾಕೆ ಹೋಗಬೇಕು, ಹೋದರೆ ಹಲವಾರು ಪ್ರಶ್ನೆಗಳನ್ನು ಕೇಳಿ ನಮಗೆ ತೊಂದರೆ ನೀಡುತ್ತಾರೆಂದು ಪ್ರವಾಸಿಗರು ದೂರುತ್ತಾರೆ. ವಿದೇಶಿ ಪ್ರವಾಸಿಗರು ಮದ್ಯಪಾನ ಮಾಡುವುದು ಪೋಲಿಸ್ ಅಧಿಕಾರಿಗಳಿಗೆ ಗೊತ್ತಿರುವ ವಿಷಯವಾಗಿದೆ. ಆದರೂ ಆಗಾಗ ಅತಿಥಿಗೃಹ ಮತ್ತು ರೆಸ್ಟೋರೆಂಟ್‌ಗಳ ಮೇಲೆ ದಾಳಿ ನಡೆಸುತ್ತಾರೆ, ಮದ್ಯಪಾನ ಸೇವನೆ ಕಂಡುಬಂದರೆ ಮಾಲಿಕರು ಮತ್ತು ಪ್ರವಾಸಿಗರಿಬ್ಬರಿಗೂ ದಂಡ ವಿಧಿಸುತ್ತಾರೆ. ತಾವು ಮದ್ಯಪಾನ ಮಾಡಿ ಯಾರಿಗೂ ತೊಂದರೆ ಕೊಡದಿದ್ದಲ್ಲಿ ಯಾಕೆ ಮದ್ಯಪಾನ ಮಾಡಲೇ ಬಾರದು, ಈ ಸಂಬಂಧ ನಮಗೆ ಯಾಕೆ ದಂಡನೆ ವಿಧಿಸಲಾಗುತ್ತದೆ ಎಂಬುದು ಪ್ರವಾಸಿಗರ ಪ್ರಶ್ನೆ. ಸ್ಥಳೀಯ ಪೋಲಿಸ್ ಇಲಾಖೆಯ ಬಗ್ಗೆ ಸಂದರ್ಶಿಸಿದ ಪ್ರವಾಸಿಗರಲ್ಲಿ 92(56.79) ಆತೃಪ್ತಿಯನ್ನು ವ್ಯಕ್ತಪಡಿಸಿದ್ದಾರೆ. 70(43.21) ಜನ ಪ್ರವಾಸಿಗರು ಪೋಲಿಸ್ ವ್ಯವಸ್ಥೆ ಮತ್ತು ರಕ್ಷಣೆಯ ಬಗ್ಗೆ ತೃಪ್ತಿ ಹೊಂದಿದ್ದಾರೆ(ಕೋಷ್ಟಕ-24). ಪ್ರವಾಸಿ ತಾಣವಾದ ಗೋವಾದಲ್ಲಿ ಮದ್ಯ ಸೇವನೆ ಇದೆ. ಇತರೆ ಪ್ರವಾಸಿ ತಾಣಗಳಲ್ಲಿ ಈ ತರದ ಕ್ರಮಗಳು ಇಲ್ಲವೆಂದು ಪ್ರವಾಸಿಗರೂ ತಿಳಿಸುತ್ತಾರೆ. ಈ ಸ್ಥಳದಲ್ಲಿ ಮಾತ್ರ ಏಕೆ ಪೋಲಿಸ್ ಸ್ಟೇಷನ್‌ಗೆ ಹೋಗಿ ವಿವರ ನೀಡಿ ಬರಬೇಕು, ಪ್ರವಾಸಿಗರೇನು ತಪ್ಪಿತಸ್ಥರೆ ಎಂದು ಪ್ರವಾಸಿಗರು ಪ್ರಶ್ನಿಸುತ್ತಾರೆ. ಪೋಲಿಸ್ ವ್ಯವಸ್ಥೆಯಿಂದ ರಕ್ಷಣೆ ಇದೆ. ಆದರೆ ಅನಾವಶ್ಯಕ ಪ್ರಶ್ನೆಗಳನ್ನು ಕೇಳುವುದು ತಮಗೆ ಕಿರಿ ಕಿರಿ ಉಂಟು ಮಾಡುತ್ತದೆ ಎನ್ನುತ್ತಾರೆ ಪ್ರವಾಸಿಗರು.

ಹಂಪೆ ಕುರಿತು

ವಿದೇಶಿ ಪ್ರವಾಸಿಗರು ಕಾಲ ಕಳೆಯಲು ನಿರ್ಜನ ಪ್ರದೇಶವನ್ನೆ ಆಯ್ದು ಕೊಳ್ಳುತ್ತಾರೆ. ಹಂಪೆಯು ಬೆಟ್ಟ ಗುಡ್ಡಗಳಿಂದ ಕೂಡಿದೆ. ಇಲ್ಲಿನ ಕೆಲವು ಪ್ರದೇಶಗಳು ನಿರ್ಜನ ಪ್ರದೇಶಗಳು. ಅವು ನೈಸರ್ಗಿಕ ಸೌಂದರ್ಯದಿಂದ ಕೂಡಿವೆ. ಹಂಪೆ ಪ್ರವಾಸಿ ತಾಣವಾಗಿರುವುದರಿಂದ ಯಾವಾಗಲೂ ಹೆಚ್ಚಿನ ಜನ ದಟ್ಟಣೆಯಿಂದ ಕೂಡಿರುತ್ತದೆ. ಹಾಗಾಗಿ ವಿದೇಶಿ ಪ್ರವಾಸಿಗರು ಕಡಿಮೆ ಜನಸಾಂದ್ರತೆ ಇರುವ ಪ್ರದೇಶವನ್ನೆ ಹೆಚ್ಚು ಇಷ್ಟಪಡುತ್ತಾರೆ. ಹಂಪೆಯ ಆಚೆ ದಡದಲ್ಲಿರುವ ವಿರುಪಾಪುರ ಗ್ರಾಮ ಕಡಿಮೆ ಜನಸಾಂದ್ರತೆಯಿಂದ ಕೂಡಿದೆ. ಹೆಚ್ಚಿನ ವಿದೇಶಿ ಪ್ರವಾಸಿಗರು ಅಲ್ಲಿಯೆ ಉಳಿಯಲು ಇಷ್ಟಪಡುತ್ತಾರೆ. ಆದರೆ ಅಲ್ಲಿ ಸೇವಾ ಮತ್ತು ಸಂಪರ್ಕ ಸೌಲಭ್ಯಗಳು ಪೂರ್ಣಪ್ರಮಾಣದಲ್ಲಿ ಬೆಳೆದಿಲ್ಲ. ತುಂಗಭದ್ರಾ ನದಿಗೆ ಸೇತುವೆ ಕಟ್ಟುವುದರಿಂದ ಆಚೆಯ ಮತ್ತು ಈಚೆಯ ದಡದ ಜನರ ವ್ಯಾಪಾರ, ವಹಿವಾಟುಗಳಿಗೆ ಅನುಕೂಲವಾಗುತ್ತದೆ. ಸ್ಥಳೀಯ ಜನರ ಒತ್ತಾಯದ ಮೇರೆಗೆ ವಿರುಪಾಪುರ ಗಡ್ಡೆಯ ಹತ್ತಿರ ತೂಗುಸೇತುವೆ ಮತ್ತು ಅನೆಗುಂದಿಯ ಹತ್ತಿರ ತಳವಾರಘಟ್ಟ ಸೇತುವೆ ನಿರ್ಮಾಣ ಕಾರ್ಯವನ್ನು ಸರ್ಕಾರ ಕೈಗೆತ್ತಿಕೊಂಡಿತು. ಸೇತುವೆ ಕೆಲಸ ಮುಗಿಯುವ ಹಂತದಲ್ಲಿರುವಾಗ ಯುನೆಸ್ಕೊದ ಅಧಿಕಾರಿಗಳು ಸೇತುವೆ ಕೆಲಸವನ್ನು ನಿಲ್ಲಿಸುವಂತೆ ಕರ್ನಾಟಕ ಸರಕಾರದ ಮೇಲೆ ಒತ್ತಡವನ್ನು ಹೇರಿದರು. ಸೇತುವೆ ನಿರ್ಮಾಣವಾದರೆ ಅದರ ಮೂಲಕ ಚಲಿಸುವ ಭಾರಿ ವಾಹನಗಳಿಂದ ಜೀರ್ಣಾವಸ್ಥೆಯಲ್ಲಿರುವ ಸ್ಮಾರಕಗಳ ಮೇಲೆ ಪರಿಣಾಮ ಬೀರಬಹುದು ಎಂಬ ಕಾರಣಕ್ಕಾಗಿ ಸೇತುವ ಕೆಲಸ ಅರ್ಧಕ್ಕೆ ನಿಂತಿದೆ.ಈ ಸೇತುವೆಗಳಾದರೆ ಜನರ ವ್ಯಾಪಾರ, ವಹಿವಾಟುಗಳು ಹೆಚ್ಚುವುದರಲ್ಲಿ ಸಂಶಯವೆ ಇಲ್ಲ. ಆದರೆ ವಿದೇಶಿ ಪ್ರವಾಸಿಗರು ಇದರಿಂದ ನೈಸರ್ಗಿಕ ಸೌಂದರ್ಯ ನಾಶವಾಗುತ್ತದೆ ಎಂದು ಅಭಿಪ್ರಾಯಪಡುತ್ತಾರೆ. ಆದರೆ ಕೆಲವರು ಇದರಿಂದ ನಾಡದೋಣಿಗೆ ಕೊಡುವ ಹಣ ಉಳಿತಾಯವಾಗುತ್ತದೆ ಮತ್ತು ನಾಡದೋಣಿಗಾಗಿ ಕಾಯುವುದು ತಪ್ಪುತ್ತದೆ ಎಂಬ ಅಭಿಪ್ರಾಯ ಹೊಂದಿದವರೂ ಇದ್ದಾರೆ.

ಹಂಪೆ ಬರುವ ಪ್ರವಾಸಿಗರಿಗೆ ಸ್ಥಳೀಯರು ನೀಡುವ ಅತಿಥ್ಯ ಮತ್ತು ವ್ಯವಹಾರಿಕ ಭಾಷೆ, ಪ್ರವಾಸಿಗರು ಹೆಚ್ಚು ಬರಲು ಸಾಧ್ಯವಾಗಿದೆ ಎಂದು ಸಂದರ್ಶನದಲ್ಲಿ ತಿಳಿದುಕೊಳ್ಳಲಾಗಿದೆ. ಪ್ರವಾಸಿಗರಿಗೆ ಒದಗಿಸುವ ಸ್ಥಳೀಯರ ಆತಿಥ್ಯ ಉತ್ತಮವಾಗಿದ್ದು ತೃಪ್ತಿಕರವಾಗಿದೆ ಎಂದು ಸಂದರ್ಶಿಸಿದ ಪ್ರವಾಸಿಗರಲ್ಲಿ 138(85.18) ಜನ ಹೇಳಿದ್ದು, 24(14.82) ಜನ ಸ್ಥಳೀಯರ ಆತಿಥ್ಯ ಸಾಧರಣವಾಗಿದೆ ಎಂದು ಆತೃಪ್ತಿಯನ್ನು ವ್ಯಕ್ತಪಡಿಸಿದ್ದಾರೆ. ಪ್ರವಾಸಿಗರು ಸ್ಥಳೀಯರು ಮಾತನಾಡುವ ಇಂಗ್ಲಿಷ್ ಭಾಷೆಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ, ಮಾತನಾಡುವ ಭಾಷೆ ಸುಲಭವಾಗಿ ಅರ್ಥವಾಗುತ್ತದೆ ಎಂದು ಹೇಳಿದವರು 147(90.74) ಜನ ಇದ್ದರೆ, ಭಾಷೆ ಅರ್ಥಮಾಡಿಕೊಳ್ಳಲು ಸ್ವಲ್ಪಮಟ್ಟಿಗೆ

[illegible]

ತೊಂದರೆಯಾಗುತ್ತದೆ ಎಂದು ಹೇಳಿದ ಪ್ರವಾಸಿಗರು 15(9.26) ಜನ ಇದ್ದಾರೆ. ಭಾರತದ ಇತರ ಪ್ರವಾಸಿ ತಾಣಗಳಲ್ಲಿ ಮಾತನಾಡುವ ಇಂಗ್ಲಿಷ್ ಭಾಷೆ ಚೆನ್ನಾಗಿದೆ ಎಂದು ಹೇಳಿದ ಪ್ರವಾಸಿಗರ ಸಂಖ್ಯೆ 98(60.49) ಇದೆ. ಭಾಷೆ ತೊಡಕಿನಿಂದ ಕೂಡಿದ್ದು, ಅರ್ಥವಾಗುವುದು ಕಷ್ಟವಾಗುತ್ತದೆಂದು ಹೇಳಿದವರು 64(39.51) ಜನ(ಕೋಷ್ಟಕ-24).

ಹಂಪೆಯು ದಟ್ಟ ಜನಸಂದಣಿಯಿಂದ, ಆಧುನಿಕ ಕಟ್ಟಡಗಳಿಂದ ಬೃಹದಾಕಾರವಾಗಿ ಬೆಳೆಯುತ್ತಿದೆ. ಈಗಾಗಲೆ ಜನರು ವಸತಿಗಾಗಿ ಸ್ಮಾರಕಗಳನ್ನು ಆಕ್ರಮಿಸಿಕೊಂಡಿದ್ದಾರೆ. ಇದು ಮುಂದುವರಿದರೆ ಸ್ಮಾರಕಗಳೆ ಕಣ್ಮರೆಯಾಗಬಹುದೆಂದು ಅರಿತ ಯುನೆಸ್ಕೊ (UNESCO), ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಹಂಪೆಯ ವಸತಿಗೃಹಗಳನ್ನು ಬೇರೆಡೆಗೆ ಸ್ಥಳಾಂತರಿಸಲು ನಿರ್ಧರಿಸಿವೆ. ಹಂಪೆಯ ಉಸ್ತುವಾರಿ ಮಾಡಲು ಹಂಪೆಯ ಪ್ರಾಧಿಕಾರ ಅಸ್ತಿತ್ವಕ್ಕೆ ಬಂದಿದೆ. ಜನರನ್ನು ಸ್ಥಳಾಂತರಿಸುವ ಪ್ರಕ್ರಿಯೆ ಪ್ರಾರಂಭವಾಗಬೇಕಿದೆ. ಸ್ಥಳೀಯರು ತಮಗೆ ವಾಸಿಸಲಿಕ್ಕೆ ಮತ್ತು ವ್ಯಾಪಾರಕ್ಕೆ ಸೂಕ್ತ ವ್ಯವಸ್ಥೆ ಮಾಡಿಕೊಡುವುದಾದಲ್ಲಿ ಸಹಕರಿಸುವ ಮನೋಭಾವ ವ್ಯಕ್ತಪಡಿಸಿದ್ದಾರೆ. ವಿದೇಶಿ ಪ್ರವಾಸಿಗರು ಹಂಪೆಯ ಗ್ರಾಮವನ್ನು ಬೇರೆಡೆಗೆ ಸ್ಥಳಾಂತರಿಸುವ ಅಗತ್ಯವಿಲ್ಲವೆಂದು ಭಾವಿಸುತ್ತಾರೆ. ವಸತಿಗೃಹ ಗಳನ್ನು ಸ್ಥಳಾಂತರಿಸುವುದರಿಂದ ಪ್ರವಾಸಿಗರಿಗೆ ಹೆಚ್ಚಿನ ಅನಾನುಕೂಲಗಳಾಗುತ್ತವೆ. ಸ್ಥಳಾಂತರಿಸುವ ಕಾರ್ಯವನ್ನು ಸರ್ಕಾರಗಳು ಕೈಬಿಡಬೇಕು ಎಂದು ತಿಳಿಸುತ್ತಾರೆ. ಇದರಿಂದ ನಮ್ಮ ದಿನನಿತ್ಯದ ಅಗತ್ಯಗಳನ್ನು ಪಡೆಯಲು ಬೇರೆಡೆಗೆ ಹೋಗಬೇಕಾಗುತ್ತದೆಂದು ಹೇಳುತ್ತಾರೆ.

ಪ್ರವಾಸಿಗರ ಸಂಖ್ಯೆಗೆ ಅನುಗುಣವಾಗಿ ಹಲವಾರು ಸೌಲಭ್ಯಗಳು ಹಂಪಿಯಲ್ಲಿ ರೂಪುಗೊಂಡಿವೆ. ಈ ಸೌಲಭ್ಯಗಳು ಪ್ರವಾಸಿಗರ ಆದ್ಯತೆಗಳನ್ನು ಗಮನದಲ್ಲಿಟ್ಟುಕೊಂಡು ರೂಪುಗೊಂಡಿವೆ ಎನ್ನಲಾಗುವುದಿಲ್ಲ. ಇದೊಂದು ರೀತಿ ಪ್ರಯೋಗಾತ್ಮಕ ನೆಲೆಯಲ್ಲಿ ರೂಪುಗೊಂಡಿವೆ. ಈ ಅಧ್ಯಾಯದಲ್ಲಿ ಈ ಕ್ರಮದಲ್ಲಿ ರೂಪುಗೊಂಡ ಸೌಲಭ್ಯಗಳು ಎಷ್ಟರ ಮಟ್ಟಿಗೆ ಪ್ರವಾಸಿಗರನ್ನು ತೃಪ್ತಿ ಪಡಿಸಿವೆ ಎನ್ನುವುದರ ವಿಶ್ಲೇಷಣೆಯನ್ನು ನೋಡಿದ್ದೇವೆ. ಬಹುತೇಕ ಸೌಲಭ್ಯಗಳ ಕುರಿತು ವಿದೇಶಿ ಪ್ರವಾಸಿಗರು ತಕ್ಕಮಟ್ಟಿನ ತೃಪ್ತಿ ವ್ಯಕ್ತಪಡಿಸಿದ್ದಾರೆ. ಆದರೆ ಕೆಲವೊಂದು ಮೂಲಭೂತ ವ್ಯವಸ್ಥೆಗಳನ್ನು ರೂಪಿಸಿಕೊಳ್ಳುವ ದೃಷ್ಟಿಯಿಂದ ಹಂಪೆ ತುಂಬಾ ಸುಧಾರಿಸಿಕೊಳ್ಳಬೇಕಾಗಿದೆ. ಹಂಪೆಯ ಪರಿಸರ ಮತ್ತು ಅದರ ಸ್ವಚ್ಚತೆ ಕುರಿತು ಪ್ರವಾಸಿಗರು ತುಂಬಾ ಖಾರವಾಗಿ ತಮ್ಮ ಅಸಮಾಧಾನವನ್ನು ವ್ಯಕ್ತ ಪಡಿಸಿದ್ದಾರೆ. ದಾರಿ ಬದಿಯಲ್ಲಿ, ರಸ್ತೆಯಲ್ಲಿ, ನದಿ ದಂಡೆಯಲ್ಲಿ, ಹೀಗೆ ಹೆಚ್ಚು ಕಡಿಮೆ ಎಲ್ಲ ಪ್ರದೇಶಗಳಲ್ಲಿನ ಗಲೀಜು, ಕಸ ಕಡ್ಡಿಗಳ ರಾಶಿ, ಮಲ ಮೂತ್ರ ಬಗ್ಗೆ ಪ್ರವಾಸಿಗರು ಸಾಕಷ್ಟು ನೊಂದು ನುಡಿದಿದ್ದಾರೆ. ಅದೇ ರೀತಿ ಸಾರಿಗೆ ಮತ್ತು ಸಂಪರ್ಕ ವ್ಯವಸ್ಥೆ ಬಗ್ಗೆ ಪ್ರವಾಸಿಗರು ಅಸಮಾಧಾನ ಸೂಚಿಸಿದ್ದಾರೆ. ಅದರಲ್ಲೂ ಹೊಸಪೇಟೆಯಿಂದ ಹಂಪಿಗೆ ತಲುಪಲು ಇರುವ ರಸ್ತೆ ಮತ್ತು ವಾಹನ ವ್ಯವಸ್ಥೆ ಬಗ್ಗೆ ಪ್ರವಾಸಿಗರು ತೃಪ್ತರಾಗಿಲ್ಲ. ಸಂಪರ್ಕ ವ್ಯವಸ್ಥೆ ಇದ್ದರೂ ಅದರ

ದುಬಾರಿ ಬೆಲೆಯಿಂದಾಗಿ ಪ್ರವಾಸಿಗರಿಗೆ ತಾವು ಮೋಸ ಹೋದ ಭಾವನೆ ಕಾಡುತ್ತಿದೆ. ಅತಿಥಿಗೃಹಗಳು ಚಿಕ್ಕದಾಗಿದ್ದು, ಸಾಕಷ್ಟು ಗಾಳಿ ಬೆಳಕಿನಿಂದ ಕೂಡಿಲ್ಲ ಎನ್ನುವುದು ಪ್ರವಾಸಿಗರ ಬಹು ದೊಡ್ಡ ದೂರು. ಅತಿಥಿ ಗೃಹಗಳ ಬಾಡಿಗೆ ಬಗ್ಗೆ ವಿಶೇಷ ಅಸಮಾಧಾನ ಇಲ್ಲ. ಆಹಾರ ಮತ್ತು ಪಾನೀಯಗಳ ಬಗ್ಗೆ ಕೂಡ ಪ್ರವಾಸಿಗರು ತೃಪ್ತಿ ವ್ಯಕ್ತಪಡಿಸಿದ್ದಾರೆ. ಹೀಗೆ ಪ್ರವಾಸಿಗರ ಬೇಡಿಕೆಗಳನ್ನು ಪೂರೈಸಲು ಸ್ಥಳೀಯರು ಆರಂಭಿಸಿದ ಉದ್ಯಮಗಳು ಹಂಪಿಯನ್ನು ಒಂದು ಉತ್ತಮ ಪ್ರವಾಸಿ ತಾಣವಾಗಿ ಪರಿವರ್ತಿಸುವಲ್ಲಿ ಮಹತ್ವದ ಪಾತ್ರ ವಹಿಸಿದೆ. ಈ ಎಲ್ಲ ಸೌಲಭ್ಯಗಳು ಸ್ಥಳೀಯ ಸಮುದಾಯಗಳ ಖಾಸಗಿ ಪ್ರಯತ್ನದಿಂದ ನಡೆದಿದೆ ಎನ್ನುವುದನ್ನು ಕೂಡ ನಾವು ಗಮನಿಸಬೇಕಾಗಿದೆ. ಇವುಗಳ ರೂಪುಗೊಳ್ಳುವಿಕೆಯಲ್ಲಿ ಸರಕಾರದ ಅಥವಾ ಸಂಘಟಿತ ವಲಯದ ಪಾತ್ರ ಏನೇನೂ ಇಲ್ಲ. ಇದೊಂದು ರೀತಿಯಲ್ಲಿ ಅನೌಪಚಾರಿಕ ಪ್ರವಾಸೋದ್ಯಮವಾಗಿ ಬೆಳೆದಿದೆ. ಇಂತಹ ಬೆಳವಣಿಗೆ ಹಂಪೆಯ ಆರ್ಥಿಕ ಮತ್ತು ಸಾಮಾಜಿಕ ವ್ಯವಸ್ಥೆಯನ್ನು ಹೇಗೆ ಪ್ರಭಾವಿಸಿದೆ ಎನ್ನುವುದರ ವಿಶ್ಲೇಷಣೆಯನ್ನು ಮುಂದಿನ ಅಧ್ಯಾಯದಲ್ಲಿ ನೋಡಬಹುದು.

ಅಡಿಟಿಪ್ಪಣಿಗಳು

01. ಪ್ರವೀಣ ಸೇಥಿ, ಟ್ಯೂರಿಸಂ ಫಾರ್ ದಿ ನೆಕ್ಸ್‌ಮಿಲೇಯಂ, ನ್ಯೂಡೆಲ್ಲಿ: ರಜತ್ ಪಬ್ಲಿಕೇಶನ್, 1999, ಪುಟ. 102
02. ಪ್ರವೀಣ ಸೇಥಿ, ಹ್ಯಾಂಡ್ ಬುಕ್ ಆಫ್ ಎಫೆಕ್ಟೀವ್ ಟ್ರಾವೆಲ್ಸ್ ಆ್ಯಂಡ್ ಟ್ಯೂರಿಸಂ, ನ್ಯೂಡೆಲ್ಲಿ: ರಜತ್ ಪಬ್ಲಿಕೇಶನ್ಸ್, 1999, ಪುಟ. 287
03. ವಿದ್ಯಾಶಂಕರ್ ಎಸ್., ಪ್ರವಾಸೋದ್ಯಮ ಹಾಗೂ ಕನ್ನಡದಲ್ಲಿ ಪ್ರವಾಸ ಸಾಹಿತ್ಯ, ಬೆಂಗಳೂರು: ಸೆಂಟರ್ ಫಾರ್ ಕನ್ನಡ ಸ್ಟಡೀಸ್, ಜ್ಞಾನ ಭಾರತಿ, 1991, ಪು.38
04. ಪ್ರವೀಣ ಸೇಥಿ, ಟ್ಯೂರಿಸಂ ಫಾರ್ ದಿ ನೆಕ್ಸ್‌ಮಿಲೇಯಂ, ಪೂರ್ವೋಕ್ತ, ಪುಟ. 291
05. ಅದೇ, ಪುಟ. 292
06. ಸಹಾಯಕ ಪೋಲಿಸ್ ಸಬ್ ಇನ್ಸ್‌ಪೆಕ್ಟರ್, ವಿದೇಶಿ ಪ್ರವಾಸಿಗರ ವಿವರ, ಹಂಪೆ : ಪೋಲಿಸ್ ಠಾಣೆ, 2001
07. ರೇಮಂಡ್ ನರೋನ್ಹಾ, ಸ್ಯೂಶಿಯಲ್ ಆ್ಯಂಡ್ ಕಲ್ಚರಲ್ ಡೈಮೆನಶನ್ ಆಫ್ ಟ್ಯೂರಿಸಂ, (ವರ್ಕಿಂಗ್ ಪೇಪರ್ ನಂಬರ್ 326)ವಾಷಿಂಗ್‌ಟನ್ ಡಿ.ಸಿ.: ವರ್ಲ್ಡ್ ಬ್ಯಾಂಕ್, 1979, ಪುಟ. 2
08. ವ್ಯವಸ್ಥಾಪಕರು, ಲೆಕ್ಕಪರಿಶೋಧನ ಪುಸ್ತಕ, ಕಮಲಾಪುರ : ಕೆ ಎಸ್‌ಟಿಡಿಸಿ ಹೋಟೆಲ್, ಮಯೂರ ಭುವನೇಶ್ವರಿ, 2001

ಕೋಷ್ಟಕ -21

ಅತಿಥಿಗೃಹಗಳ ಸೌಲಭ್ಯ ಕುರಿತ ಪ್ರವಾಸಿಗರ ಅಭಿಪ್ರಾಯಗಳು

ಕ್ರ. ಸಂ.	ವಿವರಗಳು	ಪ್ರವಾಸಿಗರ ಅಭಿಪ್ರಾಯ					
		ತೃಪ್ತಿಕರ		ತೃಪ್ತಿಕರವಾಗಿಲ್ಲ		ಒಟ್ಟು	
		ಸಂಖ್ಯೆ	ಶೇಕಡವಾರು	ಸಂಖ್ಯೆ	ಶೇಕಡವಾರು	ಸಂಖ್ಯೆ	ಶೇಕಡವಾರು
1.	ಕೊಠಡಿಗಳು (ಗಾಳಿ, ಬೆಳಕು)	68	42.00	94	58.00	162	100
2.	ಸ್ವಚ್ಛತೆ	105	64.81	57	35.19	162	100
3.	ದರಗಳು	134	82.72	28	17.28	162	100

ಮೂಲ : ಪ್ರಾಥಮಿಕ ಮಾಹಿತಿ

ಕೋಷ್ಟಕ -22

ರೆಸ್ಟೋರೆಂಟ್‌ಗಳ ಸೌಲಭ್ಯ ಮತ್ತು ಇತರ ವಸ್ತುಗಳ ದರಗಳ ಕುರಿತ ಪ್ರವಾಸಿಗರ ಅಭಿಪ್ರಾಯಗಳು

ಕ್ರ. ಸಂ.	ವಿವರಗಳು	ಪ್ರವಾಸಿಗರ ಅಭಿಪ್ರಾಯ					
		ತೃಪ್ತಿಕರ		ತೃಪ್ತಿಕರವಾಗಿಲ್ಲ		ಒಟ್ಟು	
		ಸಂಖ್ಯೆ	ಶೇಕಡವಾರು	ಸಂಖ್ಯೆ	ಶೇಕಡವಾರು	ಸಂಖ್ಯೆ	ಶೇಕಡವಾರು
I.	1. ಆಹಾರ	122	75.31	40	24.69	162	100
	2. ಸ್ವಚ್ಛತೆ	140	86.42	22	13.58	162	100
	3. ದರಗಳು	154	95.06	08	04.94	162	100
II	ಇತರೆ ದಿನನಿತ್ಯದ ವಸ್ತುಗಳು ದರಗಳು	135	83.33	27	16.67	162	162

ಮೂಲ : ಪ್ರಾಥಮಿಕ ಮಾಹಿತಿ

[illegible]

[illegible]

ಕೋಷ್ಟಕ -23
ಸಾರಿಗೆ ಸಂಪರ್ಕ ಹಾಗೂ ಇತರೆ ಸೇವಾ ಸೌಲಭ್ಯಗಳು ಕುರಿತ ಪ್ರವಾಸಿಗರ ಅಭಿಪ್ರಾಯಗಳು

ಕ್ರ. ಸಂ.	ವಿವರಗಳು	ಪ್ರವಾಸಿಗರ ಅಭಿಪ್ರಾಯ					
		ತೃಪ್ತಿಕರ		ತೃಪ್ತಿಕರವಾಗಿಲ್ಲ		ಒಟ್ಟು	
		ಸಂಖ್ಯೆ	ಶೇಕಡವಾರು	ಸಂಖ್ಯೆ	ಶೇಕಡವಾರು	ಸಂಖ್ಯೆ	ಶೇಕಡವಾರು
01	ಪ್ರಯಾಣದ ಸೌಲಭ್ಯಗಳು	112	69.13	50	30.87	162	100
02	ಪ್ರಯಾಣದ ದರಗಳು	133	82.10	29	17.90	162	100
03	ಇಂಟರ್‌ನೆಟ್ ಸೌಲಭ್ಯ ಮತ್ತು ದರಗಳು	25	15.43	137	84.57	162	100
04	ಹಣದ ವಿನಿಮಯ ಮತ್ತು ಟ್ರಾವೆಲರ್ಸ್ ಹೌಸ್‌ಗಳ ಸೌಲಭ್ಯ ಮತ್ತು ಕಮೀಷನ್ ದರಗಳು	120	70.07	42	25.93	162	100
05	ಐತಿಹಾಸಿಕ ಸ್ಮಾರಕಗಳ ಪ್ರವೇಶ ದರಗಳು	17	10.49	145	89.51	162	100
06	ಪ್ರವಾಸಿ ಮಾರ್ಗದರ್ಶಿಗಳ ಸೇವೆ ಮತ್ತು ದರಗಳು	158	97.53	04	2.47	162	100

ಮೂಲ : ಪ್ರಾಥಮಿಕ ಮಾಹಿತಿ

ಕೋಷ್ಟಕ -24

ಸ್ಥಳೀಯರ ಅತಿಥ್ಯ, ಭಾಷೆ, ರಕ್ಷಣಾ ವ್ಯವಸ್ಥೆ, ವೈದ್ಯಕೀಯ ಸೌಲಭ್ಯದ ಕುರಿತ ಪ್ರವಾಸಿಗರ ಅಭಿಪ್ರಾಯಗಳು

ಕ್ರ. ಸಂ.	ವಿವರಗಳು	ಪ್ರವಾಸಿಗರ ಅಭಿಪ್ರಾಯ					
		ತೃಪ್ತಿಕರ		ತೃಪ್ತಿಕರವಾಗಿಲ್ಲ		ಒಟ್ಟು	
		ಸಂಖ್ಯೆ	ಶೇಕಡವಾರು	ಸಂಖ್ಯೆ	ಶೇಕಡವಾರು	ಸಂಖ್ಯೆ	ಶೇಕಡವಾರು
01	ಸ್ಥಳೀಯರ ಅತಿಥ್ಯ	138	85.18	24	14.82	162	100
02	ಸ್ಥಳೀಯರ ಇಂಗ್ಲಿಶ್ ಭಾಷೆ	147	90.74	15	09.26	162	100
03	ಸ್ಥಳೀಯ ರಕ್ಷಣೆ ವ್ಯವಸ್ಥೆ (ಪೋಲಿಸ್ ವ್ಯವಸ್ಥೆ)	70	43.21	92	56.79	162	100
04	ವೈದ್ಯಕೀಯ ಸೌಲಭ್ಯ	04	80.00	01	20.00	05	100
05	ಭಾರತದ ಇತರ ಪ್ರವಾಸಿ ತಾಣಗಳ ಇಂಗ್ಲಿಶ್ ಭಾಷೆಯ ಬಗ್ಗೆ	98	60.49	64	39.51	162	100

ಸೂಚನೆ : ಸಂದರ್ಶಿಸಿದ 162 ಜನ ಪ್ರವಾಸಿಗರಲ್ಲಿ 5 ಜನ ಪ್ರವಾಸಿಗರು ಅನಾರೋಗ್ಯಕ್ಕೆ ಬಲಿಯಾಗಿದ್ದು, ಸ್ಥಳೀಯ ವೈದ್ಯಕೀಯ ಸೇವೆಯನ್ನು ಪಡೆದವರಿದ್ದಾರೆ. ಅದ್ದರಿಂದ ವೈದ್ಯಕೀಯ ಸೇವೆಯ ಬಗ್ಗೆ ಅವರ ಅಭಿಪ್ರಾಯಗಳನ್ನು ಮಾತ್ರ ಪರಿಗಣಿಸಲಾಗಿದೆ.

ಮೂಲ : ಪ್ರಾಥಮಿಕ ಮಾಹಿತಿ

ಅಧ್ಯಾಯ 5

ಪ್ರವಾಸೋದ್ಯಮ ಮತ್ತು ಆರ್ಥಿಕ ಪರಿವರ್ತನೆಗಳು

ಪ್ರವಾಸೋದ್ಯಮದಿಂದಾದ ಆರ್ಥಿಕ ಪರಿವರ್ತನೆಗಳನ್ನು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಹಂಪೆಗೆ ಬರುವ ಪ್ರವಾಸಿಗರಿಗೆ ಸ್ಥಳೀಯರು ವಿವಿಧ ಬಗೆಯ ಸೇವಾ ಸೌಲಭ್ಯಗಳನ್ನು ಒದಗಿಸುತ್ತಿದ್ದಾರೆ. ಅವುಗಳಲ್ಲಿ ಆಹಾರ, ವಸತಿ ವ್ಯವಸ್ಥೆ, ಸಾರಿಗೆ, ಸಂಪರ್ಕ ಹಾಗೂ ಇತರೆ ಅವಶ್ಯಕ ಸೌಲಭ್ಯಗಳು ಸೇರಿವೆ. ಗ್ರಾಮದ ಅರ್ಧಕ್ಕಿಂತ ಹೆಚ್ಚು ಕುಟುಂಬಗಳು ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಇದರ ಜತೆಗೆ ಎಲ್ಲ ಹಳ್ಳಿಯಂತೆ ಹಂಪೆಯಲ್ಲಿ ಕೂಡ ಕೃಷಿ ಮತ್ತು ಕೃಷಿಗೆ ಸಂಬಂಧಿತ ಇತರ ಚಟುವಟಿಕೆಗಳು ಇವೆ. ಕೃಷಿ ಕೂಲಿಗೆ ದುಡಿಯುವ ಕೆಲವು ಕುಟುಂಬಗಳಿವೆ. ಆದರೆ ಇಂತಹ ಕುಟುಂಬಗಳ ಸಂಖ್ಯೆ ಪ್ರತಿವರ್ಷ ಕಡಿಮೆಯಾಗುತ್ತಿದೆ. ಕೃಷಿಕೂಲಿಗಿಂತ ಹೆಚ್ಚಿನ ಆದಾಯವನ್ನು ತರುವ ಪ್ರವಾಸೋದ್ಯಮದ ಚಟುವಟಿಕೆಗಳಿಗೆ ಈ ಕುಟುಂಬಗಳು ಪರಿವರ್ತನೆಗೊಂಡಿವೆ. ಕೃಷಿಕರು ನಿಧಾನವಾಗಿ ಪ್ರವಾಸೋದ್ಯಮದ ಚಟುವಟಿಕೆಗಳಲ್ಲಿ ಆಸಕ್ತಿ ತೋರಿಸುತ್ತಿದ್ದಾರೆ. ಈ ಪ್ರದೇಶದ ಬೇರೆ ಹಳ್ಳಿಗಳಿಗೆ ಹೋಲಿಸಿದರೆ ಹಂಪೆ ಮೇಲ್ನೋಟಕ್ಕೆ ತುಂಬಾ ಬದಲಾಗಿರುವುದು ಕಾಣುತ್ತದೆ. ಅಂದ ಮಾತ್ರಕ್ಕೆ ಪ್ರವಾಸೋದ್ಯಮ ಹಂಪೆಯ ಎಲ್ಲ ಕುಟುಂಬಗಳನ್ನು ಉದ್ಧಾರ ಮಾಡಿದೆ ಎನ್ನುವ ತೀರ್ಮಾನಕ್ಕೆ ಬರುವುದು ಕಷ್ಟ. ಆ ತೀರ್ಮಾನಕ್ಕೆ ಬರಬೇಕಾದರೆ ಒಟ್ಟು ಗ್ರಾಮದ ಹಾಗೂ ಪ್ರತಿ ಕುಟುಂಬದ ಆರ್ಥಿಕ ಪ್ರಗತಿಯ ತಿಳುವಳಿಕೆ ಅಗತ್ಯ. ಅದನ್ನು ಗುರುತಿಸಲು ಏಳು ಸೂಚ್ಯಂಕಗಳನ್ನು ಬಳಸಲಾಗಿದೆ. ಅವೆಂದರೆ- ಮೂಲಭೂತ ಸೌಲಭ್ಯಗಳ ಪೂರೈಕೆ, ವೃತ್ತಿ ರಚನೆಯಲ್ಲಿನ ಬದಲಾವಣೆ, ತಲಾ ವರಮಾನ, ಕುಟುಂಬದ ಸಂಪನ್ಮೂಲ ಸ್ಥಿತಿ, ಭೂ ಹಿಡುವಳಿಯ ಪ್ರಮಾಣ, ಗ್ರಾಮ ಪಂಚಾಯತಿ ಆದಾಯ ಮತ್ತು ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳ ಸಂಖ್ಯೆ. ಈ ಅಧ್ಯಾಯದ ವಿವರಣೆ ಎರಡು ಭಾಗದಲ್ಲಿದೆ. ಪ್ರವಾಸೋದ್ಯಮದ ವಿವಿಧ ಹಂತಗಳು ಮತ್ತು ಅದು ತರುವ ಆರ್ಥಿಕ ಪರಿವರ್ತನೆಯ ತಾತ್ವಿಕ ಚರ್ಚೆಯ ಕಿರು ಪರಿಚಯವನ್ನು ಭಾಗ ಒಂದರಲ್ಲಿ ಮಾಡಲಾಗಿದ್ದು, ಹಂಪೆಯಲ್ಲಿ ಪ್ರವಾಸೋದ್ಯಮದಿಂದ ಆದ ಆರ್ಥಿಕ ಪರಿವರ್ತನೆಯನ್ನು ಭಾಗ ಎರಡರಲ್ಲಿ ವಿಶ್ಲೇಷಿಸಲಾಗಿದೆ.

ಭಾಗ 1

ಪೊರಸ್ಪರ್, ಕೋಹಿನ್ ಮತ್ತು ಗ್ರೀನವುಡ್ ಪ್ರವಾಸೋದ್ಯಮದ ಬೆಳವಣಿಗೆ ಮೂರು ಹಂತಗಳನ್ನು ಒಳಗೊಂಡಿದೆ ಎಂದು ಗುರುತಿಸಿದ್ದಾರೆ. ಈ ಹಂತಗಳು ಪ್ರವಾಸಿಗರ ಮತ್ತು ಅತಿಥೇಯರ ನಡುವಿನ ಪರಸ್ಪರ ತಿಳುವಳಿಕೆ ಮತ್ತು ಹೊಂದಿಕೊಂಡುಹೋಗುವ ಸಂಬಂಧಗಳನ್ನು ವಿವರಿಸುತ್ತವೆ. ಪ್ರತಿಯೊಂದು ಹಂತದಲ್ಲಿಯೂ ಪ್ರವಾಸಿಗರಿಂದ ಅತಿಥೇಯರ ಮೇಲೆ, ಅತಿಥಿಯರಿಂದ ಪ್ರವಾಸಿಗರ

ಮೇಲೆ ಆಗಿರುವ ಬದಲಾವಣೆ ಮತ್ತು ಪರಿಣಾಮಗಳನ್ನು ಕಂಡುಕೊಳ್ಳಬಹುದಾಗಿದೆ. ವಿವಿಧ ಅಭಿವೃದ್ಧಿ ಹಂತಗಳಲ್ಲಿ ಆಗುವ ಬದಲಾವಣೆಗಳು ಪ್ರವಾಸಿಗರ ಮತ್ತು ಅತಿಥೇಯರ ಸ್ವಭಾವ,ನಡೆ-ನುಡಿ, ಅವರ ಆದ್ಯತೆಗೆ ತಕ್ಕಂತೆ ನೀಡುವ ಸೇವಾ ಸೌಲಭ್ಯಗಳು ಸಂಬಂಧಗಳನ್ನು ಸ್ಪಷ್ಟಪಡಿಸುತ್ತವೆ. ಇವು ಅವುಗಳಿಗೆ ಪೂರಕವಾಗುವ ಪರಿಸರವನ್ನು ರೂಪಿಸುತ್ತವೆ. ಪ್ರವಾಸೋದ್ಯಮದ ಅಭಿವೃದ್ಧಿ ಹಂತವನ್ನು ಸ್ಥೂಲವಾಗಿ ಹೇಳುವುದಾದಲ್ಲಿ ಮೊದಲನೆಯದು ಹೊಸ ಪ್ರವಾಸಿ ತಾಣಗಳನ್ನು ಕಂಡುಕೊಳ್ಳುವ ಪರಿಶೋಧನಾ (Discovery Stage) ಹಂತ. ಎರಡನೆಯ ಹಂತ ಸ್ಥಳೀಯರ ಪ್ರತಿಕ್ರಿಯೆ ಮತ್ತು ಭಾಗವಹಿಸುವಿಕೆಗೆ (Local Response and Initiative) ಸಂಬಂಧಿಸಿದೆ. ಪ್ರವಾಸಿತಾಣ ಬೆಳೆದು ಆಕರ್ಷಣೆ ಹೊಂದುವ ಮೂಲಕ ಹೆಚ್ಚಿನ ಪ್ರವಾಸಿಗರನ್ನು ಬರಮಾಡಿಕೊಳ್ಳುತ್ತದೆ. ಬರುವ ಪ್ರವಾಸಿಗರಿಗೆ ಈ ಹಂತದಲ್ಲಿ ಸ್ಥಳೀಯರು ಹೇಗೆ ಸೇವಾ ಸೌಲಭ್ಯಗಳನ್ನು ಒದಗಿಸಲು ಮುಂದಾಗುತ್ತಾರೆನ್ನುವುದನ್ನು ಈ ಹಂತದಲ್ಲಿ ಕಂಡುಕೊಳ್ಳಬಹುದು. ಮೂರನೆಯ ಹಂತ ಪ್ರವಾಸೋದ್ಯಮ ಸಾಂಸ್ಥೀಕರಣ (Institutionalised) ಗೊಳ್ಳುವುದನ್ನು ವಿವರಿಸುತ್ತದೆ. ಇಲ್ಲಿ ಪ್ರವಾಸೋದ್ಯಮ ಆಧುನಿಕ ಸೇವಾ ಸೌಲಭ್ಯಗಳನ್ನು ಹೊಂದಿರುತ್ತವೆ. ಈ ಹಂತದಲ್ಲಿ ಪ್ರವಾಸಿಗರ ಬೇಡಿಕೆಗಳನ್ನು ಪೂರೈಸಲು ಸುಸ್ಥಿತ ಮತ್ತು ಸಂಘಟಿತ ವಲಯವು ಅಸ್ತಿತ್ವಕ್ಕೆ ಬರುತ್ತದೆ.[1] ಹಂಪೆಯ ಪ್ರವಾಸೋದ್ಯಮದ ಬೆಳವಣಿಗೆ ಈ ಹಂತಗಳನ್ನು ಹೇಗೆ ಕ್ರಮಿಸಿದೆ ಎನ್ನುವುದರ ವಿಶ್ಲೇಷಣೆ ಮುಂದೆ ಮಾಡಲಾಗಿದೆ.

ಪರಿಶೋಧನಾ ಹಂತ

ಕೆಲ ಧೈರ್ಯಶಾಲಿ ಪ್ರವಾಸಿಗರು, ತಾವು ಪ್ರವಾಸ ಮಾಡಬಯಸುವ ಹೊಸ ತಾಣಗಳನ್ನು ಕಂಡುಕೊಳ್ಳುವ ಮೂಲಕ ಪ್ರವಾಸ ಕೈಗೊಳ್ಳುವುದನ್ನು ಈ ಹಂತ ವಿವರಿಸುತ್ತದೆ. ಇಂತಹ ಹೊಸ ಪ್ರವಾಸಿ ತಾಣಗಳಿಗೆ ಬರುವ ಪ್ರವಾಸಿಗರಲ್ಲಿ ಪರಿಶೋಧಕರು(ಅನ್ವೇಷಕರು) ಖಾಯಂ ಪ್ರವಾಸಿಗರು, ವಲಸೆ ಹೋಗುವವರು ಮತ್ತು ಗೊತ್ತುಗುರಿ ಇಲ್ಲದ ಪ್ರವಾಸಿಗರು ಇರುತ್ತಾರೆ.[2] ಇವರು ಅನುಸರಿಸುವ ಪ್ರವಾಸದ ರೀತಿಗಳು ಭಿನ್ನವಾಗಿರುತ್ತವೆ. ಅವುಗಳನ್ನು ಬಿಡುವಿನ ಪ್ರವಾಸ, ಪರಿಶೋಧನಾ ಪ್ರವಾಸ, ವಿವಿಧ ಉದ್ದೇಶಿತ ಪ್ರವಾಸಗಳೆಂದು ಗುರುತಿಸಲಾಗಿದೆ. ವಿವಿಧ ಉದ್ದೇಶಿತ ಪ್ರವಾಸವನ್ನು ಸಮಯ ಕಳೆಯಲಿಕ್ಕೆ ಮಾಡುವಂಥ ಪರಿಶೋಧನಾ ಪ್ರವಾಸ ಮತ್ತು ಬೇರೆ ಬೇರೆ ಉದ್ದೇಶಗಳಿಗಾಗಿ ಬಹು ಪ್ರದೇಶಗಳನ್ನು ಸುತ್ತುವ ಪ್ರವಾಸ ಒಳಗೊಂಡಿರುತ್ತದೆ.[3] ಅನ್ವೇಷಣೆಯ ಈ ಹಂತದಲ್ಲಿ ಪ್ರವಾಸಿಗರ ಮತ್ತು ಅತಿಥೇಯರ ಸಂಧಿಸುವಿಕೆ ಮುಖಾಮುಖಿಯಾಗಿರುತ್ತದೆ. ಈ ಹಂತದಲ್ಲಿ ಪ್ರವಾಸಿಗರು ಅತಿಥೇಯರಿಗೆ ಹೊಂದಿಕೊಂಡು, ಅವರು ಒದಗಿಸುವ ಸೌಲಭ್ಯಗಳಿಂದ ತೃಪ್ತಿಪಡೆಯುತ್ತಾರೆ. ಅತಿಥೇಯರು ಪ್ರವಾಸಿಗರನ್ನು ಸ್ವಾಗತಿಸಿ, ಅವರಿಗೆ ಮೊದಲ ಆದ್ಯತೆ ನೀಡುತ್ತಾರೆ. ಇಲ್ಲಿ

ಪ್ರವಾಸೋದ್ಯಮದ ಪ್ರಭಾವವು ಆ ಪ್ರದೇಶದ ಜನಸಾಂದ್ರತೆ ಮತ್ತು ಸಂಪನ್ಮೂಲಗಳ ಮೇಲೆ ಅವಲಂಬಿತವಾಗಿರುತ್ತದೆ.

ಸ್ಥಳೀಯರ ಪ್ರತಿಕ್ರಿಯೆ ಮತ್ತು ಮುಂದಾಗುವಿಕೆ

ಎರಡನೆಯ ಹಂತದಲ್ಲಿ ಪ್ರವಾಸಿ ತಾಣವು ಹೆಚ್ಚಿನ ಸಂಖ್ಯೆಯ ಪ್ರವಾಸಿಗರನ್ನು ಆಕರ್ಷಿಸುತ್ತದೆ. ಬರುವ ಪ್ರವಾಸಿಗರ ಸಂಖ್ಯೆಯಲ್ಲಿ ಕೂಡ ಹೆಚ್ಚಳವಾಗುತ್ತದೆ. ಸ್ಥಳೀಯರು ಪ್ರವಾಸಿಗರಿಗೆ ಸೇವಾ ಸೌಲಭ್ಯಗಳನ್ನು ಒದಗಿಸಲು ಮುಂದಾಗುತ್ತಾರೆ. ಈ ಹಂತದಲ್ಲಿಯೂ ಮೊದಲನೆಯ ಹಂತದ ಮಾದರಿಯ ಪ್ರವಾಸಿಗರೆ ಇರುತ್ತಾರೆ. ಪ್ರವಾಸಿಗರ ಮತ್ತು ಅತಿಥೇಯರ ಸಂಬಂಧಗಳು ಮೊದಲಿನ ಹಂತದಲ್ಲಿರುವಂತೆಯೆ ಸ್ನೇಹ ಪ್ರೀತಿಯಿಂದ ಕೂಡಿರುತ್ತವೆ. ಇಲ್ಲಿ ಪ್ರವಾಸೋದ್ಯಮದ ಆಗುಹೋಗುಗಳನ್ನು ಸ್ಥಳೀಯರೆ ನಿರ್ಧರಿಸುತ್ತಾರೆ. ಈ ಹಂತದಲ್ಲಿ ಸ್ಥಳೀಯ ಸಂಪನ್ಮೂಲಗಳನ್ನು ಬಳಸಿಕೊಂಡು ಪ್ರವಾಸಿಗರ ಬೇಡಿಕೆಗಳನ್ನು ಈಡೇರಿಸಲು, ವಾಸಿಸುವ ಮನೆಗಳನ್ನು ಭಾಗಶಃ ಪರಿವರ್ತಿಸಿ ಅತಿಥಿಗೃಹ, ರೆಸ್ಟೋರೆಂಟ್‌ಗಳನ್ನು ಸ್ಥಾಪಿಸುವುದು ಇತ್ಯಾದಿ ಒಳಗೊಂಡಿರುತ್ತದೆ. ಅತಿಥೇಯರು ಪ್ರವಾಸಿಗರಿಗೆ ಅನುಕೂಲ ಮಾಡಿಕೊಡಲು ರೀಫ್ರಿಜರೇಟರ್, ಫ್ಲೆಷ್‌ಟಾಯಿಲೆಟ್, ರೆಸಾರ್ಟ್, ಮೋಟಾರ್‌ಬೋಟ್ ಮುಂತಾದವುಗಳನ್ನು ಒದಗಿಸಲು ಮುಂದಾಗುತ್ತಾರೆ. ಪ್ರವಾಸಿಗರು ಅತಿಥೇಯರಿಗೆ ಹೊಂದಿಕೊಂಡಂತೆ ಅತಿಥೇಯರು ಪ್ರವಾಸಿಗರಿಗೆ ಹೊಂದಿಕೊಳ್ಳುವುದು ಹೆಚ್ಚು ಪ್ರಾಮುಖ್ಯತೆ ಪಡೆಯುತ್ತದೆ. ಮೊದಲನೆಯ ಹಂತದಿಂದ ಎರಡನೆಯ ಹಂತಕ್ಕೆ ಸ್ಥಿತ್ಯಂತರಗೊಳ್ಳುವ ಸಂದರ್ಭದಲ್ಲಿ ಆಗುವ ಸ್ಥಳೀಯ ಬದಲಾವಣೆಗಳೆಂದರೆ, ಸ್ಥಳೀಯ ಸಂಘಟನಾಕಾರರು ಅಥವಾ ವಲಸೆ ಬಂದು ಸ್ಥಳೀಯವಾಗಿ ವಾಸವಾಗಿರುವವರು ಉದ್ಯಮದಲ್ಲಿ ತೊಡಗಿಸಿಕೊಳ್ಳುವುದಕ್ಕೆ ಸಾಧ್ಯವಾಗುವುದು.

ಪ್ರವಾಸಿಗರ ಮತ್ತು ಅತಿಥೇಯರ ನಡುವಿನ ಅಗತ್ಯ ಸಂಪರ್ಕ ಮತ್ತು ಪರಸ್ಪರ ಹೊಂದಾಣಿಕೆಗಳ ಪರಿಣಾಮಗಳು ಅತಿಥೇಯ ಜನಸಂಖ್ಯೆಯ ಮೇಲಾಗುತ್ತದೆ. ಇದರಿಂದ ಪ್ರವಾಸಿಗರ (ಅತಿಥಿಗಳ) ಅನುಕರಣೆಗೊಳಗಾಗುವುದು, ಜೀವನ ಶೈಲಿಯಲ್ಲಿ ಬದಲಾವಣೆಯಾಗುವುದು ಮೊದಲಾದ ಪರಿವರ್ತನೆಗಳು ಉಂಟಾಗುತ್ತವೆ. ಅತಿಥೇಯರು ತಮ್ಮ ಕುಟುಂಬದ ಸಂಪನ್ಮೂಲ ಹೆಚ್ಚಿದಂತೆಲ್ಲ ಬಯಕೆ(ಮೌಲ್ಯ)ಗಳನ್ನು ತೃಪ್ತಿಪಡಿಸಿಕೊಳ್ಳಲು ತಮ್ಮ ಸಂಪನ್ಮೂಲಗಳನ್ನು ಪುನರ್ ಪರಿಶೀಲನೆಗೆ ಒಳಪಡಿಸುತ್ತಾರೆ. ಇದರ ಪರಿಣಾಮವಾಗಿ ಅತಿಥೇಯರು ಉತ್ತಮ ಶಿಕ್ಷಣವನ್ನು ಪಡೆಯಲು ಬಯಸುವುದು, ಇತರ ಸಂಸ್ಕೃತಿಗಳ ಬಗ್ಗೆ ತಾಳ್ಮೆ ಮತ್ತು ವಿಶಾಲ ಮನೋಭಾವನೆ ಹೊಂದುವುದು ಹೆಚ್ಚಾಗುತ್ತದೆ. ವಿವಿಧ ಉದ್ಯೋಗಗಳಲ್ಲಿ ತೊಡಗಿಸಿಕೊಳ್ಳುವುದರಿಂದ ಉದ್ಯೋಗಿಗಳ ಸಂಖ್ಯೆಯಲ್ಲಿ

[illegible]

[illegible]

[illegible]

[illegible]

ಕೂಡ ಹೆಚ್ಚಳ ಉಂಟಾಗುತ್ತದೆ. ಜೀವನ ಮಟ್ಟದಲ್ಲಿನ ಹೆಚ್ಚಳ, ಪ್ರವಾಸೋದ್ಯಮ ತಾಣದಿಂದ ಹೊರಗಿನ ಜಗತ್ತಿನ ಸಂಪರ್ಕ ಮೊದಲಾದ ಬದಲಾವಣೆಗಳು ಕಂಡುಬರುತ್ತವೆ.

ಪ್ರವಾಸಿಗರ ಸಂಖ್ಯೆಯು ಹೆಚ್ಚಾದಂತೆ ಅತಿಥೇಯರ ಮನೋಭಾವವು ಪ್ರವಾಸಿಗರ ಬಗ್ಗೆ ನಿಧಾನವಾಗಿ ಬದಲಾಗುತ್ತದೆ, ಔದಾರ್ಯದಿಂದ ಔದಸೀನತೆಯ ಕಡೆಗೆ ವಾಲುತ್ತದೆ.[4] ಎರಡನೆಯ ಹಂತದ ಕೊನೆಯಲ್ಲಿ ಪ್ರವಾಸಿಗರ ಮತ್ತು ಅತಿಥೇಯರ ಸಂಪರ್ಕಗಳು ಔಪಚಾರಿಕ ಮತ್ತು ಅವೈಯಕ್ತಿಕವಾಗಿ ಬೆಳೆಯುತ್ತವೆ. ಪ್ರವಾಸಿ ತಾಣವು ಬೆಳೆದಂತೆಲ್ಲ ಪ್ರವಾಸೋದ್ಯಮದ ಆದಾಯಗಳಿಕೆಗಳು ಹೆಚ್ಚುತ್ತವೆ. ಆದರೆ ಸ್ಥಳೀಯ ಆಡಳಿತ, ಸಾಂಸ್ಥಿಕ ಮತ್ತು ಆರ್ಥಿಕ ಸಂಪನ್ಮೂಲಗಳು ಹೆಚ್ಚು ಸಂಖ್ಯೆಯಲ್ಲಿ ಬರುವ ಪ್ರವಾಸಿಗರಿಗೆ ಸೇವಾ ಸೌಲಭ್ಯಗಳನ್ನು ಒದಗಿಸಲಾಗದೆ ಹೋಗುತ್ತವೆ. ಪ್ರವಾಸಿಗರ ಸೇವಾ ಸೌಲಭ್ಯಗಳಲ್ಲಿ ಕೊರತೆ ಸರಿದೂಗಿಸಲು ಹೊರಗಿನವರನ್ನು ಅವಲಂಬಿಸುವುದು ಅನಿವಾರ್ಯವಾಗುತ್ತದೆ. ಪ್ರವಾಸೋದ್ಯಮದ ತಾಣಗಳು ಈ ಹಂತದಲ್ಲಿ ಮೂರನೆಯ ಹಂತಕ್ಕೆ ದಾಪುಗಾಲಿಡಲು ಸಿದ್ಧವಾಗುತ್ತವೆ.

ಸಾಂಸ್ಥೀಕರಣ

ಅತಿ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರು ಪ್ರವಾಸಿ ತಾಣಕ್ಕೆ ಬರುವುದೆ ಸಾಂಸ್ಥೀಕರಣವೆಂದು ಅರ್ಥೈಯಿಸಲಾಗುತ್ತದೆ. ಸಾಂಸ್ಥೀಕರಣವು ಪಾಶ್ಚಾತ್ಯ ಮಾದರಿಯ ಹೋಟೆಲ್‌ಗಳು,ಪ್ಯಾಕೇಜ್ ಟೂರುಗಳನ್ನು ಹೊಂದಿರುತ್ತದೆ, ಹಾಗೂ ಪ್ರವಾಸಿಗರಿಗೆ ಉತ್ತಮ ಸೇವಾ ಸೌಲಭ್ಯಗಳನ್ನು ಒದಗಿಸುವುದಾಗಿದೆ. ಇಲ್ಲಿ ಪ್ರವಾಸಿಗರ ಮತ್ತು ಅತಿಥೇಯರ ಸಂಪರ್ಕಗಳು ಕೇವಲ ಔಪಚಾರಿಕ ವಾಗಿರುತ್ತದೆ. ಪ್ರವಾಸೋದ್ಯಮದ ಅಭಿವೃದ್ಧಿಯಲ್ಲಿ ಸ್ಥಳೀಯರು ಹೊಂದಿದ್ದ ನಿಯಂತ್ರಣ ಕಳೆದುಕೊಳ್ಳುತ್ತಾರೆ. ಅಭಿವೃದ್ಧಿಯ ಆರ್ಥಿಕ ಸಹಾಯಕ್ಕಾಗಿ ಪ್ರವಾಸಿತಾಣದ ಹೊರಗಿನ ವ್ಯಕ್ತಿ ಮತ್ತು ಗುಂಪುಗಳನ್ನು ಅವಲಂಬಿಸುವುದು ಹೆಚ್ಚುತ್ತದೆ. ಸ್ಥಳೀಯರ ದೃಷ್ಟಿಯಲ್ಲಿ ಸಾಂಸ್ಥಿಕ ಹಂತವೆಂದರೆ ಹೊರಗಿನವರು ಸೇವಾ ಸೌಲಭ್ಯಗಳನ್ನು ಒದಗಿಸುವುದಾಗಿದೆ. ರಾಷ್ಟ್ರೀಯರಾಗಿರಲಿ, ವಿದೇಶಿಯ ರಾಗಿರಲಿ ಪ್ರವಾಸೋದ್ಯಮದ ಅಭಿವೃದ್ಧಿಯಲ್ಲಿ ತೊಡಗಿಸಿ ಕೊಳ್ಳುವುದಾಗಿದೆ.

ಸಾಂಸ್ಥಿಕ ಹಂತದ ಪ್ರವಾಸೋದ್ಯಮ ಅಭಿವೃದ್ಧಿಯಲ್ಲಿ ಪ್ರವಾಸಿ ತಾಣಗಳ ಪ್ರಾಧಿಕಾರಗಳು ಅಥವಾ ಆರ್ಥಿಕ ಕೂಟಗಳ ಮೂಲಕ ರಾಷ್ಟ್ರೀಯ ಸರ್ಕಾರಗಳು ಪಾಲ್ಗೊಳ್ಳುತ್ತವೆ. ತಮ್ಮ ಪಾಲುಗೊಳ್ಳುವಿಕೆಗೆ ಸರ್ಕಾರಗಳು ನೀಡುವ ಕಾರಣಗಳೆಂದರೆ, ಪ್ರವಾಸಿಗರ ಸಂಖ್ಯೆಯ ಏರಿಕೆಗೆ ತಕ್ಕಂತೆ ಸ್ಥಳೀಯ ಸಂಪನ್ಮೂಲಗಳು ಪೂರೈಕೆಯಾಗದಿರುವುದು, ಸೌಲಭ್ಯಗಳಲ್ಲಿ ಉತ್ತಮ ಗುಣಮಟ್ಟ ಇಲ್ಲದಿರುವುದೆ ಆಗಿದೆ ಎಂಬುದು. ಹಾಗಾಗಿ ಪ್ರವಾಸೋದ್ಯಮದ ಅಭಿವೃದ್ಧಿಯಲ್ಲಿ ಎಲ್ಲಾ ರೀತಿಯ ನಿಯಂತ್ರಣ ಮತ್ತು ಯೋಜನೆಗಳು - ಎರಡು ಬಗೆಯ ಅವಶ್ಯಕತೆಗಳು ಎಂದು ಭಾವಿಸಲಾಗಿದೆ.

ಪ್ರವಾಸೋದ್ಯಮವನ್ನು ಬೆಳೆಸಲು ಪ್ರವಾಸೋದ್ಯಮದ ತಾಣಗಳಲ್ಲಿ ಹಣಕಾಸಿನ ಸಂಪನ್ಮೂಲಗಳ ಕೊರತೆ,ಕುಶಲ ವ್ಯವಸ್ಥಾಪಕರಿಲ್ಲದಿರುವುದು ಮತ್ತು ಕೊನೆಯದಾಗಿ ಪ್ರವಾಸಿಗರ ಬೇಡಿಕೆಗಳನ್ನು ತೃಪ್ತಿಪಡಿಸಲು ಸ್ಥಳೀಯ ಸಂಪನ್ಮೂಲಗಳಲ್ಲಿರುವ ಕೊರತೆ ತುಂಬಿಸಲು ಆದ್ಯತೆ ನೀಡಲಾಗುತ್ತದೆ. ಇವುಗಳಿಗಿಂತ ವಿದೇಶಿ ವಿನಿಮಯದ ಗಳಿಕೆಯನ್ನು ರಾಷ್ಟ್ರೀಯ ಮಟ್ಟದಲ್ಲಿ ಪಡೆಯುವುದು ಮುಖ್ಯವಾಗಿ ಪರಿಗಣಿಸಲಾಗುತ್ತದೆ. ಪ್ರವಾಸೋದ್ಯಮದ ಮುಂದಿನ ಅಭಿವೃದ್ಧಿಗಾಗಿ ಸ್ಥಳೀಯರು ನಿರ್ಧಾರ ತೆಗೆದುಕೊಳ್ಳುವಲ್ಲಿ ಒಮ್ಮತವಿಲ್ಲದಿರುವುದು ಹಾಗೂ ದುರ್ಬಲರಾದಾಗ ಹೊರಗಿನವರು ಪ್ರವಾಸೋದ್ಯಮದ ಅಭಿವೃದ್ಧಿಗಾಗಿ ಉತ್ಸಾಹ ತೋರಿಸುತ್ತಾರೆ.

ಸಾಂಸ್ಥೀಕರಣದಿಂದ ಅತಿಥೇಯ ಜನಸಂಖ್ಯೆಯ ಮೇಲೆ ಆಗುವ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಪರಿಣಾಮಗಳೆಂದರೆ ಸ್ಥಳೀಯ ಸೇವಾ ಸೌಲಭ್ಯಗಳು ಉತ್ತಮಗೊಳ್ಳುವುದು, ಬೇಡಿಕೆಯ ಹೆಚ್ಚಳದಿಂದ ಋತುಮಾನಗಳಲ್ಲಿ ಬೆಲೆಗಳು ಅಸ್ಥಿರಗೊಳ್ಳುವುದು, ಉದ್ಯೋಗದಲ್ಲಿ ಹೆಚ್ಚಳವಾಗುವುದು, ಉತ್ತಮ ಪೌಷ್ಠಿಕ ಆಹಾರಗಳ ಲಭ್ಯತೆ ಇತ್ಯಾದಿ. ಜನಸಂಖ್ಯೆ ಬೆಳವಣಿಗೆಯಲ್ಲಿ ಹೆಚ್ಚಳವಾಗುವುದರಿಂದ ಆರೋಗ್ಯದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ಅಗತ್ಯವಾಗುತ್ತದೆ. ಪ್ರವಾಸಿಗರ ಮತ್ತು ಅತಿಥಿಯರ ಸಂಬಂಧಗಳು ಅವ್ಯೈಯಕ್ತಿಯವಾಗಿ ಹಣವೆ ಹೆಚ್ಚು ಪ್ರಧಾನ್ಯತೆ ಪಡೆಯುತ್ತದೆ. ವಿಭಕ್ತ ಕುಟುಂಬಗಳ ಉಗಮ ಮತ್ತು ಸಮಾಜದ ಪುರೋಹಿತ ತತ್ವದಲ್ಲಿನ ಬದಲಾವಣೆಯಿಂದ ಕೆಳವರ್ಗಗಳ ಸ್ಥಾನಮಾನಗಳ ಅಸ್ತಿತ್ವ, ಶಿಕ್ಷಣಕ್ಕೆ ಉತ್ತೇಜನ, ಹೊಸವಿಚಾರಗಳ ಚಿಂತನೆ, ಸಾಂಸ್ಕೃತಿಕ ವಾಣಿಜ್ಯೀಕರಣ ಮೊದಲಾದವು ಸಾಂಸ್ಥೀಕರಣದ ಆರೊಗ್ಯಕರ ಪರಿಣಾಮಗಳು. ಅಲ್ಲದೆ ಇದರಿಂದ ಸಮಾಜದ ಕೆಡುಕುಗಳಾದ ಆತ್ಮಹತ್ಯೆ, ಹಿಂಸೆ-ಕೊಲೆ, ಹೊಸರೋಗಗಳ ಹರಡುವಿಕೆ (ಇನ್‌ಫ್ಲುಂಜ ಮತ್ತು ಲೈಂಗಿಂಕ ರೋಗಗಳು) ಇತ್ಯಾದಿಗಳು ಉಂಟಾಗುತ್ತವೆ. ಇವುಗಳನ್ನು ನಿಯಂತ್ರಿಸುವ ವಿಧಾನಗಳನ್ನು ಸಾಂಸ್ಥೀಕರಣ ಒಳಗೊಂಡಿರಬೇಕಾಗುತ್ತದೆ. ಇನ್ನು ರಾಜಕೀಯವಾಗಿ, ಸ್ಥಳೀಯರು ನಿರ್ಧಾರ ತೆಗೆದುಕೊಳ್ಳು ವುದರಲ್ಲಿ ವಿಫಲತೆ ಉಂಟಾಗುತ್ತದೆ, ಬಹುಮತದ ನಿರ್ಧಾರಗಳು ಜಾರಿಯಾಗುತ್ತವೆ. ಸ್ಥಳೀಯರು ಈ ಪ್ರಯೋಗದಲ್ಲಿ ಸಫಲರಾಗದೆ ಹೊರಗಿನವರ ಅಧೀನತೆಯಲ್ಲಿ ಪ್ರತಿನಿಧಿಗಳಾಗಿ ಕೆಲಸ ಮಾಡುವುದು ಅನಿವಾರ್ಯವಾಗುತ್ತದೆ. ಪ್ರವಾಸಿಗರ ಸಂಖ್ಯೆಯಲ್ಲಿ ಹೆಚ್ಚಳವಾಗುವುದರಿಂದ ಸಾರಿಗೆ ವೆಚ್ಚವನ್ನು ಕಡಿತಗೊಳಿಸುವ ಪ್ಯಾಕೇಜ್ ಟೂರುಗಳು ಹೆಚ್ಚುತ್ತವೆ. ಇದು ಮುಖ್ಯವಾಗಿ ಕಡಿಮೆ ಆದಾಯ ಹೊಂದಿರುವ ಚೌಕಟ್ಟಿನಲ್ಲಿ ಬರುವ ಪ್ರವಾಸಿಗರಿಗೆ ಅನುಕೂಲವಾಗಬಹುದು. ಇವರಿಗೆ ಕಡಿಮೆ ತಲಾ ವೆಚ್ಚವನ್ನು ಭರಿಸಲು ಸಾಧ್ಯವಾಗಿಸುತ್ತದೆ. ಬಹುಸಂಖ್ಯೆಯ ಪ್ರವಾಸಿಗರ ಆಗಮನವು ಹೆಚ್ಚಿನ ಬೇಡಿಕೆಗಳನ್ನು ಸೃಷ್ಟಿಸುವುದರಿಂದ, ವಸತಿ ಮತ್ತು ಮೂಲ ಸೌಲಭ್ಯಗಳನ್ನು ಒದಗಿಸಲು ಹೆಚ್ಚಿನ ಬಂಡವಾಳದ ಅವಶ್ಯಕತೆ ಉಂಟಾಗುತ್ತದೆ. ಪ್ರವಾಸಿ ತಾಣಗಳ ಪ್ರವಾಸಿ ಘಟಕಗಳಲ್ಲಿಯೆ ಪೈಪೋಟಿ ನಡೆಯುವುದರಿಂದ, ದೊಡ್ಡ ಘಟಕಗಳ ವಿಸ್ತಾರ

ಸಂಪರ್ಕ ಮತ್ತು ಹಣಕಾಸಿನ ಸಂಪನ್ಮೂಲಗಳ ಮುಂದೆ ಚಿಕ್ಕ ಘಟಕಗಳ ಅಸ್ತಿತ್ವಕ್ಕೆ ಆತಂಕ ಉಂಟಾಗುತ್ತದೆ. ಇದು ಪ್ರವಾಸೋದ್ಯಮದಲ್ಲಿನ ಬದಲಾವಣೆಗಳ ಗತಿಯನ್ನೆ ಬದಲಾಯಿಸ ಬಹುದಾಗಿದೆ.

ಪ್ರವಾಸೋದ್ಯಮದ ಅಭಿವೃದ್ಧಿಯಲ್ಲಿ ಮೊದಲ ಹಂತದಿಂದ ಮೂರನೆಯ ಹಂತದವರೆಗೆ ಆಗುವ ಬದಲಾವಣೆಗಳು ಕೇವಲ ಪರಿಣಾಮತ್ಮಕವಾಗಿರದೆ (ಪ್ರವಾಸಿಗರ ಸಂಖ್ಯೆಯಲ್ಲಿನ ಹೆಚ್ಚಳ) ರಚನಾತ್ಮಕ ಬದಲಾವಣೆಗಳು ಕೂಡ ಆಗಿರುತ್ತವೆ.[5] ಇದು ಪ್ರವಾಸೋದ್ಯಮದ ಸ್ವರೂಪವಾಗಿರುತ್ತವೆ ಹಾಗೂ ಮೂಲಭೂತ ಬೆಳವಣಿಗೆಯನ್ನು ಪ್ರಚೋದಿಸುವ ಪರಿವರ್ತನೆಯನ್ನು ಒಳಗೊಂಡಿರುತ್ತದೆ. ಪ್ರವಾಸಿಗರಿಗೆ ಸ್ಥಳೀಯ ಸಂಪನ್ಮೂಲಗಳ ಮತ್ತು ಸಂಸ್ಥೆಗಳ ಮೂಲಕ ಅನುಕೂಲ ಮಾಡಿಕೊಡುತ್ತದೆ. ಮೂರನೆಯ ಹಂತದಲ್ಲಿ ಪ್ರವಾಸೋದ್ಯಮವು ಯೋಜನೆ ಭರಿತವಾಗಿದ್ದು, ಸ್ಥಳೀಯ ಸಂಘಟಿತ ರಚನೆಗಳ ಮೇಲೆ ಹೊರಗಿನ ಸಂಸ್ಥೆಗಳನ್ನು ಹೇರುವುದಾಗಿದೆ. ಮೂರನೆಯ ಹಂತದಲ್ಲಿ ಪ್ರವಾಸಿಗರು ಭಿನ್ನ ಬಗೆಯವರಾಗಿದ್ದು ಪ್ರವಾಸಿಗರ ಮತ್ತು ಅತಿಥೇಯರ ನಡುವಿನ ಸಂಬಂಧಗಳು ಬದಲಾಗುತ್ತವೆ. ವ್ಯಕ್ತಿ ಮತ್ತು ಸಂಘಟಿತ ಗುಂಪುಗಳ ಪ್ರವಾಸಿಗರೆ ಹೆಚ್ಚಾಗುತ್ತಾರೆ. ಇವರೊಂದಿಗೆ ಸಂಘಟಿತ ಡ್ರಿಫ್ಟರ್ಸ್ ಸಂಖ್ಯೆಯು ಕೂಡ ಅಗಾಧವಾಗಿರುತ್ತದೆ. ಈ ಪ್ರವಾಸಿಗರ ಪ್ರವಾಸದ ಮಾದರಿಯು ತೀವ್ರ ಚಲನೆಯಿಂದ ಕೂಡಿದ್ದಾಗಿರುತ್ತದೆ. ಪ್ರವಾಸಿಗರ ಮತ್ತು ಅತಿಥೇಯರ ಸಂಪರ್ಕ ಅವೈಯಕ್ತಿಕವಾಗಿ ಬೆಳೆಯುತ್ತದೆ. ಪ್ರವಾಸಿಗರು ಅತಿಥೇಯರನ್ನು ವೇಟರ್ ಅಥವಾ ರೂಮಿನ ಸೇವಕರಾಗಿ ನೋಡಿದರೆ, ಅತಿಥೇಯರು ಪ್ರವಾಸಿಗರನ್ನು ರೂಮಿನ ಬಾಡಿಗೆದಾರನಾಗಿ ನೋಡುವ ಹಂತ ತಲುಪುತ್ತದೆ. ಪ್ರವಾಸಿ ತಾಣಗಳೆಲ್ಲವೂ ಪ್ರವಾಸೋದ್ಯಮದ ಅಭಿವೃದ್ಧಿಯಲ್ಲಿ ಎಲ್ಲಾ ಈ ಮೂರು ಹಂತಗಳೊಂದಿಗೆ ಸಾಗುವುದಿದೆ. ಆದರೆ ಇದೇ ಮಾದರಿಯಲ್ಲಿ ಅಭಿವೃದ್ಧಿಯನ್ನು ಸಾಧಿಸಬೇಕೆಂದೇನೂ ಇಲ್ಲ. ಇತ್ತೀಚಿನ ದಿನಗಳಲ್ಲಿ ಅಭಿವೃದ್ಧಿ ಹೊಂದುತ್ತಿರುವ ಬಹಳಷ್ಟು ರಾಷ್ಟ್ರಗಳು, ಪ್ರವಾಸೋದ್ಯಮದ ಅಭಿವೃದ್ಧಿಯನ್ನು ಆರ್ಥಿಕ ಅಭಿವೃದ್ಧಿಯನ್ನು ವೃದ್ಧಿಸುವ ಉಪಾಯವೆಂದು ತಿಳಿದಿರುವುದರಿಂದ ಎರಡನೆಯ ಹಂತ ತಲುಪದೆಯೆ ಮೂರನೆ ಹಂತಕ್ಕೆ ಲಗ್ಗೆ ಹಾಕಿವೆ. ಉದಾ. ಆಫ್ರಿಕಾ ದೇಶದ ಫೀಜೀ ಮತ್ತು ಗಾಮ ಪ್ರವಾಸಿ ತಾಣಗಳು.[6]

ಭಾಗ 2

ಹಂಪೆ ಗ್ರಾಮದಲ್ಲಿ ಪ್ರವಾಸೋದ್ಯಮ ಆರಂಭವಾಗಿದ್ದು 1970ರ ದಶಕದಲ್ಲಿ. 1974ರಿಂದ ವಿದೇಶಿ ಪ್ರವಾಸಿಗರು ಪರಿಶೋಧಕರಾಗಿ ಮತ್ತು ಗೊತ್ತುಗುರಿಯಿಲ್ಲದ ಪ್ರವಾಸಿಗರಾಗಿ ಬರಲು ಆರಂಭಿಸಿದರು. ಆರಂಭದ ವರ್ಷಗಳಲ್ಲಿ ಕೆಲವೇ ಕೆಲವು ಪ್ರವಾಸಿಗರು ಬರುತ್ತಿದ್ದರು. ಆ ಸಂದರ್ಭದಲ್ಲಿ ಯಾವುದೆ ಗೆಸ್ಟ್‌ಹೌಸ್ ಅಥವಾ ರೆಸ್ಟೋರೆಂಟ್‌ಗಳು ಇರಲಿಲ್ಲ. ಪ್ರವಾಸಿಗರು

ದೇವಸ್ಥಾನದ ಆವರಣದಲ್ಲಿ ಅಥವಾ ಮಂಟಪಗಳಲ್ಲಿ ಮಲಗುತ್ತಿದ್ದರು. ಸ್ಥಳೀಯವಾಗಿ ದೊರಕುತ್ತಿದ್ದ ಆಹಾರವನ್ನು ಸೇವಿಸುತ್ತಿದ್ದರು. ಪ್ರವಾಸಿಗರು ಮತ್ತು ಅತಿಥೇಯರು ಮುಖಾಮುಖಿ ಯಾಗಿ ಸಂಧಿಸುತ್ತಿದ್ದರು. ಪ್ರವಾಸಿಗರಿಗೆ ಒದಗಿಸುವ ಸೇವಾ ಸೌಲಭ್ಯಗಳು ವ್ಯಾಪಾರವಾಗಿರದೆ ಮನೆಗೆ ಬಂದ ನೆಂಟರನ್ನು ಉಪಚರಿಸುವಂಥ ಔದಾರ್ಯಗಳಿಂದ ಕೂಡಿರುತ್ತಿದ್ದವು. ಈ ಮಾದರಿಯೆ ಹಂಪೆಯಲ್ಲಿ 1990ರವರೆಗೆ ಮುಂದುವರಿಯಿತು. ಆದುದರಿಂದ ಈ ಹಂತವನ್ನು ಅಥವಾ 1974-1990ರ ಅವಧಿಯನ್ನು ಪರಿಶೋಧಕ (Discovery Stage) ಹಂತವೆಂದು ಕರೆಯಬಹುದು.

1990ರ ನಂತರ ವಿದೇಶಿ ಪ್ರವಾಸಿಗರ ಸಂಖ್ಯೆ ಬೆಳೆಯುತ್ತಾ ಬಂದಿತು. ಅದಕ್ಕೆ ತಕ್ಕಂತೆ ಅತಿಥೇಯರು ಸೇವಾ ಸೌಲಭ್ಯಗಳನ್ನು ಒದಗಿಸಲು ಮುಂದಾದರು. ಅತಿಥಿ ಗೃಹಗಳು, ರೆಸ್ಟೋರೆಂಟ್‌ಗಳು, ಹೋಟೆಲ್‌ಗಳು ಅಂಗಡಿಗಳು ಹೀಗೆ ಒಂದೊಂದೆ ಪ್ರವಾಸೋದ್ಯಮದ ಪೂರಕ ಆರ್ಥಿಕ ಚಟುವಟಿಕೆ ಗಳು ಬೆಳೆದು ಬಂದವು. ಪ್ರಾರಂಭದಲ್ಲಿ ಮನೆಯ ಪಾರ್ಶ್ವದಲ್ಲಿನ ರೂಂಗಳನ್ನು ಸಣ್ಣ ಪುಟ್ಟ ಬದಲಾಣೆಗಳನ್ನು ಮಾಡಿ ಪ್ರವಾಸಿಗರಿಗೆ ಬಾಡಿಗೆಗೆ ನೀಡಲು ಶುರು ಮಾಡಿದರು. ತಮ್ಮ ಬಳಕೆಗಾಗಿ ತಯಾರಿಸಿದ ಆಹಾರ ಪದಾರ್ಥಗಳನ್ನೆ ಪ್ರವಾಸಿಗರಿಗೆ ನೀಡಿ ಹಣ ಸಂಪಾದಿಸ ತೊಡಗಿದರು. 1995ರ ನಂತರ ವಿದೇಶಿ ಪ್ರವಾಸಿಗರ ಸಂಖ್ಯೆಯಲ್ಲಿ ಗಣನೀಯ ಹೆಚ್ಚಳ ಕಂಡು ಬಂದಿತು. ಮನೆ ಮತ್ತು ಅತಿಥಿಗೃಹಗಳ ನಡುವೆ ವ್ಯತ್ಯಾಸ ಆರಂಭವಾಯಿತು. ಮನೆಯ ಮೇಲ್‌ಭಾಗದಲ್ಲಿ ಅಥವಾ ಪಕ್ಕದಲ್ಲಿ ಅತಿಥಿಗೃಹಗಳ ಪ್ರತ್ಯೇಕ ಕೊಠಡಿಗಳು ನಿರ್ಮಾಣವಾದವು. ಪ್ರವಾಸಿಗರ ಊಟ ಉಪಚಾರಕ್ಕಾಗಿ ರೆಸ್ಟೋರೆಂಟ್‌ಗಳು, ಅತಿಥಿಗೃಹಗಳು ಪ್ರತ್ಯೇಕವಾಗಿ ಆರಂಭವಾದವು. ವಿದೇಶಿ ಪ್ರವಾಸಿಗರಿಗೆ ಪ್ರತ್ಯೇಕವಾಗಿ ಆಹಾರ ತಿಂಡಿ-ತಿನಿಸು, ಉಪಹಾರ ಮತ್ತು ಊಟಗಳನ್ನು ತಯಾರಿಸು ವುದು ರೆಸ್ಟೋರೆಂಟ್‌ಗಳಲ್ಲಿ ಶುರುವಾಯಿತು. ಆಧುನಿಕ ಸೌಲಭ್ಯಗಳಾದ ಫ್ರಿಜ್, ಟೀವಿ, ಫ್ಲಶ್‌ಟಾಯಿಲೆಟ್‌ಗಳನ್ನು ಅತಿಥಿಗೃಹಗಳಲ್ಲಿ ಅಳವಡಿಸಿಲಾಯಿತು. ಟ್ರಾವಲರ್ಸ್ ಹೌಸ್‌ಗಳು ಮತ್ತು ಹಣದ ವಿನಿಮಯ ಅಂಗಡಿಗಳು, ಪುರಾತನ ವಸ್ತುಗಳ ಶಾಪ್‌ಗಳು ಮೊದಲಾದವು ಬೆಳೆದುಬಂದವು. ಸ್ಥಳೀಯರಲ್ಲದ ಹೊರಗಿನವರು ಬಂದು ಅತಿಥಿಗೃಹಗಳು, ರೆಸ್ಟೋರೆಂಟ್‌ಗಳು, ವಿವಿಧ ತೆರನಾದ ಇನ್ನಿತರ ಅಂಗಡಿಗಳನ್ನು ಸ್ಥಾಪಿಸಲು ಆರಂಭಿಸ ತೊಡಗಿದರು.

ಪ್ರವಾಸೋದ್ಯಮದ ಮೊದಲನೆಯ ಮತ್ತು ಎರಡನೆಯ ಹಂತದ ಬೆಳವಣಿಗೆಗಳಿಂದ ಹಂಪೆಯ ಅರ್ಥ ವ್ಯವಸ್ಥೆ ಯಾವ ಬದಲಾವಣೆಗಳನ್ನು ಕಂಡಿದೆ ಎಂದು ಗುರುತಿಸುವ ಪ್ರಯತ್ನ ಮುಂದೆ ಇದೆ. ಇದನ್ನು ಗುರುತಿಸಲು ಏಳು ಸೂಚ್ಯಂಕಗಳನ್ನು ಬಳಸಲಾಗಿದೆ. ಮೂಲಭೂತ ಸೌಲಭ್ಯಗಳ ಪೂರೈಕೆ, ವೃತ್ತಿ ರಚನೆಯಲ್ಲಿ ಬದಲಾವಣೆ, ತಲಾ ವರಮಾನ, ಕುಟುಂಬದ ಸಂಪನ್ಮೂಲ ಸ್ಥಿತಿ, ಭೂ ಒಡುವಳಿಯ ಪ್ರಮಾಣ, ಗ್ರಾಮ ಪಂಚಾಯತ್ ಆದಾಯ ಹಾಗೂ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳ ಸಂಖ್ಯೆ - ಇವೆ ಆ ಸೂಚ್ಯಂಕಗಳಾಗಿವೆ. ವಿಜಯನಗರದ ರಾಜಧಾನಿಯಾದ ಹಂಪೆ

ವಿಜಯನಗರದ ಪತನದ ನಂತರ ಸುಮಾರು ನಾಲ್ಕು ಶತಮಾನಗಳ ಕಾಲ ವಸತಿ ರಹಿತ ಪ್ರದೇಶವಾಗಿತ್ತೆಂದು ಅಲೆಕ್ಸಾಂಡರ್ ಜೆ.ಗ್ರೀನ್‌ಲಾರವರು 1856ರಲ್ಲಿ ತೆಗೆದ ಹಂಪೆಯ ಛಾಯಚಿತ್ರಗಳಿಂದ ಅರಿಯಬಹುದಾಗಿದೆ.[7] ಹಂಪೆಯ ಗ್ರಾಮ ಬೆಳೆದು ಬಂದದ್ದು 1947ರ ನಂತರದ ಅವಧಿಯಲ್ಲಿ. ಸುತ್ತಮುತ್ತಲಿನ ಊರುಗಳಿಂದ ಕುಟುಂಬಗಳು ವಲಸೆ ಬರಲು ಶುರುವಾಗಿದ್ದು ಸ್ವಾತಂತ್ರ್ಯದ ಆಸುಪಾಸಿನಲ್ಲಿಯೆ ಎಂದು ಗ್ರಾಮದ ಹಿರಿಯರು ಹೇಳುತ್ತಾರೆ. ನೆರೆಯ ರಾಜ್ಯವಾದ ಆಂಧ್ರಪ್ರದೇಶ ಮತ್ತು ಉತ್ತರ ಕರ್ನಾಟಕದಿಂದ ಹಲವಾರು ಕುಟುಂಬಗಳು ಇಲ್ಲಿಗೆ ವಲಸೆ ಬಂದಿವೆ. ಅವರ ವಲಸೆಗೆ ಮುಖ್ಯ ಕಾರಣ ಆ ಭಾಗಗಳಲ್ಲಿನ ನೈಸರ್ಗಿಕ ವಿಕೋಪ, ಬರಗಾಲ ಮತ್ತು ನಿರುದ್ಯೋಗ. ಅವುಗಳ ಜತೆಗೆ ಮನುಷ್ಯ ನಿರ್ಮಿತ ಶೋಷಣೆ ಮತ್ತು ದಬ್ಬಾಳಿಕೆಗಳು ಕೂಡ ಜನರನ್ನು ತಾವು ಹುಟ್ಟಿ ಬೆಳದ ಊರನ್ನು ತೊರೆದು ಹೋಗುವಂತೆ ಪ್ರೇರೇಪಿಸಿರಬಹುದಾಗಿದೆ. ಆ ರೀತಿ ನೊಂದು, ದುಡಿಮೆಯನ್ನು ಅರಿಸಿಕೊಂಡು ಬಂದು ಹಂಪೆಯಲ್ಲಿ ನೆಲೆನಿಂತ ಕುಟುಂಬಗಳು ತಮ್ಮ ಬದುಕನ್ನು ಇಲ್ಲೆ ಕಂಡುಕೊಂಡವು. ಅವರ ಮೊದಲಿನ ಭಾಷೆ, ನಡೆನುಡಿಗಳು ಅವರಲ್ಲಿ ಈಗಲೂ ಅಲ್ಪಸ್ವಲ್ಪವಾಗಿ ಉಳಿದು ಕೊಂಡಿವೆ.

1971ರ ಜನಗಣತಿ ಮಾಹಿತಿ ಪ್ರಕಾರ ಹಂಪೆಯು ನಗರ ವ್ಯಾಪ್ತಿಗೆ ಸೇರಿತು ಹಾಗೂ ನೋಟಿಫೈಡ್ ಏರಿಯಾ ಕಮಿಟಿಯ ಆಡಳಿತಕ್ಕೊಳಪಟ್ಟಿತು.[8] ಆಗಿನ ಕುಟುಂಬಗಳ ಸಂಖ್ಯೆ 163 ಮತ್ತು ಒಟ್ಟು ಜನಸಂಖ್ಯೆ 777 ಇತ್ತು.ಅಂದಿನ ಜನರ ಮುಖ್ಯಕಸುಬು ಕೃಷಿ ಮತ್ತು ಕೃಷಿಕೂಲಿಯಾಗಿತ್ತು. 1981ರ ಜನಗಣತಿಯ ಮಾಹಿತಿ ಪ್ರಕಾರ ಹಂಪೆಗ್ರಾಮವನ್ನು ನಗರದ ಸ್ಥಾನಮಾನದಿಂದ ಪುನಃ ಗ್ರಾಮೀಣ ಸ್ಥಾನಮಾನಕ್ಕೆ ಪುನರ್‌ವಿಂಗಡನೆ ಮಾಡಲಾಯಿತು.[9] ಈ ಅವಧಿಯಲ್ಲಿ ಕುಟುಂಬಗಳ ಸಂಖ್ಯೆ 248ಕ್ಕೆ ಏರಿತು ಹಾಗೂ ಒಟ್ಟು ಜನಸಂಖ್ಯೆ 1,247ರಷ್ಟಾಯಿತು. 1991ರ ಜನಗಣತಿಯ ವೇಳೆಗೆ ಕುಟುಂಬಗಳ ಸಂಖ್ಯೆ 334 ಮತ್ತು ಜನಸಂಖ್ಯೆ 1,594ಕ್ಕೇರಿತು.[10] ಈ ಎರಡು ದಶಕಗಳಲ್ಲಿ ಕೃಷಿ ಮತ್ತು ಕೃಷಿಕೂಲಿ ಗ್ರಾಮದ ಜನರ ಮುಖ್ಯ ಕಸುಬಾಗಿ ಮುಂದುವರೆದಿತ್ತು. ಇದರಿಂದ ಗ್ರಾಮದ ಶೇ.60ರಷ್ಟು ಜನಸಂಖ್ಯೆಯು ಕೃಷಿಯಲ್ಲಿ ತೊಡಗಿದ್ದಾರೆಂದು ಗೊತ್ತಾಗುತ್ತದೆ. ಇದರಲ್ಲಿ ಕೃಷಿ ಕಾರ್ಮಿಕರೇ ಶೇ. 51.80ರಷ್ಟಿದ್ದರು. 2001ರ ಜನಗಣತಿಯ ಪ್ರಕಾರ ಹಂಪೆಗ್ರಾಮದ ಜನಸಂಖ್ಯೆಯು 2172ಕ್ಕೆ ಏರಿಕೆಯಾಯಿತು. ಗ್ರಾಮದಲ್ಲಿನ ಕುಟುಂಬಗಳ ಸಂಖ್ಯೆ 460ಕ್ಕೆ ಹೆಚ್ಚಳಗೊಂಡಿತು.[11] ಆದರೆ ಕೃಷಿ ಮೇಲಿನ ಅವಲಂಬನೆ ಶೇ.45.88ಕ್ಕೆ ಇಳಿಯಿತು. ಕೃಷಿ ಕಾರ್ಮಿಕರ ಸಂಖ್ಯೆ ಕೂಡ ಇಳಿಮುಖವಾಯಿತು. ಅದು ಈಗ ಶೇ 40.33ರಷ್ಟಿದೆ. 1991 ರಿಂದ 2001ರ ಅವಧಿಯಲ್ಲಿ ಪ್ರವಾಸೋದ್ಯಮ ಬೆಳವಣಿಗೆಯು ಗಣನೀಯ ಪ್ರಮಾಣದಲ್ಲಿ ಹೆಚ್ಚಾಗಿದೆ. 1990ರ ಆರಂಭದಲ್ಲಿ ಅತಿಥಿಗೃಹಗಳ ಸಂಖ್ಯೆ 5, ರೆಸ್ಟೋರೆಂಟ್‌ಗಳ ಸಂಖ್ಯೆ 03, ಹೋಟೆಲುಗಳ ಸಂಖ್ಯೆ 06, ಪೆಟ್ಟಿಗೆ ಅಂಗಡಿಗಳು 04, ಪುಸ್ತಕ ಮಾರಾಟದ ಅಂಗಡಿ 01, ಗೊಂಬೆ ಅಂಗಡಿ 01, ಕಿರಾಣಿ ಅಂಗಡಿ 02, ಹಣ್ಣು ಮತ್ತು ತೆಂಗಿನ ಕಾಯಿ

ವ್ಯಾಪಾರಿಗಳ ಸಂಖ್ಯೆ 06, ಪುರಾತನ ವಸ್ತುಗಳ ಮಾರಾಟ ಮಾಡುವವರ ಸಂಖ್ಯೆ 1 ಇತ್ತು. ಆಧುನಿಕ ಸೌಲಭ್ಯಗಳಾದ ಇಂಟರ್‌ನೆಟ್, ಎಸ್.ಟಿ.ಡಿ-ಐ.ಎಸ್.ಡಿ ಸೌಲಭ್ಯವಾಗಲಿ, ಹಣದ ವಿನಿಮಯ ಮಳಿಗೆಗಳು, ಟ್ರಾವೆಲರ್ಸ್ ಹೌಸುಗಳಾಗಲಿ ಇರಲಿಲ್ಲ. ಸಂಪರ್ಕ ಸೌಲಭ್ಯವಾಗಿ ಆಗ ಅಂಚೆಕಚೇರಿ ಮಾತ್ರ ಕೆಲಸ ಮಾಡುತ್ತಿತ್ತು. ಹಣದ ವಿನಿಮಯ ಹಾಗೂ ಇತರ ವ್ಯವಹಾರಗಳಿಗಾಗಿ ಸರ್ಕಾರಿ ರಾಷ್ಟ್ರೀಕೃತ ಬ್ಯಾಂಕ್ ಮಾತ್ರ ಲಭ್ಯವಿತ್ತೆಂದು ಸ್ಥಳೀಯರು ಹೇಳುತ್ತಾರೆ.

ಕೇವಲ 10 ವರ್ಷಗಳ ಅವಧಿಯಲ್ಲಿ ಪ್ರವಾಸಿಗರಿಗೆ ಅಗತ್ಯಗಳನ್ನು ಪೂರೈಸಲು ಬೇಕಾಗುವ ಎಲ್ಲಾ ಉದ್ಯಮಗಳು ಬೆಳೆದು ನಿಂತಿವೆ. ಈ ಎಲ್ಲಾ ಆರ್ಥಿಕ ಚಟುವಟಿಕೆಗಳು ಬೆಳೆವಣಿಗೆ ಕಾಣಲು ಮುಖ್ಯವಾಗಿ ಪ್ರವಾಸಿಗರ ಸಂಖ್ಯೆಯಲ್ಲಿನ ಹೆಚ್ಚಳವೆ ಕಾರಣವೆನ್ನಬಹುದು. 2000-2001ರ ಗ್ರಾಮಪಂಚಾಯತಿಯ ಬೇಡಿಕೆಯ ನೊಂದಣಿ ಪುಸ್ತಕದ ಪ್ರಕಾರ ಅತಿಥಿಗೃಹ ಮತ್ತು ರೆಸ್ಟೋರೆಂಟ್‌ಗಳ ಸಂಖ್ಯೆ 61, ಹೋಟೆಲ್‌ಗಳ ಸಂಖ್ಯೆ 29, ಎಲ್ಲಾ ತರಹದ ಅಂಗಡಿಗಳ ಸಂಖ್ಯೆ 66, ಪೆಟ್ಟಿಗೆ ಅಂಗಡಿ, ಬಂಡಿ ಹೋಟೆಲ್ ಮತ್ತು ತೆಂಗಿನಕಾಯಿ ವ್ಯಾಪಾರಿಗಳ ಸಂಖ್ಯೆ 33 ಇದೆ.[12] ಗ್ರಾಮಪಂಚಾಯತಿ ಬೇಡಿಕೆ ನೊಂದಣಿ ಪುಸ್ತಕದಲ್ಲಿ ಬೀದಿ ಬದಿಯ ವ್ಯಾಪಾರಗಳು ಸೇರಿಲ್ಲ. ಸೋಡ, ಐಸ್‌ಕ್ರಿಮ್, ಹಣ್ಣು, ತರಕಾರಿ ಮಾರುವವರು- ಹೀಗೆ ಇವರ ಸಂಖ್ಯೆ ಕೂಡ ತುಂಬಾ ಇದೆ. ಇವುಗಳ ಸಂಖ್ಯೆಯನ್ನು ಪ್ರಾಥಮಿಕ ಮಾಹಿತಿಯಿಂದ ಸಂಗ್ರಹಿಸಲಾಗಿದೆ. ಈ ವ್ಯಾಪಾರಿಗಳ ಸಂಖ್ಯೆ 38. ಪ್ರವಾಸಿ ಮಾರ್ಗದರ್ಶಿಗಳ ಸಂಖ್ಯೆ 42, ಆಟೋಗಳ ಸಂಖ್ಯೆ 10 ಇದೆ. ಹೀಗೆ ಅನೇಕ ಆರ್ಥಿಕ ಚಟುವಟಿಕೆಗಳಲ್ಲಿ ಗ್ರಾಮದ ಜನರು ತೊಡಗಿಸಿಕೊಂಡಿದ್ದಾರೆ. ಈ ಎಲ್ಲ ಆರ್ಥಿಕ ಚಟುವಟಿಕೆಗಳು ಗ್ರಾಮದ ಮತ್ತು ಕುಟುಂಬಗಳ ಆರ್ಥಿಕ ಸ್ಥಿತಿಯಲ್ಲಿ ತಂದಿರುವ ಬದಲಾವಣೆಗಳನ್ನು ಗಮನಿಸಬಹುದು.

ಆರ್ಥಿಕ ಮೂಲ ಸೌಲಭ್ಯಗಳು

ಈ ಅಧ್ಯಯನದ ದೃಷ್ಟಿಯಿಂದ ಮೂಲ ಸೌಲಭ್ಯಗಳನ್ನು ಸಾಮಾಜಿಕ ಹಾಗು ಆರ್ಥಿಕ ಮೂಲ ಸೌಲಭ್ಯಗಳೆಂದು ವಿಂಗಡಿಸಿಕೊಳ್ಳಲಾಗಿದೆ. ಸಾಮಾಜಿಕ ಮೂಲ ಸೌಲಭ್ಯಗಳಾದ ಶಿಕ್ಷಣ, ಆರೋಗ್ಯ ಇತ್ಯಾದಿಗಳನ್ನು ಮುಂದಿನ ಅಧ್ಯಾಯವಾದ ಪ್ರವಾಸೋದ್ಯಮ ಮತ್ತು ಸಾಮಾಜಿಕ ಪರಿವರ್ತನೆಯಲ್ಲಿ ವಿವರಿಸಲಾಗುತ್ತದೆ. ಪ್ರಸ್ತುತ ಅಧ್ಯಾಯದಲ್ಲಿ ಆರ್ಥಿಕ ಮೂಲ ಸೌಲಭ್ಯಗಳನ್ನು ಮಾತ್ರ ವಿಶ್ಲೇಷಿಸಲಾಗಿದೆ. ಆರ್ಥಿಕ ಮೂಲ ಸೌಲಭ್ಯಗಳಲ್ಲಿ ಮುಖ್ಯವಾಗಿ ಹಣಕಾಸಿನ ಸಂಸ್ಥೆಗಳಾದ ಸಹಕಾರಿ ಸಂಘ, ಬ್ಯಾಂಕ್, ಹಣದ ವಿನಿಮಯ ಮಳಿಗೆಗಳು, ಜತೆಗೆ ಸಾಧನ ಸಂಪರ್ಕಗಳಾದ ಅಂಚೆ ಕಚೇರಿ, ಫೋನ್, ಇಂಟರ್‌ನೆಟ್, ಇ-ಮೇಲ್ ಸೌಲಭ್ಯಗಳಿಗೆ ಸಂಬಂಧಿಸಿದಂತೆ ಬೆಳವಣಿಗೆಯನ್ನು ವಿಶ್ಲೇಷಿಸಬಹುದಾಗಿದೆ. ಈ ಸೌಲಭ್ಯಗಳಿಗೆ ಸಂಬಂಧಿಸಿದ ಹಂಪೆಯ ಅಂಕಿ ಅಂಶಗಳನ್ನು ತಾಲೂಕು, ಜಿಲ್ಲೆ ಮತ್ತು

ರಾಜ್ಯಗಳ ಅಂಕಿ-ಅಂಶಗಳೊಂದಿಗೆ ಹೋಲಿಸಿ ಹಂಪೆಯ ಆರ್ಥಿಕ ಪರಿವರ್ತನೆ ಬಗ್ಗೆ ತೀರ್ಮಾನಕ್ಕೆ ಬರಲಾಗಿದೆ. ಈ ಕ್ರಮದಲ್ಲಿ ನಡೆದ ಹಂಪೆಯಲ್ಲಿನ ಮೂಲಸೌಲಭ್ಯಗಳ ಬೆಳವಣಿಗೆಯನ್ನು ಮಾಪನ ಮಾಡಲಾಗುವುದು. ಪ್ರವಾಸಿ ತಾಣವಾದ ಹಂಪೆಗೆ ವಿದೇಶಿ ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಬರುವುದರಿಂದ ಮೂಲ ಸೌಲಭ್ಯಗಳು ಬೆಳೆದುಬಂದಿವೆ. 2001ರಲ್ಲಿ ಹಂಪೆಯಲ್ಲಿನ ಫೋನ್‌ಗಳ ಸಂಖ್ಯೆ 85 ಇದ್ದು, ಇನ್ನೂ ಹೆಚ್ಚಿನ ಫೋನ್‌ಗಳನ್ನು ಪಡೆಯಲು ಬೇಡಿಕೆಯ ಅರ್ಜಿಗಳು ಇವೆಯೆಂದು ಕಮಲಾಪುರದಲ್ಲಿರುವ ದೂರವಾಣಿ ವಿನಿಮಯ ಕೇಂದ್ರದ ದಾಖಲೆಗಳು ತಿಳಿಸುತ್ತವೆ. ಹೊಸಪೇಟೆ ತಾಲೂಕಿನಲ್ಲಿರುವ ಫೋನ್‌ಗಳ ಸಂಖ್ಯೆ 13696, ಹಾಗೂ ಬಳ್ಳಾರಿ ಜಿಲ್ಲೆಯಲ್ಲಿ 52901 ಫೋನ್‌ಗಳಿದ್ದು ಮತ್ತು ಕರ್ನಾಟಕದಲ್ಲಿ ಫೋನ್ ಸೌಲಭ್ಯವನ್ನು ಪಡೆದಿರುವವರ ಸಂಖ್ಯೆ 2336337 ಇದೆ.[13] ಪ್ರತಿ 1000 ಜನಸಂಖ್ಯೆಗೆ ಇರುವ ದೂರವಾಣಿ ಸೌಲಭ್ಯ ಗಮನಿಸಿದರೆ ಹಂಪೆಯಲ್ಲಿ ಪ್ರತಿ ಸಾವಿರ ಮಂದಿಗೆ 39 ದೂರವಾಣಿಗಳಿದ್ದರೆ, ಹೊಸಪೇಟೆ ತಾಲೂಕಿನಲ್ಲಿ 37, ಬಳ್ಳಾರಿಜಿಲ್ಲೆಯಲ್ಲಿ 26 ಹಾಗೂ ಕರ್ನಾಟಕದಲ್ಲಿ 44 ದೂರವಾಣಿಗಳಿವೆ. ಈ ಅಂಕಿ ಅಂಶಗಳನ್ನು ನೋಡಿದಾಗ ಹಂಪೆ ಗ್ರಾಮವು ತಾಲೂಕು ಮತ್ತು ಜಿಲ್ಲೆ ಸರಾಸರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಹಾಗೂ ರಾಜ್ಯದ ಸರಾಸರಿಗಿಂತ ಕಡಿಮೆ ಫೋನ್ ಸೌಲಭ್ಯವನ್ನು ಹೊಂದಿದೆ (ಕೋಷ್ಠಕ-25).

ಇದೇ ಅವಧಿಯಲ್ಲಿ (2001) ಬ್ಯಾಂಕುಗಳ ಸಂಖ್ಯೆ ಹಂಪೆ ಗ್ರಾಮದಲ್ಲಿ 01, ಹೊಸಪೇಟೆ ತಾಲೂಕಿನಲ್ಲಿ 32, ಬಳ್ಳಾರಿ ಜಿಲ್ಲೆಯಲ್ಲಿ 157 ಹಾಗೂ ಕರ್ನಾಟಕ ರಾಜ್ಯದಲ್ಲಿ 4430 ಇದೆ. ಪ್ರತಿಲಕ್ಷ ಜನಸಂಖ್ಯೆಗೆ ಹೊಸಪೇಟೆ ತಾಲೂಕಿನಲ್ಲಿ 09, ಬಳ್ಳಾರಿ ಜಿಲ್ಲೆಯಲ್ಲಿ 08 ಮತ್ತು ಕರ್ನಾಟಕದಲ್ಲಿ 9 ಬ್ಯಾಂಕ್‌ಗಳಿವೆ. ಆದರೆ ಹಂಪೆ ಗ್ರಾಮದ 2172 ಜನಸಂಖ್ಯೆಗೆ 1 ಒಂದು ಬ್ಯಾಂಕ್ ಇದೆ.[14] ತಾಲೂಕು, ಜಿಲ್ಲೆ ಮತ್ತು ರಾಜ್ಯದ ಅಂಕಿ-ಅಂಶಗಳಿಗಿಂತ ಉತ್ತಮ ಸ್ಥಿತಿಯನ್ನು ತೋರಿಸುತ್ತದೆ(ಕೋಷ್ಠಕ-25). ಹಾಗೆಯೆ ಸಹಕಾರಿ ಬ್ಯಾಂಕುಗಳು ಹೊಸಪೇಟೆ ತಾಲೂಕಿನಲ್ಲಿ 22, ಬಳ್ಳಾರಿ ಜಿಲ್ಲೆಯಲ್ಲಿ 143 ಮತ್ತು ಕರ್ನಾಟಕದಲ್ಲಿ 4393 ಇದೆ.[15] ಪ್ರತಿ ಒಂದು ಲಕ್ಷ ಜನಸಂಖ್ಯೆಗೆ ಹೊಸಪೇಟೆ ತಾಲೂಕಿನಲ್ಲಿ 5.88 ಸಹಕಾರಿ ಬ್ಯಾಂಕ್‌ಗಳಿದ್ದರೆ, ಬಳ್ಳಾರಿ ಜಿಲ್ಲೆಯಲ್ಲಿ 7 ಮತ್ತು ಕರ್ನಾಟಕ ರಾಜ್ಯದಲ್ಲಿ 8 ಸಹಕಾರಿ ಬ್ಯಾಂಕ್‌ಗಳಿವೆ. ಆದರೆ ಹಂಪೆಯಲ್ಲಿ ಕೇವಲ 2,172 ಜನಸಂಖ್ಯೆಗೆ ಒಂದು ಸಹಕಾರಿ ಬ್ಯಾಂಕು ಇದೆ(ಕೋಷ್ಠಕ-25). ಅಂಚೆಕಚೇರಿಗಳು ಹೊಸಪೇಟೆ ತಾಲೂಕಿನಲ್ಲಿ 56, ಬಳ್ಳಾರಿ ಜಿಲ್ಲೆಯಲ್ಲಿ 393 ಮತ್ತು ಕರ್ನಾಟಕದಲ್ಲಿ 9888 ಇವೆ.[16] ಇವುಗಳು ಪ್ರತಿ ಒಂದು ಲಕ್ಷ ಜನಸಂಖ್ಯೆಗೆ ಹಂಚಿಕೆಯಾದಲ್ಲಿ, ಹೊಸಪೇಟೆ ತಾಲೂಕಿನಲ್ಲಿ 15 ಅಂಚೆ ಕಚೇರಿಗಳು, ಬಳ್ಳಾರಿ ಜಿಲ್ಲೆಯಲ್ಲಿ 19 ಹಾಗೂ ಕರ್ನಾಟಕ ರಾಜ್ಯದಲ್ಲಿ 19 ಇವೆ(ಕೋಷ್ಠಕ-25). ಹಂಪೆ ಗ್ರಾಮದಲ್ಲಿ ಒಂದು ಅಂಚೆಕಚೇರಿ ಇದೆ. ಎಸ್.ಟಿ.ಡಿ ಬೂತ್‌ಗಳ ಸಂಖ್ಯೆ ಹಂಪೆ ಗ್ರಾಮದಲ್ಲಿ 10, ಇಂಟರ್‌ನೆಟ್ ಸೌಲಭ್ಯದ ಶಾಪ್‌ಗಳು 08 ಮತ್ತು ಹಣದ ವಿನಿಮಯ ಮಳಿಗೆಗಳು 07 ಇವೆ. ಈ ಸೌಲಭ್ಯಗಳು ಸಹ ಹೊಸಪೇಟೆ ತಾಲೂಕು ಬಳ್ಳಾರಿ ಜಿಲ್ಲೆಗಿಂತ

ಹೆಚ್ಚಿವೆ ಎಂದೆ ಹೇಳಬಹುದು. ಪ್ರವಾಸೋದ್ಯಮದಿಂದ ಸಾಕಷ್ಟು ಪ್ರಮಾಣದಲ್ಲಿ ಮೂಲಭೂತ ಸೌಲಭ್ಯಗಳು ಹಂಪೆಯಲ್ಲಿ ರೂಪುಗೊಂಡಿವೆ ಎನ್ನುವುದನ್ನು ಮೇಲಿನ ಅಂಕಿಅಂಶಗಳು ಸಾದರಪಡಿಸುತ್ತವೆ.

ವೃತ್ತಿ ರಚನೆಯಲ್ಲಿನ ಪರಿವರ್ತನೆ

ಕರ್ನಾಟಕ ರಾಜ್ಯದ ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲೂಕಿನಲ್ಲಿರುವ ಹಂಪೆ ಗ್ರಾಮ ಮೂಲತಃ ಕೃಷಿ ಆಧಾರಿತ ಗ್ರಾಮವಾಗಿತ್ತು. ಪ್ರವಾಸಿ ತಾಣವಾಗಿ ರೂಪಗೊಂಡು ಬೆಳೆಯುವುದರ ಮೂಲಕ ಕೃಷಿ ಮೇಲಿನ ಅವಲಂಬನೆ ಕಡಿಮೆಯಾಗಿರುವುದು ಜನಗಣತಿಯ ಅಂಕಿ-ಅಂಶಗಳಿಂದ ದೃಢವಾಗುತ್ತದೆ. ಶ್ರಮದ ವಲಯವಾರು ವಿಂಗಡಣೆ 1971 ರಿಂದ 2000ದವರೆಗೆ ಹೇಗೆ ಆಗಿದೆ ಎಂಬುದನ್ನು ನೋಡುವ ಮೂಲಕ ಆರ್ಥಿಕತೆಯಲ್ಲಿನ ಬದಲಾವಣೆ ಮತ್ತು ಉದ್ಯೋಗಗಳ ನಿರ್ಮಾಣವನ್ನು ಗುರುತಿಸಬಹುದು. ಪ್ರಾಥಮಿಕ ವಲಯದಿಂದ ದ್ವಿತೀಯ ಮತ್ತು ತೃತೀಯ ವಲಯಗಳಿಗೆ ಶ್ರಮ ವಿಭಜನೆ ಚಲಿಸುವುದು ಆರ್ಥಿಕ ಅಭಿವೃದ್ಧಿಯ ಉತ್ತಮ ಬೆಳವಣಿಗೆಯನ್ನು ತಿಳಿಸುತ್ತದೆ. ಜೊತೆಗೆ ಉದ್ಯೋಗಗಳ ಸೃಷ್ಠಿಯಲ್ಲಿನ ಹೆಚ್ಚಳವನ್ನು ಸಹ ಅಭಿವೃದ್ಧಿಯೆಂದು ಮ್ಯಾಂಕ್ವಿಟೆಸ್ ಗುರುತಿಸಿದ್ದಾರೆ.[17] ಈ ನಿಟ್ಟಿನಲ್ಲಿ ಹಂಪೆ ಗ್ರಾಮದ ಶ್ರಮದ ವಲಯವಾರು ವಿಂಗಡಣೆ 1971 ರಿಂದ 2001ರ ಅಂತರದಲ್ಲಿ ಯಾವ ರೀತಿಯಾಗಿ ಪರಿವರ್ತನೆಗೊಂಡಿದೆ ಎಂಬುದನ್ನು ತಾಲೂಕು, ಜಿಲ್ಲೆ ಹಾಗೂ ರಾಜ್ಯಕ್ಕೆ ಹೋಲಿಸಿ ಕಂಡುಕೊಳ್ಳಲು ಪ್ರಯತ್ನಿಸಲಾಗಿದೆ.

1971ರಲ್ಲಿ ಹಂಪೆಗ್ರಾಮದ ಪ್ರಧಾನ ಕೆಲಸಗಾರರ ಸಂಖ್ಯೆ ಶೇಕಡ 41.05 ಇತ್ತು. ಪ್ರಾಥಮಿಕ ವಲಯವಾದ ಕೃಷಿ ಮತ್ತು ಕೃಷಿಕಾರ್ಮಿಕರು ಶೇ.71.48, ದ್ವಿತೀಯ ವಲಯದಲ್ಲಿ ಶೇ 7.52 ಮತ್ತು ತೃತೀಯ ವಲಯದಲ್ಲಿ ಶೇ 21.00ರಷ್ಟು ಜನ ತೊಡಗಿಸಿಕೊಂಡಿದ್ದರು.[18] ಈ ಅವಧಿಯಲ್ಲಿ ತಾಲೂಕಿನ ಪ್ರಧಾನ ಕೆಲಸಗಾರರ ಪ್ರಮಾಣ ಶೇ 38.03. ಇದರಲ್ಲಿ ಪ್ರಾಥಮಿಕ ವಲಯದ ಪಾಲು ಶೇ 67.21, ದ್ವಿತೀಯ ವಲಯದಲ್ಲಿ ಶೇ 12.74 ಹಾಗೂ ತೃತೀಯ ವಲಯ ಶೇ 20.05 ಇತ್ತು. ಜಿಲ್ಲೆಯ ಪ್ರಧಾನ ಕೆಲಸಗಾರರ ಸಂಖ್ಯೆಯಲ್ಲಿನ ಪ್ರಮಾಣ ಶೇ 37.98. ಅದರಲ್ಲಿ ಪ್ರಾಥಮಿಕ ವಲಯದ ಪಾಲು ಶೇ 76.49, ದ್ವಿತೀಯ ವಲಯದಲ್ಲಿನ ಸಂಖ್ಯೆ ಶೇ.8.68 ಇದ್ದು, ತೃತೀಯ ವಲಯದಲ್ಲಿ ತೊಡಗಿಸಿಕೊಂಡವರ ಸಂಖ್ಯೆ ಶೇ.14.83 ಆಗಿತ್ತು. ಹಂಪೆಯಲ್ಲಿ ಪ್ರಾಥಮಿಕ ವಲಯದಲ್ಲಿ ತೊಡಗಿಸಿಕೊಂಡಿರುವವರ ಶೇಕಡವಾರು ಪ್ರಮಾಣ ಹೊಸಪೇಟೆ ತಾಲೂಕಿಗಿಂತ ಶೇ 4.27ರಷ್ಟು ಹೆಚ್ಚಿದ್ದು, ಜಿಲ್ಲೆಗಿಂತ ಶೇ. 5.01ರಷ್ಟು ಕಡಿಮೆ ಇದೆ. ದ್ವಿತೀಯ ವಲಯದಲ್ಲಿ ಹಂಪೆ ಗ್ರಾಮದಲ್ಲಿ ತೊಡಗಿಸಿಕೊಂಡವರ ಪ್ರಮಾಣ ತಾಲೂಕಿಗಿಂತ ಶೇ.5.2ರಷ್ಟು ಕಡಿಮೆ ಇದೆ. ಜಿಲ್ಲೆಗಿಂತ ಶೇ. 1.16ರಷ್ಟು ಕಡಿಮೆ ಇರುವುದು ಈ ಅಂಕಿ ಅಂಶಗಳಿಂದ ತಿಳಿದುಬರುತ್ತದೆ. ತೃತೀಯ ವಲಯದಲ್ಲಿ

ಭಾಗಿಯಾದ ಹಂಪೆಯ ತಾಲೂಕಿಗಿಂತ ಶೇ.0.95ರಷ್ಟು ಹೆಚ್ಚಿದೆ. ಹಾಗೂ ಜಿಲ್ಲೆಗಿಂತ ಶೇ. 6.17ರಷ್ಟು ಹೆಚ್ಚಾಗಿದೆ. ಅಂದರೆ ಆ ಅವಧಿಯಲ್ಲಿ ಹಂಪೆ ಗ್ರಾಮದಲ್ಲಿ ಕೃಷಿಯೆ ಪ್ರಧಾನ ಕೆಲಸವಾಗಿತ್ತು(ಕೋಷ್ಟಕ-26).

1981ರಲ್ಲಿ ಹಂಪೆಯ ಗ್ರಾಮದ ಮುಖ್ಯ ಕೆಲಸಗಾರರಲ್ಲಿ ಪ್ರಾಥಮಿಕ ವಲಯದಲ್ಲಿ ತೊಡಗಿಸಿಕೊಂಡವರ ಸಂಖ್ಯೆ ಶೇ.68. ದ್ವಿತೀಯ ವಲಯದಲ್ಲಿ ಶೇ. 0.50 ಆಗಿದ್ದು, ತೃತೀಯ ವಲಯದಲ್ಲಿ ಶೇ. 31.50 ಆಗಿದೆ. ಹೊಸಪೇಟೆ ತಾಲೂಕಿನಲ್ಲಿ ಪ್ರಾಥಮಿಕ ವಲಯದಲ್ಲಿ ತೊಡಗಿಸಿಕೊಂಡವರ ಸಂಖ್ಯೆ ಶೇ.67.50, ದ್ವಿತೀಯ ವಲಯದಲ್ಲಿ ಶೇ.2.43 ಹಾಗೂ ತೃತೀಯ ವಲಯದಲ್ಲಿ ಶೇ.30.07ರಷ್ಟು ಜನಸಂಖ್ಯೆ ತೊಡಗಿಸಿಕೊಂಡಿದೆ. ಬಳ್ಳಾರಿ ಜಿಲ್ಲೆಯಲ್ಲಿ ಪ್ರಾಥಮಿಕ ವಲಯದಲ್ಲಿ ತೊಡಗಿಸಿಕೊಂಡವರ ಸಂಖ್ಯೆ ಶೇ.73.47 ಇದ್ದು, ದ್ವಿತೀಯ ವಲಯದಲ್ಲಿ ತೊಡಗಿಸಿಕೊಂಡವರ ಸಂಖ್ಯೆ ಶೇ.3.19 ಹಾಗೂ ತೃತೀಯ ವಲಯದಲ್ಲಿನ ಸಂಖ್ಯೆ ಶೇ.23.34 ಆಗಿದೆ. ಹಾಗೆಯೆ ರಾಜ್ಯಮಟ್ಟದಲ್ಲಿ ಪ್ರಾಥಮಿಕ ವಲಯದಲ್ಲಿ ತೊಡಗಿಸಿಕೊಂಡಿದ್ದವರ ಸಂಖ್ಯೆ ಶೇ.70.03, ದ್ವಿತೀಯ ವಲಯದಲ್ಲಿ ಪಾಲ್ಗೊಂಡಿದ್ದವರ ಸಂಖ್ಯೆ ಶೇ.4.10 ಮತ್ತು ತೃತೀಯ ವಲಯದಲ್ಲಿನವರ ಸಂಖ್ಯೆ ಶೇ.25.87 ಆಗಿದೆ.[19] ಹಂಪೆ ಗ್ರಾಮದ ಶ್ರಮದ ವಿಂಗಡಣೆಯನ್ನು ತಾಲೂಕು, ಜಿಲ್ಲೆ, ರಾಜ್ಯಕ್ಕೆ ಹೋಲಿಸಿದರೆ ಹಂಪೆ ಗ್ರಾಮದಲ್ಲಿ ಪ್ರಾಥಮಿಕ ವಲಯದಲ್ಲಿ ತೊಡಗಿಸಿಕೊಂಡಿದ್ದವರ ಪ್ರಮಾಣ ತಾಲೂಕಿಗಿಂತ ಶೇ.0.50 ಹೆಚ್ಚಿದ್ದು, ಜಿಲ್ಲೆ ಮತ್ತು ರಾಜ್ಯಕ್ಕಿಂತ ಕ್ರಮವಾಗಿ ಶೇ.5.47 ಮತ್ತು 2.03ರಷ್ಟು ಕಡಿಮೆ ಇದೆ. ದ್ವಿತೀಯ ವಲಯದಲ್ಲಿನ ಸಂಖ್ಯೆ ತಾಲೂಕಿಗಿಂತ ಶೇ.1.91ರಷ್ಟು ಮತ್ತು ಜಿಲ್ಲೆಗಿಂತ ಶೇ.2.69 ಮತ್ತು ರಾಜ್ಯಕ್ಕಿಂತ ಶೇ.3.60ಯಷ್ಟು ಕಡಿಮೆ ಇದೆ. ತೃತೀಯ ವಲಯದಲ್ಲಿ ಹಂಪೆ ಗ್ರಾಮದ ಜನಸಂಖ್ಯೆಯ ಪ್ರಮಾಣ ತಾಲೂಕಿಗಿಂತ 1.43ರಷ್ಟು, ಜಿಲ್ಲೆಗಿಂತ 8.16ರಷ್ಟು ಮತ್ತು ರಾಜ್ಯಕ್ಕಿಂತ ಶೇ.5.63ರಷ್ಟು ಹೆಚ್ಚಿದೆ. ಈ ಬೆಳವಣಿಗೆಯು ಪ್ರವಾಸೋದ್ಯಮದ ಚಟುವಟಿಕೆಗಳು ಪ್ರಾರಂಭಗೊಳ್ಳುವ ಮೂಲಕ ಆಗಿರುವುದು ಕಂಡುಬರುವ ಅಂಶವಾಗಿದೆ. 1991ರಲ್ಲಿ ಹಂಪೆಯ ಪ್ರಧಾನ ಕೆಲಸಗಾರರ ಪ್ರಮಾಣ ಶೇ.48.84, ಪ್ರಾಥಮಿಕ ವಲಯದಲ್ಲಿ ತೊಡಗಿಸಿಕೊಂಡವರ ಸಂಖ್ಯೆ ಶೇ 60.35 ಇದೆ. ದ್ವಿತೀಯ ವಲಯದಲ್ಲಿ ತೊಡಗಿಸಿಕೊಂಡವರ ಸಂಖ್ಯೆ ಶೇ.1.88 ಮತ್ತು ತೃತೀಯ ವಲಯದಲ್ಲಿನ ಸಂಖ್ಯೆ ಶೇ.37.77 ಆಗಿದೆ. ಈ ಅವಧಿಯಲ್ಲಿ ತಾಲೂಕು ಮಟ್ಟದಲ್ಲಿ ಪ್ರಾಥಮಿಕ ವಲಯದಲ್ಲಿ ತೊಡಗಿಸಿಕೊಂಡವರ ಸಂಖ್ಯೆ ಶೇ.68.97, ದ್ವಿತೀಯ ವಲಯದಲ್ಲಿನ ಸಂಖ್ಯೆ ಶೇ.9.79 ಮತ್ತು ತೃತೀಯ ವಲಯದಲ್ಲಿ ಅವಲಂಬನೆ ಶೇ.21.23 ಆಗಿರುವುದು ಕಂಡುಬರುತ್ತದೆ. ಜಿಲ್ಲೆಯ ಮಟ್ಟದಲ್ಲಿ ಪ್ರಾಥಮಿಕ ವಲಯದಲ್ಲಿ ತೊಡಗಿಸಿಕೊಂಡವರ ಸಂಖ್ಯೆ ಶೇ.76.48. ದ್ವಿತೀಯ ವಲಯದಲ್ಲಿನ ಸಂಖ್ಯೆ ಶೇ.7.42 ಹಾಗೂ ತೃತೀಯ ವಲಯದಲ್ಲಿನವರ ಸಂಖ್ಯೆ ಶೇ.16.09 ಆಗಿದೆ. ಇದೆ ಅವದಿಯಲ್ಲಿ ರಾಜ್ಯಮಟ್ಟದಲ್ಲಿ ಪ್ರಾಥಮಿಕ ವಲಯದಲ್ಲಿ

ತೊಡಗಿಸಿಕೊಂಡವರ ಸಂಖ್ಯೆ ಶೇ.67.36, ದ್ವಿತೀಯ ವಲಯದಲ್ಲಿನ ಸಂಖ್ಯೆ ಶೇ.13.18 ಮತ್ತು ತೃತೀಯ ವಲಯದಲ್ಲಿ ಶೇ.19.46 ಜನ ನಿರತರಾಗಿದ್ದಾರೆ (ಕೋಷ್ಟಕ-26).[20]

1991ರ ಅವಧಿಯಲ್ಲಿ ಹಂಪೆ ಗ್ರಾಮದಲ್ಲಿ ಪ್ರಾಥಮಿಕ ವಲಯದಲ್ಲಿ ತೊಡಗಿಸಿಕೊಂಡವರ ಪ್ರಮಾಣ ತಾಲೂಕಿಗಿಂತ ಶೇ.8.62ರಷ್ಟು, ಜಿಲ್ಲೆಗಿಂತ 16.12ರಷ್ಟು ಮತ್ತು ರಾಜ್ಯಕ್ಕಿಂತ ಶೇ.7.01ರಷ್ಟು ಕಡಿಮೆ ಇದೆ. ಹಂಪೆ ಗ್ರಾಮದ ದ್ವಿತೀಯ ವಲಯದಲ್ಲಿ ತೊಡಗಿಸಿಕೊಂಡವರ ಪ್ರಮಾಣ ತಾಲೂಕಿಗಿಂತ ಶೇ. 7.91 ಜಿಲ್ಲೆಗಿಂತ ಶೇ.5.54ರಷ್ಟು ಮತ್ತು ರಾಜ್ಯಕ್ಕಿಂತ ಶೇ.11.3ರಷ್ಟು ಕಡಿಮೆಯಿದೆ. ತೃತೀಯ ವಲಯದಲ್ಲಿ ಹಂಪೆ ಗ್ರಾಮದಲ್ಲಿ ತೊಡಗಿಸಿಕೊಂಡವರ ಪ್ರಮಾಣ ತಾಲೂಕಿಗಿಂತ 16.54ರಷ್ಟು, ಜಿಲ್ಲೆಗಿಂತ ಶೇ.21.68ರಷ್ಟು ಮತ್ತು ರಾಜ್ಯಕ್ಕಿಂತ ಶೇ.18.31ರಷ್ಟು ಹೆಚ್ಚಿದೆ. 1971 ರಿಂದ 1991ರ ಅವಧಿಯಲ್ಲಿ ಹಂಪೆ ಗ್ರಾಮದ ಶ್ರಮ ವಿಭಜನೆಯ ವಲಯವಾರು ವಿಂಗಡಣೆಯಲ್ಲಿನ ಬದಲಾವಣೆ ಎಂದರೆ 1971ರಲ್ಲಿ ಪ್ರಾಥಮಿಕ ವಲಯದಲ್ಲಿ ಶೇ.71.48ರಷ್ಟು ಜನ ಭಾಗಿಗಳಾಗಿದ್ದರೆ, 1991ರಲ್ಲಿ ಇದರ ಪ್ರಮಾಣ ಶೇ.60.35ಕ್ಕೆ ಇಳಿದಿದೆ. ಈ ಅವಧಿಯಲ್ಲಿ ದ್ವಿತೀಯ ವಲಯದಲ್ಲಿ ಭಾಗಿಗಳಾದವರ ಸಂಖ್ಯೆ ಶೇ.7.52 ಇದ್ದದ್ದು, 1.88ಕ್ಕೆ ಇಳಿದಿದೆ. ಆದರೆ ಇದೆ ಅವಧಿಯಲ್ಲಿ ತೃತೀಯ ವಲಯದಲ್ಲಿ ತೊಡಗಿಸಿಕೊಂಡವರ ಪ್ರಮಾಣ ಶೇ.21 ರಿಂದ 37.77ಕ್ಕೆ ಏರಿಕೆಯಾಗಿರುವುದು ಕಂಡುಬರುತ್ತದೆ. ಇದು ಪ್ರವಾಸೋದ್ಯಮದ ಪ್ರಮುಖ ಬೆಳವಣಿಗೆಯಾಗಿದೆ(ಕೋಷ್ಟಕ-26).

2001ರಲ್ಲಿ ಹಂಪೆ ಗ್ರಾಮದ ಪ್ರಧಾನ ಕೆಲಸಗಾರರ ಸಂಖ್ಯೆಯ ಪ್ರಮಾಣ ಶೇ.39.82. ಕೃಷಿಯಲ್ಲಿ ತೊಡಗಿಸಿಕೊಂಡವರ ಪ್ರಮಾಣ ಶೇ.43.69ರಷ್ಟು ಇದೆ. ಕಳೆದ ದಶಕಕ್ಕಿಂತ ಶೇ.16.20ರಷ್ಟು ಕಡಿಮೆ ಜನ ಕೃಷಿಯಲ್ಲಿ ತೊಡಗಿಸಿಕೊಂಡಿದ್ದಾರೆ. ಕೈಗಾರಿಕೆಯಲ್ಲಿ ಶೇ. 1.15 ಜನ ಅವಲಂಬಿತರಾಗಿದ್ದರೆ ಸೇವಾ ವಲಯದಲ್ಲಿ ದುಡಿಯುವವರ ಸಂಖ್ಯೆ ಗಣನೀಯವಾಗಿ ಏರಿಕೆಯಾಗಿದೆ. ಅದು 2001ರಲ್ಲಿ ಶೇ. 55.14ಕ್ಕೆ ಇದೆ. ಈ ಸಂಖ್ಯೆ ಕಳೆದ ದಶಕಕ್ಕಿಂತ ಶೇ. 17.37ರಷ್ಟು ನಿವ್ವಳ ಏರಿಕೆ ಕಂಡಿದೆ. ಹೊಸಪೇಟೆ ತಾಲೂಕಿನ ಪ್ರಾಥಮಿಕ ವಲಯದಲ್ಲಿನ ಜನಸಂಖ್ಯೆ ಅವಲಂಬಿತ ಪ್ರಮಾಣ ಶೇ.68.96ರಷ್ಟಿದೆ. ದ್ವಿತಿಯ ವಲಯದಲ್ಲಿ ಶೇ.9.80ರಷ್ಟು ತೊಡಗಿಸಿಕೊಂಡಿದ್ದರೆ, ಸೇವಾವಲಯದಲ್ಲಿ ಶೇ.21.23ರಷ್ಟು ಜನ ತೊಡಗಿಸಿಕೊಂಡಿದ್ದಾರೆ.ಬಳ್ಳಾರಿ ಜಿಲ್ಲೆಯಲ್ಲಿ ಪ್ರಾಥಮಿಕ ವಲಯದಲ್ಲಿ ಶೇ.76.48 ಇದ್ದರೆ,ಕೈಗಾರಿಕಾ ವಲಯದಲ್ಲಿ ಜನಸಂಖ್ಯೆಯ ಪ್ರಮಾಣ ಶೇ.7.42ರಷ್ಟಿದೆ. ಇದೆ ಅವಧಿಯಲ್ಲಿ ತೃತೀಯ ವಲಯದಲ್ಲಿ ಜನಸಂಖ್ಯೆಯ ಪ್ರಮಾಣ ಶೇ.16.09ರಷ್ಟಿದೆ. ರಾಜ್ಯದಲ್ಲಿ ಪ್ರಾಥಮಿಕ ವಲಯದ ಅವಲಂಬಿತರ ಸಂಖ್ಯೆ ಶೇ.67.36 ಇದೆ. ದ್ವಿತಿಯ ವಲಯದಲ್ಲಿನ ಅವಲಂಬಿತರ ಸಂಖ್ಯೆ ಶೇ. 13.18 ರಷ್ಟಿದ್ದರೆ, ತೃತೀಯ ವಲಯದ ಅವಲಂಬಿತರ ಸಂಖ್ಯೆ ಶೇ. 19.46ರಷ್ಟಿದೆ. ತೃತೀಯವಲಯದಲ್ಲಿ ಹಂಪೆಯ ಜನಸಂಖ್ಯೆಯು ತಾಲೂಕು, ಜಿಲ್ಲೆಹಾಗೂ ರಾಜ್ಯಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ತೊಡಗಿರುವುದು ಈ ಮೇಲಿನ ಆಂಕಿ ಅಂಶಗಳಿಂದ ತಿಳಿದುಬರುತ್ತದೆ (ಕೋಷ್ಟಕ-26).[21]

[illegible]

ಕಳೆದ ಮೂರು ದಶಕಗಳಲ್ಲಿ ಶ್ರಮಶಕ್ತಿಯ ವಿಭಜನೆಯ ಬದಲಾವಣೆಯನ್ನು ಅಂಕಿ-ಅಂಶಗಳಿಂದ ತಿಳಿದುಬರುವುದೇನೆಂದರೆ ಹಂಪೆಯಲ್ಲಿ ಪ್ರಾಥಮಿಕ ವಲಯದಿಂದ ತೃತೀಯ ವಲಯಕ್ಕೆ ಸ್ಥಿತ್ಯಂತರಗೊಂಡಿರುವುದು ಸ್ಪಷ್ಟವಾಗಿದೆ. ಇದಕ್ಕೆ ಮುಖ್ಯ ಕಾರಣ 1990ರ ಈಚೆಗೆ ಪ್ರವಾಸೋದ್ಯಮ ಚಟುವಟಿಕೆಗಳ ತೀವ್ರ ಬೆಳವಣಿಗೆಯಾಗಿರುವುದು ಎಂದು ಗುರುತಿಸಲಾಗಿದೆ.

ಈ ತೃತೀಯ ವಲಯದಲ್ಲಿ ಮುಖ್ಯ ಆರ್ಥಿಕ ಚಟುವಟಿಕೆಗಳಾದ ಅತಿಥಿಗೃಹ, ರೆಸ್ಟೋರೆಂಟ್, ಹೋಟೆಲ್ ಅಂಗಡಿಗಳು, ತಂಪುಪಾನೀಯ, ಬೇಕರಿ ಇತ್ಯಾದಿಗಳಲ್ಲಿ ತೊಡಗಿಸಿಕೊಂಡವರ ಸಂಖ್ಯೆ 1994-95ರಲ್ಲಿ 76 ಇದೆ. ಜಾತಿವಾರು ನೋಡಿದಾಗ ರಜಪೂತ್ 14 ಕುಟುಂಬಗಳು, ಲಿಂಗಾಯಿತ 23, ನಾಯಕ 04, ಕ್ಷತ್ರಿಯ 04, ವೈಶ್ಯ 06, ಮುಸ್ಲಿಂ 06 ಮತ್ತು ಇತರ ಜಾತಿಗಳ 21 ಕುಟುಂಬಗಳು ಈ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿವೆ (ಕೋಷ್ಟಕ-27). 1997-98ರಲ್ಲಿ ಆರ್ಥಿಕ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿದ್ದ ಕುಟುಂಬಗಳ ಸಂಖ್ಯೆ 133 ಇದೆ. ಇದರಲ್ಲಿ ರಜಪೂತ್ 19, ಲಿಂಗಾಯಿತ 45, ನಾಯಕ 21, ಕ್ಷತ್ರಿಯ 08, ವೈಶ್ಯರ 07, ವಡ್ಡರು 07, ಲಂಬಾಣಿಗಳ 02, ಕುರುಬರು 04, ಬ್ರಾಹ್ಮಣರು 02 ಹಾಗೂ ಇತರ ಜಾತಿಯವರ 21 ಕುಟುಂಬಗಳು ಪ್ರವಾಸೋದ್ಯಮದ ಪೂರಕ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿವೆ(ಕೋಷ್ಟಕ-28). 2000-01ರಲ್ಲಿ ಪ್ರವಾಸೋದ್ಯಮದ ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡ ಕುಟುಂಬಗಳ ಸಂಖ್ಯೆ 238 ಇದರಲ್ಲಿ ಒಂದಕ್ಕಿಂತ ಹೆಚ್ಚು ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವ ಕುಟುಂಬಗಳ ಸಂಖ್ಯೆ 79 ಇದ್ದು, ಇವುಗಳ ಒಟ್ಟು ಸಂಖ್ಯೆ 317 ಆಗಿದೆ. ಪ್ರಮುಖವಾಗಿ ಈ ಕುಟುಂಬಗಳಲ್ಲಿ ರಜಪೂತ್‌ರ 36, ಲಿಂಗಾಯಿತ 61, ನಾಯಕ 48, ಕ್ಷತ್ರಿಯರ 21, ಬ್ರಾಹ್ಮಣ 17 , ಮುಸ್ಲಿಂ 24, ಲಂಬಾಣಿ 18, ವಡ್ಡರು 12, ವೈಶ್ಯರ 19, ಕೀಳ್ಯಾಕ್ಯಾತರ 08, ಕುರುಬರ 09 ಕುಟುಂಬಗಳು ಈ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಅಲ್ಲದೆ ಇತರ ಜಾತಿಯವರು ಪ್ರವಾಸೋದ್ಯಮ ಪೂರಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದಾರೆ(ಕೋಷ್ಟಕ-29)

1994ರಿಂದ 2001ರ ಅವಧಿಯಲ್ಲಿ ಆರ್ಥಿಕ ಚಟುವಟಿಕೆಯಲ್ಲಿ ತೊಡಗಿಸಿಕೊಂಡ ಕುಟುಂಬಗಳ ಸಂಖ್ಯೆ 76 ರಿಂದ 238ಕ್ಕೆ ಏರಿದೆ. ಇದರಲ್ಲಿ 1994ರಲ್ಲಿ ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳದಿರುವ ಹಿಂದೂಳಿದ ವರ್ಗಗಳು, ಪರಿಶಿಷ್ಟಜಾತಿ ಮತ್ತು ಪಂಗಡದ ಜನರು ಹೆಚ್ಚು ಭಾಗಿಯಾಗುತ್ತಿರುವುದು ಕಂಡುಬರುವ ಸಂಗತಿಯಾಗಿದೆ. ಪ್ರವಾಸೋದ್ಯಮ ಪೂರಕ ಚಟುವಟಿಕೆಗಳು ಈ ವರ್ಗಗಳಿಗೆ ಆರ್ಥಿಕ ಸಬಲತೆಯನ್ನು ಕೊಡಮಾಡಿರುವುದು ಕಂಡುಬರುವ ಮುಖ್ಯ ವಿಷಯವಾಗಿದೆ. 1991ರಲ್ಲಿ ಕೃಷಿಯಲ್ಲಿ ತೊಡಗಿಸಿಕೊಂಡ ಕುಟುಂಬಗಳ ಸಂಖ್ಯೆ 60 ಇದ್ದರೆ, 2001ರಲ್ಲಿ 77 ಆಗಿದೆ. ಕೃಷಿ ಕಾರ್ಮಿಕ ಕುಟುಂಬಗಳ ಸಂಖ್ಯೆ 329 ಇದ್ದದ್ದು, 124ಕ್ಕೆ ಇಳಿದಿದೆ. ಹಾಗೆಯೆ ವ್ಯಾಪಾರದಲ್ಲಿ ತೊಡಗಿಸಿಕೊಂಡವರ ಸಂಖ್ಯೆ 76 ಇದ್ದದ್ದು, 238ಕ್ಕೆ ಏರಿಕೆಯಾಗಿದೆ. ಇತರೆ ಕೆಲಸ(ಅರೆ ಸರಕಾರಿ, ಸರಕಾರಿ ಉದ್ಯೋಗ ಇತ್ಯಾದಿ)ಗಳಲ್ಲಿ ತೊಡಗಿಸಿಕೊಂಡಿರುವ ಕುಟುಂಬಗಳ ಸಂಖ್ಯೆ 20 ರಿಂದ 46ಕ್ಕೆ

[illegible]

ಏರಿಕೆಯಾಗಿದೆ. ಈ ಅಂಕಿ-ಅಂಶಗಳಿಂದ ಕಂಡುಬರುವುದೇನೆಂದರೆ ಮುಖ್ಯವಾಗಿ ಕೃಷಿಕಾರ್ಮಿಕರ ಕುಟುಂಬಗಳ ಸಂಖ್ಯೆ ಕಡಿಮೆಯಾಗಿರುವುದು ಮತ್ತು ವ್ಯಾಪಾರ ವಹಿವಾಟುಗಳಲ್ಲಿ ತೊಡಗಿಸಿ ಕೊಂಡಿರುವವರ ಸಂಖ್ಯೆ ಹೆಚ್ಚಿರುವುದು ಕಂಡುಬರುತ್ತದೆ(ಕೋಷ್ಟಕ-30).

1994-1995ರ ನಂತರ ಹಂಪೆ ಗ್ರಾಮಪಂಚಾಯತಿಯಲ್ಲಿ ಗ್ರಾಮದ ಆರ್ಥಿಕ ಚಟುವಟಿಕೆಗಳ ಬಗ್ಗೆ ಅಂಕಿ ಅಂಶಗಳು ಲಭ್ಯವಿದ್ದು, ಈ ಅಂಕಿ-ಅಂಶಗಳನ್ನು ಇಂದಿನ ಅಂಕಿ-ಅಂಶಗಳಿಗೆ ತುಲನೆ ಮಾಡಲು ಬಳಸಿಕೊಳ್ಳಲಾಗಿದೆ. 1994-95ರಲ್ಲಿ ಅತಿಥಿಗೃಹ ಮತ್ತು ರೆಸ್ಟೋರೆಂಟ್‌ಗಳ ಸಂಖ್ಯೆ ಕೇವಲ 13. ಇವುಗಳ ಸಂಖ್ಯೆ 2001ರಲ್ಲಿ 61ಕ್ಕೆ ಏರಿಕೆಯಾಗಿದೆ. ಗ್ರಾಮದ 48 ಕುಟುಂಬಗಳು ಅತಿಥಿಗೃಹ ಮತ್ತು ರೆಸ್ಟೋರೆಂಟ್ ಉದ್ಯಮಗಳನ್ನು ಹೊಸದಾಗಿ ಆರಂಭಿಸಿದ್ದಾರೆ. ಅತಿಥಿ ಗೃಹಗಳನ್ನು ಆರಂಭಿಸುವ ಮುನ್ನ ಇವರಲ್ಲಿ 20ಕುಟುಂಬಗಳು ಹೋಟೆಲ್‌ಗಳನ್ನು ನಡೆಸುತ್ತಿದ್ದರು. ವಿದೇಶಿ ಪ್ರವಾಸಿಗರಿಗೆ ಸೇವೆ ನೀಡುವ ಅತಿಥಿಗೃಹ ಮತ್ತು ರೆಸ್ಟೋರೆಂಟಗಳಲ್ಲಿ ಹೆಚ್ಚು ಲಾಭಾಂಶ ಸಿಗುತ್ತದೆಂದು ತಿಳಿದು ಅವರು ಆ ಬದಲಾವಣೆ ಮಾಡಿಕೊಂಡಿದ್ದಾರೆ. ಕೃಷಿಯಲ್ಲಿ ತೊಡಗಿಸಿಕೊಂಡ 13 ಕುಟುಂಬಗಳು ಅತಿಥಿಗೃಹ ಮತ್ತು ರೆಸ್ಟೋರೆಂಟ್‌ಗಳನ್ನು ಆರಂಭಿಸಿದರು. ಇದಕ್ಕೆ ಮುಖ್ಯ ಪ್ರೇರಣೆಯೆಂದರೆ ಪ್ರವಾಸೋದ್ಯಮ ಕೃಷಿಗಿಂತ ಹೆಚ್ಚಿನ ಆದಾಯವನ್ನು ತರುವುದೆಂಬ ನಂಬಿಕೆ. ಕೃಷಿ ಕಾರ್ಮಿಕರಾಗಿದ್ದ 15 ಕುಟುಂಬಗಳು ಚಿಕ್ಕ ಪ್ರಮಾಣದಲ್ಲಿ ವಿದೇಶಿ ಪ್ರವಾಸಿಗರಿಗೆ ಸೇವೆ ನೀಡುವ ರೆಸ್ಟೋರೆಂಟ್‌ಗಳನ್ನು ಶುರುಮಾಡಿದವು. ಈ ಅವಧಿಯಲ್ಲಿ ಕೃಷಿ ಕೂಲಿ ಕಡಿಮೆ ಇರುವುದರಿಂದ ಹೆಚ್ಚಿನ ಆದಾಯ ಗಳಿಸಲು ವ್ಯಾಪಾರ-ವ್ಯವಹಾರಗಳಲ್ಲಿ ತೊಡಗಿಸಿಕೊಳ್ಳುತ್ತ ಬಂದಿವೆ. 1994-95ರಲ್ಲಿ ದೇಶಿ ತಿಂಡಿ ತಿನಸುಗಳನ್ನು ಮಾರುವ ಹೋಟೆಲುಗಳ ಸಂಖ್ಯೆ 21 ಇತ್ತು. ಆದರೆ 2001ರಲ್ಲಿ ಅವುಗಳ ಸಂಖ್ಯೆ 20ಕ್ಕೆ ಇಳಿದಿದೆ. ಹಿಂದಿನಿಂದಲೂ ಹೋಟೆಲನ್ನು ಮಾಡಿಕೊಂಡು ಬಂದವರು ಆ ವ್ಯಾಪಾರ ಮುಂದುವರಿಸಿದ್ದಾರೆ. ಇವರ ಪ್ರಕಾರ ದೇಶಿಯ ಹೋಟೆಲ್‌ಗಳಲ್ಲಿ 12 ತಿಂಗಳು ವ್ಯಾಪಾರ ನಡೆಯುತ್ತದೆ. ವಿದೇಶಿ ಪ್ರವಾಸಿಗರನ್ನು ಗಮನದಲ್ಲಿಟ್ಟುಕೊಂಡು ನಡೆಸುವ ವ್ಯವಹಾರಗಳು ಕೇವಲ ಸೀಸನ್‌ನಲ್ಲಿ ಮಾತ್ರ ನಡೆಯುತ್ತವೆ. ಆದುದರಿಂದ ಇವರು ಹೋಟೆಲ್ ಉದ್ಯಮದಲ್ಲಿಯೆ ಮುಂದುವರಿದಿದ್ದಾರೆ. ಜೊತೆಗೆ ಆದಾಯವು ಹಿಂದಿಗಿಂತ ಹೆಚ್ಚು ಸಿಗುತ್ತದೆ ಎಂದು ತಿಳಿಸುತ್ತಾರೆ.

ಕೃಷಿ ಕಾರ್ಮಿಕರಾಗಿದ್ದ 77 ಕುಟುಂಬಗಳು ಇಂದು ಬಂಡಿ ಹೋಟೆಲುಗಳ ವ್ಯಾಪಾರ, ಪೆಟ್ಟಿಗೆ ಅಂಗಡಿ, ಬೀದಿ ಬದಿಯಲ್ಲಿ ಮಾರಾಟ ಮಾಡುವ ಗೊಂಬೆ ಅಂಗಡಿ, ತೆಂಗಿನಕಾಯಿ ವ್ಯಾಪಾರ, ಐಸ್‌ಕ್ರೀಮ್ ಮಾರಾಟ, ಹಣ್ಣು ಮತ್ತು ತರಕಾರಿಗಳ ಮಾರಾಟ, ಹಳೆಯ ವಸ್ತುಗಳ ಮಾರಾಟ, ಲಂಬಾಣಿ ಉಡುಪುಗಳ ಮಾರಾಟ, ಬಟ್ಟೆ ಹೊಲಿದು ಮಾರಾಟ ಮಾಡುವುದು, ಬಳೇ ಅಂಗಡಿ ಇತ್ಯಾದಿಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಈ ಕೃಷಿ ಕಾರ್ಮಿಕ ಕುಟುಂಬಗಳು ವ್ಯಾಪಾರದತ್ತ ಬರಲು

ಮುಖ್ಯ ಕಾರಣ ನಿರಂತರವಾಗಿ ಕೃಷಿಕೂಲಿ ಸಿಗದಿರುವುದು ಹಾಗು ಕೃಷಿ ಕೂಲಿ ಕಡಿಮೆ ಆಗಿರುವುದು. ಕೃಷಿಯಲ್ಲೂ ಆದಾಯ ಕಡಿಮೆ ಹಾಗೂ ಸ್ವಂತ ಭೂಮಿ ಇರುವವರ ಸಂಖ್ಯೆಯು ಕಡಿಮೆ. ಬೇರೆಯವರ ಜಮೀನನ್ನು ಗುತ್ತಿಗೆ ಪಡೆದು ಕೃಷಿ ಮಾಡಬೇಕು. ಇದು ತುಂಬಾ ಏರುಪೇರಿನ ವ್ಯವಹಾರ. ಯಾಕೆಂದರೆ ಇಲ್ಲಿ ಬಾಳೆ ಬೆಳೆಯುವುದು ಹೆಚ್ಚು. ನೈಸರ್ಗಿಕ ವಿಕೋಪದಿಂದ ಅನಾಹುತವಾದರೆ ಕೃಷಿಕ ಗೆ ಕನಿಷ್ಠ ಆದಾಯವೂ ಬರುವುದಿಲ್ಲ. ಹಾಗೆಂದು ಗುತ್ತಿಗೆ ಹಣದಿಂದ ಮುಕ್ತಿ ಇಲ್ಲ. ಇಂತಹ ಕುಟುಂಬಗಳು ಅನಿವಾರ್ಯವಾಗಿ ಸಣ್ಣ ಪ್ರಮಾಣದ ವ್ಯಾಪಾರ ಆರಂಭಿಸುತ್ತಿವೆ. ಅವುಗಳಲ್ಲಿ 10 ಕುಟುಂಬಗಳು ಗೊಂಬೆ ಅಂಗಡಿ, ತಂಪು ಪಾನೀಯ, ಪುಸ್ತಕ, ಬೇಕರಿ ಮುಂತಾದ ವ್ಯವಹಾರಗಳ ಮೂಲಕ ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿವೆ. ಹಿಂದೆ ಪೆಟ್ಟಿಗೆ ಅಂಗಡಿಯಲ್ಲಿ ವ್ಯಾಪಾರಕ್ಕೆ ಇಳಿದ 8 ಕುಟುಂಬಗಳು, ಇಂದು ಕಿರಾಣಿ ಅಂಗಡಿ ಮತ್ತು ಸ್ಟೇಷನರಿ ಶಾಪ್‌ಗಳನ್ನು ಪ್ರಾರಂಭಿಸಿದ್ದಾರೆ. ಹಣ್ಣುಮಾರುತ್ತಿದ್ದ 07 ಕುಟುಂಬಗಳು, ಇಂದು ತೆಂಗಿನಕಾಯಿ ವ್ಯಾಪಾರಿಗಳಾಗಿದ್ದಾರೆ. ಉರುವಲು ಸೌದೆಯನ್ನು ತಂದು ಮಾರುತ್ತಿದ್ದ 6 ಲಂಬಾಣಿ ಕುಟುಂಬಗಳು ಬೀದಿಯ ಬದಿಯಲ್ಲಿ ಲಂಬಾಣಿ ಉಡುಪಿನ ಮಾರಾಟ ಮಾಡುತ್ತಿದ್ದಾರೆ. ಗೆಸ್ಟ್‌ಹೌಸ್‌ಗಳಲ್ಲಿ ಕೆಲಸದಲ್ಲಿದ್ದ 12 ಜನ ಹೆಂಗಸರು ಇಂದು ಬಟ್ಟೆ ಹೊಲಿದು ಮಾರುವ ವ್ಯಾಪಾರದಲ್ಲಿ ನಿರತರಾಗಿದ್ದಾರೆ. ಎಸ್.ಟಿ.ಡಿ, ಬೂತ್, ಇಂಟರ್‌ನೆಟ್ ಮತ್ತು ಹಣದ ವಿನಿಮಯ ಮಳಿಗೆಗಳನ್ನು, ಹಿಂದಿನಿಂದಲೂ ಅತಿಥಿಗೃಹ, ರೆಸ್ಟೋರೆಂಟ್‌ಗಳಲ್ಲಿ ತೊಡಗಿಸಿಕೊಂಡವರು, ನಿರುದ್ಯೋಗಿಗಳು ಪ್ರಾರಂಭಿಸಿದ್ದಾರೆ. ಈ ಸ್ಥಿತ್ಯಂತರಕ್ಕೆ ಪ್ರಮುಖ ಕಾರಣವೆಂದರೆ ಹಂಪೆಯ ಗ್ರಾಮದಲ್ಲಿನ ಪ್ರವಾಸೋದ್ಯಮದ ಬೆಳವಣಿಗೆಯೆ ಆಗಿದೆ.

ತಲಾ ವರಮಾನ

ತಲಾ ವರಮಾನವು ಕುಟುಂಬದ ಆರ್ಥಿಕ ಬೆಳವಣಿಗೆಯನ್ನು ಮಾಪನ ಮಾಡುವ ಸಾಂಪ್ರದಾಯಿಕ ಸೂಚ್ಯಂಕವಾಗಿದೆ. ಕುಟುಂಬದ ವರಮಾನ ಹೆಚ್ಚಾದರೆ ಕುಟುಂಬ ಆರ್ಥಿಕವಾಗಿ ಸದೃಢವಾಗಿರುತ್ತದೆ ಎನ್ನುವ ನಂಬಿಕೆ ಇದೆ. ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರು ಬರುವುದರೊಂದಿಗೆ, ಹೆಚ್ಚು ದಿನಗಳ ಕಾಲ ತಂಗುವ ಮೂಲಕ ಪ್ರವಾಸಿಗರು ಹೆಚ್ಚು ಹಣವನ್ನು ಖರ್ಚು ಮಾಡಲು ಸಾಧ್ಯವಾಗುತ್ತದೆ. ಈ ಮೂಲಕ ಅನುಭೋಗಿಕ ಗುಣಕದಿಂದ ಹೆಚ್ಚಿನ ಆದಾಯ ಸೃಷ್ಟಿಯಾಗುತ್ತದೆ.[22] ಈ ಆರ್ಥಿಕ ಸದೃಢತೆಯು ಕುಟುಂಬದ ಸಾಮಾಜಿಕ ಸ್ಥಿತಿಯನ್ನು ಬದಲಾಯಿಸುತ್ತದೆ ಎನ್ನುವ ಗ್ರಹಿಕೆ ಇದೆ. ಹಂಪೆ ಗ್ರಾಮ ಪ್ರವಾಸೋದ್ಯಮ ತಾಣವಾಗಿ, ಪ್ರವಾಸೋದ್ಯಮ ಪೂರಕ ಚಟುವಟಿಕೆಗಳು ಬೆಳೆಯಲು ಅವಕಾಶಗಳನ್ನೊಡ್ಡಿದೆ. ಈ ಪ್ರವಾಸೋದ್ಯಮ ಪೂರಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದರಿಂದ ಕುಟುಂಬಗಳ ಆದಾಯದ ಗಳಿಕೆಯ ಸಾಧ್ಯತೆ ಹೆಚ್ಚಿರಬಹುದು. ಕೃಷಿ ಇಂದು ಕೂಡ ಪ್ರಕೃತಿ ಆಧಾರಿತವಾಗಿದೆ. ಹಾಗಾಗಿ ಆದಾಯ ಗಳಿಕೆಯಲ್ಲಿ ನಿರ್ದಿಷ್ಟತೆ ಇರುವುದಿಲ್ಲ. ಕೃಷಿ ಕೂಲಿಯಲ್ಲಿ

[illegible]

[illegible]

ತೊಡಗಿರುವವರ ಆದಾಯ ಕಡಿಮೆ ಇರುವುದು. ಜತೆಗೆ ಪ್ರತಿನಿತ್ಯ ಕೂಲಿ ದೊರಕುತ್ತದೆಂಬ ಭರವಸೆಯು ಇಲ್ಲದಿರುವುದು ಇತ್ಯಾದಿ ಕಾರಣಗಳು ಜನರನ್ನು ಪ್ರವಾಸೋದ್ಯಮದತ್ತ ಆಕರ್ಷಿಸಿವೆ ಎಂದು ಈಗಾಗಲೇ ನೋಡಿದ್ದೇವೆ. ಮೊರಾಕ್ಕೊ ದೇಶದ ಪ್ರವಾಸಿ ತಾಣಗಳಲ್ಲಿನ ಪ್ರವಾಸೋದ್ಯಮದ ಹೋಟೆಲ್ ಮತ್ತು ರೆಸ್ಟೋರೆಂಟ್‌ಗಳ ವ್ಯವಹಾರದಲ್ಲಿನ ಆದಾಯವು ಕೃಷಿಗಿಂತ 7 ಪಟ್ಟು ಮತ್ತು ಕಟ್ಟಡ ನಿರ್ಮಾಣ ಕೆಲಸಕ್ಕಿಂತ 2 ಪಟ್ಟು ಹೆಚ್ಚಿದೆ ಎಂದು ಕೇಜಲ್ಸ್‌ಟ್ರಾಮ ಅಧ್ಯಯನ ತಿಳಿಸುತ್ತದೆ.[23] ಹಂಪೆ ಗ್ರಾಮ ನೀರಾವರಿ ಪ್ರದೇಶವನ್ನು ಒಳಗೊಂಡಿದೆ. ಬೇರೆ ಒಣ ಭೂಪ್ರದೇಶಕ್ಕಿಂತ ಹೆಚ್ಚಿನ ಉದ್ಯೋಗ ಅವಕಾಶ ಮತ್ತು ಹೆಚ್ಚಿನ ಕೂಲಿಯು ಕೂಡ ಸಿಗುತ್ತಿದೆ. ಪ್ರಾಥಮಿಕ ಅಂಕಿ ಅಂಶಗಳ ಪ್ರಕಾರ 1990ರ ದಶಕದಲ್ಲಿ ಕೃಷಿಕೂಲಿಯು ಮಹಿಳೆಯರಿಗೆ ರೂ.10 ಮತ್ತು ಪುರುಷರಿಗೆ ರೂ. 15 ಇತ್ತು. ಕೃಷಿಕೂಲಿ 2001ರಲ್ಲಿ ಮಹಿಳೆಯರಿಗೆ ರೂ.30 ಮತ್ತು ಪುರುಷರಿಗೆ ರೂ.50 ಆಗಿದೆ. ಅಂದರೆ ಶೇಕಡಾ 200ಕ್ಕಿಂತಲೂ ಹೆಚ್ಚಿನ ಏರಿಕೆಯನ್ನು ಕೃಷಿಕೂಲಿ ಕಂಡಿದೆ. ಇದು ಸುತ್ತಮುತ್ತಲಿನ ಗ್ರಾಮಗಳಿಗೆ ಹೋಲಿಸಿದರೆ ಆಗಾಧ ಪ್ರಮಾಣದ ಏರಿಕೆಯಾಗಿದೆ. ಆದರೂ ಜನ ಪ್ರವಾಸೋದ್ಯಮ ದತ್ತ ಬರಬೇಕಾದರೆ ಅದರಲ್ಲಿನ ಆದಾಯ ಕೃಷಿ ಅಥವಾ ಕೃಷಿ ಕೂಲಿಗಿಂತ ಹೆಚ್ಚು ಇರಲೇಬೇಕು. ಜತೆಗೆ ಕೃಷಿಯಲ್ಲಿನ ಕೆಲವು ಸಮಸ್ಯೆಗಳು ಕೂಡ ಜನರನ್ನು ಪ್ರವಾಸೋದ್ಯಮತ್ತ ಸೆಳೆದಿರಬಹುದು ಎಂದು ಹೇಳಬಹುದು.

ಈ ಪ್ರದೇಶದ ಪ್ರಮುಖ ಬೆಳೆಗಳೆಂದರೆ ಕಬ್ಬು, ಬಾಳೆ, ಭತ್ತ, ತೆಂಗು ಹಾಗೂ ಹೂವಿನಬೆಳೆ (ಮಲ್ಲಿಗೆ). ಕಬ್ಬು, ಬಾಳೆಯನ್ನು ಹೆಚ್ಚು ಬೆಳೆಯಲಾಗುತ್ತದೆ. ತೆಂಗನ್ನು ಕಬ್ಬು ಮತ್ತು ಬಾಳೆ ಬೆಳೆಗಳ ಮಧ್ಯದಲ್ಲಿ ಬೆಳೆಯುತ್ತಾರೆ. ಬಾಳೆ ಮತ್ತು ಕಬ್ಬು ನಂತರದ ಸ್ಥಾನವನ್ನು ಭತ್ತದ ಬೆಳೆ ಪಡೆದಿದೆ. ಭತ್ತ ಬೆಳೆಯುವ ಪ್ರದೇಶಗಳು ನದಿಯ ದಡದಲ್ಲಿಯೆ ಹೆಚ್ಚು ಇದೆ. ನದಿಯಲ್ಲಿ ನೀರು ಕಡಿಮೆಯಾದ ಸಂದರ್ಭದಲ್ಲಿ -ಜನವರಿಯಿಂದ ಮೇ ತಿಂಗಳೊಳಗೆ - ಭತ್ತ ಬೆಳೆಯುತ್ತಾರೆ. ಭತ್ತ ಬೆಳೆಯುವ ಪ್ರದೇಶವು ನದಿ ಪಾತ್ರದ ಒತ್ತುವರಿ ಜಮೀನು ಆಗಿದೆ. ಇದರಿಂದ ಶಾಶ್ವತ ಆದಾಯ ಇದೆ ಎನ್ನಲು ಸಾಧ್ಯವಿಲ್ಲ. ಇನ್ನೂ ಹೂವಿನ ಬೆಳೆ ಅಲ್ಪ ಪ್ರಮಾಣದಲ್ಲಿ ಬೆಳೆಯುತ್ತಾರೆ. ಕೃಷಿಯಲ್ಲಿ ಆಧುನಿಕ ಯಂತ್ರಗಳ ಬಳಕೆ ಕೃಷಿ ಕೂಲಿಗಳ ಬೇಡಿಕೆಯನ್ನು ತಕ್ಕಮಟ್ಟಿಗೆ ಕಡಿತಗೊಳಿಸಿದೆ. ಹೀಗೆ ಕೃಷಿಯಲ್ಲಿ ಕೂಲಿ ಕೆಲಸ ನಿರಂತರವಾಗಿ ದೊರೆಯುತ್ತಿಲ್ಲ. ಜತೆಗೆ ಆದಾಯ ಕೂಡ ಕಡಿಮೆ. ಇದಕ್ಕೆ ಹೋಲಿಸಿದರೆ ಪ್ರವಾಸೋದ್ಯಮ ಚಟುವಟಿಕೆಗಳು ನಿರಂತರವಾಗಿ ಉದ್ಯೋಗವನ್ನು ನೀಡುತ್ತಿವೆ. ಅದಕ್ಕಿಂತಲೂ ಮುಖ್ಯ ಪ್ರವಾಸೋದ್ಯಮ ಕೃಷಿಗಿಂತ ಹೆಚ್ಚಿನ ಆದಾಯ ತರುತ್ತಿದೆ. ಹಾಗಾಗಿ ಅನೇಕ ಕುಟುಂಬಗಳು ಕೃಷಿಯನ್ನು ತೊರೆದು ಪ್ರವಾಸೋದ್ಯಮದತ್ತ ಬಂದಿವೆ.

ಸೀಸನ್ ಪ್ರತಿ ವರ್ಷ ನವೆಂಬರ್ ತಿಂಗಳಲ್ಲಿ ಶುರುವಾಗಿ ಮಾರ್ಚ್ ತಿಂಗಳಿಗೆ ಕೊನೆಗೊಳ್ಳುತ್ತದೆ. ಈ ಪ್ರವಾಸೋದ್ಯಮ ಪೂರಕ ಚಟುವಟಿಕೆಗಳು ಸೀಸನ್‌ನಲ್ಲಿ ಹೆಚ್ಚು ನಡೆಯುತ್ತದೆ. ಸೀಸನ್

[illegible]

ಅನ್ನುವುದನ್ನು ಸ್ಥಳೀಯರು ವಿದೇಶಿ ಪ್ರವಾಸಿಗರು ಹಂಪೆಗೆ ಬರುವುದನ್ನು ದೃಷ್ಟಿಯಲ್ಲಿಟ್ಟುಕೊಂಡು ಹೇಳುತ್ತಾರೆ. ವಿದೇಶಿಯರು ಹೆಚ್ಚಿನ ಸಂಖ್ಯೆಯಲ್ಲಿ ನವೆಂಬರ್ ತಿಂಗಳಿನಿಂದ ಮಾರ್ಚ್ ತಿಂಗಳೊಳಗೆ ಬಂದು ಹೋಗುತ್ತಾರೆ. ವಿದೇಶಿ ಪ್ರವಾಸಿಗರ ಆಧಾರಿತ ಆರ್ಥಿಕ ಚಟುವಟಿಕೆಗಳಲ್ಲಿ ನಿರತರಾದವರು, ಅನ್‌ಸೀಸನ್ ಸಮಯದಲ್ಲಿ (ಏಪ್ರಿಲ್ ತಿಂಗಳಿಂದ-ಅಕ್ಟೋಬರ್ ತಿಂಗಳಿನವರೆಗೆ) ಇತರ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುತ್ತಾರೆ. ಕೆಲವರು ದೇಶಿ-ವಿದೇಶಿ ಪ್ರವಾಸಿಗರ ಅಗತ್ಯತೆಗಳ ಪೂರೈಕೆಯಲ್ಲಿ ತೊಡಗಿಸಿಕೊಂಡವರು ಅನ್‌ಸೀಸನ್ ದಿನಗಳಲ್ಲಿ ದೇಶಿ ಪ್ರವಾಸಿಗರ ಅಗತ್ಯತೆಗಳನ್ನು ಪೂರೈಯಿಸುವ ಚಟುವಟಿಕೆಗಳಲ್ಲಿ ಪೂರ್ಣವಾಗಿ ತೊಡಗಿಸಿಕೊಳ್ಳುತ್ತಾರೆ. ದೇಶಿ ಪ್ರವಾಸಿಗರು (ಯಾತ್ರಿಕರು) ಸಾಮಾನ್ಯವಾಗಿ ಹಂಪೆಗೆ ವರ್ಷದ 12 ತಿಂಗಳಿನಲ್ಲಿಯೂ ಬಂದು ಹೋಗುತ್ತಾರೆ. ಹಂಪೆಯಲ್ಲಿನ ಬಹುಸಂಖ್ಯಾ ಕುಟುಂಬಗಳು ಒಂದಕ್ಕಿಂತ ಹೆಚ್ಚಿನ ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವುದು ಕಂಡುಬಂದಿದೆ.

ವಿದೇಶಿ ಪ್ರವಾಸಿಗರ ಅಗತ್ಯಗಳನ್ನು ಪೂರೈಸುವ ಅತಿಥಿಗೃಹ ಮತ್ತು ರೆಸ್ಟೋರೆಂಟ್, ಇಂಟರ್‌ನೆಟ್, ಹಣ ವಿನಿಮಯ ಮಳಿಗೆ, ಪ್ರವಾಸದ ಟಿಕೆಟ್‌ಗಳನ್ನು ಕಾದಿರಿಸುವುದು, ಪುರಾತನ ಅವಶೇಷ ವಸ್ತುಗಳ ಅಂಗಡಿ ಇತ್ಯಾದಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡವರ ಆದಾಯ ಹೆಚ್ಚಿದೆ. ಅತಿಥಿಗೃಹಗಳಲ್ಲಿ ಶೇ.13.04ರಷ್ಟು ರೂ. 200-500 ದಿನದ ವಹಿವಾಟನ್ನು ಹೊಂದಿದ್ದರೆ, ಶೇ.88.70ರಷ್ಟು ಅತಿಥಿಗೃಹಗಳು 500-1,000ಗಳ ದಿನದ ವಹಿವಾಟು ಇದ್ದರೆ, ಶೇ.(08.70) ಅತಿಥಿಗೃಹಗಳು 1,500 ರಷ್ಟು ಮೇಲ್ಪಟ್ಟು ದಿನದ ವಹಿವಾಟನ್ನು ಮಾಡುತ್ತಿವೆ(ಕೋಷ್ಟಕ-31). ವಿದೇಶಿಯ ಪ್ರವಾಸಿಗರಿಗೆ ಆಹಾರ ಪದಾರ್ಥ ಗಳನ್ನು ಪೂರೈಸುವ ರೆಸ್ಟೋರೆಂಟ್‌ಗಳಲ್ಲಿ ಶೇ.26.67ರಷ್ಟು ರೂ. 500-1000ದವರೆಗೆ ದಿನದ ವಹಿವಾಟುಗಳನ್ನು ಮಾಡಿದರೆ, ಶೇ.53.33ರಷ್ಟು ರೆಸ್ಟೋರೆಂಟ್‌ಗಳ ದಿನದ ವಹಿವಾಟು 1,000-1,500ರವರೆಗೆ ಇದೆ. ರೂ.1,500ರ ಮೇಲ್ಪಟ್ಟು ದಿನದ ವಹಿವಾಟನ್ನು ಹೊಂದಿದ ರೆಸ್ಟೋರೆಂಟ್‌ಗಳು ಶೇ.20ರಷ್ಟಿವೆ. ಹೋಟೆಲ್‌ಗಳಲ್ಲಿ ಶೇ.20ರಷ್ಟು ರೂ.200-500ರಗಳ ದಿನದ ಸಂಖ್ಯೆ ವಹಿವಾಟುಗಳು ಹೊಂದಿವೆ. ಶೇ.60ರಷ್ಟು ಹೋಟೆಲ್‌ಗಳು ರೂ.500-1,000 ದಿನದ ವಹಿವಾಟು ಹೊಂದಿವೆ. ಮತ್ತು ಶೇ.20ರಷ್ಟು ಹೋಟೆಲ್‌ಗಳು ದಿನದ ವಹಿವಾಟನ್ನು ರೂ.1,500ಕ್ಕಿಂತ ಹೆಚ್ಚು ಆಗಿದೆ.

ಎಲ್ಲಾ ಸಂಚಾರಿ ಹೋಟೆಲ್(ಬಂಡಿಹೋಟೆಲ್)ಗಳ ದಿನದ ವಹಿವಾಟು ರೂ.200-500 ಇದೆ. ಹಂಪೆಯಲ್ಲಿನ ವ್ಯಾಪಾರದ ವಹಿವಾಟು ಇತರ ಪ್ರದೇಶಗಳಿಗಿಂತ ಹೆಚ್ಚಿರುವುದಕ್ಕೆ ಹಂಪೆ ಪ್ರವಾಸಿ ತಾಣವಾಗಿರುವುದರಿಂದ ಸಾಧ್ಯವಾಗಿರುವುದು ಕಂಡುಬರುತ್ತದೆ(ಕೋಷ್ಟಕ-32). ಅಂಗಡಿಗಳ ವ್ಯಾಪಾರದ ವಹಿವಾಟು, ರೂ.200-500ರವರೆಗೆ ದಿನದ ವಹಿವಾಟು ಇರುವ ಅಂಗಡಿಗಳು ಶೇ.3.23 ಇದೆ. ಶೇ.48.39ರಷ್ಟು ಅಂಗಡಿಗಳು, ರೂ.500-1,000 ದಿನದ ವಹಿವಾಟನ್ನು ಹೊಂದಿವೆ.

ಶೇ.38.71ರಷ್ಟು ಅಂಗಡಿಗಳು ರೂ.1,000-1,500ರವರೆಗೆ ದಿನದ ವಾಹಿವಾಟನ್ನು ಹೊಂದಿವೆ. ಹಾಗೂ ಶೇ.3.23 ಅಂಗಡಿಗಳು, ರೂ.1,500ರ ಮೇಲ್ಪಟ್ಟು ದಿನದ ವಹಿವಾಟನ್ನೊಳಗೊಂಡಿವೆ. ಪೆಟ್ಟಿಗೆ ಅಂಗಡಿಗಳಲ್ಲಿ ಶೇ.68.18 ಅಂಗಡಿಗಳು ರೂ.200-500 ದಿನದ ವಹಿವಾಟುಗಳನ್ನು ಹೊಂದಿದ್ದರೆ, ಶೇ.31.82ರಷ್ಟು ಪೆಟ್ಟಿಗೆ ಅಂಗಡಿಗಳು ರೂ.500-1,000ವರೆಗೆ ಇದೆ. ಹಾಗೂ ಇತರೆ ವ್ಯಾಪಾರಿಗಳಾದ ಹಣ್ಣು, ತರಕಾರಿ, ಸಿದ್ಧ ಉಡುಪುಗಳ ಮಾರಾಟಗಾರರು 39 ಜನರಿದ್ದರೆ, ಇವರ ದಿನದ ವಹಿವಾಟು ರೂ.200-500 ಇದೆ(ಕೋಷ್ಟಕ-33). ಸಾರಿಗೆ ಸಂಪರ್ಕ ಸೌಲಭ್ಯಗಳಾದ ಎಸ್.ಟಿ.ಡಿ., ಇಂಟರ್‌ನೆಟ್, ಹಣದ ವಿನಿಮಯ ಮತ್ತು ಟ್ರಾವೆಲರ್ಸ್ ಶಾಪ್‌ಗಳ ದಿನದ ವಹಿವಾಟು ಇಂತಿದೆ. 10 ಎಸ್.ಟಿ.ಡಿ.ಭೂತಗಳಲ್ಲಿ ಶೇ.60ರಷ್ಟು ರೂ.500-1,000 ದಿನದ ವಹಿವಾಟು ಇದ್ದರೆ, ಶೇ.40ರಷ್ಟು ಎಸ್.ಟಿ.ಡಿ.ಭೂತಗಳ ವಹಿವಾಟು ರೂ.1,000-1,500 ಇದೆ. ಇಂಟರ್‌ನೆಟ್‌ಗಳಲ್ಲಿ ಶೇ.37.50ರಷ್ಟು ರೂ.500-1000 ದಿನದ ವಹಿವಾಟು ಪಡೆದಿದ್ದರೆ, ಶೇ.63.50ರಷ್ಟು ಇಂಟರ್‌ನೆಟ್‌ಗಳ ದಿನದ ವಹಿವಾಟು ರೂ.1000-1500ವರೆಗೆ ಇದೆ. ಹಣದ ವಿನಿಮಯ ಮತ್ತು ಟ್ರಾವೆಲರ್ಸ್‌ಗಳಲ್ಲಿ ಶೇ.14.29ರಷ್ಟು ಶಾಪ್‌ಗಳು ರೂ.200-500ದಿನದ ವಹಿವಾಟು ಇದ್ದರೆ, ಶೇ.61.90ರಷ್ಟು ಶಾಪ್‌ಗಳು ರೂ.500-1000 ವಹಿವಾಟನ್ನು ಹೊಂದಿವೆ. ಶೇ.23.81ರಷ್ಟು ಶಾಪ್‌ಗಳು ರೂ.1,000-1,500 ದಿನದ ವಹಿವಾಟನ್ನು ಹೊಂದಿವೆ. ಹಾಗೆಯೇ ಶೇ.33.33ರಷ್ಟು ದ್ವಿಚಕ್ರಗಳ ವಾಹನಗಳ ಬಾಡಿಗೆಯ ಶಾಪ್‌ಗಳು ರೂ.200-500ರವರೆಗೆ ದಿನದ ವಹಿವಾಟನ್ನು ಹೊಂದಿದ್ದರೆ, ಶೇ.50.00ರಷ್ಟು ಶಾಪ್‌ಗಳ ದಿನದ ವಹಿವಾಟು ರೂ.1,000-1,500 ಹೊಂದಿದೆ. ಹಾಗೂ ಶೇ.16.66ರಷ್ಟು ಶಾಪ್‌ಗಳು 1,000-1,500ರವರೆಗೆ ದಿನದ ವಹಿವಾಟನ್ನು ಪಡೆದಿವೆ(ಕೋಷ್ಟಕ-34).

1995-96ರಲ್ಲಿ ಹಂಪೆ ಗ್ರಾಮದ ತಲಾ ವರಮಾನ 9,011 ಇದ್ದು, ಬಳ್ಳಾರಿ ಜಿಲ್ಲೆಯ ತಲಾ ವರಮಾನ ರೂ.8,544 ಮತ್ತು ಕರ್ನಾಟಕ ರಾಜ್ಯದ ತಲಾ ವರಮಾನ ರೂ.9,384 ಆಗಿತ್ತು.[24] 2001ರಲ್ಲಿ ಹಂಪೆ ಗ್ರಾಮದ ಜನತೆಯ ತಲಾವರಮಾನ ರೂ.20,810 ಆಗಿದೆ. ಹಂಪೆಯ ಜನರ ಒಟ್ಟು ಆದಾಯ ಮತ್ತು ತಲಾವರಮಾನವನ್ನು ಹಂಪೆಯಲ್ಲಿಯ ಆರ್ಥಿಕ ಚಟುವಟಿಕೆಗಳ ದಿನನಿತ್ಯದ ವಹಿವಾಟು ಹಾಗೂ ಭೂ ಹಿಡುವಳಿಯಿಂದ ಬರುವ ನಿರೀಕ್ಷಿತ ಆದಾಯದಿಂದ ಕಂಡುಕೊಳ್ಳಲಾಗಿದೆ. ಆರ್ಥಿಕ ಚಟುವಟಿಕೆಗಳ ವ್ಯವಹಾರ ವಹಿವಾಟುವಿನ ಪ್ರಮಾಣ ಮತ್ತು ನಿವ್ವಳ ಆದಾಯವನ್ನು ಕೋಷ್ಟಕದಲ್ಲಿ ನೀಡಲಾಗಿದೆ(ಕೋಷ್ಟಕ-36 ರಿಂದ 36.4). ಒಟ್ಟು ಆದಾಯವನ್ನು ಹಂಪೆ ಒಟ್ಟು ಜನಸಂಖ್ಯೆಯಿಂದ ಭಾಗಿಸಿಕೊಳ್ಳ ಲಾಗಿದೆ. ತಲಾವರಮಾನ ರೂ.34,410 ಆಗಿದೆ. ಮತ್ತು ನಿವ್ವಳ ತಲಾವರಮಾನ 20,810 ಆಗಿದೆ. 1991ರಲ್ಲಿ ವಾರ್ಷಿಕ ಆದಾಯ ರೂ 5,000 ಮತ್ತು ಅದಕ್ಕಿಂತ ಕಡಿಮೆ ಇದ್ದ ಕುಟುಂಬಗಳ ಸಂಖ್ಯೆ129 ಆಗಿದ್ದರೆ 2001ರಲ್ಲಿ ಈ ಕುಟುಂಬಗಳ ಸಂಖ್ಯೆ 17ಕ್ಕೆ ಇಳಿದಿದೆ. ಹಾಗೆಯೆ ವಾರ್ಷಿಕ ಆದಾಯ ರೂ.5,001-15,000 ವರೆಗಿನ ಕುಟುಂಬಗಳ ಸಂಖ್ಯೆಯು 88 ರಿಂದ

[illegible]

60ಕ್ಕಿಳಿದಿದೆ. ವಾರ್ಷಿಕ ಆದಾಯ ರೂ.15,001-25,000ವರೆಗಿನ ಕುಟುಂಬಗಳು 1991ರಲ್ಲಿ 67 ಇದ್ದದ್ದು 2001ರಲ್ಲಿ 65 ಆಗಿದೆ. ರೂ.25,001ರಿಂದ 50,000ವರೆಗಿನ ವಾರ್ಷಿಕ ಆದಾಯ ಹೊಂದಿರುವ ಕುಟುಂಬಗಳ ಸಂಖ್ಯೆ 1991ರಲ್ಲಿ 52 ಇದ್ದರೆ 2001ರಲ್ಲಿ ಈ ಕುಟುಂಬಗಳ ಸಂಖ್ಯೆ 150ಕ್ಕೇರಿದೆ. ವಾರ್ಷಿಕ ಆದಾಯ ರೂ.50,001ರಿಂದ 1ಲಕ್ಷವಿರುವ ಕುಟುಂಬಗಳ ಸಂಖ್ಯೆ1991ರಲ್ಲಿ 24 ಇದ್ದದ್ದು 98 ಆಗಿದೆ. ಹಾಗೆಯೆ 1ಲಕ್ಷ ಮೇಲ್ಪಟ್ಟು ವಾರ್ಷಿಕ ಆದಾಯ ಹೊಂದಿದ ಕುಟುಂಬಗಳ ಸಂಖ್ಯೆ 2001ರಲ್ಲಿ 95 ಹೊಸದಾಗಿ ರೂಪಗೊಂಡಿವೆ. 1994 ರಿಂದ 2001ವರೆಗಿನ ದಶಕದಲ್ಲಿ ವರಮಾನ ಹೆಚ್ಚಳವು ಪ್ರವಾಸೋದ್ಯಮ ಪೂರಕ ಚಟುವಟಿಕೆಗಳಲ್ಲಿ ಜನತೆ ಹೆಚ್ಚು ಭಾಗಿಯಾಗಿರುವ ಮೂಲಕ ಏರಿಕೆಯಾಗಿರುವುದು ಕಂಡುಬರುತ್ತದೆ(ಕೋಷ್ಟಕ-35).

ಕುಟುಂಬದ ಸಂಪನ್ಮೂಲಗಳು

ಅದಾಯದಲ್ಲಿನ ಏರಿಕೆಯು ಕುಟುಂಬಗಳ ಅನುಭೋಗ ಪ್ರವೃತ್ತಿಯಲ್ಲಿ ಬದಲಾವಣೆ ತರುತ್ತದೆನ್ನುವುದು ಜೆ. ಎಂ.ಕೀನ್ಸ್‌ರವರ ಅನುಭೋಗ ಸಿದ್ಧಾಂತದ ತಿರುಳಾಗಿದೆ. ಪ್ರಾರಂಭದ ಹಂತದಲ್ಲಿ ಕುಟುಂಬಗಳ ಆದಾಯ ಏರಿಕೆಯಾದಲ್ಲಿ ಅದರ ಹೆಚ್ಚಿನ ಪ್ರಮಾಣ ಜೀವನಾವ್ಯಶಕವಾದ ಆಹಾರದ ಗುಣಮಟ್ಟವನ್ನು ಹೆಚ್ಚಿಸಿ ಕೊಳ್ಳುವುದು, ಉಡುಪುಗಳಲ್ಲಿನ ಬದಲಾವಣೆ ಹಾಗೂ ವಾಸಿಸುವ ಮನೆಯನ್ನು ಸುಖಕಾರವಾಗಿ ಇರುವಂತೆ ನಿರ್ಮಿಸಿಕೊಳ್ಳುವುದು ಇತ್ಯಾದಿಗಳಿಗೆ ಖರ್ಚು ಮಾಡಲಾಗುತ್ತದೆ. ಹಂಪೆ ಗ್ರಾಮಸ್ಥರಲ್ಲಿ ಆಹಾರ ಮತ್ತು ಉಡುಗೆ ತೊಡುಗೆಗಳಲ್ಲಿ ಸಾಕಷ್ಟು ಬದಲಾವಣೆ ಆಗಿದೆ. ಜತೆಗೆ ಕಚ್ಚಾ ಮನೆಗಳು ಪಕ್ಕಾ ಮತ್ತು ಆರ್.ಸಿ.ಸಿ ಮನೆಗಳಾಗಿ ಪರಿವರ್ತಿತವಾಗುತ್ತಿವೆ. 1991ರಲ್ಲಿ ಗ್ರಾಮದ ಕಚ್ಚಾ ಮನೆಗಳ ಸಂಖ್ಯೆ 275 ಇತ್ತು. 2001ರ ವೇಳೆಗೆ ಇವುಗಳ ಸಂಖ್ಯೆ 145ಕ್ಕೆ ಇಳಿದಿದೆ. ಪಕ್ಕಾಮನೆಗಳ ಸಂಖ್ಯೆ 98 ಇದ್ದದ್ದು 140ಕ್ಕೆ ಏರಿಕೆಯಾಗಿದೆ ಮತ್ತು ಆರ್.ಸಿ.ಸಿ ಮನೆಗಳ ಸಂಖ್ಯೆ 112 ಇದ್ದದ್ದು 200ಕ್ಕೆ ಏರಿಕೆಯಾಗಿದೆ (ಕೋಷ್ಟಕ-37). ಸುಖಕರ ಮತ್ತು ಐಷಾರಾಮಿ ಗೃಹಬಳಕೆ ವಸ್ತುಗಳ ಉಪಯೋಗವು ಹೆಚ್ಚಾಗುತ್ತಿದೆ. 1991ರಲ್ಲಿ ಗ್ರಾಮದಲ್ಲಿದ್ದ ಟೆಲಿವಿಜನ್‌ಗಳ ಸಂಖ್ಯೆ ಕೇವಲ 10 ಇತ್ತು. 2001ರ ಹೊತ್ತಿಗೆ ಅವುಗಳ ಸಂಖ್ಯೆ 300ಕ್ಕೆ ಏರಿದೆ. 1991ರಲ್ಲಿ ಅಡುಗೆ ಅನಿಲದ ಬಳಕೆ ಕೇವಲ 50 ಕುಟುಂಬಗಳಿಗೆ ಸೀಮಿತವಾಗಿತ್ತು. ಆದರೆ 2001ರಲ್ಲಿ ಸುಮಾರು 350 ಕುಟುಂಬಗಳು ಅಡುಗೆ ಅನಿಲವನ್ನು ಬಳಸುತ್ತಿವೆ. ಫ್ರೀಜ್ ಬಳಸುವವರ ಸಂಖ್ಯೆಯಲ್ಲೂ ಅಗಾಧ ಬದಲಾವಣೆಯಾಗಿದೆ. ಅತಿಥಿಗೃಹ, ರೆಸ್ಟೋರೆಂಟ್, ಹೋಟೆಲ್ ಮತ್ತು ಮನೆಯಲ್ಲಿ ಫ್ರೀಜ್‌ಗಳನ್ನು ಬಳಸುತ್ತಿದ್ದಾರೆ. 1991ರಲ್ಲಿ ಹಂಪೆಯಲ್ಲಿದ್ದ ಫ್ರೀಜ್‌ಗಳ ಸಂಖ್ಯೆ ಕೇವಲ 5. ಇಂದು ಅದು 110ಕ್ಕೆ ಏರಿದೆ. ದ್ವಿಚಕ್ರ ವಾಹನಗಳ ಸಂಖ್ಯೆ 1991ರಲ್ಲಿ 40 ಇತ್ತು. ಇಂದು 2001ರಲ್ಲಿ ಸುಮಾರು 188 ದ್ವಿಚಕ್ರ ವಾಹನಗಳು ಹಂಪೆಯಲ್ಲಿ ಇವೆ. ಹಾಗೆಯೆ 4 ಚಕ್ರವಾಹನಗಳ ಸಂಖ್ಯೆ

[illegible]

[illegible]

1991ರಲ್ಲಿ ಒಂದು ಇದ್ದುದು 2001ಕ್ಕೆ 3ರಕ್ಕೆ ಏರಿದೆ. ಅಡುಗೆ ತಯಾರಿಕೆಯಲ್ಲಿ ದಿನ ನಿತ್ಯ ಬಳಸುವ ಆಧುನಿಕ ಉಪಕರಣಗಳಾದ ಕುಕ್ಕರ್, ಮಿಕ್ಸಿ ಇತ್ಯಾದಿ ವಸ್ತುಗಳ ಸಂಖ್ಯೆಯೂ ಗಣನೀಯವಾಗಿ ಹೆಚ್ಚಿದೆ(ಕೋಷ್ಟಕ-38).

ಭೂ ಹಿಡುವಳಿ

1991ರಲ್ಲಿ ಒಟ್ಟು ಹಿಡುವಳಿದಾರರ ಸಂಖ್ಯೆ 109, ಭೂ ಹಿಡುವಳಿ ವಿಸ್ತೀರ್ಣ 335.25 ಎಕರೆ. 0.5-1.0 ಎಕರೆ ಭೂಮಿಯನ್ನು ಹೊಂದಿದ ಪರಿಶಿಷ್ಟ ಜಾತಿಯವರ ಸಂಖ್ಯೆ 04, ಪರಿಶಿಷ್ಟ ಪಂಗಡದವರ ಸಂಖ್ಯೆ 02, ಇತರರು 46 ಆಗಿದ್ದು, ಒಟ್ಟು ಹಿಡುವಳಿದಾರರ ಸಂಖ್ಯೆ 52 ಇದೆ. ಒಟ್ಟು ಹಿಡುವಳಿ ಪ್ರಮಾಣ 74.58 ಎಕರೆ ಇದೆ. ಈ ಅವಧಿಯಲ್ಲಿ 1-2 ಎಕರೆ ಭೂಮಿ ಹೊಂದಿದ ಪರಿಶಿಷ್ಟ ಜಾತಿಯವರ ಸಂಖ್ಯೆ 02, ಪರಿಶಿಷ್ಟ ಪಂಗಡದವರ ಸಂಖ್ಯೆ 01, ಇತರರು 33 ಇದ್ದಾರೆ. ಒಟ್ಟು ಹಿಡುವಳಿದಾರರ ಪ್ರಮಾಣ 36 ಹಾಗೂ ಭೂ ವಿಸ್ತೀರ್ಣದ ಪ್ರಮಾಣ 123.43 ಎಕರೆ ಆಗಿದೆ. ಹಾಗೆಯೆ 2-4 ಎಕರೆ ಭೂಮಿ ಹೊಂದಿದ ಪರಿಶಿಷ್ಟ ಜಾತಿಯವರ ಸಂಖ್ಯೆ ಯಾರು ಇಲ್ಲ. ಪರಿಶಿಷ್ಟ ಪಂಗಡದವರ ಸಂಖ್ಯೆ 01, ಇತರರು 19 ಆಗಿದೆ. ಒಟ್ಟು ಭೂಹಿಡುವಳಿದಾರರ ಸಂಖ್ಯೆ 20 ಇದ್ದು, ಭೂ ಸಾಗುವಳಿಯ ಪ್ರಮಾಣ 126.99 ಎಕರೆ ಆಗಿದೆ. 04 ರಿಂದ 10 ಎಕರೆ ಭೂಮಿ ಹೊಂದಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಲ್ಲಿ ಯಾರು ಇಲ್ಲ. ಇತರರಲ್ಲಿ ಭೂ ಸಾಗುವಳಿದಾರರ ಸಂಖ್ಯೆ ಒಂದು ಇದೆ. ಇವರಲ್ಲಿ ಒಟ್ಟು ಭೂ ಹಿಡುವಳಿದಾರರ ಸಂಖ್ಯೆ ಒಂದು ಆಗಿದ್ದು, ಭೂ ಸಾಗುವಳಿಯ ಪ್ರಮಾಣ 10.25 ಎಕರೆಯಾಗಿದೆ.

1995-1996ರಲ್ಲಿ ಹಂಪೆಯ ಒಟ್ಟು ಹಿಡುವಳಿದಾದರರ ಸಂಖ್ಯೆ 133. ಭೂ ಹಿಡುವಳಿಯ ವಿಸ್ತೀರ್ಣದ ಪ್ರಮಾಣ 354.20 ಎಕರೆಗಳು. ಇದರಲ್ಲಿ 0.5-1.0 ಎಕರೆ ಭೂ ಹಿಡುವಳಿಯನ್ನು ಹೊಂದಿದ ಪರಿಶಿಷ್ಟ ಜಾತಿಯವರ ಸಂಖ್ಯೆ ನಾಲ್ಕು, ಪರಿಶಿಷ್ಟ ಪಂಗಡದವರ ಸಂಖ್ಯೆ ಆರು, ಇತರರ ಸಂಖ್ಯೆ 76 ಆಗಿದೆ. ಒಟ್ಟು ಹಿಡುವಳಿದಾರರ ಸಂಖ್ಯೆ 86 ಮತ್ತು ಭೂ ಹಿಡುವಳಿಯ ವಿಸ್ತೀರ್ಣದ ಪ್ರಮಾಣ 113.26 ಎಕರೆಯಾಗಿದೆ. ಒಂದರಿಂದ ಎರಡು ಎಕರೆ ಭೂ ಹಿಡುವಳಿ ಹೊಂದಿದ ಪರಿಶಿಷ್ಟ ಜಾತಿಯವರ ಸಂಖ್ಯೆಯಲ್ಲಿ ಯಾರು ಇಲ್ಲ. ಪರಿಶಿಷ್ಟ ಪಂಗಡದವರಲ್ಲಿ ಒಬ್ಬರು, ಇತರರಲ್ಲಿ 25 ಜನ ಸಾಗುವಳಿದಾರರು ಇದ್ದಾರೆ. ಒಟ್ಟು ಹಿಡುವಳಿದಾರರ ಸಂಖ್ಯೆ 26 ಇದ್ದು, ಒಟ್ಟು ಹಿಡುವಳಿಯ ವಿಸ್ತೀರ್ಣದ ಪ್ರಮಾಣ 91.31 ಎಕರೆಯಾಗಿದೆ. ಹಾಗೆಯೆ 02 -04 ಎಕರೆ ಭೂ ಹಿಡುವಳಿಯನ್ನು ಹೊಂದಿದ ಪರಿಶಿಷ್ಟ ಜಾತಿಯವರ ಸಂಖ್ಯೆ ಒಂದು ಇದೆ. ಪರಿಶಿಷ್ಟ ಪಂಗಡದವರಲ್ಲಿ ಯಾರೂ ಇಲ್ಲ. ಇತರರಲ್ಲಿ 18ಜನ ಭೂ ಹಿಡುವಳಿದಾರರಿದ್ದಾರೆ. ಒಟ್ಟು ಹಿಡುವಳಿದಾರರ ಸಂಖ್ಯೆ 19 ಆಗಿದ್ದು, ಭೂ ಹಿಡುವಳಿ ವಿಸ್ತೀರ್ಣದ ಪ್ರಮಾಣ 120.03 ಎಕರೆಯಾಗಿದೆ. 04-10 ಎಕರೆ ಭೂ ಹಿಡುವಳಿ

ಹೊಂದಿದವರಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದಲ್ಲಿ ಯಾರೂ ಇಲ್ಲ. ಇತರರಲ್ಲಿ ಎರಡು ಜನ ಇದ್ದಾರೆ. ಒಟ್ಟು ಭೂ ಹಿಡುವಳಿದಾರರ ಸಂಖ್ಯೆ 02 ಮತ್ತು ಭೂ ಹಿಡುವಳಿ ವಿಸ್ತೀರ್ಣದ ಪ್ರಮಾಣ 29.60 ಎಕರೆಯಾಗಿದೆ.[25]

1991 ಮತ್ತು 1996 ಅವಧಿಯಲ್ಲಿ ಭೂ ಹಿಡುವಳಿದಾರರ ಸಂಖ್ಯೆಯಲ್ಲಿ ಮತ್ತು ವಿಸ್ತೀರ್ಣದಲ್ಲಿ ಬದಲಾವಣೆಯಾಗಿರುವುದು ಮೇಲಿನ ಅಂಕಿ ಅಂಶಗಳಿಂದ ಕಂಡುಬರುತ್ತದೆ. 1991ರಲ್ಲಿ 0.5-1.0 ಎಕರೆ ಹೊಂದಿದವರ ಪರಿಶಿಷ್ಟ ಜಾತಿಯವರ ಸಂಖ್ಯೆ 04 ಇದ್ದು, 1996ರಲ್ಲಿ ಯಾವುದೇ ಬದಲಾವಣೆಯಿಲ್ಲ. 1991ರಲ್ಲಿ 01-02 ಎಕರೆ ಭೂಮಿ ಹೊಂದಿದವರ ಸಂಖ್ಯೆ 02 1991 ಇದ್ದು, 1996ರಲ್ಲಿ ಯಾವುದೇ ಬದಲಾವಣೆಯಾಗಿಲ್ಲ. 1991ರಲ್ಲಿ 02-04 ಎಕರೆ ಭೂಮಿ ಹೊಂದಿದವರು 1991ರಲ್ಲಿ ಯಾರು ಇಲ್ಲ. 1996ರಲ್ಲಿ ಇವರ ಸಂಖ್ಯೆ 01 ಆಗಿದೆ. 04-10 ಎಕರೆ ಭೂ ಹಿಡುವಳಿಯನ್ನು ಹೊಂದಿದ ಪರಿಶಿಷ್ಟ ಜಾತಿಯವರ ಸಂಖ್ಯೆ 1991 ಮತ್ತು 1996ರಲ್ಲಿ ಯಾರೂ ಇಲ್ಲ. ಪರಿಶಿಷ್ಟ ಪಂಗಡದವರಲ್ಲಿ 0.5-1.0 ಎಕರೆ ಭೂ ಹಿಡುವಳಿ ಹೊಂದಿದ ಸಂಖ್ಯೆ 02 ಇದ್ದು, 1996ರಲ್ಲಿ ಈ ಸಂಖ್ಯೆ 04ಕ್ಕೆ ಏರಿದೆ. 01-02 ಎಕರೆ ಭೂ ಹಿಡುವಳಿಯನ್ನು ಹೊಂದಿದವರ ಸಂಖ್ಯೆ 1991ರಲ್ಲಿ ಒಂದು ಇದ್ದು, 1996ರಲ್ಲಿಯೂ ಒಂದೆ ಇದೆ. 02-04 ಎಕರೆ ಭೂ ಹಿಡುವಳಿಯನ್ನು ಹೊಂದಿದವರ ಸಂಖ್ಯೆ 1991ರಲ್ಲಿ ಒಂದು ಇದ್ದರೆ, 1996ರಲ್ಲಿ ಯಾರೂ ಇಲ್ಲ. 04-10 ಎಕರೆ ಭೂ ಹಿಡುವಳಿಯನ್ನು ಹೊಂದಿದವರ ಸಂಖ್ಯೆ 1991 ಮತ್ತು 1996ರಲ್ಲಿ ಯಾರು ಇಲ್ಲ.

1991ರಲ್ಲಿ 0.5-1.0 ಎಕರೆ ಭೂಮಿ ಹಿಡುವಳಿಯನ್ನು ಹೊಂದಿರುವ ಇತರರು (ಪರಿಶಿಷ್ಟ ಜಾತಿ ಮತ್ತು ಪಂಗಡದವರನ್ನು ಹೊರುಪಡಿಸಿ) ಸಂಖ್ಯೆ 46 ಇದ್ದು, 1996ರಲ್ಲಿ 76ಕ್ಕೆ ಏರಿದೆ. ಈ ಅವಧಿಯಲ್ಲಿ 30 ಜನರು ಅಧಿಕವಾಗಿ ಭೂಮಿಯನ್ನು ಹೊಂದಿದವರಾಗಿದ್ದಾರೆ. 01-02 ಎಕರೆ ಭೂ ಹಿಡುವಳಿಯನ್ನು ಹೊಂದಿದವರ ಸಂಖ್ಯೆ 1991ರಲ್ಲಿ 33 ಇದ್ದರೆ, 1996ರಲ್ಲಿ ಇವರ ಸಂಖ್ಯೆ 25ಕ್ಕೆ ಇಳಿದಿದೆ. 02-04 ಎಕರೆ ಭೂ ಹಿಡುವಳಿಯನ್ನು ಹೊಂದಿದವರು 1991ರಲ್ಲಿ 19 ಜನ ಇದ್ದರೆ, 1996ರಲ್ಲಿ 18ಜನರಿದ್ದಾರೆ. ಹಾಗೂ 04-10 ಎಕರೆ ಭೂ ಹಿಡುವಳಿಯನ್ನು ಹೊಂದಿದವರು 1991ರಲ್ಲಿ ಒಬ್ಬರಿದ್ದು, 1996ರಲ್ಲಿ ಎರಡು ಜನರಿದ್ದಾರೆ. ಇಲ್ಲಿ ಗಮನಿಸಬೇಕಾದ ಅಂಶಗಳೆಂದರೆ 0.5-1.0 ಎಕರೆ ಭೂ ಹಿಡುವಳಿಯನ್ನು ಹೊಂದಿದವರ ಸಂಖ್ಯೆಯಲ್ಲಿ 30ಜನ ಹೆಚ್ಚಾಗಿದ್ದರೆ, 01-02 ಎಕರೆ ಭೂ ಹಿಡುವಳಿಯನ್ನು ಹೊಂದಿದವರಲ್ಲಿ 08ಜನ ಕಡಿಮೆಯಾಗಿದ್ದಾರೆ. ಹಾಗೂ 02-04 ಎಕರೆ ಭೂ ಹಿಡುವಳಿಯನ್ನು ಹೊಂದಿದವರು ಒಬ್ಬರು ಕಡಿಮೆಯಾಗಿದ್ದಾರೆ. 04-10 ಎಕರೆ ಭೂ ಹಿಡುವಳಿಯಲ್ಲಿ ಒಂದರಿಂದ ಎರಡಕ್ಕೇರಿದೆ. ಚಿಕ್ಕ ಚಿಕ್ಕ ಹಿಡುವಳಿಗಳು ರೂಪಗೊಂಡಿವೆ ಎನ್ನುವುದು ಇದರಿಂದ ತಿಳಿದುಬರುತ್ತದೆ(ಕೋಷ್ಟಕ-39).

ಈ ಭೂ ಹಿಡುವಳಿಯನ್ನು ಹೊಂದಿದವರು ಪೂರ್ಣವಾಗಿ ಹಂಪೆ ಗ್ರಾಮದವರಾಗಿಲ್ಲ. ಹಂಪೆ ಗ್ರಾಮದ ಕೃಷಿ ಭೂಮಿಯಲ್ಲಿ ಪಕ್ಕದ ಗ್ರಾಮಗಳಾದ ಕಡ್ಡಿರಾಂಪುರ, ಕಮಲಾಪುರ, ಮಲಪನಗುಡಿ, ಕೊಂಡನಾಯಕನಹಳ್ಳಿ, ಅನಂತಶಯನಗುಡಿ ಗ್ರಾಮದ ಜನರೆ ಹೆಚ್ಚು ಸಾಗುವಳಿದಾರರಾಗಿದ್ದಾರೆ. ಹಾಗಾಗಿ ಈ ಭೂಹಿಡುವಳಿಯ ಪ್ರಮಾಣ ಹಂಪಿ ಗ್ರಾಮದ ಸಾಗುವಳಿದಾರರ ನೈಜ ಚಿತ್ರಣವನ್ನು ಕೊಡುವುದಿಲ್ಲ.

ಕ್ಷೇತ್ರಕಾರ್ಯ ಕೈಗೊಂಡ ಸಂದರ್ಭದಲ್ಲಿ ಜಾತಿವಾರು ಭೂ ಹಿಡುವಳಿಗಳ ಬಗ್ಗೆ ಅಂಕಿ ಅಂಶಗಳನ್ನು ಭೂ ಹಿಡುವಳಿ ಕುಟುಂಬಗಳಿಂದ ಪಡೆಯಲಾಗಿದೆ. ಹಂಪೆ ಗ್ರಾಮದಲ್ಲಿ 77 ಕುಟುಂಬಗಳು ಕೃಷಿಯಲ್ಲಿ ತೊಡಗಿಸಿಕೊಂಡಿವೆ. 01-02 ಎಕರೆ ಭೂ ಹಿಡುವಳಿಯನ್ನು 36 ಕುಟುಂಬಗಳು ಪಟ್ಟ ಭೂಮಿಯನ್ನು ಪಡೆದಿದ್ದಾರೆ. 20 ಕುಟುಂಬಗಳು ಒತ್ತುವರಿ ಭೂಮಿಯನ್ನು ಹೊಂದಿವೆ. 02-05 ಎಕರೆ ಭೂ ಹಿಡುವಳಿಯನ್ನು ಹೊಂದಿರುವ ಕುಟುಂಬಗಳ ಸಂಖ್ಯೆ 11 ಆಗಿದೆ. 05-10 ಎಕರೆ ಭೂ ಹಿಡುವಳಿಯನ್ನು ಹೊಂದಿರುವ ಕುಟುಂಬಗಳ ಸಂಖ್ಯೆ 08 ಇದ್ದರೆ, 10 ಎಕರೆ ಭೂ ಹಿಡುವಳಿಯನ್ನು ಹೊಂದಿರುವ ಕುಟುಂಬಗಳ ಸಂಖ್ಯೆ 04 ಇದೆ. ಹಂಪೆಯ ಅನೇಕ ಕುಟುಂಬಗಳು ಹಂಪೆ ಗ್ರಾಮದಲ್ಲಿಯೆ ಭೂ ಹಿಡುವಳಿಯನ್ನು ಹೊಂದಿರದೆ ಇತರ ಪ್ರದೇಶಗಳಲ್ಲಿಯೂ ಹೊಂದಿವೆ. ಹಂಪೆ ಗ್ರಾಮದಿಂದ ಹೊರ ಪ್ರದೇಶದಲ್ಲಿ ಭೂಮಿಯನ್ನು ಖರೀದಿಸುವುದು ಇತ್ತೀಚೆಗೆ ಹೆಚ್ಚಾಗುತ್ತಿದೆ. ಇದು ಹಂಪೆ ಗ್ರಾಮವನ್ನು ಬೇರಡೆಗೆ ಸ್ಥಳಾಂತಿರಸಬೇಕೆಂಬ ಸರ್ಕಾರದ ನಿರ್ಧಾರದಿಂದ ಪ್ರೇರಿತವಾಗಿದೆ ಎಂಬುದು ಸಂದರ್ಶನದಲ್ಲಿ ಕಂಡುಬಂದ ಸಂಗತಿಯಾಗಿದೆ(ಕೋಷ್ಟಕ-40).

ಗೃಹ ಬಳಕೆಯ ವಸ್ತುಗಳನ್ನು ಕೊಳ್ಳುವುದರೊಂದಿಗೆ ಸ್ಥಿರ ಆಸ್ತಿಯಲ್ಲಿ ವಿನಿಯೋಜಿಸುವ ಪ್ರವೃತ್ತಿಯನ್ನು ಹಂಪೆಯಲ್ಲಿ ಗಮನಿಸಬಹುದು. 1991ರಲ್ಲಿ ಹಂಪೆ ಗ್ರಾಮದಲ್ಲಿದ್ದ 360 ಕುಟುಂಬಗಳಲ್ಲಿ ಭೂ ಹಿಡುವಳಿ ಹೊಂದಿಲ್ಲದ ಕುಟುಂಬಗಳ ಸಂಖ್ಯೆ 315 (ಶೇ.87.63). 0.5-1.0 ಭೂ ಹಿಡುವಳಿ ಇದ್ದವರ ಸಂಖ್ಯೆ 22(ಶೇ.5.97), 01-02 ಎಕರೆ ಭೂ ಹಿಡುವಳಿ ಇದ್ದವರ ಸಂಖ್ಯೆ 14(ಶೇ.3.92). ಮೂರರಿಂದ ಐದು ಎಕರೆ ಭೂ ಹಿಡುವಳಿದಾರರ ಸಂಖ್ಯೆ 8(ಶೇ.2.27) ಮತ್ತು 06-10 ಎಕರೆ ಭೂ ಹಿಡುವಳಿ ಇದ್ದವರು ಈ ಅವಧಿಯಲ್ಲಿ ಇರಲಿಲ್ಲ. 10 ಎಕರೆ ಮೇಲ್ಪಟ್ಟು ಭೂ ಹಿಡುವಳಿದಾರರು ಒಬ್ಬರು(ಶೇ.0.21). 2001ರಲ್ಲಿ ಭೂಮಿ ಇಲ್ಲದವರ ಸಂಖ್ಯೆ 406(ಶೇ.83.71) ಆಗಿದೆ. 0.5-1.0 ಎಕರೆ ಕೆಳಗಡೆ ಭೂ ಹಿಡುವಳಿ ಹೊಂದಿದವರು ಇಲ್ಲ. 01-02 ಎಕರೆ ಭೂ ಹಿಡುವಳಿಯನ್ನು ಹೊಂದಿದ 56(ಶೇ.11.55) ಕುಟುಂಬಗಳಿವೆ. 03-05 ಎಕರೆ ಭೂ ಹಿಡುವಳಿಯನ್ನು ಹೊಂದಿದ ಕುಟುಂಬಗಳ ಸಂಖ್ಯೆ 11(ಶೇ.2.27), 6 ರಿಂದ 10 ಎಕರೆ ಭೂ ಹಿಡುವಳಿಯನ್ನು ಹೊಂದಿದ ಕುಟುಂಬಗಳ ಸಂಖ್ಯೆ 8(ಶೇ.1.65). 10 ಎಕರೆ ಮೇಲ್ಪಟ್ಟು ಭೂ ಹಿಡುವಳಿಯನ್ನು ಹೊಂದಿರುವ ಕುಟುಂಬಗಳ ಸಂಖ್ಯೆ 04(ಶೇ.0.82) ಆಗಿದೆ(ಕೋಷ್ಟಕ-41).

1991-2001 ಅವಧಿಯಲ್ಲಿ 01-02 ಎಕರೆ ಹೊಂದಿರುವ ಭೂ ಹಿಡುವಳಿದಾರರ ಸಂಖ್ಯೆ ಹೆಚ್ಚಾಗಿದೆ. ಹಾಗೂ 06-10 ಎಕರೆ ಮತ್ತು 10 ಎಕರೆ ಮೇಲ್ಪಟ್ಟು ಭೂ ಹಿಡುವಳಿದಾರರ ಸಂಖ್ಯೆಯಲ್ಲಿ ಹೆಚ್ಚಿರುವುದು ಕಂಡುಬರುತ್ತದೆ. ಇದು ಪ್ರವಾಸೋದವ್ಯುದ ಆರ್ಥಿಕ ಚಟುವಟಿಕೆಯಲ್ಲಿ ತೊಡಗಿಸಿಕೊಂಡವರು, ಹೆಚ್ಚಿನ ಆದಾಯ ಗಳಿಕೆಯಿಂದ ಭೂಮಿಯಲ್ಲಿ ಹಣ ತೊಡಗಿಸಿ ಕೊಳ್ಳುವುದು ಹೆಚ್ಚುತ್ತಿರುವುದು ಕಂಡುಬರುತ್ತದೆ. ಪ್ರವಾಸೋದ್ಯಮ ಚಟುವಟಿಕೆಗಳಿಂದ ಭೂಮಿಯ ಮೌಲ್ಯದಲ್ಲಿನ ಬದಲಾವಣೆ ಮತ್ತು ಉಪಯುಕ್ತವಲ್ಲದ ಭೂಮಿಯ ಮಾರಾಟ ಮಾಡಿ ಲಾಭ ಗಳಿಸಿಕೊಳ್ಳುತ್ತಿರುವ ಬಗ್ಗೆ ಅಧ್ಯಯನಗಳು ಸಕರಾತ್ಮಕ ಅಂಶಗಳನ್ನು ನೀಡಿವೆ. ಪ್ಯಾಕರವರ ಗ್ರೀಸನಲ್ಲಿರುವ ಮೈಕೊನಸ್‌ನ ಪ್ರವಾಸ ತಾಣದ ಅಧ್ಯಯನವು ಭೂಮಿಯ ಮೌಲ್ಯದ ಬೆಲೆ ಏರಿಕೆ ಶೇ 2,000ದಷ್ಟು ಎಂದು ತಿಳಿಸುತ್ತದೆ. ಇದರೊಂದಿಗೆ ಪಶ್ಚಿಮ ಹಾವಾಯಿ ಪುಕುನಗ ಮತ್ತು ಕೈಲೂವದಲ್ಲಿನ ಅಧ್ಯಯನಗಳು ಭೂಮಿಯ ಮೌಲ್ಯ ಶೇ 300 ರಿಂದ 900ರಷ್ಟು ಆಗಿದೆ ಎಂದು ತಿಳಿಸುತ್ತವೆ.[26]

ಭೂಮಿಯ ಹಿಡುವಳಿಯ ಪ್ರಮಾಣದ ಜೊತೆಗೆ ಹಂಪೆ ಗ್ರಾಮದ ಸುತ್ತಮುತ್ತಲಿನ ಪ್ರದೇಶದಲ್ಲಿ ಭೂಮಿಯ ಮಾರಾಟದ ಮೌಲ್ಯದಲ್ಲಿ ತುಂಬ ಬದಲಾವಣೆಯಾಗುತ್ತಿದೆ. ಕ್ಷೇತ್ರಕಾರ್ಯದಲ್ಲಿ ತಿಳಿದುಬಂದ ಅಂಶವೆಂದರೆ 1991ರ ಆಸುಪಾಸಿನಲ್ಲಿ ಭೂಮಿಯ ಮಾರಾಟ ಮೌಲ್ಯ ಒಂದು ಎಕರೆಗೆ ರೂ.25,000 ದಿಂದ ರೂ.30,000 ದವರೆಗೂ ಇತ್ತು. 2001ರ ಹೊತ್ತಿಗೆ ಒಂದು ಎಕರೆ ಭೂಮಿಯ ಬೆಲೆ ರೂ.1.50 ಲಕ್ಷದಿಂದ ರೂ.2 ಲಕ್ಷದವರೆಗೆ ನಡೆಯುತ್ತಿದೆಂದು ತಿಳಿದುಬಂದಿದೆ. ಅಂದರೆ ಶೇ.600ರಷ್ಟು ಹೆಚ್ಚಿದೆ ಎಂದು ಹೇಳಬಹುದು. ಹೊರರಾಷ್ಟ್ರ, ರಾಜ್ಯ ಮತ್ತು ಜಿಲ್ಲೆಗಳಿಂದ ಬಂದ ಉದ್ದಿಮೆದಾರರು ಪ್ರವಾಸೋದ್ಯಮ ಪೂರಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಭೂಮಿ ಖರೀದಿಗೆ ಇಳಿದಿರುವುದು ಭೂಮಿ ಬೆಲೆ ಹೆಚ್ಚಲು ಬಹುಮುಖ್ಯ ಕಾರಣ. ವಿದೇಶಿ ಪ್ರವಾಸಿಗರಲ್ಲಿ ಕೆಲವರು ಇಲ್ಲಿಯೆ ನೆಲೆಸಲು ಬಯಸಿ ಭೂಮಿ ಖರೀದಿಸುವುದು ಸ್ವಲ್ಪ ಮಟ್ಟಿಗೆ ಭೂ ಬೆಲೆ ಹೆಚ್ಚುವಿಕೆಯನ್ನು ಪ್ರಭಾವಿಸಿರಬಹುದು. ಮನೆ ನಿವೇಶನ, ಮನೆ ಬಾಡಿಗೆ, ಮನೆ ಅಥವಾ ಅಂಗಡಿ ಮಳಿಗೆಗಳನ್ನು ಬಾಡಿಗೆಗೆ ಪಡೆಯಲು ನೀಡುವ ಮುಂಗಡ ಹಣ ಇತ್ಯಾದಿಗಳಲ್ಲಿಯೂ ಸಾಕಷ್ಟು ಏರಿಕೆಯಾಗಿದೆ. ಖಾಲಿ ವೇಶನಕ್ಕೆ 1 ತಿಂಗಳಿಗೆ ರೂ.1,000 ರಿಂದ 2,000 ಬಾಡಿಗೆ ಮತ್ತು ಮುಂಗಡ ಹಣ ರೂ.30,000 ರಿಂದ 40,000 ಇದೆ. ಸೀಸನ್ ಸಮಯದಲ್ಲಿ ವ್ಯಾಪಾರಕ್ಕಾಗಿ ಬರುವ ಜಮ್ಮು ಮತ್ತು ಕಾಶ್ಮೀರಿ ವಲಸಿಗರಿಂದಾಗಿ ಈ ಧರಗಳು ಹೆಚ್ಚುತ್ತಿವೆ ಎಂದು ಸ್ಥಳೀಯರ ಅಭಿಪ್ರಾಯವಾಗಿದೆ. ಆದರೆ ಇದೊಂದು ಅಂಚಿನ ಕಾರಣ. ಮುಖ್ಯ ಕಾರಣ ಇಲ್ಲಿನ ಪ್ರವಾಸೋದ್ಯಮ ಮತ್ತು ಅದರ ಪಾಲು ಪಡೆಯಲು ಸತತವಾಗಿ ಬರುವ ಹೊಸ ಉದ್ಯಮಗಳು. ಹಂಪೆ ಬಜಾರಿನಲ್ಲಿ ಮತ್ತು ಸುತ್ತಮುತ್ತ ಖಾಸಗಿ ಭೂಮಿ ತುಂಬಾ ಕಡಿಮೆ ಇದೆ. ಬಹುತೇಕ ಭೂಮಿ ಪುರಾತತ್ವ ಇಲಾಖೆಗೆ ಸೇರಿದೆ.

[illegible]

ಭೂಮಿಯ ಬೇಡಿಕೆ ವರ್ಷ ವರ್ಷ ಹೆಚ್ಚುತ್ತಿದೆ. ಆದರೆ ಪೂರ್ವಕ್ಕೆ ಹಿಂದಿಗಿಂತಲೂ ಕಡಿಮೆ ಇದೆ. ಗೃಹ ಬಳಕೆಯ ಆಧುನಿಕ ವಸ್ತುಗಳ ಉಪಯೋಗ ಪ್ರವಾಸೋದ್ಯಮದಿಂದ ಹೊರತಾಗಿರುವ 140 ಕೃಷಿ ಕಾರ್ಮಿಕ ಕುಟುಂಬಗಳಲ್ಲಿ ಸಾಧ್ಯವಾಗದಾಗಿದೆ. ಸ್ವಂತ ಕೃಷಿ ಭೂಮಿಯನ್ನು ಹೊಂದಿದ 74 ಕುಟುಂಬಗಳು, ಆಧುನಿಕ ಗೃಹಬಳಕೆ ವಸ್ತುಗಳನ್ನು ಬಳಸುತ್ತಿವೆ. ತಲಾವರಮಾನ ಕಡಿಮೆ ಇರುವ ಹಳ್ಳಿಗಳಲ್ಲಿಯೂ ಇವುಗಳ ಉಪಯೋಗ ಕಡಿಮೆಯೆಂದು ಹೇಳಬಹುದು. ಹಾಗೆಯೆ ಭೂಮಿ ಮಾರಾಟದ ಮೌಲ್ಯದಲ್ಲಿಯೂ ಈ ಪ್ರಮಾಣದ ಏರಿಕೆ ಇಲ್ಲವೆನ್ನಬಹುದು.

ಬಡತನದಲ್ಲಿನ ಬದಲಾವಣೆ

ಬಡತನ ಹಲವಾರು ರೀತಿಯಲ್ಲಿ ವ್ಯಕ್ತಗೊಳ್ಳಬಹುದು. ಅವೆಲ್ಲದರ ಹಿಂದೆ ಆರ್ಥಿಕ ಬಡತನದ ಪಾತ್ರ ಮಹತ್ವದ್ದು. ಈ ಕಾರಣದಿಂದಲೆ ಬಡತನವನ್ನು ಆರ್ಥಿಕ ಕಾರಣಗಳಿಂದ ಗುರುತಿಸಿ ಅದರ ಪರಿಹಾರಕ್ಕೆ ಸರಕಾರ ಪ್ರಯತ್ನಿಸುತ್ತಿದೆ. ಒಂದು ನಿರ್ದಿಷ್ಟ ವಾರ್ಷಿಕ ಆದಾಯವನ್ನು ಮಾನದಂಡವಾಗಿ ಇಟ್ಟುಕೊಂಡು ಬಡ ಕುಟುಂಬಗಳನ್ನು ಗುರುತಿಸಲಾಗುತ್ತಿದೆ. ಎಲ್ಲಾ ಮೂಲಗಳಿಂದ ರೂ.24000ಕ್ಕಿಂತ ಕಡಿಮೆ ಇರುವ ಆದಾಯ ಇರುವ ಕುಟುಂಬಗಳನ್ನು ಬಿ.ಪಿ.ಎಲ್ ಅಥವಾ ಬಡತನ ರೇಖೆಗಿಂತ ಕೆಳಗೆ ಆದಾಯವಿರುವ ಕುಟುಂಬಗಳೆಂದು ಗುರುತಿಸುತ್ತಾರೆ. ಬಡತನ ನಿವಾರಣಾ ಕಾರ್ಯಕ್ರಮಗಳನ್ನು ತಲುಪಿಸಲು ಈ ಬಿ.ಪಿ.ಎಲ್. ಮಾನದಂಡವನ್ನು ಬಳಸಲಾಗುತ್ತಿದೆ. ಪಡಿತರ ಚೀಟಿ, ಅರ್ಥಿಕ ಸಹಾಯ, ಯೋಜನೆಗಳಲ್ಲಿ ಕಾದಿರಿಸುವಿಕೆ ಇತ್ಯಾದಿಗಳ ಮೂಲಕ ಸೌಲಭ್ಯಗಳನ್ನು ನೇರವಾಗಿ ಬಿ.ಪಿ. ಎಲ್. ಕುಟುಂಬಗಳಿಗೆ ತಲುಪುವಂತೆ ಜಿಲ್ಲಾ ಆಡಳಿತಗಳಿಗೆ ನಿರ್ದೇಶಿಸಿದೆ. ಈ ಸೌಲಭ್ಯಗಳನ್ನು ಒದಗಿಸುವ ಮೂಲಕ ಬಡ ಕುಟುಂಬಗಳನ್ನು ಅಭಿವೃದ್ಧಿಪಡಿಸಬಹುದೆಂಬುದು ಸರ್ಕಾರದ ಮೂಲ ಉದ್ದೇಶವಾಗಿದೆ. ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗಿಂತಲೂ ಅರ್ಥಿಕವಾಗಿ ನಿಕೃಷ್ಟ ಸ್ಥಿತಿಯಲ್ಲಿರುವ ಕುಟುಂಬಗಳನ್ನು ಕಡುಬಡವರ ಕುಟುಂಬಗಳೆಂದು ವಿಂಗಡಿಸಿ ಲಾಗಿದೆ. ಈ ಕಡು ಬಡಕುಟುಂಬಗಳಲ್ಲಿ ಭಿಕ್ಷುಕರು, ವಸತಿಹೀನರು, ಅಲೆಮಾರಿಗಳು ಸೇರಿಕೊಂಡಿದ್ದಾರೆ. ಇವುಗಳನ್ನು ಗುರುತಿಸಿ ಸರ್ಕಾರದಿಂದ ಅವರಿಗೆ ದೊರೆಯುವ ಸೇವಾ ಸೌಲಭ್ಯಗಳನ್ನು ಒದಗಿಸಿ ಅವರನ್ನು ಆರ್ಥಿಕವಾಗಿ ಸಬಲರಾಗುವಂತೆ ಮಾಡುವ ಸರ್ಕಾರದ ಯೋಜನೆಗಳಿವೆ.

1997ರಲ್ಲಿ ಹಂಪೆಯಲ್ಲಿ ಒಟ್ಟು 432 ಕುಟುಂಬಗಳಿದ್ದು, ಇದರಲ್ಲಿ 163(37.73) ಕುಟುಂಬಗಳು ಬಡತನ ರೇಖೆಗೆ ಕೆಳಗೆ ಇದ್ದರೆ, 269(62.27) ಬಡತನರೇಖೆ ಮೇಲಿನ ಕುಟುಂಬಗಳಿವೆ. 2002ರಲ್ಲಿ ಒಟ್ಟು 485 ಕುಟುಂಬಗಳಿದ್ದು, ಇದರಲ್ಲಿ 157(32.37) ಬಡತನ ರೇಖೆ ಕೆಳಗೆ ಇದ್ದು, 328(67.63)

ಕುಟುಂಬಗಳು ಬಡತನ ರೇಖೆ ಮೇಲೆ ಇವೆ. ಈ ಅಂಕಿ-ಅಂಶಗಳನ್ನು ಗಮನಿಸಿದಾಗ 5 ವರ್ಷದಲ್ಲಿ 06(ಶೇ.5.36)ಕುಟುಂಬಗಳು ಬಿ.ಪಿ.ಎಲ್.ನಿಂದ ಮೇಲ್ಮಟ್ಟಕ್ಕೆ ಹೋಗಿವೆ.[27] ಹಂಪೆಯಲ್ಲಿ ಬಡತನ ರೇಖೆಗಿಂತ ಕಡಿಮೆ ಇರುವ ಕುಟುಂಬಗಳ ಸಂಖ್ಯೆ ವಿಶೇಷವಾಗಿ ಕಡಿಮೆ ಆಗದಿರಲು ಕಾರಣ ಅಲ್ಲಿಗೆ ಸತತವಾಗಿ ಹರಿದು ಬರುತ್ತಿರುವ ವಲಸೆ ಕುಟುಂಬಗಳು. ಹಂಪೆ ಬಜಾರಿನ ಖಾಲಿ ಇರುವ ಮಂಟಪಗಳಲ್ಲಿ ಹಲವಾರು ಕಡುಬಡ ಕುಟುಂಬಗಳು ವಾಸ ಮಾಡುತ್ತಿವೆ. ಈ ಕುಟುಂಬಗಳು ಸುತ್ತಮುತ್ತಲಿನ ಪ್ರದೇಶಗಳಿಂದ ಉದ್ಯೋಗ ಅರಸಿಕೊಂಡು ಹಂಪೆಗೆ ಬಂದವುಗಳಾಗಿವೆ. ಪ್ರತಿ ವರ್ಷ ಪುರಾತತ್ವ ಇಲಾಖೆಯವರು ಈ ಕುಟುಂಬಗಳನ್ನು ಮಂಟಪಗಳಿಂದ ಎಬ್ಬಿಸಿ ಬೇರೆ ಕಡೆ ಕಳುಹಿಸುತ್ತಾರೆ. ಇಂತಹ ಕುಟುಂಬಗಳು ಹಂಪೆಯ ಬಡತನ ರೇಖೆಗಿಂತ ಕೆಳಗಿರುವವರ ಪಟ್ಟಿಯಲ್ಲಿ ಸೇರಿರುವ ಸಾಧ್ಯತೆ ಇದೆ. ಇದರಿಂದಾಗಿ ಇಷ್ಟೊಂದು ಆರ್ಥಿಕ ಚಟುವಟಿಕೆಯ ನಡುವೆಯೂ ಬಡತನ ರೇಖೆಗಿಂತ ಕೆಳಗೆ ಇರುವ ಕುಟುಂಬಗಳ ಸಂಖ್ಯೆ ವಿಶೇಷ ಕಡಿಮೆ ಆದಂತೆ ಅಂಕಿ ಅಂಶಗಳಿಂದ ತಿಳಿಯುವುದಿಲ್ಲ. ಆದರೂ ಹಂಪೆಯಲ್ಲಿ ಬಿ.ಪಿ.ಎಲ್ ಕುಟುಂಬಗಳ ಸಂಖ್ಯೆ ಕಡಿಮೆಯಾಗುವುದಕ್ಕೆ ಪ್ರವಾಸೋದ್ಯಮ ಪೂರಕ ಚಟುವಟಿಕೆಗಳು ಒದಗಿಸುವ ಆದಾಯದಲ್ಲಿನ ಹೆಚ್ಚಳವೆ ಕಾರಣವಾಗಿದೆ ಎನ್ನಬಹುದು.

ಗ್ರಾಮಪಂಚಾಯತಿಯ ವರಮಾನ

ಗ್ರಾಮದ ಮೂಲ ಸೌಲಭ್ಯಗಳನ್ನು ಪೂರೈಸಲು ಆಡಳಿತಾತ್ಮಕ ಉದ್ದೇಶದಿಂದ ತಳಮಟ್ಟದಲ್ಲಿ ರಚಿತವಾಗಿರುವ ಸಂಸ್ಥೆ ಗ್ರಾಮಪಂಚಾಯತಿ. ಇದು ಜನ ಪ್ರತಿನಿಧಿಗಳನ್ನು ಹೊಂದಿದ್ದು ಪ್ರಜಾಪ್ರಭುತ್ವ ಮಾದರಿಯಲ್ಲಿ ಕಾರ್ಯ ನಿರ್ವಹಿಸುತ್ತದೆ. ಗ್ರಾಮದ ಕುಡಿಯುವ ನೀರಿನ ಪೂರೈಕೆ, ವಿದ್ಯುತ್ ಮತ್ತು ನೈರ್ಮಲೀಕರಣ (ಚರಂಡಿ ವ್ಯವಸ್ಥೆ) ಮುಂತಾದ ಮೂಲ ಸೌಲಭ್ಯಗಳನ್ನು ಒದಗಿಸುವುದು ಈ ಸಂಸ್ಥೆಯ ಜವಾಬ್ದಾರಿ. ಈ ಸೌಲಭ್ಯಗಳನ್ನು ಒದಗಿಸುವುದಕ್ಕಾಗಿ ಗ್ರಾಮಸ್ಥರ ಮೇಲೆ ತೆರಿಗೆ ವಿಧಿಸಲಾಗುತ್ತದೆ. ನೀರಿನ ಕರ, ಮನೆತೆರಿಗೆ, ವಾಣಿಜ್ಯ ಮಳಿಗೆಗಳ ಕರ ಮತ್ತು ಪರವಾನಿಗೆ ಕರ, ಹೊಸ ಕಟ್ಟಡಗಳ ನಿರ್ಮಾಣ ಪರವಾನಿಗೆ ಕರ ಹಾಗೂ ಆಸ್ತಿ ಪರಭಾರೆ ಪತ್ರಗಳ ಶುಲ್ಕಗಳು -ಇವು ಗ್ರಾಮ ಪಂಚಾಯತಿಯ ಕರಗಳು ಅಥವಾ ತೆರಿಗೆಗಳು. ಇವು ಪಂಚಾಯತಿಯ ಆದಾಯ ಮೂಲಗಳು ಕೂಡ. ಹಂಪೆಯಲ್ಲಿ ಈ ಮೇಲಿನ ಕರಗಳ ಜತೆಗೆ ವಾಹನ ಪ್ರವೇಶ ಹಾಗೂ ನಾಡದೋಣಿ ನಡೆಸುವ ಗುತ್ತಿಗೆಗಳ ಟೆಂಡರ್ ಹರಾಜು ಮೊತ್ತ ಸೇರಿವೆ. ಇವು ಗ್ರಾಮಪಂಚಾಯತಿಗೆ ಪ್ರವಾಸೋದ್ಯಮ ನೀಡಿರುವ ಆದಾಯ ಎಂದು ಹೇಳಬಹುದು.

ಮನೆತೆರಿಗೆ ಮತ್ತು ನೀರು ಕರಗಳನ್ನು ಮಾತ್ರ 2001-02 ಸಾಲಿನಲ್ಲಿ ಸಂಗ್ರಹಿಸಲಾಗಿದೆ. ಇವುಗಳ ಮೊತ್ತ ರೂ.1,36,286ಗಳು. 2001 ರಿಂದ ವಾಣಿಜ್ಯ ಮಳಿಗೆಗಳ ಪರವಾನಿಗೆ ಕರ ಮತ್ತು ತೆರಿಗೆಗಳನ್ನು

ಸಂಗ್ರಹಿಸುತ್ತಿಲ್ಲ. ಆದರೆ 2000ರಲ್ಲಿ ವಾಣಿಜ್ಯ ಮಳಿಗೆಗಳ ಪರವಾ ಗೆ ಕರ ಮತ್ತು ತೆರಿಗೆಗಳನ್ನು ಸಂಗ್ರಹಿಸಲಾಗಿತ್ತು. ಸಂಗ್ರಹವಾದ ಒಟ್ಟು ಮೊತ್ತ ರೂ.3,82,000. ಸರ್ಕಾರದಿಂದ ಬಂದ ಅನುದಾನ 2001-02ರಲ್ಲಿ ಕೇವಲ ರೂ. 1.36 ಲಕ್ಷಗಳು ಮಾತ್ರ.[28] ಬೇರೆ ಪ್ರದೇಶಗಳ ನೀರಾವರಿ ಪ್ರದೇಶಗಳನ್ನು ಸೇರಿಸಿಕೊಂಡು ಗ್ರಾಮಪಂಚಾಯತಿಯ ವಾರ್ಷಿಕ ಆದಾಯ ರೂ. 50,000 ದಾಟುವುದಿಲ್ಲ.[29] 1991ರಲ್ಲಿ ಹಂಪೆಗ್ರಾಮ ಪಂಚಾಯತಿ ಅಸ್ತಿತ್ವದಲ್ಲಿರಲಿಲ್ಲ. ಅದು ಮಲಪನಗುಡಿಯ ಮಂಡಲ ಪಂಚಾಯತಿಗೆ ಸೇರಿತ್ತು. ಮಲಪನಗುಡಿಯ ಮಂಡಲ ಪಂಚಾಯಿತಿಯ ಆದಾಯ ತುಂಬ ಕಡಿಮೆ ಇತ್ತೆಂದು ಗ್ರಾಮ ಪಂಚಾಯತ್ ಕಾರ್ಯದರ್ಶಿಗಳು ಹೇಳುತ್ತಾರೆ.

ವಾಹನ ಪ್ರವೇಶ ತೆರಿಗೆ ಮತ್ತು ನಾಡದೋಣಿ ನಡೆಸುವ ಟೆಂಡರ್ ಹರಾಜು ಮೊತ್ತಗಳಿಂದ ಹಂಪೆ ಪಂಚಾಯತಿಗೆ ಸಾಕಷ್ಟು ಆದಾಯ ಬರುತ್ತಿದೆ. ಈ ಆದಾಯ ಮೂಲ ಬೇರೆ ಪಂಚಾಯತಿಗಳಲ್ಲಿ ಇಲ್ಲ. ಗ್ರಾಮದೊಳಗಡೆ ಪ್ರವೇಶ ಪಡೆಯಬಯಸುವ ವಾಹನಗಳ ಕರಗಳನ್ನು ನೇರವಾಗಿ ಗ್ರಾಮ ಪಂಚಾಯತಿ ಸಿಬ್ಬಂದಿಯವರು ಸಂಗ್ರಹಿಸುವುದಿಲ್ಲ. ಒಂದು ವರ್ಷದ ಅವಧಿಗೆ ಕರ ಸಂಗ್ರಹಿಸುವ ಹಕ್ಕನ್ನು ಟೆಂಡರ್ ಕರೆದು ಖಾಸಗಿ ವ್ಯಕ್ತಿಗಳಿಗೆ ನೀಡಲಾಗುತ್ತದೆ. 2002-03ನೆಯ ಸಾಲಿನಲ್ಲಿ ಟೆಂಡರ್ ಮೂಲಕ ರೂ.1.79 ಲಕ್ಷ ಸಂಗ್ರಹಿಸಲಾಗಿದೆ.[30] ಗ್ರಾಮಪಂಚಾಯತಿಯ ಮತ್ತೊಂದು ಆದಾಯ ನಾಡದೋಣಿಯ ತೆರಿಗೆ. ಹಂಪೆ ಗ್ರಾಮದಿಂದ ವಿರೂಪಾಪುರ ಗ್ರಾಮ, ಅನೆಗುಂದಿ, ಹನುಮನಹಳ್ಳಿ, ರಾಂಪುರ, ಸಾಣಪುರ ಇತ್ಯಾದಿ ನದಿಯ ಆಚೆಗಿನ ಉತ್ತರ ಭಾಗಕ್ಕಿರುವ ಗ್ರಾಮಗಳಿಗೆ ಹೋಗಲು ನಾಡದೋಣಿಯ ಸೇವೆ ಒದಗಿಸುವುದು ಅವಶ್ಯಕ ಮತ್ತು ಅನಿವಾರ್ಯವಾಗಿದೆ. ಜೊತಗೆ ಅತಿಥಿಗೃಹಗಳು ನದಿಯ ಮತ್ತೊಂದು ದಡದಲ್ಲೂ ಇವೆ. ಅಲ್ಲಿಗೆ ಹೋಗ ಬಯಸುವ ಪ್ರವಾಸಿಗರು ನಾಡದೋಣಿಯ ಸಹಾಯವಿಲ್ಲದೆ ಆಚೆಯ ದಡಕ್ಕೆ ಹೋಗುವುದು ಸಾದ್ಯವಿಲ್ಲ. ಆ ದಡದಲ್ಲಿರುವ ಅತಿಥಿಗೃಹ ಮತ್ತು ರೆಸ್ಟೋರೆಂಟ್‌ಗಳಿಗೆ ಹೋಗಲು, ಹಾಗೆಯೇ ಆ ಭಾಗದಲ್ಲಿರುವ ಐತಿಹಾಸಿಕ ಸ್ಮಾರಕ, ರೆಸಾರ್ಟ್ ಇತ್ಯಾದಿಗಳನ್ನು ನೋಡಬಯಸುವ ಪ್ರವಾಸಿಗರು ನದಿ ದಾಟಲು ನಾಡದೋಣಿಯ ಅಗತ್ಯ ಇದೆ. ಒಂದು ವರ್ಷದ ಅವಧಿಗೆ ನಾಡದೋಣಿ ನಡೆಸುವ ಹಕ್ಕನ್ನು ಖಾಸಗಿ ವ್ಯಕ್ತಿಗಳಿಗೆ ಪಂಚಾಯತಿಯು ಟೆಂಡರ್ ಮೂಲಕ ಗುತ್ತಿಗೆ ನೀಡುತ್ತದೆ. ನಾಡ ದೋಣಿಯಲ್ಲಿ ಸಾಗಿಸುವ ವಸ್ತುಗಳು ಮತ್ತು ಪಡೆಯಬೇಕಾದ ಪ್ರಯಾಣ ದರವನ್ನು ಪಂಚಾಯತಿಯವರು ನಿಗದಿ ಪಡಿಸುತ್ತಾರೆ. ಅದರಂತೆ ನಡೆದುಕೊಳ್ಳಲು ಸಂಬಂಧಪಟ್ಟ ನಾಡದೋಣಿಯ ಗುತ್ತಿಗೆದಾರರಿಗೆ ನಿರ್ದೇಶಿಸಲಾಗುತ್ತದೆ. ನಾಡದೋಣಿಯವರು ಈ ಸೂಚನೆಗಳನ್ನು ಭಾಗಶಃ ಪಾಲಿಸುವ ಹಾಗೆ ಕಾಣುತ್ತದೆ. 2002-03ರ ಸಾಲಿನಲ್ಲಿ ಗ್ರಾಮಪಂಚಾಯತಿಯು ನಾಡದೋಣಿ ಟೆಂಡರ್ ಗುತ್ತಿಗೆ ಹರಾಜು ಮೊತ್ತ ರೂ.1.72 ಲಕ್ಷ ಸಂಗ್ರಹಿಸಿದೆ. ಇದು ಹಂಪೆ ದಡದ ವಿರೂಪಾಕ್ಷೇಶ್ವರ ದೇವಸ್ಥಾನದ ಹಿಂಭಾಗದಲ್ಲಿರುವ ಸ್ನಾನಘಟ್ಟದ ಸ್ಥಳದಿಂದ ಆಚೆಯ ದಡಕ್ಕೆ ದಾಟಿಸಲು ದೋಣಿಯ ಒಂದು ವರ್ಷದ ಗುತ್ತಿಗೆ ಮೊತ್ತ.

[illegible]

ಹಾಗೆಯೆ ವಿರೂಪಾಪುರ ಗಡ್ಡೆಯ ದಡದ ನಾಡ ದೋಣಿಯ ಗುತ್ತಿಗೆ ಹಣವನ್ನು ಆನೆಗುಂದಿ ಗ್ರಾಮಪಂಚಾಯತಿ ಸಂಗ್ರಹಿಸುತ್ತದೆ. ಇದೆ ಅವಧಿಯಲ್ಲಿ ಇದರ ಮೊತ್ತ ರೂ.1.92 ಲಕ್ಷಗಳು. ಇದೆ ತರಹ ತಳವಾರಘಟ್ಟದಲ್ಲಿನ ನಾಡದೋಣಿಯ ಗುತ್ತಿಗೆಯ ಹಣವನ್ನು ಆನೆಗುಂದಿ ಗ್ರಾಮಪಂಚಾಯಿತಿ ಮತ್ತು ಬುಕ್ಕಸಾಗರ ಗ್ರಾಮಪಂಚಾಯಿತಿಗಳು ಸಂಗ್ರಹಿಸುತ್ತವೆ. ಇಲ್ಲಿ ಪ್ರವಾಸಿಗರ ಒಡಾಟ ಕಡಿಮೆ ಇರುವುದರಿಂದ, ಈ ಗುತ್ತಿಗೆ ಹಣದ ಮೊತ್ತ ರೂಪಾಯಿ 5,000 ದಿಂದ 10,000ದೊಳಗಿರುತ್ತದೆ. ಬೇರೆ ಯಾವುದೆ ಗ್ರಾಮ ಪಂಚಾಯತಿಗಳಿಗೆ ಸಿಗದಿರುವಷ್ಟು ಹೆಚ್ಚಿನ ಆದಾಯ ಹಂಪೆ ಗ್ರಾಮ ಪಂಚಾಯತಿಗೆ ಇದೆ. ಈ ಸಂಪನ್ಮೂಲಗಳ ಮೂಲಕಾರಣವೆಂದರೆ ಪ್ರವಾಸೋದ್ಯಮದ ಬೆಳವಣಿಗೆಯನ್ನಬಹುದು. ಪ್ರವಾಸೋದ್ಯಮದಿಂದ ಸ್ಥಳೀಯರ ಆದಾಯ ಮತ್ತು ಸಂಪನ್ಮೂಲಗಳು ಹೆಚ್ಚುವುದರೊಂದಿಗೆ, ಜನ ಪ್ರತಿನಿಧಿ ಸಂಸ್ಥೆಯಾದ ಗ್ರಾಮ ಪಂಚಾಯತಿಯ ಆದಾಯ ಕೂಡ ಹೆಚ್ಚಿಸಿದೆ.

ಇತರೆ ಸಂಸ್ಥೆಗಳು

ಪ್ರವಾಸೋದ್ಯಮವು ಗ್ರಾಮದ ಜನರ ಆರ್ಥಿಕ ಚಟುವಟಿಕೆಗಳನ್ನು ಹೆಚ್ಚು ಮಾಡುವುದಷ್ಟೆ ಅಲ್ಲದೆ ಇತರ ಕೇಂದ್ರ ಮತ್ತು ರಾಜ್ಯ ಆಡಳಿತಕ್ಕೆ ಒಳಪಟ್ಟಿರುವ ಸಾರ್ವಜನಿಕ ಸಂಸ್ಥೆಗಳ ಆದಾಯ ಹೆಚ್ಚಾಗಲು ಕಾರಣವಾಗಿದೆ. ಹಂಪೆಗೆ ಪ್ರವಾಸಿಗರು ಬರುವುದರಿಂದ ವಿವಿಧ ಬಗೆಯ ಆದಾಯಗಳು ಸ್ಥಳೀಯರಿಗೆ ಲಭಿಸುತ್ತದೆ. ಒಂದು ಕಡೆ ಸ್ಥಳೀಯರು ತಾವು ಪ್ರವಾಸಿಗರಿಗೆ ಒದಗಿಸುವ ಸೇವಾ ಸೌಲಭ್ಯಗಳಿಂದ ಆದಾಯವನ್ನು ವೈಯಕ್ತಿವಾಗಿ ಪಡೆದರೆ, ಸ್ಮಾರಕಗಳು, ವಸ್ತುಸಂಗ್ರಹಾಲಯ ಮತ್ತು ಧಾರ್ಮಿಕ ವಿಧಿ ವಿಧಾನಗಳಿಗೆ ಸಂಬಂಧಪಟ್ಟಂತೆ ಪ್ರವಾಸಿಗರು ವೀಕ್ಷಿಸಲು ಮತ್ತು ಧಾರ್ಮಿಕ ಕಾರ್ಯಗಳನ್ನು ಪೂರೈಸಿಕೊಳ್ಳಲು ಪ್ರವಾಸಿಗರಿಗೆ ಕೇಂದ್ರ ಪುರಾತತ್ವ ಸರ್ವೇಕ್ಷಣ ಇಲಾಖೆ, ಕೇಂದ್ರ ಪುರಾತತ್ವ ವಸ್ತುಸಂಗ್ರಹಾಲಯ ಮತ್ತು ಮುಜರಾಯಿ ಇಲಾಖೆ ಪ್ರವೇಶ ದರಗಳನ್ನು ಗೊತ್ತುಪಡಿಸಿವೆ. ಈ ಮೂಲಕ ಪ್ರವಾಸಿಗರಿಂದ ಇಲಾಖೆಗಳಿಗೆ ಆದಾಯ ಸಂದಾಯವಾಗುತ್ತದೆ.

ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ ಹಂಪೆಯ ಅಳಿದುಳಿದ ಎರಡೂ ಸ್ಮಾರಕಗಳನ್ನು (ಕಮಲಮಹಲ್, ವಿಠ್ಠಲ ದೇವಸ್ಥಾನ) ಪ್ರವಾಸಿಗರು ವೀಕ್ಷಿಸಲು ಪ್ರವೇಶದರ ಗೊತ್ತುಪಡಿಸಿದೆ. ಈ ಪ್ರವೇಶದರಗಳನ್ನು ಜಾರಿಗೆ ತಂದಿದ್ದು 1996ರಿಂದ ಈಚೆಗೆ. ಪ್ರಸ್ತುತ ಪ್ರವಾಸಿಗರ ಪ್ರವೇಶದರಗಳಲ್ಲಿ, ದೇಶಿಯ ಪ್ರವಾಸಿಗರಿಗೆ ರೂ.10 ಹಾಗೂ ವಿದೇಶಿ ಪ್ರವಾಸಿಗರಿಗೆ ಅಮೆರಿಕದ 5 ಡಾಲರ್‌ಗಳನ್ನು ವಿಧಿಸಿದೆ. ಕೇಂದ್ರ ಪುರಾತತ್ವ ಸರ್ವೇಕ್ಷಣ ಇಲಾಖೆಯು 1996-1997ರಲ್ಲಿ ಸ್ಮಾರಕಗಳ ವೀಕ್ಷಣೆಗೆ ಗೊತ್ತುಪಡಿಸಿದ ಪ್ರವೇಶದರದಿಂದ ಸಂದಾಯವಾದ ಹಣದ ಮೊತ್ತ ರೂ. 862665 ಆಗಿದ್ದು, ಮುಜರಾಯಿ ಇಲಾಖೆ(ಹಂಪೆ ವಿರೂಪಾಕ್ಷೇಶ್ವರ ದೇವಸ್ಥಾನ) ಪ್ರವೇಶ ದರದ ಮೊತ್ತ ರೂ. 695888

ಆಗಿದೆ. ಈ ಎರಡೂ ಇಲಾಖೆಗಳು ಪ್ರವಾಸಿಗರಿಂದ ಪಡೆದ ಒಟ್ಟು ಮೊತ್ತ ರೂ. 15,58,533 ಇದೆ. ಇದರಲ್ಲಿ ಕೇಂದ್ರ ಪುರಾತತ್ವ ಸರ್ವೇಕ್ಷಣ ಇಲಾಖೆಗೆ ಸಂದಾಯವಾದ ಮೊತ್ತವೇ ಶೇ.55.35ರಷ್ಟಾಗಿದೆ. ಇಲ್ಲಿ ಪ್ರತಿಯೊಬ್ಬ ಪ್ರವಾಸಿಗರ ಪ್ರವೇಶ ದರ ರೂ.10 ದೇಶಿಯರಿಗಾದರೆ, ವಿದೇಶಿಯರಿಗೆ ಅಮೇರಿಕಾದ 5 ಡಾಲರ್‌ಗಳನ್ನು ಗೊತ್ತುಪಡಿಸಲಾಗಿದೆ. ಆದ್ದರಿಂದ ಆದಾಯದ ಮೊತ್ತವು ಹೆಚ್ಚಾಗಲು ಕಾರಣವಾಗಿದೆ. ಆದರೆ ಮುಜರಾಯಿ ಇಲಾಖೆ ಪ್ರತಿಯೊಬ್ಬ ಪ್ರವಾಸಿಗರಿಗೂ ರೂ.2-00 ಗೊತ್ತುಪಡಿಸಿರುವುದರಿಂದ ಆದಾಯ ಶೇ.44.65ರಷ್ಟಿದೆ. 1997-98ರಲ್ಲಿ ಕೇಂದ್ರ ಪುರಾತತ್ವ ಸರ್ವೇಕ್ಷಣ ಇಲಾಖೆಯ ಸ್ಮಾರಕಗಳ (ವಿಠಲ್ ದೇವಸ್ಥಾನ ಮತ್ತು ಕಮಲ್‌ಮಹಲ್) ಪ್ರವೇಶ ದರದ ಮೊತ್ತ ರೂ. 9,45,140 ಹಾಗೂ ಮುಜರಾಯಿ ಇಲಾಖೆ ಪ್ರವೇಶ ದರದ ಆದಾಯದ ಮೊತ್ತ ರೂ. 4,91,126 ಆಗಿದೆ. ಒಟ್ಟು ಎರಡು ಇಲಾಖೆಗಳ ಪ್ರವೇಶ ದರದ ಮೊತ್ತ ರೂ. 14,36,266 ಇಲ್ಲಿಯೂ ಕೇಂದ್ರ ಪುರಾತತ್ವ ಇಲಾಖೆಯ ಸ್ಮಾರಕಗಳ ಪ್ರವೇಶ ದರದ ಮೊತ್ತವೆ ಹೆಚ್ಚಿದೆ. ಇದು ಶೇ.65.81 ಆಗಿದೆ. 1998-99ರಲ್ಲಿ ಕೇಂದ್ರ ಪುರಾತತ್ವ ಇಲಾಖೆಯ ಸ್ಮಾರಕಗಳ ಪ್ರವೇಶ ದರದ ಆದಾಯದ ಮೊತ್ತ ರೂ.16,02,700. ಆದರೆ ಮುಜರಾಯಿ ಇಲಾಖೆಯ ಪ್ರವೇಶ ದರದ ಮೊತ್ತ ರೂ. 6,75,540 ಆಗಿದೆ. ಎರಡೂ ಇಲಾಖೆಗಳು ಗಳಿಸಿರುವ ಒಟ್ಟು ಆದಾಯದ ಮೊತ್ತ ರೂ. 22,78,240 ಆಗಿದೆ. ಈ ಅವಧಿಯಲ್ಲಿಯೂ ಕೇಂದ್ರ ಪುರಾತತ್ವ ಇಲಾಖೆಯ ಶೇ.70.35ರಷ್ಟು ಆದಾಯವನ್ನು ಹೊಂದಿದೆ. 1999-2000ದಲ್ಲಿ ಕೇಂದ್ರ ಪುರಾತತ್ವ ಇಲಾಖೆಯು ಪ್ರವಾಸಿಗರಿಂದ ಗಳಿಸಿದ ಪ್ರವೇಶ ದರದ ಒಟ್ಟು ಮೊತ್ತ ರೂ.14,32,340 ಹಾಗೂ ಮುಜರಾಯಿ ಇಲಾಖೆಯು ಪಡೆದ ಪ್ರವೇಶ ದರದ ಮೊತ್ತ ರೂ. 1,13,852 ಆಗಿದೆ. ಎರಡೂ ಇಲಾಖೆಗಳು ಪ್ರವೇಶ ದರದಿಂದ ಗಳಿಸಿದ ಒಟ್ಟು ಮೊತ್ತ ರೂ. 15,46,192 ಆಗಿದೆ. ಅದರಲ್ಲಿ ಕೇಂದ್ರ ಪುರಾತತ್ವ ಇಲಾಖೆಯ ಪಾಲು ಶೇ.92.64ರಷ್ಟಾಗಿದೆ.

2000-01ರಲ್ಲಿ ಕೇಂದ್ರ ಪುರಾತತ್ವ ಸರ್ವೇಕ್ಷಣ ಇಲಾಖೆಯು ಸಂಗ್ರಹಿಸಿದ ಸ್ಮಾರಕಗಳ ಪ್ರವೇಶ ದರದ ಮೊತ್ತ ರೂ. 37,18,155 ಮತ್ತು ಮುಜರಾಯಿ ಇಲಾಖೆ ಸಂಗ್ರಹಿಸಿದ ಪ್ರವೇಶ ದರದ ಮೊತ್ತ ರೂ. 12,25,066 ಆಗಿದೆ.

ಈ ಅವಧಿಯಲ್ಲಿ ಕೇಂದ್ರ ಪುರಾತತ್ವ ಸರ್ವೇಕ್ಷಣ ಇಲಾಖೆಯು ವಸ್ತುಸಂಗ್ರಹಾಲಯದಲ್ಲಿನ ಪುರಾತನ ವಸ್ತುಗಳ ವೀಕ್ಷಣೆಗಾಗಿ ಪ್ರವೇಶದರನ್ನು ಗೊತ್ತುಪಡಿಸಲಾಗಿದೆ. ಪ್ರವೇಶ ದರ ಪ್ರತಿಯೊಬ್ಬರಿಗೆ ರೂ.2-00 ಎಂದು ನಿಗದಿಪಡಿಸಲಾಗಿದೆ. ಈ ವಸ್ತುಸಂಗ್ರಹಾಲಯವು ಪ್ರವಾಸಿಗರಿಂದ ಸಂಗ್ರಹಿಸಿದ ಪ್ರವೇಶದರದ ಮೊತ್ತ ರೂ. 2,91,600 ಇದೆ. ಕೇಂದ್ರ ಪುರಾತತ್ವ ಇಲಾಖೆ ಸ್ಮಾರಕಗಳ ವೀಕ್ಷಣೆಯಿಂದ ಸಂಗ್ರಹಿಸಿದ ಮೊತ್ತ ಶೇ.71.3 ಆದರೆ ಮುಜರಾಯಿ ಇಲಾಖೆ ಸಂಗ್ರಹಿಸಿದ

[illegible]

ಮೊತ್ತ ಶೇ.23.40 ಆಗಿದೆ. ಪುರಾತತ್ವ ವಸ್ತುಸಂಗ್ರಹಾಲಯ ಪ್ರವೇಶಿಗರಿಂದ ಸಂಗ್ರಹಿಸಲಾದ ಮೊತ್ತ ಶೇ.5.57 ಆಗಿದೆ. ಇಲ್ಲಿಯೂ ಪುರಾತತ್ವ ಸರ್ವೇಕ್ಷಣ ಇಲಾಖೆಯೆ ಸ್ಮಾರಕಗಳ ಪ್ರವೇಶದರದ ಮೊತ್ತದಲ್ಲಿ ಹೆಚ್ಚು ಪಡೆದಿರುವುದು ಕಂಡುಬರುತ್ತದೆ.

2001-02ರಲ್ಲಿ ಪುರಾತತ್ವ ಸರ್ವೇಕ್ಷಣ ಇಲಾಖೆಯು ಪ್ರವಾಸಿಗರಿಂದ ಸಂಗ್ರಹಿಸಿದ ಪ್ರವೇಶ ದರದ ಸಂಗ್ರಹಣೆಯ ಮೊತ್ತ ರೂ. 33,83,386 ಆಗಿದೆ.[31] ಮುಜರಾಯಿ ಇಲಾಖೆಯು ಈ ಅವಧಿಯಲ್ಲಿ ಪ್ರವಾಸಿಗರಿಂದ ಸಂಗ್ರಹಿಸಿದ ಪ್ರವೇಶ ದರದ ಮೊತ್ತ ರೂ. 12,39,492 ಇದೆ.[32] ಹಾಗೆಯೆ ಕೇಂದ್ರ ಪುರಾತತ್ವ ವಸ್ತುಸಂಗ್ರಹಾಲಯವು ಪ್ರವಾಸಿಗರಿಂದ ಸಂಗ್ರಹಿಸಿದ ಪ್ರವೇಶ ದರದ ಮೊತ್ತ ರೂ. 2,57,095 ಇದೆ.[33] ಈ ಅವಧಿಯಲ್ಲಿ ಈ ಎಲ್ಲಾ ಮೂರು ಇಲಾಖೆಗಳು ಸಂಗ್ರಹಿಸಿದ ಪ್ರವಾಸಿಗರ ಪ್ರವೇಶ ದರದ ಒಟ್ಟು ಮೊತ್ತ ರೂ. 48,79,973 ಆಗಿದೆ. ಇದರಲ್ಲಿ ಶೇ.69.33ರಷ್ಟು ಪಾಲನ್ನು ಕೇಂದ್ರ ಪುರಾತತ್ವ ಸರ್ವೇಕ್ಷಣ ಇಲಾಖೆ ಪಡೆದಿದೆ. ಶೇ.25.40ಯಷ್ಟು ಮುಜರಾಯಿ ಇಲಾಖೆ ಪಡೆದರೆ, ಶೇ.5.27ರಷ್ಟು ಮಾತ್ರ ಕೇಂದ್ರಪುರಾತತ್ವ ವಸ್ತುಸಂಗ್ರಹಾಲಯ ಪಡೆದಿದೆ (ಕೋಷ್ಟಕ-42).

ಹಂಪೆಯ ವಿರೂಪಾಕ್ಷೇಶ್ವರ ದೇವಸ್ಥಾನದಲ್ಲಿನ ಕೊಠಡಿ ಮತ್ತು ಅಡುಗೆಗೆ ಬಳಸಲು ನೀಡುವ ಪಾತ್ರೆ-ಸಾಮಾನುಗಳ ಬಾಡಿಗೆ, ಪ್ರವಾಸಿಗರು/ಯಾತ್ರಿಕರು ಮಾಡಿಸುವ ವಿವಿಧ ಪೂಜೆಗಳಿಗೆ ವಿಧಿಸುವ ಶುಲ್ಕ, ವಾಹನಗಳ ಪೂಜೆ, ದೇವಸ್ಥಾನದ ಆವರಣದಲ್ಲಿ ಚಿತ್ರಗಳನ್ನು ತೆಗೆಯಬಯಸಿದರೆ, ವಿಡಿಯೊ ಮತ್ತು ಕ್ಯಾಮರಾಗಳಿಗೆ ವಿಧಿಸುವ ಶುಲ್ಕ ಮೊದಲಾದವು ರಾಜ್ಯ ಸರ್ಕಾರದ ಮುಜರಾಯಿ ಇಲಾಖೆಯ ಆದಾಯವಾಗಿದೆ. ಮುಜರಾಯಿ ಇಲಾಖೆಯವರು ತಿಳಿಸುವಂತೆ ಈ ಹಣವನ್ನು ದೇವಸ್ಥಾನದ ಅಭಿವೃದ್ಧಿ ಮತ್ತು ಸಿಬ್ಬಂದಿಯ ವೇತನ ಇತ್ಯಾದಿಗಳಿಗೆ ಖರ್ಚು ಮಾಡಲಾಗುತ್ತದೆ. ಹಂಪೆಯ ಮುಜರಾಯಿ ಇಲಾಖೆಯ 2000-01ರ ಸಾಲಿನ ಅಂಕಿ-ಅಂಶಗಳು ದೇವಸ್ಥಾನದ ವರಮಾನ ರೂ. 12,44,000ಗಳು(12.5 ಲಕ್ಷಗಳು) ಎಂದು ಸೂಚಿಸುತ್ತವೆ. ಇದರ ಹಂಚಿಕೆ ಈ ಕೆಳಕಂಡಂತಿದೆ. ಒಂದು: ಪ್ರವಾಸಿಗರ ಮತ್ತು ಯಾತ್ರಿಕರ ಪ್ರವೇಶ ದರಗಳ ಸಂಗ್ರಹಣೆ ಮೊತ್ತ ರೂ. 7,23,730ಗಳು. ಎರಡು: ಆವರಣದಲ್ಲಿರುವ ಕೊಠಡಿಗಳ ಬಾಡಿಗೆ ಮತ್ತು ಅಡುಗೆ ಪಾತ್ರೆ ಸಾಮಾನುಗಳ ಬಾಡಿಗೆ, ದೇವಸ್ಥಾನದಲ್ಲಿ ಮದುವೆಯಾದರೆ ವಿಧಿಸುವ ಶುಲ್ಕ, ವಿವಿಧ ಬಗೆಯ ಪೂಜೆ ಸಲ್ಲಿಸಲು ವಿಧಿಸುವ ಶುಲ್ಕ ಇತ್ಯಾದಿಗಳಿಂದ ಸಂಗ್ರಹಿಸಿದ ಹಣದ ಮೊತ್ತ ರೂ.2,87,820ಗಳು. ದೇವಸ್ಥಾನದ ಆವರಣದಲ್ಲಿ ಪುಸ್ತಕ ಮಾರಾಟ ಮತ್ತು ಪ್ರವಾಸಿಗರ ಚಪ್ಪಲಿ ಕಾಯುವಿಕೆಗಳ ಗುತ್ತಿಗೆ ಮೊತ್ತ ರೂ.96,450ಗಳು. ಹಂಪೆಯಲ್ಲಿನ ವಾಹನದ ಪಾರ್ಕಿಂಗ್ ಸ್ಥಳ ಅಂದರೆ ಈಗಿರುವ ಬಸ್‌ಸ್ಟಾಂಡ್ ಸ್ಥಳವು ವಿರೂಪಾಕ್ಷೇಶ್ವರ ದೇವಸ್ಥಾನದ ನಿವೇಶನವೆ ಆಗಿರುವುದರಿಂದ ವಾಹನ ನಿಲುಗಡೆ ಕರವನ್ನು ಟೆಂಡರ್ ಮೂಲಕ

[illegible]

[illegible]

[illegible]

ಒಂದು ವರ್ಷಕ್ಕೆ ಗುತ್ತಿಗೆ ನೀಡಿ ಸಂಗ್ರಹಿಸಲಾಗುತ್ತದೆ. ಇದರ ಮೊತ್ತ ರೂ.1.36 ಲಕ್ಷಗಳು. ಹೀಗೆ ಪ್ರವಾಸಿಗರಿಂದ ಆದಾಯ ಸಂಗ್ರಹವಾಗುತ್ತಿದೆ.

ಕೆ.ಪಿ.ಟಿ.ಸಿ. ಎಲ್. : ಪ್ರವಾಸೋದ್ಯಮದ ಪೂರಕ ಚಟುವಟಿಕೆಗಳಿಗೆ ವಿದ್ಯುತ್ ಶಕ್ತಿ ಪೂರೈಕೆ ಅವಶ್ಯ. ವಿದ್ಯುತ್ ನಿಗಮವು ಪ್ರವಾಸೋದ್ಯಮ ಪೂರಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವುದರಿಂದ ಪರೋಕ್ಷವಾಗಿ ಆದಾಯ ಪಡೆಯುತ್ತಿದೆ. ಹಂಪೆಯ ಗ್ರಾಮಸ್ಥರಿಂದ ಗೃಹ ಬಳಕೆಯ ವಿದ್ಯುತ್ ದಾಖಲೆಯ ಮೊತ್ತವನ್ನು ಹೊರತುಪಡಿಸಿ, ವಾಣಿಜ್ಯಾತ್ಮಕ ಚಟುವಟಿಕೆಗಳಿಗಾಗಿ ಬಳಸುವ ವಿದ್ಯುತ್ ಪಾವತಿಯ ಬಿಲ್ಲು, 2001-02ರಲ್ಲಿ ವಿದ್ಯುತ್‌ಶಕ್ತಿ ನಿಗಮದ ಕಚೇರಿ ಕಮಲಾಪುರ, ಇವರು ಸಂಗ್ರಹಿಸಿದ ಮೊತ್ತ ರೂ. 7,19,435ಗಳು(7.20ಲಕ್ಷ) ಆಗಿತ್ತು.[34] ಜತೆಗೆ ವಿದ್ಯುತ್ ಪಾವತಿಗಳ ಬಿಲ್ಲುಗಳನ್ನು ಗ್ರಾಮಸ್ಥರು ನಿಯಮಿತ ದಿನಗಳಲ್ಲಿ ಪಾವತಿಸುತ್ತಾರೆ ಎಂದು ವಿದ್ಯುತ್‌ಚ್ಛಕ್ತಿ ನಿಗಮದ ಅಧಿಕಾರಿಗಳು ತಿಳಿಸುತ್ತಾರೆ. ಇತರ ಪ್ರದೇಶಗಳಲ್ಲಿ ಇಲಾಖೆಗೆ ಆದಾಯವು ಕಡಿಮೆಯಿದೆ ಹಾಗೂ ಗ್ರಾಹಕರು ಹಣವನ್ನು ಸರಿಯಾಗಿ ಪಾವತಿಸುವುದಿಲ್ಲ ಎಂಬ ದೂರು ಕೂಡ ಇದೆ.

ಬ್ಯಾಂಕ್ : ವಿದೇಶಿಯರು ಪ್ರವಾಸ ಕೈಗೊಳ್ಳುವಾಗ ತಮ್ಮ ಜೊತೆಯಲ್ಲಿ ಕೇವಲ ಕರೆನ್ಸಿಗಳನ್ನೆ ತರದೆ, ಅದರೊಂದಿಗೆ ಪ್ರವಾಸಿ ಚೆಕ್ಕು, ಕ್ರೆಡಿಟ್ ಕಾರ್ಡ್‌ಗಳನ್ನು ತರುತ್ತಾರೆ. ವಿದೇಶಿ ಕರೆನ್ಸಿ, ಪ್ರವಾಸಿ ಚೆಕ್ಕು ಮತ್ತು ಕ್ರೆಡಿಟ್ ಕಾರ್ಡ್‌ಗಳನ್ನು ಸ್ವೀಕರಿಸಿ ಇಲ್ಲಿನ ಕರೆನ್ಸಿಗೆ ವಿನಿಮಯ ಮಾಡಿಕೊಡುವ ಕಾರ್ಯವನ್ನು ಖಾಸಗಿಯವರು ಮತ್ತು ಸರ್ಕಾರಿ ಒಡೆತನದಲ್ಲಿರುವ ಬ್ಯಾಂಕುಗಳು ಮಾಡುತ್ತಿವೆ. ಹಂಪೆ ಗ್ರಾಮದಲ್ಲಿ ಖಾಸಗಿ ಹಣದ ವಿನಿಮಯ ಶಾಪ್‌ಗಳು ವಿದೇಶಿ ಕರೆನ್ಸಿ ಮತ್ತು ಪ್ರವಾಸಿಗರ ಚೆಕ್ಕುಗಳನ್ನು ಸ್ವೀಕರಿಸಿ ಹಣವನ್ನು ನೀಡುತ್ತಿವೆ. ಇದಕ್ಕಾಗಿ ಶೇ. 2 ರಿಂದ 5 ರಷ್ಟು ಕಮಿಶನನ್ನು ಪಡೆಯುತ್ತವೆ.

ಹಂಪೆಯಲ್ಲಿರುವ ರಾಷ್ಟ್ರೀಕೃತ ಬ್ಯಾಂಕಾದ ಕೆನರಾ ಬ್ಯಾಂಕ್ ವಿದೇಶಿ ಪ್ರವಾಸಿಗರ ಪ್ರವಾಸದ ಚೆಕ್ಕು ಮತ್ತು ಕ್ರೆಡಿಟ್ ಕಾರ್ಡ್‌ಗಳನ್ನು ತೆಗೆದುಕೊಂಡು ಹಣದ ವಿನಿಮಯ ಕಾರ್ಯವನ್ನು ಮಾಡುತ್ತಿದೆ. ಹಂಪೆಯ ಪ್ರವಾಸೋದ್ಯಮದ ಸೀಸನ್ ನವೆಂಬರ್ ತಿಂಗಳಿಂದ ಮಾರ್ಚ್ ತಿಂಗಳವರೆಗೆ ಬ್ಯಾಂಕಿನ ಸಿಬ್ಬಂದಿಗೆ ಹೆಚ್ಚಿನ ಕೆಲಸದ ಹೊರೆ ಇರುತ್ತದೆ. ಅದರಂತೆಯೆ ಈ ಅವಧಿಯಲ್ಲಿ ಬ್ಯಾಂಕಿನ ಆದಾಯವು ಹೆಚ್ಚಿರುತ್ತದೆ. 2001-2002ರ ಸಾಲಿನಲ್ಲಿ ವಿದೇಶಿ ಪ್ರವಾಸಿಗರ ಚೆಕ್ಕು ಮತ್ತು ಪತ್ತಿನ ಕಾರ್ಡ್‌ಗಳಿಂದ ಪಡೆದ ಕಮಿಶನ್ ಆದಾಯದ ಮೊತ್ತ ರೂ. 2,25,000(2.25ಲಕ್ಷಗಳು)ಆಗಿತ್ತು.[35] ಬ್ಯಾಂಕಿನ ವ್ಯವಸ್ಥಾಪಕರ ಪ್ರಕಾರ ಬ್ಯಾಂಕು ನಷ್ಟದಲ್ಲಿ ಕಾರ್ಯನಿರ್ವಹಿಸುತ್ತದೆ. ಆದರೆ ವಿದೇಶಿ ಪ್ರವಾಸಿಗರ ವ್ಯವಹಾರದಿಂದ ತಕ್ಕಮಟ್ಟಿಗೆ ಈ ನಷ್ಟವನ್ನು ತುಂಬಿಕೊಳ್ಳುತ್ತಿದೆ ಎನ್ನುತ್ತಾರೆ. ರಾಷ್ಟ್ರಿಕೃತ ಬ್ಯಾಂಕಿಗೂ ವಿದೇಶಿ ಪ್ರವಾಸಿಗರ ವ್ಯವಹಾರ ಅನಿವಾರ್ಯವಾಗಿದೆನ್ನುವುದು ಇಲ್ಲಿ ಕಂಡುಬರುವ ಸಂಗತಿಯಾಗಿದೆ. ಪ್ರವಾಸೋದ್ಯಮವು ಹಣಕಾಸಿನ ಸಂಸ್ಥೆಗಳ ಮೇಲೆ ಪರಿಣಾಮ ಬೀರಿದೆ ಎಂದು ಇದರಿಂದ ತಿಳಿದುಬರುತ್ತದೆ.

ಅಂಚೆ ಕಚೇರಿ : ಪ್ರವಾಸೋದ್ಯಮದಿಂದ ನೇರವಾಗಿ ಲಾಭ ಪಡೆಯುವ ಮತ್ತೊಂದು ಇಲಾಖೆಯೆಂದರೆ ಕೇಂದ್ರ ಸರ್ಕಾರದ ಅಂಚೆ ಮತ್ತು ತಂತಿ ಕಚೇರಿ ಇಲಾಖೆ. ಕ್ಷಣಾರ್ಧದಲ್ಲಿ ಸಂಪರ್ಕವನ್ನು ಕಲ್ಪಿಸುವ ಆಧುನಿಕ ಸೌಲಭ್ಯಗಳಾದ ಇಂಟರ್‌ನೆಟ್, ಇ-ಮೇಲ್‌ಗಳಿದ್ದರೂ ಪ್ರವಾಸಿಗರು ಕೆಲವೊಮ್ಮೆ ಅಂಚೆ ಕಚೇರಿಗಳ ಸೇವಾ ಸೌಲಭ್ಯವನ್ನು ಅವಲಂಬಿಸುತ್ತಾರೆ. ವಿಶೇಷವಾಗಿ ವಿದೇಶಿ ಪ್ರವಾಸಿಗರು ಪುಸ್ತಕ, ಛಾಯಾಚಿತ್ರ ಇತ್ಯಾದಿ ವಸ್ತುಗಳನ್ನು ಒಂದೆಡೆಯಿಂದ ಇನ್ನೊಂದೆಡೆಗೆ ತಲುಪಿಸಲು ಅಂಚೆ ಕಚೇರಿಗಳನ್ನು ಅವಲಂಬಿಸುತ್ತಾರೆ. ಹಂಪೆಗೆ ಬಂದ ವಿದೇಶಿಯರು ಇಲ್ಲಿನ ಪುಸ್ತಕ, ಛಾಯಾಚಿತ್ರ ಇತ್ಯಾದಿ ವಸ್ತುಗಳನ್ನು ತಮ್ಮ ರಾಷ್ಟ್ರದಲ್ಲಿರುವ ಸ್ನೇಹಿತರಿಗೆ, ಬಂಧುಗಳಿಗೆ ಕಳುಹಿಸಿಕೊಡುತ್ತಾರೆ. 2001-2002ನೇ ಸಾಲಿನಲ್ಲಿ ಹಂಪೆಯ ಅಂಚೆ ಕಚೇರಿಯಲ್ಲಿ ಸ್ಟ್ಯಾಂಪ್, ಅಂಚೆ ಪತ್ರಗಳ ಮಾರಾಟದಿಂದ ದೊರೆತ ಆದಾಯದ ಮೊತ್ತ ರೂ 5,53,379ಗಳು (5.53ಲಕ್ಷಗಳು).[36] ಹಂಪೆಯ ಸಬ್‌ಪೋಸ್ಟ್ ಮಾಸ್ಟರ್ ಅವರ ಅಭಿಪ್ರಾಯದ ಪ್ರಕಾರ ಇತರ ಸಬ್ ಪೋಸ್ಟ್ ಕಚೇರಿಗಳ ಆದಾಯವು ಈ ಪ್ರಮಾಣದಲ್ಲಿಲ್ಲ. ಹಂಪೆ ಪ್ರವಾಸಿ ತಾಣವಾಗಿರುವುದರಿಂದ ಈ ಅಂಚೆ ಕಚೇರಿಯು ಹೆಚ್ಚಿನ ಆದಾಯ ಪಡೆಯಲು ಸಾಧ್ಯವಾಗಿದೆ ಎಂದು ತಿಳಿಸುತ್ತಾರೆ.

ಭಾರತೀಯ ಸಂಚಾರ ನಿಗಮ : ಕೇಂದ್ರದ ಭಾರತೀಯ ಸಂಚಾರ ನಿಗಮವು ದೂರವಾಣಿ ಎಸ್.ಟಿ.ಡಿ/ ಐ.ಎಸ್.ಟಿ.ಡಿ. ಭೂತ್‌ಗಳಿಗೆ ಅನುಮತಿ ನೀಡಲಾಗಿದ್ದು, ಅದರ ಹಣಕಾಸಿನ ವಹಿವಾಟಿನ ಮೇಲೆ ಶೇ.20 ರಿಂದ 25 ಕಮಿಶನ್ ನೀಡುತ್ತದೆ. ಉಳಿದ ಶೇ. 75 ರಿಂದ 80 ರಷ್ಟು ಆದಾಯ ನೇರವಾಗಿ ಭಾರತೀಯ ಸಂಚಾರ ನಿಗಮಕ್ಕೆ ಸೇರುತ್ತದೆ. ವಿದೇಶಿ ಪ್ರವಾಸಿಗರು ಮಾಡುವ ಐ.ಎಸ್.ಟಿ.ಡಿ. ಕರೆಗಳು ಹೆಚ್ಚಿನ ಲಾಭವನ್ನು ಗಳಿಸಿಕೊಡುತ್ತವೆ. ಈ ಲಾಭವು ನೇರವಾಗಿ ಕೇಂದ್ರ ಸರ್ಕಾರದ ಭಾರತೀಯ ಸಂಚಾರ ನಿಗಮಕ್ಕೆ ತಲುಪುತ್ತದೆ. ಇದರಿಂದ ರಾಷ್ಟ್ರೀಯ ಬೊಕ್ಕಸಕ್ಕೆ ಹೆಚ್ಚಿನ ಪ್ರಮಾಣದ ಆದಾಯ ಸಂಗ್ರಹವಾಗುತ್ತಿದೆ.

ಬ್ಯಾಕ್‌ವರ್ಡ ಲಿಂಕೇಜಸ್

ಪ್ರವಾಸೋದ್ಯಮವು ಪರೋಕ್ಷವಾಗಿ ಕೃಷಿ ಮತ್ತು ಕೃಷಿ ಆಧಾರಿತ ಚಟುವಟಿಕಗಳಿಗೆ ಉತ್ತೇಜನ ನೀಡುತ್ತದೆ. ಹಂಪೆಯಲ್ಲಿ ರೆಸ್ಟೋರೆಂಟ್ ಮತ್ತು ಹೋಟೆಲ್‌ನಲ್ಲಿ ತಯಾರಿಸುವ ಆಹಾರವನ್ನು ಸ್ಥಳೀಯವಾಗಿ ದೊರೆಯುವ ಸಂಪನ್ಮೂಲಗಳಿಂದಲೆ ತಯಾರಿಸಲಾಗುತ್ತದೆ. ಆಹಾರದ ಧಾನ್ಯಗಳಾದ ಅಕ್ಕಿ, ಗೋಧಿ,ಹಾಲು, ಮೊಟ್ಟೆ, ತರಕಾರಿ, ಹಣ್ಣುಗಳಿಂದ ತಯಾರಿಸಿದ ಪದಾರ್ಥಗಳನ್ನು ಪ್ರವಾಸಿಗರು ಹೆಚ್ಚಾಗಿ ಬಳಸುತ್ತಾರೆ. ಇವು ಸ್ಥಳೀಯ ಮಾರುಕಟ್ಟೆಗಳಲ್ಲಿ ದೊರೆಯುತ್ತವೆ. ವಿದೇಶದ ವಸ್ತುಗಳನ್ನು ಆಹಾರ ತಯಾರಿಕೆಯಲ್ಲಿ ಉಪಯೋಗಿಸುವುದು ಕನಿಷ್ಠವೆಂದು ಹೇಳಬಹುದು.

ಹಂಪೆಯು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಹೊಂದಿರುವುದರಿಂದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹಂಪೆಯ ಪ್ರವಾಸೋದ್ಯಮವನ್ನು ಸಾಂಸ್ಥೀಕರಣ

ಮಾಡಬಯಸಿವೆ. ಈ ಸಾಂಸ್ಥೀಕರಣದ ಮುಖ್ಯ ಉದ್ದೇಶ ಹೆಚ್ಚಿನ ವಿದೇಶಿ ಪ್ರವಾಸಿಗರನ್ನು ಆಕರ್ಷಿಸಿ ಪ್ರವಾಸಕ್ಕೆ ಪ್ರಚೋದನೆ ನೀಡುವುದು. ಈ ಮೂಲಕ ಹೆಚ್ಚಿನ ವಿದೇಶಿ ವಿನಿಮಯವನ್ನು ಗಳಿಸುವುದಾಗಿದೆ. ಈ ಉದ್ದೇಶದ ಈಡೇರಿಕೆಗಾಗಿ ರಾಷ್ಟ್ರೀಯ ಪ್ರವಾಸೋದ್ಯಮ ಯೋಜನೆಗಳನ್ನು ಗರಿಷ್ಟಮಟ್ಟದಲ್ಲಿ ಜಾರಿಗೆ ತರಬೇಕೆಂದು 2001 ರಿಂದಲೂ ಪ್ರಯತ್ನ ನಡೆಯುತ್ತಿದೆ. ರಾಷ್ಟ್ರೀಯ ಯೋಜನೆಗಳನ್ನು ಕಾರ್ಯಗತಗೊಳಿಸಲು ಅಂತಾರಾಷ್ಟ್ರೀಯ ಸಂಸ್ಥೆಯಾದ ಯುನೆಸ್ಕೊ, ಹಂಪೆಯ ಸ್ಮಾರಕಗಳನ್ನು ವಿಶ್ವಪರಂಪರೆಯ ಪಟ್ಟಿಯಲ್ಲಿ ಸೇರಿಸುವ ಮೂಲಕ ಹಂಪೆಯ ಅಭಿವೃದ್ಧಿಗೆ ಸಹಕಾರ ನೀಡುತ್ತಿದೆ. ಹಂಪೆ ಗ್ರಾಮದಲ್ಲಿ ಅಳಿದುಳಿದ ಐತಿಹಾಸಿಕ ಸ್ಮಾರಕಗಳು ಇದ್ದು, ಅವುಗಳನ್ನು ಭಗ್ನಗೊಳಿಸಿ ಅಥವಾ ಪರಿವರ್ತನೆ ಮಾಡಿ ಆ ಸ್ಥಳಗಳಲ್ಲಿ ಆಧುನಿಕ ಕಟ್ಟಡಗಳನ್ನು ನಿರ್ಮಿಸಿಕೊಂಡಿದ್ದಾರೆ. ಈ ಐತಿಹಾಸಿಕ ಸ್ಮಾರಕಗಳನ್ನು ಉಳಿಸಲು, ಹಂಪೆಯ ಗ್ರಾಮವನ್ನು ತೆರವುಗೊಳಿಸುವ ಪ್ರಕ್ರಿಯೆ ಶುರುವಾಗಿದೆ. ಹೀಗೆ ಹಂಪೆಯ ಪ್ರವಾಸೋದ್ಯಮ ಅಭಿವೃದ್ಧಿಯು ಮೊದಲನೆಯ ಮತ್ತು ಎರಡನೆಯ ಹಂತವನ್ನು ತಲುಪಿ, ಮೂರನೆಯ ಹಂತಕ್ಕೆ ಪ್ರವೇಶ ಪಡೆಯಲು ಸಿದ್ಧವಾಗುತ್ತಿದೆ. ಇದರಿಂದ ಈಗಾಗಲೇ ಪ್ರವಾಸೋದ್ಯಮದಲ್ಲಿ ತೊಡಗಿಸಿಕೊಂಡವರ ಸ್ಥಿತಿ ಏನಾಗುತ್ತದೆ ಎಂದು ಈಗ ಹೇಳಲು ಸಾಧ್ಯವಿಲ್ಲ. ಯಾಕೆಂದರೆ ಸಾಂಸ್ಥೀಕರಣ ಅನಿವಾರ್ಯವಾಗಿ ಬಂಡವಾಳ ಕೇಂದ್ರಿತ ಆಗಿದೆ. ಹೆಚ್ಚು ಬಂಡವಾಳ ಹೂಡಲು ಶಕ್ತರಾದವರು ಈಗಿನ ಸಣ್ಣ ಬಂಡವಾಳ ಮತ್ತು ಹೆಚ್ಚು ಶ್ರಮ ಬಳಸಿ ಪ್ರವಾಸೋದ್ಯಮದಲ್ಲಿ ತೊಡಗಿಸಿಕೊಂಡವರನ್ನು ಜಾಗ ಖಾಲಿ ಮಾಡಿಸುವ ಸಾಧ್ಯತೆಯೂ ಇದೆ. ಒಂದು ವೇಳೆ ಆ ರೀತಿ ಆದರೆ ಅದು ನಿಜವಾಗಿಯೂ ಆಧುನೀಕರಣದ ವಿಕೃತ ರೂಪವಾಗುತ್ತದೆ. ಅದು ಹೇಗೆಂದು ಅರ್ಥವಾಗಬೇಕಾದರೆ ಈಗಿನ ಪ್ರವಾಸೋದ್ಯಮ ತಂದ ಸಾಮಾಜಿಕ ಪರಿವರ್ತನೆಯ ಕಿರು ಪರಿಚಯ ಅಗತ್ಯ. ಮುಂದಿನ ಅಧ್ಯಾಯದಲ್ಲಿ ಪ್ರವಾಸೋದ್ಯಮದಿಂದ ಆದ ಸಾಮಾಜಿಕ ಪರಿವರ್ತನೆಯ ವಿಶ್ಲೇಷಣೆ ಇದೆ.

ಅಡಿಟಿಪ್ಪಣಿಗಳು

1. ರೇಮಂಡ್ ನರೋನ್ಹಾ, *ಸ್ಯೂಶಿಯಲ್ ಆ್ಯಂಡ್ ಕಲ್ಚರಲ್ ಡೈಮೆನಶನ್ ಆಫ್ ಟ್ಯೂರಿಸಂ* (ವರ್ಕಿಂಗ್ ಪೇಪರ್ ನಂಬರ್ 326), ವಾಷಿಂಗ್‌ಟನ್ ಡಿ.ಸಿ.: ವರ್ಲ್ಡ್ ಬ್ಯಾಂಕ್ , 1979, ಪುಟ. 9
2. ಅದೇ , ಪುಟ.9
3. ಅದೇ, ಪುಟ.10
4. ಅದೇ, ಪುಟ. 12
5. ಅದೇ, ಪುಟ. 12
6. ಅದೇ, ಪುಟ. 12

[illegible]

7. ನಾಗರಾಜರಾವ್ ಎಂ. ಎಸ್.,(ಇಡಿ) ವಿಜಯನಗರ : *ಥ್ರೂ ದ ಐಸ್ ಆಫ್ ಅಲೆಗ್ಸಾಂಡರ್ ಜೆ. ಗ್ರೀನ್ ಲಾ 1856, ಜಾನ್ ಗೊಲ್ಲಿಂಗ್ಸ್ 1983,* ಮೈಸೂರು: ಡೈರೆಕ್ಟರೇಟ್ ಆಫ್ ಆರ್ಕ್ಯಾಲಜಿ ಆ್ಯಂಡ್ ಮ್ಯೂಸಿಯಂ, 1998 ಪುಟ. 07

8. ಡೈರೆಕ್ಟರೇಟ್ ಆಫ್ ಸೆನ್ಸಸ್ ಆಪರೇಶನ್, *ಡಿಸ್ಟ್ರಿಕೆಟ್ ಸೆನ್ಸಸ್ ಆ್ಯಂಡ್ ಬುಕ್ ಪಾರ್ಟ್ 10 ಬಿ, ಸೀರಿಸ್ 14, ಪ್ರೇಮರಿ ಸೆನ್ಸಸ್ ಆಬಾಸ್ಟ್ರಾಕ್ಟ್* ಮೈಸೂರು: ಮೈಸೂರು ಸರ್ಕಾರ, 1971

9. ಡೈರೆಕ್ಟರೇಟ್ ಆಫ್ ಸೆನ್ಸಸ್ ಆಪರೇಶನ್, *ಡಿಸ್ಟ್ರಿಕ್ಟ್ ಸೆನ್ಸಸ್ ಹ್ಯಾಂಡ್ ಬುಕ್ ಪಾರ್ಟ್ 8, ಸೀರಿಸ್ 9, ಪ್ರೇಮರಿ ಸೆನ್ಸಸ್ ಆಬಾಸ್ಟ್ರಾಕ್ಟ್* ಬೆಂಗಳೂರು: ಗವರ್ನ್‌ಮೆಂಟ್ ಆಫ್ ಕರ್ನಾಟಕ, 1981

10. ಡೈರೆಕ್ಟರೇಟ್ ಆಫ್ ಸೆನ್ಸಸ್ ಆಪರೇಶನ್, *ಡಿಸ್ಟ್ರಿಕ್ಟ್ ಆಪ್ ಸೆನ್ಸಸ್ ಆಪರೇಶನ್, ಡಿಸ್ಟ್ರಿಕ್ಟ್ ಸೆನ್ಸಸ್ ಹ್ಯಾಂಡ್ ಬುಕ್,* ಬಳ್ಳಾರಿ ಡಿಸ್ಟ್ರಿಕ್ಟ್, ಬೆಂಗಳೂರು: ಗವರ್ನ್‌ಮೆಂಟ್ ಆಫ್ ಕರ್ನಾಟಕ, 1991

11. ಪಂಚಾಯತ್ ಕಾರ್ಯದರ್ಶಿಗಳು, *2001ರ ಜನಗಣತಿ (ಪ್ರಾವಿಸಿನಲ್ ಲೀಸ್ಟ್),* ಹಂಪೆ: ಗ್ರಾಮಪಂಚಾಯತಿ ಕಚೇರಿ, 2001

12. ಪಂಚಾಯತ್ ಕಾರ್ಯದರ್ಶಿಗಳು, *ಗ್ರಾಮಪಂಚಾಯತಿ ಬೇಡಿಕೆ ರಿಜಿಸ್ಟರ್,* ಹಂಪೆ: ಗ್ರಾಮಪಂಚಾಯತಿ ಕಚೇರಿ, 2001

13. ಗವರ್ನ್‌ಮೆಂಟ್ ಆಫ್ ಕರ್ನಾಟಕ, *ಹೈಪವರ್ ಕಮಿಟಿ ಪಾರ್ ರಿ ಆಡ್ರೆಸಲ್ ಆಪ್ ರೀಜನಲ್ ಇಂಬ್ಯಾಲೆನ್ಸ್ ಪೈನಲ್ ರೀಪೊರ್ಟ್ ಜೂನ್ 2002,* ಬೆಂಗಳೂರು: 2001

14. ಗವರ್ನ್‌ಮೆಂಟ್ ಆಫ್ ಕರ್ನಾಟಕ, *ಪೊರ್ವೋಕ್ತ,* 2001

15. ಗವರ್ನ್‌ಮೆಂಟ್ ಆಫ್ ಕರ್ನಾಟಕ, *ಪೊರ್ವೋಕ್ತ,* 2001

16. ಗವರ್ನ್‌ಮೆಂಟ್ ಆಫ್ ಕರ್ನಾಟಕ, *ಪೊರ್ವೋಕ್ತ,* 2001

17. ರಾಬಿನ್‌ಸನ್ ಎಚ್., *ಎ ಜಿಯಾಗ್ರಾಪಿ ಆಫ್ ಟೂರಿಜಂ* , ಲಂಡನ್ : ಮೆಕ್ ಡೋನಾಲ್ಡ್ ಆ್ಯಂಡ್ ಇವೆನ್ಸ್, 1976, ಪುಟ- 130

18. ಡೈರೆಕ್ಟರೇಟ್ ಆಫ್ ಸೆನ್ಸಸ್ ಆಪರೇಶನ್, *ಡಿಸ್ಟ್ರಿಕೆಟ್ ಸೆನ್ಸಸ್ ಆ್ಯಂಡ್ ಬುಕ್ ಪಾರ್ಟ್ 10 ಬಿ, ಸೀರಿಸ್ 14, ಪ್ರೇಮರಿ ಸೆನ್ಸಸ್ ಆಬಾಸ್ಟ್ರಾಕ್ಟ್* ಮೈಸೂರು: ಮೈಸೂರು ಸರ್ಕಾರ, 1971

19. ಡೈರೆಕ್ಟರೇಟ್ ಆಫ್ ಸೆನ್ಸಸ್ ಆಪರೇಶನ್, *ಡಿಸ್ಟ್ರಿಕ್ಟ್ ಸೆನ್ಸಸ್ ಹ್ಯಾಂಡ್ ಬುಕ್ ಪಾರ್ಟ್ 8, ಸೀರಿಸ್ 9, ಪ್ರೇಮರಿ ಸೆನ್ಸಸ್ ಆಬಾಸ್ಟ್ರಾಕ್ಟ್* ಬೆಂಗಳೂರು: ಗವರ್ನ್‌ಮೆಂಟ್ ಆಫ್ ಕರ್ನಾಟಕ, 1981

20. ಡೈರೆಕ್ಟರೇಟ್ ಆಫ್ ಸೆನ್ಸಸ್ ಆಪರೇಶನ್, *ಡಿಸ್ಟ್ರಿಕ್ಟ್ ಆಪ್ ಸೆನ್ಸಸ್ ಆಪರೇಶನ್, ಡಿಸ್ಟ್ರಿಕ್ಟ್ ಸೆನ್ಸಸ್ ಹ್ಯಾಂಡ್ ಬುಕ್,* ಬಳ್ಳಾರಿ ಡಿಸ್ಟ್ರಿಕ್ಟ್, ಬೆಂಗಳೂರು: ಗವರ್ನ್‌ಮೆಂಟ್ ಆಫ್ ಕರ್ನಾಟಕ, 1991

21. ಪಂಚಾಯತ್ ಕಾರ್ಯದರ್ಶಿಗಳು, 2001ರ ಜನಗಣತಿ (ಪ್ರಾವಿಸಿನಲ್ ಲೀಸ್ಟ್), ಪೂರ್ವೋಕ್ತ,

[illegible]

[illegible]

[illegible]

[illegible]

[illegible]

22. ಪ್ರವೀನ್ ಸೇಥಿ, *ಬಿಜಿನೆಸ್ ಟೂರಿಜ್ಂ*, ಡೆಲ್ಲಿ, ರಜತ್ ಪಬ್ಲಿಕೇಷನ್ಸ್,2000, ಪುಟ -153

23. ರೇಮಂಡ್ ನರೋನ್ಹಾ, *ಪೂರ್ವೋಕ್ತ,* ಪುಟ. 31

24. ಕರ್ನಾಟಕ ಸರ್ಕಾರ, *ಕರ್ನಾಟಕದಲ್ಲಿ ಮಾನವ ಅಭಿವೃದ್ಧಿ-1999,* ಬೆಂಗಳೂರು: ಯೋಜನಾ ಇಲಾಖೆ, 1999

25. ತಹಸೀಲ್ದಾರರು, ಕೃಷಿಗಣತಿ ಮಾಹಿತಿ ಪುಸ್ತಕ, ಹೊಸಪೇಟೆ : ತಾಲೂಕು ಕಚೇರಿ,2001

26. ರೇಮಂಡ್ ನರೋನ್ಹಾ, *ಪೂರ್ವೋಕ್ತ,* ಪುಟ. 34

27. ಪಂಚಾಯತ್ ಕಾರ್ಯದರ್ಶಿಗಳು, *ಗ್ರಾಮಪಂಚಾಯತಿ ಬಡತನ ರೇಖೆ ಕೆಳಗಿನ ಕುಟುಂಬಗಳ ಪಟ್ಟಿ, 1997,* ಹಂಪೆ : ಗ್ರಾಮಪಂಚಾಯತಿ ಕಚೇರಿ, 2001

28. ಪಂಚಾಯತ್ ಕಾರ್ಯದರ್ಶಿಗಳು, *ಬೇಡಿಕೆ ರಿಜಿಸ್ಟರ್,* ಹಂಪೆ: ಗ್ರಾಮ ಪಂಚಾಯತಿ ಕಚೇರಿ, 2001

29. ಪಂಚಾಯತ್ ಕಾರ್ಯದರ್ಶಿಗಳು, *ಬೇಡಿಕೆ ರಿಜಿಸ್ಟರ್,* ನಾಗೇನಹಳ್ಳಿ: ಗ್ರಾಮ ಪಂಚಾಯತಿ ಕಚೇರಿ, 2001

30. ಪಂಚಾಯತ್ ಕಾರ್ಯದರ್ಶಿಗಳು, *ಬೇಡಿಕೆ ರಿಜಿಸ್ಟರ್,* ಹಂಪೆ: ಗ್ರಾಮ ಪಂಚಾಯತಿ ಕಚೇರಿ, 2001

31. ಹಿರಿಯ ಸ್ಮಾರಕ್ಷಣಾಧಿಕಾರಿಗಳು, *ಪ್ರವಾಸಿಗರ ಪ್ರವೇಶದರದ ನೊಂದಣಿ ಪುಸ್ತಕ* (1996-2002ರವರೆಗಿನ ಮಾಹಿತಿ) , ಕಮಲಾಪುರ: ಪುರಾತತ್ವ ಇಲಾಖೆ, 2001

32. ಕಾರ್ಯನಿರ್ವಾಹಕ ಅಧಿಕಾರಿಗಳು, *ಪ್ರವಾಸಿಗರ ಪ್ರವೇಶದರದ ನೊಂದಣಿ ಪುಸ್ತಕ* (1996-2002ರವರೆಗಿನ ಮಾಹಿತಿ), ಹಂಪೆ: ಮುಜರಾಯಿ ಇಲಾಖೆ, 2001,

33. ಸಹಾಯಕ ಸೂಪರ್ ಇಂಟೆಂಡೆಂಟ್, *ಪ್ರವಾಸಿಗರ ಪ್ರವೇಶದರದ ನೊಂದಣಿ ಪುಸ್ತಕ* (2001-2002ರವರೆಗಿನ ಮಾಹಿತಿ), ಕಮಲಾಪುರ: ಕೇಂದ್ರ ಪುರಾತತ್ವ ವಸ್ತುಸಂಗ್ರಹಾಲಯ ಇಲಾಖೆ, 2001

34. ಸಹಾಯಕ ಅಭಿಯಂತರರು, ವಿದ್ಯುತ್ ಪಾವತಿ ಬಿಲ್ಲು ಪುಸ್ತಕ, ಕಮಲಾಪುರ: ಕರ್ನಾಟಕ ವಿದ್ಯುತ್ತಚ್ಛಕ್ತಿ ನಿಗಮ, 2001

35. ವ್ಯವಸ್ಥಾಪಕರು, *ಹಣ ವಿನಿಮಯ ಪಟ್ಟಿ,* ಹಂಪೆ : ಕೆನರಾ ಬ್ಯಾಂಕ್, 2001

36. ಸಬ್ ಪೋಸ್ಟ್ ಮಾಸ್ಟರ್, *ಸ್ಟಾಂಪ್ ಮಾರಾಟ ರಿಜಿಸ್ಟರ್,* ಹಂಪೆ: ಅಂಚೆ ಕಚೇರಿ , 2001

ಕೋಷ್ಟಕ-25

ತಾಲೂಕು, ಜಿಲ್ಲೆ, ರಾಜ್ಯಕ್ಕೆ ಹೋಲಿಸಿ ಹಂಪೆಯ ವಿವಿಧ ಸೌಲಭ್ಯಗಳ ವಿವರ 2001

ಕ್ರ ಸಂ.	ವಿವರಗಳು	ಟೆಲಿಫೋನ್‌ಗಳ ಸಂಖ್ಯೆ			ಬ್ಯಾಂಕ್‌ಗಳು			ಸಹಕಾರಿ ಬ್ಯಾಂಕುಗಳು			ಅಂಚೆ ಕಚೇರಿಗಳು			ವಾಹನಗಳು		
		ಸಂಖ್ಯೆ	ಸಾವಿರ ಜನ ಸಂಖ್ಯೆಗೆ	ಲಕ್ಷ ಜನ ಸಂಖ್ಯೆಗೆ	ಸಂಖ್ಯೆ	ಸಾವಿರ ಜನ ಸಂಖ್ಯೆಗೆ	ಲಕ್ಷ ಜನ ಸಂಖ್ಯೆಗೆ	ಸಂಖ್ಯೆ	ಸಾವಿರ ಜನ ಸಂಖ್ಯೆಗೆ	ಲಕ್ಷ ಜನ ಸಂಖ್ಯೆಗೆ	ಸಂಖ್ಯೆ	ಸಾವಿರ ಜನ ಸಂಖ್ಯೆಗೆ	ಲಕ್ಷ ಜನ ಸಂಖ್ಯೆಗೆ	ಸಂಖ್ಯೆ	ಸಾವಿರ ಜನ ಸಂಖ್ಯೆಗೆ	ಲಕ್ಷ ಜನ ಸಂಖ್ಯೆಗೆ
01	ಹಂಪೆ	85	39	---	01	0.46	---	01	0.46	---	01	0.46	---	188	87	----
02	ಹೊಸಪೇಟೆ	13696	37	3665	32	0.09	0.9	22	01	5.88	56	0.15	15	25589	68	6848
03	ಬಳ್ಳಾರಿ	52901	26	2612	157	0.08	08	143	0.07	07	393	0.19	19	98200	48	4849
04	ಕರ್ನಾಟಕ	233637357	44	4430	4607	0.08	09	4393	0.08	08	9888	0.19	19	355317	67	67.42

ಮೂಲ : 1. ಗವರ್ನಮೆಂಟ್ ಆಫ್ ಕರ್ನಾಟಕ, *ಹೈ ಪವರ್ ಕಮಿಟಿ ಫಾರ್ ರಿಡ್ರೆಸಲ್ ಆಫ್ ರೀಜನಲ್ ಇಂಬ್ಯಾಲನ್ಸ್, ಫೈನಲ್ ರಿಪೋರ್ಟ್ ಜೂನ್ 2002* ಬೆಂಗಳೂರು : 2001

2. ಕಾರ್ಯದರ್ಶಿಗಳು, *2001ರ ಜನಗಣತಿ (ಪ್ರಾವಿಜನಲ್ ಲಿಸ್ಟ್),* ಹಂಪೆ : ಗ್ರಾಮಪಂಚಾಯತಿ ಕಚೇರಿ, 2002

3. ಹಂಪೆಯಲ್ಲಿರುವ ವಾಹನಗಳ ವಿವರಗಳನ್ನು ಪ್ರಾಥಮಿಕ ಅಂಕಿ ಅಂಶಗಳಿಂದ ಪಡೆಯಲಾಗಿದೆ.

ಕೋಷ್ಟಕ-26

ತಾಲೂಕು, ಜಿಲ್ಲೆ, ರಾಜ್ಯಕ್ಕೆ ಹೋಲಿಸಿ ಹಂಪೆಯ ಶ್ರಮಶಕ್ತಿಯ ವಲಯವಾರು ವಿಂಗಡಣೆ 1971-2001

ಕ್ರ. ಸಂ.	ವಿವರಗಳು	1971			1981			1991			2001		
		ಪ್ರಾಥಮಿಕ ವಲಯ	ದ್ವಿತೀಯ ವಲಯ	ತೃತೀಯ ವಲಯ	ಪ್ರಾಥಮಿಕ ವಲಯ	ದ್ವಿತೀಯ ವಲಯ	ತೃತೀಯ ವಲಯ	ಪ್ರಾಥಮಿಕ ವಲಯ	ದ್ವಿತೀಯ ವಲಯ	ತೃತೀಯ ವಲಯ	ಪ್ರಾಥಮಿಕ ವಲಯ	ದ್ವಿತೀಯ ವಲಯ	ತೃತೀಯ ವಲಯ
1	ಹಂಪೆ	228 (71.48)	24 (7.52)	67 (21.00)	410 (68.00)	03 (0.50)	190 (31.50)	417 (60.35)	13 (1.88)	261 (37.77)	378 (43.70)	10 (1.16)	477 (55.14)
2	ಹೊಸಪೇಟೆ	48021 (67.21)	9100 (12.74)	14328 (20.05)	70242 (67.50)	2526 (2.43)	31288 (30.07)	87638 (68.97)	12446 (9.79)	26982 (21.23)	104626 (68.97)	14872 (9.80)	32210 (21.23)
3	ಬಳ್ಳಾರಿ	326182 (76.49)	37017 (8.68)	63263 (14.83)	448293 (73.47)	19489 (3.19)	142386 (23.34)	541679 (76.49)	52601 (7.42)	114019 (16.09)	580232 (76.49)	56302 (7.42)	122122 (16.09)
4	ಕರ್ನಾಟಕ	---- ----	---- ----	---- ----	9559375 (70.03)	559710 (4.10)	3531373 (25.87)	11647970 (67.36)	2279101 (13.18)	3365046 (19.46)	13656776 (67.36)	2672154 (13.18)	3945381 (19.46)

ಸೂಚನೆ : 2001ರ ಶ್ರಮಶಕ್ತಿಯ ಅಂಕಿ ಅಂಶಗಳು ಲಭ್ಯವಿಲ್ಲದ ಕಾರಣ 1991ರ ಜನಗಣತಿಯ ಶ್ರಮಶಕ್ತಿಯ ಅಂಕಿ ಅಂಶಗಳ ಆಧಾರದ ಮೇಲೆ 2001ರ ಶ್ರಮಶಕ್ತಿಯ ವಲಯವಾರು ವಿಂಗಡಣೆಯನ್ನು ಮಾಡಿಕೊಳ್ಳಲಾಗಿದೆ. ಆವರಣದಲ್ಲಿರುವುದು ಶೇಕಡವಾರು ಪ್ರಮಾಣವನ್ನು ತಿಳಿಸುತ್ತದೆ.

ಮೂಲ : 1. ಮೈಸೂರು ಸರ್ಕಾರ, *ಡಿಸ್ಟ್ರಿಕ್ಟ್ ಸೇನ್ಸಸ್ ಹ್ಯಾಂಡ್ ಬುಕ್, ಸೀರಿಸ್-14 ಪಾರ್ಟ್ x-ಬಿ ಪ್ರೈಮರಿ ಸೆನ್ಸ್ ಅಬಸ್ಟ್ರಕ್ಟ್,* ಮೈಸೂರು : 1971

2. ಕರ್ನಾಟಕ ಸರ್ಕಾರ, *ಸೆನ್ಸಸ್ ಆಫ್ ಇಂಡಿಯಾ, ಸೀರಿಸ್-9 ಪಾರ್ಟ್ xiii-ಬಿ, ಪ್ರೈಮರಿ ಸೆನ್ಸ್ ಅಬಸ್ಟ್ರಾಕ್ಟ್,* ಬೆಂಗಳೂರು : 1981

3. ಕರ್ನಾಟಕ ಸರ್ಕಾರ, *ಸೆನ್ಸಸ್ ಆಫ್ ಇಂಡಿಯಾ, ಸೀರಿಸ್-11, ಪಾರ್ಟ್ xii-ಬಿ, ಪ್ರೈಮರಿ ಸೆನ್ಸ್ ಅಬಸ್ಟ್ರಾಕ್ಟ್,* ಬೆಂಗಳೂರು : 1991

4. ಪಂಚಾಯತಿ ಕಾರ್ಯದರ್ಶಿಗಳು, *2001ರ ಜನಗಣತಿ(ಪ್ರಾವಿಜನಲ್ ಲಿಸ್ಟ್),* ಹಂಪೆ : ಗ್ರಾಮಪಂಚಾಯತಿ ಕಚೇರಿ, 2001

ಕೋಷ್ಟಕ-27

ಪ್ರವಾಸೋದ್ಯಮ ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವ ಜಾತಿವಾರು ಕುಟುಂಬಗಳು 1994-95 : ಹಂಪೆ ಗ್ರಾಮಪಂಚಾಯತಿ

ಕ್ರ.	ಜಾತಿವಾರು	ಅತಿಥಿಗೃಹ ಮತ್ತು	ಅಂಗಡಿಗಳು											
ಸಂ.		ರೆಸ್ಟೋರೆಂಟ್	ಹೋಟೆಲ್	ಕಿರಾಣಿ	ಪೆಟ್ಟಿಗೆ	ಪುಸ್ತಕ	ಸ್ಟೇಷನರಿ	ಆಟಿಕೆ	ಬಳೆ	ತಂಪುಪಾನೀಯ	ಬೇಕರಿ	ಮಿಠಾಯಿ	ತರಕಾರಿ	ಒಟ್ಟು
1	ರಜಪೂತ್	07	04	02	--	--	--	--	--	01	--	--	--	14
2	ಲಿಂಗಾಯತ	---	10	03	03	01	--	01	--	04	--	01	--	23
3	ನಾಯಕ	---	01	---	-02	--	--	--	--	--	--	--	01	04
4	ಕ್ಷತ್ರಿಯ	01	01	---	02	--	--	--	--	--	--	--	--	04
5	ವೈಶ್ಯ	02	--	--	03	--	---	--	--	--	--	01	--	06
6	ದೇವಾಂಗ	02	---	--	--	--	01	--	--	--	--	--	--	03
7	ಬಾರೀಕರು	---	---	--	02	--	--	--	--	--	--	--	--	02
8	ವಡ್ಡರು	01	01	--	--	--	--	--	--	--	--	--	--	02
9	ಕುರುಬರು	-----	---	--	--	--	--	01	--	--	--	--	--	01
10	ನಾಯ್ಡು	----	---	--	--	--	--	02	--	--	--	--	--	02
11	ಬ್ರಾಹ್ಮಣ	----	01	--	01	--	--	--	--	--	--	--	--	02
12	ಕಿಳೇಕ್ಯಾತ	---	---	--	--	--	--	--	--	--	--	--	--	--
13	ತಮಿಳ ಬೋವಿ	---	01	--	02	--	--	----	--	--	--	--	01	04
14	ಮುಸ್ಲಿಂ	----	02	---	03	--	--	--	--	--	--	--	01	06
-15	ಬಳಿಗಾರ	---	---	--	--	--	--	--	03	--	--	--	--	03
16	ಹರಿಜನ	---	---	--	--	--	--	--	--	--	--	--	--	--
17	ಅಗಸರು	---	---	--	--	--	--	--	--	--	--	--	--	--
18	ಲಂಬಾಣಿ	---	---	--	--	--	--	--	--					
19	ಜೈನ	---	---	--	--	--	--	--	--	--	01	--	--	01
20	ಉಪ್ಪಾರ	---	---	--	01	--	---	--	--	--	--	--	--	01
	ಒಟ್ಟು	**13**	**21**	**05**	**19**	**05**	**01**	**01**	**04**	**03**	**02**	**01**	**03**	**78**

ಮೂಲ : ಪಂಚಾಯತಿ ಕಾರ್ಯದರ್ಶಿ, *ಮನೆತೆರಿಗೆ ಸಂಗ್ರಹಾಲಯ ರಿಜಿಸ್ಟರ್, 1994-1995,* ಹಂಪೆ : ಗ್ರಾಮಪಂಚಾಯತಿ ಕಚೇರಿ, 2001

ಕೋಷ್ಟಕ-28

ಪ್ರವಾಸೋದ್ಯಮ ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವ ಜಾತಿವಾರು ಕುಟುಂಬಗಳು 1997-98 : ಹಂಪೆ ಗ್ರಾಮಪಂಚಾಯತಿ

ಕ್ರ. ಸಂ.	ಜಾತಿವಾರು	ಅತಿಥಿಗೃಹ ಮತ್ತು ರೆಸ್ಟೋರೆಂಟ್	ಅಂಗಡಿಗಳು											
			ಹೋಟೆಲ್	ಕಿರಾಣಿ	ಪೆಟ್ಟಿಗೆ	ಪುಸ್ತಕ	ಸ್ಟೇಷನರಿ	ಆಟಿಕೆ	ಬಳೆ	ತಂಪುಪಾನೀಯ	ಬೇಕರಿ	ಮಿಠಾಯಿ	ತರಕಾರಿ	ಒಟ್ಟು
1	ರಜಪೂತ್	07	08	---	03	-----	-----	01	-----	---	---	---	---	19
2	ಲಿಂಗಾಯತ	10	14	---	18	01	---	01	---	---	---	01	---	45
3	ನಾಯಕ	05	12	----	04	-----	-----	-----	-----	---	---	---	---	21
4	ಕ್ಷತ್ರಿಯ	05	03	----	-----	-----	-----	-----	-----	---	---	---	---	08
5	ವೈಶ್ಯ	02	01	----	02	-----	-----	-----	-----	---	---	01	---	06
6	ದೇವಾಂಗ	02	---	---	---	---	-----	---	---	---	---	---	---	02
7	ಬಾರಿಕರು	03	01	---	----	---	---	--	---	---	---	---	---	04
8	ವಡ್ಡರು	04	01	---	02	---	---	---	---	---	---	---	---	07
9	ಕುರುಬರು	02	---	---	---	---	---	02	---	---	---	---	---	04
10	ನಾಯ್ಡು	02	---	--	---	---	---	03	---	---	---	---	---	05
11	ಬ್ರಾಹ್ಮಣ	----	02	---	---	---	---	--	---	---	---	--	---	02
12	ಕಿಳೇಕ್ಯಾತ	---	---	---	---	---	---	---	---	---	---	---	---	---
13	ತಮಿಳು ಬೋವಿ	---	03	---	01	---	---	---	---	---	---	---	---	04
14	ಮುಸ್ಲಿಂ	----	----	---	02	---	---	---	---	---	---	---	02	04
15	ಬಳಿಗಾರ	---	---	---	---	---	---	---	01	---	---	---	---	01
16	ಹರಿಜನ	---	---	---	---	---	---	---	---	---	---	---	---	---
17	ಅಗಸರು	---	---	---	01	---	---	---	---	---	---	---	---	01
18	ಲಂಬಾಣಿ	---	---	---	---	---	---	---	---	---	---	---	---	---
19	ಜೈನ	---	---	---	----	---	---	01	-----	---	---	---	---	01
20	ಉಪ್ಪಾರ	---	02	---	----	---	---	---	---	---	---	---	---	02
	ಒಟ್ಟು	**42**	**47**	----	**33**	**01**	-----	08	01	---	---	02	02	136

ಮೂಲ : ಪಂಚಾಯತಿ ಕಾರ್ಯದರ್ಶಿ, *ಮನೆತೆರಿಗೆ ಸಂಗ್ರಹಾಲಯ ರಿಜಿಸ್ಟರ್, 1996-1997,* ಹಂಪೆ : ಗ್ರಾಮಪಂಚಾಯತಿ ಕಚೇರಿ,2001

ಕೋಷ್ಟಕ-29

ಪ್ರವಾಸೋದ್ಯಮ ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವ ಜಾತಿವಾರು ಕುಟುಂಬಗಳು 2000-2001

ಕ್ರ. ಸಂ	ಜಾತಿವಾರು	ಅತಿಥಿ ಗೃಹಗಳು	ರೇಸ್ಟೋರೆಂಟುಗಳು	ಹೋಟೆಲ್ ಗಳು	ಬಂಡಿ ಹೋಟೆಲ್‌ಗಳು	ಅಂಗಡಿ ಗಳು	ಪೆಟ್ಟಿಗೆ ಅಂಗಡಿ	ಲಂಬಾಣಿ ಉಡುಪು	ತಂಪು ಪಾನೀಯ	ಐಸ್ ಕ್ಯಾಂಡಿ	ಬೇಕರಿ	ಹಣ್ಣು ತರಕಾರಿ	ದ್ವಿಚಕ್ರ ಬಾಡಿಗೆ	ಎಸ್‌ಟಿಡಿ ಬೂತಗಳು	ಇಂಟರ್ ನೆಟ್	ಹಣದ ವಿನಿಮಯ	ಪ್ರವಾಸಿ ಮಾರ್ಗದರ್ಶಿ	ಒಟ್ಟು
1	ರಜಪೂತ್	11	04	01	---	02	04	02	01	---	---	---	04	---	02	04	01	36
2	ಲಿಂಗಾಯಿತ	09	05	09	01	04	15	---	03	---	01	---	---	02	02	04	06	61
3	ನಾಯಕ	04	01	03	04	---	16	06	---	---	---	09	01	----	---	---	04	48
4	ಕ್ಷತ್ರಿಯ	06	01	---	---	01	07	01	---	---	---	----	----	---	02	02	01	21
5	ವೈಶ್ಯ	02	---	01	01	06	04	----	---	---	---	----	---	03	01	---	----	19
6	ದೇವಾಂಗ	02	---	---	---	02	01	----	----	----	---	----	----	---	01	---	----	06
7	ಬಾರೀಕ	01	02	---	---	01	---	01	---	---	---	---	---	---	---	---	02	07
8	ವಡ್ಡ	03	01	---	----	---	03	01	---	---	---	02	---	01	--	01	--	12
9	ಕುರುಬ	02	---	01	01	01	---	---	---	----	---	---	---	01	---	01	01	09
10	ನಾಯ್ಡು	02	---	---	----	03	---	---	---	----	---	---	----	03	---	01	---	09
11	ಬ್ರಾಹ್ಮಣ	03	---	02	----	01	04	----	----	---	---	---	---	---	---	06	01	17
12	ಕಿಳೇಕ್ಯಾತ	01	----	----	----	---	---	03	---	---	---	01	01	----	---	---	02	08
13	ತಮಿಳರು	---	01	01	02	---	01	---	---	01	---	---	---	---	---	----	01	07
14	ಮುಸ್ಲಿಂ	----	---	01	---	---	04	06	----	03	---	08	----	----	---	----	02	24
15	ಬಳಿಗಾರ	---	---	---	---	02	01	---	---	---	---	---	---	---	---	---	---	03
16	ಹರಿಜನ	----	---	---	----	---	02	----	----	----	----	----	----	----	----	---	---	02
17	ಅಗಸರು	---	---	---	---	---	02	---	----	---	---	---	---	---	---	---	---	02
18	ಲಂಬಾಣಿ	----	----	---	---	---	01	13	---	01	---	03	---	----	---	----	----	18
19	ಜೈನ	----	---	---	---	03	---	---	01	---	01	----	---	----	----	---	---	05
20	ಉಪ್ಪಾರ	----	---	01	---	----	01	----	----	---	----	01	---	----	---	----	---	03
	ಒಟ್ಟು	46	15	20	09	26	66	33	05	05	02	24	06	10	08	21	21	317

ಸೂಚನೆ : ಹಣದ ವಿನಿಮಯ ಶಾಪ್‌ಗಳು ಟ್ರಾವೆಲರ್ಸ್ ವ್ಯವಹಾರವನ್ನು ಮಾಡುತ್ತವೆ. ಮೂಲ : ಪ್ರಾಥಮಿಕ ಮಾಹಿತಿ

ಕೋಷ್ಟಕ -30

ಕುಟುಂಬಗಳ ವೃತ್ತಿಯಲ್ಲಿನ ಬದಲಾವಣೆ

ಕ್ರ. ಸಂ.	ವಿವರಗಳು	1991 ಕುಟುಂಬಗಳ ಸಂಖ್ಯೆ	2001 ಕುಟುಂಬಗಳ ಸಂಖ್ಯೆ
01	ಕೃಷಿ	60 (12.37)	77 (15.88)
02	ಕೃಷಿ ಕಾರ್ಮಿಕರು	212(51.13)	124 (25.57)
03	ವ್ಯಾಪಾರ	56 (15.67)	238 (49.07)
04	ಇತರೆ	32 (4.12)	46 (9.48)
	ಒಟ್ಟು	360(100)	485 (100)

ಸೂಚನೆ : ಆವರಣದಲ್ಲಿರುವುದು ಶೇಕಡವಾರು ಪ್ರಮಾಣವನ್ನು ತಿಳಿಸುತ್ತದೆ.

ಮೂಲ : ಪ್ರಾಥಮಿಕ ಮಾಹಿತಿ

ಕೋಷ್ಠಕ -31

ಅತಿಥಿ ಗೃಹಗಳ ದಿನದ ವಹಿವಾಟಿನ ವಿವರ (ರೂ.ಗಳಲ್ಲಿ)

ಕ್ರ.ಸಂ.	ವಿವರಗಳು	ಅತಿಥಿಗೃಹ ಗಳ ಸಂಖ್ಯೆ	ಶೇಕಡವಾರು
1.	200-500	06	13.04
2.	5000- 1000	27	58.70
3.	1000-1500	09	19.56
4.	1500 ರ ಮೇಲ್ಪಟ್ಟು	04	08.70
	ಒಟ್ಟು	46	100.00

ಮೂಲ : ಪ್ರಾಥಮಿಕ ಮಾಹಿತಿ

ಕೋಷ್ಟಕ-32

ರೆಸ್ಟೋರೆಂಟ್ ಮತ್ತು ಹೋಟೆಲ್‌ಗಳ ದಿನದ ವಹಿವಾಟು (ರೂ.ಗಳಲ್ಲಿ) 2001

ಕ್ರ. ಸಂ.	ವಿವರಗಳು	ಆರ್ಥಿಕ ಚಟುವಟಿಕೆಗಳ ಸಂಖ್ಯೆ					
		ರೆಸ್ಟೋರೆಂಟ್ ಗಳು	ಶೇಕಡ ವಾರು	ಹೋಟೆಲ್ ಗಳು	ಶೇಕಡ ವಾರು	ಬಂಡಿ ಹೋಟೆಲ್ ಗಳು	ಶೇಕಡ ವಾರು
01	200-500ವರೆಗೆ	---	---	04	20.00	09	100.00
02	500- 1000ವರೆಗೆ	04	26.67	12	60.00	----	---
03	1000-1500ವರೆಗೆ	08	53.33	04	20.00	----	---
04	1500 ರ ಮೇಲ್ಪಟ್ಟು	03	20.00	---	----	----	---
ಒಟ್ಟು		15	100.00	20	100.00	09	100.00

ಮೂಲ : ಪ್ರಾಥಮಿಕ ಮಾಹಿತಿ

ಕೋಷ್ಟಕ-33

ಅಂಗಡಿ, ಪೆಟ್ಟಿಗೆ ಅಂಗಡಿ, ಬೇಕರಿ ಹಾಗೂ ಇತರೆ ವ್ಯಾಪಾರಗಳ ದಿನದ ವಹಿವಾಟು (ರೂ.ಗಳಲ್ಲಿ) 2001

ಕ್ರ. ಸಂ.	ವಿವರಗಳು	ಆರ್ಥಿಕ ಚಟುವಟಿಕೆಗಳ ಸಂಖ್ಯೆ							
		ಅಂಗಡಿ ಗಳು	ಶೇಕಡ ವಾರು	ಪೆಟ್ಟಿಗೆ ಅಂಗಡಿ	ಶೇಕಡ ವಾರು	ಬೇಕರಿ	ಶೇಕಡ ವಾರು	ಇತರೆ	ಶೇಕಡ ವಾರು
1.	200-500ವರೆಗೆ	02	3.23	45	68.18	----	----	39	100
2.	500- 1000ವರೆಗೆ	15	48.39	21	31.82	02	100	--	---
3.	1000-1500ವರೆಗೆ	12	38.71	---	---	---	---	---	---
4.	1500ದ ಮೇಲ್ಪಟ್ಟು	02	3.23	---	---	---	---	---	---
ಒಟ್ಟು		31	100	66	100	02	100	39	100

ಮೂಲ : ಪ್ರಾಥಮಿಕ ಮಾಹಿತಿ

[illegible]

ಕೋಷ್ಟಕ -34

ಸಾರಿಗೆ ಸಂಪರ್ಕ ಸೌಲಭ್ಯಗಳು : ಎಸ್.ಟಿ.ಡಿ. ಇಂಟರ್‌ನೆಟ್, ಹಣದ ವಿನಿಮಯ ಮತ್ತು ಟ್ರಾವೆಲರ್ಸ್ ಶಾಪ್‌ಗಳ ದಿನದ ವಹಿವಾಟು(ರೂ.ಗಳಲ್ಲಿ) 2001

ಕ್ರ. ಸಂ.	ವಿವರಗಳು	ಆರ್ಥಿಕ ಚಟುವಟಿಕೆಗಳ ಸಂಖ್ಯೆ							
		ಎಸ್‌ಟಿಡಿ ಭೂತ	ಶೇಕಡ ವಾರು	ಇಂಟರ್ ನೆಟ್	ಶೇಕಡ ವಾರು	ಹಣದ ವಿನಿಮಯ	ಶೇಕಡ ವಾರು	ದ್ವಿಚಕ್ರ ವಾಹನ	ಶೇಕಡ ವಾರು
1.	200-500ವರೆಗೆ	--		--		03	14.28	02	33.33
2	500- 1000ವರೆಗೆ	06	60.00	03	37.05	13	61.90	03	50.00
3.	1000-1500ವರೆಗೆ	04	40.00	05	63.50	05	23.81	01	16.66
ಒಟ್ಟು		10	100	08	100	21	100	06	100.

ಮೂಲ : ಪ್ರಾಥಮಿಕ ಮಾಹಿತಿ

ಕೋಷ್ಟಕ-35

ಹಂಪೆ ಕುಟುಂಬಗಳ ವಾರ್ಷಿಕ ಆದಾಯ (ರೂ.ಗಳಲ್ಲಿ)

ಕ್ರ. ಸಂ.	ವಿವರ ಆದಾಯ (ರೂ.ಗಳಲ್ಲಿ)	1991 ಕುಟುಂಬಗಳ ಸಂಖ್ಯೆ	2001 ಕುಟುಂಬಗಳ ಸಂಖ್ಯೆ
1.	5000 ಕೆಳಗೆ	129(36.08)	17(3.51)
2.	5001 ರಿಂದ 15000	88(24.33)	60(12.37)
3.	15001 ರಿಂದ 25000	67(18.61)	65(13.40)
4.	25001 ರಿಂದ 50000	52(14.44)	150(30.93)
5.	50001 ರಿಂದ 100000	24(6.67)	98(20.21)
6.	10001ರ ಮೇಲ್ಪಟ್ಟು	---	95(19.58)
	ಒಟ್ಟು	**360(100.00)**	**485(100.00)**

ಸೂಚನೆ : ಸಂದರ್ಶನ ಸಮಯದಲ್ಲಿ ಸಂದರ್ಶಕರು ನೀಡಿದ ಮಾಹಿತಿಯ ಆಧಾರದ ಮೇಲೆ ವಾರ್ಷಿಕ ಆದಾಯವನ್ನು ತಿಳಿಸಲಾಗಿದೆ. ಆವರಣದಲ್ಲಿ ಕೊಟ್ಟಿರುವುದು ಶೇಕಡವಾರು ಪ್ರಮಾಣವನ್ನು ತೋರಿಸುತ್ತದೆ.

ಮೂಲ : ಪ್ರಾಥಮಿಕ ಮಾಹಿತಿ

ಕೋಷ್ಟಕ-36

ಹಂಪೆಯಲ್ಲಿನ ಆರ್ಥಿಕ ಚಟುವಟಿಕೆಗಳ (ಅತಿಥಿಗೃಹ, ರೆಸ್ಟೋರೆಂಟ್, ಹೋಟೆಲ್‌ಗಳ) ಒಟ್ಟು ಆದಾಯ 2001 (ಅಂದಾಜು ರೂ.ಗಳಲ್ಲಿ)

ಕ್ರ. ಸಂ.	ಆರ್ಥಿಕ ಚಟುವಟಿಕೆಗಳು	ಸಂಖ್ಯೆ	ದಿನದ ಸರಾಸರಿ ರೂ.ಗಳಲ್ಲಿ	ತಿಂಗಳ ಸರಾಸರಿ ಸಾವಿರಗಳಲ್ಲಿ	ವರ್ಷದ ಆದಾಯ ಸಾವಿರಗಳಲ್ಲಿ	ನಿವ್ವಳ ಆದಾಯ ಸಾವಿರಗಳಲ್ಲಿ
01	ಅತಿಥಿಗೃಹಗಳು	46	43500	1305	9135	7308
02	ರೆಸ್ಟೋರೆಂಟ್‌ಗಳು	15	1500	1935	13545	8721
03	ಹೋಟೆಲ್‌ಗಳು	20	1200	720	8640	5184
04	ಬಂಡಿ ಹೋಟೆಲ್‌ಗಳು	09	200	121	1458	875
	ಒಟ್ಟು	90	46400	4081	37778	22088

ಸೂಚನೆ : 1. ಒಂದು ದಿನದ ವ್ಯಾಪರ ವಹಿವಾಟಿನ ಆದಾಯವನ್ನು ತಿಂಗಳಿಗೆ ಪರಿವರ್ತಿಸಿ, ವಾರ್ಷಿಕ ಆದಾಯವನ್ನು ಗುರುತಿಸಲಾಗಿದೆ.
2. ಆದಾಯದಲ್ಲಿ ಖರ್ಚನ್ನು ತೆಗೆದು ನಿವ್ವಳ ಆದಾಯವನ್ನು ಗುರುತಿಸಲಾಗಿದೆ.
3. ರೆಸ್ಟೋರೆಂಟ್ ಮತ್ತು ಅತಿಥಿಗೃಹಗಳಲ್ಲಿ ಸೀಸನ್‌ಲ್ಲಿ ಆಗುವ ವ್ಯಾಪರವೆಂದು ಗ್ರಹಿಸಲಾಗಿದೆ. ಸೀಸನ್ ಹೊರತುಪಡಿಸಿದ ತಿಂಗಳುಗಳಲ್ಲಿ ಶೇ.20 ವ್ಯವಹಾರ ನಡೆಯುತ್ತದೆ.

ಮೂಲ : ಪ್ರಾಥಮಿಕ ಮಾಹಿತಿ

ಕೋಷ್ಟಕ-36.1
ಹಂಪೆಯಲ್ಲಿನ ವಿವಿಧ ಬಗೆಯ ಅಂಗಡಿಗಳ ಒಟ್ಟು ಆದಾಯ (ರೂ.ಗಳಲ್ಲಿ)
2001 (ಅಂದಾಜುಗಳಲ್ಲಿ)

ಕ್ರ. ಸಂ.	ಆರ್ಥಿಕ ಚಟುವಟಿಕೆಗಳು	ಸಂಖ್ಯೆಗಳು	ದಿನದ ವ್ಯಾಪಾರದ ಸರಾಸರಿ ರೂ.ಗಳಲ್ಲಿ	ತಿಂಗಳ ವ್ಯಾಪಾರದ ಸರಾಸರಿ ರೂ.ಗಳಲ್ಲಿ	ವರ್ಷದ ಒಟ್ಟು ಆದಾಯ ಸಾವಿರಗಳಲ್ಲಿ	ನಿವ್ವಳ ಆದಾಯ ಸಾವಿರಗಳಲ್ಲಿ
01	ಕಿರಾಣಿ ಅಂಗಡಿಗಳು	07	1200	32400	3888	1944
02	ಪೆಟ್ಟಿಗೆ ಅಂಗಡಿ	40	500	600000	7200	3600
03	ಅಟಿಕೆ ಸಾಮಾನು ಅಂಗಡಿ	04	1200	1440200	720	288
04	ಸಂಚಾರಿ ಅಟಿಕೆ ಸಾಮಾನು ಅಂಗಡಿ	07	400	84000	420	252
05	ತೆಂಗಿನಕಾಯಿ ಅಂಗಡಿ	17	300	153000	1836	918
06	ಸ್ಟೇಷನರಿ ಅಂಗಡಿಗಳು	03	600	54000	648	120
07	ಹಣ್ಣು ಮತ್ತು ತರಕಾರಿ ಅಂಗಡಿಗಳು	17	200	6000	72	36
08	ತಂಪುಪಾನೀಯ ಅಂಗಡಿ	05	1200	180000	900	270
09	ಐಸ್‌ಕ್ಯಾಂಡಿನ ತಳ್ಳುವ ಬಂಡಿಗಳು	05	200	15000	75	30
10	ಪುಸ್ತಕದ ಅಂಗಡಿಗಳು	04	1500	135000	1620	1215
11	ಬಳೇ ಅಂಗಡಿ	02	200	6000	72	36
12	ಪುರಾತನ ವಸ್ತುಗಳ ಅಂಗಡಿ	03	1500	135000	1620	1215
13	ಮಿಠಾಯಿ ಅಂಗಡಿ	02	300	18000	216	129
14	ಲಂಬಾಣಿ ಮತ್ತು ಸಿದ್ಧ ಉಡುಪು ಅಂಗಡಿ	33	400	12000	144	100
	ಒಟ್ಟು	149	9700	2870600	19431	10153

ಸೂಚನೆ : 1. ಒಂದು ದಿನದ ವ್ಯಾಪರ ವಹಿವಾಟಿನ ಆದಾಯವನ್ನು ತಿಂಗಳಿಗೆ ಪರಿವರ್ತಿಸಿ, ವಾರ್ಷಿಕ ಆದಾಯವನ್ನು ಗುರುತಿಸಲಾಗಿದೆ.

2. ಆದಾಯದಲ್ಲಿ ಖರ್ಚನ್ನು ತೆಗೆದು ನಿವ್ವಳ ಆದಾಯವನ್ನು ಗುರುತಿಸಲಾಗಿದೆ.

ಮೂಲ : ಪ್ರಾಥಮಿಕ ಮಾಹಿತಿ

[illegible]

ಕೋಷ್ಟಕ-36.2

ಸಾರಿಗೆ, ಸಂಪರ್ಕ, ಹಣ ವಿನಿಮಯ ಶಾಪ್‌ಗಳು ಇತ್ಯಾದಿಗಳ ಆದಾಯ(ರೂ.ಗಳಲ್ಲಿ) 2001 (ಅಂದಾಜುಗಳಲ್ಲಿ)

ಕ್ರ. ಸಂ.	ಆರ್ಥಿಕ ಚಟುವಟಿಕೆಗಳು	ಸಂಖ್ಯೆಗಳು	ದಿನದ ವ್ಯಾಪಾರದ ಸರಾಸರಿ ರೂ.ಗಳಲ್ಲಿ	ತಿಂಗಳ ವ್ಯಾಪಾರದ ಸರಾಸರಿ ರೂ.ಗಳಲ್ಲಿ	ವರ್ಷದ ಒಟ್ಟು ಆದಾಯ ಸಾವಿರಗಳಲ್ಲಿ	ನಿವ್ವಳ ಆದಾಯ ಸಾವಿರಗಳಲ್ಲಿ
01	ಎಸ್.ಟಿ.ಡಿ.ಬೂತಗಳು	10	1500	554310	2771	8313
02	ಇಂಟರ್‌ನೆಟ್ ಅಂಗಡಿಗಳು	08	1600	288000	1440	1008
03	ಟ್ರಾವೆಲರ್ಸ್ ಅಂಗಡಿಗಳು	07	1000	210000	1470	882
04	ವಿದೇಶಿ ಹಣದ ವಿನಿಮಯ ಅಂಗಡಿಗಳು	06	10000	1800000	9000	450
05	ದ್ವಿಚಕ್ರ ವಾಹನಗಳ ಬಾಡಿಗೆ ಅಂಗಡಿಗಳು	06	1000	180000	900	450
06	ನಾಡ ದೋಣಿಯ ಆದಾಯ	01	1000	30000	210	210
07	ಪ್ರವಾಸಿ ಮಾರ್ಗದರ್ಶಿಗಳ ಆದಾಯ	24	300	9000	1512	1512
	ಒಟ್ಟು	149	25800	3071310	17302	12825

ಸೂಚನೆ : 1. ಒಂದು ದಿನದ ವ್ಯಾಪರ ವಹಿವಾಟಿನ ಆದಾಯವನ್ನು ತಿಂಗಳಿಗೆ ಪರಿವರ್ತಿಸಿ, ವಾರ್ಷಿಕ ಆದಾಯವನ್ನು ಗುರುತಿಸಲಾಗಿದೆ.

2. ಆದಾಯದಲ್ಲಿ ಖರ್ಚನ್ನು ತೆಗೆದು ನಿವ್ವಳ ಆದಾಯವನ್ನು ಗುರುತಿಸಲಾಗಿದೆ.

ಮೂಲ : ಪ್ರಾಥಮಿಕ ಮಾಹಿತಿ

ಕೋಷ್ಟಕ-36.3

ಹಂಪೆಯ ಕೃಷಿ ಚಟುವಟಿಕೆಗಳ ಆದಾಯ : 2001 (ಅಂದಾಜುಗಳಲ್ಲಿ)

ಕ್ರ. ಸಂ.	ಕೃಷಿ ಚಟುವಟಿಕೆಗಳು	ಸಂಖ್ಯೆಗಳು	ದಿನಕ್ಕೆ ಸರಾಸರಿ ರೂ.ಗಳಲ್ಲಿ	ತಿಂಗಳಿಗೆ ರೂ.ಗಳಲ್ಲಿ	ವರ್ಷಕ್ಕೆ ಒಟ್ಟು ಆದಾಯ ಸಾವಿರಗಳಲ್ಲಿ	ನಿವ್ವಳ ಆದಾಯ ಸಾವಿರಗಳಲ್ಲಿ
01	ಕೃಷಿಕರು	57(163 ಎಕರೆಗಳು)	----	----	489	375
02	ಒತ್ತುವರಿ ಜಮೀನಿನ ಕೃಷಿಕರು	20(18 ಎಕರೆಗಳು)	----	---	128	91
03	ಕೃಷಿ ಕಾರ್ಮಿಕರು	328	40-00	---	160	--
	ಒಟ್ಟು	----	---	---	777	466

ಸೂಚನೆ : 1. ಭೂ ಹಿಡುವಳಿ ಸಾಗುವಳಿದಾರರ ವಾರ್ಷಿಕ ಆದಾಯವನ್ನು ಪ್ರತಿ ಎಕರೆಗೆ ಸಿಗುವ ಆದಾಯದ ಮೇಲೆ ಗುರುತಿಸಲಾಗಿದೆ.

2. ಕೃಷಿ ಕಾರ್ಮಿಕರ ವಾರ್ಷಿಕ ಆದಾಯವನ್ನು ದಿನದ ಕೂಲಿ ಹಾಗೂ ದುಡಿದ ದಿನಗಳ ಮೇಲೆ ಗುರುತಿಸಲಾಗಿದೆ.

ಮೂಲ : ಪ್ರಾಥಮಿಕ ಮಾಹಿತಿ

ಕೋಷ್ಟಕ-36.4

ಹಂಪೆ ಗ್ರಾಮದಲ್ಲಿನ ಎಲ್ಲಾ ಆರ್ಥಿಕ ಚಟುವಟಿಕೆಗಳ ಒಟ್ಟು ಆದಾಯ (ರೂ.ಗಳಲ್ಲಿ) 2001 (ಅಂದಾಜುಗಳಲ್ಲಿ)

ಕ್ರ. ಸಂ.	ಆರ್ಥಿಕ ಚಟುವಟಿಕೆಗಳು	ಸಂಖ್ಯೆ ಗಳು	ದಿನದ ವ್ಯಾಪಾರದ ಸರಾಸರಿ ರೂ.ಗಳಲ್ಲಿ	ತಿಂಗಳ ವ್ಯಾಪಾರದ ಸರಾಸರಿ ರೂ.ಗಳಲ್ಲಿ	ವರ್ಷದ ಒಟ್ಟು ಆದಾಯ ಸಾವಿರಗಳಲ್ಲಿ	ನಿವ್ವಳ ಅದಾಯ ಸಾವಿರಗಳಲ್ಲಿ
01	ಅತಿಥಿಗೃಹ, ಹೋಟೆಲ್ (1-4) ಕೋಷ್ಟಕ-36	90	46,400	4081000	37778	22088
02	ವಿವಿಧ ಬಗೆಯ ಅಂಗಡಿಗಳು (1-14) ಕೋಷ್ಟಕ-36.1	149	9700	2816700	19431	10153
03	ಸಾರಿಗೆ, ಸಂಪರ್ಕ ಹಣದ ವಿನಿಮಯ ಶಾಪ್ ಇತ್ಯಾದಿ (1-7) ಕೋಷ್ಟಕ-36.2	62	25800	3071310	17302	12825
04	ಭೂ ಹಿಡುವಳಿ ಸಾಗುವಳಿ ದಾರರ, ಕೃಷಿಕಾರ್ಮಿಕರ (1-3) ಕೋಷ್ಟಕ-36.3		----	----	777	466
	ಒಟ್ಟು	301	81900	9969010	75288	45532

ಮೂಲ : ಪ್ರಾಥಮಿಕ ಮಾಹಿತಿ

ಕೋಷ್ಟಕ-37

ವಾಸಿಸುವ ಮನೆಗಳ ಮಾದರಿಗಳು

ಕ್ರ. ಸಂ.	ಮನೆಗಳ ಮಾದರಿಗಳು	1991 ಕುಟುಂಬಗಳ ಸಂಖ್ಯೆ	2001 ಕುಟುಂಬಗಳ ಸಂಖ್ಯೆ
1.	ಕಚ್ಚಾ	204(56.70)	145 (29.90)
2.	ಪಕ್ಕಾ	73 (20.21)	140 (28.86)
3.	ಆರ್.ಸಿ.ಸಿ	83 (23.09)	200 (41.24)
	ಒಟ್ಟು	360 (100)	485 (100)

ಸೂಚನೆ : ಆವರಣದಲ್ಲಿರುವುದು ಶೇಕಡವಾರು ಪ್ರಮಾಣವನ್ನು ತಿಳಿಸುತ್ತದೆ.

ಮೂಲ : ಪ್ರಾಥಮಿಕ ಮಾಹಿತಿ

ಕೋಷ್ಟಕ-38

ಕುಟುಂಬಗಳ ಮನೆ ಬಳಕೆ ವಸ್ತುಗಳು

ಕ್ರ. ಸಂ.	ಸಂಪನ್ಮೂಲಗಳು	1991 ಕುಟುಂಬಗಳ ಸಂಖ್ಯೆ	2001 ಕುಟುಂಬಗಳ ಸಂಖ್ಯೆ
1.	ಫ್ರಿಜ್	05 (1.38)	110 (22.68)
2.	ಕೂಲರ್	---	03 (0.62)
3.	ಅಡುಗೆ ಅನಿಲ	50 (13.89)	350 (72.16)
4.	ಟಿ.ವಿ.	10 (2.78)	300 (61.85)
5.	ದ್ವಿಚಕ್ರವಾಹನಗಳು	48 (13.33)	188 (38.76)
6.	ನಾಲ್ಕು ಚಕ್ರವಾಹನಗಳು	01 (0.27)	04 (0.82)
	ಒಟ್ಟು	360 (100)	485 (100)

ಸೂಚನೆ : ಆವರಣದಲ್ಲಿರುವುದು ಶೇಕಡವಾರು ಪ್ರಮಾಣವನ್ನು ತಿಳಿಸುತ್ತದೆ.

ಮೂಲ : ಪ್ರಾಥಮಿಕ ಮಾಹಿತಿ

ಕೋಷ್ಟಕ-39

ಜಾತಿವಾರು ಭೂಹಿಡುವಳಿ ಪ್ರಮಾಣದ ವಿವರ 1990-91, 1995-96

ಕ್ರ. ಸಂ	ಭೂಹಿಡುವಳಿ ಪ್ರಮಾಣ	1990-91								1995-96							
		ಪರಿಶಿಷ್ಟ ಜಾತಿ		ಪರಿಶಿಷ್ಟ ಪಂಗಡ		ಇತರರು		ಒಟ್ಟು		ಪರಿಶಿಷ್ಟ ಜಾತಿ		ಪರಿಶಿಷ್ಟ ಪಂಗಡ		ಇತರರು		ಒಟ್ಟು	
		ಹಿಡುವಳಿ ದಾರರ ಸಂಖ್ಯೆ	ವಿಸ್ತೀರ್ಣ ಎಕರೆ ಗಳಲ್ಲಿ	ಹಿಡುವಳಿ ದಾರರ ಸಂಖ್ಯೆ	ವಿಸ್ತೀರ್ಣ ಎಕರೆ ಗಳಲ್ಲಿ	ಹಿಡುವಳಿ ದಾರರ ಸಂಖ್ಯೆ	ವಿಸ್ತೀರ್ಣ ಎಕರೆ ಗಳಲ್ಲಿ	ಹಿಡುವಳಿ ದಾರರ ಸಂಖ್ಯೆ	ವಿಸ್ತೀರ್ಣ ಎಕರೆ ಗಳಲ್ಲಿ	ಹಿಡುವಳಿ ದಾರರ ಸಂಖ್ಯೆ	ವಿಸ್ತೀರ್ಣ ಎಕರೆ ಗಳಲ್ಲಿ	ಹಿಡುವಳಿ ದಾರರ ಸಂಖ್ಯೆ	ವಿಸ್ತೀರ್ಣ ಎಕರೆ ಗಳಲ್ಲಿ	ಹಿಡುವಳಿ ದಾರರ ಸಂಖ್ಯೆ	ವಿಸ್ತೀರ್ಣ ಎಕರೆ ಗಳಲ್ಲಿ	ಹಿಡುವಳಿ ದಾರರ ಸಂಖ್ಯೆ	ವಿಸ್ತೀರ್ಣ ಎಕರೆ ಗಳಲ್ಲಿ
1	0.5-1.0	04	3.70	02	3.40	46	67.48	52	74.58	04	4.71	06	8.80	76	99.75	86	113.26
2	1-2	02	3.08	01	4.12	33	116.23	36	123.43	---	---	01	3.95	25	87.36	26	91.31
3	2-4	---	---	01	9.06	19	117.91	20	126.99	01	6.20	---	---	18	113.83	19	120.03
4	4-10	----	---	---	---	01	10.25	01	10.25	---	----	----	----	02	29.60	02	29.60
	ಒಟ್ಟು	06	6.78	04	16.58	99	311.87	109	335.25	05	10.91	07	12.75	121	330.54	133	354.20

ಮೂಲ : 1. ತಹಸೀಲ್ದಾರರು, *ಕೃಷಿ ಗಣತಿ ಸಮೀಕ್ಷೆ*, ಹೊಸಪೇಟೆ : ತಾಲೂಕು ಕಚೇರಿ, 1991

2. ತಹಸೀಲ್ದಾರರು, *ಕೃಷಿ ಗಣತಿ ಸಮೀಕ್ಷೆ*, ಹೊಸಪೇಟೆ : ತಾಲೂಕು ಕಚೇರಿ, 1996

[illegible]

ಕೋಷ್ಟಕ-40

ಹಂಪೆಯ ಕೃಷಿ ಕುಟುಂಬಗಳ ವಿವರ

ಕ್ರ. ಸಂ.	ಜಾತಿಗಳು	ಕುಟುಂಬಗಳು ಸಂಖ್ಯೆ	ಭೂ ವಿಸ್ತೀರ್ಣ				ಒತ್ತುವರಿ ಜಮೀನು ವಿವರ		
			1-2ಎಕರೆ	2-5ಎಕರೆ	5-10ಎಕರೆ	10ಎಕರೆ	1-2ಎಕರೆ	2-5ಎಕರೆ	5-10ಎಕರೆ
1	ರಜಪೂತ್	10	05	01	03	01	--	--	--
2	ಲಿಂಗಾಯಿತ	25	12	06	03	01	03	--	--
3	ನಾಯಕರು	11	02	01	--	---	08	--	--
4	ಕ್ಷತ್ರಿಯ	09	05	02	01	01	--	--	--
5	ದೇವಾಂಗ	01	--	--	--	01	01	--	--
6	ಬಾರಿಕ	06	04	--	--	--	02	--	--
7	ವಡ್ಡರು	03	03	--	--	--	--	--	--
8	ಬ್ರಾಹ್ಮಣ	03	01	01	01	--	--	--	--
9	ಕೀಳೆಕ್ಯಾತರು	03	--	--	--	--	03	--	--
10	ನಾಯುಡು	01	01	--	--	--	--	--	--
11	ಮುಸ್ಲಿಂ	01	01	--	--	--	--	--	--
12	ಹರಿಜನ	01	01	--	--	--	01	--	--
13	ಲಂಬಾಣಿ	01	--	--	--	--	01	--	--
14	ಬಳೆಗಾರ	01	01	--	--	--	--	--	--
15	ಈಡಿಗರು	01	--	--	--	--	01	--	--
	ಒಟ್ಟು	77	**36**	**11**	**08**	**04**	**20**	--	--

ಮೂಲ : ಪ್ರಾಥಮಿಕ ಮಾಹಿತಿ

ಕೋಷ್ಟಕ-41

ಕುಟುಂಬಗಳ ಭೂ ಹಿಡುವಳಿ ಪ್ರಮಾಣ

ಕ್ರ. ಸಂ.	ಭೂಮಿ ಎಕರೆಗಳಲ್ಲಿ	1991 ಕುಟುಂಬಗಳ ಸಂಖ್ಯೆ	2001 ಕುಟುಂಬಗಳ ಸಂಖ್ಯೆ
1.	ಭೂಮಿಯಿಲ್ಲದವರು	315 (87.63)	406 (83.71).
2.	0.5 ರಿಂದ 1.0	22 (5.97)	---
3.	1 ರಿಂದ 2	14 (3.92)	56 (11.55)
4.	3 ರಿಂದ 5	08 (2.27)	11 (2.27)
5.	6 ರಿಂದ 10	---	08 (1.65)
6.	10 ಮೇಲ್ಪಟ್ಟು	01 (0.21)	04 (0.82)
	ಒಟ್ಟು	360 (100)	485 (100)

ಸೂಚನೆ : ಆವರಣದಲ್ಲಿರುವುದು ಶೇಕಡವಾರು ಪ್ರಮಾಣವನ್ನು ತಿಳಿಸುತ್ತದೆ.

ಮೂಲ : ಪ್ರಾಥಮಿಕ ಮಾಹಿತಿ

ಕೋಷ್ಟಕ-42

ಹಂಪೆಗೆ ಬಂದ ಪ್ರವಾಸಿಗರಿಂದ ವಿವಿಧ ಇಲಾಖೆಗಳಿಗೆ ಆದ ಆದಾಯ (ರೂ.ಗಳಲ್ಲಿ)

ಕ್ರ.ಸಂ.	ವಿವರಗಳು	1996-97	1997-98	1998-99	1999-2000	2000-01	2001-02
01	ಕೇಂದ್ರ ಪುರಾತತ್ವ ಇಲಾಖೆ (ಕಮಲಮಹಲ್ ಮತ್ತು ವಿಠಲ ದೇವಸ್ಥಾನ)	862665 (55.35)	945140 (65.81)	1602700 (70.35)	1432340 (92.64)	3718155 (71.03)	3383386 (69.33)
02	ಕೇಂದ್ರ ಪುರಾತತ್ವ ವಸ್ತು ಸಂಗ್ರಹಾಲಯ	----	----	---	----	291600 (5.57)	257095 (5.27)
03	ಹಂಪೆ ವಿರೂಪಾಕ್ಷೇಶ್ವರ ದೇವಸ್ಥಾನ (ಮುಜರಾಯಿ ಇಲಾಖೆ)	695888 (44.65)	491126 (34.19)	675540 (29.65)	113852 (7.36)	1225066 (23.40)	1239492 (25.40)
	ಒಟ್ಟು	1558553 (100)	1436266 (100)	2278240 (100)	1546192 (100)	5234821 (100)	4879973

ಸೂಚನೆ : ಕೇಂದ್ರ ಪುರಾತತ್ವ ವಸ್ತುಸಂಗ್ರಹಾಲಯದಲ್ಲಿ ಪ್ರವೇಶದರವನ್ನು 2001ರಿಂದ ಪ್ರಾರಂಭಿಸಲಾಗಿದೆ. ಆವರಣದಲ್ಲಿರುವುದು ಶೇಕಡವಾರು ಪ್ರಮಾಣವನ್ನು ತೋರಿಸುತ್ತದೆ.

ಮೂಲ : 1. ಸ್ಮಾರಕಗಳ ಹಿರಿಯ ಸಂರಕ್ಷಣಾಧಿಕಾರಿಗಳು, *ಕಮಲಮಹಲ್ ಮತ್ತು ವಿಠಲದೇವಸ್ಥಾನದ ಪ್ರವೇಶದರ ಟಿಕೇಟ್‌ಗಳು ನೋಂದಣಿ ಪುಸ್ತಕ*, ಕಮಲಾಪುರ : ಕೇಂದ್ರ ಪುರಾತತ್ವ ಸರ್ವೇಕ್ಷಣ ಇಲಾಖೆ, 2002

2. ಸಹಾಯಕ ಸೂಪರ್‌ಇಂಟಿಂಡೆಂಟ್, *ಪ್ರವೇಶ ದರದ ನೋಂದಣಿ ಪುಸ್ತಕ*, ಕಮಲಾಪುರ : ಕೇಂದ್ರ ಪುರಾತತ್ವ ವಸ್ತುಸಂಗ್ರಹಾಲಯ, 2002

3. ಕಾರ್ಯನಿರ್ವಾಹಕ ಅಧಿಕಾರಿಗಳು, *ಪ್ರವಾಸಿಗರ ಪ್ರವೇಶದರದ ನೋಂದಣಿ ಪುಸ್ತಕ*, ಹಂಪೆ : ಮುಜರಾಯಿ ಇಲಾಖೆ, 2002

ಅಧ್ಯಾಯ 6

ಪ್ರವಾಸೋದ್ಯಮ ಮತ್ತು ಸಾಮಾಜಿಕ ಪರಿವರ್ತನೆಗಳು

[illegible]

[illegible]

[illegible]

ಪ್ರವಾಸೋದ್ಯಮದಿಂದಾದ ಸಾಮಾಜಿಕ ಪರಿವರ್ತನೆಗಳನ್ನು ಈ ಅಧ್ಯಾಯದಲ್ಲಿ ವಿಶ್ಲೇಷಿಸಲಾಗಿದೆ. ಸುಮಾರು ಹತ್ತು ವರ್ಷಗಳಿಂದ ಪ್ರವಾಸಿಗರನ್ನು ಆಕರ್ಷಿಸಿ ಅವರಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸುವ ಕೆಲಸದಲ್ಲಿ ಸ್ಥಳೀಯರು ತೊಡಗಿಸಿಕೊಂಡಿದ್ದಾರೆ. ಅತಿಥಿಗೃಹಗಳು, ರೆಸ್ಟೋರೆಂಟ್‌ಗಳು, ಹೋಟೆಲ್‌ಗಳು, ಆಹಾರ, ಪಾನೀಯಗಳು, ಪೆಟ್ಟಿಗೆ ಅಂಗಡಿಗಳು, ಕುಶಲ ಕೈಗಾರಿಕಾ ವಸ್ತುಗಳು, ಗೃಹ ಕೈಗಾರಿಕೆಗಳು, ಹಣದ ವಿನಿಮಯ ಮಳಿಗೆಗಳು, ಸಾರಿಗೆ ಮತ್ತು ಸಂಪರ್ಕ - ಹೀಗೆ ಹಲವು ಉದ್ಯಮಗಳು ಹಂಪೆಯಲ್ಲಿ ಆರಂಭಗೊಂಡಿವೆ. ಇವೆಲ್ಲ ಸ್ಥಳೀಯರ ಉದ್ಯಮಶೀಲತೆಯ ಫಲ. ಗ್ರಾಮದ ಶೇ.55 ಕುಟುಂಬಗಳು ಪ್ರವಾಸೋದ್ಯಮ ಚಟುವಟಿಕೆಗಳಲ್ಲಿ ಪ್ರತ್ಯಕ್ಷ ಹಾಗು ಪರೋಕ್ಷವಾಗಿ ತೊಡಗಿಸಿಕೊಂಡಿವೆ. ಮಿಕ್ಕ ಕುಟುಂಬಗಳು ಕೃಷಿ ಮತ್ತು ಕೃಷಿಕಾರ್ಮಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿವೆ. ಕೃಷಿ ಕಾರ್ಮಿಕ ಚಟುವಟಿಕೆಗಳಲ್ಲಿ ತೊಡಗಿದವರು ಬಿಡುವಿನ ಸಮಯದಲ್ಲಿ ಇತರ ಕಸುಬುಗಳಲ್ಲಿ ತೊಡಗಿಸಿಕೊಂಡಿದ್ದಾರೆ ಮತ್ತು ಅವುಗಳು ಕೂಡ ಪರೋಕ್ಷವಾಗಿ ಪ್ರವಾಸೋದ್ಯಮಕ್ಕೆ ಸಂಬಂಧಿಸಿದವಾಗಿವೆ. ಪುರುಷ ಮತ್ತು ಮಹಿಳೆಯರು ಕೃಷಿ ಕೆಲಸವಿಲ್ಲದಿದ್ದಾಗ ಹಣ್ಣು ತರಕಾರಿಗಳಂತಹ ಸಣ್ಣ ಪುಟ್ಟ ವ್ಯಾಪಾರಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಕೆಲವು ಕುಟುಂಬಗಳು ಕಟ್ಟಡ ನಿರ್ಮಾಣ ಕೆಲಸದಲ್ಲಿ ನಿರತರಾಗಿರುವುದು ಕಂಡುಬರುತ್ತದೆ.

ಕೆಲವರು ನಗರ ಪ್ರದೇಶಗಳಲ್ಲಿ ಇರುವಂತೆ ಪಾರ್ಟ್‌ಟೈಮ್ ಕೆಲಸಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಕೃಷಿ ಕಾರ್ಮಿಕರಾಗಿರುವ ಕೆಲವು ಮಹಿಳೆಯರು ಕೃಷಿ ಕೆಲಸಕ್ಕೆ ಹೋಗುವ ಮುನ್ನ ಮತ್ತು ಕೃಷಿ ಕೆಲಸದಿಂದ ಬಂದನಂತರ ಅತಿಥಿಗೃಹ, ರೆಸ್ಟೋರೆಂಟ್‌ಗಳಲ್ಲಿ ಕೆಲಸ ಮಾಡುತ್ತಾರೆ. ಪ್ರವಾಸೋದ್ಯಮವು ಹಂಪೆಯ ಒಟ್ಟು ಆದಾಯವನ್ನು ಹಾಗೂ ಕುಟುಂಬದ ಆದಾಯವನ್ನು ಗಣನೀಯವಾಗಿ ಹೆಚ್ಚಿಸಿರುವುದನ್ನು ನಾವು ಹಿಂದಿನ ಅಧ್ಯಾಯದಲ್ಲಿ ನೋಡಿದ್ದೇವೆ. ಆರ್ಥಿಕ ಪರಿವರ್ತನೆ ಸಾಮಾಜಿಕ ಪರಿವರ್ತನೆಗೂ ದಾರಿ ಮಾಡಿಕೊಡುತ್ತದೆ ಎನ್ನುವ ನಂಬಿಕೆ ಈಗಲೂ ಅಭಿವೃದ್ಧಿ ಚಿಂತನೆಯ ಭಾಗವಾಗಿದೆ. ಆ ಗ್ರಹಿತವನ್ನು ಯಥಾರೀತಿಯಲ್ಲಿ ಒಪ್ಪಿಕೊಂಡು, ಹಂಪೆಯ ಆರ್ಥಿಕ ಪ್ರಗತಿ ಎಷ್ಟರ ಮಟ್ಟಿಗೆ ಸಾಮಾಜಿಕ ಪರಿವರ್ತನೆಗಳನ್ನು ತಂದಿದೆ ಎಂಬುದನ್ನು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಸ್ಥಳೀಯ ಸಮಾಜದ ಮೇಲೆ ಪ್ರವಾಸೋದ್ಯಮ ಬೀರಿದ ಪರಿಣಾಮವನ್ನು ಅಧ್ಯಯನ ಮಾಡಲು ಏಳು ಸೂಚ್ಯಂಕಗಳನ್ನು ಬಳಸಲಾಗಿದೆ. ಅವುಗಳಂದರೆ- ಕುಟುಂಬ ರಚನೆಯಲ್ಲಿ ಬದಲಾವಣೆ, ಶಿಕ್ಷಣ, ಆರೋಗ್ಯ, ಮಹಿಳೆಯರ ಸ್ಥಾನಮಾನಗಳು, ಲಿಂಗ

[illegible]

[illegible]

ಅನುಪಾತ, ಅಂತರಜಾತಿ ವಿವಾಹಗಳು ಮತ್ತು ಸಮಾಜದಲ್ಲಿನ ಏಣಿಶ್ರೇಣಿಗಳು. ಇವುಗಳಿಗೆ ಸಂಬಂಧಿಸಿದ ಹಂಪೆಯ ಅಂಕಿ-ಅಂಶಗಳನ್ನು ಜಿಲ್ಲೆ ಮತ್ತು ರಾಜ್ಯದ ಅಂಕಿ-ಅಂಶಗಳಿಗೆ ಹೋಲಿಸಿ ಸಾಮಾಜಿಕ ಪರಿವರ್ತನೆ ಕುರಿತು ತೀರ್ಮಾನಕ್ಕೆ ಬರಬಹುದಾಗಿದೆ.

ಶಿಕ್ಷಣ

ಅಭಿವೃದ್ಧಿಯನ್ನು ಹಲವಾರು ರೀತಿಗಳಲ್ಲಿ ವ್ಯಾಖ್ಯಾನಿಸಲಾಗುತ್ತಿದೆ ಮತ್ತು ಮಾಪನ ಮಾಡಲಾಗುತ್ತಿದೆ. ಮಾನವಮುಖಿ ಅಭಿವೃದ್ಧಿಯೆ ವರ್ತಮಾನದಲ್ಲಿ ಚಾಲ್ತಿಯಲ್ಲಿರುವ ಅಭಿವೃದ್ಧಿಯ ವ್ಯಾಖ್ಯಾನವಾಗಿದೆ. ಇಲ್ಲಿ ಇಡೀ ವ್ಯವಸ್ಥೆಯನ್ನು ಬದಲಾಯಿಸುವ ಪ್ರಯತ್ನವಿಲ್ಲ. ಅದರ ಬದಲು ವ್ಯಕ್ತಿಯ ಪರಿವರ್ತನೆಗೆ ಮಹತ್ವ ನೀಡಲಾಗುತ್ತದೆ. ಉತ್ತಮ ಆರೋಗ್ಯ, ಶಿಕ್ಷಣ ಮತ್ತು ಯಾವುದಾದರೂ ಒಂದು ಕೆಲಸದಲ್ಲಿ ಪರಿಣತಿ ಪಡೆದರೆ ವ್ಯಕ್ತಿಯೊಬ್ಬನ ಬದುಕುವ ಸಾಧ್ಯತೆ ಸಕಾರಾತ್ಮಕವಾಗಿ ಬದಲಾಗಬಹುದೆನ್ನುವ ಗ್ರಹಿತ ಇಲ್ಲಿದೆ.[1] ಆರೋಗ್ಯ, ಶಿಕ್ಷಣ ಮತ್ತು ಇತರ ಸವಲತ್ತುಗಳ ಮೂಲಕ ವ್ಯಕ್ತಿಯೊಬ್ಬನು ಸಂಪನ್ಮೂಲ ಹೆಚ್ಚಿಸಿಕೊಳ್ಳುವ ಸಾಧ್ಯತೆಗಳು - ಈ ಮಾದರಿಯ ಪ್ರಾಮುಖ್ಯತೆ. ಉತ್ತಮ ಆರೋಗ್ಯ ಮತ್ತು ಶಿಕ್ಷಣದಿಂದ ಆಧುನಿಕ ಕಸುಬಿಗೆ ಅಗತ್ಯವಾದ ಪರಿಣತಿ ಹೊಂದಬಹುದಾಗಿದ್ದು, ಇದರಿಂದ ಹೊಸತಾಗಿ ರೂಪುಗೊಳ್ಳುವ ಶ್ರಮ ಮಾರುಕಟ್ಟೆಯಲ್ಲಿ ಪಾಲುಗೊಳ್ಳಲು ಅನುಕೂಲ ಒದಗಿಸುತ್ತದೆ. ಆ ಮೂಲಕ ತನ್ನ ಮತ್ತು ಕುಟುಂಬದ ಆದಾಯವನ್ನು ಸುಧಾರಿಸಿಕೊಳ್ಳಬಹುದೆಂಬ ಗ್ರಹಿತವಿದೆ. ಈ ಮಾದರಿಗೆ ಅದರದ್ದೆ ಆದ ಇತಿಮಿತಿಗಳಿವೆ. ಆ ಚರ್ಚೆಯನ್ನೆಲ್ಲಾ ಇಲ್ಲಿ ಮಾಡಿಲ್ಲ. ಸದ್ಯಕ್ಕೆ ಮಾನವಮುಖಿ ಅಭಿವೃದ್ಧಿಯ ಮಾದರಿಯನ್ನು ಗಮನದಲ್ಲಿಟ್ಟುಕೊಂಡು ಇಲ್ಲಿನ ಪ್ರವಾಸೋದ್ಯಮ ತಂದ ಸಾಮಾಜಿಕ ಪರಿವರ್ತನೆಯನ್ನು ವಿಶ್ಲೇಷಿಸಬಹುದಾಗಿದೆ. ಮಾನವಮುಖಿ ಅಭಿವೃದ್ಧಿಯ ವ್ಯಾಖ್ಯಾನದೊಳಗೆ ಪ್ರಧಾನವಾಗಿ ಮೂಡಿಬಂದಿರುವ ಅಂಶಗಳೆಂದರೆ ಶಿಕ್ಷಣ, ಆರೋಗ್ಯ ಮತ್ತು ಇತರ ಮೂಲಭೂತ ಸೌಲಭ್ಯಗಳ ಇರುವಿಕೆ. ಮೊದಲಿಗೆ ಶಿಕ್ಷಣದ ಸ್ಥಿತಿಗತಿಯನ್ನು ಪರೀಕ್ಷಿಸಬಹುದು.

ಶಿಕ್ಷಣ ಪಡೆದವರ ಸಂಖ್ಯೆಯಲ್ಲಿನ ಹೆಚ್ಚಳವು ಆ ಪ್ರದೇಶದ ಅಭಿವೃದ್ಧಿಯನ್ನು ಸೂಚಿಸುತ್ತದೆ ಎಂದು ಕುರಿಯನ್ ಎನ್.ಜೆ. ಅವರು ಅಭಿಪ್ರಾಯಪಡುತ್ತಾರೆ.[2] ಪ್ರತಿಯೊಂದು ರಾಜ್ಯಗಳು ನಾಗರಿಕರಿಗೆ ಕನಿಷ್ಠ ಶಿಕ್ಷಣವನ್ನು ಒದಗಿಸಲು ಶ್ರಮಿಸುತ್ತಿವೆ. ಶಿಕ್ಷಣವನ್ನು ಒದಗಿಸುವುದು ಸರ್ಕಾರದ ಜವಾಬ್ದಾರಿಯಾಗಿದ್ದರೂ ಅದನ್ನು ಪಡೆದುಕೊಳ್ಳುವ ಸಾಮರ್ಥ್ಯ ಜನರಿಗೆ ಕೂಡ ಇರುವುದು ಅವಶ್ಯಕವಾಗಿದೆ. ಜನರು ಮೊದಲು ದಿನನಿತ್ಯದ ಅಗತ್ಯತೆಗಳನ್ನು ಪೂರೈಸಿಕೊಳ್ಳಲು ಆರ್ಥಿಕವಾಗಿ ಸಬಲರಾಗಲು ಪ್ರಯತ್ನಿಸುತ್ತಾರೆ. ಆದುದರಿಂದಲೇ ಶಿಕ್ಷಣವನ್ನು ಸರ್ಕಾರ ಕಡ್ಡಾಯಗೊಳಿಸಿದರೂ, 14 ವರ್ಷದ ಕೆಳಗಿನ ಮಕ್ಕಳು ಸಹ ಇಂದು ವಿವಿಧ ಉದ್ಯೋಗಗಳಲ್ಲಿ

ಕುಟುಂಬದ ಆರ್ಥಿಕ ಸಹಾಯಕ್ಕಾಗಿ ನಿರಾತರಾಗಿರುವುದು ಕಾಣಬರುತ್ತದೆ. ಮೂಲ ಅಗತ್ಯತೆಗಳು ದೊರೆತ ನಂತರ ಶಿಕ್ಷಣಕ್ಕೆ ಜನರು ಆದ್ಯತೆ ನೀಡುತ್ತಾರೆ. ತಕ್ಕಮಟ್ಟಿಗೆ ಆರ್ಥಿಕವಾಗಿ ಉತ್ತಮವಾಗಿರುವ ಕುಟುಂಬಗಳು ಶಿಕ್ಷಣಕ್ಕೆ ಹೆಚ್ಚು ಮಹತ್ವ ಕೊಡುವುದನ್ನು ಕಾಣಬಹುದು. ಅಂದರೆ ಒಂದು ಕುಟುಂಬದ ಆರ್ಥಿಕ ಸ್ಥಿತಿ ಸುಧಾರಣೆ ಹೊಂದಿದಂತೆ ಅದರ ಶಿಕ್ಷಣ ಮಟ್ಟವು ಹೆಚ್ಚಾಗುತ್ತದೆನ್ನುವ ಗ್ರಹಿತ ಇದೆ. ಆರ್ಥಿಕ ಪರಿವರ್ತನೆಯಿಂದ ಸಾಮಾಜಿಕ ಪರಿವರ್ತನೆ ಸಾಧ್ಯವೆನ್ನುವ ಗ್ರಹಿಕೆ ಇಂತಹ ವಿವರಣೆಯ ಮೇಲೆ ನಿಂತಿದೆ.

ಹಂಪೆ ಗ್ರಾಮ ಸುಮಾರು 30 ವರ್ಷದ ಕೆಳಗೆ ಕೃಷಿ ಪ್ರಧಾನವಾಗಿತ್ತು. ಗ್ರಾಮದ ಜನತೆಯು ಕೃಷಿ ಮತ್ತು ಕೃಷಿ ಅವಲಂಬಿತ ಚಟುವಟಿಕೆಗಳಲ್ಲಿ ವರ್ಷವಿಡಿ ದುಡಿಯುತ್ತಿದ್ದರು. ಉದ್ಯೋಗಗಳು ನಿರಂತರವಾಗಿ ದೊರೆಯುತ್ತಿರಲಿಲ್ಲ. ಹಾಗೆಯೆ ವರಮಾನವು ಸಹ ಕಡಿಮೆ ಇರುತ್ತಿತ್ತು. ಆಗ ಪ್ರವಾಸೋದ್ಯಮದ ಚಟುವಟಿಕೆಗಳು ಇನ್ನೂ ಆರಂಭವಾಗಿರಲಿಲ್ಲ. ಆ ಸಂದರ್ಭದಲ್ಲಿ ಅಂದರೆ 1971ರಲ್ಲಿ ಹಂಪೆ ಗ್ರಾಮದ ಸಾಕ್ಷರತೆ ಪ್ರಮಾಣ ಶೇ.31.40 ಇತ್ತು. ಅದೇ ಸಂದರ್ಭದಲ್ಲಿ ಹೊಸಪೇಟೆ ತಾಲೂಕಿನ ಸಾಕ್ಷರತೆ ಪ್ರಮಾಣ ಶೇ.29.33, ಬಳ್ಳಾರಿ ಜಿಲ್ಲೆಯ ಸಾಕ್ಷಾರತೆ ಪ್ರಮಾಣ ಶೇ.25.11 ಹಾಗೂ ರಾಜ್ಯದ ಸಾಕ್ಷರತ ಪ್ರಮಾಣ ಶೇ.37.48 ಆಗಿತ್ತು. ಇಲ್ಲಿ ಹಂಪೆ ಗ್ರಾಮದ ಸಾಕ್ಷರತೆ ಪ್ರಮಾಣವು ತಾಲೂಕು ಮತ್ತು ಜಿಲ್ಲೆಗಳಿಗಿಂತ ಹೆಚ್ಚಿತ್ತು. ಆದರೆ ರಾಜ್ಯದ ಸರಾಸರಿಗಿಂತ 6.08ರಷ್ಟು ಕಡಿಮೆ ಇತ್ತು.[3] 1981ರಲ್ಲಿ ಹಂಪೆಯ ಸಾಕ್ಷರತೆಯ ಪ್ರಮಾಣ 39.05 ಆಗಿತ್ತು. ಹತ್ತು ವರ್ಷಗಳ ಅವಧಿಯಲ್ಲಿ ಸಾಕ್ಷರತೆಯ ಪ್ರಮಾಣ ಶೇ.7.65 ಹೆಚ್ಚಾಯಿತು. ಆ ಅವಧಿಯಲ್ಲಿ ಹೊಸಪೇಟೆ ತಾಲೂಕಿನ ಸಾಕ್ಷರತೆ ಪ್ರಮಾಣ ಶೇ.32.71, ಜಿಲ್ಲೆಯ ಸಾಕ್ಷರತೆ ಪ್ರಮಾಣ ಶೇ. 37.30 ಹಾಗೂ ರಾಜ್ಯದ ಸಾಕ್ಷಾರತೆ ಪ್ರಮಾಣ ಶೇ.46.21 ಆಗಿತ್ತು. ಆ ಅವಧಿಯಲ್ಲಿ ಕೂಡ ಹಂಪೆಯ ಸಾಕ್ಷರತೆಯ ಪ್ರಮಾಣ ತಾಲೂಕಿನ ಮತ್ತು ಜಿಲ್ಲೆಯ ಪ್ರಮಾಣಕ್ಕಿಂತ ಹೆಚ್ಚಿತ್ತು. ಆದರೆ ರಾಜ್ಯಕ್ಕಿಂತ ಶೇ.7.16 ಕಡಿಮೆ ಇತ್ತು.[4]

ಹಂಪೆಯಲ್ಲಿ 1991ರ ವೇಳೆಗೆ ಕೃಷಿಯ ಜೊತೆಗೆ ಪ್ರವಾಸಿ ತಾಣದ ಬೆಳವಣಿಗೆಗಳು ಶುರುವಾದವು. ಈ ಅವಧಿಯಲ್ಲಿ ಹಂಪೆಯ ಸಾಕ್ಷರತೆ ಪ್ರಮಾಣ ಶೇ 52.62. ತಾಲೂಕಿನ ಸಾಕ್ಷರತೆ ಪ್ರಮಾಣ ಶೇ 37.36, ಜಿಲ್ಲೆಯ ಸಾಕ್ಷರತೆ ಪ್ರಮಾಣ ಶೇ 45.27 ಹಾಗೂ ರಾಜ್ಯದ ಸಾಕ್ಷರತೆ ಪ್ರಮಾಣ ಶೇ 56.04 ಇತ್ತು. ಹಂಪೆಯ ಸಾಕ್ಷರತೆ ಪ್ರಮಾಣ ತಾಲ್ಲೂಕು ಮತ್ತು ಜಿಲ್ಲೆಯ ಸರಾಸರಿಗಿಂತ ಹೆಚ್ಚಿದ್ದು ರಾಜ್ಯದ ಸಾಕ್ಷರತೆ ಪ್ರಮಾಣಕ್ಕಿಂತ ಶೇ 3.42ರಷ್ಟು ಕಡಿಮೆ ಇತ್ತು.[5] ಪ್ರವಾಸೋದ್ಯಮ ಆರಂಭವಾಗುವುದರೊಂದಿಗೆ ಗ್ರಾಮದ ಶಿಕ್ಷಣದ ಸ್ಥಿತಿ ರಾಜ್ಯ ಸರಾಸರಿಯತ್ತ ಚಲಿಸಲು ಆರಂಭವಾಯಿತು. 1991ರ ನಂತರ ಹಂಪೆಯಲ್ಲಿ ಪ್ರವಾಸೋದ್ಯಮದ ಪೂರಕ ಚಟುವಟಿಕೆಗಳು ತೀವ್ರಗತಿಯಿಂದ ಪ್ರಾರಂಭವಾದವು. ಈ ಅವಧಿ ಕೃಷಿ ಮತ್ತು ಕೃಷಿ ಅವಲಂಬಿತ ಚಟುವಟಿಕೆಗಳಿಂದ ಗ್ರಾಮದ

ಕುಟುಂಬಗಳು ತೃತೀಯ ವಲಯದ ಪ್ರವಾಸೋದ್ಯಮ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದು ಹೆಚ್ಚಾಯಿತು. 1991 ಮತ್ತು 2001ರ ಅಂತರದ ಹತ್ತು ವರ್ಷಗಳಲ್ಲಿ ಹಂಪೆ ಗ್ರಾಮ ಅನೇಕ ಬದಲಾವಣೆಗಳನ್ನು ಕಂಡಿದೆ. ಅದರಲ್ಲಿ ಶಿಕ್ಷಣ ಪಡೆದವರ ಸಂಖ್ಯೆಯಲ್ಲಾದ ಬದಲಾವಣೆ ಕೂಡ ಒಂದಾಗಿದೆ. ಇದನ್ನು 2001ರ ಜನಗಣತಿಯ ದಾಖಲೆ ನೋಡುವುದರೊಂದಿಗೆ ಶಿಕ್ಷಣದ ಬೆಳವಣಿಗೆಯನ್ನು ಕಂಡುಕೊಳ್ಳಬಹುದಾಗಿದೆ. ಈ ಅವಧಿಯಲ್ಲಿ ಹಂಪೆಯ ಸಾಕ್ಷರತೆಯ ಪ್ರಮಾಣ ಶೇ 65.76 ಆಗಿದೆ. ಒಂದು ದಶಕದಲ್ಲಿ ಶೇ 13.14ರಷ್ಟು ಸಾಕ್ಷರತೆ ಪ್ರಮಾಣ ಹೆಚ್ಚಾಗಿದೆ. ತಾಲೂಕಿನ ಸಾಕ್ಷರತೆ ಪ್ರಮಾಣ ಶೇ.61.29, ಜಿಲ್ಲೆಯ ಸಾಕ್ಷರತೆ ಪ್ರಮಾಣ ಶೇ 58.04ರಷ್ಟಿದೆ. ರಾಜ್ಯ ಮಟ್ಟದಲ್ಲಿ ಸಾಕ್ಷರತೆ ಪ್ರಮಾಣ ಶೇ 67.04ರಷ್ಟು ಇದೆ. ಈ ಅವಧಿಯಲ್ಲಿಯೂ ಹಂಪೆ ಗ್ರಾಮದ ಸಾಕ್ಷರತೆ ತಾಲೂಕು ಮತ್ತು ಜಿಲ್ಲೆಯ ಸರಾಸರಿಗಿಂತ ಹೆಚ್ಚು. ಆದರೂ ರಾಜ್ಯದ ಸರಾಸರಿಗಿಂತ ಶೇ. 1.28ರಷ್ಟು ಕಡಿಮೆ. ಆದರೆ ರಾಜ್ಯದ ಸರಾಸರಿಗಿಂತ ಹಂಪೆ ಗ್ರಾಮದ ಸಾಕ್ಷರತೆಯು ಕಳೆದ ದಶಕಗಳಿಗಿಂತ ತುಂಬ ಕಡಿಮೆಯಾಗಿದೆ.[6] ಬರುವ ದಿನಗಳಲ್ಲಿ ಹಂಪೆಯ ಸಾಕ್ಷರತೆ ಪ್ರಮಾಣ ರಾಜ್ಯದ ಸಾಕ್ಷರತೆ ಪ್ರಮಾಣಕ್ಕೆ ಸರಿಗಟ್ಟಬಹುದು ಅಥವಾ ಅದಕ್ಕಿಂತ ಹೆಚ್ಚಿಗಾದರೆ ಆಶ್ಚರ್ಯವೇನಿಲ್ಲ. ಸಾಕ್ಷರತೆ ಪ್ರಮಾಣದಲ್ಲಿನ ಈ ಬೆಳವಣಿಗೆಯಲ್ಲಿ ಹಲವಾರು ಅಂಶಗಳು ಪಾತ್ರವಹಿಸಿರಬಹುದು. ಅವುಗಳಲ್ಲಿ ಪ್ರವಾಸೋದ್ಯಮದ ಪಾತ್ರವನ್ನು ಅಲ್ಲಗೆಳೆಯುವುದು ಕಷ್ಟ ಎನ್ನುವುದನ್ನು ಈ ಅಂಕಿ ಅಂಶಗಳು ತಿಳಿಸುತ್ತವೆ(ಕೋಷ್ಟಕ-43).

ಹಂಪೆಯ ಗ್ರಾಮದಲ್ಲಿ ಎರಡು ಸರ್ಕಾರಿ ಶಾಲೆಗಳು, ಎರಡು ಅಂಗನವಾಡಿ ಕೇಂದ್ರಗಳು ಮತ್ತು ಒಂದು ಖಾಸಗಿ ಶಾಲೆ ಇವೆ. ಒಂದು ಸರ್ಕಾರಿ ಶಾಲೆ ಗ್ರಾಮ ಪಂಚಾಯತಿಯ ಪಕ್ಕದಲ್ಲಿರುವ ಹಿರಿಯ ಪ್ರಾಥಮಿಕ ಶಾಲೆಯಿದ್ದು, ಇದು 1 ರಿಂದ 7ನೆಯ ತರಗತಿಯವರೆಗಿನ ಕನ್ನಡ ಮಧ್ಯಮ ಶಾಲೆಯಾಗಿದೆ. 2002-03ನೆಯ ಸಾಲಿನ ಶೈಕಣಿಕ ವರ್ಷದಲ್ಲಿ ಶಾಲೆಯ ವಿದ್ಯಾರ್ಥಿ ಸಂಖ್ಯೆ 305 ಹಾಗೂ ಶಿಕ್ಷಕರ ಸಂಖ್ಯೆ 06 ಇದೆ.[7] ಈ ಶಾಲೆಯಲ್ಲಿ ಶಿಕ್ಷಕರ ಮತ್ತು ವಿದ್ಯಾರ್ಥಿಗಳ ಅನುಪಾತ 1:50 ಆಗಿದೆ. ಒಟ್ಟು ಶಿಕ್ಷಕರ ಸಂಖ್ಯೆ ಕಡಿಮೆಯಿದೆ. ಒಬ್ಬೊಬ್ಬ ಶಿಕ್ಷಕ ಒಂದು ತರಗತಿಗೆ ಹೋದರೆ ಇನ್ನೊಂದು ತರಗತಿಗೆ ಶಿಕ್ಷಕರಿಲ್ಲದೆ ಖಾಲಿ ಉಳಿಯುತ್ತದೆ. ಸರ್ಕಾರದಿಂದ ಮಂಜೂರಾದ ಶಿಕ್ಷಕರ ಹುದ್ದೆಗಳ ಸಂಖ್ಯೆ 06 ಇದೆ. ಸರ್ಕಾರದ ನಿಯಮದ ಪ್ರಕಾರ 40 ವಿದ್ಯಾರ್ಥಿಗಳಿಗೆ ಒಬ್ಬ ಶಿಕ್ಷಕ ಇರಬೇಕು. ಆದರೆ ಇಲ್ಲಿ ಇಲ್ಲ. ಇನ್ನೊಬ್ಬ ಶಿಕ್ಷಕ ಬಂದರೆ ಸರ್ಕಾರದ ನಿಯಮ ಪಾಲಿಸಿದಂತಾಗುತ್ತದೆ. ಇದನ್ನು ಗ್ರಾಮ ಪಂಚಾಯತಿಯವರಾಗಲಿ ಅಥವಾ ಊರಿನ ಗಣ್ಯರಾಗಲಿ ಮಾಡುತ್ತಿಲ್ಲ. ಹೊಸಪೇಟೆ ತಾಲೂಕಿನ ಶಿಕ್ಷಕರ ಮತ್ತು ವಿದ್ಯಾರ್ಥಿಗಳ ಅನುಪಾತ 1:40 ಆಗಿದೆ. ಜಿಲ್ಲೆಯಲ್ಲಿ ಶಿಕ್ಷಕರ ಮತ್ತು ವಿದ್ಯಾರ್ಥಿಗಳ ಅನುಪಾತ 1:34 ಅಗಿದ್ದರೆ, ಹಂಪೆಯಲ್ಲಿರುವ ಮೂರು ಶಾಲೆಗಳ ಒಟ್ಟು ಶಿಕ್ಷಕರ ಸಂಖ್ಯೆ 11 ಮತ್ತು ವಿದ್ಯಾಥಿಗಳ ಸಂಖ್ಯೆ381 ಇದ್ದು ಇವರಿಬ್ಬರ ಅನುಪಾತ 1: 34 ಆಗಿದೆ. ಇದು

ತಾಲೂಕು ಮತ್ತು ಜಿಲ್ಲೆಗಿಂತಲೂ ಕಡಿಮೆಯಿದ್ದು ರಾಜ್ಯದ ಶಿಕ್ಷಕರ ಮತ್ತು ವಿದ್ಯಾರ್ಥಿಗಳ ಅನುಪಾತಕ್ಕೆ ಸಮನಾಗಿದೆ.

ವಿದ್ಯಾರ್ಥಿಗಳಲ್ಲಿ ಡ್ರಾಪ್ ಔಟ್ ಇಲ್ಲವೆಂದು ಶಾಲೆಯ ಶಿಕ್ಷಕರು ತಿಳಿಸುತ್ತಾರೆ.[8] ಮತ್ತೊಂದು ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಹಂಪೆಯ ಪ್ರಕಾಶ್‌ನಗರದಲ್ಲಿದೆ. ಇದನ್ನು ಕೃಷ್ಣಾಪುರದ ಕಿರಿಯ ಪ್ರಾಥಮಿಕಶಾಲೆ ಎಂದೆ ಸರ್ಕಾರಿ ದಾಖಲೆಗಳಲ್ಲಿ ನಮೂದಿಸಿದೆ ಎಂದು ಆ ಶಾಲೆಯ ಮುಖ್ಯಗುರುಗಳು ತಿಳಿಸುತ್ತಾರೆ. ಈ ಶಾಲೆ ಶುರುವಾಗಿದ್ದು 1995ರ ಶೈಕ್ಷಣಿಕ ವರ್ಷದಲ್ಲಿ. 1 ರಿಂದ 4ನೆಯ ತರಗತಿಯವರೆಗೆ ಇರುವ ಈ ಶಾಲೆಯಲ್ಲಿ 2002-03ರ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಮಕ್ಕಳ ಸಂಖ್ಯೆ 36 ಇದೆ.[9] ಹಿಂದಿನ ಶೈಕ್ಷಣಿಕ ವರ್ಷದಲ್ಲಿ ಒಬ್ಬ ಶಿಕ್ಷಕರಿದ್ದು, ಈಗಿನ ಶೈಕ್ಷಣಿಕ ವರ್ಷದಲ್ಲಿ ಮತ್ತೊಬ್ಬ ಶಿಕ್ಷಕರು ಶಾಲೆಗೆ ನೇಮಕಗೊಂಡಿದ್ದಾರೆ. ಈಗ ಒಟ್ಟು ಶಿಕ್ಷಕರ ಸಂಖ್ಯೆ 2 ಆಗಿದೆ. ಈ ಶಾಲೆಯಲ್ಲಿ ಶಿಕ್ಷಕರ ಮತ್ತು ವಿದ್ಯಾರ್ಥಿಗಳ ಅನುಪಾತ 1:16 ಇದೆ. ಈ ಶಾಲೆಯಲ್ಲಿ ಕೂಡ ಮಕ್ಕಳು ಶಾಲೆ ಬಿಡುವುದು ಕಡಿಮೆ ಎಂದು ಶಿಕ್ಷಕರು ತಿಳಿಸುತ್ತಾರೆ.

ಖಾಸಗಿ ಪ್ರಾಥಮಿಕ ಶಾಲೆಯೊಂದು 1 ರಿಂದ 4ನೆ ತರಗತಿಯವರೆಗೆ ವಿರೂಪಾಕ್ಷೇಶ್ವರ ದೇವಸ್ಥಾನದ ಬಜಾರದ ಪೂರ್ವದ ಕೊನೆಯ ಬಲಭಾಗದ ಮಂಟಪವೊಂದರಲ್ಲಿ ನಡೆಯುತ್ತಿದೆ. ಈ ಶಾಲೆಯಲ್ಲಿ ಒಟ್ಟು 40ಜನ ವಿದ್ಯಾರ್ಥಿಗಳಿದ್ದು, ಮೂವರು ಶಿಕ್ಷಕರಿದ್ದಾರೆ. ಈ ಖಾಸಗಿ ಶಾಲೆಯ ಶಿಕ್ಷಕರ ಮತ್ತು ವಿದ್ಯಾರ್ಥಿಗಳ ಅನುಪಾತ 1:13 ಇದೆ. ಹಂಪೆಯ ವಿದ್ಯಾರ್ಥಿಗಳು ಪ್ರೌಢಶಾಲಾ ಶಿಕ್ಷಣಕ್ಕಾಗಿ ಕಮಲಾಪುರ ಮತ್ತು ಹೊಸಪೇಟೆಗೆ ಹೋಗಬೇಕಾಗಿದೆ. ಪದವಿಪೂರ್ವ ಮತ್ತು ಪದವಿ ಶಿಕ್ಷಣ ಹಾಗೂ ತಾಂತ್ರಿಕ ಶಿಕ್ಷಣಕ್ಕೆ ಹೊಸಪೇಟೆಯಲ್ಲಿನ ಶಿಕ್ಷಣ ಸಂಸ್ಥೆಗಳನ್ನೆ ಅವಲಂಬಿಸಲಾಗಿದೆ. ಹಂಪೆ ಗ್ರಾಮದಲ್ಲಿ ಶಿಕ್ಷಣ ಹೆಚ್ಚಿದೆ. ಸಾಕ್ಷರತೆ ಹೆಚ್ಚಳಕ್ಕೆ ಪ್ರವಾಸೋದ್ಯಮ ಒದಗಿಸುವ ಹೆಚ್ಚಿನ ಆದಾಯ ಸಂಪನ್ಮೂಲಗಳು ಒಂದೆಡೆಯಾದರೆ, ಪ್ರವಾಸಿಗರ ಸ್ಥಾನಮಾನಗಳ ಪ್ರಭಾವ ಮತ್ತು ಅವರ ಅನುಕರಣೆಗಳು ಇತರ ಕಾರಣಗಳಾಗಿವೆ.

ಹಂಪೆಯಲ್ಲಿರುವ 2 ಅಂಗನವಾಡಿ ಕೇಂದ್ರಗಳು ಗ್ರಾಮಪಂಚಾಯತಿ ನೀಡಿರುವ ಕಟ್ಟಡದಲ್ಲೆ ನಡೆಯುತ್ತವೆ. ಅಂಗನವಾಡಿಗೆ ಪ್ರತ್ಯೇಕವಾದ ಕಟ್ಟಡಗಳು ಇಲ್ಲದಿರುವುದೇ ಇದಕ್ಕೆ ಮುಖ್ಯಕಾರಣ ಎಂದು ಅಂಗನವಾಡಿಯ ಇಬ್ಬರೂ ಕಾರ್ಯಕರ್ತೆಯರು ತಿಳಿಸುತ್ತಾರೆ. ಅಂಗನವಾಡಿ ಮಕ್ಕಳ ಸಂಖ್ಯೆ 30. ಅಂಗನವಾಡಿ ಕೇಂದ್ರಗಳು 2 ಇದ್ದು, 1000 ಜನಸಂಖ್ಯೆಗೆ ಒಂದು ಅಂಗನವಾಡಿ ಇದೆ. ಹೊಸಪೇಟೆ ತಾಲೂಕಿನಲ್ಲಿ 202 ಅಂಗನವಾಡಿ ಕೇಂದ್ರಗಳಿದ್ದು, 1000 ಜನಸಂಖ್ಯೆಗೆ 0.54 ಇದೆ.[10] ಬಳ್ಳಾರಿ ಜಿಲ್ಲೆಯಲ್ಲಿ 1372 ಅಂಗನವಾಡಿ ಕೇಂದ್ರಗಳಿದ್ದು, 1000 ಜನಸಂಖ್ಯೆಗೆ 0.67 ಅಂಗನವಾಡಿ ಕೇಂದ್ರಗಳಿವೆ.[11] ಆದ್ದರಿಂದ ಅಂಗನವಾಡಿ ಕೇಂದ್ರಗಳು ತಾಲೂಕು ಮತ್ತು ಜಿಲ್ಲೆಗಿಂತ ಹೆಚ್ಚಿರುವುದು ಕಂಡುಬರುತ್ತದೆ.

[illegible]

[illegible]

[illegible]

[illegible]

[illegible]

ಭಾಷಾಜ್ಞಾನ

ಹೊಸ ಭಾಷೆಯ ಅರಿವು ಕೂಡ ಸಬಲೀಕರಣವೆಂದು ತಿಳಿಯಲಾಗುತ್ತದೆ. ಭಾಷೆಗಳನ್ನು ಕಲಿಯುವುದರಿಂದ ಆಯಾ ಭಾಷೆಯ ಸಾಹಿತ್ಯ ಮತ್ತು ಸಂಸ್ಕೃತಿಗಳಲ್ಲಿನ ವಿಶಿಷ್ಟತೆಗಳನ್ನು ಕಂಡುಕೊಳ್ಳಬಹುದಾಗಿದೆ. ವ್ಯವಹಾರಿಕ ದೃಷ್ಟಿಯಿಂದಲೂ ಹೆಚ್ಚು ಭಾಷೆಗಳನ್ನು ಕಲಿಯುವುದು ಲಾಭದಾಯಕವಾಗಿದೆ. ಇದರಿಂದ ವ್ಯವಹಾರಗಳು ಸುಲಭವಾಗಿ ನಡೆಯುತ್ತವೆ. ಆದುದರಿಂದ ವ್ಯಾಪಾರಿಗಳು ತಮ್ಮ ಭಾಷೆಯ ಜೊತೆಗೆ ಗ್ರಾಹಕರ ಭಾಷೆಯನ್ನು ಕಲಿತು ಆ ಮೂಲಕ ಗ್ರಾಹಕರನ್ನು ಆಕರ್ಷಿಸಲು ಪ್ರಯತ್ನಿಸುತ್ತಾರೆ. ಪ್ರವಾಸೋದ್ಯಮದಲ್ಲಿ ತೊಡಗಿಸಿಕೊಂಡವರು ದೇಶಿ ಮತ್ತು ವಿದೇಶಿ ಪ್ರವಾಸಿಗರ ಜತೆ ವ್ಯವಹಾರ ನಡೆಸಬೇಕು. ತಮ್ಮ ವ್ಯವಹಾರದ ದೃಷ್ಟಿಯಿಂದ ದೇಶಿ ಮತ್ತು ವಿದೇಶಿ ಭಾಷೆಗಳನ್ನು ಕಲಿಯುವುದು ಅನಿವಾರ್ಯ ಕೂಡ. ಹಂಪೆಗೆ ಬರುವ ವಿದೇಶಿ ಪ್ರವಾಸಿಗರು ಸಾಮಾನ್ಯವಾಗಿ ಇಂಗ್ಲಿಷ್‌ನಲ್ಲಿ ಮಾತನಾಡುತ್ತಾರೆ. ಹಂಪೆಯಲ್ಲಿ ಇಂಗ್ಲಿಷ್ ಭಾಷೆಯನ್ನೊಳಗೊಂಡು ಒಂದಕ್ಕಿಂತ ಹೆಚ್ಚು ಭಾಷೆಗಳನ್ನು ಮಾತನಾಡುವ ಕುಂಟುಂಬಗಳ ಸಂಖ್ಯೆ 310 ಇವೆ. ಪ್ರವಾಸೋದ್ಯಮದ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವ ಜನತೆ ಲಿಂಗಭೇದ ಮರೆತು ಇಂಗ್ಲಿಷ್ ಕಲಿತಿದ್ದಾರೆ. ಪ್ರವಾಸೋದ್ಯಮದ ಪೂರಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡವರೆಲ್ಲರೂ ಹೆಚ್ಚಿನ ವಿದ್ಯಾಭ್ಯಾಸ ಪಡೆದವರೇನಲ್ಲ. ಅದರಲ್ಲಿಯೂ ಅನಕ್ಷರಸ್ಥರು ವ್ಯಾಪಾರದ ಅನುಕೂಲಕ್ಕಾಗಿ ಇಂಗ್ಲಿಷ್ ಭಾಷೆಯನ್ನು ಕಲಿತಿದ್ದಾರೆ. ಚಿಕ್ಕಮಕ್ಕಳೂ ಸಹ ವ್ಯವಹಾರಿಕ ಇಂಗ್ಲಿಷ್ ಬಲ್ಲವರಾಗಿದ್ದಾರೆ. ಹಿರಿಯ ಪ್ರಾಥಾಮಿಕ ಶಾಲೆಗೆ ಹೋಗುವ ಮಕ್ಕಳು ಶಾಲೆಗೆ ಹೋಗುವ ಮುನ್ನ (ಬೆಳಗ್ಗೆ 10 ಗಂಟೆಯೊಳಗೆ) ತಮ್ಮ ಇಂಗ್ಲಿಷ್ ಭಾಷೆಯನ್ನು ಬಳಸಿ ಸಣ್ಣ ಆದಾಯ ಗಳಿಸುತ್ತಾರೆ. ಹಂಪೆಗೆ ಬರುವ ವಿದೇಶಿ ಪ್ರವಾಸಿಗರನ್ನು ಅವರು ಕೇಳಿದ ಅತಿಥಿಗೃಹಗಳ ವಿಳಾಸಕ್ಕೆ ಕರೆದೊಯ್ದು ಬಿಡುವ ಮೂಲಕ ಪ್ರವಾಸಿಗರಿಂದ 10 ರೂ.ಗಳಿಂದ 20 ರೂ.ಗಳವರೆಗೆ ಸಂಪಾದಿಸುವ ಮಕ್ಕಳು ತಮ್ಮ ಕುಟುಂಬಗಳ ಆರ್ಥಿಕ ಸ್ಥಿತಿಗತಿಗಳ ಸುಧಾರಣೆಯಲ್ಲಿ ಸಹಾಯಮಾಡುತ್ತಾರೆ. ಡೈಮೆಂಡ್ ತಮ್ಮ ಅಧ್ಯಯನದಲ್ಲಿ ಕಂಡುಕೊಂಡ ಪ್ರಕಾರ ಟರ್ಕಿ ಒಳಗೆ ಶೇ.50ರಷ್ಟು ಜನಸಂಖ್ಯೆ ಅನಕ್ಷರಸ್ಥರಾಗಿದ್ದರೂ ವಿದೇಶಿ ಭಾಷೆಯನ್ನು ತಿಳಿದಿರುವ ಏಕಮಾತ್ರ ಕೌಶಲ್ಯದಿಂದ ಪ್ರವಾಸೋದ್ಯಮದಲ್ಲಿ ತೊಡಗಿಸಿಕೊಂಡಿದ್ದಾರೆ.[12] ಹಲವಾರು ಭಾಷೆಗಳು ಬೆಳೆಯಲು ಪ್ರವಾಸೋದ್ಯಮ ಸಹಕರಿಸಿದರೆ ಪ್ರವಾಸೋದ್ಯಮ ಬೆಳೆಯಲು ಭಾಷೆಗಳು ಪೂರಕವಾಗಿವೆ. ಪ್ರವಾಸಿಗರ ಪ್ರಮುಖ ಭಾಷೆಗಳಲ್ಲಿ ಸಾಹಿತ್ಯ ಮತ್ತು ಕೈಪಿಡಿಗಳನ್ನು ಪ್ರವಾಸೋದ್ಯಮ ಮತ್ತು ಖಾಸಗಿ ಸಂಸ್ಥೆಗಳು ಒದಗಿಸುತ್ತವೆ. ಹಾಗೆಯೆ ಹಂಪೆಯಲ್ಲಿ ಇಂಗ್ಲಿಷ್ ಭಾಷೆಯ ಕಲಿಕೆ ಕುಟುಂಬಗಳ ಆದಾಯದ ಮೂಲವನ್ನು ಹೆಚ್ಚಾಸಿದೆ. ಕನ್ನಡ ಭಾಷೆಯನ್ನು ಹಂಪೆ ಗ್ರಾಮದ 485 ಕುಟುಂಬಗಳು ಮಾತನಾಡುತ್ತವೆ. ಇಂಗ್ಲಿಷನ್ನು 310(1218ಜನ), ತೆಲುಗನ್ನು 247(964ಜನ) ಕುಟುಂಬಗಳು, ತಮಿಳು ಭಾಷೆ 8 ಕುಟುಂಬಗಳು ಮಾತನಾಡುತ್ತವೆ. ಫ್ರೆಂಚ್ ಭಾಷೆಯನ್ನು ತಿಳಿದ 4 ಜನ ಸ್ಥಳೀಯರಿದ್ದಾರೆ.

[illegible]

[illegible]

ಆರೋಗ್ಯ

ಅಭಿವೃದ್ಧಿಯ ಮತ್ತೊಂದು ಮುಖ್ಯ ಸೂಚ್ಯಂಕ ಆರೋಗ್ಯ. ಉತ್ತಮ ಆರೋಗ್ಯ ಇತರ ಎಲ್ಲ ಅಭಿವೃದ್ಧಿಗೆ ತಳಪಾಯ. ಅದರಲ್ಲೂ ಕೆಳವರ್ಗದ ದುಡಿದು ತಿನ್ನುವವರ ಮಟ್ಟಿಗಂತೂ ಆರೋಗ್ಯವೆ ಅವರ ಆಸ್ತಿ. ಗ್ರಾಮದ ಆರ್ಥಿಕ ಅಭಿವೃದ್ಧಿಯು ಅಲ್ಲಿನ ಜನರ ಆರೋಗ್ಯವನ್ನು ಅವಲಂಬಿಸಿದೆ. ಜನತೆಯ ಆರೋಗ್ಯ ಉತ್ತಮವಾಗಿದ್ದಲ್ಲಿ ಆರ್ಥಿಕ ಕ್ಷೇತ್ರದಲ್ಲಿ ಹೆಚ್ಚು ತೊಡಗಿಸಿಕೊಳ್ಳಲು ಸಾಧ್ಯವಾಗುತ್ತದೆ. ಉತ್ಪನ್ನ, ಉದ್ಯೋಗ ಮತ್ತು ಆದಾಯಗಳು ಹೆಚ್ಚಾಗುತ್ತವೆ. ಆದಾಯ ಹೆಚ್ಚುವ ಮೂಲಕ ಮೂಲಸೌಲಭ್ಯಗಳಾದ ಆಹಾರ, ವಸತಿ ಇತ್ಯಾದಿಗಳು ಬದಲಾವಣೆಯಾಗುತ್ತವೆ. ಪೌಷ್ಠಿಕಾಂಶದ ಆಹಾರವನ್ನು ಸೇವಿಸುವುದು, ಉತ್ತಮ ಶಿಕ್ಷಣ, ಉತ್ತಮ ವಸತಿ ಹೊಂದಿರುವುದು ಮುಂತಾದವು ಆರೋಗ್ಯದ ಮೇಲೆ ನೇರ ಪರಿಣಾಮ ಬೀರುತ್ತವೆ. ಆರ್ಥಿಕ ಅಭಿವೃದ್ಧಿಯೂ ಸಾಮಾಜಿಕ ಪರಿವರ್ತನೆಗಳಿಗೆ ಕಾರಣವಾದರೆ ಸಾಮಾಜಿಕ ಪರಿವರ್ತನೆಗಳು ಆರ್ಥಿಕ ಅಭಿವೃದ್ಧಿಗೆ ಕಾರಣವಾಗುತ್ತವೆ. ಅದರಿಂದಾಗಿ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳು ಜನರ ಶಿಕ್ಷಣ ಮತ್ತು ಆರೋಗ್ಯದ ಗುಣಮಟ್ಟ ಹೆಚ್ಚಿಸಲು ಹಲವಾರು ಕ್ರಮಗಳನ್ನು ಕೈಗೊಳ್ಳುತ್ತಿವೆ. ಇದರಲ್ಲಿ ಕಡ್ಡಾಯ ಶಿಕ್ಷಣ ಮತ್ತು ಆರೋಗ್ಯದ ಬಗ್ಗೆ ತಿಳುವಳಿಕೆ ಮೂಡಿಸುವುದು ಒಳಗೊಂಡಿದೆ.

ಆರ್ಥಿಕವಾಗಿ ಅಭಿವೃದ್ಧಿ ಹೊಂದಿರುವ ಪ್ರದೇಶಗಳಲ್ಲಿ ಆರೋಗ್ಯದ ಮಟ್ಟ ಹಿಂದುಳಿದ ಪ್ರದೇಶಗಳ ಆರೋಗ್ಯದ ಮಟ್ಟಕ್ಕಿಂತ ಉತ್ತಮವಾಗಿರುತ್ತದೆಂಬ ಗ್ರಹಿಕೆ ಇದೆ. ಹಂಪೆಯ ಗ್ರಾಮದಲ್ಲಿ ಆದಾಯ ಮತ್ತು ಉದ್ಯೋಗಗಳನ್ನು ನೀಡುವ ಪ್ರವಾಸೋದ್ಯಮದ ಚಟುವಟಿಕೆಗಳಲ್ಲಿ ಜನರು ಹೆಚ್ಚಿನ ಸಂಖ್ಯೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಇದು ಅವರ ಆರ್ಥಿಕ ಸ್ಥಿತಿಯನ್ನು ಗಣನೀಯವಾಗಿ ಪ್ರಭಾವಿಸಿದೆ ಎಂದು ಈಗಾಗಲೇ ಗುರುತಿಸಿದ್ದೇವೆ. ಈ ಸುಧಾರಿತ ಆರ್ಥಿಕ ಸ್ಥಿತಿ ಹೇಗೆ ಅಲ್ಲಿನ ಜನರ ಆರೋಗ್ಯದ ಸ್ಥಿತಿಯನ್ನು ಪ್ರಭಾವಿಸಿದೆ ಎನ್ನುವುದನ್ನು ವಿಶ್ಲೇಷಿಸಬಹುದಾಗಿದೆ. ಹಂಪೆಯಲ್ಲಿ ಸಾಂಕ್ರಮಿಕ ರೋಗಗಳ ಸಂಖ್ಯೆ ಇಳಿಮುಖವಾಗಿರುವುದು ಕಂಡುಬರುತ್ತದೆ. ಮಲೇರಿಯ ರೋಗಿಗಳ ಸಂಖ್ಯೆ 1997ರಲ್ಲಿ 45 ಇದ್ದದ್ದು, 2002ರಲ್ಲಿ 07ಕ್ಕೆ ಇಳಿದಿದೆ.[13] ಹೊಸಪೇಟೆ ತಾಲೂಕಿನಲ್ಲಿ 2001 -2002ರಲ್ಲಿ ಮಲೇರಿಯಾ ರೊಗಿಗಳ ಸಂಖ್ಯೆ 4454 ಇದೆ.[14] ಹಂಪೆ ಗ್ರಾಮದಲ್ಲಿ 2001-2002 ಕುಷ್ಠರೋಗಿಗಳ ಸಂಖ್ಯೆ ಒಂದು ಇದ್ದು ಹೊಸಪೇಟೆ ತಾಲೂಕಿನಲ್ಲಿ ರೋಗಿಗಳ ಸಂಖ್ಯೆ 366 ಇದೆ.[15] 2001-2002ರಲ್ಲಿ ಹಂಪೆ ಗ್ರಾಮದಲ್ಲಿನ ಕ್ಷಯರೋಗಿಗಳ ಸಂಖ್ಯೆ 5 ಮಾತ್ರ ಇದೆ. ಹೊಸಪೇಟೆ ತಾಲೂಕಿನಲ್ಲಿ ಇದೆ ಅವಧಿಯಲ್ಲಿ 399 ಇದೆ (ಕೋಷ್ಟಕ-44).[16] ಪೌಷ್ಟಿಕಾಂಶ ಕೊರತೆಯನ್ನು ಹೊಂದಿರುವ ವಯಸ್ಕರ ಸಂಖ್ಯೆ 16, ಮಕ್ಕಳ ಸಂಖ್ಯೆ 03 ಇದೆ.

1991ರಲ್ಲಿ ಅಂದಾಜಿತ ಸ್ಥೂಲ ಜನನ ದರಗಳ ಪ್ರಮಾಣ ಸಾವಿರಕ್ಕೆ ಬಳ್ಳಾರಿ ಜಿಲ್ಲೆಯಲ್ಲಿ 33.22 ಇದ್ದರೆ ರಾಜ್ಯದಲ್ಲಿ 30.2 ಇದ್ದು ಹಂಪೆಯಲ್ಲಿ ಇದರ ಪ್ರಮಾಣ 32ರಷ್ಟು ಆಗಿದೆ. ಹಾಗೇಯೆ ಇದೇ

ಅವಧಿಯಲ್ಲಿ ಮರಣದ ಪ್ರಮಾಣ ಬಳ್ಳಾರಿ ಜಿಲ್ಲೆಯಲ್ಲಿ 11.2 ಇದ್ದರೆ ರಾಜ್ಯದಲ್ಲಿ 10.2 ಇದ್ದು ಹಂಪೆಯಲ್ಲಿ ಇದರ ಪ್ರಮಾಣ 13ರಷ್ಟು ಇದೆ ಎಂದು ತಿಳಿದುಬರುತ್ತದೆ.[17] 2001 ರಲ್ಲಿ ಜನನ ಪ್ರಮಾಣ ಬಳ್ಳಾರಿ ಜಿಲ್ಲೆಯಲ್ಲಿ 30 ಇದ್ದರೆ ರಾಜ್ಯದಲ್ಲಿ 28 ಇದ್ದು ಹಂಪೆಯಲ್ಲಿ ಇದರ ಪ್ರಮಾಣ 15ರಷ್ಟು ಆಗಿದೆ. ಇದೇ ಅವಧಿಯಲ್ಲಿ ಮರಣದ ಪ್ರಮಾಣ ಬಳ್ಳಾರಿ ಜಿಲ್ಲೆಯಲ್ಲಿ 9 ಇದ್ದರೆ ರಾಜ್ಯದಲ್ಲಿ 8 ಇದ್ದು ಹಂಪೆಯಲ್ಲಿ ಮರಣ ಪ್ರಮಾಣ 8 ರಷ್ಟು ಇದೆ ಎಂದು ಅಂದಾಜು ಮಾಡಲಾಗಿದೆ. 1991ರಲ್ಲಿ ಹಂಪೆಯ ಜನನ ಪ್ರಮಾಣ ಜಿಲ್ಲೆಗಿಂತ ಒಂದರಷ್ಟು ಕಡಿಮೆ ಇದ್ದು,ರಾಜ್ಯಕ್ಕಿಂತ 2ರಷ್ಟು ಹೆಚ್ಚಿದೆ ಹಾಗೇಯೆ ಮರಣದ ಪ್ರಮಾಣ ಹಂಪೆಯಲ್ಲಿ ಜಿಲ್ಲೆಗಿಂತ 2ರಷ್ಟು ಮತ್ತು ರಾಜ್ಯಕ್ಕಿಂತ 3ರಷ್ಟು ಹೆಚ್ಚಾಗಿದೆ. 2001ರಲ್ಲಿ ಹಂಪೆಯಲ್ಲಿನ ಜನನ ಪ್ರಮಾಣ ಜಿಲ್ಲೆಗಿಂತ 15ರಷ್ಟು ಮತ್ತು ರಾಜ್ಯಕ್ಕಿಂತ 13ರಷ್ಟು ಕಡಿಮೆ ಇದೆ. ಹಾಗೇಯೆ ಮರಣದ ಪ್ರಮಾಣ ಹಂಪೆಯಲ್ಲಿ ಜಿಲ್ಲೆಗಿಂತ 1ರಷ್ಟು ಕಡಿಮೆ ಮತ್ತು ರಾಜ್ಯಕ್ಕೆ ಸಮಾನಾಗಿದೆ.

ಪ್ರವಾಸೋದ್ಯಮ ಅಂದರೆ ಸ್ವಚ್ಚಂದ ಜೀವನ, ಅದರಲ್ಲೂ ಲೈಂಗಿಕ ಸ್ವಚ್ಚಂದತೆ ಎನ್ನುವ ಕಲ್ಪನೆ ತುಂಬಾ ಪ್ರಚಾರದಲ್ಲಿದೆ. ಇದು ಸತ್ಯವೇ ಎನ್ನುವುದನ್ನು ತಿಳಿಯಲು ಪ್ರಯತ್ನಿಸಲಾಗಿದೆ. ಲೈಂಗಿಕ ರೋಗಿಗಳಲ್ಲಿ ಮುಖ್ಯವಾಗಿ ಏಡ್ಸ್ ರೋಗಿಗಳ ಖಚಿತ ಸಂಖ್ಯೆಯನ್ನು ಪಡೆಯುವುದು ಕಷ್ಟ ಎನ್ನುತ್ತಾರೆ ಖಾಸಗಿ ವೈದ್ಯರೊಬ್ಬರು.ಹಂಪೆ ಗ್ರಾಮದಲ್ಲಿ ಏಡ್ಸ ರೋಗಿಗಳ ರೋಗಿಗಳ ಸಂಖ್ಯೆ 1 ಇದ್ದು,ಹೊಸಪೇಟೆ ತಾಲೂಕಿನಲ್ಲಿಜನನಾಂಗದ ಮಾರ್ಗದ ಸೋಂಕು ರೋಗಿಗಳ ಸಂಖ್ಯೆ 1120 ಹಾಗೂ ಲೈಂಗಿಕ ಮಾರ್ಗದ ಸೋಂಕು ರೋಗಿಗಳ ಸಂಖ್ಯೆ 540 ಇದೆ 12. ರೋಗಿಗಳನ್ನು ರಕ್ತ ಪರೀಕ್ಷೆಗೆಂದು ಕಳಿಸಿದರೆ ಅವರಲ್ಲಿ ಕೆಲವರು ತಿರುಗಿ ಬರುವುದಿಲ್ಲವೆಂದು ಡಾಕ್ಟರ್‌ಗಳು ಹೇಳುತ್ತಾರೆ. ಕಮಲಾಪುರ ಸರ್ಕಾರಿ ಆಸ್ಪತ್ರೆಯ ವೈದ್ಯರ ಪ್ರಕಾರ ರಕ್ತ ಪರೀಕ್ಷೆಗೆ ರೋಗಿಗಳನ್ನು ಒಳಪಡಿಸಿ, ರೋಗ ಇರುವಿಕೆಯನ್ನು ತಿಳಿಯಲು ಸೌಲಭ್ಯಗಳಿಲ್ಲದಿರುವುದರಿಂದ ಏಡ್ಸ್ ರೋಗಿಗಳನ್ನು ಪತ್ತೆ ಹಚ್ಚಲಿಕ್ಕೆ ಸಾಧ್ಯವಾಗುವುದಿಲ್ಲ ಎನ್ನುತ್ತಾರೆ. ಕ್ಷೇತ್ರಕಾರ್ಯವನ್ನು ಕೈಗೊಂಡ ಸಂದರ್ಭದಲ್ಲಿ ದೊರೆತ ಮಾಹಿತಿ ಪ್ರಕಾರ ಹಂಪೆ ಗ್ರಾಮದಲ್ಲಿ ಸ್ಥಳೀಯರು ವೇಶ್ಯಾವಟಿಕೆಯಲ್ಲಿ ತೊಡಗಿಸಿಕೊಂಡಿಲ್ಲವೆಂಬುದು ತಿಳಿದು ಬರುತ್ತದೆ. ಬೇರೆ ಪ್ರದೇಶಗಳಿಂದ ಬಂದು ವೇಶ್ಯಾವಾಟಿಕೆಯನ್ನು ಮಾಡುತ್ತಾರೆ ಎಂದು ಸ್ಥಳೀಯರು ಹೇಳುತ್ತಾರೆ. ಹಂಪೆಗೆ ಬರುವವರಲ್ಲಿ ಹೆಂಗಸರು-ಗಂಡಸರು ಒಟ್ಟಿಗೆ ಜೊತೆಯಲ್ಲಿ ಬರುತ್ತಾರೆ. ಕೆಲವು ಹೆಂಗಸರು ನಿರಂತರವಾಗಿ ಬೇರೆ ಬೇರೆ ಗಂಡಸರ ಜೊತೆ ಬರುತ್ತಾರೆ. ಇವರನ್ನು ವೇಶ್ಯಾವಾಟಿಕೆ ಮಾಡುವ ಹೆಂಗಸರೆಂದು ಗುರುತಿಸಲಾಗುತ್ತದೆಂದು ಸ್ಥಳೀಯರು ಹೇಳುತ್ತಾರೆ. ವಿದೇಶಿ ಪ್ರವಾಸಿಗರು ಅತಿಥಿಗೃಹಗಳಲ್ಲಿ ಬಹುದಿನಗಳ ಕಾಲ ಉಳಿದ ಸಂದರ್ಭಗಳಲ್ಲಿ ಸ್ನೇಹಿತರಂತೆ ವರ್ತಿಸುತ್ತಾರೆ. ಆ ಸಂದರ್ಭದಲ್ಲಿ ಅವರ ವೈಯಕ್ತಿಕ ವಿಚಾರಗಳ ಬಗ್ಗೆ ಮಾತನಾಡುತ್ತ ಮದುವೆಯಾಗಿದೆಯೆ, ನಿಮ್ಮ ಜೊತೆಯಲ್ಲಿ ಇರುವವರು ಯಾರು ಇತ್ಯಾದಿ ಪ್ರಶ್ನೆಗಳನ್ನು ಕೇಳಿದಾಗ,

ಪುರುಷರಾದರೆ ಸ್ನೇಹಿತ (ಬಾಯ್ ಫ್ರೇಂಡೆಂದು)ರೆಂದೂ, ಮಹಿಳೆಯಾದರೆ ಸ್ನೇಹಿತೆ (ಗರ್ಲ್‌ಫ್ರೆಂಡ್)ಯೆಂದೂ ಹೇಳುತ್ತಾರೆ. ಕೆಲವೊಮ್ಮೆ ಅತಿಥಿ ಗೃಹಗಳಲ್ಲಿಗೆ ಬಂದ ನಂತರ ಸ್ನೇಹಿತರಾಗುತ್ತಾರೆ. ಅಪರಿಚಿತರೊಡನೆ ನೀವು ಲೈಂಗಿಕ ಸಂಬಂಧ ಹೊಂದಿದರೆ ತೊಂದರೆಯಾಗುವುದಿಲ್ಲವೆ ಎಂದು ಅತಿಥಿಗೃಹದ ಮಾಲಿಕರು ಕೇಳಿದರೆ, ಲೈಂಗಿಕತೆಯಲ್ಲಿ ಕಾಂಡೋಮ್‌ಗಳನ್ನು ಕಡ್ಡಾಯವಾಗಿ ಬಳಸುತ್ತೇವೆ. ಹಾಗಾಗಿ ಏನೂ ತೊಂದರೆಯಾಗುವುದಿಲ್ಲವೆಂಬ ಉತ್ತರ ನೀಡುತ್ತಾರೆಂದು ಮಾಲೀಕರು ಹೇಳುತ್ತಾರೆ. ವೇಶ್ಯಾವಾಟಿಕೆ ಹಂಪೆಯಲ್ಲಿ ಇಲ್ಲದಿರುವ ಕಾರಣ ಏಡ್ಸ್ ರೋಗಿಗಳು ಹೆಚ್ಚಿನ ಪ್ರಮಾಣದಲ್ಲಿ ಇಲ್ಲವೆಂದು ಸ್ಥಳೀಯರು ಹೇಳುತ್ತಾರೆ. ಪ್ರವಾಸಿ ತಾಣವಾದ ಹಂಪೆಯಲ್ಲಿ ವೇಶ್ಯಾವಾಟಿಕೆ ಇಲ್ಲವೆಂಬುದನ್ನು ತಿಳಿದ ವಿದೇಶಿ ಮಹಿಳಾ ಪ್ರವಾಸಿಯೊಬ್ಬರು ಇದನ್ನು ಹಾಗೆಯೇ ಕಾಪಾಡಿಕೊಂಡು ಬರಬೇಕೆಂಬ ಹಂಬಲವನ್ನು ವ್ಯಕ್ತಪಡಿಸಿದ್ದಾರೆ. ಬೇರೆ ಪ್ರವಾಸಿ ತಾಣಗಳಾದ ಗೋವಾ, ಬಾಂಬೆ ಇತ್ಯಾದಿ ಸ್ಥಳಗಳಲ್ಲಿ ವೇಶ್ಯಾವಾಟಿಕೆ ಹೆಚ್ಚಿದೆಯೆಂದು ಪ್ರವಾಸಿಗರು ತಿಳಿದಿದ್ದಾರೆ.

ಹಂಪೆಯಲ್ಲಿ ಎಂ.ಬಿ.ಬಿ.ಎಸ್, ಹೋಮಿಯೋಪತಿ ಹಾಗೂ ಆಯುರ್ವೇದದ ಒಬ್ಬೊಬ್ಬ ಖಾಸಗಿ ಡಾಕ್ಟರ್‌ರಿದ್ದಾರೆ. ಇಲ್ಲಿ ಒಂದು ಸರ್ಕಾರಿ ಆಯುರ್ವೇದಿಕ್ ಆಸ್ಪತ್ರೆ ಇದೆ. ಇಲ್ಲಿನ ವೈದ್ಯರು 2002ರ ಮೇ ತಿಂಗಳಲ್ಲಿ ನಿವೃತ್ತಿಯಾಗಿದ್ದಾರೆ. ಈಗ ಇಲ್ಲಿನ ಆಸ್ಪತ್ರೆಗೆ ಹೊಸದಾಗಿ ಮಹಿಳಾ ವೈದ್ಯರು ಬಂದಿದ್ದಾರೆ. ಇದಲ್ಲದೆ ಬೇರೆ ಪ್ರದೇಶದಲ್ಲಿ ನರ್ಸಿಂಗ್ ಹೋಂಗಳನ್ನು ಹೊಂದಿದ ಮೂರು ಜನ ಖಾಸಗಿ ವೈದ್ಯರು ಪ್ರವಾಸೋದ್ಯಮ ಸೀಸನ್ ಸಂದರ್ಭದಲ್ಲಿ ಹಂಪೆಯಲ್ಲಿ ಕ್ಲಿನಿಕ್‌ಗಳನ್ನು ತೆರೆದು ಪಾರ್ಟ್‌ಟೈಂ ಪ್ರಾಕ್ಟಿಸ್ ಮಾಡುತ್ತಾರೆ. ಮೂರು ಜನ ಖಾಸಗಿ ವೈದ್ಯರಲ್ಲಿ ಒಬ್ಬರು ಬೆಳಗ್ಗೆ 10 ರಿಂದ 1 ಗಂಟೆಯವರೆಗೆ ಪ್ರಾಕ್ಟೀಸ್ ಮಾಡಿದರೆ, ಒಬ್ಬ ಹೋಮಿಯೋಪಥಿಕ್ ಡಾಕ್ಟರು ವರ್ಷದ ಎಲ್ಲಾ ದಿನಗಳಲ್ಲಿಯೂ ಪಾರ್ಟ್‌ಟೈಂ ಪ್ರಾಕ್ಟೀಸ್ ಮಾಡುತ್ತಾರೆ. ಪ್ರಾದೇಶಿಕ ಅಸಮತೋಲನ ಕಮಿಟಿಯ ಅಂಕಿ-ಅಂಶಗಳ ಪ್ರಕಾರ ಹೊಸಪೇಟೆ ತಾಲೂಕಿನಲ್ಲಿ ಪ್ರತಿ 10,000 ಜನಸಂಖ್ಯೆಗೆ ಒಬ್ಬ ವೈದ್ಯರಿದ್ದರೆ ಬಳ್ಳಾರಿ ಜಿಲ್ಲೆಯಲ್ಲಿ ಇಬ್ಬರು ಡಾಕ್ಟರುಗಳು, ಮತ್ತು ಕರ್ನಾಟಕ ರಾಜ್ಯದಲ್ಲಿ 3 ವೈದ್ಯರು ಇರುವರೆಂದು ತಿಳಿದುಬರುತ್ತದೆ. ಆದರೆ ಪ್ರಾಥಮಿಕ ಅಂಕಿ-ಅಂಶಗಳ ಪ್ರಕಾರ ಹಂಪೆ ಗ್ರಾಮದಲ್ಲಿನ ಒಟ್ಟು ಜನಸಂಖ್ಯೆ 2172ಕ್ಕೆ ನಾಲ್ಕು ಜನ ವೈದ್ಯರಿದ್ದಾರೆ. ಇದರಿಂದ ಕಂಡುಬರುವುದೇನೆಂದರೆ ಹಂಪೆಯ ವೈದ್ಯರುಗಳ ಸಂಖ್ಯೆ 1000 ಜನಸಂಖ್ಯೆಗೆ ಇಬ್ಬರಿದ್ದರೆ, ಹೊಸಪೇಟೆ ತಾಲೂಕಿನಲ್ಲಿ 0.1 ಆಗಿದೆ. ಅದೇ ರೀತಿ ಜಿಲ್ಲೆಯ ವೈದ್ಯರ ಸಂಖ್ಯೆ ಪ್ರತಿ 1000 ಜನಸಂಖ್ಯೆಗೆ 0.2 ಆಗಿದ್ದು, ರಾಜ್ಯಮಟ್ಟದಲ್ಲಿ 0.3 ಇದೆ. ಹಂಪೆಯಲ್ಲಿನ ವೈದ್ಯರುಗಳ ಸಂಖ್ಯೆ ತಾಲೂಕು, ಜಿಲ್ಲೆ ಮತ್ತು ರಾಜ್ಯಕ್ಕಿಂತ ಉತ್ತಮವಾಗಿದೆ(ಕೋಷ್ಟಕ-45).[18]

ಲಿಂಗ ಪರಿಮಾಣ

ನಮ್ಮ ಸಮಾಜದಲ್ಲಿ ಗಂಡಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡಲಾಗಿದೆ.ಮನೆಯ-ಕುಟುಂಬದ ಹೆಸರನ್ನು ಉಳಿಸಲು, ದೀಪ ಹಚ್ಚಲು, ಅಂತ್ಯ ಸಂಸ್ಕಾರ ಮಾಡಲು -ಹೀಗೆ ಹಲವಾರು ಕಾರಣಕ್ಕೆ ಗಂಡು ಸಂತತಿಯನ್ನು ಬಯಸುವುದು ಸಾಮಾನ್ಯವಾಗಿದೆ. ಅಭಿವೃದ್ಧಿಯೆನ್ನುವುದು ಆಧುನಿಕತೆಯ ಸಂಕೇತವೆಂದು ಭಾವಿಸಲಾಗಿದೆ. ಆಧುನಿಕತೆ ಮತ್ತು ಅಭಿವೃದ್ಧಿ ಕೂಡಿಯೆ ಹೋಗುವಂತಹವು. ಅಭಿವೃದ್ಧಿ ಮತ್ತು ಆಧುನಿಕತೆಗಳು ನಮ್ಮ ಸಮಾಜದಲ್ಲಿನ ಲಿಂಗ ಪ್ರಾಶಸ್ತ್ಯ ದೃಷ್ಟಿಕೋನವನ್ನು ಬದಲಿಸಿವೆ. ಒಂದು ಪ್ರದೇಶದ ಅಭಿವೃದ್ಧಿಯನ್ನು ಅಳೆಯಲು ಬಳಸುವ ಒಂದು ಸರಳ ಮಾಪಕ ಎಂದರೆ ಲಿಂಗ ಪರಿಮಾಣ. ಅಂದರೆ ಪ್ರತಿ ಸಾವಿರ ಗಂಡಸರಿಗೆ ಇರುವ ಹೆಂಗಸರ ಸಂಖ್ಯೆ ಪರಿಗಣನೆಗೆ ಒಳಪಡುತ್ತದೆ. ಹೆಂಗಸರ ಸಂಖ್ಯೆ ಗಂಡಸರ ಸಂಖ್ಯೆಗೆ ಸಮ ಅಥವಾ ಹೆಚ್ಚು ಇದ್ದರೆ ಆ ಪ್ರದೇಶ ಅಭಿವೃದ್ಧಿ ಹೊಂದಿದೆ, ಕಡಿಮೆ ಇದ್ದರೆ ಹಿಂದುಳಿದಿದೆ ಎನ್ನುವ ತೀರ್ಮಾನಕ್ಕೆ ಬರಲಾಗುತ್ತದೆ. ಈ ತೀರ್ಮಾನದ ಹಿಂದಿರುವ ಗ್ರಹಿತಗಳು ಇಂತಿವೆ. ಅಭಿವೃದ್ಧಿಯು ತಲಾ ಆದಾಯವನ್ನು ಹೆಚ್ಚಿಸುತ್ತದೆ. ತಲಾ ಆದಾಯ ಸಾಕ್ಷರತೆಯ ಪ್ರಮಾಣವನ್ನು ಹೆಚ್ಚಿಸುತ್ತದೆ. ಸಾಕ್ಷರತೆಯನ್ನು ಹೊಂದಿರುವ ಬಹುತೇಕ ಕುಟುಂಬಗಳು ಲಿಂಗಬೇದ ಮಾಡುವುದಿಲ್ಲ. ಲಿಂಗಭೇದವಿಲ್ಲದೆ ಮಹಿಳೆಯರಿಗೂ ಶಿಕ್ಷಣವನ್ನು ಕೊಡುವುದರಿಂದ ಸಾಕ್ಷರತೆ ಪ್ರಮಾಣ ಹೆಚ್ಚಿ ಲಿಂಗ ಪ್ರಾಶಸ್ತ್ಯ ಕಡಿಮೆಯಾಗುತ್ತದೆ. ಹಂಪೆಯ ಗ್ರಾಮದಲ್ಲಿ ಪ್ರವಾಸೋದ್ಯಮದಿಂದ ತಲಾ ವರಮಾನ, ಸಾಕ್ಷರತೆ ಮತ್ತು ಜೀವನಮಟ್ಟ ಹೆಚ್ಚುತ್ತಿವೆ. ಇವು ಲಿಂಗ ಪ್ರಾಶಸ್ತ್ಯ ಕಡಿಮೆಗೊಳಿಸಿ ಲಿಂಗ ಸಮಾನತೆಯ ಭಾವನೆ ಗ್ರಾಮದಲ್ಲಿ ಬೆಳೆಸಿದೆಯೆ ಎನ್ನುವುದನ್ನು ವಿಶ್ಲೇಷಿಸಬಹುದಾಗಿದೆ.

2001ರ ಜನಗಣತಿಯ ಪ್ರಕಾರ ಹಂಪೆಯಲ್ಲಿ ಲಿಂಗ ಪರಿಮಾಣದ ಅನುಪಾತ 1000 ಜನ ಪುರುಷರಿಗೆ 1013 ಜನ ಮಹಿಳೆಯರಿರುವುದು ಕಂಡುಬರುತ್ತದೆ. ಇದೇ ಅವಧಿಯಲ್ಲಿ ಹೊಸಪೇಟೆ ತಾಲೂಕಿನಲ್ಲಿ ಮಹಿಳೆಯರ ಸಂಖ್ಯೆ 975, ಬಳ್ಳಾರಿ ಜಿಲ್ಲೆಯಲ್ಲಿ 969 ಹಾಗೂ ರಾಜ್ಯದಲ್ಲಿ 964 ಇದೆ.[19] ಹಂಪೆಯ ಲಿಂಗಪರಿಮಾಣದ ಅನುಪಾತವು ತಾಲೂಕು, ಜಿಲ್ಲೆ, ರಾಜ್ಯಕ್ಕಿಂತ ಹೆಚ್ಚಿದೆ. ಕೆಲವು ಸಂದರ್ಭಗಳಲ್ಲಿ ಚಾರಿತ್ರಿಕವಾಗಿ ಒಂದು ಪ್ರದೇಶದ ಲಿಂಗ ಪರಿಮಾಣವು ಉತ್ತಮವಾಗಿರುತ್ತದೆ. ಅಂದರೆ ಅದು ಅಭಿವೃದ್ಧಿಯ ಫಲವಾಗಿರುವುದಿಲ್ಲ. ಅಭಿವೃದ್ಧಿಯ ಪರಿಣಾಮವಾಗಿ ಲಿಂಗ ಪರಿಮಾಣ ಬದಲಾಗಿದೆ ಎಂದು ತಿಳಿಯಬೇಕಾದರೆ ಹಿಂದಿನ ವರ್ಷಗಳಲ್ಲಿ ಇದ್ದ ಲಿಂಗ ಪರಿಮಾಣವನ್ನು ವರ್ತಮಾನದ ಅಂಕಿ ಅಂಶಕ್ಕೆ ಹೋಲಿಸಬೇಕು. ಅದಕ್ಕಾಗಿ ಹಿಂದೆ ಹಂಪೆಯ ಲಿಂಗ ಪರಿಮಾಣ ಹೇಗಿತ್ತು ಎನ್ನುವುದರತ್ತ ಗಮನಹರಿಸಬೇಕಾಗಿದೆ. 1971ರ ಜನಗಣತಿಯ ಪ್ರಕಾರ ಹಂಪೆಯ ಲಿಂಗ ಪರಿಮಾಣ ಅನುಪಾತ 859 ಇತ್ತು. ಅದೆ ಅವಧಿಯಲ್ಲಿ ಹೊಸಪೇಟೆಯ ಅನುಪಾತ 955, ಬಳ್ಳಾರಿ

[illegible]

967, ಕರ್ನಾಟಕ 956 ಆಗಿತ್ತು. ಕೃಷಿ ಆಧಾರಿತವಾಗಿದ್ದ ಅವಧಿಯಲ್ಲಿ ಹಂಪೆಯಲ್ಲಿ ಲಿಂಗ ಪರಿಮಾಣ ತಾಲೂಕು, ಜಿಲ್ಲೆ ಹಾಗೂ ರಾಜ್ಯಕಿಂತ ಕಡಿಮೆ ಇದ್ದುದು ಮೇಲಿನ ಅಂಶಗಳಿಂದ ದೃಢವಾಗುತ್ತದೆ.[20] 1981ರಲ್ಲಿ ಹಂಪೆಯ ಲಿಂಗ ಪರಿಮಾಣ 845 ಇತ್ತು. ತಾಲ್ಲೂಕು 972, ಜಿಲ್ಲೆಯಲ್ಲಿ 973, ಕರ್ನಾಟಕ 963 ಇದ್ದವು. 1981ರಲ್ಲೂ ಹಂಪೆಯ ಲಿಂಗ ಪರಿಮಾಣವು ತಾಲೂಕು ಜಿಲ್ಲೆ ಮತ್ತು ರಾಜ್ಯಕ್ಕಿಂತ ಕಡಿಮೆ ಇತ್ತು ಎಂದು ಅಂಕಿ-ಅಂಶಗಳಿಂದ ತಿಳಿದುಬರುತ್ತದೆ.[21] 1991ರಲ್ಲಿ ಹಂಪೆಯ ಲಿಂಗ ಪರಿಮಾಣ ಅನುಪಾತ 987 ಇದ್ದರೆ, ಹೊಸಪೇಟೆ ತಾಲೂಕಿನಲ್ಲಿ 964, ಬಳ್ಳಾರಿ ಜಿಲ್ಲೆಯಲ್ಲಿ 965, ರಾಜ್ಯದಲ್ಲಿ 960 ಇತ್ತು.[22] ಈ ಅವಧಿಯಲ್ಲಿ ಹಂಪೆಯ ಲಿಂಗ ಪರಿಮಾಣವು ತಾಲೂಕು, ಜಿಲ್ಲೆ ಮತ್ತು ರಾಜ್ಯಗಳಿಗಿಂತ ಏರಿಕೆಯಾಗಿದೆ. ಇದರಿಂದ ಲಿಂಗ ಪರಿಮಾಣ ಅನುಪಾತ ಹಂಪೆ ಗ್ರಾಮದಲ್ಲಿ ಹೆಚ್ಚಿರುವುದು ಕಂಡುಬರುವ ಸಂಗತಿಯಾಗಿದೆ. ಹೀಗೆ ಅಭಿವೃದ್ಧಿಯೊಂದಿಗೆ ಗ್ರಾಮದ ಜನತೆ ಲಿಂಗ ಪ್ರಾಶಸ್ತ್ಯದ ದೃಷ್ಟಿಕೋನಗಳು ಬದಲಾಗುತ್ತಿರುವುದು ಸ್ಪಷ್ಟವಾಗಿದೆ. ಹಿಂದುಳಿದ ಪ್ರದೇಶಗಳಲ್ಲಿ ಹೆಣ್ಣು ಭ್ರೂಣ ಹತ್ಯೆ ಮಾಡುವುದು, ಗಂಡು ಮಗುವನ್ನು ಹೇರದಿದ್ದರೆ ಹೆಂಡತಿಯನ್ನು ತ್ಯಜಿಸಿ ಮತ್ತೊಂದು ಮದುವೆಯಾಗುವುದು ಇತ್ಯಾದಿಗಳನ್ನು ಕಾಣಬಹುದು. ಹಂಪೆ ಗ್ರಾಮದಲ್ಲಿ ಇವೆಲ್ಲವೂ ತಕ್ಕಮಟ್ಟಿಗೆ ಇಲ್ಲವೆನ್ನುವಷ್ಟು ಕಡಿಮೆ ಇವೆ. ಗ್ರಾಮದ ಒಟ್ಟು ಕುಟುಂಬಗಳಲ್ಲಿ ಶೇ.80ರಷ್ಟು ಲಿಂಗ ಪ್ರಾಶಸ್ತ್ಯಕ್ಕೆ ಮಾನ್ಯತೆಯನ್ನು ನೀಡುತ್ತಿಲ್ಲ. ಗಂಡು ಮತ್ತು ಹೆಣ್ಣು ಎರಡು ಒಂದೇ ಎಂಬ ಮನೋಭಾವವನ್ನು ಹೊಂದಿವೆ. ಈ ಎಲ್ಲ ಕಾರಣಗಳು ಮಹಿಳೆಯರ ಸಂಖ್ಯೆಯನ್ನು ಹೆಚ್ಚಿಸಿರಬಹುದು ಎಂದು ಹೇಳಬಹುದು(ಕೋಷ್ಟಕ-46).

ಮಹಿಳೆಯರ ಸ್ಥಾನಮಾನ

ಮಹಿಳೆಯರನ್ನು ಪುರುಷರ ನಂತರದ ಸ್ಥಾನದಲ್ಲಿಯೆ ನೋಡುವುದು ಸಾಂಪ್ರದಾಯಿಕ ಸಮಾಜದ ಲಕ್ಷಣ. ಸಾಂಪ್ರದಾಯಿಕ ಸಮಾಜದಲ್ಲಿ ಮಹಿಳೆ ವ್ಯವಹರಿಸಬಹುದಾದ ಲೋಕ ತುಂಬಾ ಸೀಮಿತ. ಗಂಡಸು ಹೊರಗೆ ದುಡಿದು ತಂದರೆ, ಹೆಂಡತಿ ಮನೆಯಲ್ಲಿದ್ದು ಗಂಡಸು ತಂದ ವರಮಾನದಲ್ಲಿ ಅಡಿಗೆ ಮಾಡಿಹಾಕಿ, ಗಂಡ, ಮಕ್ಕಳು ಹಾಗೂ ಮನೆಯಲ್ಲಿನ ಇತರ ಸದಸ್ಯರ ಹಾರೈಕೆ ಮನೆಯಲ್ಲಿನ ಕುಟುಂಬದ ಸದಸ್ಯರಿಗೆ ಸೇವಾ ಸೌಲಭ್ಯಗಳನ್ನು ಒದಗಿಸುವ ಜೊತೆಗೆ ಮನೆಗೆ ಬರುವ ಸಂಬಂಧಿಕರೊಂದಿಗೆ ಮಾತ್ರ ಮುಕ್ತವಾಗಿ ಬೆರೆಯಲು ಅವಕಾಶವಿತ್ತು. ಅಪರಿಚಿತರೊಂದಿಗೆ ಮಾತನಾಡುವುದು, ಬೆರೆಯುವುದು, ಅಕ್ಷಮ್ಯ ಅಪರಾಧವೆಂಬ ಭಾವನೆ ಇತ್ತು. ಇಸಬೆಲ್ ಅಂಡ್ ಡೇವಿಡ್ ಕ್ರುಕ್ ಅವರು ಅಭಿಪ್ರಾಯಪಟ್ಟಿರುವಂತೆ ಪ್ರತಿಯೊಂದು ವರ್ಗಗಳಲ್ಲಿಯೂ ಮಹಿಳೆಯರ ಸ್ಥಾನಮಾನಗಳು ಕೆಳಮಟ್ಟದಲ್ಲಿ ಇದ್ದಾವೆ.[23] ಸ್ಥಳೀಯ ರಾಜಕೀಯ ವ್ಯವಸ್ಥೆಯಲ್ಲಿಯು ಮಹಿಳೆಯರಿಗೆ ಎರಡನೇ ದರ್ಜೆಯ ಸ್ಥಾನಮಾನಗಳು ಇವೆ.[24] ಇಂತಹ ಪುರುಷ ಪ್ರಧಾನ ಮೌಲ್ಯಗಳ ವಿರುದ್ಧ

[illegible]

[illegible]

[illegible]

[illegible]

ಮಹಿಳೆಯರು ತಮ್ಮ ಹಕ್ಕನ್ನು ಪಡೆಯಲು ಸಂಘಟನೆಗಳ ಮೂಲಕ ಹೋರಾಟಗಳನ್ನು ನಡೆಸಿದ್ದಾರೆ. ಈ ಹೋರಾಟಗಳ ಪ್ರತಿಫಲವೆಂಬಂತೆ ಸರ್ಕಾರಗಳು ಮಹಿಳೆಯರಿಗೆ ಪ್ರತಿಯೊಂದು ರಂಗದಲ್ಲಿಯೂ ಪ್ರಾತಿನಿಧ್ಯ ನೀಡಲು ಪ್ರಯತ್ನಿಸುತ್ತಿವೆ. ಹಾಗಾಗಿ ಮಹಿಳೆ ಇಂದು ಮನೆಯ ಹೊರಗಿನ ಚಟುವಟಿಕೆ ಗಳಲ್ಲಿಯೂ ಸಕ್ರಿಯವಾಗಿ ತೊಡಗಿಸಿಕೊಳ್ಳಲು ಆರಂಭವಾಗಿದೆ. ಈಗ ಹೆಂಗಸರು ಹೊರಗಿನವರಿಗೆ ಸೇವಾ ಸೌಲಭ್ಯಗಳನ್ನು ಒದಗಿಸುವುದು, ಮುಕ್ತವಾಗಿ ಬೆರೆಯುವುದು ಅಸಂಗತವಾಗುವುದಿಲ್ಲ. ಮಹಿಳೆಯರು ಸರ್ಕಾರಿ ಮತ್ತು ಅರೆ-ಸರ್ಕಾರಿ ಉದ್ಯೋಗದಲ್ಲಿ ತೊಡಗಿಸಿಕೊಳ್ಳುವುದು ಸಾಮಾನ್ಯವಾಗಿದೆ. ಇಂದು ಗಂಡ ಮತ್ತು ಹೆಂಡತಿಯರಿಬ್ಬರೂ ಒಟ್ಟಿಗೆ ದುಡಿಮೆಯಲ್ಲಿ ತೊಡಗಿಕೊಂಡಿರುವುದು ಕಾಣುತ್ತದೆ. ಇದಕ್ಕೆ ಕಾರಣಗಳು ಅನೇಕ ಇರಬಹುದು. ಒಂದು ಕುಟುಂಬದ ಆದಾಯ ಕಡಿಮೆ ಇರುವುದು, ಆಧುನಿಕ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಉದ್ಯೋಗಾವಕಾಶವನ್ನು ಬಳಸಿಕೊಳ್ಳಬೇಕೆಂಬ ಹಂಬಲ ಕೂಡ ಇರಬಹುದು.

ಶಿಕ್ಷಣವು ಕುಟುಂಬ ಹಾಗೂ ಸಮಾಜದಲ್ಲಿ ಸ್ಥಾನಮಾನಗಳ ಬದಲಾವಣೆಗೆ ಅವಕಾಶ ಕಲ್ಪಿಸಿಕೊಡುತ್ತದೆ. ಮಹಿಳೆಯರ ಶಿಕ್ಷಣದಲ್ಲಿನ ಹೆಚ್ಚಳವು ಅವರ ಸ್ಥಾನಮಾನಗಳಲ್ಲಿ ಅನೇಕ ಬದಲಾವಣೆಗಳು ಉಂಟಾಗಲು ಕಾರಣವಾಗುತ್ತದೆ. ಹಂಪೆ ಗ್ರಾಮದಲ್ಲಿ 1971ರಲ್ಲಿ ಮಹಿಳೆ ಸಾಕ್ಷರತೆ ಪ್ರಮಾಣ ಶೇ 20.61 ಇತ್ತು. ಅದೇ ಅವಧಿಯಲ್ಲಿ ಹೊಸಪೇಟೆ ತಾಲೂಕಿನ ಸಾಕ್ಷರತೆ ಪ್ರಮಾಣ 18.27, ಬಳ್ಳಾರಿ ಜಿಲ್ಲೆಯ ಮಹಿಳಾ ಸಾಕ್ಷರತೆ ಪ್ರಮಾಣ ಶೇ 17.04 ಹಾಗೂ ರಾಜ್ಯದ ಸಾಕ್ಷರತೆ ಪ್ರಮಾಣ ಶೇ 22.76 ಆಗಿತ್ತು.[25] ತಾಲೂಕು ಮತ್ತು ಜಿಲ್ಲೆಗಿಂತ ಹಂಪೆಯ ಗ್ರಾಮದಲ್ಲಿ ಮಹಿಳೆ ಸಾಕ್ಷರತೆ ಹೆಚ್ಚು. ಆದರೆ ರಾಜ್ಯಕ್ಕಿಂತ ಶೇ 2.05 ರಷ್ಟು ಕಡಿಮೆ ಆಗಿತ್ತು. 1981ರಲ್ಲಿ ಹಂಪೆಯ ಗ್ರಾಮದ ಮಹಿಳೆಯರ ಸಾಕ್ಷರತೆ ಪ್ರಮಾಣ ಶೇ 27.84 ಇದ್ದರೆ ತಾಲೂಕಿನ ಸಾಕ್ಷರತೆ ಪ್ರಮಾಣ ಶೇ 22.47ರಷ್ಟು. ಜಿಲ್ಲೆಯ ಸಾಕ್ಷರತೆ ಹಂಪೆಯ ಗ್ರಾಮದ ಮಹಿಳಾ ಸಾಕ್ಷರತೆ ಪ್ರಮಾಣಕ್ಕಿಂತ ಶೇ 7.23ರಷ್ಟು ಹೆಚ್ಚಾಗಿದೆ. ತಾಲೂಕು ಮತ್ತು ಜಿಲ್ಲೆಗಿಂತ ಮಹಿಳಾ ಸಾಕ್ಷರತೆ ಹೆಚ್ಚಿದೆ. ಆದರೆ ಈ ಅವಧಿಯಲ್ಲಿ ಕೂಡ ಹಂಪೆಯ ಮಹಿಳಾ ಸಾಕ್ಷರತೆ ರಾಜ್ಯಕ್ಕಿಂತ ಕಡಿಮೆ ಇದೆ.[26] 1991ರಲ್ಲಿ ಹಂಪೆಯ ಮಹಿಳಾ ಸಾಕ್ಷರತೆ ಪ್ರಮಾಣ ಶೇ 40.12 ಇದ್ದರೆ, ತಾಲೂಕಿನ ಸಾಕ್ಷರತೆ ಪ್ರಮಾಣ ಶೇ 36.54 ಇತ್ತು. ಜಿಲ್ಲೆಯ ಸಾಕ್ಷರತೆ ಪ್ರಮಾಣ ಶೇ 31.97 ಆಗಿದ್ದರೆ ರಾಜ್ಯದ ಸಾಕ್ಷರತೆ ಪ್ರಮಾಣ ಶೇ 44.34 ಆಗಿತ್ತು.[27] ಈ ಅವಧಿಯಲ್ಲಿ ಹಂಪೆಯ ಮಹಿಳೆ ಸಾಕ್ಷರತೆ ಪ್ರಮಾಣ ಶೇ 12.28ರಷ್ಟು ಹೆಚ್ಚಾಗಿದೆ. ಹಂಪೆಯ ಸಾಕ್ಷರತೆ ಪ್ರಮಾಣ ಹಿಂದಿನ ಅವಧಿಗಳಲ್ಲಿರುವಂತೆ ತಾಲೂಕು ಮತ್ತು ಜಿಲ್ಲೆಗಳಿಗಿಂತ ಹೆಚ್ಚು ಇದ್ದು, ರಾಜ್ಯಕ್ಕಿಂತ ಶೇ 4.22ರಷ್ಟು ಕಡಿಮೆ ಇದೆ. 2001ರಲ್ಲಿ ಹಂಪೆ ಗ್ರಾಮದ ಮಹಿಳಾ ಸಾಕ್ಷರತೆ ಶೇ 55.97 ಆಗಿದೆ.[28] ತಾಲೂಕಿನ ಸಾಕ್ಷರತೆ ಪ್ರಮಾಣ ಶೇ 50.61, ಜಿಲ್ಲೆ 44.62 ಮತ್ತು ರಾಜ್ಯದ ಸಾಕ್ಷರತೆ ಪ್ರಮಾಣ ಶೇ.55.51 ಇದೆ.[29] ಹಂಪೆಯ ಮಹಿಳೆ ಸಾಕ್ಷರತೆ ಪ್ರಮಾಣ 1991ರ

[illegible]

[illegible]

ಮತ್ತು 2001ರ ಅಂತರದಲ್ಲಿ ಶೇ 15.85ರಷ್ಟು ಹೆಚ್ಚಾಗಿದೆ. ಹಾಗೆಯೆ ತಾಲೂಕು, ಜಿಲ್ಲೆ ಮತ್ತು ರಾಜ್ಯಗಳಿಗಿಂತ ಹೆಚ್ಚಿದೆ. ಈ ಅವಧಿಯಲ್ಲಿ ಮುಖ್ಯವಾಗಿ ಪ್ರವಾಸೋದ್ಯಮ ಪೂರಕ ಚಟುವಟಿಕೆಗಳು ಬೆಳೆದು ಬಂದಿವೆ. ಈ ಆರ್ಥಿಕ ಚಟುವಟಿಕೆಗಳಲ್ಲಿ ಹೆಚ್ಚು ತೊಡಗಿಸಿಕೊಳ್ಳುವ ಮೂಲಕ ಕುಟುಂಬಗಳು ತಮ್ಮ ಆರ್ಥಿಕ ಸ್ಥಿತಿಯನ್ನು ಸುಧಾರಿಸಿಕೊಂಡಿವೆ. ಆರ್ಥಿಕ ಸಬಲತೆಯು ಮಹಿಳೆಯ ಶಿಕ್ಷಣವನ್ನು ಪಡೆಯುವ ಅವಕಾಶ ಹೊಂದಲು ಪ್ರಮುಖ ಕಾರಣವೆನ್ನಬಹುದು. ಮಹಿಳೆಯರಲ್ಲಿ ಸಾಕ್ಷರತೆ ಹೆಚ್ಚುವುದರೊಂದಿಗೆ ಹೆಚ್ಚು ಹೆಚ್ಚು ಮಹಿಳೆಯರು ಪ್ರವಾಸೋದ್ಯಮ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದು ಹೆಚ್ಚಾಗುತ್ತಿದೆ(ಕೋಷ್ಠಕ-47).

ಹಂಪೆಯ ಗ್ರಾಮದ ಪ್ರಮುಖ ಆರ್ಥಿಕ ಚಟುವಟಿಕೆಗಳೆಂದರೆ ಪ್ರವಾಸೋದ್ಯಮದ ಪೂರಕ ಚಟುವಟಿಕೆಗಳಾದ ಅತಿಥಿ ಗೃಹಗಳು, ರೆಸ್ಟೋರೆಂಟ್‌ಗಳು, ಹೋಟೆಲ್‌ಗಳು, ಕಿರಾಣಿ ಅಂಗಡಿಗಳು, ಇಂಟರ್‌ನೆಟ್, ಎಸ್.ಟಿ.ಡಿ ಬೂತ್ ಇತ್ಯಾದಿ. ಪ್ರವಾಸೋದ್ಯಮದ ಈ ಪೂರಕ ಚಟುವಟಿಕೆಗಳಲ್ಲಿ ಪುರುಷರಿಗೆ ಮಹಿಳೆಯರೂ ಸಹಾಯ ಮಾಡುತ್ತಾರೆ. ಇನ್ನು ಕೆಲವು ಸಂದರ್ಭಗಳಲ್ಲಿ ಮಹಿಳೆಯರು ಪುರುಷರ ಸಹಾಯವಿಲ್ಲದೆಯೆ ವ್ಯವಹಾರ ವಹಿವಾಟುಗಳಲ್ಲಿ ತೊಡಗಿಸಿಕೊಂಡಿದ್ದಾರೆ. ತಾವೇ ಸ್ವತಃ ಆದಾಯ ಗಳಿಕೆಯಲ್ಲಿ ತೊಡಗುವುದರೊಂದಿಗೆ ಕುಟುಂಬದ ಆರ್ಥಿಕ ಸ್ಥಿತಿಗಳನ್ನು ಸುಧಾರಿಸಲು ನೆರವಾಗುತ್ತಿದ್ದಾರೆ. ಅತಿಥಿಗೃಹಗಳು ಮತ್ತು ರೆಸ್ಟೋರೆಂಟ್‌ಗಳು ಮನೆಯೊಟ್ಟಿಗೆ ಅಥವಾ ಮನೆಗೆ ಹೊಂದಿಕೊಂಡಂತೆ ಇರುವುದರಿಂದ ಗಂಡಸರೊಂದಿಗೆ ಹೆಂಗಸರು ಅತಿಥಿಗೃಹ ಮತ್ತು ರೆಸ್ಟೋರೆಂಟ್‌ಗಳಲ್ಲಿನ ಗ್ರಾಹಕರಿಗೆ ಸೇವಾ ಸೌಲಭ್ಯಗಳನ್ನು ಒದಗಿಸಲು ಸಹಾಯ ಮಾಡುತ್ತಾರೆ. ಇಂತಹವರು 42ಜನ ಹೆಂಗಸರಿದ್ದಾರೆ(ಕೋಷ್ಠಕ-48). ತಮ್ಮ ಮನೆಯ ಗಂಡಸರು ಇಲ್ಲದ ಸಂದರ್ಭದಲ್ಲಿ ಹೆಂಗಸರು ವ್ಯಾಪಾರದ ಮೇಲ್ವಿಚಾರಣೆ ನೋಡಿಕೊಳ್ಳುವುದು ಕೂಡ ಇರುತ್ತದೆ. ರೆಸ್ಟೋರೆಂಟ್‌ಗಳಲ್ಲಿ ವಿದೇಶಿಯರಿಗೆ ಬೇಕಾದ ಆಹಾರವನ್ನು ಮಾಲೀಕರೆ ತಯಾರಿಸುವುದುಂಟು. ಒಂದು ವೇಳೆ ಮಾಲೀಕರು ಆಹಾರ ತಯಾರಿಸಲು ಕಲಿತಿರದಿದ್ದರೆ ಹೊರಗಿನವರನ್ನು ಆಹಾರ ತಯಾರಿಸಲು ನೇಮಿಸಿಕೊಳ್ಳಲಾಗುತ್ತದೆ. ರೆಸ್ಟೋರೆಂಟ್‌ಗಳಲ್ಲಿ ಗಂಡಸರು ಆಹಾರ ಪದಾರ್ಥಗಳನ್ನು ತಯಾರಿಸುವ ಕೆಲಸದಲ್ಲಿ ನಿರತರಾದರೆ, ಹೆಂಗಸರು ವಿದೇಶಿ ಪ್ರವಾಸಿಗರಿಂದ ಆಹಾರದ ಆರ್ಡರ್ ಪಡೆಯುವ, ಪೂರೈಸುವ ಮತ್ತು ಆಹಾರದ ಬಿಲ್ಲು ಸ್ವೀಕರಿಸುವ ಕೆಲಸದಲ್ಲಿ ನಿರತರಾಗಿರುತ್ತಾರೆ. ಇವರು ಪ್ರವಾಸಿಗರಲ್ಲಿ ವ್ಯವಹರಿಸುವ ಮಟ್ಟಿಗೆ ಇಂಗ್ಲಿಷ್ ಭಾಷೆಯನ್ನು ಕಲಿತಿರುತ್ತಾರೆ. ವಿದೇಶಿ ಪ್ರವಾಸಿಗರು ಮಹಿಳೆ ಮತ್ತು ಮಕ್ಕಳನ್ನು ತುಂಬಾ ಗೌರವ ಮತ್ತು ಪ್ರೀತಿಯಿಂದ ಕಾಣುತ್ತಾರೆ.

ಹೋಟೆಲ್‌ಗಳಲ್ಲಿ ಸಹ ಹೆಂಗಸರು ಆಹಾರ ತಯಾರಿಸುವುದರ ಜೊತೆಗೆ, ಗ್ರಾಹಕರಿಗೆ ಆಹಾರದ ಪೂರೈಕೆ ಮಾಡುವುದು ಮತ್ತು ಗ್ರಾಹಕರಿಂದ ಹಣ ಪಡೆಯುವ ಕೆಲಸ ಮಾಡುತ್ತಾರೆ. ಕೆಲವೊಂದು ಹೋಟೆಲ್‌ಗಳನ್ನು ಹೆಂಗಸರೇ ನಡೆಸಿಕೊಂಡು ಹೋಗುತ್ತಾರೆ. ಹೆಂಗಸರೆ ನಡೆಸುವ ಹೋಟೆಲುಗಳ

ಸಂಖ್ಯೆ 18 ಇವೆ. ಇಂತಹ ಹೋಟೆಲುಗಳಲ್ಲಿ ಹೆಂಗಸರೆ ವ್ಯವಹಾರದ ಎಲ್ಲ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಾರೆ. ಗಂಡಸರ ಸಹಾಯದಿಂದ ಹೆಂಗಸರು ನಡೆಸುವ ಕಿರಾಣಿ ಅಂಗಡಿ ಮತ್ತು ಸ್ಟೇಷನರಿ ಶಾಪ್‌ಗಳ ಸಂಖ್ಯೆ 4 ಇವೆ. ಪೆಟ್ಟಿಗೆ ಅಂಗಡಿ ವ್ಯಾಪಾರದಲ್ಲಿ ಹೆಚ್ಚಾಗಿ ಹೆಂಗಸರೆ ತೊಡಗಿಕೊಂಡಿರುತ್ತಾರೆ. ಇದರಲ್ಲಿ ತೆಂಗಿನಕಾಯಿ ವ್ಯಾಪಾರಿಗಳು, ಹಣ್ಣು, ತರಕಾರಿ ಮಾರುವವರು ಸೇರಿರುತ್ತಾರೆ. ಗಂಡಸರು ಪೇಟೆಗೆ ಹೋಗಿ ಸಾಮಾನುಗಳನ್ನು ಕೊಂಡುತಂದು ಹಾಕಿದರೆ ಹೆಂಗಸರು ಅವುಗಳನ್ನು ಮಾರಾಟ ಮಾಡುತ್ತಾರೆ. ಆದರೆ ಕೆಲವು ಸಂದರ್ಭಗಳಲ್ಲಿ ಹೆಂಗಸರು ಪೇಟೆಗೆ ಹೋಗಿ ಸಾಮಾನುಗಳನ್ನು ಕೂಡ ತರುತ್ತಾರೆ. ಇವರ ಸಂಖ್ಯೆ 52 ಇದೆ. ಎಸ್.ಟಿ.ಡಿ - ಐ. ಎಸ್.ಡಿ ಬೂತ್ ತಮ್ಮದೇ ಆಗಿದ್ದಲ್ಲಿ ವ್ಯವಹಾರ ಮಾಡಲು ಹೆಂಗಸರು ಮತ್ತು ಯುವತಿಯರು ಇರುತ್ತಾರೆ. ಎಸ್.ಟಿ.ಡಿ ಬೂತ್‌ಗಳಲ್ಲಿ ಕುಳಿತು ತಾವೇ ಕೆಲಸ ನಿರ್ವಹಿಸಲು ಸಾಧ್ಯವಾಗದವರು ಕಡಿಮೆ ಸಂಬಳಕ್ಕೆ ಸಿಗುವ ಯುವತಿಯರನ್ನು ನೇಮಿಸಿಕೊಂಡು ತಿಂಗಳಿಗೆ ರೂ.300-500 ಸಂಬಳ ನೀಡುತ್ತಾರೆ. ಹೀಗಾಗಿ ಎಸ್.ಟಿ.ಡಿ ಬೂತ್‌ಗಳಲ್ಲಿ ಕೆಲಸ ಮಾಡುವ ಮಹಿಳೆಯರ ಸಂಖ್ಯೆ 04 ಇದೆ. ಹಣದ ವಿನಿಮಯ ವ್ಯವಹಾರದಲ್ಲಿ ಗಂಡಂದಿರ ಜೊತೆಗೆ ಹೆಂಗಸರು ತೊಡಗಿಸಿಕೊಂಡಿರುತ್ತಾರೆ. ಗಂಡಂದಿರು ಇಲ್ಲದ ಸಂದರ್ಭದಲ್ಲಿ ಮಹಿಳೆಯರೆ ವ್ಯವಹಾರ ಮಾಡುತ್ತಾರೆ.

ಬಾಡಿ ಮಸಾಜ್ ಷಾಪ್‌ಗಳನ್ನು ಹೆಂಗಸರು ಕೂಡ ಶುರುಮಾಡಿದ್ದಾರೆ. ಪುರುಷರು ಮಸಾಜ್ ಮಾಡುವವರು ಇದ್ದರೂ ಶಾಪ್‌ಗಳನ್ನೇನು ತೆರೆದಿಲ್ಲ. ಇವರು ಗ್ರಾಹಕರಿದ್ದಲ್ಲಿಗೆ ಹೋಗಿ ಮಸಾಜ್ ಮಾಡುತ್ತಾರೆ. ವಿದೇಶಿ ಪ್ರವಾಸಿಗರಿಗೆ ಬಾಡಿ ಮಸಾಜನ್ನು ಮಾಡಿಸಿಕೊಳ್ಳುವುದು ಒಂದು ಬಗೆಯ ಅಭಿರುಚಿ ಮತ್ತು ಹವ್ಯಾಸವಾಗಿದೆ. ಇದರೊಳಗೆ ಪುರುಷರು ಮತ್ತು ಮಹಿಳೆಯರು ಇದ್ದಾರೆ. ಮಹಿಳೆಯರು ಲಿಂಗತಾರತಮ್ಯವಿಲ್ಲದೆ ಬಾಡಿ ಮಸಾಜ್ ಮಾಡುವುದು ಹಂಪೆಯಲ್ಲಿ ಅಂತ ದೊಡ್ಡ ಸಂಗಾತಿಯಾಗೇನೂ ಕಾಣುವುದಿಲ್ಲ. ಪುರುಷ ಬಾಡಿ ಮಸೇಜ್ ಮಾಡುವವರು ಗಂಡು ಹೆಣ್ಣೆಂಬ ಭೇದವಿಲ್ಲದೆ ಎಲ್ಲ ಪ್ರವಾಸಿಗರಿಗೂ ಬಾಡಿ ಮಸಾಜ್ ಮಾಡುತ್ತಾರೆ. ಹಾಗೆಯೆ ಮಹಿಳೆಯರು ಮಸಾಜ್ ಮಾಡುವುದನ್ನು ಹಂಪೆಯಲ್ಲಿ ಕೀಳು ಭಾವನೆಯಿಂದ ನೋಡುವುದಿಲ್ಲ. ಇಡಿ ವ್ಯವಹಾರವನ್ನು ಮಹಿಳೆಯರೆ ನೋಡಿಕೊಳ್ಳುತ್ತಾರೆ.

ಸಿದ್ಧ ಉಡುಪುಗಳ ಮಾರಾಟಗಾರರಲ್ಲಿ ಹೆಚ್ಚಿನವರು ಹೆಂಗಸರೆ ಇದ್ದಾರೆ. ಹಂಪೆಯಲ್ಲಿ ಸಿದ್ಧ ಉಡುಪುಗಳನ್ನು ಕೊಳ್ಳುವವರಲ್ಲಿ ವಿದೇಶಿ ಪ್ರವಾಸಿಗರ ಸಂಖ್ಯೆ ಹೆಚ್ಚು. ಮಹಿಳೆಯರು ವಿದೇಶಿ ಪ್ರವಾಸಿಗರ ಅಭಿರುಚಿ ಮತ್ತು ಬೇಡಿಕೆಗೆ ತಕ್ಕಂತೆ ಬಟ್ಟೆಗಳನ್ನು ಹೊಲಿದು ಸಿದ್ಧ ಉಡುಪುಗಳಾಗಿ ಮಾರ್ಪಡಿಸಿ ಮಾರಾಟ ಮಾಡಲಾಗುತ್ತದೆ. ಹೀಗೆ ಉಡುಪುಗಳ ಮಾರಾಟ ಮಾಡುವ 20ಜನರಲ್ಲಿ, ಇಬ್ಬರು ಮಾತ್ರ ಪುರುಷರು ಸಿಗುತ್ತಾರೆ. ಇಲ್ಲಿ ಹೆಂಗಸರೆ ಬಟ್ಟೆಯನ್ನು ಕೊಂಡುತಂದು ಸಿದ್ಧ ಉಡುಪುಗಳನ್ನು ತಯಾರಿಸುತ್ತಾರೆ, ಅವುಗಳ ಬೆಲೆಯನ್ನು ತಾವೆ ನಿರ್ಧರಿಸಿ ಮಾರಾಟ ಮಾಡುತ್ತಾರೆ.

ಸಿದ್ಧ ಉಡುಪುಗಳಲ್ಲಿ ಲಂಬಾಣಿ ಉಡುಪುಗಳು ಸೇರಿವೆ. ಈ ವ್ಯಾಪಾರವನ್ನು 13 ಜನ ಲಂಬಾಣಿಗರು ಮಾಡುತ್ತಾರೆ. ಅವರಲ್ಲಿ 10 ಜನ ಹೆಂಗಸರು ಸೇರಿದ್ದಾರೆ. ಲಂಬಾಣಿ ಉಡುಪುಗಳನ್ನು ಲಂಬಾಣೇತರ ಜನಾಂಗದವರು ತಮ್ಮ ಶಾಪ್‌ಗಳಲ್ಲಿ ಇಟ್ಟು ಮಾರಾಟ ಮಾಡುತ್ತಾರೆ. ಲಂಬಾಣಿ ಉಡುಪುಗಳನ್ನು ಹಂಪೆಯಲ್ಲಿ ತಯಾರಿಸದಿದ್ದರೂ, ಬೇರೆ ಪ್ರದೇಶಗಳಿಂದ ತಂದು ಮಾರಾಟ ಮಾಡಲಾಗುತ್ತದೆ. ಈ ವ್ಯಾಪಾರದಲ್ಲಿ ತಮ್ಮ ಗಂಡಂದಿರ ಸಹಕಾರ ಬಯಸುವವರು ಕೆಲವು ಹೆಂಗಸರು ಮಾತ್ರ. ಉಳಿದ ಹೆಂಗಸರು ಉಡುಪುಗಳನ್ನು ತಾವೆ ತರುತ್ತಾರೆ. ಗಂಡಸರಿಗೆ ಹಣ ನೀಡಿ ಕಳುಹಿಸಿದರೆ ಉಡುಪು ತರದೆ ಮದ್ಯ ಕುಡಿದು ಮಜಾ ಮಾಡಿಕೊಂಡು ಬರುತ್ತಾರೆ. ಆದ್ದರಿಂದ ತಾವೆ ಹೋಗಿ ಉಡುಪುಗಳನ್ನು ಕೊಂಡು ತರುತ್ತೇವೆಂದು ಲಂಬಾಣಿ ಹೆಂಗಸರು ಹೇಳುತ್ತಾರೆ. ತಮ್ಮ ವ್ಯವಹಾರಕ್ಕೆ ಸಂಬಂಧ ಪಟ್ಟ ಎಲ್ಲ ನಿರ್ಧಾರಗಳನ್ನು ತಾವೆ ತೆಗೆದುಕೊಳ್ಳುತ್ತಾರೆ. ಲಂಬಾಣಿ ಉಡುಪುಗಳಿಗೆ ವಿದೇಶಿ ಪ್ರವಾಸಿ ಮಹಿಳೆಯರಿಂದ ತುಂಬಾ ಬೇಡಿಕೆ ಇದೆ. ವಿದೇಶಿ ಮಹಿಳಾ ಪ್ರವಾಸಿಗರು ಲಂಬಾಣಿ ಉಡುಪಿನಲ್ಲಿರುವ ಕುಶಲ ಕೆಲಸ ಇತ್ಯಾದಿಗಳನ್ನು ತುಂಬ ಮೆಚ್ಚಿಕೊಳ್ಳುತ್ತಾರೆ. ಅವರಿಗೆ ಇಷ್ಟವಾದ ಲಂಬಾಣಿ ಉಡುಪುಗಳನ್ನು ಎಷ್ಟು ಬೆಲೆಯಾದರೂ ಕೊಟ್ಟು ಕೊಂಡುಕೊಳ್ಳುತ್ತಾರೆ. ಒಂದು ಜೊತೆ ಉಡುಪಿನ (ಕುಪ್ಪಸ ಮತ್ತು ಲಂಗ ಧಾವಣಿ) ಬೆಲೆ ಕನಿಷ್ಠ 800 ರೂ ಗಳಿಂದ 1,500 ರೂಗಳವರೆಗೂ ಇರುತ್ತದೆಂದು ಲಂಬಾಣಿ ಉಡುಪಿನ ವ್ಯಾಪಾರಿಗಳು ತಿಳಿಸುತ್ತಾರೆ.

ಹಂಪೆಯಲ್ಲಿ ಮೂರು ಜನ ಸ್ಥಳೀಯರು ಪುರಾತನ ಅವಶೇಷ ವಸ್ತುಗಳನ್ನು ಮಾರಾಟ ಮಾಡುತ್ತಾರೆ. ಅವರಲ್ಲಿ ಒಬ್ಬಳು ಮಾತ್ರ ಮಹಿಳೆ. ಅವಳು ವಾಲ್ಮೀಕಿ ಜನಾಂಗಕ್ಕೆ ಸೇರಿದವಳು. ಈ ವಸ್ತುಗಳಿಗೆ ವಿದೇಶಿ ಪ್ರವಾಸಿಗರಿಂದ ಹೆಚ್ಚಿನ ಬೇಡಿಕೆಯಿದೆ. ಈ ವಸ್ತುಗಳನ್ನು ದೆಹಲಿ, ಜಯಪುರ ಇತ್ಯಾದಿ ಸ್ಥಳಗಳಿಂದ ಕೊಂಡು ತರುತ್ತಾರೆ. ಈ ಮಹಿಳೆಯು ವಸ್ತುಗಳನ್ನು ಕೊಂಡುತರಲು ಆಗದಿರುವುದರಿಂದ ಇನ್ನೊಬ್ಬ ವ್ಯಾಪಾರಿ ಜೊತೆ ಹೋಗಿ ಕೊಂಡು ತರುತ್ತಾಳೆ. ಈ ಮಹಿಳೆಯು ಎಲ್ಲಾ ಆರ್ಥಿಕ ವ್ಯವಹಾರಗಳನ್ನು ನಿಭಾಯಿಸಿಕೊಂಡು ಹೋಗುತ್ತೇನೆಂದು ತಿಳಿಸುತ್ತಾಳೆ. ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡ ಮಹಿಳೆಯರ ಸಂಖ್ಯೆ 1994ರಲ್ಲಿ 3 ಇದ್ದದು, 2001ರ ಅವಧಿಯಲ್ಲಿ 46ಕ್ಕೆ ಏರಿಕೆಯಾಗಿದೆ. ಒಟ್ಟಿಗೆ ಹೇಳುವುದಾದರೆ 1994ರಲ್ಲಿ 12ಜನ ಮಹಿಳೆಯರು ಪ್ರವಾಸೋದ್ಯಮದ ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿಸಿ ಕೊಂಡಿದ್ದು, 2001ರ ಹೊತ್ತಿಗೆ ಇವರ ಸಂಖ್ಯೆ 93ಕ್ಕೆ ಏರಿಕೆಯಾಗಿದೆ(ಕೋಷ್ಟಕ-49)ಹೀಗೆ ಹಂಪೆಯ ಪ್ರವಾಸೋದ್ಯಮದ ಪೂರಕ ಚಟುವಟಿಕೆಗಳಲ್ಲಿ ಹೆಂಗಸರೂ ಸಕ್ರಿಯವಾಗಿ ಭಾಗವಹಿಸುತ್ತಿದ್ದಾರೆ. ಇದರಿಂದಾಗಿ ಮಹಿಳೆಯರು ತಕ್ಕಮಟ್ಟಿನ ಆರ್ಥಿಕ ಸ್ವಾತಂತ್ರ್ಯವನ್ನು ಹೊಂದಿದ್ದಾರೆಂದು ಹೇಳಬಹುದು. ಪ್ರವಾಸೋದ್ಯಮ ಚಟುವಟಿಕೆಗಳಲ್ಲಿ ತೊಡಗಿಕೊಂಡಿರುವ ಮಹಿಳೆಯರು ವ್ಯಾಪಾರ ವಹಿವಾಟಿನ ನಿರ್ಧಾರಗಳನ್ನು ತಮ್ಮ ಗಂಡಂದಿರ ಅನುಪ ಸ್ಥಿತಿಯಲ್ಲಿ ತಾವೆ ನಿರ್ವಹಿಸುತ್ತಾರೆ. ಗಂಡಂದಿರು ಜತೆಯಲ್ಲಿದ್ದ

ಸಂದರ್ಭದಲ್ಲಿ ಹೆಂಡತಿಯ ಜತೆ ಚರ್ಚಿಸಿ ವ್ಯಾಪಾರ ವಹಿವಾಟುಗಳ ಬಗ್ಗೆ ನಿರ್ಧಾರ ತೆಗೆದುಕೊಳ್ಳುತ್ತಾರೆ ಎಂದು ಮಹಿಳೆಯರು ಸಂದರ್ಶನ ಸಮಯದಲ್ಲಿ ತಿಳಿಸಿದ್ದಾರೆ. ಬೇರೆ ಪ್ರದೇಶದ ಮಹಿಳೆಯರಗಿಂತ ಹಂಪೆ ಗ್ರಾಮದ ಮಹಿಳೆಯರು ಹೆಚ್ಚು ಆರ್ಥಿಕ ಸ್ವಾತಂತ್ರ್ಯವನ್ನು ಹೊಂದಿದ್ದಾರೆ.

ಅಂತರಜಾತಿಯ ವಿವಾಹಗಳು

ಈ ಮೊದಲು ಮದುವೆಗೆ ಒಂದು ವರ್ಷ ಅಥವಾ ಅದಕ್ಕಿಂತ ಮುಂಚೆಯಿಂದ ಏರ್ಪಾಡುಗಳನ್ನು ಮಾಡಿಕೊಳ್ಳುವುದಿತ್ತು. ವರನಿಗೆ ವಧು ಹುಡುಕುವುದು, ವಧುವಿಗೆ ವರ ಹುಡುಕುವುದರಲ್ಲಿಯೆ ಹೆಚ್ಚಿನ ಕಾಲ ಹರಣವಾಗುತ್ತಿತ್ತು. ಒಂದೆ ಜಾತಿಯವರಾದರೂ ಜಾತಿಯ ಒಳಪಂಗಡಗಳು ಹೊಂದಿಕೊಳ್ಳಬೇಕು. ಮನೆತನದ ಸ್ಥಾನಮಾನಗಳು ಉನ್ನತವಾಗಿರಬೇಕು. ವಧು ಮನೆಯವರು ವರನನ್ನು ನೋಡಲು, ವರನ ಮನೆಯವರು ವಧುವನ್ನು ನೋಡಲು ಜಾತಿ ಮುಖಂಡರನ್ನು ಕರೆದೊಯ್ಯುತ್ತಿದ್ದರು. ಅಲ್ಲದೆ ತಾವು ಹೆಣ್ಣುಕೊಡುವ ಇಲ್ಲವೆ ತರುವ ಕುಟುಂಬದ ಸಾಮಾಜಿಕ ಮಾನ್ಯತೆಯನ್ನು ಪರಿಗಣಿಸುತ್ತಿದ್ದರು.ಸಮಾಜದ ಹಿರಿಯರು ಒಪ್ಪಿದ ಮೇಲೆಯೆ ಮದುವೆಯ ನಿಶ್ಚಿತಾರ್ಥಗಳು ಜರುಗುತ್ತಿದ್ದವು. ಇಂದು ಕೂಡ ತಕ್ಕಮಟ್ಟಿಗೆ ಮುಖ್ಯಸ್ಥರ ಅಭಿಪ್ರಾಯ ಆಧರಿಸಿ ಮದುವೆಯ ಬಗೆಗೆ ನಿರ್ಧರಿಸಲಾಗುತ್ತದೆ. ಆಗ ಯುವಕ ಯುವತಿಯನ್ನು ಒಪ್ಪುವುದಾಗಲಿ ಅಥವಾ ಯುವತಿ ಯುವಕನನ್ನು ಒಪ್ಪುವುದಾಗಲಿ ಮುಖ್ಯವಾಗುವುದಿಲ್ಲ. ಜಾತಿಯ ಹಿರಿಯರು ಮತ್ತು ಕುಟುಂಬದಲ್ಲಿನ ತಂದೆ-ತಾಯಿಗಳು ಹೇಳಿದಂತೆ ಯುವಕ-ಯುವತಿಯರು ಮದುವೆಯಾಗ ಬೇಕಾಗುತ್ತದೆ.

ಹಿಂದೆ ಮದುವೆಗಳು ಸುಮಾರು3 ರಿಂದ 9 ಅಥವಾ 16 ದಿನಗಳ ಕಾಲ ನಡೆಯುತ್ತಿದ್ದವು. ಪ್ರತಿಯೊಂದು ಸಂಪ್ರದಾಯವನ್ನು ಚಾಚು ತಪ್ಪದೆ ಆಚರಿಸಲಾಗುತ್ತಿತ್ತು. ಇದರಿಂದ ನವ ವಧು-ವರರು ಹೆಚ್ಚು ಹತ್ತಿರವಾಗಲು ಅನುಕೂಲವಾಗುತ್ತಿತ್ತು. ಪ್ರತಿಯೊಂದು ಸಾಂಪ್ರದಾಯಿಕ ಆಚಾರಣೆಗಳಲ್ಲಿ ವಧು-ವರರು ಭಾಗಿಗಳಾಗುತ್ತಿದ್ದರು. ಉದಾ : ಮದುವೆಯಾದ ವಧು- ವರರಲ್ಲಿ ವೀಳ್ಯಾದೇವತೆ ಕಸಿಯುವ ಆಟ ಕೂಡ ಒಂದು. ಇದನ್ನು ಮದುವೆಯಾದ 2 ರಿಂದ 3 ದಿನಗಳಲ್ಲಿ ವಧು-ವರರ ಸಂಬಂಧಿಕರು ವಧು-ವರರಿಗೆ ನೀರಿನ ಕಾರ್ಯಕ್ರಮ ಏರ್ಪಡಿಸಿ, ನೀರು ಹಾಕಿ, ಹೂ ಮೂಡಿಸಿದ ಸಂದರ್ಭ (ಈಗಿನ ಆರತಕ್ಷತೆಯ ಕಾರ್ಯಕ್ರಮ)ದಲ್ಲಿ ಮಾಡಲಾಗುತ್ತಿತ್ತು. ಈ ಸಂಪ್ರದಾಯಗಳು ಹಿಂದುಳಿದ ಹಳ್ಳಿಗಳ ಕೆಳವರ್ಗದವರಲ್ಲಿ ಇಂದಿಗೂ ಜೀವಂತವಾಗಿವೆ. ಮದುವೆಗಳು ಹಿಂದಿನಂತೆ ಗಂಡಿನ ಮನೆಯಲ್ಲಿ ಜರುಗುವುದಿಲ್ಲ ಮತ್ತು ಹೆಚ್ಚು ದಿನಗಳ ಕಾಲ ಕೂಡ ನಡೆಯುವುದಿಲ್ಲ. ಈಗ ಮದುವೆಗಳು ಛತ್ರಗಳಲ್ಲೆ ಹೆಚ್ಚಾಗಿ ಜರುಗುತ್ತವೆ. ಇಲ್ಲಿ ದುಬಾರಿ ಬಾಡಿಗೆಯಿಂದಲೂ ಅಥವಾ ಸಮಯದ ಅಭಾವದಿಂದಲೂ 1 ರಿಂದ 2 ದಿನಕ್ಕೆ ಸೀಮಿತಗೊಂಡಿದೆ.

ಹಾಗೂ ಯಾವ ಸಂಪ್ರದಾಯವನ್ನೂ ಹಿಂದಿನಂತೆ ಆಚರಿಸುವುದಿಲ್ಲ. ಈಗ ವರದಕ್ಷಿಣೆ ಪದ್ಧತಿಯು ಕಾನೂನು ಬಾಹಿರವಾಗಿದ್ದರೂ ಪರೋಕ್ಷವಾಗಿ ತೆಗೆದುಕೊಳ್ಳಲಾಗುತ್ತದೆ. ಹಿಂದೆ ವಧುದಕ್ಷಿಣೆ ಪದ್ಧತಿ(ಹೆಣ್ಣಿನ ತಂದೆ-ತಾಯಿಗಳಿಗೆ ಕೊಡುವುದು) ಇತ್ತೆಂದು ತಿಳಿದುಬರುತ್ತದೆ. ಸಾಕ್ಷರತೆಯ ಪ್ರಮಾಣ ಏರಿಕೆ ಕಂಡಿರುವ ಇಂದಿನ ದಿನಗಳಲ್ಲಿ ಸಾಂಪ್ರದಾಯಿಕ ಆಚರಣೆಗಳು ಸ್ವಲ್ಪ ಮಟ್ಟಿನ ರಿಯಾಯಿತಿ ಪಡೆದಿವೆ. ಸ್ವಜಾತಿ ಮದುವೆಗಳು ಮುಂದುವರಿದಿದ್ದರೂ, ಜಾತಿಯೊಳಗಿನ ಉಪಪಂಗಡಗಳನ್ನು ಅಷ್ಟಾಗಿ ಪರಿಗಣಿಸದಿರುವುದು ಗಮನಿಸತಕ್ಕ ಬಹುಮುಖ್ಯ ಅಂಶವಾಗಿದೆ. ಇದರ ಬದಲಾಗಿ ಮದುವೆಯಾಗುವ ಯುವಕ-ಯುವತಿಯರ ಸ್ಥಾನಮಾನ, ಶ್ರೀಮಂತಿಕೆ, ಶಿಕ್ಷಣ, ಉದ್ಯೋಗ ಇತ್ಯಾದಿಗಳನ್ನು ನೋಡುತ್ತಾರೆ. ಅಲ್ಲದೆ ಜಾತಿ, ಶ್ರೀಮಂತಿಕೆ, ಶಿಕ್ಷಣ, ಉದ್ಯೋಗ ಮೊದಲಾದ ಅಭಿಮಾನ, ಆಮಿಷಗಳ ಮಿತಿ ಮೀರಿದ ಯುವಕ-ಯುವತಿಯರು ಒಬ್ಬರನ್ನೊಬ್ಬರು ಪ್ರೀತಿಸಿ ತಂದೆ-ತಾಯಿಗಳ ಪರ-ವಿರೋಧಗಳನ್ನೆದುರಿಸಿ ಮದುವೆಯಾಗುವ ಸಂದರ್ಭಗಳು ಇವೆ. ಪ್ರೀತಿಸಿದ ಯುವಕ-ಯುವತಿಯರು ಸಬ್‌ರಿಜಿಸ್ಟಾರ್ ಕಚೇರಿಯಲ್ಲಿ, ಪೋಲಿಸ್ ಸ್ಟೇಷನ್‌ನಲ್ಲಿ ಅಥವಾ ದೇವಸ್ಥಾನದಲ್ಲಿ ಸ್ನೇಹಿತರು ಮತ್ತು ಹಿತೈಷಿಗಳ ಮುಂದೆ ಹೂವಿನ ಹಾರಗಳನ್ನು ಬದಲಿಸುವುದರೊಂದಿಗೆ ಕಡಿಮೆ ಖರ್ಚಿನಲ್ಲಿ ಮದುವೆಯಾಗುತ್ತಾರೆ. ಇಂದು ಇವು ಅಂತರ್‌ಜಾತಿ ವಿವಾಹಗಳಾಗಿವೆ. ಮದುವೆಯಾಗಿ ಹಲವು ದಿನಗಳು ಕಳೆದ ನಂತರ ಕೆಲವು ತಂದೆ-ತಾಯಿಯರು ತಮ್ಮ ಮಕ್ಕಳನ್ನು ಹತ್ತಿರ ಸೇರಿಸಿದರೆ, ಕೆಲವರು ಸೇರಿಸದೆ ಇರಬಹುದು, ಇಂತಹವರು ಸ್ವಾವಲಂಬಿಗಳಾಗಿ ಜೀವನ ಮಾಡಿಕೊಂಡು ಬದುಕುತ್ತಾರೆ. ಅಂತರ್‌ಜಾತಿಯ ವಿವಾಹಗಳು ಬಹುಕಾಲ ಉಳಿಯುವುದಿಲ್ಲ. ಬೇಗ ಮುರಿದು ಬೀಳುತ್ತವೆನ್ನುವ ನಂಬಿಕೆ ಇದೆ. ಆದರೆ ಅದೇ ನಂಬಿಕೆಯು ಅಂತರ್‌ಜಾತಿಯ ಮದುವೆಯಾದವರು ಒಟ್ಟಿಗೆ ಅನುಗಾಲ ಇರಲು ಕಾರಣ ಕೂಡ ಆಗಿದೆ.

ಹಂಪೆ ಗ್ರಾಮದಲ್ಲಿನ ಅಭಿವೃದ್ಧಿ ಮತ್ತು ಸಾಕ್ಷರತೆ ಪ್ರಮಾಣದ ಏರಿಕೆಯು ಅಂತರ್‌ಜಾತಿಯ ವಿವಾಹಗಳು ಗ್ರಾಮದ ಮಟ್ಟದಲ್ಲಿ ಹೆಚ್ಚಾಗಲು ಕಾರಣ ಎನ್ನಬಹುದು. 1990 ರಿಂದೀಚೆಗೆ ಇದುವರೆಗೆ 17 ಅಂತರ್‌ಜಾತಿಯ ವಿವಾಹಗಳು ನಡೆದಿವೆ. ಇವುಗಳಲ್ಲಿ ವಿದೇಶಿಯರು ಸ್ಥಳೀಯರನ್ನು, ಸ್ಥಳೀಯರು ವಿದೇಶಿಯರನ್ನು ಮದುವೆಯಾಗಿರುವುದೂ ಸೇರಿದೆ. ಇಂಥವು 6 ಮದುವೆಗಳಾಗಿವೆ. ಉಳಿದ 11 ವಿವಾಹಗಳು ಸ್ಥಳೀಯರಲ್ಲಿ ವಿವಿಧ ಜಾತಿಗಳ ನಡುವೆ ನಡೆದಿವೆ(ಕೋಷ್ಟಕ-50). ಪ್ರವಾಸಿಗರಾಗಿ ಬಂದ ವಿದೇಶಿಯರು ಸ್ಥಳೀಯ ಮಹಿಳೆಯರನ್ನು ವಿವಾಹವಾಗಿದ್ದಾರೆ. ಇದರಲ್ಲಿ ಇಬ್ಬರು ಲಂಬಾಣಿ ಮಹಿಳೆಯರು, ಜೈನ ಮತ್ತು ಮುಸ್ಲಿಂ ಮಹಿಳೆಯರು ತಲಾ ಒಬ್ಬೊಬ್ಬರಿದ್ದಾರೆ. ಇವರು ಆರ್ಥಿಕವಾಗಿ ಹಿಂದುಳಿದ ಕುಟುಂಬದ ಮಹಿಳೆಯರಾಗಿದ್ದಾರೆ. ಲಂಬಾಣಿ ಹೆಂಗಸರನ್ನು ಮದುವೆಯಾಗಿರುವ ಹಾಲೆಂಡ್ ಮತ್ತು ಫ್ರಾನ್ಸ್‌ನ ಪ್ರವಾಸಿಗರು ಹಂಪೆಯಲ್ಲೆ ನೆಲೆಸಿದ್ದಾರೆ. ಹಾಲೆಂಡಿನ ಪ್ರವಾಸಿಗ ಚಿತ್ರಕಲೆಗಾರನಾಗಿದ್ದು, ಸ್ವಂತ ಮನೆಯನ್ನು ಕಟ್ಟಿಸಿ ಕೊಂಡಿದ್ದಾನೆ. ಆತ

[illegible]

ಸುಮಾರು 10 ವರ್ಷಗಳಿಂದ ಹಂಪೆಯಲ್ಲಿ ವಾಸವಾಗಿದ್ದಾನೆ. ಈ ದಂಪತಿಗಳಿಗೆ ಎರಡು ಮಕ್ಕಳಿವೆ. ಲಂಬಾಣಿ ಹೆಣ್ಣನ್ನು ಮದುವೆಯಾದ ಫ್ರಾನ್ಸ್‌ನ ಮತ್ತೊಬ್ಬ ಪ್ರವಾಸಿಗ ಮದುವೆಯ ಪೂರ್ವದಲ್ಲಿಯೆ ಆಕೆಯ ಹೆಸರಿನಲ್ಲಿ 4 ಎಕರೆ ಭೂಮಿ ಖರೀದಿಸಿದ. ಅದರಲ್ಲಿ ಬಾಟನಿಕಲ್ ಗಾರ್ಡನ್ ಬೆಳೆಸಿದ ಆ ವ್ಯಕ್ತಿ ಇಲ್ಲಿಯೆ ನೆಲೆಸಿದ್ದಾನೆ. ಈ ಕುಟುಂಬದಲ್ಲೀಗ ಒಂದು ಮಗು ಇದೆ. ಹಾಲೆಂಡ್ ಪ್ರವಾಸಿಗ ಭಾರತೀಯ ಪದ್ಧತಿಯ ಊಟ-ಉಪಚಾರ, ಉಡುಗೆ-ತೊಡುಗೆ, ಆಚಾರ-ವಿಚಾರಗಳು ಬದುಕಿನಲ್ಲಿ ಯಾವ ತೊಂದರೆ ತಂದಿಲ್ಲ ಎಂದು ತಿಳಿಸುತ್ತಾನೆ. ಮುಸ್ಲಿಂ ಯುವತಿಯನ್ನು ಮದುವೆಯಾದ ವಿದೇಶಿಗ ಸ್ವಿಡ್ಜರ್‌ಲ್ಯಾಂಡ್‌ನವನು. ವಿರುಪಾಪುರ ಗಡ್ಡೆ ಗ್ರಾಮದಲ್ಲಿ ಉಡುಪುಗಳ ಮೇಲೆ ಚಿತ್ರಗಳನ್ನು ಹಾಕಿ ಸಿದ್ಧ ಉಡುಪುಗಳನ್ನು ಮಾರಾಟ ಮಾಡಿಕೊಂಡು ಜೀವನ ಸಾಗಿಸುತ್ತಿದ್ದಾನೆ. ಈತನ ಕುಟುಂಬದಲ್ಲೂ 2 ಮಕ್ಕಳಿವೆ. ಇನ್ನು ಜೈನ ಹೆಣ್ಣನ್ನು ಮದುವೆಯಾದವನು ಇಂಗ್ಲೆಂಡಿನ ಫ್ಯಾಕ್ಟರಿಯಲ್ಲಿ ಉದ್ಯೋಗದಲ್ಲಿದ್ದು, ವರ್ಷದಲ್ಲಿ ಎರಡು ಸಲ ಬಂದು ಹೋಗುತ್ತಿದ್ದನೆಂದು ತಿಳಿದುಬರುತ್ತದೆ. ಆತ ಮದ್ಯವ್ಯಸನಿಯಾಗಿದ್ದು ಕೆಲವು ದಿನಗಳ ಹಿಂದೆ ಆಗಸ್ಟ್ 2002ರಲ್ಲಿ ಹಂಪೆಯ ಹೆಂಡತಿಯ ಮನೆಯಲ್ಲಿ ಮೃತಪಟ್ಟನೆಂದು ತಿಳಿದುಬಂದಿದೆ. ಇವನಿಗೆ 2 ಗಂಡು ಮಕ್ಕಳಿದ್ದು, ಒಂದು ಮಗುವಿಗೆ 13-14 ವರ್ಷ ವಯಸ್ಸಿದ್ದರೆ, ಮತ್ತೊಂದು ಮಗುವಿಗೆ 10 ವರ್ಷ ವಯಸ್ಸಿರಬಹುದು. ಈ ಜೈನ ಹೆಂಗಸು ತನ್ನ ಮನೆಯ ಪಾರ್ಶ್ವದಲ್ಲಿನ ಕೊಠಡಿಗಳನ್ನೆ ವಿದೇಶಿ ಪ್ರವಾಸಿಗರಿಗೆ ಬಾಡಿಗೆ ನೀಡಿ ಜೀವನ ಮಾಡುತ್ತಿದ್ದಾಳೆ.

ಸ್ಥಳೀಯ ಬಾರಿಕ ಮತ್ತು ಲಿಂಗಾಯಿತ ಸಮುದಾಯಕ್ಕೆ ಸೇರಿದ ಯುವಕರು ಕ್ರಮವಾಗಿ ಸ್ವಿಡ್ಜರ್‌ಲ್ಯಾಂಡಿನ ಮತ್ತು ಫ್ರಾನ್ಸಿನ ಯುವತಿಯರನ್ನು ಮದುವೆಯಾಗಿ ವಿದೇಶಿ ನೆಲದಲ್ಲಿ ನೆಲೆಸಿದ್ದಾರೆ. ಸ್ವಿಡ್ಜರ್‌ಲ್ಯಾಂಡಿನ ಯುವತಿಯನ್ನು ಮದುವೆಯಾಗಿರುವ ಬಾರಿಕರ ಯುವಕ ತನ್ನ ಜೊತೆಯಲ್ಲಿ ಮತ್ತೊಬ್ಬ ಅಗಸರ ಯುವತಿಯನ್ನು ಕರೆದುಕೊಂಡು ಹೋಗಿದ್ದಾನೆ. ಅಗಸರ ಜನಾಂಗದ ಯುವತಿ ಅಲ್ಲಿಯೆ ಮದುವೆಯಾಗುವ ನಿರೀಕ್ಷೆ ಇದೆಯೆಂದು ಯುವತಿಯ ಸ್ನೇಹಿತರು ಹೇಳುತ್ತಾರೆ. ಬಾರಿಕರ ಯುವಕ ಸ್ಥಳೀಯ ರೆಸ್ಟೋರೆಂಟ್‌ಗಳಲ್ಲಿ ವೇಟರಾಗಿ ಕೆಲಸಗಾರನಾಗಿದ್ದರೆ, ಅಗಸರ ಯುವತಿ ಅತಿಥಿಗೃಹಗಳಲ್ಲಿ ಬಟ್ಟೆಗಳನ್ನು ಸ್ವಚ್ಛಗೊಳಿಸಿ ಕೊಡುತ್ತಿದ್ದಳು. ಬಾರಿಕರ ಯುವಕ ವೇಟರನಾಗಿದ್ದರಿಂದ ಸ್ವಿಟ್ಜಲ್ಯಾಂಡಿನ ಯುವತಿಯ ಪರಿಚಯವಾಯಿತು. ನಂತರ ಅವರು ಮದುವೆಯಾಗಿ ಹೋದರು. ಮದುವೆಗೆ ಮುನ್ನ ಆತನ ಆರ್ಥಿಕ ಸ್ಥಿತಿ ಉತ್ತಮವಾಗಿರಲಿಲ್ಲವೆಂದು ಅವನ ಸ್ನೇಹಿತರು ಹೇಳುತ್ತಾರೆ. ಅಂತರ್‌ಜಾತಿ ವಿವಾಹಗಳ ಬಗ್ಗೆ ಸ್ಥಳೀಯರಲ್ಲಿ ಅಸಮಾಧಾನವೇನೂ ಇರುವಂತೆ ಕಂಡುಬರುವುದಿಲ್ಲ. ವಿದೇಶಿಯರನ್ನು ಮದುವೆಯಾದ ಹಿಂದುಳಿದ ಕುಟುಂಬಗಳು ಆರ್ಥಿಕವಾಗಿ, ಸಾಮಾಜಿಕವಾಗಿ ದುರ್ಬಲವಾಗಿದ್ದವು. ಅವು ಇಂದು ಆರ್ಥಿಕವಾಗಿ ಉತ್ತಮ ಸ್ಥಿತಿಯಲ್ಲಿವೆ. ವಿದೇಶಿಯರನ್ನು ಮದುವೆಯಾಗಿರುವುದರಿಂದ ನಮಗೆ ಆರ್ಥಿಕವಾಗಿ ಸಹಾಯವಾಗಿದೆ. ಈ ಮೂಲಕ ತಮ್ಮ

[illegible]

[illegible]

ಕುಟುಂಬಗಳು ಅಭಿವೃದ್ಧಿ ಹೊಂದಿವೆ ಎಂದು ಅಂತರ್‌ಜಾತಿ ವಿವಾಹವಾದ ಕುಟುಂಬಗಳು ಅಭಿಪ್ರಾಯ ಪಡುತ್ತವೆ.

ಸ್ಥಳೀಯರಲ್ಲಿ 11 ಅಂತರ್‌ಜಾತಿ ವಿವಾಹಗಳಾಗಿವೆ. ರಜಪೂತ್ ಜಾತಿಯ ಇಬ್ಬರು ಯುವಕರು ಕ್ಷತ್ರಿಯ ಮತ್ತು ವಡ್ಡರ ಜನಾಂಗದ ಯುವತಿಯರನ್ನು ಮದುವೆಯಾಗಿದ್ದಾರೆ. ವಡ್ಡರ, ನಾಯಕರ, ಕೀಳ್ಳೆಕ್ಯಾತರ ಮತ್ತು ತಮಿಳ(ಬೋವಿ) ತಲಾ ಒಬ್ಬೊಬ್ಬ ಯುವಕರು ನಾಲ್ಕು ಜನ ಗೋರ್ಖ(ಕ್ಷತ್ರಿಯ) ಹುಡುಗಿಯರನ್ನು ಮದುವೆಯಾಗಿದ್ದಾರೆ. ಇದರಲ್ಲಿ ಮೂರು ಜನ ಗೋರ್ಖ ಹುಡುಗಿಯರು ಖಾಸ ಅಕ್ಕತಂಗಿಯರೆ ಆಗಿರುವುದೊಂದು ವಿಶೇಷವಾಗಿದೆ. ಮೂರು ಜನ ಅಕ್ಕತಂಗಿಯರ ಅಂತರ್‌ಜಾತಿಯ ವಿವಾಹಗಳಲ್ಲಿ ಇಬ್ಬರದು ಸುಖ ಸಂಸಾರವಾಗಿದ್ದರೆ, ಒಬ್ಬಳದು ವಿವಾಹ ವಿಚ್ಛೇದನವಾಗಿದೆ. ಈ ಯುವತಿ ಗ್ರಂಥಾಲಯದ ಅರೆಕಾಲಿಕ ಉದ್ಯೋಗಿಯಾಗಿದ್ದಾಳೆ. ಮತ್ತೊಬ್ಬ ಗೋರ್ಖ ಯುವತಿ ಅಂಗನವಾಡಿ ಕಾರ್ಯಕರ್ತೆಯಾಗಿದ್ದಾಳೆ. ದೇವಾಂಗ ಮತ್ತು ಜೈನ ಯುವಕರಿಬ್ಬರು ನಾಯ್ಡು ಹುಡುಗಿಯರನ್ನು ಮದುವೆಯಾಗಿದ್ದಾರೆ. ಇದರಲ್ಲಿ ದೇವಾಂಗ ಜನಾಂಗದ ಯುವಕ ಅಪಘಾತದಲ್ಲಿ ಮೃತಪಟ್ಟಿದ್ದರಿಂದ, ಆ ಯುವತಿ ತಂದೆಯ ಆಶ್ರಯದಲ್ಲಿ ಶಿಕ್ಷಣ ತರಬೇತಿ ಮುಗಿಸಿಕೊಂಡು, ಶಿಕ್ಷಕಳಾಗಿ ನೇಮಕಾತಿಗಾಗಿ ಕಾಯುತ್ತಿದ್ದಾಳೆ. ಕಿಳ್ಳೆಕ್ಯಾತರ ಮತ್ತೊಬ್ಬ ಯುವಕ ನಾಯಕ ಜನಾಂಗದ ಯುವತಿಯನ್ನು ಮದುವೆಯಾಗಿದ್ದು, ಅಟೋ ಇಟ್ಟುಕೊಂಡು ಜೀವನ ಸಾಗಿಸುತ್ತಿದ್ದಾನೆ. ಬ್ರಾಹ್ಮಣರ ಒಬ್ಬ ಯುವತಿ ಮುಸ್ಲಿಂ ಜನಾಂಗದ ಯುವಕನನ್ನು, ಬ್ರಾಹ್ಮಣರ ಯುವಕ ಬಾರಿಕರ ಹುಡುಗಿಯನ್ನು ಮದುವೆಯಾಗಿದ್ದಾರೆ. ಮುಸ್ಲಿಂ ಯುವಕನನ್ನು ಮದುವೆಯಾದ ಬ್ರಾಹ್ಮಣ ಯುವತಿಯ ತಂದೆ-ತಾಯಿಗಳು ಊರುಬಿಟ್ಟು ಬೇರೆ ಕಡೆ ವಲಸೆ ಹೋಗಿದ್ದಾರೆ. ಅವರು ನಡೆಸುತ್ತಿದ್ದ ಅತಿಥಿ ಗೃಹವನ್ನು ಯುವತಿ ಮತ್ತು ಮುಸ್ಲಿಂ ಯುವಕ ಮುಂದುವರೆಸಿಕೊಂಡು ಹೋಗುತ್ತಿದ್ದಾರೆ. ಮುಸ್ಲಿಂ ಯುವಕ ಪ್ರಾಥಮಿಕ ಶಾಲೆಯ ಶಿಕ್ಷಕನಾಗಿದ್ದಾನೆ. ಮದುವೆಯಾಗಿರುವ ಲಿಂಗಾಯತ ಯುವಕನೊಬ್ಬ ಬ್ರಾಹ್ಮಣ ಯುವ ವಿಧವೆಯನ್ನು ಮದುವೆಯಾಗಿ ಎರಡನೆಯ ಕುಟುಂಬ ಹೊಂದಿದ್ದಾನೆ. ಇನ್ನೊಬ್ಬ ಮುಸ್ಲಿಂ ಯುವಕ ಹರಿಜನ ಯುವತಿಯನ್ನು ಮದುವೆಯಾಗಿದ್ದಾನೆ. ಹಂಪೆಯ ಗ್ರಾಮದಲ್ಲಿ ಬಹುತೇಕ ಜಾತಿಗಳಲ್ಲಿ ಅಂತರ್‌ಜಾತಿಯ ಮದುವೆ ಕುರಿತ ನಿಯಮ ಸಡಿಲಗೊಂಡಿರುವುದು ಕಂಡುಬರುತ್ತದೆ. ಇವುಗಳಿಗೆ ವಿದೇಶಿ ಪ್ರವಾಸಿಗರ ಒಡನಾಟ, ಅವರ ಸಾಮಾಜಿಕ ವರ್ತನೆ ಹಾಗೂ ಸ್ಥಳೀಯರಲ್ಲಿ ಆದ ಸಾಮಾಜಿಕ ಬದಲಾವಣೆಗೆ ಕಾರಣವಾಗಿರಬಹುದು. ಜತೆಗೆ ಶಿಕ್ಷಣ, ಮಹಿಳೆಯರ ಸ್ಥಾನಮಾನ, ಆರ್ಥಿಕ ಸ್ವಾತಂತ್ರ ಇತ್ಯಾದಿಗಳಲ್ಲಿನ ಪರಿವರ್ತನೆ ಕೂಡ ಕಾರಣವಾಗಿರಬಹುದು.

ಸಮಾಜದಲ್ಲಿನ ಏಣಿಶ್ರೇಣಿ

ಒಂದು ಕಡೆ ಸರ್ಕಾರದ ಕಾಯಿದೆಗಳು ಮತ್ತೊಂದು ಕಡೆ ನಿಮ್ನ ವರ್ಗಗಳ ಹೋರಾಟಗಳು ಸಮಾಜದಲ್ಲಿರುವ ಏಣಿಶ್ರೇಣಿಗಳನ್ನು ಬದಲಾಯಿಸುವಲ್ಲಿ ತಕ್ಕಮಟ್ಟಿನ ಪಾತ್ರವಹಿಸಿವೆ. ಸಮಾಜದ

ಉನ್ನತ ಸ್ಥಾನದಲ್ಲಿರುವವರು ತಮ್ಮ ಉನ್ನತ ಸ್ಥಾನದಲ್ಲಿ ಉಳಿಯಲು ಪ್ರಯತ್ನಿಸಬೇಕಾಗಿದೆ. ಸಮಾಜದ ಕೆಳಸ್ತರದಲ್ಲಿರುವವರು ತಮ್ಮ ಕೊನೆಯ ಸ್ಥಾನದಿಂದ ಮೇಲೆ ಏರಲು ಎಲ್ಲ ರೀತಿಯ ಪ್ರಯತ್ನ ನಡೆಸಿದ್ದಾರೆ. ಕೆಲವು ಕಡೆ ಮತ್ತು ಹಲವು ಸಂದರ್ಭಗಳಲ್ಲಿ ತಮ್ಮ ಪ್ರಯತ್ನದಲ್ಲಿ ಯಶಸ್ಸನ್ನು ಕಂಡಿದ್ದಾರೆ. ಪ್ರಸ್ತುತ ಸಂದರ್ಭದಲ್ಲಿ ಸರ್ಕಾರಗಳು ನಿಮ್ನ ವರ್ಗಗಳ ಅಭಿವೃದ್ಧಿಗಾಗಿ ಹಲವಾರು ಯೋಜನೆಗಳನ್ನು ಹಮ್ಮಿಕೊಂಡಿದೆ. ನಿಮ್ನ ವರ್ಗಗಳು ಅಭಿವೃದ್ಧಿ ಹೊಂದುವುದರಿಂದ ಸಮಾಜದಲ್ಲಿನ ಮೇಲ್‌ವರ್ಗಗಳ ಯಜಮಾನಿಕೆ ಕಡಿಮೆಯಾಗಬಹುದು ಎನ್ನುವ ಗ್ರಹಿಕೆ ಈ ಯೋಜನೆಗಳ ಹಿಂದಿದೆ. ಹಿಂದುಳಿದ ವರ್ಗ, ಪರಿಶಿಷ್ಟ ಜಾತಿ/ಪಂಗಡಗಳನ್ನು ಗುರುತಿಸಿ, ಅವುಗಳ ಆರ್ಥಿಕ, ರಾಜಕೀಯ ಮತ್ತು ಸಾಮಾಜಿಕ ಅಭಿವೃದ್ಧಿಗಾಗಿ ಹಲವಾರು ಯೋಜನೆ ಮತ್ತು ಕಾರ್ಯಕ್ರಮಗಳನ್ನು ಸರಕಾರ ರೂಪಿಸಿದೆ. ಈ ಎಲ್ಲಾ ಯೋಜನೆ ಮತ್ತು ಕಾರ್ಯಕ್ರಮಗಳು ಅನುಷ್ಠಾನಗೊಂಡು ಸಮಾಜ ಮೂಲಭೂತವಾಗಿ ಪರಿವರ್ತನೆಗೊಳ್ಳದಿರಬಹುದು. ಆದರೆ ಸಾಂಪ್ರದಾಯಿಕ ಸಮಾಜದ ಹಲವಾರು ಕಟ್ಟುಪಾಡುಗಳು ಸಡಿಲಗೊಂಡು ಸಮಾಜದ ಕೆಳಸ್ತರದ ಜನರ ಬದುಕು ಸ್ವಲ್ಪ ಮಟ್ಟಿಗೆ ಉತ್ತಮವಾದರೂ ಅದೊಂದು ದೊಡ್ಡ ಸಾಧನೆಯೆ ಆಗಬಹುದು.

ಹಂಪೆ ಗ್ರಾಮದಲ್ಲಿ ಒಟ್ಟು 24 ಜಾತಿಗಳಿವೆ. ಅವುಗಳನ್ನು ಈ ಅಧ್ಯಯನದ ಉದ್ದೇಶಕ್ಕಾಗಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಅಲ್ಪಸಂಖ್ಯಾತರು ಮತ್ತು ಇತರರೆಂದು ವಿಂಗಡಿಸಿಕೊಳ್ಳಲಾಗಿದೆ. ಪರಿಶಿಷ್ಟ ಜಾತಿಯಲ್ಲಿ ವಡ್ಡರು, ಲಂಬಾಣಿಗಳು, ಹರಿಜನ, ತಮಿಳರು(ಬೋವಿ) ಕೊರವರು ಮತ್ತು ಕಿಳ್ಳೆಕ್ಯಾತರು ಬರುತ್ತಾರೆ. ಪರಿಶಿಷ್ಟ ಪಂಗಡದಲ್ಲಿ ನಾಯಕ(ವಾಲ್ಮೀಕಿ) ಜನಾಂಗದವರಿದ್ದಾರೆ. ಮುಸ್ಲಿಂರು ಮತ್ತು ಜೈನರನ್ನು ಅಲ್ಪಸಂಖ್ಯಾತರ ಪಟ್ಟಿಯಲ್ಲಿ ಸೇರಿಸಲಾಗಿದೆ. ಕುರುಬರು, ಬಾರಿಕರು, ದೇವಾಂಗದವರು, ಈಡಿಗರು, ಉಪ್ಪಾರ, ಅಗಸರು, ಕ್ಷೌರಿಕರು, ಬಳಿಗಾರರು, ನಾಯ್ಡು, ವೈಶ್ಯರು, ಸಿಂಗ್‌ರು, ರಾಜರು, ಲಿಂಗಾಯಿತರು, ಬ್ರಾಹ್ಮಣರು ಮತ್ತು ವಿಶ್ವಕರ್ಮ ಜಾತಿ ಜನರನ್ನು ಇತರರ ಪಂಗಡದಲ್ಲಿ ಸೇರಿಸಲಾಗಿದೆ. ಇತರೆ ಗ್ರಾಮಗಳಲ್ಲಿ ಕೂಡ ಈ ಮಾದರಿಯಲ್ಲಿಯೆ ಹಲವಾರು ಜಾತಿ ಪಂಗಡಗಳಿವೆ. ಪರಿಶಿಷ್ಟ ಜಾತಿಗಳಲ್ಲಿ ಬರುವ ವಡ್ಡರು, ಲಂಬಾಣಿ, ಹರಿಜನ, ಕೊರವರು ಸಾಮಾಜಿಕವಾಗಿ ಸಮಾನರಲ್ಲ. ಆದರೆ ಹಂಪೆಯಲ್ಲಿ ಎಲ್ಲಾ ಜಾತಿಗಳಲ್ಲಿ ಸಾಮಾಜಿಕವಾಗಿ ಸಮಾನತೆಯನ್ನು ಕಾಣುತ್ತೇವೆ. ಕುರುಬರು ಮತ್ತು ಅಗಸರು ಸರ್ಕಾರದ ನೀತಿಯ ಪ್ರಕಾರ ಹಿಂದುಳಿದ ಗುಂಪಿನಲ್ಲಿ ಬರುತ್ತಾರೆ. ಸಮಾಜದಲ್ಲಿ ಕುರುಬರು ಅಗಸರಿಗಿಂತ ಮೇಲುಸ್ಥಾನದಲ್ಲಿ ಇದ್ದಾರೆ. ಮೇಲ್ಜಾತಿಯವರ ಮದುವೆ, ಹಬ್ಬ, ಜಾತ್ರೆ ಇನ್ನಿತರ ಸಂತೋಷ ಕೂಟಗಳಲ್ಲಿ ಕೆಳ ಜಾತಿಯವರು ಭಾಗವಹಿಸುತ್ತಾರೆ. ಆದರೆ ಅವರ ಭಾಗವಹಿಸುವಿಕೆ ತುಂಬಾ ಸೀಮಿತವಾದುದು. ಅವರು ಮನೆಯ ಹೊರಗಿನ ಕೆಲಸಗಳಲ್ಲಿ ತೊಡಗಬೇಕು. ಸೂತಕಗಳಾದ ಅಂತ್ಯಕ್ರಿಯೆ ಇತ್ಯಾದಿಗಳಲ್ಲಿ ಲಿಂಗಾಯಿತರ ಅಂತ್ಯಕ್ರಿಯೆಯಲ್ಲಿ ಕುಣಿ(ಹೆಣ ಹಾಕುವ ಗುಂಡಿ)ಯನ್ನು ವಡ್ಡರು, ನಾಯಕರು ತೋಡಿದರೆ, ವಡ್ಡ,

ನಾಯಕ, ಕುರುಬ ಮೊದಲಾದ ಜಾತಿಗಳ ಅಂತ್ಯಕ್ರಿಯೆಯ ಕುಣಿಯನ್ನು ಹರಿಜನರು ತೆಗೆಯುತ್ತಾರೆ. ಆದರೆ ಹರಿಜನ ಅಂತ್ಯಕ್ರಿಯೆಯಲ್ಲಿ ಹರಿಜನರು ಮಾತ್ರ ಪಾಲ್ಗೊಳ್ಳುತ್ತಾರೆ. ಹೀಗೆ ಹಂಪೆಯ ಸುತ್ತಮುತ್ತಲ ಹಳ್ಳಿಗಳಲ್ಲಿ ಹಿಂದಿನ ಜಾತಿ ವ್ಯವಸ್ಥೆಯ ಹಲವಾರು ನೀತಿ ನಿಯಮಗಳು ಇಂದು ಕೂಡ ಮುಂದುವರೆದುಕೊಂಡು ಬಂದಿವೆ. ಲಿಂಗಾಯಿತರು ಕೇಳಜಾತಿಯವರ ಮನೆಯಲ್ಲಿ ನೀರು ಕುಡಿಯುವುದಿಲ್ಲ. ಹೋಟೆಲ್‌ಗಳಲ್ಲಿ ಹರಿಜನರಿಗೆ ಇನ್ನೂ ಪ್ರವೇಶ ಇಲ್ಲ ಹಾಗೂ ದೇವಸ್ಥಾನ ಗಳಲ್ಲಿಯು ಪ್ರವೇಶ ಇಲ್ಲ.[30]

ಜಾತಿಯ ಸ್ಥಾನಮಾನ ಕುರಿತು ಮೇಲೆ ನೀಡಿದ ಮಾಹಿತಿ ಹಂಪೆಯ ಸುತ್ತಮುತ್ತ ಇರುವ ಹಳ್ಳಿಗಳಿಗೆ ಅನ್ವಯಿಸುತ್ತದೆ. ಆದರೆ ಇತರ ಗ್ರಾಮಗಳಲ್ಲಿ ಕಾಣುವ ಈ ತೆರನಾದ ಜಾತಿ ಸಂಬಂಧಗಳು ಹಂಪೆ ಗ್ರಾಮದಲ್ಲಿ ಕಾಣವುದಿಲ್ಲ. ಜಾತಿ ಮತ್ತು ಮನೆಯೊಳಗಿನ ಪ್ರವೇಶ ಸಂಬಂಧ ಹಂಪೆಯಲ್ಲಿ ಹೆಚ್ಚು ಕಡಿಮೆ ಇಲ್ಲವೆನ್ನುವಷ್ಟು ಕಡಿಮೆ ಆಗಿದೆ. ಕೆಳಜಾತಿಗೆ ಸೇರಿದವರು ಮೇಲು ಜಾತಿಗೆ ಸೇರಿದ ಜನರ ಮನೆಗೆ ಯಾವುದೆ ಸಂಕೋಚವಿಲ್ಲದೆ ಹೋಗಬಹುದು. ಮದುವೆ, ನಾಮಕರಣ ಇತ್ಯಾದಿ ಸಂತೋಷ ಕೂಟಗಳಲ್ಲಿ ಜಾತಿ ಜನರ ಜತೆ ಹಂಪೆಯ ಇತರರು ಭಾಗವಹಿಸುತ್ತಾರೆ. ಸೂತಕ ಕಾರ್ಯವಾದ ಅಂತ್ಯಕ್ರಿಯೆಯಲ್ಲಿ ನಾಯಕ, ವಡ್ಡ, ಹರಿಜನ, ಕುರುಬ, ಬಾರಿಕ ಇತ್ಯಾದಿ ಜಾತಿಗಳವರು ಭಾಗವಹಿಸಿ ಅಂತ್ಯಕ್ರಿಯೆಯ ಗುಂಡಿಯನ್ನು ತೆಗೆಯುತ್ತಾರೆ. ಹರಿಜನರ ಅಂತ್ಯಕ್ರಿಯೆಯಲ್ಲಿ ಪರಿಚಿತ ಎಲ್ಲಾ ಜಾತಿಯವರು ಭಾಗವಹಿಸುತ್ತಿರುವುದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ತಿಳಿದುಬರುತ್ತದೆ. ಬ್ರಾಹ್ಮಣ, ವೈಶ್ಯ, ಜೈನ, ಸಿಂಗ್ ಜಾತಿಗಳ ಸಂತೋಷ ಕೂಟದಲ್ಲಿ ಎಲ್ಲಾ ಜಾತಿಯ ಜನರು ಭಾಗವಹಿಸುತ್ತಾರೆ. ಆದರೆ ಇವರು ಅಂತ್ಯಕ್ರಿಯೆಯನ್ನು ಸುಡುವ ಮೂಲಕ ಮಾಡಿಕೊಳ್ಳುವುದರಿಂದ, ಸಂಬಂಧ ಪಟ್ಟ ಜಾತಿಯವರೆ ಮಾಡಿಕೊಳ್ಳುತ್ತಾರೆ. ಕೆಲವೊಂದು ಸಂದರ್ಭದಲ್ಲಿ ಮಾತ್ರ ಇತರರನ್ನು ಅವಲಂಬಿಸುವುದಿದೆ. ಇನ್ನೂ ಮುಸ್ಲಿಂ ಧರ್ಮದವರು ಅಂತ್ಯಕ್ರಿಯೆಯಲ್ಲಿ ಅವರ ಧರ್ಮದವರನ್ನು ಮಾತ್ರ ತೊಡಗಿಸಿಕೊಳ್ಳುತ್ತಾರೆ. ಹಂಪೆ ಪ್ರವಾಸೋದ್ಯಮದ ಆರ್ಥಿಕ ಚಟುವಟಿಕೆಗಳ ಪ್ರಭಾವವು ಶಿಕ್ಷಣ, ಉದ್ಯೋಗ, ಆದಾಯ, ಸಂಪತ್ತುಗಳನ್ನು ಹೆಚ್ಚಿಸುತ್ತದೆ, ಅಭಿವೃದ್ಧಿಯು ಸಾಮಾಜಿಕ ಸಮಾನತೆಯನ್ನು ಅಭಿವ್ಯಕ್ತಗೊಳಿಸುತ್ತದೆ ಎನ್ನಬಹುದು. ಹಂಪೆಯಲ್ಲಿನ ಬ್ರಾಹ್ಮಣರು ಇತರ ಗ್ರಾಮಗಳಿಗಿಂತ ತಕ್ಕಮಟ್ಟಿಗೆ ಬದಲಾಗಿದ್ದಾರೆ. ಆದರೆ ಬ್ರಾಹ್ಮಣರಲ್ಲಿ ಮಡಿವಂತಿಕೆ ಇತ್ಯಾದಿಗಳು ಇನ್ನೂ ಜೀವಂತವಾಗಿವೆ. ಹಂಪೆಯ ಸಾಂಸ್ಕೃತಿಕ ಚಟುವಟಿಕೆಗಳಾದ ಜಾತ್ರೆ, ಆಚಾರಣೆ ಇತ್ಯಾದಿಗಳು ಬ್ರಾಹ್ಮಣರ ಪಾರುಪತ್ಯ ಮತ್ತು ಮುಂದಾಳತ್ವದಲ್ಲಿಯೆ ಜರುಗುತ್ತವೆ. ಲಿಂಗಾಯತ ಕೋಮಿನವರನ್ನೊಳಗೊಂಡು ಉಳಿದ ಎಲ್ಲಾ ಜಾತಿಗಳವರು ಬ್ರಾಹ್ಮಣರಿಗೆ ಸಹಾಯಕರಾಗಿ ಕಾರ್ಯನಿರ್ವಹಿಸುತ್ತಾರೆ. ಉತ್ಸವ, ಜಾತ್ರೆಗಳಲ್ಲಿ, ಉತ್ಸವ ಮೂರ್ತಿಗಳನ್ನು ಹೊರುವುದು, ಜಾತ್ರೆಗಳಲ್ಲಿ ರಥಗಳನ್ನು ಕಟ್ಟಿ, ಶೃಂಗರಿಸಿ, ಎಳೆದೊಯ್ಯುವುದು. ರಥೋತ್ಸವ ಮುಗಿದ ನಂತರ

ಬಿಚ್ಚಿ ಅದನ್ನು ಮೊದಲಿನ ಸ್ಥಳದಲ್ಲಿ ನಿಲ್ಲಿಸುವುದು. ಇಂಥ ಎಲ್ಲಾ ಕೆಲಸಗಳನ್ನು ನಾಯಕರು, ವಡ್ಡರು, ಲಂಬಾಣಿಗಳು, ಬಾರಿಕರು, ಕುರುಬರು ಇತ್ಯಾದಿ ಕೋಮಿನವರು ಮಾಡುತ್ತಾರೆ. ಹಂಪೆಯಲ್ಲಿನ ದೇವಸ್ಥಾನಗಳಲ್ಲಿ ಪೂಜಾರಿಗಳೆಲ್ಲರೂ ಬ್ರಾಹ್ಮಣರೆ ಇದ್ದಾರೆ. ವೀರಭದ್ರ ದೇವಸ್ಥಾನದ ಪೌರೋಹಿತ್ಯವನ್ನು ಮಾತ್ರ ಜಂಗಮರು ಮಾಡುತ್ತಿದ್ದಾರೆ. ಹಂಪೆಯಲ್ಲಿ ನಿಮ್ನ ವರ್ಗದ ಜನರ ದೇವರುಗಳಾದ ಮಾರೆಮ್ಮ, ಕೆಂಚಮ್ಮ, ಗಾಳೆಮ್ಮ, ಹನುಮಂತ, ಭೈರವೇಶ್ವರ, ಬೀರಲಿಂಗೇಶ್ವರ, ಕಣಿವಿರಾಯ ಮುಂತಾದ ಗುಡಿಗಳಿಲ್ಲ. ಹಾಗಾಗಿ ನಿಮ್ನ ವರ್ಗದವರು ಪೂಜಾರಿಗಳಾಗಿಲ್ಲ. ಆದ್ದರಿಂದ ಬ್ರಾಹ್ಮಣರೆ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಹೆಚ್ಚಿನ ಸ್ಥಾನಗಳನ್ನು ಪಡೆದುಕೊಳ್ಳಲು ಅನುಕೂಲವಾಗಿದೆ ಎನ್ನಬಹುದು.

ಕುಟುಂಬದಲ್ಲಿನ ಬದಲಾವಣೆ

ಒಂದೇ ಕುಟುಂಬದ ಎರಡು ಮೂರು ತಲೆಮಾರಿಗೆ ಸೇರಿದವರು ತಮ್ಮ ಹೆಂಡತಿ ಮಕ್ಕಳೊಂದಿಗೆ ಒಂದೆ ಸೂರಿನ ಅಡಿಯಲ್ಲಿ ಬದುಕುವುದನ್ನು ಅವಿಭಕ್ತ ಕುಟುಂಬ ವ್ಯವಸ್ಥೆ ಎಂದು ವ್ಯಾಖ್ಯಾನಿಸಲಾಗುತ್ತದೆ. ಗಂಡ ಹೆಂಡತಿ ತಮ್ಮ ಮಕ್ಕಳೊಂದಿಗೆ ವಾಸಿಸುವ ಕುಟುಂಬಗಳನ್ನು ವಿಭಕ್ತ ಕುಟುಂಬಗಳೆಂದು ಗುರುತಿಸಲಾಗುತ್ತದೆ. ಸಾಮಾನ್ಯವಾಗಿ ಈ ಕುಟುಂಬಗಳ ಸದಸ್ಯರ ಸಂಖ್ಯೆ ಕಡಿಮೆ ಇರುತ್ತದೆ. ಅವಿಭಕ್ತ ಕುಟುಂಬಗಳು ಕೃಷಿ ಆಧಾರಿತ ಸಮಾಜದಲ್ಲಿ ಹೆಚ್ಚು ಇರುವುದು ಕಂಡುಬರುತ್ತದೆ. ಕೃಷಿಯಲ್ಲಿ ತೊಡಗಿಸಿಕೊಳ್ಳಲು ಇದರಿಂದ ಅನುಕೂಲವಾಗುತ್ತದೆನ್ನುವ ನಂಬುಗೆಯು ಇನ್ನೂ ಗ್ರಾಮೀಣ ಪ್ರದೇಶದಲ್ಲಿ ಇದೆ. ಇಸಬೆಲ್ ಅಂಡ್ ಡೆವಿಡ್ ಕ್ರುಕ್ ತಮ್ಮ ರೆವಲ್ಯೂಶನ್ ಇನ್ ಎ ಚಿನೀಸ್ ವಿಲೇಜ್ ಎಂಬ ಅಧ್ಯಯನದಲ್ಲಿ ಮೇಲಿನ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.[31] ಅವಿಭಕ್ತ ಕುಟುಂಬದಲ್ಲಿ ಹಿರಿಯ ವ್ಯಕ್ತಿ ಮುಖ್ಯಸ್ಥನಾಗಿದ್ದು ಈತ ಇನ್ನುಳಿದ ಸದಸ್ಯರ ಬೇಕು ಬೇಡಗಳಿಗೆ ಜವಾಬ್ದಾರನಾಗಿರುತ್ತಾನೆ. ಸದಸ್ಯರ ಆಹಾರ, ಬಟ್ಟೆ, ಆರೋಗ್ಯ ಇತ್ಯಾದಿಗಳನ್ನು ಒದಗಿಸಿಕೊಡುವುದು ಹಿರಿಯ ಮುಖ್ಯಸ್ಥರ ಜವಾಬ್ದಾರಿಯಾಗಿರುತ್ತದೆ. ಸದಸ್ಯರು ಹಿರಿಯರ ಅಣತಿಯಂತೆ ಕೆಲಸದಲ್ಲಿ ತೊಡಗಿ ಕುಟುಂಬದ ಆದಾಯ ಗಳಿಕೆಯಲ್ಲಿ ಭಾಗವಹಿಸಬೇಕು. ಕುಟುಂಬದ ಎಲ್ಲಾ ಸದಸ್ಯರು ಹಿರಿಯ ಮುಖ್ಯಸ್ಥನ ಮಾರ್ಗದರ್ಶನದಲ್ಲಿ ನಡೆಯುತ್ತಿರುತ್ತಾರೆ. ಇಂತಹ ಕುಟುಂಬಗಳು ಪಾಶ್ಚಾತ್ಯ ರಾಷ್ಟ್ರಗಳಲ್ಲಿಯೂ ಇದ್ದವು. ಇಟಲಿ, ಫ್ರಾನ್ಸ್, ಹಾಲೆಂಡ್ ಇತ್ಯಾದಿ ರಾಷ್ಟ್ರಗಳಿಂದ ಬಂದ ವಿದೇಶಿ ಪ್ರವಾಸಿಗರು ಸಂದರ್ಶನದಲ್ಲಿ ಅವಿಭಕ್ತ ಕುಟುಂಬ ಕುರಿತು ತಿಳಿಸಿದ್ದಾರೆ. ಈ ಕುಟುಂಬಗಳ ಸಂಖ್ಯೆ ಕೈಗಾರಿಕಾ ಕ್ರಾಂತಿಯ ನಂತರ ಇಳಿಮುಖವಾಯಿತೆನ್ನುತ್ತಾರೆ. ಅವಿಭಕ್ತ ಕುಟುಂಬಗಳ ಸಂಖ್ಯೆ ಕ್ಷೀಣಗೊಳ್ಳುತ್ತಿರುವುದಕ್ಕೆ ಆರ್ಥಿಕ ಅಭಿವೃದ್ಧಿ ಕಾರಣವೆನ್ನಬಹುದು. ಈ ಆರ್ಥಿಕ ಪ್ರಗತಿ ಆಧುನಿಕ ಕೃಷಿ, ಕೈಗಾರೀಕರಣ ಅಥವಾ ಸೇವಾವಲಯದಿಂದ ಆಗಿರಬಹುದು. ಹೆಚ್ಚಿನ ಆದಾಯ ಗಳಿಸುವ

ಅವಕಾಶಗಳು ಹೆಚ್ಚು ಒದಗಿಬಂದಂತೆ ಕುಟುಂಬದ ಯುವಕರು ಸ್ವತಂತ್ರವಾಗಿರಲು ಬಯಸುವುದು ಕಂಡುಬರುತ್ತದೆ. ಅವರು ಕುಟುಂಬದ ಹಿರಿಯರ ಮಾರ್ಗದರ್ಶನದಲ್ಲಿ ಬದುಕಲು ಇಷ್ಟಪಡುವುದಿಲ್ಲ. ಸ್ವತಂತ್ರ ನಿರ್ಧಾರ ಮತ್ತು ಸ್ವಾವಲಂಬನೆಯ ಬದುಕನ್ನು ಅರಸಿ ಅವಿಭಕ್ತ ಕುಟುಂಬದಿಂದ ಹೊರಗಡೆ ಬಂದು ನೆಲೆಸುವುದಕ್ಕೆ ಇಷ್ಟಪಡುತ್ತಾರೆ.

ಹಂಪೆಯಲ್ಲಿ 1991ರಲ್ಲಿ 360 ಕುಟುಂಬಗಳಿದ್ದವು. ಒಂದು ಕುಟುಂಬದಲ್ಲಿ 1-5 ಜನ ಸದಸ್ಯರಿರುವ ಕುಟುಂಬಗಳ ಸಂಖ್ಯೆ 129 (35.88) ಕುಟುಂಬದಲ್ಲಿ 6-7ಜನ ಸದಸ್ಯರಿರುವ ಕುಟುಂಬಗಳ ಸಂಖ್ಯೆ 107 (26.69), 8-10ಜನ ಸದಸ್ಯರಿರುವ ಕುಟುಂಬಗಳ ಸಂಖ್ಯೆ 73(20.20) ಹಾಗೂ ಕುಟುಂಬದಲ್ಲಿ 10ರ ಮೇಲ್ಪಟ್ಟು ಸದಸ್ಯರಿರುವ ಕುಟುಂಬಗಳ ಸಂಖ್ಯೆ 51 (14.23). 2001ರ ಅವಧಿಯಲ್ಲಿ ಹಂಪೆಯಲ್ಲಿರುವ ಒಟ್ಟು ಕುಟುಂಬಗಳ ಸಂಖ್ಯೆ 485. ಒಂದು ಕುಟುಂಬದಲ್ಲಿ 1-5ಜನ ಸದಸ್ಯರಿರುವ ಕುಟುಂಬಗಳ ಸಂಖ್ಯೆ 362(74.64), 6-7ಜನ ಸದಸ್ಯರಿರುವ ಕುಟುಂಬಗಳ ಸಂಖ್ಯೆ 98(20.20), 8-10ಜನ ಸದಸ್ಯರಿರುವ ಕುಟುಂಬಗಳ ಸಂಖ್ಯೆ 15 (3.09) ಹಾಗೂ ಕುಟುಂಬದಲ್ಲಿ 10ರ ಮೇಲ್ಪಟ್ಟು ಸದಸ್ಯರಿರುವ ಕುಟುಂಬಗಳ ಸಂಖ್ಯೆ 10 (2.07) ಇವೆ. ಈ ಅಂಕಿ-ಅಂಶಗಳಿಂದ ತಿಳಿದುಬರುವುದೇನೆಂದರೆ ಕುಟುಂಬದಲ್ಲಿ 1-5ಜನ ಸದಸ್ಯರಿರುವ ಕುಟುಂಬಗಳ ಸಂಖ್ಯೆ ಗಣನೀಯವಾಗಿ ಹೆಚ್ಚಿರುವುದು ಮತ್ತು ಕುಟುಂಬದಲ್ಲಿ 6-10 ಜನ ಸದಸ್ಯರಿರುವ ಕುಟುಂಬಗಳ ಸಂಖ್ಯೆ ಇಳಿಮುಖವಾಗಿದೆ (ಕೋಷ್ಟಕ-52). ಹಂಪೆಯಲ್ಲಿ 1991ರ ಸಮಯದಲ್ಲಿ 230(64.12)ಅವಿಭಕ್ತಕುಟುಂಬಗಳು ಮತ್ತು 465 ವಿಭಕ್ತ ಕುಟುಂಬಗಳು 130 (35.88) ಇದ್ದವು. ಸುಮಾರು ಹತ್ತು ವರ್ಷದ ಅಂತರದಲ್ಲಿ ಅವಿಭಕ್ತ ಕುಟುಂಬಗಳ ಸಂಖ್ಯೆ ಹಂಪೆಯಲ್ಲಿ ಗಣನೀಯವಾಗಿ ಕಡಿಮೆ ಆಗಿದೆ. ಹಂಪೆಯಲ್ಲಿ 2001ರಲ್ಲಿರುವ ಅವಿಭಕ್ತ ಕುಟುಂಬಗಳ ಸಂಖ್ಯೆ 123(23.36) ಮತ್ತು ವಿಭಕ್ತ ಕುಟುಂಗಳ ಸಂಖ್ಯೆ 362(74.64)ಕ್ಕೆ ಏರಿದೆ(ಕೋಷ್ಟಕ-51). ಹಂಪೆಯ ಗ್ರಾಮದಲ್ಲಿ ಪ್ರವಾಸೋದ್ಯಮವು ವಿಫಲ ಉದ್ಯೋಗದ ಅವಕಾಶಗಳನ್ನು ಒದಗಿಸಿದೆ. ಇವು ಆದಾಯ ವೃದ್ಧಿಸಿಕೊಳ್ಳಲು ಸಹಕಾರಿಯಾಗಿದೆ. ಇದರಿಂದ ಸ್ವಾವಲಂಬಿತ ಬದುಕು ಹೆಚ್ಚಾಗುತ್ತಿದೆ. ಯುವಕರು ಅವಿಭಕ್ತ ಕುಟುಂಬದಿಂದ ಹೊರಗೆ ಬಂದು ಬೇರೆ ಮನೆ ಮಾಡಿ ಅಥವಾ ಅದೆ ಸೂರಿನ ಅಡಿಯಲ್ಲಿನ ಒಂದು ಕೊಠಡಿಯಲ್ಲಿ ಪ್ರತ್ಯೇಕವಾಗಿ ಜೀವನ ನಡೆಸುತ್ತಾರೆ. ವಿಭಕ್ತ ಕುಟುಂಬಗಳ ಯುವಕರು ಅವಿಭಕ್ತ ಕುಟುಂಬದಿಂದ ಹೊರಬರಲು ಹಲವಾರು ಕಾರಣಗಳನ್ನು ನೀಡುತ್ತಾರೆ. ಅವುಗಳಲ್ಲಿ ಕೆಲವು ಇಂತಿವೆ. ಅವಿಭಕ್ತ ಕುಟುಂಬಗಳಲ್ಲಿ ಸ್ವತಂತ್ರವಾಗಿ ನಿರ್ಧಾರಗಳನ್ನು ತೆಗೆದುಕೊಳ್ಳಲು ಆಗುವುದಿಲ್ಲ. ಒಮ್ಮತದ ಅಭಿಪ್ರಾಯಗಳು ಮೂಡುವುದಿಲ್ಲ. ಕುಟುಂಬದ ಹಿರಿಯರು, ಮುಖ್ಯಸ್ಥರು, ಸಂಪ್ರದಾಯವಾದಿಗಳಾಗಿದ್ದಾರೆ. ಅವರು ಆಧುನಿಕ ಬದಲಾವಣೆಗಳನ್ನು ಒಪ್ಪುವುದಿಲ್ಲ. ಎಲ್ಲವನ್ನು ನಿರಾಕರಿಸುತ್ತಾರೆ. ಯುವಕ ಯುವತಿಯರು ಆಧುನಿಕ ಬದಲಾವಣೆಗಳನ್ನು ಬಯಸುತ್ತಾರೆ. ಇದು ಇವರಿಬ್ಬರ ಮಧ್ಯೆ ವಿರಸ ಉಂಟಾಗಲು

ಕಾರಣವಾಗುತ್ತದೆ. ಚಿಕ್ಕ ಪುಟ್ಟ ಘಟನೆಗಳು ಭಿನ್ನಮತಕ್ಕೆ ಎಡೆಮಾಡಿಕೊಡುತ್ತವೆ. ಆ ಭಿನ್ನಮತಗಳು ಬೆಳೆದು ವಿಭಕ್ತ ಕುಟುಂಬಗಳು ಹುಟ್ಟಿಕೊಳ್ಳುತ್ತವೆ. ವಿಭಕ್ತ ಕುಟುಂಬಗಳಲ್ಲಿ ಸ್ವಂತ ನಿರ್ಧಾರಗಳಿಗೆ ಅವಕಾಶ ಇದೆ. ಇದರೊಂದಿಗೆ ಪ್ರತಿಫಲವನ್ನು ನೇರವಾಗಿ ಅನುಭವಿಸುವ ಅಧಿಕಾರವೂ ಇದೆ. ಮಾರ್ಕ್ಸ್‌ವೆಬರ್ ಗುರುತಿಸಿದ ಮೇಲ್‌ರಚನೆಯ ಅಂಶಗಳ ಹಿಡಿದು ಅಧುನಿಕ ಸಮಾಜದ ಗುಣಗಳನ್ನು ಹಿಂದಿನ ಸವಾಜದ ಗುಣಗಳಿಗೆ ಹೋಲಿಸಿ ಸಮಾಜಿಕ ಪರಿವರ್ತನೆಯ ಸಿದ್ಧಾಂತವನ್ನು ಪ್ರಾರಂಬಿಸಿದವರಲ್ಲಿ ಮುಖ್ಯವಾಗಿ ಟಾಲ್ಕಟ್ ಪಾರ್‌ಸನ್. ಇತನ ಪ್ರಕಾರ ಸಂಬಂಧ ಆಧಾರಿತ ವ್ಯವಹಾರದ ಬದಲು ಒಪ್ಪಂದ ಆಧಾರಿತ ವ್ಯವಹಾರ, ವ್ಯವಹಾರದಲ್ಲಿ ಹಣದ ಬಳಕೆ, ಅವಿಭಕ್ತ ಕುಟುಂಬಗಳು ಸಡಿಲಗೊಂಡು ವಿಭಕ್ತ ಕುಟುಂಬಗಳ ರಚನೆ, ಸಹಬಾಳ್ವೆಗಿಂತ ಸ್ಪರ್ಧಾತ್ಮಕ ಬದುಕಿಗೆ ಒತ್ತು ಸಮುದಾಯಕ್ಕಿಂತ ವ್ಯಕ್ತಿ ಪ್ರಧಾನ ವ್ಯವಸ್ಥೆಗೆ ಪ್ರಾಧಾನ್ಯತೆ - ಇವೆ ಮುಂತಾದುವುಗಳು ಆಧುನಿಕ ಸಮಾಜದ ಲಕ್ಷಣಗಳಾಗಿವೆ.[32]ಹಾಗಾಗಿ ವಿಭಕ್ತ ಕುಟುಂಬಗಳು ಹೆಚ್ಚಾಗುತ್ತಿವೆ. ಇಂತಹ ಕುಟುಂಬಗಳು ತಾವು ಗಳಿಸಿದ ಪ್ರತಿಫಲವನ್ನು ನೇರವಾಗಿ ಅನುಭವಿಸುವುದರಿಂದ ದುಡಿಮೆಯಲ್ಲಿ ಹೆಚ್ಚು ಹೆಚ್ಚು ತೊಡಗಿಸಿಕೊಂಡು ಆದಾಯವನ್ನು ಹೆಚ್ಚಿಸಿಕೊಳ್ಳಬಹುದೆಂಬ ಅಭಿಪ್ರಾಯ ಕೂಡ ಇದೆ. ಆಧುನಿಕ ಬದಲಾವಣೆಗಳು ಬದುಕಿನಲ್ಲಿ ಅಳವಡಿಸಿಕೊಳ್ಳಲು ಯುವಕರು ಇಷ್ಟಪಟ್ಟರೆ ಸಂಪ್ರದಾಯವಾದಿ ತಂದೆ-ತಾಯಿಗಳು ಇಷ್ಟ ಪಡೆಯದಿರುವುದರಿಂದ ಯುವಕರು ವಿಭಕ್ತ ಕುಟುಂಬದಲ್ಲಿ ಇರಲು ಬಯಸುತ್ತಾರೆ. ಅವಿಭಕ್ತ ಕುಟುಂಬಗಳು ಒಡೆದು ವಿಭಕ್ತ ಕುಟುಂಬಗಳಾದರೂ, ವಿಭಕ್ತ ಕುಟುಂಬಗಳು ಅವಿಭಕ್ತ ಕುಟುಂಬಗಳಿಂದ ಶಾಶ್ವತವಾಗಿ ದೂರ ಉಳಿಯುವುದಿಲ್ಲ. ಅನೇಕ ಸಂದರ್ಭಗಳಲ್ಲಿ ಅವಿಭಕ್ತ ಕುಟುಂಬಗಳ ಆರ್ಥಿಕ ತೊಂದರೆಗಳಲ್ಲಿ ಸಹಾಯ ಮಾಡುವುದು, ಸಾಂಪ್ರದಾಯಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು ಇತ್ಯಾದಿಗಳು ಮುಂದುವರಿಯುತ್ತವೆ. ಆದರೂ ಸಹ ಇತ್ತೀಚೆಗೆ ವಿಭಕ್ತ ಕುಟುಂಬಗಳ ಸಂಖ್ಯೆ ಹೆಚ್ಚಾಗುತ್ತಾ ಬರುತ್ತಿದೆ, ಹೆಚ್ಚಿನ ಸಂಖ್ಯೆಯಲ್ಲಿ ಬೆಳೆಯುತ್ತದೆ. ಪ್ಯಾಕರ್ ಅಧ್ಯಯನವು ಮೈಕಾನೋಸ್‌ದಲ್ಲಿ ಕುಟುಂಬದಲ್ಲಿ ಕುಟುಂಬದಿಂದ ಬೇರೆ ಹೋಗಿ ವಾಸಿಸುವ ಪ್ರವೃತ್ತಿ ಹೆಚ್ಚಿದ್ದರೂ, ಕುಟುಂಬಗಳು ನಿರಂತರವಾಗಿ ಬದುಕಬಲ್ಲ ಘಟಕಗಳಾಗಿ ಉಳಿದಿವೆಯೆನ್ನುತ್ತಾರೆ.[33] ಹಂಪೆಯಲ್ಲಿ ವಿಭಕ್ತಕುಟುಂಬಗಳ ಪ್ರಮಾಣ ಶೇ.73ರಷ್ಟು ಆಗಿದೆ. ಹೆಚ್ಚಿನ ಪ್ರಮಾಣದ ಕುಟುಂಬಗಳು ಪ್ರವಾಸೋದ್ಯಮ ಪೂರಕ ಚಟುವಟಿಕೆಗಳಲ್ಲಿ ಭಾಗಿಯಾಗಿವೆ.

ದೇವರ ಹರಕೆ ತೀರಿಸುವುದು, ಪೂಜಾಸ್ಥಳಗಳಿಗೆ ಸಂದರ್ಶನ ನೀಡುವುದು, ಪುರಾಣ, ಪುಣ್ಯಕತೆಗಳನ್ನು ಕೇಳುವುದು, ಮರಣದ ಸೂತಕ ಕ್ರಮವಾಗಿ ಮನೆಬಿಡುವುದು ಇತ್ಯಾದಿ ಕೌಟುಂಬಿಕ ಸಾಂಪ್ರದಾಯಿಕ ಆಚರಣೆಗಳಲ್ಲಿ ಸಾಕಷ್ಟು ಬದಲಾವಣೆಗಳನ್ನು ಹಂಪೆಯಲ್ಲಿ ಕಾಣಬಹುದು. ಹಂಪೆ ಗ್ರಾಮದ ಕುಟುಂಬಗಳಲ್ಲಿ ಹರಕೆ ಕಟ್ಟುವುದು ಮತ್ತು ತೀರಿಸುವುದು ತುಂಬಾ ಕಡಿಮೆಯಾಗಿದೆ.

ಪುಣ್ಯ ಸ್ಥಳಗಳನ್ನು ಸಂದರ್ಶಿಸಲು ಹಂಪೆಯ ಕುಟುಂಬಗಳಲ್ಲಿ ಅನೇಕರು ಹೋಗುತ್ತಾರೆ. ವೃದ್ಧರು ಮತ್ತು ಹೆಂಗಸರು ಕೇವಲ ಪುಣ್ಯಸ್ಥಳಗಳನ್ನು ನೋಡಿಕೊಂಡು ವಾಪಸ್ಸು ಬರುತ್ತಾರೆ. ಆದರೆ ಹಂಪೆಯ ಯುವಕರು ಅದಕ್ಕಿಂತಲೂ ಒಂದು ಹೆಜ್ಜೆ ಮುಂದೆ ಹೋಗಿ ಅಲ್ಲಿನ ಪ್ರವಾಸೋದ್ಯಮದ ಬಗ್ಗೆ ತಿಳಿದುಕೊಳ್ಳಲು ಪ್ರಯತ್ನಿಸುತ್ತಾರೆ. ಆ ರೀತಿ ಕಲಿತ ಹೊಸ ವಿಷಯಗಳನ್ನು ತಮ್ಮ ವ್ಯಾಪಾರದಲ್ಲಿ ಅಳವಡಿಸಿಕೊಂಡು ಹೊಸ ಬಗೆಯ ವ್ಯಾಪಾರವನ್ನು ಪ್ರಾರಂಭಿಸುತ್ತಾರೆ. ಹಂಪೆಯಲ್ಲಿ ಆರಂಭಿಸಿರುವ ಟ್ರಾವೆಲರ್ಸ್ ಷಾಪ್‌ಗಳು, ಹಣದ ವಿನಿಮಯ ಶಾಪ್‌ಗಳು ಬೇರೆ ಪುಣ್ಯಸ್ಥಳ ಮತ್ತು ಪ್ರವಾಸಿ ತಾಣಗಳಿಗೆ ಬೇಟಿ ನೀಡಿ ಶುರುಮಾಡಿದ ಮಳಿಗೆಗಳಾಗಿವೆ. ಯುವಕರು ಬೇರೆ ಕಡೆ ಪ್ರವಾಸ ಕೈಗೊಳ್ಳುವ ಮೂಲಕ ಅಲ್ಲಿನ ಹೊಸ ವ್ಯವಸ್ಥೆಗಳು ಪ್ರವಾಸಿಗರಿಗೆ ಅವಶ್ಯಕವೆಂದು ಕಂಡುಬಂದಲ್ಲಿ ಅದೇ ಮಾದರಿಯ ವ್ಯಾಪಾರವನ್ನು ಹಂಪೆಯಲ್ಲಿಯೂ ಶುರು ಮಾಡಿದ್ದಾರೆ. ಅನ್‌ಸೀಸನ್ ಸಂದರ್ಭದಲ್ಲಿ (ಏಪ್ರಿಲ್- ಅಕ್ಟೋಬರ್) ಹಂಪೆಯಲ್ಲಿನ ಯುವಕರು, ಹಿಮಾಚಲ ಪ್ರದೇಶ, ಮಧ್ಯಪ್ರದೇಶ, ದೆಹಲಿ, ತಮಿಳುನಾಡು, ಉತ್ತರ ಪ್ರದೇಶ ಮುಂತಾದ ಸ್ಥಳಗಳಿಗೆ ಭೇಟಿ ನೀಡುತ್ತಾರೆ. ಮೊದಲಿಗೆ ಮರಣದ ನಂತರ ಮನೆ ಬೀಡುವ ಕ್ರಮ ಇತ್ತು. ಅದು ಈಗ ಪೂರ್ಣವಾಗಿ ನಿಂತೆ ಹೋಗಿದೆ. ಮನೆ ಬಿಡುವ ಕ್ರಮ ಅನುಸರಿಸಬೇಕಾದರೆ ಬೇರೆ ಖಾಲಿ ಮನೆಗಳು ಬೇಕು. ಆದರೆ ವ್ಯಾಪಾರ ವ್ಯವಹಾರದಿಂದ ಹಂಪೆಯಲ್ಲಿ ಮನೆ ಬಿಡಿ ಒಂದಿಂಚು ಜಾಗ ಕೂಡ ತುಂಬಾ ದುಬಾರಿ ಆಗಿಬಿಟ್ಟಿದೆ. ಇಂತಹ ಸಂದರ್ಭದಲ್ಲಿ ವಾಸಿಸುವ ಮನೆ ಮತ್ತು ವ್ಯಾಪಾರ ಮಾಡುವ ಸ್ಥಳವನ್ನು ಬಿಟ್ಟು ಬೇರೆ ಕಡೆ ಮೂರು ತಿಂಗಳಷ್ಟು ದಿನ ಹೇಗೆ ಹೋಗಲು ಸಾಧ್ಯ ಎಂದು ಮರುಪ್ರಶ್ನೆ ಹಾಕುತ್ತಾರೆ. ಸಾಂಪ್ರದಾಯಗಳು ತಮಗೆ ಅನುಕೂಲವಾಗ ದಿದ್ದಾಗ ಅವುಗಳನ್ನು ಬೀಡುವುದೆ ವಾಸಿ ಎಂದು ಹೇಳುತ್ತಾರೆ.

ಪ್ರವಾಸೋದ್ಯಮ ಆರಂಭವಾಗುವ ಮುನ್ನ ಹಂಪೆ ಸುತ್ತಮುತ್ತಲ ಇತರ ಹಳ್ಳಿಗಳಿಗಿಂತ ಭಿನ್ನವಾಗಿರಲಿಲ್ಲ. ಸಾಕ್ಷರತೆ, ಆರೋಗ್ಯ, ಲಿಂಗ ಅನುಪಾತ, ಮಹಿಳೆಯರ ಸ್ಥಾನಮಾನ, ಅಂತರ್‌ಜಾತಿ ವಿವಾಹಗಳು, ವೃತಿ ರಚನೆ ಮತ್ತು ಸಾಂಪ್ರದಾಯಿಕ ಆಚರಣೆ ಇತ್ಯಾದಿ ಅಂಶಗಳು ಇತರ ಪ್ರದೇಶಗಳಲ್ಲಿ ಇದ್ದಂತೆಯೆ ಹಂಪೆಯಲ್ಲೂ ಇದ್ದವು. ಆದರೆ ಪ್ರವಾಸೋದ್ಯಮ ಶುರುವಾದ ನಂತರ ಅದರಲ್ಲೂ 1990ರ ನಂತರ ಹಂಪೆಯ ಚಿತ್ರಣ ಗಣನೀಯವಾಗಿ ಬದಲಾಗಿದೆ. ಸಾಕ್ಷರತೆ ಮತ್ತು ಆರೋಗ್ಯಕ್ಕೆ ಸಂಬಂಧಿಸಿದ ಅಂಕಿಅಂಶಗಳು ಜಿಲ್ಲೆ ಮತ್ತು ರಾಜ್ಯದ ಸರಾಸರಿಗಿಂತ ಉತ್ತಮವಾಗಿದೆ. ಜಿಲ್ಲೆ ಮತ್ತು ರಾಜ್ಯದಲ್ಲಿ ಲಿಂಗ ಅನುಪಾತ ನಕಾರಾತ್ಮಕವಾಗಿದ್ದರೆ ಹಂಪೆಯಲ್ಲಿ ಆದು ಸಕಾರಾತ್ಮಕವಾಗಿದೆ. ಪ್ರವಾಸೋದ್ಯಮದ ವ್ಯಾಪಾರದಲ್ಲಿ ತೊಡಗಿಸಿಕೊಂಡ ಮಹಿಳೆಯರ ಸಂಖ್ಯೆ ಗಣನೀಯವಾಗಿ ಹೆಚ್ಚಿದೆ. ಮಹಿಳೆಯರು ಇಲ್ಲಿ ಕೇವಲ ಸಂಖ್ಯೆ ದೃಷ್ಟಿಯಿಂದ ಹೆಚ್ಚಾಗಿರುವುದಲ್ಲ; ಮಹಿಳೆಯರೆ ಶುರು ಮಾಡಿ ನಡೆಸಿಕೊಂಡು ಹೋಗುವ ಹಲವಾರು ಉದ್ಯಮಗಳಿವೆ. ಜತೆಗೆ ತಮ್ಮ ಗಂಡಂದಿರ ಜತೆಗೆ ವ್ಯಾಪಾರದಲ್ಲಿ

[illegible]

ತೊಡಗಿಸಿಕೊಂಡ ಮಹಿಳೆಯರ ಸಂಖ್ಯೆ ಕೂಡ ಹೆಚ್ಚಾಗಿದೆ. ಮಹಿಳೆಯರು ಪುರುಷರಿಗೆ ನೀಡುವ ಸಹಕಾರ ಕೂಡ ಕೇವಲ ನಾಮಕಾವಸ್ಥೆ ಸಹಕಾರ ಅಲ್ಲ. ಅಲ್ಲದೆ ಅವರು ವ್ಯಾಪಾರಕ್ಕೆ ಸಂಬಂಧಿಸಿದ ನಿರ್ಣಯಗಳನ್ನು ತೆಗೆದುಕೊಳ್ಳುವಲ್ಲಿ ವಹಿಸಿರುವ ಪ್ರಾತ್ರ ಸಕ್ರಿಯ ಸ್ವರೂಪದ್ದಾಗಿದೆ. ಪ್ರವಾಸೋದ್ಯಮದಲ್ಲಿ ತೊಡಗಿಸಿಕೊಂಡ ಕುಟುಂಬಗಳ ಹೆಚ್ಚು ಕಡಿಮೆ ಎಲ್ಲ ಸದಸ್ಯರಿಗೂ ವ್ಯವಹಾರಕ್ಕೆ ಬೇಕಾಗುವಷ್ಟು ಇಂಗ್ಲಿಷ್ ಭಾಷೆಯ ಅರಿವು ಇದೆ. ಅಂತರ್‌ಜಾತಿ ವಿವಾಹಗಳ ಸಂಖ್ಯೆಯಲ್ಲಿ ಏರಿಕೆ ಕಂಡುಬಂದಿದೆ. ಕುಟುಂಬಗಳ ಆದಾಯದಲ್ಲಿನ ಹೆಚ್ಚಳದಿಂದ ಸಮಾಜದ ಏಣಿಶ್ರೇಣಿಯಲ್ಲಿ ಸಾಕಷ್ಟು ಬದಲಾವಣೆಗಳು ಕಂಡುಬರುತ್ತವೆ. ಮೇಲಿನ ಪರಿವರ್ತನೆಗಳು ಹಂಪೆಯಲ್ಲಿ ಅಭಿವ್ಯಕ್ತಗೊಳ್ಳುವುದರ ಹಿಂದಿರುವ ಪ್ರವಾಸೋದ್ಯಮದ ಪಾತ್ರವನ್ನು ಅಲ್ಲಗಳೆಯಲು ಸಾಧ್ಯವೇ ಇಲ್ಲ.

ಅಡಿಟಿಪ್ಪಣಿಗಳು

1. ಚಂದ್ರಪೂಜಾರಿ ಎಂ., *ದೇಶಿ ನೆರಳಲ್ಲಿ ವಿಕೇಂದ್ರೀಕರಣ*, ಹಂಪಿ : ಕನ್ನಡ ವಿಶ್ವವಿದ್ಯಾಲಯ, 2001, ಪುಟ. 14
2. ಕುರಿಯನ್ ಎನ್.ಜೆ., ''ವೈಡಿನಿಂಗ್ ರೀಜನಲ್ ಡಿಸ್ ಪ್ಯಾರಿಟಿಸ್ ಇನ್ ಇಂಡಿಯಾ : ಸಮ್ ಇಂಡಿಕೇಟರ್ಸ್'' *ಎಕನಾಮಿಕ್ ಅ್ಯಂಡ್ ಪೊಲಿಟಿಕಲ್ ವೀಕ್ಲಿ*, ಸಂಚಿಕೆ-35, ಸಂಖ್ಯೆ-7, ಫೆಬ್ರವರಿ, 2000, ಪುಟ. 538
3. ಡೈರೆಕ್ಟರೇಟ್ ಆಫ್ ಸೆನ್ಸಸ್ ಆಪರೇಶನ್, *ಡಿಸ್ಟ್ರಿಕೆಟ್ ಸೆನ್ಸಸ್ ಅ್ಯಂಡ್ ಬುಕ್ ಪಾರ್ಟ್ 10 ಬಿ, ಸೀರಿಸ್ 14, ಪ್ರೇಮರಿ ಸೆನ್ಸಸ್ ಆಬಾಸ್ಟ್ರಾಕ್ಟ್* ಮೈಸೂರು: ಮೈಸೂರು ಸರ್ಕಾರ, 1971
4. ಡೈರೆಕ್ಟರೇಟ್ ಆಫ್ ಸೆನ್ಸಸ್ ಆಪರೇಶನ್, *ಡಿಸ್ಟ್ರಿಕ್ಟ್ ಸೆನ್ಸಸ್ ಹ್ಯಾಂಡ್ ಬುಕ್ ಪಾರ್ಟ್ 8, ಸೀರಿಸ್ 9, ಪ್ರೇಮರಿ ಸೆನ್ಸಸ್ ಆಬಾಸ್ಟ್ರಾಕ್ಟ್* ಬೆಂಗಳೂರು: ಗವರ್ನ್‌ಮೆಂಟ್ ಆಫ್ ಕರ್ನಾಟಕ, 1981
5. ಡೈರೆಕ್ಟರೇಟ್ ಆಫ್ ಸೆನ್ಸಸ್ ಆಪರೇಶನ್, *ಡಿಸ್ಟ್ರಿಕ್ಟ್ ಆಪ್ ಸೆನ್ಸಸ್ ಆಪರೇಶನ್, ಡಿಸ್ಟ್ರಿಕ್ಟ್ ಸೆನ್ಸಸ್ ಹ್ಯಾಂಡ್ ಬುಕ್*, ಬಳ್ಳಾರಿ ಡಿಸ್ಟ್ರಿಕ್ಟ್, ಬೆಂಗಳೂರು: ಗವರ್ನ್‌ಮೆಂಟ್ ಆಫ್ ಕರ್ನಾಟಕ, 1991
6. ಗವರ್ನ್‌ಮೆಂಟ್ ಆಫ್ ಕರ್ನಾಟಕ, *ಹೈಪವರ್ ಕಮಿಟಿ ಪಾರ್ ರಿ ಅಡ್ರೆಸಲ್ ಆಪ್ ರೀಜನಲ್ ಇಂಬ್ಯಾಲೆನ್ಸ್ ಪೈನಲ್ ರೀಪೊರ್ಟ್ ಜೂನ್ 2002*, ಬೆಂಗಳೂರು: 2001
7. ಮುಖ್ಯೋಪಾಧ್ಯಾಯರು, *ವಿದ್ಯಾರ್ಥಿಗಳ ದಾಖಲಾತಿ ಪುಸ್ತಕ*, ಹಂಪೆ : ಸರಕಾರಿ ಹಿರಿಯ ಪ್ರಾಥಮಿಕ ಶಾಲೆ, 2002
8. ಅದೇ, *ಪೊರ್ವೋಕ್ತ*, 2002
9. ಮುಖ್ಯೋಪಾಧ್ಯಾಯರು, *ವಿದ್ಯಾರ್ಥಿಗಳ ದಾಖಲಾತಿ ಪುಸ್ತಕ*, ಕೃಷ್ಣಪುರ : ಸರಕಾರಿ ಕಿರಿಯ ಪ್ರಾಥಮಿಕ ಶಾಲೆ, 2002

10. ಸಹಾಯಕ ನಿರ್ದೇಶಕರು, *ಅಂಗನವಾಡಿ ದಾಖಲಾತಿ ವಿವರಗಳು*, ಹೊಸಪೇಟೆ : ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, 2002

11. ನಿರ್ದೇಶಕರು, *ಅಂಗನವಾಡಿ ದಾಖಲಾತಿ ವಿವರಗಳು*, ಬಳ್ಳಾರಿ : ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, 2002

12. ರೇಮಂಡ್ ನರೋನ್ಹಾ, ಸ್ಯೂಶಿಯಲ್ ಆ್ಯಂಡ್ ಕಲ್ಚರಲ್ ಡೈಮೆನಶನ್ ಆಫ್ ಟ್ಯೂರಿಸಂ (ವರ್ಕಿಂಗ್ ಪೇಪರ್ ನಂಬರ್ 326), ವಾಷಿಂಗ್‌ಟನ್ ಡಿ.ಸಿ.: ವರ್ಲ್ಡ್ ಬ್ಯಾಂಕ್ , 1979, ಪುಟ. 29

13. ವೈದ್ಯಾಧಿಕಾರಿಗಳು, *ರೋಗಿಗಳ ದಾಖಲಾತಿ ಪಟ್ಟಿ*, ಕಮಲಾಪುರ: ಪ್ರಾಥಮಿಕ ಆರೋಗ್ಯ ಕೇಂದ್ರ, 2002

14. ವೈದ್ಯಾಧಿಕಾರಿಗಳು, *ರೋಗಿಗಳ ಕ್ರೋಢಿಕೃತ ಪಟ್ಟಿ*, ಹೊಸಪೇಟೆ: ತಾಲೂಕು ಆರೋಗ್ಯ ಅಧಿಕಾರಿಗಳ ಕಚೇರಿ, 2002

15. ವೈದ್ಯಾಧಿಕಾರಿಗಳು, *ಕುಷ್ಠರೋಗಿಗಳ ಮಾಹಿತಿ ಪುಸ್ತಕ*, ಹೊಸಪೇಟೆ: ತಾಲೂಕಿನ ಪರಿವರ್ತಿತ ನಿಯಂತ್ರಣ ಘಟಕ, 2002

16. ವೈದ್ಯಾಧಿಕಾರಿಗಳು, *ಕ್ರೋಢಿಕೃತ ಕ್ಷಯ ರೋಗಿಗಳ ಪಟ್ಟಿ*, ಹೊಸಪೇಟೆ: ಹೆಚ್ಚುವರಿ, ಜಿಲ್ಲಾ ಕ್ಷಯ ರೋಗ ಕೇಂದ್ರ, 2002

17. ಕರ್ನಾಟಕ ಸರ್ಕಾರ, *ಕರ್ನಾಟಕದಲ್ಲಿ ಮಾನವ ಅಭಿವೃದ್ಧಿ-1999*, ಬೆಂಗಳೂರು: ಯೋಜನಾ ಇಲಾಖೆ, 1999

18. ಗವರ್ನ್‌ಮೆಂಟ್ ಆಫ್ ಕರ್ನಾಟಕ, *ಪೂರ್ವೋಕ್ತ*, ಪುಟ. 98

19. ಅದೇ, ಪುಟ 126

20. ಡೈರೆಕ್ಟರೇಟ್ ಆಫ್ ಸೆನ್ಸಸ್ ಆಪರೇಶನ್, 1971, ಪೂರ್ವೋಕ್ತ

21. ಡೈರೆಕ್ಟರೇಟ್ ಆಫ್ ಸೆನ್ಸಸ್ ಆಪರೇಶನ್, 1981, ಪೂರ್ವೋಕ್ತ

22. ಡೈರೆಕ್ಟರೇಟ್ ಆಫ್ ಸೆನ್ಸಸ್ ಆಪರೇಶನ್, 1991, ಪೂರ್ವೋಕ್ತ

23. ಇಸಬೆಲ್ ಆ್ಯಂಡ್ ಡೇವಿಡ್ ಕ್ರೂಕ್, *ರೆವಲ್ಯೂಶನ್ ಇನ್ ಎ ಚೈನೀಸ್ ವಿಲೇಜ್: ಟೆನ್ ಮೈಲ್ ಇನ್*, ಲಂಡನ್: ರೂಟ್‌ಲೆಡ್ಜ್ ಪಬ್ಲೀಷರ್ಸ್, 1998, ಪುಟ. 07

24. ಚಂದ್ರಪೂಜಾರಿ ಎಂ., *ದೇಶಿಯತಿ ನೆರಳಲ್ಲಿ ವಿಕೇಂದ್ರೀಕರಣ*, ಹಂಪೆ : ಕನ್ನಡ ವಿಶ್ವಿದ್ಯಾಲಯ,2001,ಪುಟ-207

25. ಡೈರೆಕ್ಟರೇಟ್ ಆಫ್ ಸೆನ್ಸಸ್ ಆಪರೇಶನ್, 1971, ಪೂರ್ವೋಕ್ತ

26. ಡೈರೆಕ್ಟರೇಟ್ ಆಫ್ ಸೆನ್ಸಸ್ ಆಪರೇಶನ್, 1981, ಪೂರ್ವೋಕ್ತ

27. ಡೈರೆಕ್ಟರೇಟ್ ಆಫ್ ಸೆನ್ಸಸ್ ಆಪರೇಶನ್, 1991, ಪೂರ್ವೋಕ್ತ

28. ಪಂಚಾಯತ್ ಕಾರ್ಯದರ್ಶಿಗಳು, *2001ರ ಜನಗಣತಿ,* (ಪ್ರಾವಿಜನಲ್ ಲಿಸ್ಟ್) ಹಂಪೆ : ಗ್ರಾಮಪಂಚಾಯತಿ ಕಚೇರಿ, 2001

29. ಗವರ್ನ್‌ಮೆಂಟ್ ಆಫ್ ಕರ್ನಾಟಕ, *ಪೂರ್ವೋಕ್ತ,* ಪುಟ. 98

30. ಚಂದ್ರಪೂಜಾರಿ ಎಂ., *ಪೂರ್ವೋಕ್ತ,* ಪುಟ-193-195

31. ಇಸಬೆಲ್ ಆ್ಯಂಡ್ ಡೇವಿಡ್ ಕ್ರೂಕ್, *ಪೂರ್ವೋಕ್ತ,* 1998, ಪುಟ. 06

32. ಚಂದ್ರಪೂಜಾರಿ ಎಂ., ಪರಿಸರ ಮತ್ತು ಅಭಿವೃದ್ಧಿ , ಹಂಪೆ : ಕನ್ನಡ ವಿಶ್ವವಿದ್ಯಾಲಯ,1998,ಪುಟ.9

33. ರೇಮಂಡ್ ನರೋನ್ಹಾ, ಪೂರ್ವೋಕ್ತ, 1979, ಪುಟ. 33

ಕೋಷ್ಟಕ-43

ತಾಲೂಕು, ಜಿಲ್ಲೆ, ರಾಜ್ಯಕ್ಕೆ ಹೋಲಿಸಿ ಹಂಪೆಯ ಸಾಕ್ಷರತಾ ಪ್ರಮಾಣ 1971-2001

ಕ್ರ.ಸಂ.	ವಿವರಗಳು	1971	1981	1991	2001
01	ಹಂಪೆ	31.40	39.05	52.62	65.76
02	ಹೊಸಪೇಟೆ	29.33	32.72	49.89	61.29
03	ಬಳ್ಳಾರಿ	25.11	30.64	45.89	58.04
04	ಕರ್ನಾಟಕ	37.48	46.21	56.04	67.04

ಮೂಲ : 1. ಡೈರೆಕ್ಟರೇಟ್ ಆಫ್ ಸೆನ್ಸಸ್ ಆಪರೇಶನ್, *ಡಿಸ್ಟ್ರಿಕೆಟ್ ಸೆನ್ಸಸ್ ಹ್ಯಾಂಡ್ ಬುಕ್ ಪಾರ್ಟ್ 10 ಬಿ, ಸೀರಿಸ್ 14, ಪ್ರೇಮರಿ ಸೆನ್ಸಸ್ ಆಬಾಸ್ಟ್ರಾಕ್ಟ್* ಮೈಸೂರು: ಮೈಸೂರು ಸರ್ಕಾರ, 1971

2. ಡೈರೆಕ್ಟರೇಟ್ ಆಫ್ ಸೆನ್ಸಸ್ ಆಪರೇಶನ್, *ಡಿಸ್ಟ್ರಿಕ್ಟ್ ಸೆನ್ಸಸ್ ಹ್ಯಾಂಡ್ ಬುಕ್ ಪಾರ್ಟ್ 8, ಸೀರಿಸ್ 9, ಪ್ರೇಮರಿ ಸೆನ್ಸಸ್ ಆಬಾಸ್ಟ್ರಾಕ್ಟ್* ಬೆಂಗಳೂರು: ಗವರ್ನ್‌ಮೆಂಟ್ ಆಫ್ ಕರ್ನಾಟಕ, 1981

3. ಡೈರೆಕ್ಟರೇಟ್ ಆಫ್ ಸೆನ್ಸಸ್ ಆಪರೇಶನ್, ಡಿಸ್ಟ್ರಿಕ್ಟ್ ಆಪ್ ಸೆನ್ಸಸ್ ಆಪರೇಶನ್, *ಡಿಸ್ಟ್ರಿಕ್ಟ್ ಸೆನ್ಸಸ್ ಹ್ಯಾಂಡ್ ಬುಕ್, ಬಳ್ಳಾರಿ ಡಿಸ್ಟ್ರಿಕ್ಟ್,* ಬೆಂಗಳೂರು: ಗವರ್ನ್‌ಮೆಂಟ್ ಆಫ್ ಕರ್ನಾಟಕ, 1991

4. ಗವರ್ನ್‌ಮೆಂಟ್ ಆಫ್ ಕರ್ನಾಟಕ, *ಹೈಪವರ್ ಕಮಿಟಿ ಪಾರ್ ರಿ ಆಡ್ರೆಸಲ್ ಆಪ್ ರೀಜನಲ್ ಇಂಬ್ಯಾಲೆನ್ಸ್ ಫೈನಲ್ ರೀಪೊರ್ಟ್ ಜೂನ್ 2002,* ಬೆಂಗಳೂರು: 2001

ಕೋಷ್ಟಕ-44

ತಾಲೂಕಿಗೆ ಹೋಲಿಸಿ ಹಂಪೆಯಲ್ಲಿನ ರೋಗಗಳ ವಿವರ 2001

ಕ್ರ.ಸಂ.	ವಿವರಗಳು	ಜನಸಂಖ್ಯೆ	ಕುಷ್ಟರೋಗಿ	ಮಲೇರಿಯ	ಕ್ಷಯ
01	ಹಂಪೆ	2172	01 (0.046)	07 (0.32)	05 (0.23)
02	ಹೊಸಪೇಟೆ	373665	366 (0.098)	4454 (1.19)	399 (0.11)

ಮೂಲ : 1. ವೈದ್ಯಾಧಿಕಾರಿಗಳು, *ಕುಷ್ಟರೋಗಿಗಳ ಮಾಹಿತಿ ಪುಸ್ತಕ,* ಹೊಸಪೇಟೆ : ತಾಲೂಕಿನ ಪರಿವರ್ತಿತ ನಿಯಂತ್ರಣ ಘಟಕ, 2002

2. ವೈದ್ಯಾಧಿಕಾರಿಗಳು, *ರೋಗಿಗಳ ಕ್ರೋಢಿಕೃತ ಪಟ್ಟಿ,* ಹೊಸಪೇಟೆ : ತಾಲೂಕು ಆರೋಗ್ಯಧಿಕಾರಿಗಳ ಕಚೇರಿ, 2002

3. ವೈದ್ಯಾಧಿಕಾರಿಗಳು, *ರೋಗಿಗಳ ಕ್ರೋಢಿಕೃತ ಪಟ್ಟಿ,* ಹೊಸಪೇಟೆ : ಹೆಚ್ಚುವರಿ ಜಿಲ್ಲಾ ಕ್ಷಯರೋಗ ಕೇಂದ್ರ, 2002

4. ವೈದ್ಯಾಧಿಕಾರಿಗಳು, *ರೋಗಗಳ ಅಂಕಿ ಅಂಶಗಳ ನೋಂದಣಿ ಪುಸ್ತಕ,* ಕಮಲಾಪುರ : ಪ್ರಾಥಮಿಕ ಆರೋಗ್ಯ ಕೇಂದ್ರ, 2002

[illegible]

[illegible]

[illegible]

ಕೋಷ್ಟಕ-45

ತಾಲೂಕು, ಜಿಲ್ಲೆ, ರಾಜ್ಯಕ್ಕೆ ಹೋಲಿಸಿದಂತೆ ಹಂಪೆಯಲ್ಲಿನ ವೈದ್ಯರ ಅಂಕಿ ಅಂಶಗಳು 2001

ಕ್ರ. ಸಂ.	ಜಾತಿಗಳು	ಜನಸಂಖ್ಯೆ	ವೈದ್ಯರ ಸಂಖ್ಯೆ	ಪ್ರತಿ10000 ಜನಸಂಖ್ಯೆಗೆ	ಪ್ರತಿ 1000 ಜನಸಂಖ್ಯೆಗೆ
01	ಹಂಪೆ	2172	04	---	02
02	ಹೊಸಪೇಟೆ	373665	56	01	0.1
03	ಬಳ್ಳಾರಿ	2025242	409	02	0.2
04	ಕರ್ನಾಟಕ	52733958	14625	03	0.3

ಮೂಲ : 1. ಗೌವರ್ನಮೆಂಟ್ ಆಫ್ ಕರ್ನಾಟಕ, ಹೈಪವರ್ ಕಮೀಟಿ ಫಾರ್ ರೀಡ್ರೆಸಲ್ ಆಫ್ ರೀಜನಲ್ ಇಂಬ್ಯಾಲನ್ಸ್ ಫೈನಲ್ ರೀಪೋರ್ಟ್, ಜೂನ್ 2002, ಬೆಂಗಳೂರು : 2001

2. ಹಂಪೆಯಲ್ಲಿನ ವೈದ್ಯರ ಸಂಖ್ಯೆಯನ್ನು ಪ್ರಾಥಮಿಕ ಮಾಹಿತಿಯಿಂದ ಪಡೆಯಲಾಗಿದೆ.

ಕೋಷ್ಟಕ -46

ತಾಲೂಕು, ಜಿಲ್ಲೆ, ರಾಜ್ಯಕ್ಕೆ ಹೋಲಿಸಿ ಹಂಪೆಯ ಲಿಂಗವಾರು ಪರಿಮಾಣದಲ್ಲಿನ ಬದಲಾವಣೆ ವಿವರಗಳು (ಪ್ರತಿ ಸಾವಿರ ಪುರುಷರಿಗೆ ಮಹಿಳೆಯರ ಸಂಖ್ಯೆ)

ಕ್ರ.ಸಂ.	ವಿವರಗಳು	1971	1981	1991	2001
01	ಹಂಪೆ	859	845	987	1013
02	ಹೊಸಪೇಟೆ	955	972	964	975
03	ಬಳ್ಳಾರಿ	967	973	965	969
04	ಕರ್ನಾಟಕ	956	963	960	964

ಮೂಲ : 1. ಡೈರೆಕ್ಟರ್ ಆಫ್ ಸೆನ್ಸಸ್ ಅಪರೇಷನ್, *ಡಿಸ್ಟ್ರಿಕ್ಟ್ ಹ್ಯಾಂಡ್‌ಬುಕ್ ಪಾರ್ಟ್ ಎಕ್ಸ್ ಬಿ, ಸೀರಿಸ್ 14, ಪ್ರೈಮರಿ ಸೆನ್ಸಸ್, ಅಬಸ್ಟ್ರಾಕ್ಟ್*, ಮೈಸೂರು : ಮೈಸೂರು ಸರ್ಕಾರ, 1971

2. ಡೈರೆಕ್ಟರ್ ಆಫ್ ಸೆನ್ಸಸ್ ಅಪರೇಷನ್, *ಡಿಸ್ಟ್ರಿಕ್ಟ್ ಹ್ಯಾಂಡ್‌ಬುಕ್ ಪಾರ್ಟ್ ಎಕ್ಸ್ viii, ಸೀರಿಸ್ 9, ಪ್ರೈಮರಿ ಸೆನ್ಸಸ್, ಅಬಸ್ಟ್ರಾಕ್ಟ್*, ಬೆಂಗಳೂರು : ಗವರ್ನಮೆಂಟ್ ಆಫ್ ಸರ್ಕಾರ, 1981

3. ಡೈರೆಕ್ಟರ್ ಆಫ್ ಸೆನ್ಸಸ್ ಅಪರೇಷನ್, *ಡಿಸ್ಟ್ರಿಕ್ಟ್ ಹ್ಯಾಂಡ್‌ಬುಕ್ ಪಾರ್ಟ್ ಎಕ್ಸ್, ಸೀರಿಸ್, ಪ್ರೈಮರಿ ಸೆನ್ಸಸ್, ಅಬಸ್ಟ್ರಾಕ್ಟ್*, ಬೆಂಗಳೂರು : ಗವರ್ನಮೆಂಟ್ ಆಫ್ ಸರ್ಕಾರ, 1991

4. ಗವರ್ನ್‌ಮೆಂಟ್ ಆಫ್ ಕರ್ನಾಟಕ, ಹೈಪವರ್ ಕಮಿಟಿ ಫಾರ್ ರಿಡ್ರೇಸಲ್ ಆಫ್ ರೀಜನಲ್ ಇಂಬ್ಯಾಲನ್ಸ್ ಫೈನಲ್ ರಿಪೋರ್ಟ್, ಜೂನ್, 2002, ಬೆಂಗಳೂರು : 2002

[illegible]

[illegible]

[illegible]	[illegible]	[illegible]	[illegible]	[illegible]	[illegible]

[illegible]

[illegible]

[illegible]

[illegible]	[illegible]	[illegible]	[illegible]	[illegible]	[illegible]

[illegible]

ಕೋಷ್ಟಕ-47

ತಾಲೂಕು, ಜಿಲ್ಲೆ, ರಾಜ್ಯಕ್ಕೆ ಹೋಲಿಸಿ ಮಹಿಳಾ ಸಾಕ್ಷರತೆ ಪ್ರಮಾಣ ಶೇಕಡವಾರುಗಳಲ್ಲಿ

ಕ್ರ.ಸಂ.	ವಿವರಗಳು	1971	1981	1991	2001
01	ಹಂಪೆ	20.61	27.84	40.12	55.97
02	ಹೊಸಪೇಟೆ	18.27	22.47	36.54	50.61
03	ಬಳ್ಳಾರಿ	17.04	19.32	31.97	44.62
04	ಕರ್ನಾಟಕ	22.76	33.17	44.34	55.51

ಮೂಲ : 1. ಪಂಚಾಯತಿ ಕಾರ್ಯದರ್ಶಿ, 2001ರ ಜನಗಣತಿ(ಪ್ರಾವಿಜಿನಲ್ ಲಿಸ್ಟ್), ಹಂಪೆ : ಗ್ರಾಮ ಪಂಚಾಯತಿ ಕಚೇರಿ, 2002

2. ಗವರ್ನ್‌ಮೆಂಟ್ ಆಫ್ ಕರ್ನಾಟಕ, ಹೈಪವರ್ ಕಮಿಟಿ ಫಾರ್ ರಿಡ್ರೇಸಲ್ ಆಫ್ ರೀಜನಲ್ ಇಂಬ್ಯಾಲನ್ಸ್ ಫೈನಲ್ ರಿಪೋರ್ಟ್, ಬೆಂಗಳೂರು : 2002

ಕೋಷ್ಟಕ-48

ಅತಿಥಿಗೃಹ, ರೆಸ್ಟೋರೆಂಟ್, ಹೋಟೆಲ್‌ಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಮಹಿಳೆಯರ ವಿವರಗಳು

ಕ್ರ.ಸಂ.	ವಿವರಗಳು	1994	2000
1	ಪುರುಷರಿಗೆ ಸಹಾಯಕರು	----	42
2	ಕೂಲಿ ಕೆಲಸದವರು	10	80
3	ಹೋಟೆಲ್‌ಗಳ ಮಾಲೀಕರು	06	18
	ಒಟ್ಟು	16	140

ಸೂಚನೆ : ಪುರುಷರಿಗೆ ಸಹಾಯಕರಾಗಿ ಎಂದರೆ ಕುಟುಂಬದಲ್ಲಿನ ಪುರುಷರಿಗೆ ಸಹಾಯಕರಾಗಿ ಅತಿಥಿಗೃಹ, ರೆಸ್ಟೋರೆಂಟ್‌ಗಳಲ್ಲಿ ಭಾಗಿಯಾಗುವುದು.

ಮೂಲ : ಪ್ರಾಥಮಿಕ ಮಾಹಿತಿ

[illegible]

[illegible]

ಕೋಷ್ಟಕ-49

ಅಂಗಡಿ ಹಾಗೂ ಇತರ ಚಿಕ್ಕ ಪ್ರಮಾಣದ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡ ಮಹಿಳೆಯರು

ಕ್ರ.ಸಂ.	ವಿವರಗಳು	1994	2001
1	ಕಿರಾಣಿ ಮತ್ತು ಸ್ಟೇಷನರಿ ಶಾಪಗಳಲ್ಲಿನ ಸಹಾಯಕರು	----	04
2	ಪೆಟ್ಟಿಗೆ ಅಂಗಡಿ ಮತ್ತು ತೆಂಗಿನಕಾಯಿ ವ್ಯಾಪಾರದಲ್ಲಿ ತೊಡಿಗಿಸಿಕೊಂಡವರು	09	43
3	ಇತರೆ ವ್ಯಾಪಾರಗಳಾದ ಪುರಾತನ ವಸ್ತುಗಳ ಮಾರಾಟ, ಸಿದ್ಧ ಉಡುಪು ಗಳು, ಹಣ್ಣು, ತರಕಾರಿಗಳ ಮಾರಾಟ ಇತ್ಯಾದಿ	03	46
	ಒಟ್ಟು	**12**	**93**

ಸೂಚನೆ : ಸಹಾಯಕರು ಎಂದರೆ ಪುರುಷರು ಕೊಂಡು ತಂದ ವಸ್ತುಗಳನ್ನು ಅಂಗಡಿಗಳಲ್ಲಿ ಮಾರಾಟ ಮಾಡುವವರು

ಮೂಲ : ಪ್ರಾಥಮಿಕ ಮಾಹಿತಿ

ಕೋಷ್ಟಕ-50

ಹಂಪೆಯಲ್ಲಾದ ಅಂತರ್‌ಜಾತಿ ವಿವಾಹಗಳು 1992-2000

ಕ್ರ. ಸಂ.	ಸ್ಥಳೀಯರ ಜೊತೆಗಿನ ವಿವಾಹಗಳು		ವಿದೇಶಿಯರ ಜೊತೆಗಿನ ವಿವಾಹಗಳು	
	ಜಾತಿಗಳು		ರಾಷ್ಟ್ರಗಳು ಮತ್ತು ಹಂಪಿ	
	ಗಂಡು	ಹೆಣ್ಣು	ಗಂಡು	ಹೆಣ್ಣು
01	ರಜಪೂತ್	ಕ್ಷತ್ರಿಯರು	ಹಾಲೆಂಡ್	ಹಂಪೆ(ಲಂಬಾಣಿ)
02	ರಜಪೂತ್	ವಡ್ಡ	ಫ್ರಾನ್ಸ್	ಹಂಪೆ(ಲಂಬಾಣಿ)
03	ನಾಯಕ	ಗೋರ್ಖ(ಕ್ಷತ್ರಿಯರು)	ಹಂಪೆ(ಬಾರಿಕ)	ಸ್ವಿಡ್ಜರ್‌ಲ್ಯಾಂಡ್
04	ಕಿಳೇಕ್ಯಾತ	ಗೋರ್ಖ(ಕ್ಷತ್ರಿಯರು)	ಸ್ವಿಡ್ಜರ್‌ಲ್ಯಾಂಡ್	ಹಂಪೆ(ಮುಸ್ಲಿಂ)
05	ತಮಿಳು ಬೋವಿ	ಗೋರ್ಖ(ಕ್ಷತ್ರಿಯರು)	ಇಂಗ್ಲೆಂಡ್	ಹಂಪೆ(ಜೈನರು)
06	ದೇವಾಂಗ	ನಾಯ್ಡು	ಹಂಪೆ(ಲಿಂಗಾಯಿತ)	ಫ್ರಾನ್ಸ್
07	ಜೈನ	ನಾಯ್ಡು		
08	ಬ್ರಾಹ್ಮಣ	ಬಾರೀಕ		
09	ಮುಸ್ಲಿಂ	ಬ್ರಾಹ್ಮಣ		
10	ಲಿಂಗಾಯಿತ	ಬ್ರಾಹ್ಮಣ		
11	ವಡ್ಡರು	ಗೋರ್ಖ(ಕ್ಷತ್ರಿಯರು)		

ಸೂಚನೆ : ಆವರಣದಲ್ಲಿ ಕೊಟ್ಟಿರುವುದು ಜಾತಿಯನ್ನು ಸೂಚಿಸುತ್ತದೆ

ಮೂಲ : ಪ್ರಾಥಮಿಕ ಮಾಹಿತಿ

[illegible]

ಕೋಷ್ಟಕ-51

ಕುಟುಂಬಗಳ ಸ್ವರೂಪ

ಕ್ರ. ಸಂ.	ಕುಟುಂಬಗಳ ಸ್ವರೂಪ	1991 ಕುಟುಂಬಗಳ ಸಂಖ್ಯೆ	2001 ಕುಟುಂಬಗಳ ಸಂಖ್ಯೆ
01	ಅವಿಭಕ್ತ ಕುಟುಂಬ	230(64.12)	123 (25.36)
02	ವಿಭಕ್ತ ಕುಟುಂಬಗಳು	130(35.88)	362 (74.64)
	ಒಟ್ಟು	**360 (100)**	**485 (100)**

ಮೂಲ : ಪ್ರಾಥಮಿಕ ಮಾಹಿತಿ

ಕೋಷ್ಟಕ-52

ಕುಟುಂಬದಲ್ಲಿರುವ ಸದಸ್ಯರ ಸಂಖ್ಯೆ

ಕ್ರ. ಸಂ.	ಕುಟುಂಬದಲ್ಲಿನ ಸದಸ್ಯರ ಸಂಖ್ಯೆ	**1991**	**2001**
01	1-5	129(35.88)	362(74.64)
02	6-7	107 (29.69)	98 (20.20)
03	8-10	73 (20.20)	15 (3.09)
04	10ಮೇಲ್ಪಟ್ಟು	51 (14.23)	10 (2.07)
	ಒಟ್ಟು	360(100)	485(100)

ಮೂಲ : ಪ್ರಾಥಮಿಕ ಮಾಹಿತಿ

[illegible]

[illegible]

ಸಮಾರೋಪ

ಅಸಂಘಟಿತ ಪ್ರವಾಸೋದ್ಯಮ ಮತ್ತು ಸಾಮಾಜಿಕ ಹಾಗೂ ಆರ್ಥಿಕ ಪರಿವರ್ತನೆಯ ಸಂಬಂಧವನ್ನು ಅಧ್ಯಯನ ಮಾಡುವ ಉದ್ದೇಶವನ್ನು ಇಟ್ಟುಕೊಂಡು ಈ ಪ್ರಬಂಧ ಆರಂಭವಾಗಿದೆ. ಇಂದು ಪ್ರಪಂಚದ ಬಹುತೇಕ ರಾಷ್ಟ್ರಗಳು ಪ್ರವಾಸೋದ್ಯಮದ ಅಭಿವೃದ್ಧಿಗೆ ಗಮನ ನೀಡುತ್ತಿವೆ. ಶ್ರೀಮಂತ ರಾಷ್ಟ್ರಗಳಿಗೆ ಪ್ರವಾಸೋದ್ಯಮದಿಂದ ತಮ್ಮ ವಿದೇಶಿ ವಿನಿಮಯವನ್ನು ಹೆಚ್ಚಿಸುವ ಕೊಳ್ಳುವ ಇರಾದೆ. ಬಡ ರಾಷ್ಟ್ರಗಳಿಗೆ ವಿದೇಶಿ ವಿನಿಮಯವನ್ನು ಹೆಚ್ಚಿಸಿಕೊಳ್ಳುವುದರ ಜತೆಗೆ ತಮ್ಮ ಮಾನವ ಸಂಪನ್ಮೂಲವನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುವ ಉದ್ದೇಶನೂ ಇದೆ. ಬಂಡವಾಳ ಕೊರತೆ ಇರುವ ಆದರೆ ಮಾನವ ಸಂಪನ್ಮೂಲ ಹೆಚ್ಚು ಇರುವ ರಾಷ್ಟ್ರಗಳು ಶ್ರಮ ಆಧಾರಿತವಾಗಿರುವ ಪ್ರವಾಸೋದ್ಯಮವನ್ನು ಬೆಳೆಸಲು ಪ್ರಯತ್ನಿಸುತ್ತಿವೆ. ಈ ಉದ್ಯಮದಲ್ಲಿ ಬಂಡವಾಳ ಮತ್ತು ಉತ್ಪತ್ತಿ ನಡುವಿನ ಅನುಪಾತ ಕಡಿಮೆ ಇದೆ. ಜತೆಗೆ ಬಂಡವಾಳ ಹೂಡಿಕೆ ಮತ್ತು ಉತ್ಪತ್ತಿ ನಡುವಣ ಕಾಲಾವಧಿ ಕೂಡ ಬಹಳ ಕಡಿಮೆ ಇದೆ. ಹೀಗೆ ಮಾನವ ಸಂಪನ್ಮೂಲ ಅಭಿವೃದ್ಧಿಗೆ, ಬಡತನ ನಿರ್ಮೂಲನೆಗೆ, ಉದ್ಯೋಗ ನಿರ್ಮಾಣಕ್ಕೆ, ಪರಿಸರದ ಪುನರ್‌ಸೃಷ್ಟಿಗೆ ಪ್ರವಾಸೋದ್ಯಮವನ್ನು ಪರಿಹಾರವಾಗಿ ಮುಂದೂಡಲಾಗುತ್ತಿದೆ. ಪ್ರವಾಸೋದ್ಯಮದಿಂದ ಸಾಧ್ಯವಾಗುವ ಈ ಎಲ್ಲ ಲಾಭಗಳನ್ನು ಮನಗಂಡು ಭಾರತ ಸರಕಾರ ಕೂಡ ಪ್ರವಾಸೋದ್ಯಮದ ಅಭಿವೃದ್ಧಿಗೆ ಪೂರಕವಾಗುವ ನೀತಿಗಳನ್ನು ಜಾರಿಗೆ ತಂದಿದೆ. ವಿದೇಶಿ ವಿನಿಮಯ ಗಳಿಕೆಯ ಆಧಾರದ ಮೇಲೆ ಪ್ರವಾಸಿ ಸಂಸ್ಥೆಗಳಿಗೆ ನಿರ್ಯಾತ ಗೃಹಗಳ ಶ್ರೇಣಿಯನ್ನು ನೀಡಿ ಪ್ರೊತ್ಸಾಹಿಸುತ್ತಿದೆ. 1991ರ ಮುಕ್ತ ಆರ್ಥಿಕ ನೀತಿ, ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣದನ್ವಯ ಪ್ರವಾಸೋದ್ಯಮವನ್ನು ವಿದೇಶಿ ಬಂಡವಾಳ ಹೂಡಿಕೆಗೆ ಅದ್ಯತಾ ವಲಯವೆಂದು ಗುರುತಿಸಿ ಶೇ.51ರವರೆಗೂ ನೇರ ವಿದೇಶಿ ಬಂಡವಾಳ ಹೂಡಿಕೆಗೆ ಪರವಾನಿಗೆ ನೀಡಲಾಗಿದೆ. ಭಾರತ ಸರಕಾರದ ಪ್ರವಾಸೋದ್ಯಮ ನೀತಿಯನ್ನು ಅಂತರ್‌ಗತಗೊಳಿಸುವ ನಿಟ್ಟಿನಲ್ಲಿ ಕರ್ನಾಟಕ ಸರಕಾರದ ಪ್ರವಾಸೋದ್ಯಮ ಇಲಾಖೆ ಪ್ರವಾಸೋದ್ಯಮದ ಕರಡು ನೀತಿಯನ್ನು ರೂಪಿಸಿತು. ಹೆಚ್ಚಿನ ಸಂಖ್ಯೆಯಲ್ಲಿ ಬರುವ ದೇಶಿ ಮತ್ತು ವಿದೇಶಿ ಪ್ರವಾಸಿಗರ ಬೇಡಿಕೆಗೆ ಅನುಗುಣವಾಗಿ ನೂತನ ಪ್ರವಾಸಿ ತಾಣಗಳನ್ನು ಆಯ್ಕೆ ಮಾಡಿ ಅಭಿವೃದ್ಧಿಪಡಿಸುವುದು ಈ ಕರಡು ನೀತಿಯ ಮುಖ್ಯ ಉದ್ದೇಶ.

ಆದರೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಪ್ರವಾಸೋದ್ಯಮದ ಅಭಿವೃದ್ಧಿ ನೀತಿಗಳು ಮತ್ತು ಯೋಜನೆಗಳು ಕೆಲವೊಂದು ಪೂರ್ವ ಗ್ರಹಿತಗಳ ಮೇಲೆ ನಿಂತಿವೆ. ಒಂದು ಪ್ರವಾಸಿಗರೆಲ್ಲ ವಿದೇಶಿಯರು ಮತ್ತು ಶ್ರೀಮಂತರು. ಎರಡು, ಅಂತಹ ಶ್ರೀಮಂತ ವಿದೇಶಿ ಪ್ರವಾಸಿಗರು ದುಬಾರಿ

ಮತ್ತು ಐಷಾರಾಮಿ ಸೌಲಭ್ಯಗಳನ್ನು ಬಯಸುತ್ತಾರೆ. ಮೂರು, ಅಂತಹ ಶ್ರೀಮಂತ ಪ್ರವಾಸಿಗರ ಬೇಡಿಕೆಗಳನ್ನು ಪೂರೈಸಲು ಸ್ಟಾರ್‌ಹೋಟೆಲ್, ಲಕ್ಸುರಿ ರಿಸಾರ್ಟ್ ಹಾಗು ಇನ್ನಿತರ ಆಧುನಿಕ ಸೌಲಭ್ಯಗಳ ಅಗತ್ಯವಿದೆ. ನಾಲ್ಕು, ಶ್ರೀಮಂತ ಪ್ರವಾಸಿಗರ ಅಭಿರುಚಿಗೆ ತಕ್ಕಂತೆ ಪ್ರವಾಸೋದ್ಯಮ ಘಟಕಗಳನ್ನು ರೂಪಿಸಲಿಕ್ಕೆ ಬಂಡವಾಳ ಆಧಾರಿತ ಯೋಜನೆಗಳನ್ನು ರೂಪಿಸಬೇಕಾಗುತ್ತದೆ. ಈ ಗೃಹಿತಗಳನ್ನು ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಸಂಘಟಿತ ಅಥವಾ ಬಂಡವಾಳ ಕೇಂದ್ರಿತ ಪ್ರವಾಸೋದ್ಯಮಕ್ಕೆ ನಮ್ಮ ಪ್ರವಾಸೋದ್ಯಮ ಅಭಿವೃದ್ಧಿ ನೀತಿ ಮಹತ್ವ ನೀಡುತ್ತದೆ ಎನ್ನಬಹುದು. ಈ ಅಧ್ಯಯನದ ಮುಖ್ಯ ಉದ್ದೇಶ ಮೇಲಿನ ಗ್ರಹಿತಗಳನ್ನು ಅಥವಾ ಪ್ರವಾಸೋದ್ಯಮದ ಬೆಳವಣಿಗೆಯಲ್ಲಿ ಅಸಂಘಟಿತ ವಲಯದ ಪಾತ್ರವನ್ನು ಪರೀಕ್ಷಿಸುವುದಾಗಿತ್ತು. ಪ್ರವಾಸೋದ್ಯಮ ಅಭಿವೃದ್ಧಿ ನೀತಿಗಳನ್ನು ಪ್ರಭಾಸುವ ಈ ಪೂರ್ವ ಗ್ರಹಿಕೆಗಳನ್ನು ಪರೀಕ್ಷಿಸುವ ದೃಷ್ಟಿಯಿಂದ ಹಂಪೆಯ ಪ್ರವಾಸೋದ್ಯಮವನ್ನು ಅಧ್ಯಯನ ಮಾಡಲಾಗಿದೆ. ಅಲ್ಲಿ ಬರುವ ಪ್ರವಾಸಿಗರ ಸಾಮಾಜಿಕ ಹಾಗು ಆರ್ಥಿಕ ಹಿನ್ನೆಲೆ, ಅವರ ಬೇಕು ಬೇಡಗಳನ್ನು ಪೂರೈಸಲು ಸ್ಥಳೀಯರು ಒದಗಿಸುವ ಸೇವಾ ಸೌಲಭ್ಯಗಳು, ಪ್ರವಾಸಿಗರ ನಿರೀಕ್ಷೆ ಮತ್ತು ಸ್ಥಳೀಯರು ಒದಗಿಸುವ ಸೇವಾ ಸೌಲಭ್ಯಗಳ ನಡುವಿನ ಅಂತರ ಮತ್ತು ಸ್ಥಳೀಯ ಅರ್ಥ ಹಾಗೂ ಸಾಮಾಜಿಕ ವ್ಯವಸ್ಥೆ ಮೇಲೆ ಪ್ರವಾಸೋದ್ಯಮದಿಂದ ಆದ ಪರಿಣಾಮವನ್ನು ಅಧ್ಯಯನ ಮಾಡಲಾಗಿದೆ. ಈ ಅಧ್ಯಯನದ ಫಲಿತಗಳನ್ನು ಮುಂದೆ ಕೊಡಲಾಗಿದೆ.

ಅಧ್ಯಯನದ ಫಲಿತಗಳು

ವಿದೇಶಿ ಪ್ರವಾಸಿಗರನ್ನು ಗಮನದಲ್ಲಿಟ್ಟುಕೊಂಡು ಅವರನ್ನು ತೃಪ್ತಿ ಪಡಿಸುವ ದಿಶೆಯಲ್ಲಿ ನಮ್ಮ ಪ್ರವಾಸೋದ್ಯಮ ನೀತಿಗಳು ರೂಪಿತವಾಗಿವೆ. ಆದರೆ ಹಂಪೆಗೆ ಕೇವಲ ವಿದೇಶಿ ಪ್ರವಾಸಿಗರು ಮಾತ್ರ ಬರುವುದಿಲ್ಲ; ದೇಶಿಯ ಪ್ರವಾಸಿಗರೂ ಬರುತ್ತಾರೆ. ವಿದೇಶಿ ಪ್ರವಾಸಿಗರಿಗೆ ಹೋಲಿಸಿದರೆ ದೇಶಿ ಪ್ರವಾಸಿಗರ ಸಂಖ್ಯೆ ಹೆಚ್ಚು ಇದೆ. ದೇಶದ ಎಲ್ಲಾ ಕಡೆಯಿಂದ ದೇಶಿ ಪ್ರವಾಸಿಗರು ಬರುತ್ತಾರೆ. ಆದರೆ ದಕ್ಷಿಣ ಭಾರತದ ರಾಜ್ಯಗಳಿಂದ ಬರುವ ಪ್ರವಾಸಿಗರ ಸಂಖ್ಯೆ ಉತ್ತರ ಭಾರತದ ರಾಜ್ಯಗಳಿಂದ ಬರುವ ಪ್ರವಾಸಿಗರ ಸಂಖ್ಯೆಗಿಂತ ಹೆಚ್ಚು ಇದೆ. ಕರ್ನಾಟಕದ ವಿವಿಧ ಜಿಲ್ಲೆಗಳಿಂದ ಬರುವ ಪ್ರವಾಸಿಗರ ಸಂಖ್ಯೆ ದಕ್ಷಿಣ ಭಾರತದ ಇತರ ರಾಜ್ಯಗಳಿಂದ ಬರುವ ಪ್ರವಾಸಿಗರಿಂದ ಹೆಚ್ಚು ಇದೆ. ದೇಶಿ ಪ್ರವಾಸಿಗರಲ್ಲಿ ವಿದ್ಯಾರ್ಥಿಗಳು ಮತ್ತು ಹಂಪೆಯ ವಿರೂಪಾಕ್ಷನ ದರ್ಶನಕ್ಕೆ(ಧಾರ್ಮಿಕ ಕಾರ್ಯಗಳು) ಬರುವ ಪ್ರವಾಸಿಗರ ಸಂಖ್ಯೆ ಹೆಚ್ಚು. ದೇಶಿ ಪ್ರವಾಸಿಗರು ಹಂಪಿಯಲ್ಲಿ ಉಳಿಯುವ ಸಾಧ್ಯತೆಗಳು ಕಡಿಮೆ. ಒಂದು ವೇಳೆ ಉಳಿದರೂ ಅವರು ತಮ್ಮ ಊಟ ತಿಂಡಿಯ ವ್ಯವಸ್ಥೆಯನ್ನು ತಾವೆ ಮಾಡಿಕೊಳ್ಳುವುದು ಹೆಚ್ಚು. ಹಾಗಾಗಿ ಹಂಪೆ ಪ್ರವಾಸೋದ್ಯಮಿಗಳಿಗೆ ದೇಶಿ ಪ್ರವಾಸಿಗರೆಂದರೆ ಅಷ್ಟಕಷ್ಟೆ. ಪ್ರವಾಸೋದ್ಯಮಿಗಳ ಮುಖ್ಯ ಕಾಳಜಿ ವಿದೇಶಿ ಪ್ರವಾಸಿಗರನ್ನು ಆಕರ್ಷಿಸಿ ತಮ್ಮ

ವ್ಯಾಪಾರವನ್ನು ವೃದ್ಧಿಸಿಕೊಳ್ಳುವುದು. ಕ್ಷೇತ್ರ ಕಾರ್ಯದ ಅವಧಿಯಲ್ಲಿ ಹಂಪಿಗೆ ಬರುವ ವಿದೇಶಿ ಪ್ರವಾಸಿಗರ ಸಾಮಾಜಿಕ ಹಾಗು ಆರ್ಥಿಕ ಹಿನ್ನೆಲೆಯನ್ನು ಗುರುತಿಸಲಾಗಿದೆ. 23 ರಾಷ್ಟ್ರಗಳಿಂದ ಬಂದ 162 ವಿದೇಶಿ ಪ್ರವಾಸಿಗರಿಂದ ಮಾಹಿತಿ ಸಂಗ್ರಹಿಸಲಾಗಿದೆ. ಅವರ ರಾಷ್ಟ್ರೀಯ ಹಿನ್ನೆಲೆಯನ್ನು ನೋಡಲಾಗಿದೆ. ಹೆಚ್ಚಿನ ಸಂಖ್ಯೆಯಲ್ಲಿ ಇಂಗ್ಲೇಡ್, ಇಟಲಿ, ಫ್ರಾನ್ಸ್, ಜರ್ಮನಿ, ಇಸ್ರೇಲ್ ಮತ್ತು ಹಾಲೆಂಡ್ ರಾಷ್ಟ್ರಗಳಿಂದ ಪ್ರವಾಸಿಗರು ಬಂದಿದ್ದಾರೆ. ಈ ಪ್ರವಾಸಿಗರಲ್ಲಿ 20 ರಿಂದ 30 ವರ್ಷ ವಯೋಮಾನದವರು 88 ಪ್ರವಾಸಿಗರು ಇದ್ದರೆ, 30 ರಿಂದ 50 ವರ್ಷದೊಳಗಿನವರು 42 ಪ್ರವಾಸಿಗರು, 20 ವರ್ಷದ ಒಳಗಿನವರು 18 ಪ್ರವಾಸಿಗರು ಮತ್ತು 50 ವರ್ಷ ಮೇಲ್ಪಟ್ಟವರು 14 ಪ್ರವಾಸಿಗರಿದ್ದಾರೆ. ಇವರಲ್ಲಿ 86 ಮಹಿಳೆ ಮತ್ತು 76 ಪುರುಷ ಪ್ರವಾಸಿಗರಿದ್ದಾರೆ. ಸಂದರ್ಶಿಸಿದ 162 ಪ್ರವಾಸಿಗರಲ್ಲಿ 113 ಜನ ಅವಿವಾಹಿತರಾಗಿದ್ದಾರೆ. ಪ್ರವಾಸಿಗರ ಶಿಕ್ಷಣ ಮಟ್ಟ ಇಂತಿದೆ. 85 ಪ್ರವಾಸಿಗರು ಇಂಟರ್‌ಮಿಡಿಯಟ್ (ಪ್ರೌಢ ಶಿಕ್ಷಣ) ಶಿಕ್ಷಣವನ್ನು, 45ಜನ ಪದವಿ ಶಿಕ್ಷಣ ಮತ್ತು 32 ಜನ ತಾಂತ್ರಿಕ ಶಿಕ್ಷಣವನ್ನು ಪಡೆದಿದ್ದಾರೆ. ಪ್ರವಾಸಿಗರಲ್ಲಿ 108 ಮಂದಿ ತೃತೀಯ ವಲಯದಲ್ಲಿ ಮತ್ತು 54 ಮಂದಿ ಪ್ರಾಥಮಿಕ ಹಾಗೂ ದ್ವಿತೀಯ ವಲಯದಲ್ಲಿ ದುಡಿಯುತ್ತಿದ್ದಾರೆ. ಹೆಚ್ಚು ವಿದೇಶಿ ಪ್ರವಾಸಿಗರು ತೃತೀಯ ವಲಯದಲ್ಲಿ ಕಂಡು ಬರುತ್ತಾರೆ.

ಹಂಪಿಗೆ ಬರುವ ವಿದೇಶಿ ಪ್ರವಾಸಗರಲ್ಲಿ ಮಧ್ಯಮ ವರ್ಗದ ಕಡಿಮೆ ಅದಾಯವುಳ್ಳವರ ಸಂಖ್ಯೆ ಹೆಚ್ಚು. ಇವರು ತಮ್ಮ ದುಡಿಮೆಯ ಕೆಲಭಾಗವನ್ನು ಉಳಿತಾಯ ಮಾಡಿ ಅದರಲ್ಲಿ ಪ್ರವಾಸ ಕೈಗೊಂಡವರು. ಇವರು ನಿರಂತರವಾಗಿ ಉದ್ಯೋಗದಲ್ಲಿರುವವರು ಅಥವಾ ದುಡಿಯುವವರು. ಅವಿಶ್ರಾಂತ ಬದುಕಿನಿಂದ ತಾತ್ಕಾಲಿಕ ವಿಶ್ರಾಂತಿಯನ್ನು ಬಯಸುವವರು. ಬೆಟ್ಟ ಗುಡ್ಡಗಳಿಂದ ಕೂಡಿದ ನಿರ್ಜನ ಪ್ರದೇಶ, ಕಡಿಮೆ ಜೀವನ ವೆಚ್ಚವುಳ್ಳ ಸ್ಥಳಗಳಲ್ಲಿ ತಮ್ಮ ಪ್ರವಾಸಿ ದಿನಗಳನ್ನು ಕಳೆಯಲು ಇಷ್ಟಪಡುತ್ತಾರೆ. ಹಂಪೆಗೆ ಬಂದ ಪ್ರವಾಸಿಗರು ಹಂಪೆಯಲ್ಲಿ ಉಳಿದುಕೊಳ್ಳಲು ಹಲವು ಕಾರಣಗಳಿವೆ. ನೈಸರ್ಗಿಕ ಕೊಡುಗೆಯಾದ ಬೆಟ್ಟಗುಡ್ಡ, ನದಿ, ನಿರ್ಜನತೆ ಹಾಗೂ ಐತಿಹಾಸಿಕ ಸ್ಮಾರಕಗಳು ಮತ್ತು ಕಡಿಮೆ ಜೀವನ ವೆಚ್ಚವಿರುವ ಹಂಪೆಯ ಅತಿಥಿ ಗೃಹಗಳು ಅವುಗಳಲ್ಲಿ ಮುಖ್ಯ ಕಾರಣಗಳು. ಹಂಪಿಯಲ್ಲಿ ತಂಗುವ ಈ ಪ್ರವಾಸಿಗರ ಮುಖ್ಯ ಆದ್ಯತೆಗಳು ಹೀಗಿವೆ. ಪ್ರಶಾಂತ ವಾತಾವರಣ ಮತ್ತು ನೈಸರ್ಗಿಕತೆಯನ್ನು ಇಷ್ಟಪಡುತ್ತಾರೆ. ಗಾಳಿ ಬೆಳಕು ಸ್ವಚ್ಛತೆಯಿಂದ ಇರುವ ಹಂಪೆಯಲ್ಲಿನ ಸಾಮಾನ್ಯ ಅತಿಥಿಗೃಹಗಳಲ್ಲಿ ಪ್ರವಾಸಿಗರು ತಂಗುತ್ತಾರೆ. ಈ ಪ್ರವಾಸಿಗರು ಆಧುನಿಕ ಸೇವಾ ಸೌಲಭ್ಯಗಳಾದ ಐಷ್ಯರಾಮಿ ಅತಿಥಿಗೃಹ ಅಥವಾ ರೆಸ್ಟೋರೆಂಟ್‌ಗಳನ್ನು ಹೆಚ್ಚು ಇಷ್ಟಪಡುವುದಿಲ್ಲ. ಅವರ ದೇಶದಲ್ಲಿನ ಮಾದರಿಯ ಆಹಾರ ವಸ್ತುಗಳನ್ನು ಸೇವಿಸುತ್ತಾರೆ. ಇದರಲ್ಲಿ ಬೇಕರಿ ಪದಾರ್ಥಗಳು, ಮೊಟ್ಟೆ, ತರಕಾರಿ, ತಂಪುಪಾನೀಯಗಳು ಪ್ರಮುಖ ಸೇವಿಸುವ ವಸ್ತುಗಳಾಗಿವೆ.

ಹಂಪೆಯಲ್ಲಿ ತಂಗುವ ಪ್ರವಾಸಿಗರು ಆದಷ್ಟು ಕಡಿಮೆ ದರಕ್ಕೆ ಉತ್ತಮ ಸರಕು ಮತ್ತು ಸೇವೆಗಳನ್ನು ಪಡೆಯಲು ಇಚ್ಛಿಸುತ್ತಾರೆಂಬುದು ಅಧ್ಯಯನದಿಂದ ಕಂಡುಬಂದ ಅಂಶವಾಗಿದೆ.

ಇಂತಹ ಪ್ರವಾಸಿಗರ ಅವಶ್ಯಕತೆಗಳನ್ನು ಪೂರೈಸಲು ಹಂಪೆಯಲ್ಲಿ ವಿವಿಧ ಉದ್ಯಮಗಳು ರೂಪುಗೊಂಡಿವೆ. ಅವುಗಳನ್ನು ಸ್ಥೂಲವಾಗಿ ನಾಲ್ಕು ವಿಧಗಳಾಗಿ ವಿಂಗಡಿಸಬಹುದು. ಊಟ ಮತ್ತು ತಂಗುವ ವ್ಯವಸ್ಥೆ, ಸಾರಿಗೆ ಮತ್ತು ಸಂಪರ್ಕ ಸೌಲಭ್ಯಗಳು, ವೈದ್ಯಕೀಯ ಸೌಲಭ್ಯಗಳು, ಕಾನೂನು ವ್ಯವಸ್ಥೆ ಮತ್ತು ಇತರ ಸೌಲಭ್ಯಗಳು. ಪ್ರವಾಸಿಗರ ಬೇಕು ಬೇಡಗಳನ್ನು ಪೂರೈಸಲು ಸ್ಥಳೀಯರು ಒದಗಿಸುವ ಸೇವಾ ಸೌಲಭ್ಯಗಳು ಇಂತಿವೆ. ಅತಿಥಿಗೃಹ ಮತ್ತು ರೆಸ್ಟೋರೆಂಟ್‌ಗಳ ಸಂಖ್ಯೆ 61. ರೆಸ್ಟೋರೆಂಟ್ ಸಹಿತ ಅತಿಥಿ ಗೃಹಗಳಲ್ಲಿ ಕನಿಷ್ಠ 2 ರಿಂದ 12 ರೂಂಗಳು ಹಾಗೂ ರೆಸ್ಟೋರೆಂಟ್ ಇಲ್ಲದ ಅತಿಥಿ ಗೃಹಗಳಲ್ಲಿ 4 ರಿಂದ 23 ರೂಂಗಳಿರುತ್ತವೆ. ಕೊಠಡಿಗೆ ಹೊಂದಿಕೊಂಡಂತೆ ಸ್ನಾನದ ಮತ್ತು ಶೌಚಾಲಯ ವ್ಯವಸ್ಥೆ ಇರುವ ಅತಿಥಿಗೃಹಗಳ ಸಂಖ್ಯೆ 18. ಕೆಲವು ಅತಿಥಿಗೃಹಗಳು ಇಂಟರ್‌ನೆಟ್ ಸೌಲಭ್ಯ ಹೊಂದಿವೆ. ಅದಲ್ಲದೆ ಇಂಟರ್‌ನೆಟ್ ಸೌಲಭ್ಯ ಒದಗಿಸುವ ಪ್ರತ್ಯೇಕ ವ್ಯವಸ್ಥೆ ಇದೆ. ಹಂಪಿಯಲ್ಲಿ ರೆಸ್ಟೋರೆಂಟ್ ಮತ್ತು ಹೋಟೆಲುಗಳ ನಡುವೆ ವ್ಯತ್ಯಾಸವಿದೆ. ವಿದೇಶಿಯರ ತಿಂಡಿ ತಿನಸುಗಳನ್ನು ಮಾತ್ರ ಮಾರುವ ಹೋಟೆಲುಗಳಿಗೆ ರೆಸ್ಟೋರೆಂಟ್ ಎಂದು ಹಾಗೂ ದೇಶಿಯ ತಿಂಡಿ ತಿನಸುಗಳು ದೊರೆಯುವ ಸ್ಥಳಕ್ಕೆ ಹೋಟೆಲ್ ಎಂದು ಕರೆಯಲಾಗುತ್ತದೆ. ಹಂಪೆಯಲ್ಲಿ ಒಟ್ಟು 15 ರೆಸ್ಟೋರೆಂಟ್‌ಗಳು ಮತ್ತು 20 ಹೋಟೆಲುಗಳು ಇವೆ. ಇದಲ್ಲದೆ ಹಣ್ಣು ಹಂಪಲಗಳನ್ನು, ಬೇಕರಿ ಉತ್ಪನ್ನಗಳನ್ನು, ತಂಪು ಪಾನೀಯಗಳನ್ನು ಮತ್ತು ಇತರ ತಿಂಡಿ ತಿನಸುಗಳನ್ನು ಮಾರುವ ಅಂಗಡಿಗಳು 20 ಇವೆ. ಹಂಪಿಯಲ್ಲಿ ದಿನನಿತ್ಯ ಓಡಾಡುವ ಆಟೋಗಳು 25 ಇವೆ. 10 ಎಸ್.ಟಿ.ಡಿ. ಬೂತ್‌ಗಳಿವೆ. ಇಂಟರ್‌ನೆಟ್ ಸೌಲಭ್ಯ ಒದಗಿಸುವ ಪ್ರತ್ಯೇಕ ವ್ಯವಸ್ಥೆ ಇದೆ. ಇವುಗಳ ಸಂಖ್ಯೆ 15. ವಿದೇಶಿ ಹಣದ ವಿನಿಮಯ ಮಳಿಗೆಗಳು ಆರು. ಅವೆಲ್ಲವೂ ಖಾಸಗೀಯ ನಿರ್ವಹಣೆಗೆ ಸೇರಿದ್ದು. ಇವುಗಳ ಜತೆ ರಾಷ್ಟ್ರೀಕೃತ ಕೆನರಾ ಬ್ಯಾಂಕ್‌ನ ಶಾಖೆ ಕೂಡ ವಿದೇಶಿ ವಿನಿಮಯ ವ್ಯವಹಾರ ನಡೆಸುತ್ತಿದೆ. ಅನುಮತಿ ಪತ್ರ ಇರುವ ಪ್ರವಾಸಿ ಮಾರ್ಗದರ್ಶಿಗಳ ಸಂಖ್ಯೆ 32 ಜನ ಇದ್ದಾರೆ. ಆರೋಗ್ಯಕ್ಕೆ ಸಂಬಂಧಿಸಿದಂತೆ ಹಂಪೆಯಲ್ಲಿ ಒಟ್ಟು ನಾಲ್ಕು ಕ್ಲಿನಿಕ್‌ಗಳಿವೆ. ಅವುಗಳಲ್ಲಿ ಮೂರು ಖಾಸಗಿ ಕ್ಲಿನಿಕ್‌ಗಳು ಮತ್ತು ಒಂದು ಸರಕಾರಿ ಆಯುರ್ವೇದಿಕ್ ಆಸ್ಪತ್ರೆ ಇದೆ. ಹೆಚ್ಚಿನವರು ಖಾಸಗಿ ಕ್ಲಿನಿಕ್‌ಗಳನ್ನು ಅವಲಂಬಿಸಿದ್ದಾರೆ.

ಹಂಪೆಯ ಸ್ಥಳೀಯರು ಒದಗಿಸುವ ಈ ಸವಲತ್ತುಗಳಿಂದ ಪ್ರವಾಸಿಗರು ತೃಪ್ತರಾಗಿದ್ದಾರೆಯೇ? ಅಥವಾ ಪ್ರವಾಸಿಗರ ನಿರೀಕ್ಷೆ ಮತ್ತು ಸ್ಥಳೀಯರು ಒದಗಿಸುವ ಸೌಲಭ್ಯಗಳ ನಡುವೆ ಅಂತರ ಇದೆಯೇ? ಎನ್ನುವುದನ್ನು ಕಂಡುಕೊಳ್ಳಲು ಪ್ರಯತ್ನಿಸಲಾಗಿದೆ.

[illegible]

[illegible]

[illegible]

ಸಂಕ್ಷಿಪ್ತವಾಗಿ ಹೇಳುವುದಾದರೆ ಪ್ರವಾಸಿಗರ ನಿರೀಕ್ಷೆಗಳಿಗೆ ಅನುಗುಣವಾಗಿ ಎಲ್ಲ ಸೇವಾ ಸೌಲಭ್ಯಗಳನ್ನು ಸ್ಥಳೀಯರು ಪೂರೈಸುತ್ತಿಲ್ಲ. ಅತಿಥಿಗೃಹಗಳ ಬಗ್ಗೆ ಬಹುತೇಕ ಪ್ರವಾಸಿಗರು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಅತಿಥಿಗೃಹದ ಕೊಠಡಿಗಳು ವಿಶಾಲವಾಗಿಲ್ಲ, ಗಾಳಿ ಬೆಳಕು ಕಡಿಮೆ ಇದೆ ಮತ್ತು ಶೌಚಾಲಯಗಳು ಸ್ವಚ್ಚ ಇಲ್ಲ ಎಂದು ಪ್ರವಾಸಿಗರು ಅಭಿಪ್ರಾಯ ಪಟ್ಟಿದ್ದಾರೆ. ಹಾಗೆಯೆ ಕೊಠಡಿಗಳಿಗೆ ಹೊಂದಿಕೊಂಡಂತೆ ಬಾತರೂಂಗಳು ಮತ್ತು ಶೌಚಾಲಯಗಳು ಪಾಶ್ಚಿಮಾತ್ಯ ಮಾದರಿಯಲ್ಲಿ ಇಲ್ಲ ಎಂದು ಕೆಲವು ಪ್ರವಾಸಿಗರು ದೂರಿದ್ದಾರೆ. ಹೊಸಪೇಟೆಯಿಂದ ಹಂಪಿಗೆ ಪ್ರಯಾಣಿಸುವ ಸಾರಿಗೆ ವ್ಯವಸ್ಥೆ ಸರಿ ಇಲ್ಲ. ಪ್ರಯಾಣಿಕರನ್ನು ಸಾಗಿಸುವ ವಾಹನಗಳ ಸಂಖ್ಯೆ ಕಡಿಮೆ ಇರುವುದರಿಂದ ಯಾವಾಗಲೂ ಪ್ರಯಾಣಿಕರಿಂದ ತುಂಬಿರುತ್ತವೆ. ಹಾಗಾಗಿ ಹೆಚ್ಚು ವಿದೇಶಿಯರು ಹಂಪೆಗೆ ಆಟೋರಿಕ್ಷಾಗಳಲ್ಲಿ ಪ್ರಯಾಣಿಸುತ್ತಾರೆ. ಆಟೊರಿಕ್ಷಾಗಳಿಗೆ ಸಾರಿಗೆ ದರಗಳನ್ನು ತೋರಿಸುವ ಮೀಟರ್‌ಗಳನ್ನು ಅಳವಡಿಸಿಕೊಳ್ಳುವುದು ಇಲ್ಲ. ಇದರಿಂದ ಆಟೋದವರು ಕೇಳಿದ ಹಣವನ್ನು ಕೊಟ್ಟು ಪ್ರಯಾಣಿಸಬೇಕಾಗುತ್ತದೆ. ಇದು ಒಂದು ರೀತಿಯ ಮೋಸಕ್ಕೆ ಒಳಗಾದ ಅನುಭವ ಕೊಡುತ್ತದೆಂದು ಬಹುತೇಕ ಪ್ರವಾಸಿಗರ ಅಭಿಪ್ರಾಯವಾಗಿದೆ. ಹಾಗೆಯೆ ಹಂಪೆಯ ಒಳಗೆ ಸುತ್ತಾಡಲು ಸರಿಯಾದ ಸಾರಿಗೆ ವ್ಯವಸ್ಥೆ ಇಲ್ಲ. ರಸ್ತೆಯ ಬದಿಯಲ್ಲಿ ರಸ್ತೆ ಎಲ್ಲಿಗೆ ಹೋಗುತ್ತದೆ ಎಂಬುದನ್ನು ಸೂಚಿಸುವ ಸೂಚನಾ ಫಲಕಗಳಿಲ್ಲ. ಹಂಪೆಯ ಗ್ರಾಮವನ್ನು ಸ್ವಚ್ಛವಾಗಿಡಲು ಸಹಕಾರಿಯಾಗಬಹುದಾದ ರಸ್ತೆ ಬದಿಯ ಡಸ್ಟ್‌ಬಿನ್‌ಗಳು ಇಲ್ಲ. ಇಂತಹ ಸಣ್ಣಪುಟ್ಟ ವ್ಯವಸ್ಥೆಗಳನ್ನು ಮಾಡುವುದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರನ್ನು ಹಂಪೆ ಆಕರ್ಷಿಸಬಹುದೆಂದು ಎಂದು ಪ್ರವಾಸಿಗರು ಸಲಹೆ ನೀಡುತ್ತಾರೆ. ಇಂಟರ್‌ನೆಟ್, ಇ-ಮೇಲ್ ದರಗಳು ಮತ್ತು ಸ್ಮಾರಕಗಳ ಪ್ರವೇಶ ದರಗಳು ದುಬಾರಿಯಾಗಿವೆ ಎಂಬುದು ಪ್ರವಾಸಿಗರ ದೂರಾಗಿದೆ. ಹಂಪೆಯಲ್ಲಿ ದೊರೆಯುವ ಕೆಲವು ಸೇವಾ ಸೌಲಭ್ಯಗಳಾದ ರೆಸ್ಟೋರೆಂಟ್, ಉಡುಪುಗಳು ಮತ್ತು ದಿನಬಳಕೆಯ ವಸ್ತುಗಳ ಬಗ್ಗೆ ಹೆಚ್ಚಿನ ಪ್ರವಾಸಿಗರು ತೃಪ್ತಿ ವ್ಯಕ್ತಪಡಿಸಿದ್ದಾರೆ.

ಹಂಪೆಯ ಸ್ಥಳೀಯರು ನಡೆಸುವ ಈ ಅಸಂಘಟಿತ ಪ್ರವಾಸೋದ್ಯಮ ಯಾರಿಗೆ ಲಾಭ ತಂದಿದೆ? ಅಲ್ಲಿನ ಒಟ್ಟು ಆರ್ಥಿಕಸ್ಥಿತಿ ಇದರಿಂದ ಹೇಗೆ ಪ್ರಭಾವಿತವಾಗಿದೆ? ಪ್ರವಾಸೋದ್ಯಮದ ಸಾಮಾಜಿಕ ಪರಿಣಾಮವೇನು? ಇತ್ಯಾದಿ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಲಾಗಿದೆ. ಹಂಪೆಯ ಅರ್ಥವ್ಯವಸ್ಥೆಯ ಮೇಲೆ ಪ್ರವಾಸೋದ್ಯಮದಿಂದ ಆದ ಪರಿಣಾಮವನ್ನು ಅರ್ಥಮಾಡಿಕೊಳ್ಳಲು ಏಳು ಸೂಚ್ಯಂಕಗಳನ್ನು ಬಳಸಲಾಗಿದೆ. ಅವುಗಳೆಂದರೆ- ಮೂಲಭೂತ ಸೌಲಭ್ಯಗಳ ಪೂರೈಕೆ, ವೃತ್ತಿ

[illegible]

ರಚನೆಯಲ್ಲಿನ ಬದಲಾವಣೆ, ತಲಾ ವರಮಾನ, ಕುಟುಂಬದ ಸಂಪನ್ಮೂಲ ಸ್ಥಿತಿ, ಭೂ ಹಿಡುವಳಿಯ ಪ್ರಮಾಣ, ಗ್ರಾಮ ಪಂಚಾಯತಿ ಆದಾಯ ಮತ್ತು ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳ ಸಂಖ್ಯೆ. ಆರ್ಥಿಕ ಮೂಲಭೂತ ಸೌಲಭ್ಯಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ಆರ್ಥಿಕ ಮೂಲ ಸೌಲಭ್ಯಗಳಲ್ಲಿ ಮುಖ್ಯವಾಗಿ ಹಣಕಾಸಿನ ಸಂಸ್ಥೆಗಳಾದ ಸಹಕಾರಿ ಸಂಘ, ಬ್ಯಾಂಕ್, ಹಣದ ವಿನಿಮಯ ಮಳಿಗೆಗಳು, ಜತೆಗೆ ಸಾಧನ ಸಂಪರ್ಕಗಳಾದ ಅಂಚೆ ಕಚೇರಿ, ಫೋನ್, ಇಂಟರ್‌ನೆಟ್, ಇ-ಮೇಲ್ ಸೌಲಭ್ಯಗಳಿಗೆ ಸಂಬಂಧಿಸಿದಂತೆ ಬೆಳವಣಿಗೆಯನ್ನು ವಿಶ್ಲೇಷಿಸಬಹುದಾಗಿದೆ. ಈ ಸೌಲಭ್ಯಗಳಿಗೆ ಸಂಬಂಧಿಸಿದ ಹಂಪೆಯ ಅಂಕಿ ಅಂಶಗಳನ್ನು ತಾಲೂಕು, ಜಿಲ್ಲೆ ಮತ್ತು ರಾಜ್ಯಗಳ ಅಂಕಿ-ಅಂಶಗಳೊಂದಿಗೆ ಹೋಲಿಸಿ ಹಂಪೆಯ ಆರ್ಥಿಕ ಪರಿವರ್ತನೆ ಬಗ್ಗೆ ತೀರ್ಮಾನಕ್ಕೆ ಬರಲಾಗಿದೆ. ಈ ಸೌಲಭ್ಯಗಳಿಗೆ ಸಂಬಂಧಿಸಿದ ಅಂಕಿಅಂಶಗಳು ಹಂಪೆಯನ್ನು ತಾಲೂಕು ಮತ್ತು ಜಿಲ್ಲೆಯ ಸರಾಸರಿಗಿಂತ ಉತ್ತಮ ಸ್ಥಿತಿಯಲ್ಲಿ ತೋರಿಸುತ್ತಿವೆ. ಕೆಲವೊಂದು ಸೌಲಭ್ಯಗಳಿಗೆ ಸಂಬಂಧಿಸಿದ ಅಂಕಿಅಂಶಗಳು (ಬ್ಯಾಂಕ್, ಇಂಟರ್‌ನೆಟ್, ಹಣದ ವಿನಿಮಯ ಅಂಗಡಿಗಳು ಮತ್ತು ದೂರವಾಣಿ) ರಾಜ್ಯದ ಸರಾಸರಿಗಳಿಗಿಂತಲೂ ಹೆಚ್ಚಿದೆ. ವೃತ್ತಿ ರಚನೆಯಲ್ಲಿ ಸಾಕಷ್ಟು ಬದಲಾವಣೆ ಆಗಿದೆ. ಪ್ರಾಥಮಿಕ ವಲಯದಿಂದ (ಕೃಷಿಯಿಂದ) ತೃತೀಯ ವಲಯವಾದ ಪ್ರವಾಸೋದ್ಯಮ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡವರ ಸಂಖ್ಯೆ ಹಂಪೆಯಲ್ಲಿ 1991 ಮತು 2001ದ ಮಧ್ಯೆ ಗಣನೀಯವಾಗಿ ಹೆಚ್ಚಿದೆ. ತಲಾ ವರಮಾನವು ಸಹ ಜಿಲ್ಲೆ ಮತ್ತು ರಾಜ್ಯದ ಸರಾಸರಿಗಳಿಗಿಂತ ಹೆಚ್ಚಿದೆ. ಕುಟುಂಬದ ಸಂಪನ್ಮೂಲ ಸ್ಥಿತಿ ಜಿಲ್ಲೆ ಮತ್ತು ರಾಜ್ಯದ ಸರಾಸರಿಗಳಿಗಿಂತ ಹೆಚ್ಚಿದೆ. ಬಡತನ ರೇಖೆಗಿಂತ ಕೆಳಗಿನ ಕುಟುಂಬಗಳ ಸಂಖ್ಯೆ ಜಿಲ್ಲೆ ಮತ್ತು ರಾಜ್ಯದ ಸರಾಸರಿಗಳಿಗಿಂತ ಕಡಿಮೆ ಇದೆ. ಹಂಪೆ ಗ್ರಾಮ ಪಂಚಾಯತಿಯೂ ತಾಲೂಕಿನ ಇತರೆ ಗ್ರಾಮಪಂಚಾಯಿಗಳಿಗೆ ಹೊಲಿಸಿದರೆ ಹೆಚ್ಚು ಆದಾಯವನ್ನು ಗಳಿಸುತ್ತಿದೆ.

ಸ್ಥಳೀಯ ಸಮಾಜದ ಮೇಲೆ ಪ್ರವಾಸೋದ್ಯಮ ಬೀರಿದ ಪರಿಣಾಮವನ್ನು ಅಧ್ಯಯನ ಮಾಡಲು ಆರು ಮುಖ್ಯ ಸೂಚ್ಯಂಕಗಳನ್ನು ಬಳಸಲಾಗಿದೆ. ವಿಭಕ್ತ ಮತ್ತು ಅವಿಭಕ್ತ ಕುಟುಂಬಗಳ ಸಂಖ್ಯೆ, ಶಿಕ್ಷಣ, ಆರೋಗ್ಯ, ಮಹಿಳೆಯರ ಸ್ಥಾನಮಾನಗಳು, ಲಿಂಗ ಪರಿಮಾಣ ಅಂತರ್‌ಜಾತಿ ವಿವಾಹಗಳು ಮತ್ತು ಸಮಾಜದಲ್ಲಿನ ಏಣಿಶ್ರೇಣಿಗಳು. ಇವುಗಳಿಗೆ ಸಂಬಂಧಿಸಿದ ಹಂಪೆಯ ಅಂಕಿ ಅಂಶಗಳನ್ನು ಜಿಲ್ಲೆ ಮತ್ತು ರಾಜ್ಯದ ಅಂಕಿ-ಅಂಶಗಳಿಗೆ ಹೋಲಿಸಿ ಸಾಮಾಜಿಕ ಪರಿವರ್ತನೆ ಕುರಿತು ತೀರ್ಮಾನಕ್ಕೆ ಬರಲಾಗಿದೆ. ಹಂಪೆಯ ಸಾಕ್ಷರತೆಗೆ ಸಂಬಂಧಿಸಿದ ಅಂಕಿ ಅಂಶಗಳು ತಾಲೂಕು ಮತ್ತು ಜಿಲ್ಲೆಯ ಸರಾಸರಿಗಿಂತ ಹೆಚ್ಚಿದೆ. ಆದರೆ ರಾಜ್ಯದ ಸರಾಸರಿಗಿಂತ ಸ್ವಲ್ಪ ಕಡಿಮೆ ಇದೆ. ಮಹಿಳೆಯರ ಸಾಕ್ಷರತಾ ಪ್ರಮಾಣವು ತಾಲೂಕು, ಜಿಲ್ಲೆ ಮತ್ತು ರಾಜ್ಯಕ್ಕಿಂತ ಉತ್ತಮವಾಗಿದೆ. ಆರೋಗ್ಯಕ್ಕೆ ಸಂಬಂಧಿಸಿದ ಅಂಕಿ ಅಂಶಗಳು ಹಂಪೆಯ ಸ್ಥಾನವನ್ನು ಜಿಲ್ಲೆ ಮತ್ತು ರಾಜ್ಯದ

[illegible]

[illegible]

ಸರಾಸರಿಗಿಂತ ಉತ್ತಮ ಸ್ಥಿತಿಯಲ್ಲಿ ತೋರಿಸಿವೆ. ತಾಲೂಕು, ಜಿಲ್ಲೆ ಮತ್ತು ರಾಜ್ಯದಲ್ಲಿ ಲಿಂಗ ಪರಿಮಾಣ ನಕಾರಾತ್ಮಕವಾಗಿದ್ದರೆ ಹಂಪೆಯಲ್ಲಿ ಅದು ಸಕಾರಾತ್ಮಕವಾಗಿದೆ. ಲಿಂಗ ಪರಿಮಾಣದಲ್ಲಿ ಸಕರಾತ್ಮಕ ಬೆಳವಣಿಗೆ ಹೆಚ್ಚು ಸ್ಪಷ್ಟವಾಗಿ ಮೂಡಿ ಬಂದಿರುವುದು 1990 ರ ನಂತರ. ಅಂದರೆ ಪ್ರವಾಸೋದ್ಯಮ ಹಂಪೆಯಲ್ಲಿ ಹೆಚ್ಚು ಬೆಳವಣಿಗೆ ಕಂಡ ನಂತರ. ಪ್ರವಾಸೋದ್ಯಮ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡ ಮಹಿಳೆಯರ ಸಂಖ್ಯೆ ಗಣನೀಯವಾಗಿ ಹೆಚ್ಚಿದೆ. ಹಂಪೆ ಗ್ರಾಮದಲ್ಲಿ ವಿವಿಧ ರಾಜ್ಯಗಳ ಮತ್ತು ವಿದೇಶಿ ಭಾಷೆಗಳನ್ನು ಮಾತನಾಡುವವರ ಸಂಖ್ಯೆಯು ಹೆಚ್ಚಿದೆ. ಅದರಲ್ಲೂ ಪ್ರವಾಸೋದ್ಯಮ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡ ಕುಟುಂಬಗಳ ಹೆಚ್ಚು ಕಡಿಮೆ ಎಲ್ಲ ಸದಸ್ಯರು ಇಂಗ್ಲೀಷ್ ಭಾಷೆಯಲ್ಲಿ ವ್ಯವಹರಿಸುತ್ತಾರೆ. ಪ್ರವಾಸೋದ್ಯಮದ ಚಟುವಟಿಕೆಗಳು ಹೆಚ್ಚಿದ ನಂತರ ಅಂತರ್‌ಜಾತಿ ವಿವಾಹಗಳ ಸಂಖ್ಯೆಯಲ್ಲಿ ಏರಿಕೆ ಕಂಡುಬಂದಿದೆ. ಅಂತರ್‌ಜಾತಿ ವಿವಾಹ ಆದವರಲ್ಲಿ ವಿದೇಶಿಯರನ್ನು ಮದುವೆಯಾದ ಸ್ಥಳೀಯ ಹಿಂದುಳಿದ ವರ್ಗಗಳ ಆರ್ಥಿಕ ಸ್ಥಿತಿಗತಿಗಳು ಉತ್ತಮ ಗೊಂಡಿವೆ. ಅದರಲ್ಲಿಯೂ ಮುಖ್ಯವಾಗಿ ಬುಡಕಟ್ಟು ಜನಾಂಗಕ್ಕೆ ಸೇರಿದ ಲಂಬಾಣಿ ಮಹಿಳೆಯರು ವಿದೇಶಿಯರನ್ನು ಮದುವೆಯಾಗುವುದರ ಮೂಲಕ ಆರ್ಥಿಕವಾಗಿ ಸಬಲರಾಗಿದ್ದಾರೆ. ಆಧುನಿಕ ಸವಲತ್ತುಗಳನ್ನು ಈ ಕುಟುಂಬಗಳು ಪಡೆಯುವಂತಾಗಿದೆ. ವಿದೇಶಿ ಯುವತಿಯರನ್ನು ಮದುವೆಯಾದ ಸ್ಥಳೀಯ ಯುವಕರ ಕುಟುಂಬಗಳ ಆರ್ಥಿಕ ಸ್ಥಿತಿ ಉತ್ತಮಗೊಂಡಿದೆ. ಹಂಪೆಯಲ್ಲಿನ ಎಲ್ಲ ಜಾತಿ ಕುಟುಂಬಗಳು ಒಂದಲ್ಲ ಒಂದು ಪ್ರವಾಸೋದ್ಯಮ ಸಂಬಂಧಿ ಚಟುವಟಿಕೆಗಳಲ್ಲಿ ತೊಡಗಿಸಿ ಕೊಂಡಿರುವುದರಿಂದ ಅವುಗಳ ಆರ್ಥಿಕ ಸ್ಥಿತಿ ಸುಧಾರಿಸಿದೆ. ಇದು ಆ ಕುಟುಂಬಗಳ ಸಾಮಾಜಿಕ ಸ್ಥಾನಮಾನವನ್ನು ಪ್ರತಿಬಿಂಬಿಸುತ್ತದೆ. ಹಂಪೆ ಗ್ರಾಮದಲ್ಲಿರುವ ಕೆಳವರ್ಗಗಳಾದ ನಾಯಕರು, ವಡ್ಡರು, ಲಂಬಾಣಿ, ಹರಿಜನ, ಕುರುಬರು, ಮುಸ್ಲಿಂರು, ಮುಂತಾದವರ ಸ್ಥಾನಮಾನಗಳು ಸಮಾಜದಲ್ಲಿ ಉನ್ನತೀಕರಣಗೊಂಡಿವೆ. ಹಾಗಾಗಿ ಉತ್ತರ ಕರ್ನಾಟಕದ ಗ್ರಾಮೀಣ ಪ್ರದೇಶಗಳಲ್ಲಿ ಸಾಮಾನ್ಯವಾಗಿ ಇರುವ ಜಾತಿ ಏಣಿಶ್ರೇಣಿ ಇಲ್ಲಿ ಕಾಣಸಿಗುವುದಿಲ್ಲ.

ಕೆಲವು ಸಲಹೆಗಳು

ರಾಷ್ಟ್ರ ಮತ್ತು ರಾಜ್ಯಮಟ್ಟದಲ್ಲಿನ ಪ್ರವಾಸೋದ್ಯಮ ನೀತಿಗಳು ಶ್ರೀಮಂತ ಪ್ರವಾಸಿಗರನ್ನು ಗಮನದಲ್ಲಿಟ್ಟುಕೊಂಡು ರೂಪಿತವಾಗಿವೆ. ಪ್ರವಾಸೋದ್ಯಮವನ್ನು ಸಂಘಟಿತ ವಲಯವೆಂದು ಪರಿಗಣಿಸಲಾಗಿದೆ. ಪ್ರವಾಸೋದ್ಯಮದ ಬೆಳವಣಿಗೆಗೆ ಬೃಹತ್ ಬಂಡವಾಳ ವಿನಿಯೋಗಿಸಿ ಸ್ಟಾರ್ ಹೋಟೆಲ್, ರಿಸಾರ್ಟ್, ಕ್ರೀಡೆ ಮುಂತಾದ ಆಧುನಿಕ ಸೌಲಭ್ಯಗಳನ್ನು ಒದಗಿಸಲು ಖಾಸಗಿ ವಲಯ ಮತ್ತು ಸರ್ಕಾರಿ ವಲಯಗಳು ಪ್ರಯತ್ನಿಸುತ್ತವೆ. ಆದರೆ ಹಂಪೆಯ ಪ್ರವಾಸೋದ್ಯಮದ ಪರಿಚಯ ಅಸಂಘಟಿತ ವಲಯದ ಪ್ರಸ್ತುತತೆಯನ್ನು ಸ್ವಲ್ಪ ಮಟ್ಟಿಗಾದರೂ ಮನವರಿಕೆ ಮಾಡಿರಬಹುದು.

[illegible]

ಕಡಿಮೆ ಬಂಡವಾಳ ಮತ್ತು ಹೆಚ್ಚು ಮಾನವ ಶ್ರಮವನ್ನು ಬಯಸುವುದು ಅಸಂಘಟಿತ ವಲಯದ ಬಹುಮುಖ್ಯ ಲಕ್ಷಣ. ಆದುದರಿಂದಲೆ ಸಮಾಜದ ಕೆಳವರ್ಗ ಈ ವಲಯದಲ್ಲಿ ಹೆಚ್ಚು ಹೆಚ್ಚಾಗಿ ತೊಡಗಿಸಿಕೊಳ್ಳಲು ಸಾಧ್ಯವಾಗಿದೆ. ಹೀಗೆ ಈ ವಲಯ ಸಮಾಜದ ಕೆಳವರ್ಗಕ್ಕೆ ಉದ್ಯಮಿಗಳಾಗುವ ಅವಕಾಶವನ್ನು ನೀಡಿದೆ. ಇದೆ ಸಂದರ್ಭದಲ್ಲಿ ಇದು ಬಡ ಮತ್ತು ಮಧ್ಯಮ ವರ್ಗದ ಪ್ರವಾಸಿಗರನ್ನು ತೃಪ್ತಿಪಡಿಸುತ್ತಿದೆ ಎನ್ನುವ ಅಂಶವನ್ನು ಮರೆಯುವಂತಿಲ್ಲ. ಅಸಂಘಟಿತ ವಲಯವು ಕಡಿಮೆ ಬಂಡವಾಳ ಬೇಡುವುದರಿಂದ ಸಣ್ಣ ಉದ್ದಿಮೆದಾರರನ್ನು ರೂಪಿಸುವ ಬಹುದೊಡ್ಡ ಕ್ಷೇತ್ರವಾಗಿ ಬೆಳಕಿಗೆ ಬಂದಿದೆ. ಈ ಅಂಶವನ್ನು ಗಣನೆಗೆ ತೆಗೆದುಕೊಂಡು ಪ್ರವಾಸೋದ್ಯಮ ಅಭಿವೃದ್ಧಿಯನ್ನು ರೂಪಿಸುವುದು ನಮ್ಮಂತಹ ಬಡ ರಾಷ್ಟ್ರಗಳ ದೃಷ್ಟಿಯಿಂದ ತುಂಬಾ ಅಗತ್ಯ. ಯಾಕೆಂದರೆ ಬಂಡವಾಳ ಕೇಂದ್ರಿತ ಆಧುನಿಕ ಕ್ಷೇತ್ರ ನಮ್ಮ ಸಮಾಜದ ಕೆಳವರ್ಗವನ್ನು ಅದರ ಸಮೀಪಕ್ಕೂ ಸುಳಿಯಲು ಬಿಡುತ್ತಿಲ್ಲ. ಇಂತಹ ಸಂದರ್ಭದಲ್ಲಿ ಮಾನವ ಶ್ರಮವನ್ನು ಧಾರಾಳವಾಗಿ ಬಳಸಿ ಅಭಿವೃದ್ಧಿಗೊಳಿಸಬಹುದಾದ ಅಸಂಘಟಿತ ಪ್ರವಾಸೋದ್ಯವನ್ನು ಪ್ರೋತ್ಸಾಹಿಸಿ ಬೆಳೆಸುವ ಅವಶ್ಯಕತೆ ಇದೆ. ಈ ಅಂಶವನ್ನು ಅತಿ ಜರೂರಾಗಿ ಪರಿಗಣಿಸುವ ಅಗತ್ಯವಿದೆ. ಯಾಕೆಂದರೆ ಇತ್ತೀಚಿನ ಕೆಲವು ದಿನಗಳಿಂದ ಹಂಪೆಯ ಪ್ರವಾಸೋದ್ಯಮವನ್ನೂ ಸಾಂಸ್ಥೀಕರಿಸುವ ಎಲ್ಲ ಲಕ್ಷಣಗಳು ಕಂಡುಬರುತ್ತಿವೆ. ಆ ನಿಟ್ಟಿನಲ್ಲಿ ಪ್ರಥಮ ಹೆಜ್ಜೆಯಾಗಿ ಹಂಪೆ ಪ್ರಾಧಿಕಾರದ ಸ್ಥಾಪನೆಯಾಗಿದೆ. ಹಂಪೆಯ ಸುತ್ತಮುತ್ತಲಿನ ಕೆಲವು ಹಳ್ಳಿಗಳನ್ನು ಸೇರಿಸಿಕೊಂಡು ಹಂಪೆ ಪ್ರಾಧಿಕಾರ ಅಸ್ತಿತ್ವಕ್ಕೆ ಬಂದಿದೆ. ಪ್ರಾಧಿಕಾರದ ಮುಖ್ಯ ಉದ್ದೇಶ ಹಂಪೆಯನ್ನು ಒಂದು ಶ್ರೇಷ್ಠ ಪ್ರವಾಸಿ ತಾಣವಾಗಿ ಪರಿವರ್ತಿಸುವುದು. ಅದಕ್ಕಾಗಿ ಹಂಪೆಯನ್ನು ಆಧುನಿಕರಿಸಲಾಗುತ್ತಿದೆ. ಈಗಾಗಲೇ ಪ್ರವಾಸೋದ್ಯಮದಲ್ಲಿ ತೊಡಗಿಸಿಕೊಂಡ ಹಲವಾರು ಕುಟುಂಬಗಳನ್ನು ಎತ್ತಂಗಡಿ ಮಾಡುವುದು ಆಧುನೀಕರಣ ಪ್ರಕ್ರಿಯೆಯ ಪ್ರಥಮ ಕಾರ್ಯಕ್ರಮವಾಗಿದೆ. ತಮ್ಮ ಮನೆ ಅಥವಾ ಭೂಮಿ ಬಗ್ಗೆ ಸರಿಯಾದ ದಾಖಲೆ ಇಲ್ಲದವರನ್ನು ಮಾತ್ರ ಸ್ಥಳಾಂತರಿಸಲಾಗುತ್ತಿದೆ ಎಂದು ಸಂಬಂಧ ಪಟ್ಟ ಅಧಿಕಾರಿಗಳು ಹೇಳುತ್ತಾರೆ.

ಆದರೆ ವಾಸ್ತವದಲ್ಲಿ ಆ ರೀತಿ ಆಗುತ್ತಿಲ್ಲ. ಯಾವುದೇ ಹೊಸ ಅಂಗಡಿ ಅಥವಾ ವ್ಯಾಪಾರಕ್ಕೆ ಹಂಪೆ ಪಂಚಾಯತಿ ಲೈಸನ್ಸ್ ಕೊಡುತ್ತಿಲ್ಲ. ಜತೆಗೆ ಈಗಾಗಲೆ ಕೊಟ್ಟಿರುವ ಲೈಸನ್ಸ್‌ಗಳನ್ನು ನವೀಕರಿಸುತ್ತಿಲ್ಲ. ಇದರಿಂದಾಗಿ ಪ್ರವಾಸೊದ್ಯಮದಲ್ಲಿ ತೊಡಗಿಸಿಕೊಂಡ ಕುಟುಂಬಗಳು ಒಂದು ವಿಧದ ಕಾನೂನು ಬಾಹಿರ ವ್ಯವಹಾರ ನಡೆಸುವ ಸ್ಥಿತಿ ನಿರ್ಮಾಣವಾಗಿದೆ. ಹಂಪೆಯನ್ನು ಸಾಂಸ್ಥೀಕರಣಗೊಳಿಸುವ ಅಥವಾ ಆಧುನೀಕರಣಗೊಳಿಸುವ ಪ್ರಕ್ರಿಯೆ ಅದರ ಅಂತಿಮ ಸ್ಥಿತಿ ತಲುಪಿದಾಗ ಹಂಪೆಯಲ್ಲಿ ಇಂದು ಉದ್ಯಮಗಳಲ್ಲಿ ತೊಡಗಿಸಿಕೊಂಡಿರುವ ಯಾವುದೇ ಕುಟುಂಬ ಕೂಡ ಮುಂದುವರಿಯುವ ಸಾಧ್ಯತೆಗಳು ಕಡಿಮೆ ಇದೆ. ಈ ದೃಷ್ಟಿಯಿಂದ ಈಗಾಗಲೆ ವ್ಯವಹಾರದಲ್ಲಿ ತೊಡಗಿಸಿಕೊಂಡಿರುವ ಕುಟುಂಬಗಳು ತಮ್ಮ ವ್ಯವಹಾರವನ್ನು ಮುಂದುವರಿಸುವ ರೀತಿಯಲ್ಲಿ ನಮ್ಮ

ಪ್ರವಾಸೋದ್ಯಮ ನೀತಿಗಳಲ್ಲಿ ತಿದ್ದುಪಡಿ ಆಗಬೇಕಾಗಿದೆ. ಇದು ಪ್ರಥಮ ಬಾರಿಗೆ ಪ್ರವಾಸೋದ್ಯಮ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡ ಹಲವಾರು ಕೆಳವರ್ಗದ ಕುಟುಂಬಗಳಿಗೆ ಒಂದು ಹೊಸ ಬದುಕನ್ನು ಕೊಡುವ ಸಾಧ್ಯತೆ ಇದೆ. ಆ ರೀತಿ ತಿದ್ದುಪಡಿ ಮಾಡುವಾಗ ಅಸಂಘಟಿತ ವಲಯವನ್ನು ಅದರ ಇಚ್ಚೆಯಂತೆ ಬಿಡಬೇಕಾಗಿಲ್ಲ. ಪ್ರವಾಸಿಗರ ಸಂತೃಪ್ತಿಯನ್ನು ಗಮನದಲ್ಲಿಟ್ಟುಕೊಂಡು ಸೇವೆಯ ಗುಣಮಟ್ಟಗಳನ್ನು ನಿರ್ಧರಿಸಿಬೇಕು. ಜತೆಗೆ ಸ್ಥಳೀಯ ಉದ್ಯಮಗಳು ಆ ಗುಣಮಟ್ಟಗಳಿಗೆ ಅನುಗುಣವಾಗಿ ವ್ಯವಹರಿಸುವಂತೆ ನೋಡಿಕೊಳ್ಳಬೇಕು. ಈ ಎಲ್ಲ ಅಂಶಗಳನ್ನು ಗಮನದಲ್ಲಿಟ್ಟು ಕೊಂಡು ಈ ಅಧ್ಯಯನ ಹಂಪೆಯ ಪ್ರವಾಸೋದ್ಯಮದ ಬೆಳವಣಿಗೆಗೆ ಪೂರಕವಾಗುವ ಕೆಲವು ಸಲಹೆಗಳನ್ನು ಮುಂದಿಡುತ್ತಿದೆ.

1. ಅತಿಥಿಗೃಹಗಳಲ್ಲಿ ಗಾಳಿ, ಬೆಳಕು, ಶೌಚಾಲಯ ಮತ್ತು ಸ್ವಚ್ಚತೆ ಇಲ್ಲವೆಂಬುದು ಬಹುತೇಕ ವಿದೇಶಿ ಪ್ರವಾಸಿಗರ ಅಭಿಪ್ರಾಯವಾಗಿದೆ. ಅತಿಥಿಗೃಹಗಳನ್ನು ಅಲ್ಲಿನ ವ್ಯವಸ್ಥೆಯನ್ನು ಒಂದು ನಿರ್ದಿಷ್ಟ ಗುಣಮಟ್ಟಕ್ಕೆ ಅನುಗುಣವಾಗಿ ಪರಿವರ್ತಿಸುವ ಅಗತ್ಯ ಇದೆ. ಇದನ್ನು ಸಂಬಂಧಪಟ್ಟವರು ಅತಿಥಿಗೃಗಳ ಮಾಲಿಕರ ಗಮನಕ್ಕೆ ತಂದು ಅವರು ತಮ್ಮ ಅತಿಥಿ ಗೃಹಗಳನ್ನು ನಿರ್ಧರಿತ ಗುಣಮಟ್ಟಕ್ಕೆ ಅನುಗುಣವಾಗಿ ಮಾರ್ಪಾಟು ಮಾಡುವಂತೆ ನೋಡಿಕೊಳ್ಳಬೇಕು.
2. ಹಂಪೆಗೆ ಈಗಿರುವ ಸಾರಿಗೆ ವಾಹನಗಳ ಸಂಖ್ಯೆ ಕಡಿಮೆ ಇರುವುದು, ಆಟೋಗಳಿಗೆ ಪ್ರಯಾಣದರದ ಮೀಟರ್ ಅಳವಡಿಸದೆ ಓಡಿಸುವುದು ಹಾಗೂ ರಸ್ತೆಗಳು ಸುಸ್ಥಿತಿಯಲ್ಲಿ ಇಲ್ಲದಿರುವುದು ಇತ್ಯಾದಿಗಳು ಪ್ರವಾಸಿಗರನ್ನು ಹಂಪೆಯಿಂದ ದೂರ ಓಡಿಸುತ್ತಿವೆ. ರಾಜ್ಯದ ವಿವಿಧ ಪ್ರದೇಶಗಳಿಂದ ಹೊಸಪೇಟೆಗೆ ಬರುವ ಮತ್ತು ಹೊಸಪೇಟೆಯಿಂದ ಹಂಪೆಗೆ ಹೋಗುವ ರಸ್ತೆ ಸಾಕಷ್ಟು ಸುಧಾರಣೆ ಆಗಬೇಕಾಗಿದೆ. ಹೊಸಪೇಟೆ ಮತ್ತು ಹಂಪೆ ನಡುವೆ ಓಡಾಡುವ ಬಸ್ಸುಗಳ ಸಂಖ್ಯೆಯನ್ನು ಹೆಚ್ಚಿಸಬೇಕಾಗಿದೆ. ಜತೆಗೆ ಆಟೋಗಳಿಗೆ ಮೀಟರ್ ಆಳವಡಿಸಲು ಸ್ಥಳೀಯ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು.
3. ತುಂಗಾಭದ್ರಾನದಿಯನ್ನು ದಾಟಿಸಲು ಇರುವ ನಾಡದೋಣಿ ದರಗಳಲ್ಲಿ ನಿಖರತೆ ಇಲ್ಲ. ಪ್ರವಾಸಿಗರ ಜರೂರು ಸ್ಥಿತಿಯನ್ನು ಗಮನಿಸಿಕೊಂಡು ಮನಸ್ಸಿಗೆ ಬಂದಷ್ಟು ಹಣ ತೆಗೆದುಕೊಳ್ಳುತ್ತಾರೆಂಬುದು ವಿದೇಶಿ ಪ್ರವಾಸಿಗರ ದೂರು. ಗ್ರಾಮ ಪಂಚಾಯತಿ ದರಗಳನ್ನು ನಿಗದಿಪಡಿಸಬೇಕು ಮತ್ತು ಆ ದರಗಳು ಕಟ್ಟುನಿಟ್ಟಾಗಿ ಜಾರಿ ಬರುವಂತೆ ಕ್ರಮ ಕೈಕೊಳ್ಳಬೇಕು.
4. ಪ್ರವಾಸೋದ್ಯಮದಲ್ಲಿ ತೊಡಗಿಸಿಕೊಂಡ ಹಲವಾರು ಕುಟುಂಬಗಳು ಸರ್ಕಾರದಲ್ಲಿ ಹಣಕಾಸಿನ ವ್ಯವಸ್ಥೆ ಇಲ್ಲದೆ ವ್ಯಾಪಾರ ಕಳೆದುಕೊಳ್ಳುತ್ತಿವೆ. ಅಂತಹ ಉದ್ಯಮಿಗಳಿಗೆ ಬ್ಯಾಂಕ್ ಸಾಲ ನೀಡಿದರೆ ಹಂಪೆಯ ಪ್ರವಾಸೋದ್ಯಮ ಇನ್ನೂ ಅಭಿವೃದ್ಧಿ ಆಗಬಹುದು.

5. ಹಂಪೆ ಗ್ರಾಮಕ್ಕೆ ಎಷ್ಟು ಜನ ಪ್ರವಾಸಿಗರು ಬಂದು ಹೋಗುತ್ತಾರೆ ಎನ್ನುವುದರ ಬಗ್ಗೆ ಖಚಿತ ಮಾಹಿತಿ ಇಲ್ಲ. ಪ್ರವಾಸಿಗರ ಅಂಕಿ ಅಂಶಗಳನ್ನು ವಿವಿಧ ಇಲಾಖೆಗಳು ಸಂಗ್ರಹಿಸಿವೆ. ಇವುಗಳಲ್ಲಿ ಸಾಮ್ಯತೆ ಕಂಡುಬರುವುದಿಲ್ಲ. ಇದಕ್ಕಾಗಿ ಪ್ರವಾಸೋದ್ಯಮ ಇಲಾಖೆ ಹಂಪೆಗೆ ಬಂದ ಪ್ರವಾಸಿಗರ ಮಾಹಿತಿ ಸಂಗ್ರಹಕ್ಕಾಗಿ ಹಂಪೆ ಗ್ರಾಮದಲ್ಲಿ ಕೌಂಟರ್‌ನ್ನು ಪ್ರಾರಂಭಿಸಬೇಕು. ಪ್ರವಾಸಿಗರ ಸಂಖ್ಯೆಯಲ್ಲಿನ ಖಚಿತ ಮಾಹಿತಿ ದೊರೆತರೆ ಪ್ರವಾಸಿಗರ ಸಂಖ್ಯೆಗೆ ಅನುಗುಣವಾಗಿ ಮೂಲ ಸೇವಾಸೌಲಭ್ಯಗಳನ್ನು ಒದಗಿಸಲು ಅನುಕೂಲವಾಗುತ್ತದೆ.

6. ಹಂಪೆಯ ಪ್ರವಾಸೋದ್ಯಮದಲ್ಲಿ ತೊಡಗಿಸಿಕೊಂಡಿರುವವರಲ್ಲಿ ಕೆಳಜಾತಿ ಜನರ ಸಂಖ್ಯೆ ಗಣನೀಯವಾಗಿದೆ. ಇದು ಭಾರತದ ಆಧುನೀಕರಣದಲ್ಲಿ ಒಂದು ವಿಶೇಷ. ಯಾಕೆಂದರೆ ನಮ್ಮಲ್ಲಿ ತೃತೀಯ ವಲಯದ ಆಧುನಿಕ ಕ್ಷೇತ್ರ ಸತತವಾಗಿ ಕೆಳವರ್ಗದವರನ್ನು ಮೂಲೆಗುಂಪಾಗಿ ಸುತ್ತಾ ಬಂದಿದೆ ಅಥವಾ ಹೆಚ್ಚೆಂದರೆ ಅವರನ್ನು ಕೂಲಿಗಳಾಗಿ ಬಳಸಿಕೊಂಡಿದೆ. ಈ ದೃಷ್ಟಿಯಿಂದ ಹಂಪೆಯ ಪ್ರವಾಸೋದ್ಯಮ ಒಂದು ಭಿನ್ನ ಉದಾಹರಣೆಯಾಗಿ ನಮ್ಮ ಮುಂದಿದೆ. ಆದುದರಿಂದ ಹಂಪೆಯನ್ನು ಆಧುನೀಕರಿಸುವ ನೆಪದಲ್ಲಿ ಈಗಾಗಲೆ ಪ್ರವಾಸೋದ್ಯಮದಲ್ಲಿ ತೊಡಗಿಸಿಕೊಂಡ ಕುಟುಂಬಗಳನ್ನು ಎತ್ತಂಗಡಿ ಮಾಡಬಾರದು

ಎಲ್ಲ ಕಡೆ ಪ್ರವಾಸೋದ್ಯಮ ವಿವಿಧ ಹಂತಗಳನ್ನು ದಾಟಿ ಕೊನೆಗೆ ಸಾಂಸ್ಥೀಕರಣದ ಹಂತ ತಲುಪುತ್ತದೆ. ಈ ದೃಷ್ಟಿಯಿಂದ ಅಸಂಘಟಿತ ಪ್ರವಾಸೋದ್ಯಮವನ್ನು ರಕ್ಷಿಸಬೇಕೆಂಬ ಈ ಅಧ್ಯಯನದ ಸಲಹೆ ಅಸಮಂಜಸ ಅನ್ನಿಸಬಹುದು. ಹಾಗೆ ನೋಡಿದರೆ ಅಭಿವೃದ್ಧಿಶೀಲ ದೇಶಗಳ ಅಭಿವೃದ್ಧಿ ಪ್ರಕ್ರಿಯೆಯೆ ಒಂದು ರೀತಿಯಲ್ಲಿ ಹಿಂದಿನ ಎಲ್ಲ ತಾತ್ವಿಕ ನಿಲುವುಗಳನ್ನು ತಿರಸ್ಕರಿಸಿ ನಡೆದಿದೆ. ಉದಾಹರಣೆಗೆ ವಲಯವಾರು ಅಭಿವೃದ್ಧಿಯಾಗುವ ಕ್ರಮ, ಇದರ ಪ್ರಕಾರ ಪ್ರಥಮ ಹಂತದಲ್ಲಿ ಕೃಷಿ, ನಂತರ ಕೈಗಾರಿಕೆ ಮತ್ತು ಕೊನೆಗೆ ಸೇವಾ ವಲಯ ಅಭಿವೃದ್ಧಿ ಆಗಬೇಕು. ಆದರೆ ಬಹುತೇಕ ಎಲ್ಲ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಕೈಗಾರಿಕ ಅಭಿವೃದ್ಧಿ ಹೊಂದುವ ಮೊದಲೆ ಸೇವಾ ವಲಯ ಬೆಳೆಯುತ್ತಿದೆ. ಇದೇ ರೀತಿಯಲ್ಲಿ ಪ್ರವಾಸೋದ್ಯಮದ ವಿವಿಧ ಹಂತದ ಬೆಳವಣಿಗೆ ಥಿಯರಿ ಕೂಡ ಯಥಾ ರೀತಿಯಲ್ಲಿ ಎಲ್ಲ ಕಡೆ ಅನ್ವಯ ಆಗುತ್ತದೆ ಎನ್ನುವಂತಿಲ್ಲ. ಪಶ್ಚಿಮದ ಶ್ರೀಮಂತ ರಾಷ್ಟ್ರಗಳಲ್ಲಿ ಅಸಂಘಟಿತ ವಸತಿಗೃಹಗಳು ತುಂಬಾ ಪರಿಣಾಮಕಾರಿಯಾಗಿ ಪ್ರವಾಸೋದ್ಯಮದ ಬೆಳವಣಿಗೆಯಲ್ಲಿ ತೊಡಗಿಸಿಕೊಂಡಿವೆ. ಆದರೆ ಅವೆಲ್ಲ ಮೇಲ್ ಸ್ತರದಲ್ಲಿ ನಿರ್ಧಾರವಾಗುವ ಗುಣಮಟ್ಟಕ್ಕೆ ಅನುಗುಣವಾಗಿ ನಡೆಯುತ್ತಿವೆ. ಇನ್ನು ಅಭಿವೃದ್ಧಿಶೀಲ ದೇಶಗಳಲ್ಲಿ ಅಸಂಘಟಿತ ವಲಯದ ಪಾತ್ರ ಗಣನೀಯವಾಗಿದೆ. ಪ್ರವಾಸೋದ್ಯನವನ್ನು ಆಧುನೀಕರಣಗೊಳಿಸುವ ಅಥವಾ ಸಾಂಸ್ಥೀಕರಣ ಗೊಳಿಸುವ ಭರದಲ್ಲಿ ಅಸಂಘಟಿತ ವಲಯ ಕಾಲಕ್ರಮೇಣ ಕಣ್ಮರೆಯಾಗುವ ಸಾಧ್ಯತೆಗಳು ಹೆಚ್ಚು. ಇದನ್ನು ತಪ್ಪಿಸಬೇಕಾದರೆ ನಮ್ಮ ಪ್ರವಾಸೋದ್ಯಮ ನೀತಿಗಳು ಅಸಂಘಟಿತ ವಲಯದ ಪಾತ್ರವನ್ನು

ಅರ್ಥಮಾಡಿಕೊಳ್ಳಬೇಕಾಗಿದೆ. ಸಮಾಜದ ಕೆಳವರ್ಗಕ್ಕೆ ಉದ್ಯಮಿಗಳಾಗಲು ಅವಕಾಶ ಕೊಡುವ ಮತ್ತು ನಮ್ಮ ಸಾಮಾಜದ ಮಾನವ ಶ್ರಮವನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಲು ಅವಕಾಶ ನೀಡುವ ಅಸಂಘಟಿತ ಪ್ರವಾಸೋದ್ಯಮವನ್ನು ಉಳಿಸಿಕೊಂಡು ಪ್ರವಾಸೋದ್ಯಮ ಬೆಳೆಯುವುದು ಉತ್ತಮ ಎಂದು ಹೇಳಬಹುದು.

ಗ್ರಂಥಋಣ

ಗ್ರಂಥಋಣ

1. ಅರವಿಂದ ಕುಮಾರ್(ಇಡಿ)., *ಸೋಶಿಯಲ್ ಸ್ಟ್ರಾಟಿಫಿಕೇಶನ್ ಇನ್ ರೂರಲ್ ಸೊಸೈಟಿ,* ನ್ಯೂಡೆಲ್ಲಿ: ಆನ್ಯುವಲ್ ಪಬ್ಲಿಕೇಶನ್, 1999
2. ಇಂದೂ ಮಥೂರ್., *ಚೇಂಜ್ ಇನ್ ಅಗ್ರೇರಿಯನ್ ಸೊಸೈಟಿ,* ಜಯ್‌ಪುರ:ಪ್ರಿಂಟ್‌ವೆಲ್ ಪಬ್ಲಿಷರ್ಸ್, 1987
3. ಇಸಬೆಲ್ ಆ್ಯಂಡ್ ಡೇವಿಡ್ ಕ್ರೂಕ್, *ರೆವಲ್ಯೂಶನ್ ಇನ್ ಎ ಚೈನೀಸ್ ವಿಲೇಜ್: ಟಿನ್ ಮೈನ್‌ಲ್ ಇನ್,* ಲಂಡನ್: ರೂಟ್‌ಲೆಡ್ಜ್ ಪಬ್ಲೀಷರ್ಸ್, 1998
4. ಎಮ್ಯುಯಲ್ ಡಿಕಾಡ್ಸ್, *ಟೂರಿಸಂ ಪಾಸ್‌ಪೋರ್ಟ್ ಟೂ ಡೆವಲಪ್‌ಮೆಂಟ್,* ಲಂಡನ್: ಆಕ್ಸ್‌ಫರ್ಡ್ ಯುನಿವರ್ಸಿಟಿ, ಪ್ರೆಸ್, 1979
5. ಎಡ್ವರ್ಡ್ ಇನ್‌ಸ್ಕೀಪ್, *ಟ್ಯೂರಿಸಂ ಪ್ಲಾನಿಂಗ್: ಎ ಇಂಟಿಗ್ರೇಟೆಡ್ ಆ್ಯಂಡ್ ಸಷ್ಟೈನಬಲ್ ಡೆವಲಪ್‌ಮೆಂಟ್ ಅಪ್ರೋಚ್* ನ್ಯೂಯಾರ್ಕ್: ವಿ. ಎಸ್. ಆರ್., ಟ್ಯೂರಿಸಂ ಆ್ಯಂಡ್ ಕಮರ್ಷಿಯಲ್ ರಿಕ್ರಿಯೇಷನ್ ಸರ್ವಿಸಸ್, 1991
6. ಕರ್ನಾಟಕ ಸರಕಾರ, *ಕರ್ನಾಟಕಾಸ್ ಎಕಾನಮಿ ಇನ್ ಬ್ರೀಫ್* ಗೌರ್‍ನಮೆಂಟ್ ಆಫ್ ಕರ್ನಾಟಕ, ಬೆಂಗಳೂರು: ಡೈರೆಕ್ಟರೇಟ್ ಆಫ್ ಎಕನಾಮಿಕ್ಸ್ ಅಂಡ್ ಸ್ಟ್ಯಾಟಿಸ್ಟಿಕ್ಸ್, 1993-1994
7. ಕರ್ನಾಟಕ ಸರ್ಕಾರ, *ಕರ್ನಾಟಕದಲ್ಲಿ ಮಾನವ ಅಭಿವೃದ್ಧಿ: 1999,* ಯೋಜನಾ ಇಲಾಖೆ, *ಬೆಂಗಳೂರು: 1999*
8. ಕುರಿಯನ್ ಎನ್.ಜೆ., ''ವೈಡೆನಿಂಗ್ ರೀಜನಲ್ ಡಿಸ್‌ಪ್ಯಾರಿಟಿಸ್ ಇನ್ ಇಂಡಿಯಾ : ಸಮ್ ಇಂಡಿಕೇಟರ್ಸ್'', ಎಕನಾಮಿಕ್ ಆ್ಯಂಡ್ ಪೋಲಿಟಿಕಲ್ ವೀಕ್ಲಿ, ಸಂಚಿಕೆ-35, ಸಂಖ್ಯೆ-7, ಫೆಬ್ರವರಿ 2000, ಪು.538-550
9. ಕೇರಳ ಸರಕಾರ, *ಟ್ಯೂರಿಸಂ ಹ್ಯಾಂಡ್ ಬುಕ್,* ಕೊಟ್ಟಾಯಂ : ಟ್ಯೂರಿಸಂ ಇಲಾಖೆ, 1994
10. ಕ್ಲೆವರ್‌ಡನ್ ರಾಬರ್ಟ್, *ದ ಎಕನಾಮಿಕ್ ಆ್ಯಂಡ್ ಸೋಶಿಯಲ್ ಇಂಪ್ಯಾಕ್ಟ್ ಆಫ್ ಇಂಟರ್ ನ್ಯಾಷಿನಲ್ ಟೂರಿಸಂ ಆನ್ ಡೆವಲಪಿಂಗ್ ಕಂಟ್ರೀಸ್,* ಲಂಡನ್: ದಿ ಎಕನಾಮಿಕ್ ಇಂಟಲಿಜೆನ್ಸ್ ಯುನಿಟ್ ಲಿಮಿಟೆಡ್, 1977
11. ಕೃಷ್ಣ ಭಾರಧ್ವಜ್, *ಅಕ್ಯುಮಿಲೇಷನ್, ಎಕ್ಸ್‌ಚೇಂಜ್ ಆ್ಯಂಡ್ ಡೆವಲಪ್‌ಮೆಂಟ್,* ನ್ಯೂಡೆಲ್ಲಿ: ಸೇಜ್ ಪಬ್ಲಿಕೇಷನ್ಸ್, 1994

[illegible]

12. ಕೃಷ್ಣಸ್ವಾಮಿ ಅಯ್ಯಂಗಾರ್, ಸೋರ್ಸಸ್ ಆಫ್ ವಿಜಯನಗರ ಹಿಸ್ಟರಿ, ನ್ಯೂಡೆಲ್ಲಿ: ಗ್ಯಾನ್ ಪಬ್ಲಿಷಿಂಗ್ ಹೌಸ್, 1986

13. ಕೌಲ್ ಆರ್. ಎನ್., ದ ಡೈನಾಮಿಕ್ಸ್ ಆಫ್ ಟೂರಿಸಂ, ನ್ಯೂಡೆಲ್ಲಿ: ಸ್ಟೆರ್‌ಲಿಂಗ್ ಪಬ್ಲಿಕೇಶನ್, 1982

14. ಖಾತರ್ ಸಿಂಗ್., ರೂರಲ್ ಡೆವಲಪ್‌ಮೆಂಟ್: ಪ್ರಿನ್ಸಿಪಲ್ಸ್, ಪಾಲಿಸೀಸ್ ಆ್ಯಂಡ್ ಮ್ಯಾನೇಜ್ ಮೆಂಟ್, ನ್ಯೂಡೆಲ್ಲಿ: ಸೇಜ್ ಪಬ್ಲಿಕೇಶನ್ಸ್, 1999

15. ಗವರ್ನ್‌ಮೆಂಟ್ ಆಫ್ ಕರ್ನಾಟಕ, ಹೈಪವರ್ ಕಮಿಟಿ ಫಾರ್ ರಿಡ್ರೆಸಲ್ ಆಫ್ ರೀಜನಲ್ ಇಂಬ್ಯಾಲೆನ್ಸ್ ಫೈನಲ್ ರಿಪೋರ್ಟ್, ಪಾರ್ಟ್ VII ಅಪೆಂಡಿಕ್ಸ್, ಜೂನ್ 2002, ಬೆಂಗಳೂರು: 2001

16. ಗವರ್ನ್‌ಮೆಂಟ್ ಆಫ್ ಕರ್ನಾಟಕ, ಗೈಡ್ ಲೈನ್ಸ್ ಫಾರ್ ಇಂಪ್ಲಿಮೆಂಟೇಶನ್ ಆಫ್ ನ್ಯೂ ಟೂರಿಸಂ ಪಾಲಿಸಿ, ಬೆಂಗಳೂರು: ಡಿಪಾರ್ಟ್‌ಮೆಂಟ್ ಆಫ್ ಟ್ಯೂರಿಸಂ, (ಮ್ಯಾನ್ಸ್‌ಸ್ಕ್ರೀಪ್ಟ್) 1997

17. ಗುಪ್ತ ವಿ.ಕೆ., ಟ್ಯೂರಿಸಂ ಇನ್ ಇಂಡಿಯಾ, ನ್ಯೂಡೆಲ್ಲಿ: ಗಯಾನ್ ಪಬ್ಲಿಕೇಶನ್ ಹೌಸ್, 1987

18. ಚಂದ್ರಪೂಜಾರಿ ಎಂ., ''ಟ್ರೆಂಡ್ಸ್ ಇನ್ ಎಂತ್ರಾಪ್ರನರ್‌ಶಿಫ್ ಆಂಡ್ ರೀಜನಲ್ ಡೆವಲಪ್ ಮೆಂಟ್'', ಅನ್‌ಪಬ್ಲಿಶ್‌ಡ್ ಪಿಎಚ್.ಡಿ. ಥಿಸಿಸ್ ಸಬ್‌ಮಿಟೆಡ್ ಟು ಮಂಗಳೂರು ಯುನಿ ವರ್ಸಿಟಿ, 1996

19. ಚಂದ್ರಪೂಜಾರಿ ಎಂ., ''ಹಾಸ್ಪಟಿಲೀಟಿ ಬಿಜಿನೆಸ್: ಎ ನ್ಯೂ ಸ್ಪೇಸ್ ಫರ್ ಸ್ಮಾಲ ಎಂಟರ್ ಫ್ರೆನೂರ್ಸ್'', ಎಂಟರ್‌ಫ್ರೆನೂರಶೀಫ್ ಡೆವಲಪ್‌ಮೆಂಟ್ ಇನ್ಸ್ಯೂಸ್ಟೂಟ್ ಆಫ್ ಇಂಡಿಯಾ, ಅಹ್ಮದಾಬಾದ್: ನ್ಯಾಷನಲ್ ಸೇಮಿನಾರ್, (ಮ್ಯಾನ್ಸ್‌ಸ್ಕ್ರೀಪ್ಟ್) 18-20 ಮಾರ್ಚ್, 1998

20 ಚಂದ್ರಪೂಜಾರಿ ಎಂ., ಪರಿಸರ ಮತ್ತು ಅಭಿವೃದ್ಧಿ, ಹಂಪಿ : ಕನ್ನಡ ವಿಶ್ವವಿದ್ಯಾಲಯ, 1998

21. ಚಂದ್ರಪೂಜಾರಿ ಎಂ., ಸ್ವದೇಶಿ: ಒಂದು ವಿಶ್ಲೇಷಣೆ, ಹಂಪಿ : ಕನ್ನಡ ವಿಶ್ವವಿದ್ಯಾಲಯ, 1999

22. ಚಂದ್ರಪೂಜಾರಿ ಎಂ., ದೇಶಿಯತೆಯ ನೆರಳಲ್ಲಿ ವಿಕೇಂದ್ರೀಕರಣ, ಹಂಪಿ : ಕನ್ನಡ ವಿಶ್ವ ವಿದ್ಯಾಲಯ, 2001

23. ಚಂದ್ರಶೇಖರ ಟಿ. ಆರ್., ಅಭಿವೃದ್ಧಿ ಮೀಮಾಂಸೆ, ಹಂಪಿ : ಕನ್ನಡ ವಿಶ್ವವಿದ್ಯಾಲಯ, 1993

24. ಜಗಮೋಹನ್ ನೇಗಿ., ಹೋಟೆಲ್ ಫಾರ್ ಟ್ಯೂರಿಸಂ ಡೆವಲಪ್‌ಮೆಂಟ್, ನ್ಯೂಡೆಲ್ಲಿ: ಮೆಟ್ರೊ ಪಾಲಿಟಿನ್ ಬುಕ್ ಕಂಪನಿ ಪ್ರೈ ಲಿಮಿಟೆಡ್, 1984

25. ಜಾನ್ ಎಂ.ಬ್ರೆಡನ್, ಟ್ಯೂರಿಸಂ ಆ್ಯಂಡ್ ಡೆವಲಪ್‌ಮೆಂಟ್, ಲಂಡನ್: ಕೆಂಬ್ರೀಡ್ಜ್ ಯೂನಿರ್ವಸಿಟಿ ಪ್ರೆಸ್, 1973

26. ಜೀಮಲ್ ಉನ್ನಿ, ''ಜಂಡರ್ ಆ್ಯಂಡ್ ಇನ್‌ಫಾರ್ಮಾಲಿಟಿ ಇನ್ ಲೇಬರ್ ಮಾರ್ಕೇಟ್ ಇನ್ ಸೌತ್ ಏಷಿಯಾ'', ಎಕನಾಮಿಕ್ ಆ್ಯಂಡ್ ಪೊಲಿಟಿಕಲ್ ವಿಕ್ಲಿ, ಸಂಚಿಕೆ 34, ಸಂಖ್ಯೆ 26, ಜನವರಿ 30, 2001

27. ಜೀಮಲ್ ಉನ್ನಿ, ''ಡೈವರ್ಸಿಫಿಕೇಶನ್ ಆಫ್ ಎಕನಾಮಿಕ್ ಆ್ಯಕ್ಟಿವಿಟೀಸ್ ಆ್ಯಂಡ್ ನಾನ್-ಅಗ್ರಿಕಲ್ಚರಲ್ ಎಂಪ್ಲಾಯಮೆಂಟ್ ಇನ್ ರೂರಲ್ ಗುಜರಾತ್'', ಎಕನಾಮಿಕ್ ಆ್ಯಂಡ್ ಪೊಲಿಟಿಕಲ್ ವೀಕ್ಲಿ, ಸಂಚಿಕೆ 31, ಸಂಖ್ಯೆ 33, ಆಗಸ್ಟ್ 17, 1996, ಪುಟ. 2360-2377

28. ಜೋಸೆಫ್ ಆಂಟೋನಿ ಜಿ., ''ಎ ಸರ್ಜ್ ಆಫ್ ಟ್ಯೂರಿಸಂ: ಎ ಸ್ಟಡಿ'', ಸದರನ್ ಎಕನಾಮಿಸ್ಟ್, ಸೆಪ್ಟೆಂಬರ್ 15, 1999, ಪು.13-15

29. ಡೆನಿಜಿಲ್ ಸಾಲ್ಡನ್ಹ, ''ರೆಸಿಡ್ಯೂಯಲ್ ಇಲ್ಲಿಟರಸಿ ಆ್ಯಂಡ್ ಇವನ್ ಡೆವಲಪ್‌ಮೆಂಟ್ ಪರ್ ಫಾರ್ಮೆನ್ಸ್ ಆ್ಯಂಡ್ ಲಿಟರಸಿ ಕಂಪ್ಯಾಜಿನ್ ಆ್ಯಂಡ್ ಪ್ರಾಸ್‌ಪೆಕ್ಟಸ್'', ಎಕನಾಮಿಕ್ ಆ್ಯಂಡ್ ಪೊಲಿಟಿಕಲ್ ವೀಕ್ಲಿ, ಸಂಚಿಕೆ 34, ಸಂಖ್ಯೆ 29, ಪು.2019-2033

30. ಡೈರೆಕ್ಟರ್ ಆಫ್ ಸೆನ್ಸಸ್ ಆಪರೇಷನ್, ಡಿಸ್ಟ್ರಿಕ್ಟ್ ಸೆನ್ಸ್‌ಸ್ ಹ್ಯಾಂಡ್ ಬುಕ್, ಬಳ್ಳಾರಿ ಡಿಸ್ಟ್ರಿಕ್ಟ್, ಬೆಂಗಳೂರು: ಗವರ್ನಮೆಂಟ್ ಆಫ್ ಕರ್ನಾಟಕ, 1991

31. ತೇಜ್‌ವೀರ್ ಸಿಂಗ್(ಇತರರು), *ಸ್ಟಡೀಸ್ ಇನ್ ಟ್ಯೂರಿಸಂ, ವೈಲ್ಡ್ ಲೈಫ್ ಪಾರ್ಕ್ಸ್ ಆ್ಯಂಡ್ ಕನ್‌ಸರ್ವೇಶನ್*, ನ್ಯೂಡೆಲ್ಲಿ: ಮೆಟ್ರೊಪಾಲಿಟನ್ ಬುಕ್ ಕಂಪನಿ, 1991

32. ದೂಬೆ ಎಸ್.ಸಿ., ಇಂಡಿಯಾಸ್ ಚೇಜಿಂಗ್ ವಿಲೇಜಸ್, ಲಂಡನ್:ರೂಟ್‌ಲೆಡ್ಜ್ ಪಬ್ಲಿಷರ್ಸ್, 1998

33. ಧರ್ಮರಾಜನ್ ಎಸ್., 'ಅಭಿವೃದ್ಧಿಯ ಸಾಧನವಾಗಿ ಪ್ರವಾಸೋದ್ಯಮ', ಯೋಜನೆ, ಸಂಚಿಕೆ 1, ಸಂಪುಟ 5, ಆಗಸ್ಟ್ 1999, ಪುಟ.15-18

34. ನಾರಾಯಣ ರೆಡ್ಡಿ, *ರೂರಲ್ ಡೈನಾಮಿಕ್ಸ್ ಆ್ಯಂಡ್ ಡೆವಲಪ್‌ಮೆಂಟ್*, ಅಲಹಬಾದ್: ಚೂಫ್ ಪಬ್ಲಿಕೇಶನ್, 1986

35. ನಾಗರಾಜ ರಾವ್ ಎಂ. ಎಸ್.(ಇಡಿ)., *ವಿಜಯನಗರ: ಥ್ರೂ ದ ಐಸ್ ಆಫ್ ಅಲೆಗ್ಸಾಂಡರ್ ಜೆ. ಗ್ರೀನ್‌ಲಾ 1856, ಜಾನ್ ಗೋಲ್ಲಿಂಗ್ಸ್ 1983*, ಮೈಸೂರು: ಡೈರೆಕ್ಟರ್ ಆಫ್ ಆರ್ಕಿಯಾಲಾಜಿ ಆ್ಯಂಡ್ ಮ್ಯೂಸಿಯಂ, ಗೌರ್ನಮೆಂಟ್ ಆಫ್ ಕರ್ನಾಟಕ, 1988

36. ನಿರ್ದೇಶಕರು, *ರಿವೈಸ್ಡ್ ಮಾಸ್ಟರ್ ಪ್ಲಾನ್ ಫಾರ್ ಡೆವಲಪ್‌ಮೆಂಟ್ ಟ್ಯೂರಿಸಂ ಇನ್ ಕರ್ನಾಟಕ*, (1997-2000), ಬೆಂಗಳೂರು : ಡಿಪಾರ್ಟ್‌ಮೆಂಟ್ ಆಫ್ ಟ್ಯೂರಿಸಂ, 1997

37. ನೇಗಿ ಎಸ್.ಸಿ., *ಸಾಹಸ ಪ್ರವಾಸೋದ್ಯಮದ ಹೊಸ ಆಯಾಮಗಳು, ಯೋಜನೆ*, ಸಂಚಿಕೆ 1, ಸಂಪುಟ 5, ಆಗಸ್ಟ್ 1999, ಪು.43-46

38. ನೇಗಿ ಜೆ.ಎಂ.ಎಸ್., ಟ್ಯೂರಿಸಂ ಆ್ಯಂಡ್ ಹೋಟೆಲಿಯರಿಂಗ್: ಎ ವರ್ಲ್ಡ್ ವೈಡ್ ಇಂಡಸ್ಟ್ರೀಸ್, ನ್ಯೂಡೆಲ್ಲಿ: ಗೀತಾಂಜಲಿ ಪಬ್ಲಿಕೇಶನ್ಸ್, 1982

39. ನೇಗಿ ಜೆ., ಟ್ಯೂರಿಸಂ ಆ್ಯಂಡ್ ಟ್ರಾವೆಲ್ಸ್ ಕಾನ್ಸೆಪ್ಟ್ಸ್ ಆ್ಯಂಡ್ ಪ್ರಿನ್ಸಿಪಲ್ಸ್, ನ್ಯೂಡೆಲ್ಲಿ: ಗೀತಾಂಜಲಿ ಪಬ್ಲೀಕೇಶನ್ಸ್, 1990

40. ನೇಗಿ ಜೆ.ಎಂ.ಎಸ್., ಟ್ಯೂರಿಸಂ ಡೆವಲಪ್‌ಮೆಂಟ್ ಆ್ಯಂಡ್ ರೀಸೋರ್ಸ್ಸ್ ಕಂಜರ್ವೇಶನ್, ನ್ಯೂಡೆಲ್ಲಿ: ಮೆಟ್ರೋಪೊಲಿಟಿಯನ್ ಬುಕ್ ಕಂಪನಿ, 1990

41. ಪದ್ಮನಾಭರಾವ್ ಆರ್.ಎ., 'ಸಾಮಾಜಿಕ ಅಭಿವೃದ್ಧಿ ಮಾಧ್ಯಮವಾಗಿ ಪ್ರವಾಸೋದ್ಯಮ', *ಯೋಜನೆ,* ಸಂಚಿಕೆ 1, ಸಂಪುಟ 5, ಆಗಸ್ಟ್ 1999, ಪುಟ.36-42

42. ಪಾರ್ಥಸಾರಥಿ, ಜಿ, ''ಅನ್ ಆರ್ಗನೈಸಡ್ ಸೆಕ್ಟರ್ ಆ್ಯಂಡ್ ಸ್ಟ್ರಕ್ಚರಲ್ಅಡ್ಜಸ್ಟ್‌ಮೆಂಟ್ '' ಎಕನಾಮಿಕ್ ಆ್ಯಂಡ್ ಪೊಲಿಟಿಕಲ್ ವೀಕ್ಲಿ, ಸಂಚಿಕೆ 31, ಸಂಖ್ಯೆ 23, ಜುಲೈ 1996, ಪುಟ. 1859-1869

43. ಪಾರ್ಥಸಾರಥಿ ಜಿ., ಎಕಾನಮಿಕ್ ಇಂಪ್ಯಾಕ್ಟ್ ಆಫ್ ವಿಮೆನ್ಸ್ ತ್ರಿಫ್ಟ್ ಆ್ಯಂಡ್ ಕ್ರೆಡಿಟ್ ಸೊಸೈಟೀಸ್, ವಿಶಾಕಪಟ್ನಂ: ಇನ್‌ಸ್ಟಿಟ್ಯೂಟ್ ಆಫ್ ಡೆವೆಲಪ್‌ಮೆಂಟ್ ಆ್ಯಂಡ್ ಪ್ಲಾನಿಂಗ್ ಸ್ಟಡೀಸ್,1665

44. ಪಾಂಡೆ ಪಿ. ಸಿ., ಆ್ಯಂಡ್ ಜಲಾಲ್ ಆರ್ ಎಸ್, ರೂರಲ್ ಡೆವೆಲಪ್‌ಮೆಂಟ್ ಇನ್ ಇಂಡಿಯಾ : ಇಶ್ಯೂಸ್ ಆ್ಯಂಡ್ ಪಾಲಿಸೀಸ್, ನ್ಯೂಡೆಲ್ಲಿ : ಅನ್‌ಮೋಲ್ ಪಬ್ಲಿಕೇಶನ್, 1991

45. ಪುರ್ನೆಂಡ್ ಎಸ್.ಕವೂರಿ, ''ದ ವರ್ಣ ಟ್ರಾಫಿಕ್ ಸಿಸ್ಟಮ್ : ಆ್ಯನ್ ಇಕೋಲಾಜಿಕಲ್ ಥಿಯರಿ ಆಫ್ ಕ್ಯಾಸ್ಟ್ ಫಾರ್ಮೇಶನ್'', ಎಕನಾಮಿಕ್ ಆ್ಯಂಡ್ ಪೊಲಿಟಿಕಲ್ ವೀಕ್ಲಿ, ಸಂಚಿಕೆ 37, ಸಂಖ್ಯೆ 12, ಮಾರ್ಚ್ 23, 2002, ಪು.1156-1164

46. ಪೊನ್ನ ವಿಗ್ನರಾಜ ಆ್ಯಂಡ್ ಆದರ್ಸ್, ಪಾರ್ಟಿಸಿಪೇಟರಿ ಡೆವಲಪ್‌ಮೆಂಟ್ ಲರ್ನಿಂಗ್ ಫ್ರಮ್ ಸೌತ್ ಇಂಡಿಯಾ, ಆಕ್ಸ್‌ಫರ್ಡ್: ಯೂನಿವರ್ಸಿಟಿ ಪ್ರೆಸ್ ಆ್ಯಂಡ್ ಯುನೈಟೆಡ್ ನೇಶನ್ಸ್ ಪ್ರೆಸ್, 1991

47. ಪ್ರವೀಣ್ ಸೇಥಿ, ಟ್ಯೂರಿಸಂ ಫಾರ್ ದಿ ನೆಕ್ಸ್ ಮಿಲೇನಿಯಂ, ನ್ಯೂಡೆಲ್ಲಿ: ರಜತ್ ಪಬ್ಲಿಕೇಶನ್, 1999

48. ಪ್ರವೀಣ್ ಸೇಥಿ, ಹ್ಯಾಂಡ್ ಬುಕ್ ಆಫ್ ಎಫೆಕ್ಟೀವ್ ಟ್ರಾವೆಲ್ ಆ್ಯಂಡ್ ಟೂರಿಸಂ, ನ್ಯೂಡೆಲ್ಲಿ: ರಜತ್ ಪಬ್ಲಿಕೇಶನ್, 1999

49. ಪ್ರವೀಣ್ ಸೇಥಿ, ಬ್ಯುಜೀನ್ಸ್ ಟೂರಿಸಂ, ಡೆಲ್ಲಿ: ರಜತ್ ಪಬ್ಲಿಕೇಶನ್, 2000

50. ಪ್ರಗತಿ ಮೊಹಂತಿ, ''ಪ್ರಾಬ್ಲಮ್ಸ್ ಆ್ಯಂಡ್ ಪ್ರಾಸ್‌ಪೆಕ್ಟ್ಸ್ ಆಫ್ ಟ್ಯೂರಿಸಂ ಪೊಟೆನ್‌ಷಿಯಲ್ ಇನ್ ಒರಿಸ್ಸಾ'', ಸದರ್ನ್ ಎಕಾನಾಮಿಸ್ಟ್, ಸೆಪ್ಟೆಂಬರ್ 15, 1999, ಪು.16-19

51. ಬಾಲ ಯು., ಟ್ಯೂರಿಸಂ ಇನ್ ಇಂಡಿಯಾ: ಪಾಲಿಸಿ ಆ್ಯಂಡ್ ಪ್ರಾಸ್‌ಪೆಕ್ಟಿವ್‌ಸ್, ನ್ಯೂಡೆಲ್ಲಿ: ಅರುಶಿ ಪ್ರಕಾಶನ, 1990

52. ಬೂರಕರ್ ಎ.ಜಿ., ಆ್ಯಂಡ್ ಮೆಡಲಿಕ್ ಎಸ್., ಟ್ಯೂರಿಸಂ : ಪಾಸ್ಟ್, ಪ್ರೆಸೆಂಟ್ ಆ್ಯಂಡ್ ಫ್ಯೂಚರ್, ಲಂಡನ್: ಹಿನಿಮನ್ ಪ್ರೊಫೇನಲ್ ಪಬ್ಲಿಷಿಂಗ್, 1976

53. ಬೇಜಾಬರವಾ ಎಂ.ಪಿ., 'ಪ್ರವಾಸೋದ್ಯಮ- ಇಂದು ಮತ್ತು ನಾಳೆ', ಯೋಜನೆ, ಸಂಚಿಕೆ 1, ಸಂಪುಟ 5, ಆಗಸ್ಟ್ 1999, ಪುಟ.4-14

54. ಬ್ರಿಜ್ ಭಾರದ್ವಾಜ್, ''ಪ್ರವಾಸೋದ್ಯಮ ಮುನ್ನಡೆ: ಮೂಲಸೌಲಭ್ಯ'', ಯೋಜನೆ, ಸಂಚಿಕೆ 1, ಸಂಪುಟ 5. ಆಗಸ್ಟ್ 1999, ಪು.32-35

55. ಬಂಡೋಪಾಧ್ಯಯ ಜೆ.(ಇಡಿ), ಇಂಡಿಯಾಸ್ ಎನ್‌ವಿರಾನ್‌ಮೆಂಟ್ ಕೈಸಿಸ್ ಆ್ಯಂಡ್ ರೇಸ್ಪಾನ್ಸೆಸ್ ನ್ಯೂಡೆಲ್ಲಿ: ನಟರಾಜ ಪಬ್ಲಿಕೇಶನ್, 1985

56. ಭಟ್ಟಾಚಾರ್ಯ ಬಿ.ಬಿ., ''ಆ್ಯಂಡ್ ಅರುಪ ಮಿತ್ರ, ಚೇಂಜಿಂಗ್ ಕಂಪೋಜಿಸನ್ ಆಫ್ ಎಂಪ್ಲಾಯ್‌ಮೆಂಟ್ ಇನ್ ಟೇರಿಷಿಯರಿ ಸೆಕ್ಟರ್: ಎ ಕ್ರಸ್ ಕಂಟ್ರಿ ಆನಾಲಿಸಸ್'', ಎಕನಾಮಿಕ್ ಆ್ಯಂಡ್ ಪೊಲಿಟಿಕಲ್ ವೀಕ್ಲಿ, ಸಂಚಿಕೆ 32, ಸಂಖ್ಯೆ 9-10, ಮಾರ್ಚ್ 1997, ಪು.529-534

57. ಭಾಟೀಯ ಎ.ಕೆ., ಟ್ಯೂರಿಸಂ ಇನ್ ಇಂಡಿಯಾ- ಹಿಸ್ಟರಿ ಆ್ಯಂಡ್ ಡೆವಲಪ್‌ಮೆಂಟ್, ನ್ಯೂಡೆಲ್ಲಿ: ಸ್ಟರ್ಲಿಂಗ್ ಪಬ್ಲಿಕೇಶನ್, 1978

58. ಬಾಟೀಯ ಎ.ಕೆ., ಇಂಟರ್‌ನೇಷನಲ್ ಟೂರಿಸ್ಸಂ : ಫಂಡಮೆಂಟಲ್ಸ್ ಅಂಡ್ ಪ್ರಾಕ್ಟೀಸ್, ಬೆಂಗಳೂರು: ಸ್ಟೇರಿಲಿಂಗ್ ಪಬ್ಲಿಷರ್ಸ್, 1991

59. ಮರೀಯಾ ರೂಟ್ಟಿನ್, ಕರೋಲ ಉಪಾಧ್ಯಾಯ, ಸ್ಮಾಲ್ ಬಿಸಿನೆಸ್ ಎಂಟರ್‌ಪ್ರೆನೂರ್ಸ್ ಇನ್ ಏಷಿಯಾ ಆ್ಯಂಡ್ ಯುರೋಪ: ಟೂವರ್ಡ್ಸ್ ಎ ಕಂಪಾರಿಟಿವ್ ಪರ್ಸ್‌ಪೆಕ್ಟಿವ್, ನ್ಯೂಡೆಲ್ಲಿ: ಸೇಜ್ ಪಬ್ಲಿಕೇಶನ್ಸ್, 1997

60. ಮರಿಯೋ ಡಿ. ಜಮೋರ್, ಟೂರಿಸಂ ಆಂಡ್ ಎಕನಾಮಿಕ್ ಚೇಂಜ್, ಸ್ಟಡೀಸ್ ಇನ್ ಥರ್ಡ್‌ವರ್ಲ್ಡ್ ಸೊಸೈಟಿ, ಯು.ಎಸ್.ಎ.: ವಿಲಿಯಂ ಆಂಡ್ ಮೇರಿ ಕಾಲೇಜ್, 1978

61. ಮೊನಿನಾಗ, ''ಆ್ಯಂಥ್ರಪಾಲಾಜಿಕಲ್ ಪರ್ಸ್‌ಪೆಕ್ಟಿವ್ಸ್ ಆ್ಯನ್ ಪ್ರಾಸ್ಟಿಟ್ಯೂಶನ್ ಆ್ಯಂಡ್ ಏಡ್ಸ್ ಇನ್ ಇಂಡಿಯಾ'' ಎಕನಾಮಿಕ್ ಆ್ಯಂಡ್ ಪೊಲಿಟಿಕಲ್ ವೀಕ್ಲಿ, ಸಂಚಿಕೆ 36, ಸಂಖ್ಯೆ 42, ಅಕ್ಟೋಬರ್ 20, 2001, ಪು.4025-4030

62. ಮೊರಿಸನ್ ಎ. ಎಂ., ಹಾಸ್ಪಟಲೀಟಿ ಆ್ಯಂಡ್ ಟ್ರಾವೆಲ್ ಮಾರ್ಕೆಂಟಿಂಗ್, ನ್ಯೂಯಾರ್ಕ್ : ಡಲ್‌ಮಾರ್ ಪಬ್ಲೀಷರ್ಸ್, 1989

63. ಮೃದುಲ ಈಪೆನ್, ''ವಿಮೆನ್ ಇನ್ ಇನ್‌ಫಾರ್‌ಮಲ್ ಸೆಕ್ಟರ್ ಇನ್ ಕೇರಳ: ನೀಡ್ ಫಾರ್ ರೀ ಎಗ್ಜಾಮಿನೇಶನ್'', ಎಕನಾಮಿಕ್ ಆ್ಯಂಡ್ ಪೊಲಿಟಿಕಲ್ ವೀಕ್ಲಿ, ಸಂಚಿಕೆ 36, ಸಂಖ್ಯೆ 26, ಜೂನ್ 30, 2001

64. ಮೃದುಲ ಆ್ಯಂಡ್ ನಾರಾಯಣದತ್ತ, ಇಕೋಲಾಜಿ ಆ್ಯಂಡ್ ಟೂರಿಸಂ, ಡೆಲ್ಲಿ: ಯೂನಿವರ್ಸೆಲ್ ಪಬ್ಲಿಶರ್ಸ್, 1991,

65. ಮಾಸ್ಟರ್ ಪ್ಲಾನ್ ಫಾರ್ ದಿ ಡೆವಲಪ್‌ಮೆಂಟ್ ಆಫ್ ಟೂರಿಸಂ ಇನ್ ಕರ್ನಾಟಕ(1997-2002), ಡಿಪಾರ್ಟ್‌ಮೆಂಟ್ ಆಫ್ ಟ್ಯೂರಿಸಂ, ಬೆಂಗಳೂರು: ಗವರ್ನ್‌ಮೆಂಟ್ ಆಫ್ ಕರ್ನಾಟಕ, 1997

66. ರವಿಭೂಷಣ ಕುಮಾರ, ಕೋಸ್ಟಲ್ ಟೂರಿಸಂ ಆಂಡ್ ಎನ್‌ವಿರಾನ್‌ಮೆಂಟ್, ನ್ಯೂಡೆಲ್ಲಿ: ಎ. ಪಿ.ಹೆಚ್. ಪಬ್ಲೀಷಿಂಗ್ ಕಾರ್ಪೊರೇಷನ್, 1995

67. ರವೀಂದ್ರ ಸೇಠ್, 'ಪ್ರವಾಸೋದ್ಯಮ-ಸಮಸ್ಯೆಗಳು ಮತ್ತು ಭವಿತವ್ಯ', ಯೋಜನೆ, ಸಂಚಿಕೆ 1, ಸಂಪುಟ 5, ಆಗಸ್ಟ್ 1999, ಪುಟ.19-23

68. ರಾಬರ್ಟ್ ಸಿವೆಲ್, ಎ ಫರ್ಗಾಟನ್ ಎಂಪಾಯರ್: ವಿಜಯನಗರ, ನ್ಯೂಡೆಲ್ಲಿ: ಏಸಿಯನ್ ಎಜುಕೇಶನಲ್ ಸರ್ವೀಸಸ್, 1980

69. ರಾಬಿನ್‌ಸನ್ ಹೆಚ್., ಎ ಜಿಯೋಗ್ರಾಫಿ ಆಫ್ ಟ್ಯೂರಿಸಂ, ಲಂಡನ್: ಮಕಡೋನಾಲ್ಡ್ ಆ್ಯಂಡ್ ಇವನ್ಸ್, 1976

70. ರೇಮಂಡ್ ನರೋನ್ಹಾ, ಸೋಶಿಯಲ್ ಅಂಡ್ ಕಲ್ಚರಲ್ ಡೈಮೆಶನ್ ಆಫ್ ಟೂರಿಸಂ (ವರ್ಕಿಂಗ್ ಪೇಪರ್ ನಂಬರ್ 326) ವಾಷಿಂಗ್‌ಟನ್ ಡಿ.ಸಿ.: ವರ್ಲ್ಡ್‌ಬ್ಯಾಂಕ್, 1979

71. ಲೀ ಜಾನ್, ಟ್ಯೂರಿಸಂ ಅಂಡ್ ಡೆವಲಪ್‌ಮೆಂಟ್ ಇನ್ ದಿ ಥರ್ಡ್ ವರ್ಲ್ಡ್, ನ್ಯೂಯಾರ್ಕ್: ರೋಟಲೆಡ್ಜ್, ಛಾಪಮನ್ ಆ್ಯಂಡ್ ಹಾಲ್‌ಇಂಕ್, 1988

72. ವಿದ್ಯಾಶಂಕರ ಎಸ್., ಪ್ರವಾಸೋದ್ಯಮ ಹಾಗೂ ಕನ್ನಡದಲ್ಲಿ ಪ್ರವಾಸ ಸಾಹಿತ್ಯ, ಬೆಂಗಳೂರು: ಸೆಂಟರ್ ಫಾರ್ ಕನ್ನಡ ಸ್ಟಡೀಸ್, ಜ್ಞಾನ ಭಾರತಿ, 1991

73. ವೆಂಕಣ್ಣಚಾರ್ ಕೆ., ''ಪ್ರವಾಸಿ ಕೇಂದ್ರವಾಗಿ ಚಿತ್ರದುರ್ಗ'', ಯೋಜನೆ, ಸಂಚಿಕೆ 1, ಸಂಪುಟ 5, ಆಗಸ್ಟ್, 1999, ಪು.54-60

74. ಶರ್ಮ ಆರ್.ಸಿ.(ಇಡಿ), ದ ಒಶನ್ಸ್ ರೀಯಾಲಿಟೀಸ್ ಆ್ಯಂಡ್ ಪ್ರಾಸ್‌ಪೆಕ್ಟ್‌ಸ್ , ನ್ಯೂಡೆಲ್ಲಿ: ರಾಜ್ ಪಬ್ಲಿಕೇಶನ್ಸ್, 1985

75. ಶಾರದಾ ಪ್ರಸಾದ್ ಎಚ್.ವೈ., ''ಪ್ರವಾಸಿಗಳ ಸ್ವರ್ಗ ಕರ್ನಾಟಕ'', ಯೋಜನೆ, ಸಂಚಿಕೆ 1, ಸಂಪುಟ 5, ಆಗಸ್ಟ್, 1999, ಪು.47-53

76. ಶೇಷಾದ್ರಿ, ಬಿ., ಬಳ್ಳಾರಿ ಜಿಲ್ಲೆಯಲ್ಲಿ ಕೈಗಾರೀಕರಣ ಮತ್ತು ಜನಾಂದೋಲನ, ಹಂಪಿ : ಕನ್ನಡ ವಿಶ್ವವಿದ್ಯಾಲಯ, 1998

77. ಶ್ರೀನಿವಾಸ್ ಎಂ. ಎನ್., ದ ರೀಮೆಂಬರ್ಡ್ ವಿಲೇಜ್, ನ್ಯೂಡೆಲ್ಲಿ: ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, 1976

78. ಸರಿನ್‌ಸಿಂಗ್ ಆ್ಯಂಡ್ ಅದರ್ಸ್, ಲೋನ್ಲಿ ಪ್ಲಾನೇಟ್ ಇಂಡಿಯಾ, ಮೆಲ್‌ಬರ್ನ್ : ಲೋನ್ಲಿ ಪ್ಲಾನೇಟ್ ಪಬ್ಲಿಕೇಶನ್, 2001

79. ಸದಾನಂದ ಕನವಳ್ಳಿ(ಅನು), ಮರೆತು ಹೋದ ಮಹಾಸಾಮ್ರಾಜ್ಯ ವಿಜಯನಗರ, ಹಂಪಿ : ಕನ್ನಡ ವಿಶ್ವವಿದ್ಯಾಲಯ, 1992

80. ಸೂರಿ ಕೆ.ಬಿ.(ಇಡಿ), ಸ್ಮಾಲ್‌ಸ್ಕೇಲ್ ಎಂಟರ್‌ಪ್ರೈಸ್ ಇನ್ ಇಂಡಸ್ಟ್ರೀಯಲ್ ಡೆವಲಪ್‌ಮೆಂಟ್: ದ ಇಂಡಿಯನ್ ಎಕ್ಸಪೀರಿಯನ್ಸ್, ನ್ಯೂಡೆಲ್ಲಿ:ಸೇಜ್ ಪಬ್ಲಿಕೇಶನ್ಸ್, 1988

81. ಸೆಲ್ವಮ್ ಎಂ., ಟ್ಯೂರಿಸಂ ಇಂಡಸ್ಟ್ರೀಸ್ ಇನ್ ಇಂಡಿಯಾ: ಎ ಕೇಸ್ ಆಫ್ ಇಟ್ಸ್ ಗ್ರೋತ್ ಆ್ಯಂಡ್ ಡೆವಲಪ್‌ಮೆಂಟ್ ನೀಡ್ಸ್, ಡೆಲ್ಲಿ: ಹಿಮಾಲಯ ಪಬ್ಲಿಷಿಂಗ್ ಹೌಸ್, 1989


82. ಸಿಂಗ್ ಎಸ್. ಎನ್., ಜಿಯೋಗ್ರಾಫಿ ಆಫ್ ಟ್ಯೂರಿಸಂ ಆ್ಯಂಡ್ ರಿಸರ್ಚ್, ನ್ಯೂಡೆಲ್ಲಿ: ಇಂಟರ್ ಇಂಡಿಯಾ ಪಬ್ಲಿಕೇಶನ್ಸ್, 1986

83. ಸಿಂಗ್ ಆರ್. ಎಲ್.(ಇಡಿ), ಇಂಡಿಯಾ: ಎ ರೀಜನಲ್ ಜಿಯೋಗ್ರಾಫಿ, ವಾರಣಾಸಿ: ನ್ಯಾಷನಲ್ ಜಿಯಾಗ್ರಾಫಿಕಲ್ ಸೊಸೈಟಿ ಆಫ್ ಇಂಡಿಯಾ, 1989

84. ಹರಜೀತ್ ಆಹ್ಲುವಾಲಿಯಾ, 'ಕಾದಿರುವ ವಿಪುಲ ಅವಕಾಶಗಳು', ಯೋಜನೆ, ಸಂಚಿಕೆ 1, ಸಂಪುಟ 5, ಆಗಸ್ಟ್ 1999, ಪುಟ.24-31

85. ಹೆತುಕರ್ ಜಾ., ಸೊಸೀಯಲ್ ಸ್ಟ್ರಕ್ಚರ್ಸ್ ಆಫ್ ಇಂಡಿಯನ್ ವಿಲೇಜಸ್, ನ್ಯೂಡೆಲ್ಲಿ: ಸೇಜ್ ಪಬ್ಲಿಕೇಶನ್ಸ್ ಇಂಡಿಯಾ ಪ್ರೈ ಲಿ., 1991

ಹಂಪೆ ಗ್ರಾಮದ ನಕ್ಷೆ


ಸೂಚಿಗಳು
ಕೃಷಿಪಟ್ಟ ಭೂಮಿ
ಸರ್ಕಾರಿ ಭೂಮಿ
ಮಂಟಪ ತೇರುಬೀದಿಯ ಬಲಭಾಗ
ಹಂಪೆಯ ಮುಖ್ಯರಸ್ತೆ
ಜನತಾ ಪ್ಲಾಟ್ ನಂ. 137-138
ಆಕ್ರಮಿಸಿಕೊಂಡ ಮನೆಗಳು,
ಅತಿಥಿಗೃಹ ಮತ್ತು ಹೋಟೆಲ್‌ಗಳು
1. ಶ್ರೀ ವಿರುಪಾಕ್ಷೇಶ್ವರಸ್ವಾಮಿ ದೇವಸ್ಥಾನ.
2. ಮನ್ಮಥ ಹೊಂಡ
3. ಜೈನ ಬಸದಿ (ಹೇಮಕೂಟದ ಮೇಲೆ)
4. ಶ್ರೀರಾಮಲಿಂಗೇಶ್ವರ ಸ್ವಾಮಿ ದೇವಸ್ಥಾನ.
5. ಶ್ರೀ ಗಾಯತ್ರಿಪೀಠ ದೇವಸ್ಥಾನ.
6. ಶ್ರೀರಾಮ ಅವದೂತರ ಮಠ.
7. ಶ್ರೀ ವಡ್ಡರ ನಾಗಪ್ಪ ಛತ್ರ.
8. ಎದುರು ಬಸವಣ್ಣನ ದೇವಸ್ಥಾನ.
9. ಶ್ರೀಮದ್ ರಾಜಚಂದ್ರ ಆಶ್ರಮ.
10. ಈಶ್ವರ ದೇವಸ್ಥಾನ.
11. ಬಸವಣ್ಣ ದೇವಸ್ಥಾನ.
12. ಕಡ್ಲೆಕಾಳು ಗಣಪತಿ.
13. ಸರಕಾರಿ ಶಾಲಾ ಕಟ್ಟಡ.
ತುಂಗಾಭದ್ರಾನದಿ
ಹೊಸಪೇಟೆ -ಹಂಪೆ ರಸ್ತೆ
ಮಾತಂಗ ಪರ್ವತ
ಶ್ರೀ ಮದ್ ರಾಮಚಂದ್ರ ಆಶ್ರಮ
ಎದುರು ಬಸವಣ್ಣ ದೇವಸ್ಥಾನ
ಶ್ರೀ ಗಾಯತ್ರಿಪೀಠ ದೇವಸ್ಥಾನ